ISSN: 2249-2429 Volume : 12, Issue : 4, Pages 100, 7th March 2023 Annual Subscription ₹.750/-

RNI REG.NO.KARKAN/2011/38712

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journal*

APPROVED BY UGC CARE

Listed in U.G.C. Care List



## ಗಾಂಧೀಜಿಯವರ ಪರಿಕಲ್ಪನೆಯ ವಾಸ್ತವಿಕ ನೆಲೆಯಲ್ಲಿ ಮೂಲ ಶಿಕ್ಷಣ



## ಭವಿಷ್ಯದ ಶಿಕ್ಷಕರಿಗೆ ಅವಶ್ಯಕವಾಗಿರುವ ಸಾಮರ್ಥ್ಯಗಳ ಒಂದು ಒಳನೋಟ

## ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆ

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

U.G.C. Care Listed Journal

7ನೇ ಮಾರ್ಚ 2023 ಸಂಪುಟ : 12 ಸಂಚಿಕೆ : 4

ಪ್ರಕಾಶಕರು :

**ಜಯದೇವ ಮೈ. ಮೆಣಸಗಿ**

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :

**ಡಾ. ಎಸ್. ಬಿ. ಯಾದವಾಡ**

ಸಹಸಂಪಾದಕರು :

**ಡಾ. ಪ್ರಕಾಶ ಕೆ. ಬಡಿಗೇರ**



**ಸಂಪಾದಕ ಮಂಡಳಿ**

- **ಪ್ರೊ. ಎಸ್.ಎಸ್. ಪಾಟೀಲ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಪ್ರೊ. ಬಿ.ಎಲ್. ಲಕ್ಕಣ್ಣವರ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕ.ರಾ.ಅ.ಮ.ವಿ,ವಿಜಯಪುರ ಮತ್ತು ಕುಲಸಚಿವರು, ಕ.ರಾ.ಗ್ರಾ.ಅ.
  ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ.
- **ಪ್ರೊ. ಕೆ.ಎಂ. ಮೇತ್ರಿ**
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ,
  ಕನ್ನಡ ವಿಶ್ವವಿದ್ಯಾಲಯ, ಹಂಪಿ.
- **ಡಾ. ಎನ್. ಲಕ್ಷ್ಮೀ**
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- **ಡಾ. ಜಗನ್ನಾಥ ಕೆ. ಡಾಂಗೆ**
  ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಡಾ. ರಾಜಪ್ಪ ದಳವಾಯಿ**
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- **ಡಾ. ಭೀಮಪ್ಪ ರಂಗಣ್ಣವರ**
  ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಮೌಲಾನಾ ಆಜಾದ್ ರಾಷ್ಟ್ರೀಯ ವಿಶ್ವವಿದ್ಯಾಲಯ,
  ಶಿ. ಶಿ. ಮಹಾವಿದ್ಯಾಲಯ, ಬೀದರ.
- **ಡಾ. ಹುಚ್ಚೇಗೌಡ**
  ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ,
  ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.



**Shikshan Soudha**

*A Quarterly Education and Research Journal*

**VIDYANIDHI PRAKASHANA®**

Since:1973

**SRI SIVAKUMAR AGENCY®**

Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-200527
email : shikshansoudha@gmail.com



The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.




## ಅಂತರಂಗ Inside

### ಸೈದ್ಧಾಂತಿಕ (Articles)


03 ಗಾಂಧೀಜಿಯವರ ಪರಿಕಲ್ಪನೆಯ ವಾಸ್ತವಿಕ ನೆಲೆಯಲ್ಲಿ ಮೂಲ ಶಿಕ್ಷಣ: ಒಂದು ಅವಲೋಕನ – ಡಾ. ಸರೋಜಮ್ಮ

09 ನಗರ ಸ್ಥಳೀಯ ಸಂಸ್ಥೆಗಳು ಮತ್ತು ಹಣಕಾಸು ಆಯೋಗ – ರಾಜು ಬಿ.ಕೆ., ಡಾ. ಎಂ. ವೆಂಕಟೇಶ್

12 ಆಧುನಿಕ ಯುಗದಲ್ಲಿ ಡಿಜಿಟಲ್ ಗ್ರಂಥಾಲಯಗಳ ವೈಶಿಷ್ಟತೆಗಳು : ಒಂದು ವಿಶ್ಲೇಷಣೆ – ಶಶಿಕಾಂತ ಕ. ಬಾಗೇವಾಡಿ

14 ಕೊಡಗಿನ ಜನಪದರ ಸಾಂಸ್ಕೃತಿಕ ಚಹರೆಗಳು – ಡಾ. ಚಂದ್ರಕಾಂತ ಕೆ,

17 ತ.ರಾ.ಸು. ಅವರ 'ರಾಜ್ಯದಾಹ' ಕಾದಂಬರಿಯಲ್ಲಿ ಅರಸುತನದ ಪರಿಣಾಮಗಳು – ಡಾ. ಗಿರೀಶ್ ಮೂಗ್ತಿಹಳ್ಳಿ

19 ಸ್ವಾತಂತ್ರೋತ್ಸವದ 75ರ ಸಂದರ್ಭದಲ್ಲಿ ಭಾರತದ ಪ್ರಜಾಪ್ರಭುತ್ವ ಎದುರಿಸುತ್ತಿರುವ ಸವಾಲುಗಳು – ಬಸವರಾಜೇಶ್ವರಿ ಆರ್. ಪಾಟೀಲ

23 ತೃತೀಯ ಲಿಂಗಿಗಳ ಪ್ರಸ್ತುತ ಶಿಕ್ಷಣ, ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳು – ಪ್ರಕಾಶ ಸಿ., ಡಾ. ಜಗನ್ನಾಥ ಕೆ. ಡಾಂಗೆ

25 ಪಂಚಾವರಂ ನಾಟಕದಲ್ಲಿ ಸಂಘರ್ಷ : ನಿರ್ಗತಿಕ ನೆಲೆ – ನಿಂಗರಾಜು ಹೆಚ್.ಎಸ್.

28 ಜನಪದ ನಂಬಿಕೆಗಳು – ಡಾ. ಎಂ.ಎಸ್. ಮಾಗಣಗೇರಿ

31 ವಿಶ್ವಗುರು ಬಸವಣ್ಣನವರ ವಚನಗಳಲ್ಲಿ ಅಡಕವಾದ ಮೌಲ್ಯಯುತ ವಿಚಾರಗಳು : ಒಂದು ನೋಟ – ಶಿವಾನಂದ ಹಿರೇಮಠ

33 ಕನ್ನಡ ಸಾಹಿತ್ಯದಲ್ಲಿ ಶಾಂತಿ ಮತ್ತು ಸೌಹಾರ್ದತೆ– ಡಾ. ಅಣ್ಣಪ್ಪ ಭೀ. ರೊಟ್ಟಿಗವಾಡ

36 ಕನ್ನಡ ಆತ್ಮಕಥನ ಸಾಹಿತ್ಯದಲ್ಲಿ ದಲಿತ ಮತ್ತು ಮುಸ್ಲಿಂ ಮಹಿಳಾ ಪ್ರತಿನಿಧೀಕರಣ – ಶ್ರೀಮತಿ ಸಾವಿತ್ರಿ ಬಸಯ್ಯಮಠ

40 ವಚನ ಸಾಹಿತ್ಯದಲ್ಲಿ ವೈಚಾರಿಕ ನೆಲೆಗಳು – ಸುಧಾಕರ ಕೆ.ಎಸ್.

43 ವೈದೇಹಿ ಅವರ 'ಕ್ರೌಂಚ ಪಕ್ಷಿಗಳು' – ಒಂದು ಒಳನೋಟ – ಡಾ. ದೇವಿಕ ಎಸ್.

45 ಆಟೋರಿಕ್ಷಾ ಹಿಂಬರಹಗಳು – ಡಾ. ಜ್ಯೋತಿ ಕೆ.ಬಿ.

48 ಜಾನಪದ ಒಡಪುಗಳು – ಶ್ರೀಮತಿ ಡಾ. ಭವಾನಿ ಗೋಳೇದ

50 ತೇಜಸ್ವಿಯವರ ಅವನತಿ ಕಥೆಯಲ್ಲಿ : ಗ್ರಾಮ ಭಾರತದ ಅವನತಿಯ ಹಲವು ಸಂವೇದನೆಗಳು – ದಯಾನಂದ

51 ಶರಣರ ವಚನಗಳಲ್ಲಿ ಅನ್ವಯಿಕ ಕಾಯಕ ಪ್ರಜ್ಞೆ – ಡಾ. ಚಿತ್ತಯ್ಯ ಕೆ.


### ಸಂಶೋಧನೆ (Reserch)


54 ಬಾಂಗ್ಲಾ-ನಿರಾಶ್ರಿತರ ಮಕ್ಕಳ ಮಹತ್ವಾಕಾಂಕ್ಷೆ ಮಟ್ಟ, ವೃತ್ತಿಯ ಆಯ್ಕೆ ಮತ್ತು ಅವರ ಶೈಕ್ಷಣಿಕ ಸಾಧನೆಯ ಸಮೀಕ್ಷಾ ಅಧ್ಯಯನ – ಡಾ. ಪ್ರಕಾಶ ಬಡಿಗೇರ

56 ವಿದ್ಯಾರ್ಜನೆಗಾಗಿ, ನವೀನ ಒಳನೋಟ : ಒಂದು ವೈಜ್ಞಾನಿಕ ವಿಶ್ಲೇಷಣೆ ! – ಡಾ. ಸತೀಶ್ ಎಲ್.ಎ., ಪ್ರೊ. ಜ್ಯೋತಿ ಅರಹುಣಸಿ

60 ಪ್ರಶಿಕ್ಷಣ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಪಾತ್ರ – ಬಾಲಚಂದ್ರ ಮಡಿವಾಳ್, ಡಾ. ಎಸ್.ಎಸ್.ಪಾಟೀಲ್

64 ಕುವೆಂಪು ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿನ ಉದ್ಯೋಗ ಕೌಶಲ್ಯಗಳ ಅಧ್ಯಯನ – ಶಿಲ್ಪ ವಿ., ಡಾ. ಎಸ್.ಎಸ್. ಪಾಟೀಲ್

: ಸೂಚನೆ :

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನವಾದಲ್ಲಿ 1500 ಶಬ್ದಗಳನ್ನು ಮೀರಬಾರದು ಹಾಗೂ ಸಂಶೋಧನಾ ಲೇಖನವಾದಲ್ಲಿ 2000 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು ಕಳಿಸಿರಿ.


**70** ಭವಿಷ್ಯದ ಶಿಕ್ಷಕರಿಗೆ ಅವಶ್ಯಕವಾಗಿರುವ ಸಾಮರ್ಥ್ಯಗಳ ಒಂದು ಒಳನೋಟ
– ಸಿದ್ಧರಾಜು., ಡಾ. ಜಗನ್ನಾಥ ಕೆ. ಡಾಂಗೆ

**75** ಗದಗ ತಾಲೂಕಿನ ಕೈಮಗ್ಗ ನೇಕಾರರ ಸಾಮಾಜಿಕ ಸ್ಥಿತಿಗತಿ ಕುರಿತು ಅಧ್ಯಯನ
– ಸುಮಿತ್ರಾ ಮೆಣಸಿನಕಾಯಿ, ಲಿಂಗರಾಜ್ ನಿಡುವಣಿ, ಸುನಂದಾ ಕಳಕಣ್ಣವರ

**80** ಸುಸ್ಥಿರ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರ : ಕೊಡಗು ಜಿಲ್ಲೆಯ ವಿಶೇಷ ಅಧ್ಯಯನ – ರಶ್ಮಿ, ಡಾ. ಟಿ.ಡಿ.ತಿಮ್ಮಯ್ಯ

**85** ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆಯ ಕುರಿತು ಒಂದು ಅಧ್ಯಯನ – ಡಾ. ಶೋಭಾ ಎಂ.

**90** ಗ್ರಾಮೀಣ ಸಮುದಾಯದ ಆರೋಗ್ಯ ಸಂರಕ್ಷಣೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪಾತ್ರ : ಸಮಾಜಶಾಸ್ತ್ರೀಯ ವಿಶ್ಲೇಷಣೆ – ಪ್ರಕಾಶ ಡಿ.ಎನ್.

**ಶಿಕ್ಷಣ ತಜ್ಞರು (Education Thinkers)**

**95** ಡಾ. ರಾಧಾಕೃಷ್ಣನರವರ ಜೀವನ ಹಾಗೂ ಸಾಧನೆಗಳು
– ಡಾ. ಹೆಚ್.ಆರ್. ಜಂಗಣವಾರಿ



**ಶಿಕ್ಷಣ ಸೌಧ**
ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

*ಚಂದಾ ವಿವರ:*

| | | |
|---|---|---|
| ವಾರ್ಷಿಕ ಚಂದಾ | ₹ 750/- | ☐ |
| ತ್ರೈವಾರ್ಷಿಕ ಚಂದಾ | ₹ 2100/- | ☐ |
| ಆಜೀವ ಸದಸ್ಯತ್ವ | ₹ 7000 /- | ☐ |

*ಚಂದಾದಾರರು :*
**ಶಿಕ್ಷಣ ಸೌಧ**
ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

*Bank Detils :*
**SHIKSHANA SOUDHA**
Indian Overseas Bank
J.T. Math Road, Gadag Branch
A/c.No.: 285402000000179
IFSC : IOBA0002854

ಡಿ.ಡಿ. ಕಳುಹಿಸಬೇಕಾದ ವಿಳಾಸ :

**ಶಿಕ್ಷಣ ಸೌಧ**
ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ವಿದ್ಯಾನಿಧಿ ಪ್ರಕಾಶನ
ಸ್ಟೇಶನ್ ರೋಡ ಮತ್ತು 'ನನಸು' ಜೆ.ಟಿ.ಮಠ ರೋಡ,
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–200527
Email : shikshansoudha@gmail.com

**ಶಿಕ್ಷಣ ಸೌಧ**
ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ
ನೂತನ ಚಂದಾದಾರರ ನೋಂದಣಿ ಪ್ರತಿ

Date :

Name :______________________

Designation :______________________

Institution :______________________

Address :______________________

______________________

Phone Cell Nos.:______________________

e-mail :______________________

D.D. No. :____________ Dated :__________

Amount :________ Bank :______________

*Institution's* *Signature*

# ಭಾರತದಲ್ಲಿ ಉನ್ನತ ಶಿಕ್ಷಣ : ಸಮಾನತೆ ಮತ್ತು ಒಳಗೊಳ್ಳುವಿಕೆ

ರಾಷ್ಟ್ರೀಯ ಶಿಕ್ಷಣ ನೀತಿ–2020ರ ಪ್ರಕಾರ ಶಿಕ್ಷಣವು ಮಾನವನ ಸಾಮರ್ಥ್ಯವನ್ನು ಸಂಪೂರ್ಣವಾಗಿ ವಿಕಾಸಗೊಳಿಸುವ, ಸಮಾನ ಮತ್ತು ನ್ಯಾಯಯುತ ಸಮಾಜವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ.

ಭಾರತವು ಅತಿ ಹೆಚ್ಚು ಯುವಜನರನ್ನು ಹೊಂದಿರುವ ದೇಶವಾಗಿದ್ದು ಇವರೆಲ್ಲರಿಗೂ ಉತ್ತಮ ಗುಣಮಟ್ಟದ ಶೈಕ್ಷಣಿಕ ಅವಕಾಶಗಳನ್ನು ಒದಗಿಸಬೇಕಾಗಿದೆ.

ಈ ನಿಟ್ಟಿನಲ್ಲಿ ಎಲ್ಲರಿಗೂ ಸಮಾನ ಮತ್ತು ಸಮನ್ವಯಿತ ಶಿಕ್ಷಣವನ್ನು ಒದಗಿಸದೇ ಆದಲ್ಲಿ ಇದು ಆರೋಗ್ಯ ಸುಧಾರಣೆ, ಬಡತನದ ಕಡಿತ, ಅಪರಾಧ ಮತ್ತು ಜನಸಂಖ್ಯೆಯ ಬೆಳವಣಿಗೆಯಂತಹ ಧನಾತ್ಮಕ ಅಂಶಗಳಿಗೆ ಕಾರಣವಾಗುತ್ತದೆ.

ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ವಿಶೇಷವಾಗಿ ಉನ್ನತ ಶಿಕ್ಷಣದಲ್ಲಿ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಗುಂಪುಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಮಾಣದ ಅಸಮಾನತೆಗಳಿವೆ. ಈ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಗುಂಪುಗಳನ್ನು (SEDG- Socio Economically Disadvantaged Group) ವಿಶೇಷ ಸ್ಥಾನದೊಂದಿಗೆ ಗುರುತಿಸಲಾಗಿದೆ. ಇವರಿಗೆ ಉನ್ನತ ಶಿಕ್ಷಣದ ಸೌಲಭ್ಯ ದೊರೆಯುವಂತೆ ಅವಕಾಶಗಳನ್ನು ದೊರಕಿಸಿಕೊಡಲು ಸರಕಾರ ಮತ್ತು ಸಾರ್ವಜನಿಕ ಸಂಸ್ಥೆಗಳು ಅಲ್ಲದೆ ಉನ್ನತ ಶಿಕ್ಷಣ ಸಂಸ್ಥೆಗಳು ಹಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

**ಸರಕಾರ ಕೈಗೊಳ್ಳಬೇಕಾದ ಕ್ರಮಗಳು:**

1. SEDG ಗಳಿಗೆ ಸ್ಪಷ್ಟವಾದ ಗುರಿಯನ್ನು ನಿರ್ಧಾರ ಮಾಡುವುದು.
2. ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಸರ್ವಗುಂಪುಗಳಿಗೂ ಸಮಾನ ಅವಕಾಶ ನೀಡುವುದು.
3. SEDG ಗಳ ಶಿಕ್ಷಣದ ಸಲುವಾಗಿ ಸರಕಾರ ಸೂಕ್ತ ಅನುದಾನ ನಿಗದಿಪಡಿಸುವುದು.
4. ಎಲ್ಲ ಜಿಲ್ಲೆಗಳಲ್ಲಿ ಹೆಚ್ಚಿನ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು.
5. ಸ್ಥಳೀಯ ಭಾಷೆಯಲ್ಲಿ ಕಲಿಸುವ ಅವಕಾಶ ಕಲ್ಪಿಸುವುದು.
6. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ ನೀಡುವುದು.
7. ಸರಕಾರದ ಅವಕಾಶಗಳ ಬಗ್ಗೆ ಪ್ರಚಾರ ನೀಡುವುದು.
8. ಇದಕ್ಕಾಗಿ ಅವಶ್ಯಕವಿರುವ ತಂತ್ರಜ್ಞಾನ ಹಾಗೂ ಉಪಕರಣಗಳನ್ನು ಅಭಿವೃದ್ಧಿ ಪಡಿಸುವುದು.

**ಸಾರ್ವಜನಿಕ ಸಂಸ್ಥೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ತೆಗೆದುಕೊಳ್ಳಬಹುದಾದ ಕ್ರಮಗಳು:**

1. ಉನ್ನತ ಶಿಕ್ಷಣ ಪ್ರವೇಶಕ್ಕಾಗಿ ಇರುವ ಶುಲ್ಕವನ್ನು ಕಡಿಮೆಗೊಳಿಸುವುದು.
2. ಪ್ರವೇಶ ಪ್ರಕ್ರಿಯೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಒದಗಿಸುವುದು.
3. ಮಾತೃಭಾಷೆ ಮತ್ತು ದ್ವಿಭಾಷಾ ಪದ್ಧತಿಯಲ್ಲಿ ಕಲಿಸಲು ಅವಕಾಶ ಕಲ್ಪಿಸುವುದು.
4. ವಿದ್ಯಾರ್ಥಿಗಳಿಗೆ ಹಣಕಾಸು ಸಹಾಯ ಮತ್ತು ವಿದ್ಯಾರ್ಥಿ ವೇತನ ನೀಡುವುದು.
5. ಪಠ್ಯಕ್ರಮದಲ್ಲಿ ಸಮಾನತೆ ಸಮನ್ವಯತೆಗನುಗುಣವಾಗಿ ರೂಪಣೆ.
6. ಉನ್ನತ ಶಿಕ್ಷಣವನ್ನು ಸಾಕಷ್ಟು ಉದ್ಯೋಗವಕಾಶವನ್ನು ಒದಗಿಸುವಂತೆ ರೂಪಿಸಬೇಕು.
7. ಉನ್ನತ ಶಿಕ್ಷಣದ ಅವಕಾಶಗಳ ಬಗ್ಗೆ ಪ್ರಚಾರ ನಡೆಸುವುದು.
8. ಕಟ್ಟಡ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
9. ಕಡಿಮೆ ಆದಾಯದ ಗುಂಪುಗಳ ವಿದ್ಯಾರ್ಥಿಗಳಿಗೆ ಉಚಿತ ಅಥವಾ ಅನುದಾನಿತ ಉನ್ನತ ಶಿಕ್ಷಣವನ್ನು ಒದಗಿಸುವುದು ಹೆಚ್ಚು ಸಮಾನ ಮತ್ತು ನ್ಯಾಯಯುತ ಸಮಾಜಕ್ಕೆ ದಾರಿ ಮಾಡಿಕೊಡುತ್ತದೆ.
10. ವಿವಿಧ ರೀತಿಯ ಸಬ್ಸಿಡಿಗಳನ್ನು ನೀಡುವುದು.

ಈ ಎಲ್ಲ ಕಾರ್ಯಕ್ರಮಗಳ ಮೂಲಕ ಉನ್ನತ ಶಿಕ್ಷಣವನ್ನು ಎಲ್ಲಾ ಸಮಾಜಿಕ ಗುಂಪುಗಳಿಗೆ ಕೈಗೆಟುಕುವಂತೆ ಮಾಡಬೇಕು ಇದರಿಂದ ದೇಶದಲ್ಲಿ ಸಮುದಾಯಗಳ ನಡುವೆ ಇರುವ ಸಾಮಾಜಿಕ– ಆರ್ಥಿಕ ವಿಭಜನೆಗಳನ್ನು ನಿವಾರಿಸುತ್ತದೆ. ಇದರಿಂದ ಭಾರತದ ಆರ್ಥಿಕತೆಯಲ್ಲಿ ಮಹತ್ತರವಾದ ಬದಲಾವಣೆಗಳಾಗುತ್ತವೆ. ಸಂಶೋಧನೆ ಮತ್ತು ವಿಶೇಷ ಶಿಕ್ಷಣದಲ್ಲಿ ತೊಡಗಿರುವ ವಿದ್ಯಾರ್ಥಿಗಳು ಆರ್ಥಿಕತೆಗೆ ಉತ್ತಮ ಕೊಡುಗೆದಾರರಾಗುತ್ತಾರೆ.

ಹೀಗೆ ಉನ್ನತ ಶಿಕ್ಷಣವು ಸೃಜನಶೀಲತೆ, ನಾವಿನ್ಯತೆಗಳನ್ನು ಹೆಚ್ಚಿಸುತ್ತದೆ.

**– ಡಾ. ಎಸ್.ಬಿ. ಯಾದವಾಡ**
**ಸಂಪಾದಕರು**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಗಾಂಧೀಜಿಯವರ ಪರಿಕಲ್ಪನೆಯ ವಾಸ್ತವಿಕ ನೆಲೆಯಲ್ಲಿ ಮೂಲ ಶಿಕ್ಷಣ : ಒಂದು ಅವಲೋಕನ

✍ **ಡಾ. ಸರೋಜಮ್ಮ**, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ, ಬೆಂಗಳೂರು.

*"ದೇಶದ, ತನ್ಮೂಲಕ ಮಾನವತೆಯ ಸೇವೆಗಾಗಿ ಎಡೆಬಿಡದೆ ದುಡಿಯುವುದೇ ನನ್ನ ಮೋಕ್ಷಪಥ. ಜೀವ ಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸುವುದೇ ನನ್ನ ಬಯಕೆ".*

*"ಯಾವ ನೂತನ ಸಿದ್ಧಾಂತಗಳನ್ನು ನಾನು ಮಂಡಿಸಿಲ್ಲ. ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೇ ನನ್ನದು. ಅದು ಎಷ್ಟರಮಟ್ಟಿಗೆ ಸರಿಯಾಗಿ ಸಾಗಿದೆಯೋ ಹೇಳಲಾರೆ. ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತದೆ".*

*– ಮಹಾತ್ಮಾ ಗಾಂಧಿ*

ಶಿಕ್ಷಣವೆಂದರೆ ಸಾಧಾರಣವಾಗಿ ಅಕ್ಷರ ಜ್ಞಾನ ಎಂದು ಕರೆಯಬಹುದು. ಮಕ್ಕಳಿಗೆ ಓದು–ಬರಹ, ಅಂಕ ಗಣಿತಗಳನ್ನು ಕಲಿಸುವುದೇ ಪ್ರಾಥಮಿಕ ಶಿಕ್ಷಣ. ಆದರೆ ಒಬ್ಬ ರೈತ ಪ್ರಾಮಾಣಿಕತೆಯಿಂದ ತನ್ನ ಹಿಟ್ಟನ್ನು (ಊಟವನ್ನು) ಗಳಿಸುತ್ತಾನೆ. ಅವನಿಗೆ ಸಾಮಾನ್ಯ ಲೋಕ ಜ್ಞಾನ ಇದ್ದು, ತನ್ನ ತಂದೆ–ತಾಯಿಯ ಸಂಗಡ, ಹೆಂಡತಿ ಮಕ್ಕಳ ಸಂಗಡ, ತನ್ನ ನೆರೆ ಹೊರೆಯವರ ಸಂಗಡ ಹೇಗೆ ನಡೆದುಕೊಳ್ಳಬೇಕೆಂಬ ಪರಿಕಲ್ಪನೆ ಅವನಿಗೆ ಚನ್ನಾಗಿ ಗೊತ್ತಿದೆ. ಸಂಸ್ಕಾರ, ವಿನಯ, ವಿನಮ್ರತೆ, ವಿಧೇಯತೆ, ಗೌರವ, ಆದರ, ಸದಾಚಾರ ನೀತಿಗಳನ್ನು ಅವನು ಬಲ್ಲವನಾಗಿದ್ದಾನೆ. ಅದರಂತೆ ಅವನು ನಡೆದೂ ನಡೆಯುತ್ತಾನೆ. ಆದರೆ ಅವನಿಗೆ ತನ್ನ ಹೆಸರು ಬರೆಯಲು ಬಾರದು. ಇಂಥವನಿಗೆ ಅಕ್ಷರಜ್ಞಾನ ನೀಡಿ ಏನು ಮಾಡಬೇಕೆನ್ನುತ್ತೀರಿ ? ಅವನ ಸುಖಕ್ಕೆ ಒಂದು ಗುಲಗಂಜಿಯಷ್ಟನ್ನಾದರೂ ಹೆಚ್ಚು ಸೇರಿಸಬಲ್ಲಿರಾ?

ಪ್ರೊ. ಹಕ್ಸಲೇ ಶಿಕ್ಷಣವನ್ನು ಹೀಗೆ ವಿವರಿಸಿದ್ದಾರೆ– "ತನ್ನ ದೇಹ ತನಗೆ ದಾಸನಾಗಿ, ಹೇಳಿದ ಕೆಲಸವನ್ನು ಸರಾಗವಾಗಿ ಸಂತೋಷವಾಗಿ ಶಕ್ತಿಯಿದ್ದಷ್ಟು ಮಾಡುವಂತೆ ಯಾರಿಗೆ ತಾರುಣ್ಯದಲ್ಲಿ ಶಿಕ್ಷಣ ದೊರೆತಿದೆಯೋ; ಯಾರ ಬುದ್ಧಿ ಶುದ್ಧ, ಶಾಂತ, ನ್ಯಾಯದರ್ಶಿ ಆಗಿದೆಯೋ; ಯಾರ ಮನಸ್ಸು ಪ್ರಕೃತಿ ನಿಯಮಗಳ ಜ್ಞಾನದಿಂದ ಪೂರ್ಣವಾಗಿದೆಯೋ; ಯಾರ ಇಂದ್ರಿಯಗಳು ನಿಗ್ರಹಿತವೋ; ಯಾರ ಅಂತರಾತ್ಮ ಪರಿಶುದ್ಧವೋ; ಯಾರಿಗೆ ನೀಚಕಾರ್ಯವೆಂದರೆ ಹೇಸಿಗೆಯೋ; ಯಾರು ತನ್ನಂತೆಯೇ ಪರರನ್ನು ಕಾಣುತ್ತಾನೋ ಅವನು ನಿಜವಾಗಿ ಶಿಕ್ಷಿತ".

ನಿಜವಾದ ಶಿಕ್ಷಿತನು ಪ್ರಕೃತಿಯ ನಿಯಮದಂತೆ ನಡೆಯುತ್ತಾನೆ. ನಿಜವಾಗಿ ಅವನೇ ಸರಿಯಾದ ಶಿಕ್ಷಣ ಪಡೆದವನು. ಪ್ರಕೃತಿಯನ್ನು ಅವನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಂಡಾನು. ಪ್ರಕೃತಿ ಅವನನ್ನು ಉತ್ತಮವಾಗಿ ಉಪಯೋಗಿಸಿತು ಎನ್ನಬಹುದು.

ಮೂಲ ಶಿಕ್ಷಣ ಜೀವನಕ್ಕಾಗಿ ಶಿಕ್ಷಣ, ಜೀವನದ ಮೂಲಕ ಶಿಕ್ಷಣ, ಜೀವನ ಪರ್ಯಂತ ಶಿಕ್ಷಣ. ಆದುದರಿಂದ ಅದು ದೇಹ, ಬುದ್ಧಿ ಹಾಗೂ ಆತ್ಮಗಳ ಶಿಕ್ಷಣ. ಹುಡುಗ ಹುಡುಗಿಯರು ಪರಿಪೂರ್ಣ ಪುರುಷತ್ವ, ಸ್ತ್ರೀತ್ವ ಪಡೆವ ಸಮಗ್ರ ವಿಕಾಸವೇ ಅದು. ಅದರಲ್ಲಿ ಕೈಕಾಲು ಹಾಗೂ ಬುದ್ಧಿ, ಹೃದಯ, ಮೆದುಳು, ಕ್ರಿಯೆ ಅಧ್ಯಯನ ಹಾಗೂ ಸುಸಂಬದ್ಧ ಬಾಳುವೆ ಮತ್ತು ವಿಕಾಸದ ಕಾರ್ಯ ಕ್ರಮದಲ್ಲಿ ತಮ್ಮ ಸಹಜ ಸಂಬಂಧವನ್ನು ಸಾಧಿಸುತ್ತವೆ. ಆದುದರಿಂದ ಮೂಲಶಿಕ್ಷಣ ಶೈಶವದ ಮೊದಲ ವರ್ಷಗಳಿಂದ ಆರಂಭವಾಗಿ ಪ್ರೌಢಾವಸ್ಥೆಯವರೆಗೆ ಹೋಗುತ್ತದೆ. ಆದರೆ 'ನಯೀ ತಾಲೀಂ' ತನ್ನ ವಿಶ್ವರೂಪದಲ್ಲಿ ಬಾಳ ಆದಿಯಿಂದ ಹಿಡಿದು ಅಂತ್ಯದ ವರೆಗೆ ಹಬ್ಬಿದೆ.

## ಮೂಲ ಶಿಕ್ಷಣದ ಹುಟ್ಟು

'ನವ ಭಾರತ ವಿದ್ಯಾಲಯ' ಎನ್ನುವ ವರ್ಧಾದ ಮಾರ್ವಾಡಿ ಹೈಸ್ಕೂಲು ತನ್ನ ರಜತಮಹೋತ್ಸವ ನಡೆಸುತ್ತಿದ್ದ ಸಂದರ್ಭದಲ್ಲಿ ರಾಷ್ಟ್ರೀಯ ಮನೋವೃತ್ತಿಯ ಶಿಕ್ಷಣಪಂಡಿತರ ಸಮ್ಮೇಳನವೊಂದನ್ನು ನಡೆಸಲು ಅದರ ಕಾರ್ಯದರ್ಶಿಗಳಾದ ಶ್ರೀಮನ್ನಾರಾಯಣ ಅಗರವಾಲ್‌ರವರು ಗಾಂಧಿಯವರನ್ನು ಕೇಳಿದರು. ಹಾಗೂ ಅದರ ಅಧ್ಯಕ್ಷರಾಗಲು ಕೇಳಿದಾಗ ಗಾಂಧಿ ಅದಕ್ಕೆ ಒಪ್ಪಿದರು. ಈ ಸಮ್ಮೇಳನ ವರ್ಧಾದಲ್ಲಿ ಅಕ್ಟೋಬರ್ 22–23 ರಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಮೂಲ ಶಿಕ್ಷಣದ ಬಗ್ಗೆ ಕೆಲವೊಂದು ಚರ್ಚೆ ನಡೆಸಲಾಯಿತು. ಮೂಲ ಶಿಕ್ಷಣದ ಬಗ್ಗೆ ಗಾಂಧಿಯವರು ತಮ್ಮ ಅಭಿಪ್ರಾಯಗಳನ್ನು ಈ ಸಮ್ಮೇಳನದಲ್ಲಿ ಈ ರೀತಿ ವ್ಯಕ್ತಪಡಿಸಿದ್ದಾರೆ.

ಈಗಿನ ಶಿಕ್ಷಣ ಪದ್ಧತಿ ದೇಶದ ಅವಶ್ಯಕತೆಗೆ ಯಾವ ವಿಧದಲ್ಲೂ ಸರಿ ಹೋಗುತ್ತಲಿಲ್ಲ. ಪ್ರೌಢ ಶಿಕ್ಷಣಕ್ಕೆ ಇಂಗ್ಲೀಷ್ ಭಾಷೆಯನ್ನು ಮಾಧ್ಯಮವಾಗಿ ಮಾಡಿರುವುದರಿಂದ ಸುಶಿಕ್ಷಿತರಾದ ವಿದ್ಯಾವಂತರಿಗೂ ಅಶಿಕ್ಷಿತ ಅವಿದ್ಯಾವಂತ ಜನಸ್ತೋಮಕ್ಕೂ ನಡುವೆ ಒಂದು ಗೋಡೆ ಕಟ್ಟಿದಂತೆ ಆಗಿದೆ. ಅದರಿಂದ ಜನತೆಗೆ ಜ್ಞಾನ ಹರಿದುಬರುತ್ತಿಲ್ಲ. ಇಂಗ್ಲೀಷಿಗೆ ಕೊಟ್ಟ ಈ ಅತಿಪ್ರಾಧಾನ್ಯತೆಯಿಂದಾಗಿ ವಿದ್ಯಾವಂತರಿಗೆ ಅದು ಭಾರವಾಗಿ ಅವರ ಮನಸ್ಸು ಊನವಾಗಿದೆ. ಅವರು ತಮ್ಮ ದೇಶದಲ್ಲಿ ತಾವೇ ಪರದೇಶಿಗಳಾಗಿದ್ದಾರೆ. ವೃತ್ತಿ ಶಿಕ್ಷಣದ ಲೋಪದಿಂದ ವಿದ್ಯಾವಂತರು ಉತ್ಪಾದಕ ಕಾರ್ಯಕ್ಕೆ ನಿಷ್ಪ್ರಯೋಜಕರಾಗಿ, ದೈಹಿಕವಾಗಿ ವ್ಯರ್ಥಜೀವಿಗಳೂ ಆಗಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಕಲಿಸಿದ ಅಲ್ಪಸಲ್ಪ ಜ್ಞಾನವೂ ಬೇಗ ಮರೆತುಹೋಗುತ್ತದೆ. ಗ್ರಾಮ ಜೀವನ, ನಗರಜೀವನ ಯಾವುದಕ್ಕೂ ಇದರಿಂದ ಪ್ರಯೋಜನವಿಲ್ಲ. ಹೀಗಾಗಿ ಇದಕ್ಕೆ ವೆಚ್ಚಮಾಡಿದ ಹಣ ತೆರುವವನಿಗೆ ಸಿಗುತ್ತಿಲ್ಲ. ಅವನ ಮಕ್ಕಳಿಗೆ ಆಗುವ ಪ್ರಯೋಜನ ಅತ್ಯಲ್ಪ.

ಪ್ರಾಥಮಿಕ ಶಿಕ್ಷಣದ ಅವಧಿ ಕನಿಷ್ಠ ಏಳು ವರ್ಷಗಳಾದರೂ ಆಗಬೇಕು. ಮೆಟ್ರಿಕ್ಯುಲೇಷನ್ ಓದಿನಲ್ಲಿ ಬರುವ ಸಾಮಾನ್ಯ ಜ್ಞಾನವೆಲ್ಲವೂ ಇದರಲ್ಲಿ ಬರಬೇಕು. ಇಂಗ್ಲೀಷ್ ಬೇಕಾಗಿಲ್ಲ. ಒಂದು ಉಪಯುಕ್ತ ಉದ್ಯೋಗ ಬರಬೇಕು. ಹುಡುಗ ಹುಡುಗಿಯರ ಸರ್ವತೋಮುಖವಾದ ವಿಕಾಸವಾಗಬೇಕಾದರೆ ಲಾಭದಾಯಕ ಉದ್ಯೋಗವೊಂದನ್ನು ಅವರಿಗೆ ಕಲಿಸಬೇಕು. ಆ ಉದ್ಯೋಗದಿಂದ ಎರಡು ಬಗೆಯ ಲಾಭವಾಗಬೇಕು. ಮೊದಲನೆಯದಾಗಿ ವಿದ್ಯಾರ್ಥಿ ತನ್ನ ಪರಿಶ್ರಮದಿಂದ ಉತ್ಪಾದನೆ ಮಾಡಿದ್ದರಿಂದ ಬಂದಂತಹ ಹಣ ಅವನ ಶಿಕ್ಷಣದ ಶುಲ್ಕಕ್ಕೆ ಆಗಬೇಕು. ಎರಡನೇಯದಾಗಿ ಶಾಲೆಯಲ್ಲಿ ಕಲಿತ ಉದ್ಯೋಗದ ಮೂಲಕ ವಿದ್ಯಾರ್ಥಿಯ ಪರಿಪೂರ್ಣ ಮಾನವೀಯ ಅಂಶಗಳ ವಿಕಾಸವಾಗಬೇಕು.

ಶಾಲೆಯ ಕಟ್ಟಡ, ಸಲಕರಣೆಗಳ ವೆಚ್ಚ ವಿದ್ಯಾರ್ಥಿಗಳ ಶ್ರಮದಿಂದ ಬರಬೇಕಾಗಿಲ್ಲ. ಹತ್ತಿ, ಉಣ್ಣೆ, ರೇಷ್ಮೆಗಳ ಎಲ್ಲಾ ಕ್ರಿಯೆಗಳನ್ನೂ ಅಂದರೆ ಹತ್ತಿ ಬಿಡಿಸುವುದು, ಕಾಳು ಅರೆಯುವುದು, ಹಿಂಜುವುದು, ನೂಲುವುದು, ಬಣ್ಣ ಹಾಕುವುದು, ದುಪಟ್ಟಾ ಮಾಡುವುದು, ನೇಯ್ಗೆ, ಮಾದರಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712



ಜೋಡಿಸುವುದು, ಕಸೂತಿ, ಹೊಲಿಗೆ, ಕಾಗದ ಮಾಡುವುದು, ಪುಸ್ತಕಕ್ಕೆ ರಟ್ಟುಕಟ್ಟುವುದು, ಗೊಂಬೆ ಮಾಡುವುದು, ಮನೆಯ ಸಾಮಗ್ರಿಗಳನ್ನು ಮಾಡುವುದು, ಬೆಲ್ಲ ತಯಾರಿಸುವುದು ಈ ತರಹದವುಗಳನ್ನು ಅತ್ಯಂತ ಸುಲಭವಾಗಿ ಕಲಿಯಬಹುದು. ಇದಕ್ಕೆ ಹೆಚ್ಚು ಬಂಡವಾಳವೂ ಬೇಡ ಎಂದು ಗಾಂಧಿ ಮೂಲ ಶಿಕ್ಷಣದ ಬಗ್ಗೆ ತಮ್ಮದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಹುಡುಗ ಹುಡುಗಿಯರು ಕಲಿತ ಕೆಲಸಗಳಿಂದ ಅವರ ಬದುಕು ನಡೆಯುತ್ತದೆ ಎಂಬ ಭರವಸೆಯನ್ನು ಸರ್ಕಾರ ಕೊಡಬೇಕು. ಅಷ್ಟೇ ಅಲ್ಲದೆ ಸರ್ಕಾರವೇ ಮುಂದೆ ಬಂದು ಅವರು ತಯಾರಿಸಿದ ಪದಾರ್ಥಗಳನ್ನು ಕೊಳ್ಳಬೇಕು ಹಾಗೂ ಹೊಟ್ಟೆಹೊರೆಯುವ ಈ ಸಾಧನವನ್ನು ಪ್ರಾಥಮಿಕ ಶಿಕ್ಷಣ ಮಕ್ಕಳಿಗೆ ನೀಡಬೇಕು. ಹಾಗೆಯೇ ಉದ್ಯೋಗ, ಕಲೆ, ಸಾಹಿತ್ಯ, ಯಂತ್ರವಿದ್ಯೆ ಎಲ್ಲವನ್ನು ಪ್ರೌಢಶಿಕ್ಷಣದಲ್ಲಿ ನೀಡಬೇಕು ಹಾಗೂ ಪ್ರೌಢಶಿಕ್ಷಣವನ್ನು ಖಾಸಗೀ ಉದ್ಯಮಕ್ಕೆ ವಹಿಸಬೇಕು ಮತ್ತು ಸರ್ಕಾರದ ವಿಶ್ವವಿದ್ಯಾನಿಲಯಗಳು ಬರೀ ಪರೀಕ್ಷಾ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬೇಕು. ಅವುಗಳ ವೆಚ್ಚ ಆ ಪರೀಕ್ಷಾಶುಲ್ಕದಿಂದ ಸರಿತೂಗಬೇಕು.

ವಿಶ್ವವಿದ್ಯಾನಿಲಯಗಳು ಇಡೀ ಶಿಕ್ಷಣ ಕ್ಷೇತ್ರದ ಮೇಲ್ವಿಚಾರಣೆ ನಡೆಸಬೇಕು. ಶಿಕ್ಷಣದ ಬೇರೆ ಬೇರೆ ವಿಭಾಗಗಳಿಗೆ ಪಾಠಪ್ರವಚನಗಳ ಪಟ್ಟಿಯನ್ನು ತಯಾರುಮಾಡಬೇಕು. ವಿಶ್ವವಿದ್ಯಾನಿಲಯದ ಅನುಮತಿ ಇಲ್ಲದೆ ಯಾವ ಶಾಲೆಯೂ ಪ್ರಾರಂಭವಾಗಕೂಡದು. ಗುಣ, ಯೋಗ್ಯತೆ ಉಳ್ಳವರು ಯಾರು ಬೇಕಾದರೂ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಲು ಅವಕಾಶಕೊಡಬೇಕು. ವಿಶ್ವವಿದ್ಯಾನಿಲಯ ಸರ್ಕಾರಕ್ಕೆ ಹೊರೆಯಾಗಕೂಡದು. ಒಂದು ಕೇಂದ್ರ ಶಿಕ್ಷಣ ಶಾಖೆಯನ್ನು ಮಾತ್ರ ಸರ್ಕಾರ ನಡೆಸಬೇಕು ಎಂಬ ಅಭಿಪ್ರಾಯವನ್ನು ಗಾಂಧಿಯವರು ವ್ಯಕ್ತಪಡಿಸಿದ್ದಾರೆ.

## ಕೈಗೆಲಸದ ಮೂಲಕ ಶಿಕ್ಷಣ

ಈಗಿನ ಪ್ರಾಥಮಿಕ ಶಿಕ್ಷಣ ಬರೀ ವ್ಯರ್ಥವಷ್ಟೇ ಅಲ್ಲ, ಹಾನಿಕರ ಎಂಬುದು ಗಾಂಧಿ ಅವರ ದೃಢ ಅಭಿಪ್ರಾಯ. ಹಲವಾರು ಮಕ್ಕಳು ತಮ್ಮ ತಂದೆ ತಾಯಿಗಳಿಗೂ ತಮ್ಮ ಹುಟ್ಟು ಕಸುಬಿಗೂ ದೂರವಾಗುತ್ತಾರೆ. ಅಡ್ಡ ದಾರಿ ಹಿಡಿದು ಕೆಟ್ಟ ಚಾಳಿ ಕಲಿತು ಪಟ್ಟಣದ ದಾರಿ ಹಿಡಿದು ಏನೋ ಚೂರುಪಾರು ಕಲಿಯುತ್ತಾರೆ. ಅವರು ಕಲಿತದ್ದು ಏನೋ, ಅಂತೂ ಶಿಕ್ಷಣವಲ್ಲ. ಅದಕ್ಕೆ ಉಪಾಯ ವೃತ್ತಿ ಶಿಕ್ಷಣ, ಉದ್ಯೋಗದ ಮೂಲಕ ಶಿಕ್ಷಣ ಎಂದು ತಮ್ಮ ವಿಚಾರ ವ್ಯಕ್ತಪಡಿಸಿದ್ದಾರೆ. ಟಾಲ್‌ಸ್ಟಾಯ್ ಫಾರಂನಲ್ಲಿ ತಮ್ಮ ಮಕ್ಕಳಿಗೆ, ಇತರ ಮಕ್ಕಳಿಗೆ ಶಿಕ್ಷಣ ಕೊಟ್ಟ ಅನುಭವ ತಮಗಿದೆ. ಅದರಲ್ಲಿ ಎಲ್ಲಾ ಜಾತಿಯವರು ಇದ್ದರು, ಒಳ್ಳೆಯವರು, ದುಷ್ಟರು, ಉದಾಸೀನರು ಎಲ್ಲರೂ ಇದ್ದರು. ತಾವು ಕಾಲೆನ್‌ಬಾಕರ ಬಳಿ ಕಲಿತ ಕೈಕೆಲಸದ– ಬಡಗಿ, ಚಮ್ಮಾರಗೆಲಸಗಳ ಮೂಲಕ ಅವರಿಗೆ ಶಿಕ್ಷಣ ಕೊಟ್ಟ ಬಗೆ ತಿಳಿಸಿದರು.

ಗಾಂಧೀಜಿಯವರು ಒತ್ತಿ ಹೇಳಿದ್ದು ಕೇವಲ ಉದ್ಯೋಗಾಧಾರಿತ ಶಿಕ್ಷಣವಲ್ಲ. ಕೈಗೆಲಸದ ಮೂಲಕ ಶಿಕ್ಷಣ. ಇತಿಹಾಸ, ಭೂಗೋಳ, ಗಣಿತ, ವಿಜ್ಞಾನ, ಸಾಹಿತ್ಯ ಎಲ್ಲಾ ಕೈಗೆಲಸದ ಮೂಲಕವೇ ಕಲಿಸುವಂತಾಗಬೇಕು. ಆದರೆ ಮಧ್ಯಯುಗದಲ್ಲಿ ಇದನ್ನೆ ಕಲಿಸಿದರಲ್ಲ ಎಂದು ಆಕ್ಷೇಪಿಸಬಹುದು. ಆಗ ಕೊಟ್ಟ ವೃತ್ತಿಶಿಕ್ಷಣ, ಉದ್ಯೋಗದ ತರಬೇತು ಶಿಕ್ಷಣದ ದೃಷ್ಟಿಯಿಂದ ಕೊಟ್ಟಿದಲ್ಲ. ಈ ಕಾಲದಲ್ಲಿ ಜನ ಹುಟ್ಟುಕಸುಬನ್ನು ಮರೆತಿದ್ದಾರೆ, ಗುಮಾಸ್ತರಾಗಿದ್ದಾರೆ, ಹಳ್ಳಿಗಳನ್ನು ಬಿಟ್ಟು ಪಟ್ಟಣಗಳ ಕಡೆ ಮುಖ ಮಾಡಿದ್ದಾರೆ. ಇದರಿಂದ ಯಾವ ಹಳ್ಳಿಯಲ್ಲೂ ದಕ್ಷನಾದ ಕಮ್ಮಾರ ಸಿಗದಂತೆ ಆಗಿದೆ. ಗೃಹ ಕೈಗಾರಿಕೆಗಳೆಲ್ಲವು ಮಾಯವಾಗಿವೆ ಎಂಬ ಅಂಶವನ್ನು ತಿಳಿಸಿದರು.

## ತಕಲಿ– ಒಂದು ಉತ್ಪಾದಕ ಆಟಿಕೆ

ಒಂದು ಕೈಗಾರಿಕೆಯ ಕಲೆ–ಶಾಸ್ತ್ರ ಎರಡನ್ನು ಪೂರ್ಣವಾಗಿ ಕೈಯಾರೆ ಮಾಡಿಸಿ ಕಲಿಸಬೇಕು. ಅದರ ಮೂಲಕ ಶಿಕ್ಷಣ ನೀಡುವಂತಾಗಬೇಕು. ತಕಲಿಯಿಂದ ನೂಲುವುದರಲ್ಲಿ ಹತ್ತಿಯ ವಿವಿಧ ಜಾತಿ, ಹಿಂದುಸ್ತಾನದ ಪ್ರಾಂತ್ಯಗಳ ಭಿನ್ನ ಭಿನ್ನ ಭೂಗುಣ, ಇಂತಹ ಕೈಗಾರಿಕೆಯ ವಿನಾಶದ ಇತಿಹಾಸ, ಅದರ ರಾಜಕೀಯ ಕಾರಣ, ಅದರಲ್ಲಿ ಭಾರತದಲ್ಲಿ ಬ್ರಿಟಿಷರ ಪ್ರಭುತ್ವದ ವಿಷಯ ಇತ್ಯಾದಿ ಎಲ್ಲವೂ ಸೇರಿ ಬರುತ್ತದೆ.

ಏಳು ವರ್ಷದ ಶಿಕ್ಷಣವನ್ನು ಗಾಂಧೀಜಿ ಯೋಜಿಸಿದ್ದಾರೆ. ಈ ಅವಧಿಯಲ್ಲಿ ತಕಲಿ ವಿದ್ಯೆಯಲ್ಲಿ ಪರಿಣಿತಿ ಬರಬೇಕು. ಅಂದರೆ ನೇಯಿಗೆ, ಬಣ್ಣ ಹಾಕುವುದರವರೆಗೆ ಕಲಿತಿರಬೇಕು. ವಿದ್ಯಾರ್ಥಿಗಳ ಶ್ರಮದಿಂದ ಬಂದಂತಹದ್ದು ಅಧ್ಯಾಪಕನ ವೆಚ್ಚಕ್ಕಾಗಬೇಕು. ಇಲ್ಲದಿದ್ದರೆ ನಮ್ಮ ಕೋಟಿಗಟ್ಟಲೆ ಮಕ್ಕಳಿಗೆ ಶಿಕ್ಷಣ ಕೊಡಲು ಬೇರೆ ದಾರಿ ಇಲ್ಲ. ಇದರ ಜೊತೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳಿಗೆ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವ, ಆರೋಗ್ಯಕ್ಕೆ ಸಂಬಂಧಿಸಿದಂತಹ ಕ್ರಮಗಳ ಬಗ್ಗೆ ಅರಿವು, ಆಹಾರ ಕ್ರಮಗಳ ಪ್ರಥಮ ಸೂತ್ರಗಳ ಜ್ಞಾನ, ತಮ್ಮ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವುದು, ಮನೆಯಲ್ಲಿ ತಂದೆತಾಯಿಗಳಿಗೆ ನೆರವಾಗುವುದು ಮುಂತಾದವುಗಳನ್ನು ನೀಡಬೇಕು. ಗಾಂಧೀಜೀಯವರ ಪ್ರಕಾರ ಈಗಿನ ಮಕ್ಕಳಿಗೆ ಶುಚಿತ್ವ, ಸ್ವ ಸಹಾಯ ಸ್ವಲ್ಪವು ತಿಳಿಯದು. ದೇಹದಾಢ್ಯ ಬಹಳ ಕಡಿಮೆ, ಆದುದರಿಂದ ವಿದ್ಯಾರ್ಥಿಗಳಿಗೆ ಸಂಗೀತ, ಕವಾಯತುಗಳ ಮೂಲಕ ಶಾರೀರಿಕ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಸಬೇಕು ಎಂದು ತಿಳಿಸಿದ್ದಾರೆ.

## ಒಂದೇ ದಾರಿ

ಕೆಲವರ ಪ್ರಕಾರ ಗಾಂಧೀಜಿ ಅಕ್ಷರ ವಿದ್ಯೆಗೆ ಶತ್ರು ಎಂದು ದೂರಿದ್ದಾರೆ. ಅದಕ್ಕೆ ಗಾಂಧೀಯವರು ನಾನು ಶತ್ರುವಲ್ಲ. ಅದನ್ನು ಹೇಗೆ ಕಲಿಸಬೇಕೋ ಆ ದಾರಿ ತೋರಿಸುವ ಉದ್ದೇಶ ನನ್ನದು ಎಂದಿದ್ದಾರೆ. ಸ್ವಾವಲಂಬನೆಯ ಮಾತನ್ನು ತಿಳಿಸುವ ಮೂಲಕ ಪ್ರಾಥಮಿಕ ಶಿಕ್ಷಣಕ್ಕೆ ಕೋಟಿಗಟ್ಟಲೆ ಹಣವನ್ನು ಸರ್ಕಾರ ವೆಚ್ಚಮಾಡಬೇಕು. ಅದನ್ನು ಬಿಟ್ಟು ಮಕ್ಕಳನ್ನು ಶೋಷಣೆ ಮಾಡಬೇಕೇ ಎನ್ನುತ್ತಾರೆ. ಇದರಲ್ಲಿ ಅಪವ್ಯಯ, ವ್ಯರ್ಥ, ಅನುಭವ ಇದಕ್ಕೆ ವಿರುದ್ಧವಾಗಿದೆ, ಮಕ್ಕಳಿಗೆ ಇದು ಭಾರ, ಇದು ಮಕ್ಕಳ ಶೋಷಣೆ ಎಂಬುವವರಿಗೆ ಗಾಂಧೀಜೀಯುವರ ಉತ್ತರ ಆ ಮಕ್ಕಳು ಹಾಳಾಗಿಹೋಗದಂತೆ ಕಾಪಾಡುವುದೂ ಒಂದು ಭಾರವೇ, ಶೋಷಣೆಯೆ ಎಂದು ಹೇಳಿದ್ದಾರೆ.

ನೂಲು ನೇಯುವುದು, ಹೊಲದಲ್ಲಿ ಕೆಲಸ ಮಾಡಿ ತಾಯಿತಂದೆಗೆ ನೆರವಾಗುವುದಷ್ಟೇ ಅಲ್ಲದೆ, ತನ್ನ ಮನೆಗೆ ಮಾತ್ರವಲ್ಲದೆ ಇಡೀ ಹಳ್ಳಿಗೆ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇಡೀ ದೇಶಕ್ಕೆ ತನ್ನ ಸಂಬಂಧ, ಅದಕ್ಕೆ ತಾನು ಋಣ ತೀರಿಸಬೇಕು ಎಂಬ ಭಾವನೆ ಮಕ್ಕಳಿಗೆ ಬರುವಂತೆ ಮಾಡಬೇಕು. ಅದು ಒಂದೇ ದಾರಿ. ತಮ್ಮ ಶ್ರಮದಿಂದ ಶಿಕ್ಷಣವನ್ನು ಪಡೆದರೆ ಮಕ್ಕಳಿಗೆ ಆತ್ಮವಿಶ್ವಾಸ, ಧೈರ್ಯ ಬರುತ್ತವೆ. ಈ ಪದ್ಧತಿ. ಹಿಂದೂ, ಮುಸಲ್ಮಾನ, ಫಾರಸೀ, ಕ್ರೈಸ್ತರೆಲ್ಲರಿಗೂ ಸಮಾನವಾಗಿದೆ ಎಂದು ತಿಳಿಸಿದರು.

## ಕಡ್ಡಾಯವಾಗಿ ಸೇವೆ

ಈ ರೀತಿಯಾಗಿ ಶಿಕ್ಷಣ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೂ ಅವಕಾಶ ಬಂದರೆ ಸರ್ಕಾರ ಉದ್ಯೋಗವನ್ನು ತೋರಿಸಿಕೊಡಬೇಕು. ಹಾಗೆಯೇ ಅಧ್ಯಾಪಕರಿಗೆ ಸೇವೆಯನ್ನು ಕಡ್ಡಾಯ ಮಾಡಬೇಕೆನ್ನುತ್ತಾರೆ ಪ್ರೊ. ಷಾರವರು. ಇಟಲಿಯು ಇತರ ದೇಶಗಳ ಉದಾಹರಣೆ ಕೊಟ್ಟು ಇದರ ಉಪಯೋಗವನ್ನು ಅವರು ವಿವರಿಸಿದರು. ಇಟಲಿಯು ಸೇವೆ ಮಾಡಲು ಆದೇಶದ ತರುಣರನ್ನು ಮುಸಲೋನಿ ಹುರಿದುಂಬಿಸಿದಂತೆ ನಾವೂ ಹಾಗೇ ಏಕೆ ಮಾಡಬಾರದು? ಉದ್ಯೋಗ ಮಾಡಲು ಪ್ರಾರಂಭಿಸುವ ಮುನ್ನ ಒಂದೆರಡು ವರ್ಷ ನಮ್ಮ ತರುಣರು ಕಡ್ಡಾಯವಾಗಿ ಸೇವೆಮಾಡಬೇಕೆಂದರೆ ಅದು ಗುಲಾಮಗಿರಿಯಾದೀತೆ? ರಾಷ್ಟ್ರದ ಸೇವೆಗಾಗಿ ಸ್ವ ಇಚ್ಛೆಯಿಂದ ಒಂದು ವರ್ಷ ನಿಮ್ಮ ಸಮಯವನ್ನು ಕೊಡಿ ಎನ್ನುತ್ತಾರೆ ಷಾರವರು.

ಆದುದರಿಂದ ಕೈಕೆಲಸದ ಮೂಲಕ ಶಿಕ್ಷಣ ಕೊಡುವ ಈ ಪದ್ಧತಿ ಸಭೆಗೆ ಒಪ್ಪಿಗೆಯೆ ಎಂದು ಗಾಂಧೀಜೀ ಕೇಳುವ ಮೂಲಕ ಸ್ವಾವಲಂಬನೆಯೇ ಶಿಕ್ಷಣದ ದಕ್ಷತೆಯನ್ನು ಅಳೆಯುವ ಪರೀಕ್ಷೆಯಾಗಿದ್ದು, ಏಳು ವರ್ಷದ ಶಿಕ್ಷಣ ಮುಗಿಸುವ ವೇಳೆಗೆ ಮಕ್ಕಳು ತಮ್ಮ ಶಿಕ್ಷಣದ ಕಾಣಿಕೆಯನ್ನೊಪ್ಪಿಸಿ, ಗಳಿಸುವವರಾಗಬೇಕು ಎಂದು ತಿಳಿಸಿದರು. ಕಾಲೇಜು ಹಂತದ ಶಿಕ್ಷಣವು ಹೆಚ್ಚಾಗಿ ಪಟ್ಟಣಗಳ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದು, ಪ್ರಾಥಮಿಕ ಶಿಕ್ಷಣದಂತೆ ಕಾಲೇಜು ಶಿಕ್ಷಣವಿಲ್ಲದಿರುವುದರಿಂದ ಕಾಲೇಜು ಶಿಕ್ಷಣವು ಪೂರಾ ಹಾಳು, ಹದಿನಾರಾಣೆಯೂ ವ್ಯರ್ಥ ಎನ್ನದಿದ್ದರೂ ಬಹಳಮಟ್ಟಿಗೆ ನಿರಾಶಾದಾಯಕ ಎನ್ನಬಹುದು ಎಂದಿದ್ದಾರೆ.

## ಅಹಿಂಸಾ ಆಧಾರ

ತಮ್ಮ ಸ್ವಾವಲಂಬಿ ಪ್ರಾಥಮಿಕ ಶಿಕ್ಷಣದ ಆಧಾರ ಸೂತ್ರಗಳ ಕಡೆ ಸಭೆಯ ಗಮನ ಸೆಳೆಯುತ್ತಾ, ಗಾಂಧೀಜೀ ಈ ರೀತಿಯಾಗಿ ತಿಳಿಸಿದರು. ನಮ್ಮಲ್ಲಿ ಜಾತಿಕಲಹ ಇದ್ದು, ಇದು ನಮ್ಮಲ್ಲಿ ಮಾತ್ರವೇ ಅಲ್ಲದೆ, ಇಂಗ್ಲೆಂಡಿನಲ್ಲೂ ಸಹ ಗುಲಾಬಿ ಯುದ್ಧ ನಡೆದವು. ಈ ಜಾತಿ ಕಲಹಗಳನ್ನು, ಅಂತರರಾಷ್ಟ್ರೀಯ ಕಲಹಗಳನ್ನು ಅಳಿಸಿಹಾಕಬೇಕೆಂದರೆ ನಮ್ಮ ಮಕ್ಕಳನ್ನು ಶುದ್ಧವಾದ ಬಲವಾದ ಆಧಾರದ ಮೇಲೆ, ನಾನು ವಿವರಿಸಿದ ಶಿಕ್ಷಣದ ಪ್ರಕಾರ ಬೆಳೆಸಬೇಕು. ಆ ಯೋಜನೆ ಅಹಿಂಸೆಯಿಂದ ಹೊರಸೂಸಿದುದು. ಈ ರಾಷ್ಟ್ರ ಸಂಪೂರ್ಣ ಪಾನ ನಿರೋಧದ ಸಂಕಲ್ಪ ಮಾಡಿದಾಗ ಈ ಯೋಜನೆಯನ್ನು ಅನುಷ್ಠಾನ ಮಾಡಬಹುದು ಎಂದು ತಿಳಿಸಿದರು. ಒಂದು ವೇಳೆ ರಾಷ್ಟ್ರದ ವರಮಾನ ಹೆಚ್ಚಾಗಿದ್ದರೂ, ಬೊಕ್ಕಸ ತುಂಬಿಯೇ ಇದ್ದರೂ ಕೂಡ ಆಗಲೂ ನಮ್ಮ ಮಕ್ಕಳನ್ನು ಪಟ್ಟಣದ ವ್ಯಾಮೋಹಕ್ಕೆ ತಳ್ಳಬಾರದೆಂದರೆ ಇದೇ ಶಿಕ್ಷಣವೇ ಸರಿಯಾದುದ್ದಾಗಿದ್ದು, ನಮ್ಮ ಮಕ್ಕಳನ್ನು ನಮ್ಮ ಸಂಸ್ಕೃತಿಯ, ನಮ್ಮ ಸಭ್ಯತೆಯ, ನಮ್ಮ ರಾಷ್ಟ್ರದ ಪ್ರತಿಭೆಯ ನಿಜವಾದ ಪ್ರತಿನಿಧಿಗಳನ್ನಾಗಿ ಮಾಡಬೇಕು ಹಾಗೂ ಸ್ವಾವಲಂಬಿಯಾದ ಪ್ರಾಥಮಿಕ ಶಿಕ್ಷಣದಿಂದಲ್ಲದೆ ಬೇರಾವ ಮಾರ್ಗದಿಂದಲೂ ಅದು ಸಾಧ್ಯವಾಗುವುದಿಲ್ಲ. ಹಿಂದೂಸ್ತಾನವು ಹಿಂಸೆಯನ್ನು ವರ್ಜಿಸಲು ನಿರ್ಧರಿಸಿದುದೇ ಆದರೆ ತಾನು ಅನುಸರಿಸಬೇಕಾದ ಶಿಸ್ತಿನ ಒಂದು ಅಂಗ ಅಂಶ ಎಂದರೆ ಈ ಶಿಕ್ಷಣ ಪದ್ಧತಿಯಾಗಿದೆ ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

## ಯಂತ್ರಯುಗ

ಮಕ್ಕಳಿಗೆ ಸ್ವಾವಲಂಬನೆಯ ಬದುಕನ್ನು ಕಲಿಸಲು ತಕಲಿಯೊಂದೇ ಅಲ್ಲ ಇರುವುದು, ಆದರೆ ಸಾರ್ವತ್ರಿಕವಾಗಿ ಮಾಡಬಹುದಾದುದು ಅದೊಂದೇ. ಕಾಗದ ತಯಾರಿಕೆ, ತಾಳೆಬೆಲ್ಲ ತಯಾರಿಕೆ ಹೀಗೆ ಮುಂತಾದವು ಇದ್ದು, ಯಾವ ಶಾಲೆಗೆ ಯಾವ ಕೈಗಾರಿಕೆ ಅತ್ಯುತ್ತಮ ಎಂಬುದನ್ನು ಕಂಡು ಹಿಡಿಯುವುದು ಮಂತ್ರಿಗಳ ಕೆಲಸವಾಗಿದೆ ಎಂದು ತಿಳಿಸಿದರು. ಯಂತ್ರಗಳನ್ನೆ ಪ್ರಧಾನವಾಗಿ ಮಾಡಿಬಿಟ್ಟರೆ ಮನುಷ್ಯರೇ ಯಂತ್ರಗಳಾದಾರು ಜೋಕೆ ಎಂದು ಯಂತ್ರಭಕ್ತರಿಗೆ ಎಚ್ಚರಿಕೆ ಕೊಡುತ್ತೇನೆ ಎಂದು ಸಹ ತಿಳಿಸಿದರು. ಯಂತ್ರಯುಗದಲ್ಲಿಯೇ ಬದುಕಬೇಕು ಎನ್ನುವವರಿಗೆ ತನ್ನ ಯೋಜನೆ ನಿಷ್ಪ್ರಯೋಜಕವಾಗುತ್ತದೆ, ಆದರೆ ಯಂತ್ರಗಳನ್ನು ನಂಬಿ ಹಳ್ಳಿಯ ಜನಸಮೂಹವನ್ನು ಜೀವಂತವಾಗಿಡಲು ಸಾಧ್ಯವಿಲ್ಲ ಎಂಬುದನ್ನು ಅವರಿಗೆ ತಿಳಿಸಬೇಕು. ಇಲ್ಲಿ 30 ಕೋಟಿ ಸಜೀವ ಯಂತ್ರಗಳಿವೆ, ಆ ನಿರ್ಜೀವ ಯಂತ್ರಗಳನ್ನು ತಂದುಹಾಕುವುದು ಬರೀ ಭ್ರಾಂತಿ ಎಂದು ಜಾಕಿರ್ ಹುಸೇನ್ ಹೇಳಿದರು.

ನಿರುದ್ಯೋಗಕ್ಕೆ ಮದ್ದು ದಾನವಲ್ಲ. ಪ್ರತಿಯೊಬ್ಬರಿಗೂ ಕೆಲಸ ಕೊಟ್ಟು ಹಣವಿಲ್ಲದಿದ್ದರೆ ಕಾಳನ್ನೋ ಅನ್ನವನ್ನೋ ಕೊಡಬೇಕು. ದೇವರು ನಮ್ಮನ್ನು ಸೃಷ್ಟಿಸಿರುವುದು ತಿಂದು, ಕುಡಿದು ಹಾಯಾಗಿ ಇರಲು ಅಲ್ಲ. ಕೈಯಾರೆ ದುಡಿದು ಬೆವರು ಸುರಿಸಿ ಹಿಟ್ಟು ಗಳಿಸಲು ಎಂದು ತಿಳಿಸಿದರು.

ಮೂಲ ಶಿಕ್ಷಣ ದೇಶದ ವಾತಾವರಣದೊಳಗಿನಿಂದ ಮೂಡಿ ಬಂದಿದಾಗಿದೆ. ಅದುದರಿಂದ ಆ ವಾತಾವರಣಕ್ಕೆ ಅನುಗುಣವಾಗಿ ಅದು ರೂಪಿತವಾಗಿದೆ. ಶಿಕ್ಷಣ ನಿಜವಾಗಿರಬೇಕು ಎಂದರೆ ಸ್ವಾವಲಂಬಿಯಾಗಿ ಇರಲೇಬೇಕು. ಕಡೆಯಲ್ಲಿ ಶಿಕ್ಷಣಕ್ಕೆ ತಗುಲಿದ ವೆಚ್ಚವೆಲ್ಲ ತಿರುಗಿ ಬಂದಿರಬೇಕು. ಮೂಲಧನಕ್ಕೆ ಚ್ಯುತಿ ಬರಬಾರದು. ಇದರಲ್ಲಿ ಹಸ್ತಕೌಶಲವನ್ನು ಕಡೆಯವರೆಗೂ ಉಪಯೋಗಿಸುತ್ತಾರೆ. ದಿನವೂ ಸ್ವಲ್ಪ ಹೊತ್ತು ವಿದ್ಯಾರ್ಥಿಗಳ ಕೈಗಳು ಯಾವುದಾದರೊಂದು ಕೈಗಾರಿಕೆಯನ್ನು ಕುಶಲತೆಯಿಂದ ಮಾಡುತ್ತಲೇ ಇರಬೇಕು. ಸಮಸ್ತ ಶಿಕ್ಷಣವು ಪ್ರಾಂತ್ಯ ಭಾಷೆಯ ಮೂಲಕ ನಡೆಯಬೇಕು.

ಇದರಲ್ಲಿ ಮತೀಯ ಶಿಕ್ಷಣಕ್ಕೆ ಎಡೆಯಿರಬಾರದು. ಸರ್ವಸಮ್ಮತವಾದ ಮೂಲನೀತಿ ಧರ್ಮಕ್ಕೆ ಪೂರ್ಣಾವಕಾಶ. ಮಕ್ಕಳಿಗೊ, ವಯಸ್ಕರಿಗೊ, ಗಂಡಸರಿಗೊ, ಹೆಂಗಸರಿಗೊ ಯಾರಿಗೆ ಕೊಟ್ಟರೂ ಈ ಶಿಕ್ಷಣವನ್ನು ಅದು ವಿದ್ಯಾರ್ಥಿಗಳ ಮನೆಯೊಳಗೆ ಹೋಗುತ್ತದೆ. ಈ ಶಿಕ್ಷಣ ಪಡೆದ ಕೋಟ್ಯಾಂತರ ವಿದ್ಯಾರ್ಥಿಗಳು ನಾವೆಲ್ಲ ಭಾರತೀಯರು ಎಂದು ತಿಳಿಯುತ್ತಾರೆ. ಆದುದರಿಂದ ಒಂದು ಅಂತರ ಪ್ರಾಂತೀಯ ಭಾಷೆಯನ್ನು ಕಲಿಯುತ್ತಾರೆ. ಎಲ್ಲರಿಗೂ ಸಮಾನವಾದ ಅಂತರ ಪ್ರಾಂತೀಯ ಭಾಷೆ ನಾಗರಿ ಅಥವಾ ಉರ್ದು ಲಿಪಿಗಳ ಹಿಂದುಸ್ತಾನೀ ಭಾಷೆ. ಆದುದರಿಂದ ವಿದ್ಯಾರ್ಥಿಗಳು ಎರಡೂ ಲಿಪಿಗಳನ್ನು ಕಲಿಯಬೇಕು ಎಂದು ಗಾಂಧೀಜಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

## ಉಪಸಂಹಾರ

ಇಂದಿನ ಶಿಕ್ಷಣಕ್ಕೂ ಗಾಂಧೀಜಿಯ ಕಲ್ಪನೆಯ ಶಿಕ್ಷಣಕ್ಕೂ ಅಜಗಜಾಂತರ ವ್ಯತ್ಯಾಸವಿದ್ದು, ಇಂದಿನ ಶಿಕ್ಷಣಕ್ಕೆ ಗಾಂಧೀಜಿಯವರು ಪ್ರತಿಪಾದಿಸಿದ ಶಿಕ್ಷಣವನ್ನು ಅಳವಡಿಸುವ ಕಾಲ ಸನ್ನಿಹಿತವಾಗಿದೆ ಎಂದೇ ಹೇಳಬಹುದಾಗಿದೆ. ಪ್ರಸ್ತುತ ದಿನಗಳಲ್ಲಿ ತಾಂಡವವಾಡುತ್ತಿರುವ ನಿರುದ್ಯೋಗ ಸಮಸ್ಯೆ, ಬಡತನ, ಹಸಿವು, ಗೃಹ ಕೈಗಾರಿಕೆಗಳ ಅವನತಿ, ಗ್ರಾಮಗಳ ಅವನತಿ ಇವೆಲ್ಲವನ್ನು ಪರಿಹರಿಸಲು ಗಾಂಧೀಜಿಯವರು ಪ್ರತಿಪಾದಿಸಿದ ಶಿಕ್ಷಣ ವ್ಯವಸ್ಥೆ ಸೂಕ್ತವಾಗಿದೆ. ಇಂದಿನ ಯುವಕರು ಗ್ರಾಮಗಳನ್ನು ತೊರೆದು

*– 18ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ನಗರ ಸ್ಥಳೀಯ ಸಂಸ್ಥೆಗಳು ಮತ್ತು ಹಣಕಾಸು ಆಯೋಗ

✍ **ರಾಜು. ಬಿ.ಕೆ.,** ಪಿಎಚ್.ಡಿ ಸಂಶೋಧನ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
✍ **ಡಾ. ಎಂ. ವೆಂಕಟೇಶ್,** ಪ್ರಾಂಶುಪಾಲರು ಮತ್ತು ಸಂಶೋಧನ ಮಾರ್ಗದರ್ಶಕರು, ಡಿ.ವಿ.ಎಸ್. ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ.

**ಪ್ರಸ್ತಾವನೆ :** ನಗರ ಸ್ಥಳೀಯ ಸಂಸ್ಥೆಗಳ ಆದಾಯ ಮತ್ತು ವೆಚ್ಚಗಳಿಗೆ ಸಂಬಂಧಿಸಿದ ಹಾಗೆ ಭಾರತದ ಸಂವಿಧಾನದಲ್ಲಿ ಕೆಲವು ಶಾಸನ ಬದ್ಧ ನಿಬಂಧನೆಗಳಿವೆ ಅಲ್ಲದೇ ಭಾರತದ ಸಂವಿಧಾನದಲ್ಲಿ ರಾಜ್ಯ ಸರ್ಕಾರಗಳು ಅಂಗೀಕರಿಸಿದ ಶಾಸನಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಹಾಗೇ ಆದಾಯ ಮತ್ತು ಖರ್ಚುನ್ನು ಒಳಗೊಂಡತಹ ನಿಭಂದನೆಗಳಿವೆ ಈ ಹಿನ್ನಲೆಯಲ್ಲಿ ಸಂವಿಧಾನವು ಹಣಕಾಸು ಆಯೋಗದ ಸ್ಥಾಪನೆಗೆ ಅವಕಾಶ ಮಾಡಿದೆ.

**ನಗರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಆಯೋಗದ ಅಗತ್ಯತೆ:** ಸಂವಿಧಾನದ 74ನೇ ತಿದ್ದುಪಡಿಯ ನಂತರಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಣಕಾಸಿನ ಹಂಚಿಕೆಗೆ ಸಂಬಂಧಿಸಿದ ಹಾಗೆ ಅನುದಾನ ಹಣಕಾಸಿನ ಸಂಪನ್ಮೂಲ ವರ್ಗಾವಣೆ ನಡುವೆ "ಹಣಕಾಸಿನ ಅಸಮತೋಲನ" ಉಂಟಾಗಿವೆ ಹೀಗೆ ಕೇಂದ್ರ ಮತ್ತು ರಾಜ್ಯ ಒಕ್ಕೂಟ ವ್ಯವಸ್ಥೆಯಲ್ಲಿ ಉಂಟಾಗಿರುವ ಹಣಕಾಸಿನ ಅಸಮತೋಲನವನ್ನ ಎರಡುರೀತಿಯಲ್ಲಿ ಗುರುತಿಸಬಹುದಾಗಿದೆ. **ಹಣಕಾಸಿನ ಲಂಬ ಅಸಮತೋಲನ** (VERTICAL FINANCE IMBALANCE) ಕೇಂದ್ರ ಸರ್ಕಾರವು "DIVISIBLE POOL OF TAXES" ಇದು ಕೇಂದ್ರ ಸರ್ಕಾರವು ಸಂಗ್ರಹಿಸಿದ ತೆರಿಗೆ ಹಣದ ಹಣಕಾಸು ಸಂಗ್ರಹಣೆಯಾಗಿದ್ದು ರಾಜ್ಯಗಳಿಗೆ ಕಾನೂನಿಗೆ ಅನುಗುಣವಾಗಿ ಹಂಚುವುದು ಅತ್ಯಗತ್ಯ ಹೀಗೆ ಕೇಂದ್ರ ರಾಜ್ಯಗಳಿಗೆ ತೆರಿಗೆ ಹಣವನ್ನು ಹಂಚುವಾಗ ಉಂಟಾಗುವ ಅಸಮತೋಲನವನ್ನು "VERTICAL FINANCE IMBALANCE" "ಹಣಕಾಸಿನ ಲಂಬ ಅಸಮತೋಲನ"

**ಲಂಬ ಅಸಮತೋಲನ**

↓

**ಕೇಂದ್ರ ತೆರಿಗೆ ಹಣ**

↓

**ರಾಜ್ಯ ಸರ್ಕಾರಗಳಿಗೆ**

↓

**ನಗರ ಸ್ಥಳೀಯ ಸಂಸ್ಥೆಗಳಿಗೆ**

ಇಂತಹ ಒಂದು ಲಂಬ ಹಣಕಾಸಿನ ಅಸಮತೋಲವನ್ನು ಕೇಂದ್ರದಿಂದ ರಾಜ್ಯಗಳಿಗೆ ಹರಿದು ಬರುವಾಗ ಹಣಕಾಸಿನ ವೈಫಲ್ಯತೆಯನ್ನು ಹೋಗಲಾಡಿಸಲು ಸಂವಿಧಾನ ವಿಧಿ 280ರ ಪ್ರಕಾರ ಕೇಂದ್ರ ಹಣಕಾಸು ಆಯೋಗವನ್ನು ಸ್ಥಾಪಿಸಿದೆ. **ಹಣಕಾಸಿನ ಸಮತಟ್ಟು ಅಸಮತೋಲನ** (HORIZONTALFINANCE IMBALANCE) ಕೆಲವೊಮ್ಮೆ ರಾಜ್ಯಗಳು ತೆರಿಗೆಯನ್ನು ಕೇಂದ್ರ ಸಂಗ್ರಹಿಸಿದ ಅಥವಾ ರಾಜ್ಯವು ಕೆಲವು ತೆರಿಗೆ ಹಣವನ್ನು ಸಂಗ್ರಹಿಸುತ್ತವೆ. ಇಂತಹ ಒಂದು ತೆರಿಗೆ ಸಂಗ್ರಹಣೆ ಪ್ರಕ್ರಿಯೆಯಲ್ಲಿ ರಾಜ್ಯಗಳು ತೆರಿಗೆಯಿಂದ ಬಂದ ಹಣವನ್ನು ಪುನಃ ರಾಜ್ಯಗಳಿಗೆ ಅನುದಾನದ ಮೂಲಕ ಹಂಚುವಾಗ ಉಂಟಾಗುವ ಹಣಕಾಸಿನ ಅಸಮತೋಲನ "ಸಮ ತಟ್ಟು ಅಸಮತೋಲನ" "HORIZONTAL FINANCE IMBALANCE" ಈ ಹಣಕಾಸಿನ ಅಸಮತೋಲನವನ್ನು ಹೋಗಲಾಡಿಸಲು ಸಂವಿಧಾನ ವಿಧಿ 243 ಐ ಮತ್ತು 243ವೈ ಪ್ರಕಾರ ರಾಜ್ಯ ಮಟ್ಟದಲ್ಲಿ ರಾಜ್ಯ ಹಣಕಾಸು ಆಯೋಗಳನ್ನು ಸ್ಥಾಪಿಸಿ ಕೊಂಡಿದೆ ಹೀಗೆ ಲಂಬ ಹಣಕಾಸಿನ ಅಸಮತೋಲನ ಮತ್ತು ಸಮತಟ್ಟು ಹಣಕಾಸಿನ ಅಸಮತೋಲನ ನಗರ ಸ್ಥಳೀಯ ಸಂಸ್ಥೆಗಳು ಹಣಕಾಸಿನ ಕೊರತೆಯನ್ನು ಅನುಭವಿಸುವಂತೆ ಮಾಡುತ್ತವೆ ಈ ಕೊರತೆಯನ್ನು ಹೊಗಲಾಡಿಸಲು ನಗರ ಸ್ಥಳೀಯ ಸಂಸ್ಥೆಗಳು ರಾಜ್ಯ ಸರ್ಕಾರಗಳಿಂದ ಅನುಮತಿಯನ್ನು ಪಡೆಯಬೇಕು. ಅಲ್ಲದೆ ನಗರ ಸ್ಥಳೀಯ ಸಂಸ್ಥೆಗಳು ತಮ್ಮದೆ ಆದಾಯ ಮತ್ತು ಒಟ್ಟು ಖರ್ಚಿನ ನಡುವೆ ವ್ಯತ್ಯಾಸಗಳಿದ್ದು "ಹಣಕಾಸಿನ ಅಂತರ" ಎಂದು ಕರೆಯಲ್ಪಡುವ ಸಮಸ್ಯೆಯು ಉದ್ಭವಗೊಂಡು ಇದರಿಂದ ಸಂಪನ್ಮೂಲಗಳ ಕೊರತೆಉಂಟಾಗಿ ನಗರ ಸ್ಥಳೀಯ ಸಂಸ್ಥೆಗಳು ನೀಡುತ್ತಿರುವ ಮೂಲಭೂತ ಸೇವೆಗಳನ್ನು ಅಸಮರ್ಪಕಗೊಳಿಸಿವೆ ಅಲ್ಲದೇ ನಗರೀಕರಣ ಮತ್ತು ಜನಸಂಖ್ಯೆ ವೇಗವಾಗಿ ಬೆಳೆಯುತ್ತಿರುವುದು ಇವುಗಳಿಗೆ ಮಾರಕವಾಗಿದೆ ಇಂತಹ ಸಂದರ್ಭದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಇರುವ ಮಾರ್ಗಗಳೆಂದರೆ ಹಣಕಾಸು ಸಂಸ್ಥೆ ಮತ್ತು ಮಾರುಕಟ್ಟೆಯಿಂದ ಸಾಲವನ್ನು ಪಡೆಯುವುದು ಆದರೆ ಇದಕ್ಕೆ ರಾಜ್ಯ ಸರ್ಕಾರಗಳ ಮಾನ್ಯತೆ ದೊರೆಯಬೇಕು ಇಂತಹ ಸಂದರ್ಭದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡುವ ಅನುದಾನವು ಅಗತ್ಯತೆಯನ್ನು ಒಳಗೊಂಡಿರಬೇಕು. ಇದಕ್ಕೆ ವ್ಯತಿರಿಕ್ತ ಎಂಬಂತೆ ಕೇರಳ ರಾಜ್ಯ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಅನುದಾನವನ್ನು ನೀಡಲು ಅಲ್ಲಿನ ರಾಜ್ಯ ಸರ್ಕಾರವೇ ಸಂಪೂರ್ಣವಾದ ಜವಾಬ್ದಾರಿಯನ್ನು ಹೊತ್ತುಕೊಂಡಿವೆ.

**ಕೇಂದ್ರ ಹಣಕಾಸು ಆಯೋಗ :** ಕೇಂದ್ರದಿಂದ ರಾಜ್ಯಗಳಿಗೆ ಹಣಕಾಸು ಅನುದಾನವನ್ನು ನೀಡಲು ಕೇಂದ್ರ ಹಣಕಾಸು ಆಯೋಗವನ್ನು ಸ್ಥಾಪಿಸಲಾಗಿದೆ ಕೇಂದ್ರ ಹಣಕಾಸು ಆಯೋಗವು ರಾಜ್ಯಗಳಿಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ವಿಷಯದಲ್ಲಿ ತೀವ್ರ ಬದಲಾವಣೆಯನ್ನು ತರಲು ಅನುಕೂಲಕಾರಿಯಾಗಿದೆ. ಸಂವಿಧಾನ ವಿಧಿ 280ರಲ್ಲಿ ಭಾರತದ ಸಂವಿಧಾನವು ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರ ಹಣಕಾಸು ಆಯೋಗದ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿದ್ದು ಕೇಂದ್ರ ಹಣಕಾಸು ಆಯೋಗವು "ಸಂವಿಧಾನಾತ್ಮಕ ಸಂಸ್ಥೆ" ಮತ್ತು "ಅರೆ ನ್ಯಾಯಾಂಗ ಸಂಸ್ಥೆ" ಎಂದು ಕರೆಯಲ್ಪಡುವ ಕೇಂದ್ರ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥೆಗಳಿಗೆ ಹಣದ ಅನುದಾನವನ್ನು ಸಂವಿಧಾನದ ವಿಧಿ 266(1)ರ ಪ್ರಕಾರ "CONSULATED FUND" "ಸಂಚಿತ ನಿಧಿ"ಯಿಂದ ಪಡೆಯುತ್ತದೆ ಈ ಸಂಚಿತ ನಿಧಿಯು ಕೇಂದ್ರ ಸರ್ಕಾರ ಸಂಗ್ರಹಿಸಿದ ಎಲ್ಲಾ ತೆರಿಗೆಯ ಹಣವನ್ನು ಹೊಂದಿರುವ ನಿಧಿಯಾಗಿರುತ್ತದೆ. ಸಂವಿಧಾನಾತ್ಮಕವಾಗಿ ಕೇಂದ್ರ ಹಣಕಾಸು ಆಯೋಗದಲ್ಲಿ ಒಬ್ಬ ಅಧ್ಯಕ್ಷ ನಾಲ್ಕು ಜನ ಸದಸ್ಯರು ರಾಷ್ಟ್ರಪತಿಯವರಿಂದ ನೇಮಕಗೊಂಡು ಐದು ವರ್ಷಗಳ ಅವಧಿಗೆ ಆಯ್ಕೆಯಾಗುತ್ತಾರೆ ಹೀಗೆ ರಚನೆಯಾದ ಕೇಂದ್ರ ಹಣಕಾಸು ಆಯೋಗವು ಸಂವಿಧಾನಾತ್ಮಕ ನಿಭಂದನೆಗೆ ಒಳಪಟ್ಟಿದ್ದು ನಗರ ಸ್ಥಳೀಯ ಸಂಸ್ಥೆಗಳಿಗೆ ಪರಿಣಾಮಕಾರಿ ಹಣಕಾಸು ಮತ್ತು ಅಂತರ್ ವರ್ಗಾವಣೆಯಲ್ಲಿ ಬಹಳ ಗಂಭೀರವಾದ ಸಮಸ್ಯೆಯನ್ನು ಎದುರಿಸುತ್ತಿದ್ದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712


ಹಣಕಾಸಿನ ಸ್ವಾಯುತತೆಯ ಬಗ್ಗೆ ವೈಜ್ಞಾನಿಕವಾಗಿ ಪರಿಶೀಲಿಸಲು ಆಯೋಗಕ್ಕೆ ಸಾಕಷ್ಟು ದತ್ತಾಂಶಗಳ ಕೊರತೆ ಸಂಶೋಧನಾ ಬೆಂಬಲದ ಕೊರತೆ ರಾಜ್ಯಗಳಿಗೆ ಅನುದಾನ ನೀಡುವಾಗ ಲಂಬ ಅಸಮತೋಲನವನ್ನು ಅನುಭವಿಸುತ್ತವೆ ಎಂದು ಅನೇಕ ಚಿಂತಕರ ಅಭಿಪ್ರಾಯವಾಗಿದೆ.ಕೇಂದ್ರ ರಾಜ್ಯಗಳ ನಡುವೆ ಹಣಕಾಸು ಹಂಚಿಕೆ ಮಾಡಲು ಸಾಧ್ಯವಿರುವ ಅಂಶವೆಂದರೆ "ನಿವ್ವಳ ತೆರಿಗೆ ಸ್ವೀಕೃತಿಯ ಭಾಗ" ಸಂವಿಧಾನದ 268 ಮತ್ತು 269ನೇಯ ಅನುಚ್ಛೇದದಲ್ಲಿರುವ ತೆರಿಗೆಗಳು ಮತ್ತು ಸುಂಕಗಳು 270ನೇ ಅನುಚ್ಛೇದದಲ್ಲಿ ಅಸ್ತಿತ್ವದಲ್ಲಿರುವ ತೆರಿಗೆ ಮತ್ತು ಸುಂಕಗಳಿಗೆ ಸಂಬಂಧಿಸಿದ ಹಾಗೇ ನಿರ್ದಿಷ್ಟ ಉಪಕರಗಳನ್ನು ಹೊರತುಪಡಿಸಿ ಸಂವಿಧಾನದ ಅನುಚ್ಛೇದ 270ರ ಅನ್ವಯ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣಕಾಸಿನ ಹಂಚಿಕೆಯನ್ನು ಮಾಡಬಹುದು ಹೀಗೆ ಕೇಂದ್ರದಿಂದ ರಾಜ್ಯಗಳಿಗೆ ಅನುದಾನವನ್ನು ನೀಡುವಾಗ ಭಾರತದ ಎಲ್ಲಾ ರಾಜ್ಯಗಳನ್ನು ನ್ಯಾಯ ಸಮ್ಮತವಾಗಿ ನೋಡಿಕೊಳ್ಳಬೇಕು ಎಂಬುದು ಎಲ್ಲಾ ಕೇಂದ್ರ ಹಣಕಾಸು ಆಯೋಗಗಳ ಆಧಾರವಾಗಿದೆ 14ನೇ ಹಣಕಾಸು ಆಯೋಗವು ವೈ. ವಿ. ರೆಡ್ಡಿ ಅಧ್ಯಕ್ಷತೆಯಲ್ಲಿ 2015 ರಿಂದ 2020ರ ವರೆಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುವ ಕೆಲವು ಸೂಚಿಗಳನ್ನು ಶಿಫಾರಸ್ಸು ಮಾಡಿ ವರದಿಯನ್ನು ನೀಡಿತು ನಗರ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆ ರಾಜ್ಯಸ್ವದ ಹಂಚಿಕೆ, ಸಹಾಯ ಧನ ಮತ್ತು ವಿಪತ್ತು ಪರಿಹಾರವನ್ನು ಒಳಗೊಂಡ 121 ಅಂಶಗಳನ್ನೊಳಗೊಂಡಂತೆ ವರದಿಯನ್ನು ಮಾಡಿದ್ದು ತೆರಿಗೆಯ ಹಂಚಿಕೆಗಾಗಿ ಕೆಲವು ಸೂಚಿಗಳನ್ನು ಶೇಕಡವಾರು ಪ್ರಮಾಣವನ್ನು ಆಧಾರಿಸಿ ನೀಡಿದ್ದು ಈ ಮುಂದಿನ ಪಟ್ಟಿಯಲ್ಲಿ ನೋಡಬಹುದು

**ತೆರಿಗೆ ಹಂಚಿಕೆಗೆ ಹದಿನಾಲ್ಕನೇ ಹಣಕಾಸು ಆಯೋಗವು ಅನುಸರಿಸಿದ ಸೂಚಿಗಳು ಮತ್ತು ಆಧ್ಯಾತಾ ತೂಕಗಳು**

| ಸೂಚಿಗಳು | ಆಧ್ಯಾತಾ ತೂಕ |
|---|---|
| ಜನಸಂಖ್ಯೆ (1971) | 17.5% |
| ಜನಸಂಖ್ಯಾ ಬದಲಾವಣೆಗಳು | 10.00% |
| ವರಮಾನದ ಅಂತರ | 50.00% |
| ಭೌಗೋಳಿಕ ಪ್ರದೇಶ | 15.00% |
| ಅರಣ್ಯ ಪ್ರದೇಶ ವಿಸ್ತೀರ್ಣ | 7.05% |
| ಒಟ್ಟು | 100% |

ಮೂಲ : ಕರ್ನಾಟಕ ರಾಜ್ಯ ನಾಲ್ಕನೇ ಹಣಕಾಸು ಆಯೋಗ ವರದಿ ಮೇ–2018

**ಹದಿನಾಲ್ಕನೇ ಹಣಕಾಸು ಅಯೋಗದ ಆಧ್ಯಾತಾ ತೂಕ ಸೂಚಿ**




**ರಾಜ್ಯ ಹಣಕಾಸು ಆಯೋಗ :** ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಅಸಮತೋಲನವನ್ನು ಹೋಗಲಾಡಿಸಲು ಸಮರ್ಪಕವಾದ ಹಣಕಾಸಿನ ನಿರ್ವಹಣೆಗೆ ಸಂಪನ್ಮೂಲಗಳನ್ನು ಹೊಂದಾಣಿಕೆ ಮಾಡಲು ರಾಜ್ಯ ಮಟ್ಟದಲ್ಲಿ ರಾಜ್ಯ ಹಣಕಾಸು ಆಯೋಗಗಳನ್ನು ರಚಿಸಲಾಗಿದೆ. ರಾಜ್ಯ ಹಣಕಾಸು ಆಯೋಗಗಳು ನಿಗಧಿತ ಸಮಯಕ್ಕೆ ರಚನೆಗೊಂಡು ನಗರ ಸ್ಥಳೀಯ ಸಂಸ್ಥೆಗಳಿಗೆ ದಕ್ಷ ಹಣಕಾಸಿನ ಅನುದಾನ ಮತ್ತು ಹಣಕಾಸಿನ ಸಮಸ್ಯೆಗಳನ್ನು ಬಗೆಹರಿಸಲು ಸಹಕಾರಿಯಾಗಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ಸಂಪನ್ಮೂಲಗಳನ್ನು ವಿತರಿಸಲು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಹಣಕಾಸು ಒದಗಿಸುವ ಸಲುವಾಗಿ ಹಣಕಾಸು ಆಯೋಗವನ್ನು ರಚಿಸಿಕೊಳ್ಳಲಾಗಿದೆ. ಈ ಹಣಕಾಸು ಆಯೋಗವು ಈ ಕೆಳಕಂಡ ಪ್ರಮುಖ ಎರಡು ಭಾಗಗಳನ್ನು ಒಳಗೊಂಡಿದೆ. ಕರ್ನಾಟಕ ರಾಜ್ಯದಲ್ಲಿ ಅಸ್ಥಿತ್ವಕ್ಕೆ ಬಂದ ಮೂರು ಹಣಕಾಸು ಆಯೋಗಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಅನೇಕ ಆಧ್ಯಾತಾ ತೂಕ ಸೂಚಿಯನ್ನುಅನುದಾನಕ್ಕೆ ಬಳಸಿವೆ. ಮೂರು ರಾಜ್ಯ ಹಣಕಾಸು ಆಯೋಗಗಳು ಅನುದಾನಕ್ಕೆ ಬಳಸಿದ ಸೂಚಿಗಳು ಮತ್ತು ಆಧ್ಯಾತಾ ತೂಕವನ್ನು ಪರಿಶೀಲಿಸಿದಾಗ ತಿಳಿದುಬರುವ ಗಮನಾರ್ಹ ಸಂಗತಿಗಳೇಂದರೆ ಹಣಕಾಸು ಆಯೋಗಗಳು ಅನುದಾನಕ್ಕೆ ಜನಸಂಖ್ಯೆ ಮತ್ತು ಭೌಗೋಳಿಕ ಪ್ರದೇಶವನ್ನು ಸಾಮಾನ್ಯ ಸೂಚಿಗಳಾಗಿ ಬಳಸಿಕೊಂಡಿವೆ ಅಲ್ಲದೆ ಇತರೆ ಸೂಚಿಗಳಾದ ಅನಕ್ಷರಸ್ಥರ ಸಂಖ್ಯೆ, ಆಸ್ಪತ್ರೆ ಹಾಸಿಗೆಗಳ ಸಂಖ್ಯೆ ಇವುಗಳನ್ನು ಕೂಡ ಸಾಮಾನ್ಯ ಸೂಚಿಗಳಾಗಿ ಬಳಸಿಕೊಂಡಿದ್ದು ಈ ಸೂಚಿಗಳ ಉದ್ದೇಶವೆಂದರೆ ಸಂಪನ್ಮೂಲಗಳ ಕೊರತೆಯನ್ನು ಹೊಂದಿರುವ ನಗರಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ನೀಡುವುದು ಮತ್ತು ಹಣಕಾಸು ಆಯೋಗಗಳ ಸೂಚಿಯ ಅನ್ವಯ ಅನುದಾನವನ್ನು ಹೆಚ್ಚಿಸುವುದು ಹೀಗೆ ಜನಸಾಂದ್ರತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಂಡ ಇನ್ನು ಮುಂತಾದ ಸೂಚಿಗಳನ್ನು ಹಣಕಾಸು ಆಯೋಗಗಳು ಅಭಿವೃದ್ಧಿಗಾಗಿ ಬಳಸಿಕೊಂಡಿವೆ.

**ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮೊದಲನೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸು :** ಮೊದಲನೇ ರಾಜ್ಯ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯಸ್ವ ವರ್ಗಾವಣೆಯನ್ನು ಮಾಡುವುದಕ್ಕೆ "ಕೊರತೆ ತುಂಬಿದ ವಿಧಾನ" ಸೂಕ್ತವಲ್ಲ ಎಂದು ಇದಕ್ಕೆ ಬದಲಾಗಿ "ವ್ಯವಹಾರಿಕ ಪ್ರಮಾಣಿಕ ವಿಧಾನ" "ಪ್ರಾಗ್ಮ್ಯಾಟಿಕ್ ನಾರ್ಮೇಟೀವ್ ಅಪ್ರೋಚ್"ಎಂದು ಕರೆಯಲ್ಪಡುವ ಹೊಸ ವಿಧಾನವನ್ನು ಅಳವಡಿಸಿಕೊಂಡು ಮೂಲ ಸೇವೆಗಳಿಗೆ ಈ ವಿಧಾನವು ಅತ್ಯಂತ ಪ್ರಮುಖ್ಯತೆಯನ್ನು ನೀಡುವುದರ ಮೂಲಕ "ಯಾವುದೇ ವ್ಯಕ್ತಿ ಕರ್ನಾಟಕದ ಯಾವುದೇ ಭಾಗದಲ್ಲಿ ನೆಲೆಸಿದ್ದರು ಅವರಿಗೆ ಕನಿಷ್ಟ ಮಟ್ಟದ ನಾಗರೀಕ ಸೇವೆಗಳು ದೊರೆಯಬೇಕು" (ಮೊದಲನೇ ಹಣಕಾಸು ಆಯೋಗದ ವರದಿ) ಎಂಬ ಧ್ಯೇಯವನ್ನು ಒಳಗೊಳ್ಳುವುದರ ಮೂಲಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 5 ಸೂಚಿಗಳನ್ನು ಆಧರಿಸಿ ಅನುದಾನವನ್ನು ನೀಡಿತು.


**ನಗರ ಸ್ಥಳೀಯ ಸಂಸ್ಥೆಗಳು ಮತ್ತು ಎರಡನೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸು :** ಎರಡನೇ ರಾಜ್ಯ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ನಿಧಿಗಳ ಹಂಚಿಕೆಗೆ ಮಾಡಿದ ಪ್ರಮುಖ ಬದಲಾವಣೆ ಎಂದರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸನ್ನು ಹಂಚಲು "NLNORR", "NON LOAN NET OWN RECIPTS" "ಉದ್ಧರೀಯೇತರ ನಿವ್ವಳ ಸ್ವಂತ ಸ್ವೀಕೃತಿ" ಪರಿಕಲ್ಪನೆಯನ್ನು ಜಾರಿಗೊಳಿಸಿತು ಇದಕ್ಕೂ ಮೊದಲು "NLGORR" "NON LOAN GROSS OWN RECIPTS" "ಉದ್ಧರೀಯೇತರ ಒಟ್ಟು ಸ್ವಂತ ರಾಜ್ಯಸ್ವ ಸ್ವೀಕೃತಿ" ಬಳಸುತ್ತಿದ್ದು ಮೊದಲು ಹಣಕಾಸು ಆಯೋಗವು ತನ್ನ ವರದಿಯಲ್ಲಿ ಮೊದಲು "NLGORR" ಸೂತ್ರದ ಅನ್ವಯ 8%ರಷ್ಟು ನಿಧಿಯನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿತ್ತು. ನಂತರ "NLGORR" ಸೂತ್ರಕ್ಕೆ ಬದಲಾಗಿ "NLNORR" ಸೂತ್ರದಲ್ಲಿ 6% ರಿಂದ ಪ್ರಾರಂಭಿಸಿ 2009–10ಕ್ಕೆ 10%ರಷ್ಟು ಅನುದಾನವನ್ನು ನೀಡಬೇಕೆಂದು ತನ್ನ ವರದಿಯನ್ನು ಸಲ್ಲಿಸಿತು.

**ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮೂರನೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸು :** ಮೂರನೇ ರಾಜ್ಯ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಹಾಗೇ ಮೂರನೇ ಹಣಕಾಸು ಆಯೋಗವು ತನ್ನ ವರದಿಯಲ್ಲಿ "NLGORR" ಸೂತ್ರವನ್ನು ಕೈಬಿಟ್ಟಿತು. "NLNORR", "NON LOAN NET OWN RECIPTS" **"**ಉದ್ಧರಿಯೇತರ ನಿವ್ವಳ ಸ್ವಂತ ಸ್ವೀಕೃತಿ**"** ಸೂತ್ರವನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿತು. "NLNORR" ಈ ಸೂತ್ರದ ಅನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಧಿಯನ್ನು 8.5%ಕ್ಕೆ ಏರಿಸಿತು ಮತ್ತು 10%ರಷ್ಟು ಗುರಿಯನ್ನು ತಲುಪುವ ಆಶಯವನ್ನು ವ್ಯಕ್ತಪಡಿಸಿತು. ಹೀಗೇ ರಾಜ್ಯ ಸರ್ಕಾರವು ಎರಡು ಮತ್ತು ಮೂರನೇ ಆಯೋಗಗಳ ವರದಿಗಳನ್ನು ಆಧರಿಸಿ ನಗರ ಸ್ಥಳೀಯ ಸಂಸ್ಥೆಗಳಿಗೆ ಮಾಡುವ ಹಂಚಿಕೆಯನ್ನು "NLNORR" ಸೂತ್ರದ ಅನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ದೊರೆಯುವ ಅನುದಾನದ ಪಾಲಿನಲ್ಲಿ ಎರಡು ಬದಲಾವಣೆಗಳನ್ನು ತರಲಾಯಿತು ಅಂತಹ ಪ್ರಮುಖ ಬದಲಾವಣೆ ಗಳೇಂದರೆ ನಗರದ ವಾಸ್ತವಿಕ ವಸೂಲಾತಿಯ ಮೇಲೆ **"**ಪ್ರವೇಶತೆರಿಗೆ ಅವತರಣ**"** "ENTRY TAXDE VALUATION" ಅನ್ನು ಜಾರಿಗೊಳಿಸಿ ಹಂಚಿಕೆ ಮಾಡಿತು. "OTHER DEVALUATION" ಶೇಕಡವಾರು ಮೊತ್ತವನ್ನು **"**ಇತರೆ ಅವತರಣ**"** ವಿತರಿಸಿ ಬಳಸಲು ಉದ್ದೇಶಿಸಿತು ಇದರ ಅನ್ವಯ "ENTRY TAX DE VALUATION" **"**ಪ್ರವೇಶ ತೆರಿಗೆ ಅವತರಣ**"** ಮೂಲಕ ನೌಕರರ ವೇತನ, ಪಿಂಚಣಿ ಪುರಸಭೆಗಳ ಸಾಲ ಮರುಪಾವತಿ, ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹಧನ, ಕುಡಿಯುವ ನೀರಿನ ಯೋಜನೆಗಳು ಮುಂತಾದ ವಿಷಯಗಳಿಗೆ ರಾಜ್ಯ ಹಣಕಾಸು ಆಯೋಗ ಅನುದಾನ ನೀಡುತ್ತದೆ. **"**ಇತರೆ ಅವತರಣ**"**, "OTHER DEVALUATION" ನಲ್ಲಿ ಬಂಡವಾಳ ಸೃಜನೆಗೆ ಅನುದಾನವನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಉಪಯೋಜನೆ, ಗಿರಿಜನ ಉಪಯೋಜನೆ, ಮುಂತಾದವುಗಳಿಗೆ ಇತರೆ ಅವತರಣದ ಮೂಲಕ ಅನುದಾನವನ್ನು ನೀಡುವ ಪದ್ಧತಿಯನ್ನು ಅಳವಡಿಸಿಕೊಂಡಿದೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಹಾಗೇ ಹಣಕಾಸು ಆಯೋಗಗಳ ವರದಿಯ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಿಗೆ ಎರಡು ಭಾಗಗಳನ್ನಾಧರಿಸಿ ಅನುದಾನವನ್ನು ಒದಗಿಸುತ್ತವೆ. ಅವುಗಳೆಂದರೆ. ಪ್ರವೇಶ ತೆರಿಗೆ ಅವತರಣ "ENTRY TAXDE VALUATION" ಭಾಗದ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳ ನೌಕರರ ವೇತನ, ಪಿಂಚಣಿ, ಪರಸಭೆಗಳ ಸಾಲ ಮರುಪಾವತಿ, ನಗರ ಸ್ಥಳೀಯ ಸಂಸ್ಥೆಗಳಿಗೆ ಪೋತ್ಸಾಹಧನ, ಕುಡಿಯುವ ನೀರಿನ ಯೋಜನೆಗಳು ಮುಂತಾದ ವಿಷಯಗಳಿಗೆ ರಾಜ್ಯ ಹಣಕಾಸು ಆಯೋಗವು ಪ್ರವೇಶ ತೆರಿಗೆ ಅವತರಣದ ಭಾಗದ ಮೂಲಕ ಅನುದಾನವನ್ನು ನೀಡುತ್ತದೆ. ಇತರೆ ಅವತರಣ "OTHER DEVALUATION" ಭಾಗದ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಭಿವೃದ್ಧಿಯ ಅವಶ್ಯಕತೆಗಳಿಗಾಗಿ **"**ಮುಕ್ತನಿಧಿ**"**ಯ ಮೂಲಕ ಅನುದಾನ ಪಡೆಯುತ್ತವೆ. ಹೀಗೆ ಮುಕ್ತ ನಿಧಿಯನ್ನು ಮೂರನೇ ಹಣಕಾಸು ಆಯೋಗದ "NLNORR" ಸೂತ್ರದ ಅನ್ವಯ ನಗರಾಭಿವೃದ್ಧಿ ಹಣಕಾಸಿಗೆ ನಗರ ಸ್ಥಳೀಯ ಸಂಪನ್ಮೂಲಗಳ ಸ್ವಂತ ಆದಾಯ ತೆರಿಗೆ ಮತ್ತು ತೆರಿಗೆಯೇತರ ಅನುದಾನದ ಜೊತೆಗೆ ಸರ್ಕಾರದ ಬಾಹ್ಯ ಅನುದಾನ ಹಣಕಾಸಿನ ಮೂಲವನ್ನು ಅವಲಂಬಿಸಿವೆ. ಅವುಗಳೆಂದರೆ – ಪೌರಸಭೆ ಆಸ್ತಿ ಕಾರ್ಯಾಚರಣೆ, ಮೂಲ ಸೌಕರ್ಯಅಭಿವೃದ್ಧಿಯ ಅವಶ್ಯಕತೆಗಳಿಗೆ ಹಣಕಾಸನ್ನು ಮುಖ್ಯವಾಗಿ ಪಡೆಯುತ್ತವೆ.

**ಮೂರನೇ ಹಣಕಾಸು ಅಯೋಗದ ಆಧ್ಯಾತಾ ತೂಕ ಸೂಚಿ**




## ವರದಿಗಳು


1. 74ನೇ ತಿದ್ದುಪಡಿಯ ಮುಖ್ಯಾಂಶಗಳ ವರದಿ, ಭಾರತ ಸರ್ಕಾರ–1992
2. ಮೊದಲನೇ ರಾಜ್ಯ ಹಣಕಾಸು ಆಯೋಗ ವರದಿ, ಕರ್ನಾಟಕ ಸರ್ಕಾರ–1996
3. ಡಾ. ಡಿ.ಎಂ. ನಂಜುಂಡಪ್ಪ ವರದಿ 2002
4. ಎರಡನೇ ರಾಜ್ಯ ಹಣಕಾಸು ಆಯೋಗದ ವರದಿ, ಕರ್ನಾಟಕ ಸರ್ಕಾರ–ಡಿಸೆಂಬರ್ 2002
5. ಮೂರನೇ ರಾಜ್ಯ ಹಣಕಾಸು ಆಯೋಗದ ವರದಿ, ಕರ್ನಾಟಕ ಸರ್ಕಾರ– ಮೇ 2008
6. ಹದಿಮೂರನೇ ಹಣಕಾಸು ಆಯೋಗ ವರದಿ, ಭಾರತ ಸರ್ಕಾರ–ಡಿಸೆಂಬರ್ – 2009
7. ಹದಿನಾಲ್ಕನೇ ಹಣಕಾಸು ಆಯೋಗ ವರದಿ, ಭಾರತ ಸರ್ಕಾರ–2016
8. ನಾಲ್ಕನೇ ರಾಜ್ಯ ಹಣಕಾಸು ಆಯೋಗದ ವರದಿ, ಕರ್ನಾಟಕ ಸರ್ಕಾರ–ಮೇ 2018
9. ನಗರಾಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರ ವಾರ್ಷಿಕ ವರದಿ – 2017–18
10. ನಗರಾಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರ ವಾರ್ಷಿಕ ವರದಿ – 2018–19
11. ಆರ್ಥಿಕ ಮತ್ತು ಸಾಂಖಿಕ ನಿರ್ದೇಶನಾಲಯ ಕರ್ನಾಟಕ ಸರ್ಕಾರ ಆರ್ಥಿಕ ಸಮೀಕ್ಷೆ– 2018–19


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಆಧುನಿಕ ಯುಗದಲ್ಲಿ ಡಿಜಿಟಲ್ ಗ್ರಂಥಾಲಯಗಳ ವೈಶಿಷ್ಟತೆಗಳು : ಒಂದು ವಿಶ್ಲೇಷಣೆ

✍ **ಶಶಿಕಾಂತ ಕ. ಬಾಗೇವಾಡಿ,** ಬಂಗೂರನಗರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ದಾಂಡೇಲಿ.

## ಪೀಠಿಕೆ

ಗ್ರಂಥಾಲಯವು ಒಂದು ಸಾಮಾಜಿಕ, ಶೈಕ್ಷಣಿಕ ಸಂಸ್ಥೆಯಾಗಿದೆ. ಗ್ರಂಥಾಲಯವು ಪುಸ್ತಕ, ಸಿಬ್ಬಂದಿ ಮತ್ತು ಓದುಗರ ತ್ರಿವೇಣಿ ಸಂಗಮವಾಗಿರುತ್ತದೆ. ಗ್ರಂಥಾಲಯ ಶಿಕ್ಷಣ ಸಂಸ್ಥೆಯ ಪ್ರಮುಖ ಆಗರವಾಗಿರುತ್ತದೆ. ಗ್ರಂಥಾಲಯವು ಓದುಗರ ಜ್ಞಾನಾರ್ಥಿಗಳ ಜ್ಞಾನಕ್ಕೆ ಸಂದಿಸುವ ಮೂಲಕ ಓದುಗರ ಬೌದ್ಧಿಕ ವಿಕಾಸಕ್ಕೆ ಸಹಕಾರಿಯಾಗಿರುತ್ತದೆ. ಓದುಗರ ಮೂಲಕ ಶೈಕ್ಷಣಿಕ ಸಾಂಸ್ಕೃತಿಕ ಅವಶ್ಯಕ ಕಥೆಗಳನ್ನ ಪೂರೈಸುವ ಕೇಂದ್ರವಾಗಿರುತ್ತದೆ. ಗ್ರಂಥಾಲಯಗಳು ಲಾಭವಲ್ಲದ ಸಂಸ್ಥೆಯಾಗಿರುತ್ತದೆ. ಪ್ರಾಚೀನ ಕಾಲದ ವಿಜ್ಞಾನಿಗಳಾದಂತಹ ಅರಿಸ್ಟಾಟಲ್, ಪ್ಲೇಟೋ ಮುಂತಾದವರು ಸ್ವಂತ ಗ್ರಂಥಾಲಯಗಳನ್ನು ಹೊಂದಿದ್ದರು. ಗ್ರಂಥಾಲಯಗಳೆಂದರೆ ಗ್ರಂಥಗಳನ್ನು ಸಂಗ್ರಹಿಸುವ ಸ್ಥಳ ಎಂದು ಕರೆಯಲಾಗುತ್ತದೆ. ಇದನ್ನೆ ಗ್ರಂಥ ಭಂಡಾರ, ಪುಸ್ತಕ ಭಂಡಾರ, ಶೇಖರಣೆಯ ಸ್ಥಳ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಗ್ರಂಥಾಲಯವನ್ನು ಆಂಗ್ಲಭಾಷೆಯಲ್ಲಿ ಲೈಬ್ರರಿ ಎಂದು ಕರೆಯಲಾಗುತ್ತದೆ. ಗ್ರಂಥಾಲಯದಲ್ಲಿ ಓದುಗರ ಅಭಿರುಚಿಗೆ ತಕ್ಕಂತೆ ಗ್ರಂಥಗಳನ್ನು ಸಂಗ್ರಹಿಸಿ, ವಿಷಯಾನುಸಾರವಾಗಿ ಹೊಂದಿಸುವುದು ಗ್ರಂಥಾಲಯವಾಗಿರುತ್ತದೆ.

ಗ್ರಂಥಾಲಯಗಳು ಶಿಕ್ಷಣ ನೀಡುವ ಸಂಸ್ಕೃತಿಯನ್ನು ಬಿಂಬಿಸುವ ಮನೋರಂಜನೆಯನ್ನು ಒದಗಿಸುವ ಕೇಂದ್ರವಾಗಿದೆ. ಗ್ರಂಥಾಲಯವು ಪುಸ್ತಕಗಳು ನಿಯತಕಾಲಿಕೆಗಳು ವಿಶ್ವಕೋಶಗಳು, ಪದಕೋಶಗಳು, ನಿಘಂಟುಗಳು, ಡೈರಕ್ಟರಿಗಳು, ಸಿಡಿ, ಗೆಜೆಟಿಯರ್ ವಾರ್ಷಿಕ ವರದಿಗಳು, ಕೈಪಿಡಿಗಳು ಮುಂತಾದವುಗಳ ಬೃಹತ್ ಸಂಗ್ರಹವನ್ನು ಹೊಂದಿರುತ್ತದೆ.

## ಡಿಜಿಟಲ್ ಗ್ರಂಥಾಲಯಗಳು

21ನೇ ಶತಮಾನದ ಆಧುನಿಕ ಯುಗದಲ್ಲಿ ಮಾನವ ಜನಾಂಗಕ್ಕೆ ಅತ್ಯಂತ ಅಮೂಲ್ಯವಾದ ಆಸ್ತಿಯೆಂದರೆ ಮಾಹಿತಿ ಆಂಗ್ಲ ಭಾಷೆಯಲ್ಲಿ ಇನ್‌ಫಾರಮೇಶನ್ ಪ್ರತಿಯೊಂದು ವಿಷಯಗಳ ಶೋಧನೆಯು ಅಂರ್ತಜಾಲದ ಮೇಲೆ ಅವಲಂಬಿತವಾಗಿರುತ್ತದೆ. ಮಾಹಿತಿ ಸಂವಹನ ತಂತ್ರಜ್ಞಾನದಿಂದ ಮನುಕುಲದ ದೈನಂದಿನ ಚಟುವಟಿಕೆಗಳು ಪೂರಕವಾಗಿ ಅನೇಕ ಸಲಕರಣೆಗಳು ವೈಜ್ಞಾನಿಕವಾಗಿ ಅನುಷ್ಠಾನಗೊಂಡಿದೆ. ಇಂದಿನ ವಿಜ್ಞಾನ ಮತ್ತು ವಿವಿಧ ತಂತ್ರಜ್ಞಾನ ಬೆಳವಣಿಗೆಯಿಂದ ಗ್ರಂಥಾಲಯಗಳು ತಮ್ಮ ಕಾರ್ಯ ಸ್ವರೂಪವನ್ನು ಬದಲಾಯಿಸಿ ಡಿಜಿಟಲ್ ಗ್ರಂಥಾಲಯಗಳಾಗಿ ಪರಿವರ್ತನೆ ಹೊಂದಿವೆ. ಇತ್ತಿಚೀನ ಗಣಕಯಂತ್ರದ ಅವಿಷ್ಕಾರದ ಫಲವಾಗಿ ಮಾಹಿತಿಯ ಸ್ವರೂಪ ಮತ್ತು ಗ್ರಂಥಗಳ ಸ್ವರೂಪ ಸಂಪೂರ್ಣವಾಗಿ ಬದಲಾಗಿರುತ್ತದೆ. ಮಾಹಿತಿ ತಂತ್ರಜ್ಞಾನದ ಪರಿಣಾಮದಿಂದ ಗ್ರಂಥಾಲಯವು ಸಂಪೂರ್ಣವಾದ ಮಾಹಿತಿಯು ಈ–ಮಯವಾಗಿರುತ್ತದೆ. ಈ ಮಯದಿಂದ ಸಾಂಪ್ರದಾಯಿಕ ಗ್ರಂಥಾಲಯಗಳು ಗಣಕೀಕೃತಗಳೆಂದು ಈ ಗ್ರಂಥಾಲಯ ಡಿಜಿಟಲ್, ಗ್ರಂಥಾಲಯ ಕಾಲ್ಪನಿಕ (Virtul) ಗ್ರಂಥಾಲಯಗಳಾಗಿ ಬದಲಾವಣೆ ಹೊಂದಿರುತ್ತದೆ. ಓದುಗಾರರಿಗೆ ಅತ್ಯಂತ ಕ್ಷಿಪ್ರವಾಗಿ ಮಾಹಿತಿಯನ್ನು ಒದಗಿಸುತ್ತವೆ. ಬಳಕೆದಾರ ಅವಶ್ಯಕತೆಗನು ಗುಣವಾಗಿ ಮತ್ತು ಅಭಿರುಚಿಗಳ ತಕ್ಕಂತೆ ಗ್ರಂಥಾಲಯವನ್ನು ಸ್ರರೂಪ ಮತ್ತು ರೂಪಗಳು ಬದಲಾಗಿದೆ ಎಂದು ಹೇಳಬಹುದು.

ಡಿಜಿಟಲ್ ಗ್ರಂಥಾಲಯಗಳು ಎಂದರೆ ಗ್ರಂಥಾಲಯವನ್ನು ಒಳಗೊಂಡಂತೆ ಗ್ರಂಥಾಲಯದಲ್ಲಿನ ಪುಸ್ತಕಗಳು ನಿಯತಕಾಲಿಕೆಗಳು ಮುಂತಾದವುಗಳು ಮಾಹಿತಿಯ ವಿದ್ಯುನ್ಮಾನ ರೂಪದಲ್ಲಿರುವುದರಿಂದ ಓದುಗರ ಅವಶ್ಯಕತೆ ಅನುಸಾರವಾಗಿ ಅವರಿಗೆ ಬೇಕಾದ ವೇಳೆಯಲ್ಲಿ ಬೇಕಾದ ರೂಪದಲ್ಲಿ ಮಾಹಿತಿಯು ಸಿಗುತ್ತದೆ. ಡಿಜಿಟಲ್ ಗ್ರಂಥಾಲಯಗಳ ಗಾತ್ರ ಮತ್ತು ವ್ಯಾಪ್ತಿ ಬೇರೆ ಬೇರೆಯಾಗಿರುತ್ತದೆ. ಡಿಜಿಟಲ್ ಗ್ರಂಥಾಲಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಸ್ಥಳಿಯವಾಗಿ, ರಾಷ್ಟ್ರೀಯವಾಗಿ, ಅಂತರಾಷ್ಟ್ರೀಯವಾಗಿ, ಅಥವಾ ರಿಮೋಟ ಸ್ಥಳದಲ್ಲಿ ಇರಿಸ ಬಹುದಾಗಿದೆ.

## ಡಿಜಿಟಲ್ ಗ್ರಂಥಾಲಯಗಳ ಮೂಲ ಉದ್ದೇಶಗಳು

1. ಮಾಹಿತಿಯ ಸಂಗ್ರಹಣೆ ಮತ್ತು ವಿತರಣೆ.
2. ಎಲ್ಲ ವರ್ಗದ ಬಳಕೆದಾರರಿಗೆ ವಿದ್ಯುನ್ಮಾನ ಮಾಹಿತಿಯನ್ನು ಒದಗಿಸುವದು.
3. ಸಂಶೋಧನೆ ಕುರಿತು ತ್ವರಿತವಾಗಿ ಮಾಹಿತಿಯನ್ನು ಒದಗಿಸುವುದು.
4. ಸಂಶೋಧನೆಗಳು ದೇಶಗಳು ಶಿಕ್ಷಣ ಸಂಸ್ಥೆಗಳ ನಡುವೆ ಸಂವಹನ ಬೆಳೆಸುವುದು.
5. ವಿದ್ಯುನ್ಮಾನ ಮಾಹಿತಿಯ ಬಳಕೆಯನ್ನು ಪ್ರೋತ್ಸಾಹಿಸುವುದು.
6. ಎಲ್ಲಾ ಬಳಕೆದಾರರಿಗೆ ಉತ್ತಕೃಷ್ಟವಾದ ಮಾಹಿತಿಯನ್ನು ಕ್ಷಿಪ್ರವಾಗಿ ಒದಗಿಸುವುದು.

## ಡಿಜಿಟಲ್ ಗ್ರಂಥಾಲಯಗಳ ವೈಶಿಷ್ಟತೆಗಳು

- ಸಮಯ ಉಳಿತಾಯ
- ಕಡಿಮೆ ಸ್ಥಳ
- ವಿಶ್ವದ ಯಾವುದೆ ಮೂಲದಿಂದ ವಿದ್ಯುನ್ಮಾನ ಅಂತರ್ಜಾಲದ ಮುಖಾಂತರ ಮಾಹಿತಿಯನ್ನು ವೇಗವಾಗಿ ಪಡೆಯುವುದು.
- ಡಿಜಿಟಲ್ ಗ್ರಂಥಾಲಯವು ಗಣಕಯಂತ್ರ ಆಧಾರಿತ ಸೇವೆ.
- ಡಿಜಿಟಲ್ ಮಾಹಿತಿ ಸಂಗ್ರಹ

## ಡಿಜಿಟಲ್ ಗ್ರಂಥಾಲಯದ ಕಾರ್ಯಗಳು

1. ವಿದ್ಯುನ್ಮಾನ ಮಾಹಿತಿಯ ಸಂಗ್ರಹಣೆ, ಜೋಡಣೆ ಮತ್ತು ನಿರ್ವಹಣೆ ಮಾಡುವುದು.
2. ಲಿಖಿತ ಮತ್ತು ಮುದ್ರಿತ ಗ್ರಂಥಗಳನ್ನು ಡಿಜಿಟಲ್ ಮಾದ್ಯಮದ ಅಡಿಯಲ್ಲಿ ವಿದ್ಯುನ್ಮಾನ ಮಾಹಿತಿಯಾಗಿ ಪರಿವರ್ತಿಸಿ ಓದುಗರಿಗೆ ಒದಗಿಸುವುದು.
3. ಡಿಜಿಟಲ್ ಮಾಹಿತಿಯನ್ನು ಸಂಪನ್ಮೂಲಗಳನ್ನು ಉಪಯೋಗಸಲು ಬೇಕಾದ ಅನುಕೂಲಗಳನ್ನು ಒದಗಿಸುವುದು.
4. ಡಿಜಿಟಲ್ ಮಾಹಿತಿಯನ್ನು ಸಂಪನ್ಮೂಲಗಳನ್ನು ಪಡೆಯಲುಬೇಕಾದ ತಂತ್ರಜ್ಞಾನದ ಅನುಕೂಲಗಳನ್ನು ಒದಗಿಸುವುದು.

## ಡಿಜಿಟಲ್ ಗ್ರಂಥಾಲಯದ ಅನುಕೂಲತೆಗಳು

1. ಡಿಜಿಟಲ್ ಗ್ರಂಥಾಲಯವು ವಿದ್ಯುನ್ಮಾನ ಮಾಹಿತಿಯನ್ನು ಅತ್ಯಂತ ಕ್ಷಿಪ್ರವಾಗಿ ಒದಗಿಸುವುದು.
2. ಯಾವುದೆ ಹೆಚ್ಚಿನ ಅಡೆತಡೆಗಳಿಲ್ಲದೆ ಮಾಹಿತಿಯನ್ನು ಜಾಲತಾಣಗಳಲ್ಲಿ ಸಿಗುವಂತೆ ಮಾಡುತ್ತದೆ.
3. ಡಿಜಿಟಲ್ ಗ್ರಂಥಾಲಯದಲ್ಲಿ ಸುಲಭವಾಗಿ ಮಾಹಿತಿಯನ್ನು ಪಡೆಯಬಹುದು.
4. ಡಿಜಿಟಲ್ ಗ್ರಂಥಾಲಯದಲ್ಲಿ ಮಾಹಿತಿಯನ್ನು ಸುಲಭವಾಗಿ ವಿನಿಮಯ ಮಾಡಬಹುದು.
5. ಡಿಜಿಟಲ್ ಗ್ರಂಥಾಲಯಗಳಿಂದ ಏಕಕಾಲದಲ್ಲಿ ಯಾವುದೆ ಮಾಹಿತಿಯನ್ನು ಸರಳವಾಗಿ ಹುಡುಕಬಹುದು ಮತ್ತು ಹಿಂಪಡೆಯಬಹುದು.

## ಡಿಜಿಟಲ್ ಗ್ರಂಥಾಲಯಗಳ ಅವಶ್ಯಕತೆ

ಇಂದಿನ ಆಧುನಿಕ ಯುಗದಲ್ಲಿ ಡಿಜಿಟಲ್ ಗ್ರಂಥಾಲಯಗಳು ಅವಶ್ಯಕತೆಗಳು

1. ಡಿಜಿಟಲ್ ಗ್ರಂಥಾಲಯುದಲ್ಲಿ ಒಂದೆ ಕಾಲಕ್ಕೆ ಸಾಕಷ್ಟು ಮಾಹಿತಿಯನ್ನು ಬಹಳಷ್ಟು ಬಳಕೆದಾರರಿಗೆ ಒದಗಿಸಬಹುದು. ಸಾಮಾನ್ಯ ಗ್ರಂಥಾಲಯದಲ್ಲಿ ಏಕಕಾಲಕ್ಕೆ ಕಡಿಮೆ ಒದುಗರಿಗೆ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತದೆ.
2. ಡಿಜಿಟಲ್ ಗ್ರಂಥಾಲಯುದಲ್ಲಿ ಯಾವುದೆ ಮಾಹಿತಿಯನ್ನು ಯಾವುದೇ ಸಮಯದಲ್ಲಿ ತಡವಾಡದೆ ಓದುಗರು ಪಡೆಯಬಹುದು.
3. ಡಿಜಿಟಲ್ ಗ್ರಂಥಾಲಯದಿಂದ ಓದುಗರಿಗೆ ಗ್ರಂಥಾಲಕ್ಕೆ ಹೋಗದೆ ಗಣಕಯಂತ್ರ ಅಥವಾ ಮೊಬೈಲನ ಅಂತರ್ಜಾಲ ಸಂಪರ್ಕದಿಂದ ಮಾಹಿತಿಯನ್ನು ಪಡೆಯಬಹುದು.
4. ಡಿಜಿಟಲ್ ಗ್ರಂಥಾಲಯದಲ್ಲಿ ಮಾಹಿತಿಯನ್ನು ದೃಶ್ಯರೂಪದಲ್ಲಿರುವುದರಿಂದ ಎಲ್ಲಾ ವರ್ಗದ ಬಳಕೆದಾರರು ಸುಲಭವಾಗಿ ತಿಳಿದುಕೊಳ್ಳಬಹುದು.
5. ಡಿಜಿಟಲ್ ಗ್ರಂಥಾಲಯಗಳ ಮಾಹಿತಿಯನ್ನು ವಿಶ್ವದ ಯಾವುದೆ ಭಾಗದಿಂದ ಸುಲಭವಾಗಿ ಅಂತರ್ಜಾಲದ ಮುಖಾಂತರ ಮಾಹಿತಿಯನ್ನು ಪಡೆಯಬಹುದಾಗಿದೆ.
6. ಡಿಜಿಟಲ್ ಗ್ರಂಥಾಲಯಗಳಲ್ಲಿ 24 × 7 ಮಾಹಿತಿಯನ್ನು ಒದಗಿಸುತ್ತದೆ.

## ಡಿಜಿಟಲ್ ಗ್ರಂಥಾಲಯದ ಮೂಲ ಪರಿಕರಗಳು

ಡಿಜಿಟ್ ಗ್ರಂಥಾಲಯುದ ಮೂಲ ಪರಿಕರಗಳು ಎರೆಡು ರೀತಿಯಲ್ಲಿ ಇರುತ್ತದೆ. ಮೊದಲನೆಯದು ತಂತ್ರಾಂಶ, ಎರಡನೇಯದು ಯಂತ್ರಾಂಶ.

## ತಂತ್ರಾಂಶದಮೂಲ ಪರಿಕರಗಳು ಮೂಲ ಪರಿಕರಗಳು

- ಆಪರೇಟಿಂಗ್ ಸಿಸ್ಟಮ್ : ಲೀನಿಕ್ಸ ವಿಂಡೋಸ್
- ಅಪ್ಲಿಕೇಷನ್ ತಂತ್ರಾಂಶ : ಒಪನ್ ಆಡಿಸ್,ಎಮ್ ಎಸ್ ಆಫಿಸ್
- ಒ ಸಿ ಆರ್ ತಂತ್ರಾಂಶ : ಟಿಕ್ಸಟ್ ಬ್ರಿಜ್. ಪೈನ್ ರಿಡರ್
- ಪೈಲ್ ಪಾರಮೇಟ್ ಕನವರಟರ್ : ಅಡೋಬೆ ಡಿಸ್ಟಿಲಿಕ್
- ವೆಬ್ ಸರ್ವರ್ ತಂತ್ರಾಂಶ : ಅಪಾಚೆ, ಡಬ್ಲುಎಸ್ ಆಯ್. ಆಯ್. ಎಸ್
- ಆ್ಯಂಟಿವೈರಸ್ ತಂತ್ರಾಂಶ : ನಾರಟನ್,ಅವಿಯಾ, ಡಿಜಿಟಲ್ ಗ್ರಂಥಾಲಯ ತಂತ್ರಾಂಶ : ಡಿಸ್ಪೆಸ್ ಜಿ.ಎಸ್.ಪಿ.ಎಲ್, ಈ ಪ್ರಿಂಟ್, ಇತ್ಯಾದಿ.

## ಯಂತ್ರಾಂಶ ಮೂಲ ಪರಿಕರಗಳು

ಸರ್ವರ್, ನೋಟ್ಸ, ಪ್ರಿಂಟರ್, ಸ್ಕಾನರ್, ಡಿಜಿಟಲ್ ಕ್ಯಾಮರಾ, ವಿಡಿಯೋ ಕ್ಯಾಮರಾ ಮತ್ತು ಆಡಿಯೋ ರೇಕಾರ್ಡಿಂಗ್ ಯಂತ್ರ.

## ಭಾರತದಲ್ಲಿನ ಮುಖ್ಯ ಡಿಜಿಟಲ್ ಗ್ರಂಥಾಲಯಗಳು

1. ನ್ಯಾಶನಲ್ ಡಿಜಿಟಲ್ ಗ್ರಂಥಾಲಯ
2. ಯೂನಿವರ್ಸಲ್ ಡಿಜಿಟಲ್ ಗ್ರಂಥಾಲಯ
3. ಡ್ಯರಕ್ಟರಿ ಆಫ್ ಓಪನ್ ಎಕ್ಸಸ್ ಬುಕ್ಸ
4. ಇನಟರ್‌ನೇಟ್ ಆರ್ಂಕರ್ವ್ಸ
5. ಬ್ರೀಟಿಷ ಕೌನ್ಸಿಲ್ ಆನ್ ಲಾಯಿನ್ ಗ್ರಂಥಾಲಯ
6. ಶೋದಗಂಗಾ ಮುಂತಾದವುಗಳು.

## ಉಪಸಂಹಾರ

ಆಧುನಿಕ ಯುಗದಲ್ಲಿ ನಡೆಯುತ್ತಿರುವ ಪ್ರತಿಯೊಂದು ಕಾರ್ಯಗಳು ಡಿಜಿಟಲ್ ಆಗಿರುತ್ತವೆ. ಮಾಹಿತಿ ಬೆಳವಣಿಗೆ ಎಷ್ಟು ಕ್ಷಿಪ್ರಗತಿಯಲ್ಲಿ ಸಾಗುತ್ತಿದೆಯೋ ಅಷ್ಟೇ ವೇಗದಲ್ಲಿ ಮಾಹಿತಿಯು ಪ್ರಕಟಗೊಳ್ಳುತ್ತದೆ. ವೈಜ್ಞಾನಿಕ ತಂತ್ರಜ್ಞಾನದಿಂದ ವಿಶ್ವದ ಎಲ್ಲ ಬಳಕೆದಾರರು ಸಂಪೂರ್ಣವಾಗಿ ಡಿಜಿಟಲ್ ಮೇಲೆ ಅವಲಂಬಿತರಾಗಿರುತ್ತಾರೆ. ತಂತ್ರಜ್ಞಾನವು ಎಲ್ಲ ವರ್ಗದ ಬಳಕೆದಾರ ಅವಿಭಾಜ್ಯ ಅಂಗವಾಗಿರುತ್ತದೆ. ಗ್ರಂಥಾಲಯದ ಸೇವೆಯನ್ನು ವಿಶ್ವದ ಯಾವುದೆ ಮೂಲೆಯಿಂದ ಮಾಹಿತಿಯನ್ನು ಕ್ಷಣ ಮಾತ್ರದಲ್ಲಿ ಒದಗಿಸುವುದು ಗ್ರಂಥಪಾಲಕನ ಮುಖ್ಯ ಉದ್ದೇಶವಾಗಿರುತ್ತದೆ. ಡಿಜಿಟಲ್ ಗ್ರಂಥಾಲಯವು ದೇಶದ ಪ್ರತಿಯೊಬ್ಬ ನಾಗರಿಕನನ್ನು ಮಾಹಿತಿಯ ಅಕ್ಷರಸ್ತನನ್ನಾಗಿ ಮಾಡುತ್ತದೆ. ಡಿಜಿಟಲ್ ಗ್ರಂಥಾಲಯದಿಂದ ಉದ್ಯಮ, ವಾಣಿಜ್ಯ, ವೈದ್ಯಕೀಯ, ಶಿಕ್ಷಣ ಇತ್ಯಾದಿ ಕ್ಷೇತ್ರಗಳು ಡಿಜಿಟಲ್ ಆಗಿರುತ್ತವೆ. ಡಿಜಿಟಲ್ ಗ್ರಂಥಾಲಯಗಳು ವರ್ತಮಾನ ಭವಿಷ್ಯದಲ್ಲಿ ಉಪಯುಕ್ತ ವಾಗಿರುತ್ತದೆ.

## ಪರಾಮರ್ಶನ ಗ್ರಂಥಗಳು


- **ಬೋರಪೆ ಪೀಟರ್** : ದ ಲೈಬ್ರರಿ ಇನ್ ದ 21ನೇ ಸೆಂಚುರಿ ನ್ಯೂ ಸರ್ವಿಸ್ಸ್ ಪಾರ್ ದ ಇನ್‌ಪಾರಮೇಶನ್ ಏ ಜ 2001. ಪೆ–14–39
- **ಡಾ. ಮಲ್ಲನಾಥ ಕುಂಬಾರ (2018)** : ಸ್ಮಾರ್ಟ ಗ್ರಂಥಾಲಯಗಳು, ಮೈಸೂರು ಸಂವಹನ, ಪುನಂ. 19 ರಿಂದ 24
- **ಡಾ. ನೂ. ಕೊಟ್ರೇಶ ಉತ್ತಂಗಿ** : ಉನ್ನತ ಶಿಕ್ಷಣದ ಗುಣಮಟ್ಟ ಮತ್ತು ಗ್ರಂಥಾಲಯಗಳು ಬೆಂಗಳೂರು ಸ್ನೇಹ ಪ್ರಿಂಟ್ಸ, ಪು.ನಂ. 19
- **ಬೊರಕರ ಫಿ. (2001)** : ಏಲೆಕ್ಟ್ರಾನಿಕ್ಸ ಬುಕ್ಸ ಆಂಡ್ ಲೈಬ್ರರಿಸ್ ಆಫ್ ದಿ ಪ್ಯೂಚರ್ ಏಲೆಕ್ಟ್ರಾನಿಕ್ಸ ಲೈಬ್ರರಿ, ಪು–110
- www.collections/,worlddigitallibrary
- http://www.collections/,worlddigitallibrary
- https://digitallibrary.io.
- https://iitkgp.ac.in


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕೊಡಗಿನ ಜನಪದರ ಸಾಂಸ್ಕೃತಿಕ ಚಹರೆಗಳು

✍ **ಡಾ. ಚಂದ್ರಕಾಂತ್ ಕೆ.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು

ಕೊಡಗು ಕನ್ನಡ ನಾಡಿನ ಬಹು ಚಿಕ್ಕ ಜಿಲ್ಲೆ. ಆದರೆ ಕನ್ನಡ ನಾಡಿನ ಸಂಪತ್ಸಮೃದ್ಧ ಜಿಲ್ಲೆಗಳಲ್ಲೊಂದು. ನಿಸರ್ಗದ ನೆಲೆವೀಡಾದ ಈ ಜಿಲ್ಲೆಯ ಜನರ ಜೀವನ ವರ್ಣರಂಜಿತ, ಕೊಡವರ ನಡೆನುಡಿ ಆಚಾರ ವಿಚಾರಗಳು ವಿಶಿಷ್ಟ ಹಾಗೂ ವಿಭಿನ್ನವಾದುವು. ಕರ್ನಾಟಕ ಸಂಸ್ಕೃತಿಯಲ್ಲಿ ಕೊಡಗಿನ ಸಂಸ್ಕೃತಿಗೆ ಒಂದು ವಿಶೇಷವಾದ ಸ್ಥಾನವಿದೆ. ಅಲ್ಲಿನ ಜಾನಪದವೂ ಕೊಡಗಿನ ಬೆಡಗಿನಂತೆಯೇ, ಪ್ರಕೃತಿಯ ಐಸಿರಿಯಂತೆಯೇ ಉತ್ಕೃಷ್ಟವಾದುದು, ವಿಪುಲವಾದುದು.

ಕೊಡವರ ಭಾಷೆಗೆ ಪ್ರತ್ಯೇಕ ಲಿಪಿಯಿಲ್ಲ. ಆ ಜನಾಂಗದ ಮೂಲದ ಬಗ್ಗೆಯೂ ಯಾವ ವಿಷಯಗಳೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಕ್ರಿ.ಶ.994ರ ಶಾಸನವೊಂದರಲ್ಲಿ ಕೊಡವರ ಪ್ರಸ್ತಾಪ ಬರುತ್ತದೆ. ಆದುದರಿಂದ ಆಗಿನಿಂದಲೂ ಕೊಡವ ಭಾಷೆ ಬಳಕೆಯಲ್ಲಿತ್ತೆಂದು ಹೇಳಬಹುದು. ಈ ಭಾಷೆಯಲ್ಲಿ ಕನ್ನಡದ ಬಹುತೇಕ ಪದಗಳೂ ತಮಿಳು ಮತ್ತು ಮಲೆಯಾಳ ಭಾಷೆಗಳ ಕೆಲವು ಪದಗಳೂ ತುಳು ಭಾಷೆಯ ಪದಗಳೂ ಕಾಣಬರುತ್ತದೆ. ಜೊತೆಗೆ ಶೇಕಡ ಇಪ್ಪತ್ತೈದರಷ್ಟು ಕೊಡವ ಭಾಷೆಯ ಪದಗಳೂ ಇವೆ. ಮಿಶ್ರಭಾಷೆಯಾದ ಕೊಡವರ ಭಾಷೆಗೆ ಕನ್ನಡ ಲಿಪಿಯನ್ನು ಬಳಸಲಾಗುತ್ತದೆ. ಈ ಭಾಷೆಯಲ್ಲಿ ಸಾಹಿತ್ಯ ರಚನೆ ಅಷ್ಟಿಷ್ಟು ಆಗಿದ್ದರೂ ಜನಪದ ಸಾಹಿತ್ಯದ ನಿರ್ಮಾಣವೇ ಹೆಚ್ಚು. ಆದ್ದರಿಂದ ಕೊಡಗಿನ ಸಾಹಿತ್ಯವನ್ನು ಪರಿಗಣಿಸುವಾಗ ಕಂಠಸ್ಥ ಸಂಪ್ರದಾಯದಲ್ಲಿ ಬಂದ ಜನಪದ ಸಾಹಿತ್ಯವೆಂದೇ ವಿಶೇಷ ಸ್ಥಾನವನ್ನು ಕೊಡಬೇಕಾಗುತ್ತದೆ.

ಕೊಡಗಿನ ಜನಪದ ಸಾಹಿತ್ಯದಲ್ಲಿ ಜನಜೀವನದ ವಿವಿಧ ಮುಖಗಳ ಸುಂದರ ಚಿತ್ರಣವಿದೆ. ಮಾನವ ಜೀವನದ ವಿವಿಧಘಟ್ಟಗಳಿಗೆ ಸಂಬಂಧಿಸಿದ ಹಾಡುಗಳು ಕೊಡವರ ಮೂಲವನ್ನು ಕುರಿತ ಪದಗಳು ಕಾವೇರಿಯ ಮಹಾತ್ಮೆ, ಇಕ್ಕೇರಿ ಅರಸು ಮನೆತನವನ್ನು ಕುರಿತ ಹಾಡುಗಳು, ಆಂಗ್ಲೇಯರ ಆಳ್ವಿಕೆಯನ್ನು ಕುರಿತ ಪದಗಳು, ಲಾಲಿಯ ಪದಗಳು, ಹುತ್ತರಿ ಹಾಡುಗಳು, ಕೊಡವ ಮನೆತನದ ಮೂಲಪುರುಷರ ಪದಗಳು, ಮದುವೆ ಹಾಡುಗಳು, ಬೇಸಾಯದ ಹಾಡುಗಳು, ಸ್ಥಳೀಯ ದೇವತೆಗಳನ್ನು ಕುರಿತ ಹಾಡುಗಳು – ಹೀಗೆ ವೈವಿಧ್ಯಮಯ ಹಾಡುಗಳನ್ನು ಇಲ್ಲಿನ ಜಾನಪದ ಪರಂಪರೆಯಲ್ಲಿ ಕಾಣಬಹುದು. 'ಕಚ್ಚಿದುಡಿ' ಎಂಬ ಕಿರಿಯ ಡೋಲನ್ನು ಬಾರಿಸುತ್ತ ಸಾಮೂಹಿಕವಾಗಿ ಗೀತೆಗಳನ್ನು ಹಾಡುವುದು ವಾಡಿಕೆ. ನೃತ್ಯಗಳಲ್ಲೂ ವಿಶಿಷ್ಟ ಗೀತೆಗಳನ್ನು ಬಳಸಲಾಗುತ್ತದೆ. ಸಾಮೂಹಿಕ ನೃತ್ಯಗಳು ಹೆಚ್ಚು ಆಕರ್ಷಕವಾದವು. ಕೊಡವರ ಮೂಲವನ್ನು ಕುರಿತು ಯಾವ ಖಚಿತವಾದ ಅಭಿಪ್ರಾಯಗಳು ಕಾಣಬರದಿದ್ದರೂ, ಕೊಡವರ ಹಾಡೊಂದರಲ್ಲಿ ಅವರು ಪಾಂಡವರ ವಂಶಕ್ಕೆ ಸೇರಿದ ಕ್ಷತ್ರಿಯರೆಂದು ಹೇಳಲಾಗಿದೆ. ಅವರ ದೇಶೀಯ ಉಡುಪು ನಡವಳಿಕೆಗಳು, ಪಾಂಡವರ ಉಡುಪು ಮತ್ತು ನಡವಳಿಕೆಗಳನ್ನು ಹೋಲುತ್ತವೆ ಎಂಬ ವಿಷಯವನ್ನು ಆ ಹಾಡಿನಲ್ಲಿ ಪ್ರಸ್ತಾಪಿಸಲಾಗಿದೆ. ಶಂತನು ಚಕ್ರವರ್ತಿ ಸುಗಂಧಿನಿಗೆ ತನ್ನ ಸಮಸ್ತ ಹಕ್ಕನ್ನೂ ಧಾರೆ ಎರೆದಂತೆ ಕೊಡವರಲ್ಲೂ ಒಕ್ಕಪರಜೆ ಎಂಬ ವಿವಾಹ ಪದ್ಧತಿಯಿದೆ. ಇಲ್ಲಿ ವಿವಾಹವಾದ ಪತ್ನಿಗೆ ಪುರುಷ ತನ್ನ ಎಲ್ಲ ಹಕ್ಕುಗಳನ್ನೂ ಧಾರೆ ಎರೆದುಕೊಡುತ್ತಾನೆ. ಪಾಂಡವರೈವರೂ ಒಬ್ಬಳೇ ಹೆಣ್ಣನ್ನು ಕೂಡಿದಂತೆ, ಕೊಡವರಲ್ಲಿ ಅಣ್ಣ ಮಡಿದರೆ ಅವನ ಪತ್ನಿಯನ್ನು ತಮ್ಮನೂ ತಮ್ಮ ಮಡಿದರೆ ಅವನ ಮಡದಿಯನ್ನು ಅಣ್ಣನೂ ಕೈ ಹಿಡಿಯುವ ಪದ್ಧತಿಯಿದೆ. ಪಾಂಡವರು ಅಜ್ಞಾತವಾಸದ ಸಂದರ್ಭದಲ್ಲಿ ಹೇಗೆ ತಮ್ಮ ಆಯುಧಗಳನ್ನೆಲ್ಲ ಬನ್ನಿಯ ಮರವೊಂದರ ಮೇಲಿಟ್ಟು ಅಜ್ಞಾತವಾಸದ ಅನಂತರ ಅವನ್ನು ಕೆಳಕ್ಕೆ ಇಳಿಸಿ, ಶುದ್ಧಗೊಳಿಸಿ ಧೂಪಾರತಿ ಎತ್ತಿ ಪುಜಿಸಿದಂತೆ ಕೊಡವರಲ್ಲೂ ಕೈಲ್ ಮುಹೂರ್ತ ಹಬ್ಬದ ದಿನ ಅವರೆಗೆ ಅಟ್ಟದ ಮೇಲಿಟ್ಟಿದ್ದ ತಮ್ಮ ಕತ್ತಿ ಕೋವಿ ಮುಂತಾದ ಆಯುಧಗಳನ್ನು ಹೊರತೆಗೆದು, ಶುಚಿಗೊಳಿಸಿ, ಧೂಪಾರತಿ ಎತ್ತಿ ಪೂಜಿಸುತ್ತಾರೆ. ಇಂಥ ಅನೇಕ ಸಂದರ್ಭಗಳನ್ನು ಆ ಹಾಡಿನಲ್ಲಿ ಪ್ರಸ್ತಾಪಿಸಿ ಪಾಂಡವರ ಸಂಬಂಧವನ್ನು ಕಲ್ಪಿಸಲಾಗಿದೆ.

ಕಾವೇರಿ ಕೊಡವರ ಕುಲದೇವತೆ. ಅವಳ ಮೇಲೆ ಕೊಡವರಿಗೆ ಅಪಾರ ಭಕ್ತಿ, ಪ್ರತಿ ವರ್ಷ ತುಲಾ ಸಂಕ್ರಮಣ ಕಾಲದಲ್ಲಿ (ಅಕ್ಟೋಬರ್ 16–17 ರಂದು) ಕೊಡಗಿನಲ್ಲಿ ಕಾವೇರಿ ಜಾತ್ರೆ ವೈಭವದಿಂದ ಜರುಗುತ್ತದೆ. ಕಾವೇರಿ ಮಾತೆಯನ್ನು ಭಕ್ತಿಯಿಂದ ಪೂಜಿಸಿ, ಅವಳ ಮಹಿಮೆಗಳನ್ನು ಕುರಿತು ಹಾಡುತ್ತಾರೆ. ಬ್ರಹ್ಮದೇವನ ಮಾನಸ ಪುತ್ರಿಯಾದ ಲೋಪಾಮುದ್ರೆ, ಕವೇರ ಮುನಿಯ ದತ್ತು ಪುತ್ರಿ ಕಾವೇರಿಯಾಗಿ ಬ್ರಹ್ಮಗಿರಿಯಲ್ಲಿ ಉದಿಸುತ್ತಾಳೆ. ಅಗಸ್ತ್ಯರ ಮಡದಿಯಾಗಿ, ಕೊನೆಗೆ ಬ್ರಹ್ಮಸಂಕಲ್ಪದಂತೆ ಜಲರೂಪವನ್ನು ಧರಿಸಿ ಕಾವೇರಿ ನದಿಯಾಗಿ ಹರಿಯುತ್ತಾಳೆ. ಆ ನೀರಿನಲ್ಲಿ ಮಿಂದ ಕೊಡವ ನಾರಿಯರ ಸೀರೆಯ ನೆರಿಗೆ ಮುಂಭಾಗದಿಂದ ಹಿಂಭಾಗಕ್ಕೆ ಜರುಗುತ್ತದೆ. ಕಾವೇರಿ ಮಾತೆಯ ಆದೇಶದಂತೆ ಅಲ್ಲಿಂದ ಮುಂದೆ ಅದೇ ರೀತಿಯಲ್ಲಿ ತಮ್ಮ ಸೀರೆಗಳನ್ನುಡುವ ಪದ್ಧತಿಯನ್ನು ಕೊಡವ ಸ್ತ್ರೀಯರು ಪಾಲಿಸುತ್ತ ಬಂದರೆಂಬ ಸ್ವಾರಸ್ಯ ವಿಷಯ ಬರುತ್ತದೆ. ಹಾಡಿನ ಕೊನೆಯಲ್ಲಿ ಕಾವೇರಿಯ ಸ್ನಾನ ಎಷ್ಟು ಪವಿತ್ರವಾದುದು ಎಂಬ ಅಂಶವೂ ಬರುತ್ತದೆ.

**ಕಾಲೋರಾಂಡೆಕೋರಮ್ಮ ।**
**ಕನ್ನಿಯಾರ್ ಪೋಕ್ಲೊ ಬ್ರಹ್ಮ ಕುಂಡಿಕೆರೊಳ್ಳಂಜೆ ।**
**ನೀಲಕೊಡಿ ತೀರ್ತ ನೊರೆ ಬಂದುಕ್ಕಿ ಮಲಿವಕ್ಕ ।**
**ಮೈಮುಕ್ಕಿ ಕುಳಿಚೆನೊ ಅಜ್ಜಂಡಜ್ಜ ಕಾಲತ್ ।**
**ಕೆಜ್ಜ ಪಾಪ ತ್ತೋರುಲಾ ।**
**ಪೊದ್ದಶನಿ ನೀಂಗುಲಾ ।**

ಕೊಡಗಿನ ಹುತ್ತರಿ ಕುಣಿತ ಪ್ರಸಿದ್ಧವಾದುದು; ಹುತ್ತರಿಯ ಹಬ್ಬವೂ ಅಷ್ಟೇ ಪ್ರಮುಖವಾದುದು. ಕಾವೇರಿ ಮಾತೆಯ ಕೃಪೆಯಿಂದ ಹುಲುಸಾಗಿ ಬೆಳೆದ ಧಾನ್ಯದೇವತೆಯನ್ನು ಪೂಜಿಸಿ ಕರೆತಂದು ಮನೆತುಂಬಿಸಿಕೊಳ್ಳುವ ಹಿನ್ನೆಲೆ ಇಲ್ಲಿ ಗಮನಿಸಬೇಕಾದುದು. ಇದು ಕೊಡಗಿನ ಸುಗ್ಗಿಯ ಹಬ್ಬ; ನವೆಂಬರ್ ಅಥವಾ ಡಿಸೆಂಬರಿನಲ್ಲಿ ಬರುತ್ತದೆ. ಹಬ್ಬದ ದಿನ ಮನೆಯನ್ನು ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಶುಭ ಮೂಹೂರ್ತದಲ್ಲಿ ಬತ್ತದ ಗದ್ದೆಗೆ ತೆರಳಿ ಅನ್ನಲಕ್ಷ್ಮಿಯನ್ನು ಆರಾಧಿಸಿ ಕೆಲವು ಬತ್ತದ ಪೈರನ್ನು ಕತ್ತರಿಸಿ "ಅನ್ನ ಲಕ್ಷ್ಮಿಯೇ ಅಕ್ಷಯವಾಗು" (ಪೊಲಿ ಪೊಲಿ ದೇವ) ಎಂದು ಸಾಮೂಹಿಕವಾಗಿ ಕೂಗುತ್ತ ವಾದ್ಯ ವಿಶೇಷಗಳೊಡನೆ ಮನೆಗೆ ಸಾಗಿಸುತ್ತಾರೆ. ಈ ಹಬ್ಬದ ಅಂಗವಾಗಿ ಸುಮಾರು ಒಂದು ವಾರದವರೆಗೆ "ಮಂದ್" ಎಂಬ ಗ್ರಾಮರಂಗದಲ್ಲಿ ಕುಣಿತ, ಕೋಲಾಟಗಳಲ್ಲಿ ನಿರತರಾಗುತ್ತಾರೆ. ಸುಂದರ ಜನಪದ ಗೀತೆಗಳನ್ನು ಈ ಸಂದರ್ಭದಲ್ಲಿ ಹಾಡುತ್ತಾರೆ. ಇವೇ ಹುತ್ತರಿ ಹಾಡುಗಳು.

ಹುತ್ತರಿಯ ಹಾಡುಗಳಲ್ಲಿ ಬತ್ತದ ಬೇಸಾಯದ ವಿವಿಧ ಹಂತಗಳು, ಹಬ್ಬದ ವರ್ಣನೆ, ವಿನೋದಯುಕ್ತ ವಿಷಯಗಳ ರಸವತ್ತಾದ ನಿರೂಪಣೆ ಬರುತ್ತದೆ. ಹಬ್ಬದ ದಿನ ಮನೆಮಂದಿ ಹಾಡುತ್ತ ಗದ್ದೆಗೆ ತೆರಳಿ, ದೇವತಾ ಪ್ರಾರ್ಥನೆ ಮಾಡಿ, ಆಕಾಶದತ್ತ ಗುಂಡೊಂದನ್ನು ಹಾರಿಸಿ, ಬತ್ತದ ಕದಿರನ್ನು ಕೊಯ್ದು ಹಿಗ್ಗುತ್ತ ಮನೆಗೆ ಮರಳುವ ವರ್ಣನೆ ಆಕರ್ಷಕವಾದುದು.

**ಆಡಿಪಾಡಿ ಪೋಯಿತ್ ಏಳ್ಮೂಲೆ ಆಕಡ ಕ್ಯೆರಿಲ್ ನಿಂದಿತ್ ।**
**ಕೇಕ್ಕ್ ಮೊಗವಾಯಿ ದೇವರ ನೆನೆತಿತ್ ।**
**ತಿತ್ತ್ ಬೊಡಿ ಬೆಚ್ಚಿತ್ ಕಳಿಕಳಿ ನಟ್ಟಾನ ।**
**ಪೊಲಿ ಪೊಲಿ ಕೊಜ್ಜತ್ ॥**

ಹುತ್ತರಿ ಕುಣಿತ ಕರ್ನಾಟಕದ ಜನಪದ ನೃತ್ಯಗಳಲ್ಲಿ ವಿಶಿಷ್ಟವಾದುದು. ಕೊಡಗಿನ ಸಾಂಪ್ರದಾಯಿಕ ಉಡುಪನ್ನು ಧರಿಸಿ ಕೋಲುಹೊಯ್ಯುತ್ತ ಹಾಡುವ ಕೊಡವ ಪದಗಳೂ ಅಷ್ಟೇ ರಮ್ಯವಾದವು. ವಿವಿಧ ಗತ್ತುಗಳಲ್ಲಿ ಆ ಹಾಡುಗಳನ್ನು ಹಾಡಲಾಗುತ್ತದೆ.

**ಪುಮಾಲೆ ಮಂದ್ಲ್ ಕೋಲ್ಕ್ಕಿಂಜ ।**
**ಪೊಯಿಲೇ ಪೊಯಿಲೇ ಓಂಕಾರ ಬೆಚ್ಚಿತ್ ಊದುವ ಕೊಂಬ್ ।**
**ಪೊಯಿಲೇ ಪೊಯಿಲೇ ರೀಂಕಾರ ಬೆಚ್ಚಿತ್ ಕೊಟ್ಟುವ ಪರೆ ।**
**ಪೊಯಿಲೇ ಪೊಯಿಲೇ**

ಕೋಲಾಟ ಮುಗಿದ ಮೇಲೆ ಈ ಆಟಗಾರರ ತಂಡ ಊರಿನ ಮನೆ ಮನೆಗೂ ಹೋಗಿ ಮನೆಯವರನ್ನು ಮನಸಾರ ಹಾಡಿ ಹೊಗಳಿ ಕಾಣಿಕೆಗಳನ್ನು ಸಂಗ್ರಹಿಸುತ್ತಾರೆ.

**ನಂದಾಡ್ ಈ ಮನೆ ನಂದಿ ಮಹದೇವ ।**
**ಒಂದಾಂಗೊಂದ್ ಕೂಡಿ ಪೊಲಂಜಿ ಬರಡ್ ।**
**ಪತ್ತಾಯ ಚಿತ್ತಾರಿ ತೊನೆಯತಿರಡೊ ತೊಟ್ಟ್‌ಲ್ ಪಾಕು ।**
**ತಪ್ಪತಿರಡೊ ಕೊಟ್ಟಲ್ ಕರಪತ್ತ ।**
**ತಪ್ಪತಿರಡೊ ಪೊಟ್ಟಲ್ ಚೀರಾಳಿ ।**
**ನೀಂಗತಿರಡೊ ಚಿಪ್ಪ್‌ಲ್ ।**
**ಪೊಂಬಣನಂಗತಿರಡೊಮಹಾದೇವಾ ।**

ಈ ಮನೆಯವರಿಗೆ ಮಂಗಳವನ್ನು ಕರುಣಿಸು. ಈ ಮನೆ ಎಲ್ಲ ರೀತಿಯಲ್ಲಿಯೂ ಅಭಿವೃದ್ಧಿ ಹೊಂದಲಿ; ಇದರ ಕಣಜದಲ್ಲಿ ಸಣ್ಣಕ್ಕಿ ತುಂಬಿ ತುಳುಕಲಿ, ತೊಟ್ಟಿಲಲ್ಲಿ ಹಾಲುಹಸುಳೆ ಸದಾ ಆಡಲಿ, ಕೊಟ್ಟಿಗೆಯಲ್ಲಿ ಕರೆಯುವ ಗೋವು ತಪ್ಪದೆ ಇರಲಿ, ಪೆಟ್ಟಿಗೆಯಲ್ಲಿ ಬಟ್ಟೆಬರೆ ಬೇಕಾದಷ್ಟಿರಲಿ, ಹಣದ ಪೆಟ್ಟಿಗೆಯಲ್ಲಿ ಹೊನ್ನು ಹಣ ಝಣ ಝಣಿಸುತ್ತಿರಲಿ. ಇದು ಮೇಲಿನ ಹಾಡಿನ ಭಾವ.

## ವಿವಾಹಗಳು

ಕೊಡವರ ಮದುವೆಯೂ ವಿಶಿಷ್ಟವಾದುದು. ಗಂಡು–ಹೆಣ್ಣಿನ ವಿವಾಹ ಸಂಬಂಧ ಶಾಸ್ತ್ರಗಳು ಅವರವರ ಮನೆಗಳಲ್ಲಿಯೇ ಮೊದಲು ವಿಜೃಂಭಣೆಯಿಂದ ನಡೆದು, ಗಂಡು ಹೆಣ್ಣಿನ ಮನೆಗೆ ತೆರಳಿ, ಪಾಣಿಗ್ರಹಣಮಾಡಿ ಕರೆತರುವವರೆಗಿನ ಎಲ್ಲ ನಡವಳಿಕೆ, ಕಟ್ಟು, ಕಟ್ಟಳೆಗಳು ಗಮನಾರ್ಹವಾದವು. ಕೊಡವರಲ್ಲಿ ಪುರೋಹಿತರ ಅವಶ್ಯಕತೆಯಿಲ್ಲ; ಮಾಂಗಲ್ಯಧಾರಣ ಪದ್ಧತಿಯೂ ಇಲ್ಲ. ಮದುವೆಯ ಆರಂಭದಿಂದ ಅಂತ್ಯದವರೆಗೆ ಹಾಡುಗಳು ಮಾತ್ರ ಪ್ರಧಾನವಾಗಿ ಕಂಡುಬರುತ್ತವೆ. ಈ ಹಾಡುಗಳಲ್ಲಿ ಮದುವೆಯ ಸರ್ವವಿವರಗಳ ವರ್ಣನೆಯೂ ಬರುತ್ತದೆ. ಜೊತೆಗೆ ಮದುವಣಿಗನ ಸಮಸ್ತ ಜೀವನ ವಿವರಗಳನ್ನೂ ಆಕರ್ಷಕವಾಗಿ ಬಣ್ಣಿಸಿ ಜನನ, ಬಾಲ್ಯ, ಯೌವನ, ವಿವಾಹಾಕಾಂಕ್ಷೆ, ಕನ್ಯಾನ್ವೇಷಣೆ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಲಾಗುತ್ತದೆ. ಯುವಕ ತನ್ನ ಅಂತರಂಗದ ವಿವಾಹಾಕಾಂಕ್ಷೆಯನ್ನು ತನ್ನ ತಾಯಿಯ ಮುಂದೆ ಧ್ವನಿ ಪೂರ್ಣವಾಗಿ ಮಂಡಿಸುತ್ತಾನೆ–

**ಪೊಣ್ಣಿಲ್ಲತ ಮನೆತನ ।**
**ಕಣ್ಣಿಲ್ಲತ ಜೀವಮಾನ ಆಳಿಲ್ಲತ ದೊರೆತನ ।**
**ಕ್ಟಿನೋ ಫಲವಿಲ್ಲೆ ಮಕ್ಕಳಿಲ್ಲತ ಒಕ್ಕಾಮೆ ।**
**ಕೆಜ್ಜಿನೋ ಫಲವಿಲ್ಲೆ ನೀರಿಲ್ಲತ ನೀಕೆರೆ ।**
**ತೋಡಿನೋ ಫಲವಿಲ್ಲೆ ಪುವಿಲ್ಲತ ಪುತೋಟ ।**
**ಮಾಡಿನೋ ಫಲವಿಲ್ಲೆ**

"ಅಮ್ಮ ಹೆಣ್ಣಿಲ್ಲದ ಮನೆತನ ಕಣ್ಣಿಲ್ಲದ ಬದುಕಿನಂತೆ, ಆಳಿಲ್ಲದ ಅರಸನಂತೆ, ಮಕ್ಕಳಿಲ್ಲದ ಮನೆಯಂತೆ, ನೀರಿಲ್ಲದ ಕೆರೆಯಂತೆ, ಹೂವಿಲ್ಲದ ಹೂದೋಟದಂತೆ ನಿಷ್ಫಲ. ಆದ್ದರಿಂದ ತನಗೊಪ್ಪುವ ಮಡದಿಯನ್ನು ತಾ" ಎಂದು ತನ್ನ ಹೃದಯದ ಭಾವವನ್ನು ಸ್ವಾರಸ್ಯವಾದ ರೀತಿಯಲ್ಲಿ ಮುಂದಿಡುತ್ತಾನೆ. ಹೀಗೆ ಕೊಡವರ ಮದುವೆಯ ಹಾಡುಗಳು ಅರ್ಥಪೂರ್ಣವಾದ ಧ್ವನಿಪೂರ್ಣವಾದ ಸುಂದರ ಭಾವಗೀತೆಗಳಂತೆ ರಂಜಿಸುತ್ತವೆ. ಪ್ರೇಮಮಯ ಸನ್ನಿವೇಶಗಳೂ ವಧುತೌರನ್ನು ತೊರೆಯುವಾಗಿನ ಹೃದಯ ಕಲಕುವ ಸಂದರ್ಭಗಳೂ ಮನಮುಟ್ಟುವಂತೆ ಈ ಗೀತೆಗಳಲ್ಲಿ ಚಿತ್ರಿತವಾಗಿವೆ. ಕೊಡವರ ಜನಪದ ಸಾಹಿತ್ಯದಲ್ಲಿ ಮರಣದ ಹಾಡುಗಳು ಒಂದು ಪ್ರಮುಖ ವರ್ಗವಾಗಿಯೇ ಬರುತ್ತವೆ. ಮಾನವ ಜೀವನದ ನಶ್ವರತೆಯನ್ನು ಎತ್ತಿ ತೋರಿಸಿ, ಮೃತರ ಬಂಧುಗಳನ್ನು ಸಂತೈಸುವ ಅಪೂರ್ವ ಸನ್ನಿವೇಶಗಳೂ ಈ ಗೀತೆಗಳಲ್ಲಿ ತಲಸ್ಪರ್ಶಿಯಾಗಿ ಚಿತ್ರಿತವಾಗಿವೆ.

ಈ ಬದುಕು ಪವಿತ್ರವಾದುದು. ಮರಣಕಾರಿವೆಂಬುದು ನಾರಾಯಣ ದೇವರ ಕೈಯ ಕನ್ನಡಿ ಕೈತಪ್ಪಿ, ಕೆಳಗೆ ಬಿದ್ದು ಒಡೆದಂತೆ –

**ನಾರಾಯಣ ದೇವಂಡ ।**
**ನೋಟುವಳ ಕನ್ನಡಿ ಕೈತಪ್ಪಿ ನೆಲತಾಂದ್ ।**
**ಬಂದ್ದೊಡಂದ್ ಪೋನೋಲೆ ನಿಂಗೊಡಂದ್ ಪೋಯಿರೋ॥**

ಹೀಗೆ ಶ್ರೇಷ್ಠತಮ ಬದುಕು ಹುಡಿಗೂಡಿ ಹೋಗುವಾಗ ಯಾರೂ ತಡೆಯುವಂತಿಲ್ಲ. ಏಕೆಂದರೆ ಜನನ ಮರಣದ ನಿಯಮವನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ವೃಥಾ ಚಿಂತಿಸಿ ಫಲವಿಲ್ಲ– ಎಂಬ ತತ್ವವನ್ನು ಮನೋಜ್ಞವಾಗಿ ನಿರೂಪಿಸುವ ಹಾಡುಗಳೂ ಬರುತ್ತವೆ.

**ಕೇಳಿ ಕೇಳಿ ಕುಂಞ್ಯಾಳೇ ।**
**ಏರ ದುಃಖ ಮಾಡಂಡ ಅವಿಜ ಜಳಂದಕ್ಕ ।**
**ಅಂಗಯಿ ತಡ್ಸೆಕ್ ಬ್ಯೂಮಿ ಕುಡ್‌ಂದಕ ।**
**ಅಂಗಾಲ್ ತಡ್ಸೆ ಚಾವದೂ ಪರಪದೂ ।**
**ಈ ಭೂಮಿ ಉಳ್ಳದ್ ॥**

"ಮಕ್ಕಳೇ, ನೀವು ಹೆಚ್ಚು ಶೋಕಿಸಬೇಡಿ, ಆಕಾಶ ಬಿದ್ದಾಗ ಅಂಗೈ ತಡೆಯಲು ಸಾಧ್ಯವೇ ! ಭೂಲೋಕ ಕುಸಿದಾಗ ಅಂಗಾಲು ತಡೆಯುವುದೇ. ಹುಟ್ಟು ಸಾವು ಈ ಜಗತ್ತಿನ ನಿಯಮ" ಸಂಗೀತದ ವಿಷಯಕ್ಕೆ ಬಂದರೆ ಸಾಮಾನ್ಯವಾಗಿ ಕೊಡವ ಜನಪದ ಗೀತೆಗಳಲ್ಲಿ ನಿಯಮಬದ್ಧ ಹಾಗೂ ವೈವಿಧ್ಯಮಯ ಸಂಗೀತಕ್ಕೆ ವಿಶೇಷ ಪ್ರಾಧಾನ್ಯವಿಲ್ಲ. ಗೀತೆಗಳನ್ನು ಸಾಮೂಹಿಕವಾಗಿ ಹಾಡುವುದು ವಾಡಿಕೆ. ನಾಲ್ಕು ಜನ ಜೊತೆ ಸೇರಿ, ಒಬ್ಬೊಬ್ಬರಿಗೂ ಒಂದೊಂದು ದುಡಿಯನ್ನು ಹಿಡಿದು, ಅದನ್ನು ಚಿಕ್ಕ ಕೋಲೊಂದರಿಂದ ಬಾರಿಸುತ್ತ ಒಟ್ಟಾಗಿ ಹಾಡುವುದು ಸಂಪ್ರದಾಯ. ಹಾಡುಗಾರಿಕೆಯಲ್ಲಿ ಹೆಚ್ಚಿನ ಏರಿಳಿತಗಳಿರುವುದಿಲ್ಲ; ಆದಿಯಿಂದ ಅಂತ್ಯದವರೆಗೂ ಒಂದೇ ತೆರನಾದ ರಾಗದಲ್ಲಿ ಹಾಡುತ್ತಾರೆ. ಹುತ್ತರಿ ಹಬ್ಬದ ಕೋಲಾಟ, ಬೊಳಕಾಟ್ಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುವವರು ಬಹುತೇಕ ಪುರುಷರೇ. ಉಮ್ಮತ್ತಾಟ್ ಎಂಬ ಸ್ತ್ರೀಯರ ಜನಪದ ನೃತ್ಯದಂಥ ಅಪೂರ್ವ ಸಂದರ್ಭಗಳಲ್ಲಿ ಮಾತ್ರ ಮಹಿಳೆಯರು ಹಾಡುತ್ತಾರೆ. ಮೇಲೆ ಹೇಳಿದ ದುಡಿಯನ್ನುಳಿದರೆ ಕೊಡಗಿನ ಜನಪದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಾದ್ಯಗಳ ಪೈಕಿ ಡೋಲು, ಹರೆ, ನಾಗಸ್ವರವನ್ನು ಹೋಲುವ ಮೋರಿ ಎಂಬ ಓಲಗ, ಹಿಂದಿನ ಕಾಲದ ಕಹಳೆಗಳಂಥ ಅರ್ಧವೃತ್ತಾಕಾರದ ಕೊಂಬು ಎಂಬ ದೊಡ್ಡ ತುತ್ತೂರಿ ಮತ್ತು ಕಂಚಿನ ತಾಳ– ಇವು ಇರುತ್ತವೆ. ಇವನ್ನು ಬಾರಿಸುವವರು ಅಥವಾ ನುಡಿಸುವವರು ಹರಿಜನರು. ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಇಂಥ ವಾದ್ಯಗಾರರ ಒಂದು ತಂಡ ಇರುತ್ತದೆ. ಇದಲ್ಲದೆ ಸ್ಥಳೀಯ ಎಂದರೆ ಗ್ರಾಮದ ದೇವದೇವತೆಯರ ಹಬ್ಬ, ಉತ್ಸವ ಮುಂತಾದ ಸಂದರ್ಭಗಳಲ್ಲಿ ಮದ್ದಲೆಯ ಮಾದರಿ ಇನ್ನೊಂದು ಡೋಲನ್ನು (ಕೊಡವ ಮಾತಿನಲ್ಲಿ ಚಂಡೆ) ಬಾರಿಸುವುದುಂಟು. ಇದನ್ನು ಬಾರಿಸುವವರೇ ಬೇರೆ ಇರುತ್ತಾರೆ.

## ನೃತ್ಯಗಳು

ಕೊಡಗಿನ ಜನಪದ ನೃತ್ಯಗಳನ್ನು ಸಾಮಾಜಿಕ, ಧಾರ್ಮಿಕ ಮತ್ತು ಶೌರ್ಯಪ್ರದರ್ಶನದ ನೃತ್ಯಗಳೆಂದು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು. ಈ ಪೈಕಿ ತುಂಬ ಸಾಮಾನ್ಯವು ಜನಪ್ರಿಯವೂ ಆದ ನೃತ್ಯವೆಂದರೆ ಅನೇಕ ಮಂದಿ ಗುಂಪಾಗಿ ನರ್ತಿಸುವ ಸಾಮಾಜಿಕ ನೃತ್ಯ. ಇದು ಇತರ ನೃತ್ಯಗಳಷ್ಟು ಸುವ್ಯವಸ್ಥಿತವಲ್ಲ. ಸ್ವಲ್ಪ ಬಿರುಸಿನದೆನ್ನಬಹುದಾದ ಈ ನೃತ್ಯದಲ್ಲಿ ಶಿಸ್ತಿಗೆ ವಿಶೇಷ ಮನ್ನಣೆಯಿಲ್ಲ. ಏಕತೆಯೂ ಅಷ್ಟಾಗಿ ಕಂಡುಬರುವುದಿಲ್ಲ. ಇದು ಸಾಮಾನ್ಯವಾಗಿ ಕೊಡವರ ವಿವಾಹ ಮತ್ತಿತರ ಸಾಮಾಜಿಕ ಸಮಾರಂಭಗಳಲ್ಲಿ ನಡೆಯುವಂಥದು. ಇನ್ನೊಂದು ಜನಪ್ರಿಯ ನೃತ್ಯ ಕೋಲಾಟ. ಮೇಲಿನದರಂತೆ ಇದರಲ್ಲೂ ಎಷ್ಟು ಮಂದಿ ಬೇಕಾದರೂ ಭಾಗವಹಿಸಬಹುದು. ನರ್ತಿಸುವವರು ತಮ್ಮ ಎರಡು ಕೈಗಳಲ್ಲೂ ಸುಮಾರು ಒಂದು ಒಂದೂವರೆ ಗಜ ಉದ್ದದ ಬೆತ್ತದ ಕೋಲುಗಳನ್ನು ಹಿಡಿದು, ತಮ್ಮ ಕಾಲುಗಳ ಕ್ರಮಬದ್ಧ ಚಲನೆಗೆ ತಕ್ಕಂತೆ ಅವನ್ನು ನಾನಾ ಭಂಗಿಗಳಲ್ಲಿ ಬೀಸುತ್ತ ವರ್ತುಲಾಕಾರದಲ್ಲಿ ನರ್ತಿಸುತ್ತಾರೆ. ಜೊತೆಗೆ ಇದಕ್ಕೆ ಸಂಬಂಧಿಸಿದ ಹಾಡುಗಳನ್ನೂ ಹಾಡುತ್ತಾರೆ. ಈ ನೃತ್ಯದಲ್ಲಿ ನಯವಿದೆ, ನಾಜೂಕಿದೆ, ಶಿಸ್ತೂ ಇದೆ. ಇದು ಕೊಡಗಿನ ಸುಗ್ಗಿಯ ಹಬ್ಬವಾದ ಹುತ್ತರಿಯ ಸಂದರ್ಭದಲ್ಲಿ ನಡೆಯುತ್ತದೆ. ಕೊಡವರ ಜನಪದ ನೃತ್ಯಗಳಲ್ಲೆಲ್ಲ ಪ್ರಸಿದ್ಧವಾದುದೆಂದರೆ 'ಬೊಳಕಾಟ್' ಎಂಬ ದೀಪ ನೃತ್ಯ. ಇದರಲ್ಲಿ ಸುಮಾರು 30 ಬಗೆಗಳಿವೆ. ಇವು ಸ್ವಲ್ಪಮಟ್ಟಿಗೆ ಶಾಸ್ತ್ರೀಯವಾಗಿದ್ದು ಉತ್ತಮದರ್ಜೆಗೆ ಸೇರಿದವುಗಳಾಗಿವೆ. ನೃತ್ಯವನ್ನು ಪ್ರಾರಂಭಿಸುವ ಮುನ್ನ ನೃತ್ಯ ರಂಗದ ನಡುಮಧ್ಯೆ ದೊಡ್ಡ ಕಂಚಿನ ದೀಪಗಳನ್ನಿಡುತ್ತಾರೆ. ಅವುಗಳ ಸುತ್ತ ನಾಲ್ವರು ಹಿರಿಯರು ದುಡಿಗಳನ್ನು ಬಾರಿಸುತ್ತ ನೃತ್ಯಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಆಗ ನರ್ತಕರು ಒಬ್ಬೊಬ್ಬರಾಗಿ ಮುಂದೆ ಬಂದು ವೃತ್ತಾಕಾರವನ್ನು ರಚಿಸಿಕೊಂಡು ನರ್ತಿಸತೊಡಗುತ್ತಾರೆ. ಪ್ರತಿಯೊಬ್ಬರ ಕೈಯಲ್ಲೂ ಒಂದೊಂದು ಒಡಿಕತ್ತಿ ಎಂಬ ಅಗಲವಾದ ಅಲಗುಳ್ಳ ದೊಡ್ಡ ಖಡ್ಗ ಮತ್ತು ಒಂದೊಂದು ಬಿಳಿಯ ಚಾಮರಗಳಿದ್ದು, ಅವನ್ನು ಅವರು ತಾಳಬದ್ಧವಾಗಿ ನಾನಾ ಭಂಗಿಗಳಲ್ಲಿ ಬೀಸುತ್ತ ನರ್ತಿಸುತ್ತಾರೆ. ಮಧ್ಯೆ ಮಧ್ಯೆ ತಮ್ಮ ಸ್ಥಾನಗಳನ್ನು ಅದಲು ಬದಲು ಮಾಡಿಕೊಳ್ಳುವುದಲ್ಲದೆ ನರ್ತನದ ರೀತಿಯನ್ನೂ ಬದಲಿಸಿಕೊಳ್ಳುತ್ತಾರೆ. ಈ ಸುವ್ಯವಸ್ಥಿತ ನೃತ್ಯ ಧಾರ್ಮಿಕ ಸಂಬಂಧವಾಗಿದ್ದು ಹೆಚ್ಚಾಗಿ ದೇವಸ್ಥಾನಗಳಲ್ಲಿ, ಇತರ ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುತ್ತದೆ.

ಕೊಡವರ ಇನ್ನೊಂದು ನೃತ್ಯವೆಂದರೆ 'ಪಡೆಕಳಿ' ಅಥವಾ 'ಪರಿಯಕಳಿ', ಇದು ಒಂದು ರೀತಿಯ ಸಮರ ನೃತ್ಯ, ಕೊಡವ ಜನಾಂಗದವರಲ್ಲಿ ಪರಂಪರಾನುಗತವಾಗಿ ಬಂದ ಸಮರೋತ್ಸಾಹವನ್ನೂ, ಕ್ರೀಡಾಭಿಮಾನವನ್ನೂ ಈ ನೃತ್ಯದಲ್ಲಿ ಕಾಣಬಹುದು. ಇದರಲ್ಲಿ ಸಮಾನಶಕ್ತಿ ಮತ್ತು ಶೌರ್ಯಗಳುಳ್ಳ ಈರ್ವರು, ತಮ್ಮ ಬಲಗೈಯಲ್ಲಿ ಬೆತ್ತದ ಕೋಲನ್ನು ಎಡಗೈಯಲ್ಲಿ ಬೆತ್ತದ ಗುರಾಣಿಯನ್ನೂ ಹಿಡಿದು ಪರಸ್ಪರ ಕಾದಾಡುವ ರೀತಿಯಲ್ಲಿ ನರ್ತಿಸುತ್ತಾರೆ. ಅವರ ನಡುವೆ ಒಂದು ರೀತಿಯ ಅಣಕು ಹೋರಾಟವೇ ನಡೆಯುತ್ತದೆ. ಕೊನೆಯಲ್ಲಿ ಕ್ರೀಡಾಭಿಮಾನಿಗಳಿಗೆ ಯೋಗ್ಯವಾದ ರೀತಿಯಲ್ಲಿ ಅವರು ಪರಸ್ಪರ ಆಲಂಗಿಸಿ ನಗುನಗುತ್ತ ಅಗಲುತ್ತಾರೆ. ಸಾಮಾನ್ಯವಾಗಿ ಹುತ್ತರಿಹಬ್ಬದ ಕೋಲಾಟದ ಕೊನೆಯಲ್ಲಿ ಈ ನೃತ್ಯ ನಡೆಯುತ್ತದೆ.

ಮೇಲೆ ಹೇಳಿದಂತೆ ಈ ಎಲ್ಲ ನೃತ್ಯಗಳಲ್ಲಿ ಭಾಗವಹಿಸುವವರು ಪುರುಷರೇ. ಅವರು ತಮ್ಮ ದೇಶೀಯ ಸಮವಸ್ತ್ರಗಳನ್ನು ತೊಟ್ಟು ಈ ನೃತ್ಯಗಳಲ್ಲಿ ತೊಡಗುವುದು ಸಂಪ್ರದಾಯ. ಈ ಸಮವಸ್ತ್ರ ಶೇರ್ವಾನಿಯಂಥ ಒಂದು ಉದ್ದದ ಕಪ್ಪುವರ್ಣದ ಮೇಲು ಕೋಟು, ಅದರ ಮೇಲೆ ಸೊಂಟದ ಸುತ್ತ ಸುತ್ತಿದ ಕೆಂಪು ರೇಷ್ಮೆಯ ನೀಳ ನಡುದಟ್ಟಿ, ಅದರ ನಡುವೆ ಸ್ವಲ್ಪ ಬಲಕ್ಕೆ ಸಿಕ್ಕಿಸಿದ ಪೀಚೆಕತ್ತಿ ಎಂಬ ಚಿಕ್ಕ ಕತ್ತಿ ಮತ್ತು ತಲೆಗೆ ಸುತ್ತಿದ ಉದ್ದದ ಬಿಳಿಯ ಜರಿ ರುಮಾಲು– ಇವುಗಳನ್ನೊಳಗೊಂಡಿರುತ್ತದೆ.

ಈ ನೃತ್ಯಗಳಲ್ಲದೆ ಕೊಡಗಿನ ಉತ್ತರ ಭಾಗದಲ್ಲಿ ಕಾಣಸಿಗುವ ಇನ್ನೊಂದು ನೃತ್ಯವೆಂದರೆ 'ಸುಗ್ಗಿಕುಣಿತ'. ಹುತ್ತರಿಹಬ್ಬದ ಕೋಲಾಟಕ್ಕೆ ಸ್ವಲ್ಪ ಭಿನ್ನವಾದ ಈ ನೃತ್ಯದಲ್ಲಿ ಕೊಡವೇತರರು ಮಾತ್ರ ಭಾಗವಹಿಸುತ್ತಾರೆ. ಪ್ರತಿಯೊಬ್ಬ ನರ್ತಕನ ಕೈಯಲ್ಲೂ ಒಂದೊಂದು ಉದ್ದನೆಯ ಕಠಾರಿಯಿರುತ್ತದೆ. ಅದನ್ನು ವಿವಿಧ ಭಂಗಿಗಳಲ್ಲಿ ಬೀಸುತ್ತ ಅವರು ಬಿರುಸಾಗಿ ನರ್ತಿಸುತ್ತಾರೆ. ಕೆಲವು ನೃತ್ಯಗಳಿಗೆ ಕಠಾರಿಯ ಬದಲು ಮರದ ಕೋಲುಗಳನ್ನು ಉಪಯೋಗಿಸುತ್ತಾರೆ. ಇನ್ನು ಕೊಡವ ಸ್ತ್ರೀಯರು ನರ್ತಿಸುವ ಇನ್ನೊಂದು ಸರಳ ಹಾಗೂ ಸುಂದರ ನೃತ್ಯವಿದೆ. ಇದನ್ನು ಕೊಡವ ನುಡಿಯಲ್ಲಿ 'ಉಮ್ಮತ್ತಾಟ್' ಎಂದು ಕರೆಯುತ್ತಾರೆ. ಈ ನೃತ್ಯದಲ್ಲಿ ಭಾಗವಹಿಸುವ ಸ್ತ್ರೀಯರೂ ಸಮವಸ್ತ್ರ ಧರಿಸಿ (ಇವರು ಸೀರೆಯ ನೆರಿಗೆಯನ್ನು ಹಿಂದಕ್ಕೆ ಬಿಟ್ಟು, ಸೀರೆಯ ಒಂದು ಕೊನೆಯನ್ನು ಬೆನ್ನಿನ ಮೇಲಿಂದ ಎದೆಯ ಮೇಲೆ ಹಾಯಿಸಿ ಬಲಗಡೆ ಬಿಗಿಯಾಗಿ ಗಂಟು ಹಾಕುತ್ತಾರೆ. ಜೊತೆಗೆ ತಲೆಯ ಮೇಲಿಂದ ಬೆನ್ನಿನ ಮೇಲೆ ಹರಡುವಂತೆ ಒಂದು ವಿಶಾಲ ಶಿರವಸ್ತ್ರವನ್ನು ಧರಿಸುತ್ತಾರೆ.) ಕೈಯಲ್ಲಿ ತಾಳ ಹಿಡಿದು, ಅದನ್ನು ಕ್ರಮಬದ್ಧವಾಗಿ ತಟ್ಟುತ್ತ ಅದರ ನಾದಕ್ಕೆ ತಕ್ಕಂತೆ ಬಾಗುತ್ತ ಬಳುಕುತ್ತ ನರ್ತಿಸುತ್ತಾರೆ. ನೃತ್ಯದ ಜೊತೆಗೆ ಅದಕ್ಕೆ ಸಂಬಂಧಿಸಿದ ಜನಪದ ಹಾಡುಗಳನ್ನು ಹಾಡುತ್ತಾರೆ. ಕೊಡವ ಸ್ತ್ರೀಯರ ಈ ನಯನಮನೋಹರ ನೃತ್ಯ ಇತ್ತೀಚೆಗೆ ತೀರಾ ಅಪೂರ್ವವಾಗುತ್ತಿದೆ. ಕೊಡಗಿನ ಜನಪದ ಸಾಹಿತ್ಯ ಹೀಗೆ ಅಲ್ಲಿನ ಸಂಸ್ಕೃತಿಗೆ, ಜನ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ. ಕೊಡವರ ಆಚಾರ ವಿಚಾರಗಳೂ ಸಂಪ್ರದಾಯ ನಂಬಿಕೆಗಳೂ ಸೇರಿದಂತೆ ಕೊಡವ ನಾಡಿನ ಜಾನಪದದ ಕೆಲವರು ಸಂಗತಿಗಳು ಈ ಲೇಖನದಲ್ಲಿ ದಾಖಲಿಸುವ ಪ್ರಯತ್ನವನ್ನು ಸೂಕ್ಷ್ಮತೆಯ ನೆಲೆಯಲ್ಲಿ ಕಾಣಬಹುದಾಗಿದೆ.

## ಪರಾಮರ್ಶನ ಗ್ರಂಥಗಳು


- **ಡಾ. ಹಿ. ಶಿ. ರಾಮಚಂದ್ರೇಗೌಡ :** ಜನಪದ ಸಂಸ್ಕೃತಿ
- **ಡಾ. ಚಕ್ಕೆರೆ ಶಿವಶಂಕರ್ : ಕೊಡವ ಕಲೆಗಳು**
- **ಮುಲ್ಲೇಂಗಡ ರೇವತಿ ಪೂವಯ್ಯ :** ಕೊಡವ ಜಾನಪದ ನೃತ್ಯಗಳು


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ತ.ರಾ.ಸು. ಅವರ 'ರಾಜ್ಯದಾಹ' ಕಾದಂಬರಿಯಲ್ಲಿ ಅರಸುತನದ ಪರಿಣಾಮಗಳು

✍ ಡಾ. ಗಿರೀಶ್ ಮೂಗ್ತಿಹಳ್ಳಿ, ಸಂಶೋಧಕರು, ಚಿಕ್ಕಮಗಳೂರು.

ಅರಸುತನದಲ್ಲಿ ಸೌಮ್ಯತನ ಎಂಬುದು ಅಪರೂಪ. ಅಧಿಕಾರ ದಾಹದ ದಾರಿಯಲ್ಲಿ ಅನುಮಾನ, ಅಸಮಾಧಾನ, ಆಪಾದನೆ, ನಯಗಾರಿಕೆ, ನಾಟಕೀಯತೆ, ಮೋಸ, ಸಂಚು, ಕೊಲೆ, ರಹಸ್ಯ ಮುಂತಾದವುಗಳು ಪ್ರಾಬಲ್ಯ ಪಡೆಯುತ್ತವೆ. ಅಧಿಕಾರದಾಹಿಗೆ ತನ್ನ ಬುಡವನ್ನು ಭದ್ರ ಮಾಡಿಕೊಂಡರೆ ಬಯಲನ್ನೇ ಆಳಬಹುದು ಎಂಬ ನಿರ್ಧಾರ ಸಹಜವಾಗಿ ಬರುವುದರಿಂದ ಇಲ್ಲಿ ಸಂಚಿನ ಬುದ್ಧಿಯೇ ಸಾಮರ್ಥ್ಯದ ಸೌಧವಾಗಿ ಕಂಡುಬರುತ್ತದೆ. ಅಧಿಕಾರ ಎರಡು ರೀತಿಯಲ್ಲಿ ಲಭಿಸುತ್ತದೆ. ಒಂದು 'ವಂಶದ ಮೂಲಕ', ಮತ್ತೊಂದು 'ಸಂಚಿನ ಮೂಲಕ'. ವಂಶದ ಮೂಲಕ ಸಿಗುವ ಅಧಿಕಾರ ಸುಲಭವಾದದ್ದು. ಸಂಚಿನ ಮೂಲಕ ಸಿಗುವ ಅಧಿಕಾರ ಸಂಘರ್ಷದಿಂದ ಕೂಡಿರುತ್ತದೆ. ಹೀಗೆ ಸಿಗುವ ಅಧಿಕಾರದ ಮಾರ್ಗವು ಆ ರಾಜ್ಯದ ಸಾಮಾನ್ಯ ಸ್ಥಿತಿಯನ್ನು ಮಥಿಸಿ ಹಲವಾರು ಘಟನೆಗಳಿಗೆ, ಹಲವರ ವ್ಯಕ್ತಿತ್ವದ ಅನಾವರಣಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ತ.ರಾ.ಸು. ಅವರ ಐತಿಹಾಸಿಕ ಕಾದಂಬರಿ 'ರಾಜ್ಯದಾಹ'ವನ್ನು ಗ್ರಹಿಸಿದಾಗ 'ಅರಸುತನದ ಪರಿಣಾಮಗಳು' ಅರ್ಥವಾಗುವ ಸಾಧ್ಯತೆ ಹೆಚ್ಚು.

ಅರಸುತನದ ಪರಿಣಾಮಗಳನ್ನು ಎರಡು ನೆಲೆಯಲ್ಲಿ ಅನಾವರಣ ಮಾಡುವ ಪ್ರಯತ್ನ ಇಲ್ಲಿದೆ. 1. ನೆಲದ ನೆಲೆ 2. ಬಲದ ನೆಲೆ

ಬಲದ ನೆಲೆಗಿಂತ ನೆಲದ ನೆಲೆ ಹೆಚ್ಚು ಶಕ್ತಿಯುತವಾದದ್ದು. ನೆಲದ ನೆಲೆ ಇಲ್ಲದ ಬಲದ ನೆಲೆಗೆ ಬೆಲೆ ಇಲ್ಲವೇ ಇಲ್ಲ. ನೆಲದ ದಾಹವು ಬಲದ ನೆಲೆಯನ್ನು ಜೀವಂತವಾಗಿಡುವುದರಲ್ಲಿ, ಹಿಗ್ಗಿಸುವುದರಲ್ಲಿ ಅಥವಾ ಕುಗ್ಗಿಸುವುದರಲ್ಲಿ ಪ್ರಧಾನಪಾತ್ರವಹಿಸುತ್ತದೆ. ನೆಲವನ್ನು ವಿಸ್ತರಿಸುವ ದಾಹದಲ್ಲಿ ನೆಲ (ಮೂಲ) ನಿವಾಸಿಗಳನ್ನು ಬಳಸಿಕೊಳ್ಳುವ, ಎತ್ತಿ ಕಟ್ಟುವ, ಕಡೆಗಣಿಸುವ, ಅಂತ್ಯ ಮಾಡುವ ಮನಸ್ಸು 'ಬಲ' ಇದ್ದವರಲ್ಲಿ ಪುನರಾವರ್ತನೆ ಆಗುತ್ತಲೇ ಇರುತ್ತದೆ. ಆದ್ದರಿಂದ ಈ ಎರಡು ನೆಲೆಗಳು ಒಂದಕ್ಕೊಂದು ಪೂರಕ ಸಂಬಂಧ ಹೊಂದಿವೆ.

## 1. ನೆಲದ ನೆಲೆ

ಈ ನೆಲೆ ಭೌಗೋಳಿಕ ಪ್ರದೇಶವನ್ನು ಅರ್ಥಾತ್ ಸಾಮ್ರಾಜ್ಯವನ್ನು ಒಳಗೊಳ್ಳುತ್ತದೆ. ಜೊತೆಗೆ ಮೂಲನಿವಾಸಿಗಳನ್ನು ಒಳಗೊಳ್ಳುತ್ತದೆ. ಸಾಮ್ರಾಜ್ಯ ಅಧಿಕಾರದ ಹಿನ್ನೆಲೆಯಲ್ಲಿ ಗುರುತಿಸಲ್ಪಟ್ಟರೆ, ಮೂಲ ನಿವಾಸಿಗಳ ನೆಲ ಬದುಕು ಮತ್ತು ತಿಳಿವಳಿಕೆಯ ಹಿನ್ನೆಲೆಯಲ್ಲಿ ಗುರುತಿಸಲ್ಪಡುತ್ತದೆ. ಈ ನೆಲೆ ಬಲದ ನೆಲೆಯ ವಿವಿಧ ಅವತಾರಗಳಿಗೆ ಕಾರಣವಾಗುತ್ತದೆ. ಬಲದ ನೆಲೆಯ ವಿಜೃಂಭಣೆಗೆ ಈ ನೆಲೆ ಮೂಲ. 'ರಾಜ್ಯದಾಹ'ದಲ್ಲಿ 'ಚಿತ್ರದುರ್ಗ' ಸ್ಥಾಯಿ. ಇದನ್ನು ವಿಸ್ತರಿಸುವ ಮಾತೇ ಇಲ್ಲ. ಗಡಿಪ್ರದೇಶದ ಪಾಳೆಯಗಾರರ ಆಕ್ರಮಣಗಳನ್ನು ತಡೆಯುವುದು ಇಲ್ಲಿಯ ನಾಯಕರ ಪ್ರಮುಖ ಉದ್ದೇಶ. ಆದರೂ ಇಲ್ಲಿ ಆಂತರಿಕ ಕಲಹಗಳೇ ಹೆಚ್ಚು. ಆದ್ದರಿಂದ ಚಿತ್ರದುರ್ಗ ಸಾಮ್ರಾಜ್ಯವನ್ನು ವಿಸ್ತರಿಸುವ ಮಹತ್ಕಾರ್ಯಗಳು ಇಲ್ಲಿ ಬರುವುದಿಲ್ಲ. ಅಧಿಕಾರದ ದಾಹ ಮಾತ್ರ ಹೆಚ್ಚುತ್ತಲೇ ಇರುತ್ತದೆ. ಅಧಿಕಾರವನ್ನು ದಕ್ಕಿಸಿಕೊಳ್ಳುವ ಭರದಲ್ಲಿ ಕೊಲೆ, ರಕ್ತಪಾತ, ವಂಚನೆ ನಡೆಯುತ್ತವೆ.

ನೆಲದ ನೆಲೆ ಬಲದ ನೆಲೆಗೆ ಮೂಲ ಕಾರಣವಾದಂತೆ, ಬಲದ ಮೂಲಕ ನೆಲದ ಸೊಗಡು ಆಗಾಗ ಮಂಕಾಗುವ ಸಂಗತಿಗಳು ನಡೆಯುತ್ತವೆ. ಇಲ್ಲಿಯ ಜನರ ನಂಬಿಕೆಗೆ ಯೋಗ್ಯನಾದ ಪಟ್ಟಾಭಿಷಿಕ್ತ ರಾಜನೊಬ್ಬ (ಓಬಣ್ಣ ನಾಯಕ) ತುಂಬಿದ ಸಭೆಯಲ್ಲಿ ಹತನಾದಾಗ "ಸಿಡಿಲು ಬಡಿದ ಮಸಣದಂತಾಗಿತ್ತು ಚಿತ್ರದುರ್ಗ!". ಲಕ್ಷಾಂತರ ಜನ ಸೈನಿಕರ, ತಾಯ್ನೆಲದ ಅಭಿಮಾನದಿಂದ ಹೊಳೆಯಾಗಿ ಹರಿದ ರಕ್ತದಿಂದ ತೊಯ್ದ ಚಿತ್ರದುರ್ಗದ ಭೂಮಿ, ಹಿಂದೆಂದೂ, ತನ್ನವರಿಂದಲೇ ಹತನಾದ ದೊರೆಯ ರಕ್ತದಿಂದ ಕಲಂಕಿತವಾಗಿರಲಿಲ್ಲ. ರಾಜ್ಯದಾಹದ ಕಾರಣ ಇಂಥ ಪರಿಣಾಮಗಳು ಘಟಿಸಿದ್ದವು. ನಂತರದ ಪರಿಣಾಮಗಳು ಒಂದಕ್ಕೊಂದು ಪೂರಕವೆಂಬಂತೆ ಘಟಿಸುತ್ತಾ ಹೋದವು. ಓಬವ್ವ ನಾಗತಿಯ ಆತ್ಮಹತ್ಯೆ, ಭುವನಪ್ಪನ ಸಾವು, ಲಿಂಗಣ್ಣನಾಯಕನ ರಾಜ್ಯದಾಹದ ವಿರೋಧಿ ನಿಲುವು, ಚಿಕ್ಕಣ್ಣನಾಯಕನು ವಿಲಾಸ ಪಂಜರದೊಳಗೆ ಬಂಧಿಯಾಗಿದ್ದು ಈ ಎಲ್ಲವೂ ಕೂಡ ನೆಲದ ನೆಲೆಯಲ್ಲಿನ ಪರಿಣಾಮಗಳು.

ನೆಲದ ನೆಲೆಯಲ್ಲಿ ಕೇವಲ ಸ್ತಬ್ಧ ಸರಪಳಿ ಮಾತ್ರ ನಿರ್ಮಾಣವಾಗಲಿಲ್ಲ. ಮೂಲ ನಿವಾಸಿಗಳ ಅಭಿವ್ಯಕ್ತಿಹರಣವಾಗಿದ್ದು ದುರಂತ. ಒಬ್ಬೊಬ್ಬರಿಗೂ ಹೇಳಿಕೊಳ್ಳುವ ತವಕ. ಆತುರ ಎಲ್ಲರಿಗೂ ಇತ್ತು. ಆದರೆ ಮನಸ್ಸು ಆಡಬಯಸಿದ ಮಾತುಗಳನ್ನು ಆಡಲು ಮಾತ್ರ ಯಾರ ನಾಲಗೆಗೂ ಬಲವಿರಲಿಲ್ಲ. ದುರ್ಗದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ನಿರ್ಮಾಣವಾಗಿತ್ತು. ಹತ್ತು ಜನ ಕಲೆಯುವಂಥ ಮಂಗಳ ಕಾರ್ಯಗಳು ನಡೆಯಲಿಲ್ಲ. ಆಕಸ್ಮಿಕ ಸಾವಿನ ಸಂದರ್ಭದಲ್ಲೂ ಅಂತ್ಯಕ್ರಿಯೆಗೆ ಶಾಸ್ತ್ರಾನುಸಾರ ಎಷ್ಟು ಜನ ಅಗತ್ಯವೋ ಅದಕ್ಕಿಂತ ಹೆಚ್ಚು ಜನ ಸೇರಬಾರದು, ಸೈನ್ಯಾಧಿಕಾರಿಗಳ ಪೂರ್ವಭಾವಿ ಅನುಮತಿ ಪಡೆಯದೆ ಸ್ಮಶಾನ ಯಾತ್ರೆ ನಡೆಸಕೂಡದು. ಎಲ್ಲೆಡೆಯಲ್ಲಿಯೂ ರಾಜಕಾರ್ಯದ ಚರ್ಚೆಯನ್ನು ನಿಷೇಧಿಸಲಾಗಿದೆಯಲ್ಲದೆ ಸಂಶಯಾಸ್ಪದ ರೀತಿಯಲ್ಲಿ ವರ್ತಿಸಿದವರನ್ನು ಹತ್ಯೆ ಮಾಡಲು, ಅನುಮಾನಾಸ್ಪದವಾದ ಮನೆಗಳ ಶೋಧನೆ ಮಾಡಲು ಸೇನೆಗೆ ಸರ್ವಾಧಿಕಾರ ಕೊಟ್ಟಿದ್ದು ನೆಲದ ನೆಲೆಯ ದುಷ್ಪರಿಣಾಮವಾಗಿ ಕಂಡುಬರುತ್ತವೆ.

ದುರ್ಗದಲ್ಲಿ ಘಟಿಸಿದ ಸೈನ್ಯಕ್ರಾಂತಿಯಿಂದಾಗಿ ಮೂಲ ನಿವಾಸಿಗಳು ಅತಂತ್ರರಾದರು. ಸತ್ಯ ತಿಳಿದಿದ್ದರೂ ಅಭಿವ್ಯಕ್ತಿಹರಣವಾಗಿತ್ತು. ಲಕ್ಷಾಂತರ ಜನರ ಬಲಿದಾನದ ಮೇಲೆ ನಿರ್ಮಾಣವಾಗಿರುವ ದುರ್ಗದ ನೆಲ ಉಳಿಯಬೇಕು ಎಂಬುದೇ ಎಲ್ಲರ ಆಶಯ. "ಈ ರಾಜ್ಯದ ಇದಿರು ನಮ್ಮ ನಿಮ್ಮ ಹಿತವೆನ್ನುವುದು ಯಾವ ಗಿಡದ ತೊಪ್ಪಲು. ನಾವು ಉಳಿದು, ದುರ್ಗ ಅಳಿದರೆ ಏನೂ ಉಳಿಯುವುದಿಲ್ಲ, ಭರಮಣ್ಣ, ನಾವು ಅಳಿದು ದುರ್ಗ ಉಳಿದರೆ ಎಲ್ಲವೂ ಉಳಿದಂತೆ...." (ಪು.ಸಂ. 31) ಎಂದು ಹೇಳುವ ಪರಶುರಾಮಪ್ಪನ ಮಾತು ಮುಖ್ಯವೆನಿಸುತ್ತದೆ.

ನೆಲದ ನೆಲೆಯಲ್ಲಿ ಮೂಲನಿವಾಸಿಗಳ ಪಾಡು ಮುಖ್ಯವಾಗುತ್ತದೆ. "ಈ ಗಂಡುಭೂಮಿಯನ್ನು ಆಳಬೇಕಾದರೆ, ಅದಕ್ಕೆ ಕಲ್ಲೆದೆಯವರೇ ಬೇಕು" ಎಂಬ ಅಭಿಪ್ರಾಯದ ಹಿಂದೆ, "ಆಳುವ ಪ್ರಭುಗಳಿಗೆ ಗಂಡೆದೆಯಿರಬೇಕು, ಹೆಂಗರಳೂ ಬೇಕು" ಎಂಬುದು ಅಷ್ಟೇ ಸತ್ಯ. 'ರಾಜ್ಯದಾಹ'ದಲ್ಲಿ ಗಿರಿಜವ್ವೆ ಮನ ಕಲಕುವ ಪಾತ್ರ. ಈ ನೆಲದ ಹೆಣ್ಣು ಚಿತ್ರದುರ್ಗದಲ್ಲಿ ಪ್ರವಹಿಸಿದ ಸೈನ್ಯಕ್ರಾಂತಿಯ ಹುಚ್ಚು ಹೊಳೆಯಲ್ಲಿ ಅವಳ ಎಳೆಯ ಬಾಳಿನ ಎಲ್ಲ ಆಸೆ, ಆಸರೆಗಳು ಕೊಚ್ಚಿ ಹೋಗಿ, ತುಂಬಿದ ಜೀವನ ಬರಿ ಪಾತ್ರೆಯಾಗಿತ್ತು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಓಬವ್ವ ನಾಗತಿಯ ಆತ್ಮಹತ್ಯೆ, ಬಾಳಿಗೆ ಆಧಾರವಾಗಬೇಕೆಂದಿದ್ದ ವೀರಣ್ಣನ ಸಾವು ಅವಳನ್ನು ಜಡಸ್ಥಿತಿಗೆ ತಲುಪಿಸಿದ್ದವು. ನೆಲದ ನೆಲೆಯ ಮೂಲ ನಿವಾಸಿಗಳ ಬರಿದಾದ ಬಾಳು ; "ರಾಮನಿಗೆ ರಾಜ್ಯವಾದರೂ, ಬಡವನಿಗೆ ರಾಗಿ ಬೀಸೋದು ತಪ್ಪೋಲ್ಲ" (ಪು.ಸಂ. 47) ಎಂಬ ವಿಧಿವಾದಕ್ಕೆ ಶರಣಾಯಿತು.

## 2. ಬಲದ ನೆಲೆ

ಬಲದ ನೆಲೆಗೆ ಮೂಲ ಕಾರಣ ರಾಜ್ಯದಾಹ! ಸಾಮ್ರಾಜ್ಯವನ್ನು ತನ್ನದಾಗಿಸಿಕೊಳ್ಳುವ ದಾರಿಯಲ್ಲಿ ಈ ನೆಲೆ ಅವತಾರಗಳನ್ನು ತಾಳಿ ವ್ಯಕ್ತಿಯ ವ್ಯಕ್ತಿತ್ವವನ್ನು ಅನಾವರಣ ಮಾಡುತ್ತದೆ. ಬಲವೆಂದರೆ ದೈಹಿಕ ಬಲ ಮಾತ್ರವಲ್ಲ, ಮನೋಬಲ, ಧನಬಲ, ಸೈನ್ಯಬಲ ಮುಂತಾದವು. ಇವುಗಳಲ್ಲಿ ಮನೋಬಲ ಹೆಚ್ಚು ಶಕ್ತಿಯುತವಾದದ್ದು. ಆದರೂ ಶಕ್ತಿಹೀನವೂ ಆಗಿರಬಹುದು. ಅಂದರೆ ಶಕ್ತಿಯುತವಾದದ್ದು ಶಕ್ತಿಹೀನತೆಯ ಮೇಲೆ ಮಾಡುವ ಪ್ರಹಾರವು ಮುಂದಿನ ಪರಿಣಾಮಗಳನ್ನು ದೃಢೀಕರಿಸುತ್ತದೆ. ಆದ್ದರಿಂದ ಮನೋಬಲದ ಆಟಗಳು ಒಂದು ವಸ್ತುವನ್ನು ಅಥವಾ ಅಂದುಕೊಂಡಿದ್ದನ್ನು ಪಡೆದುಕೊಳ್ಳುವ ಅಥವಾ ಕಳೆದುಕೊಳ್ಳುವ ಫಲಿತಗಳ ಮೇಲೆ ನಿಂತಿರುತ್ತವೆ.

'ರಾಜ್ಯದಾಹ' ಕಾದಂಬರಿಯಲ್ಲಿ ಬಲದ ನೆಲೆ ಬಹಳ ಪ್ರಖರವಾಗಿದೆ. ಮುದ್ದಣ್ಣನಾಯಕನ ಬೌದ್ಧಿಕ ಕೌಶಲ್ಯವು ಹಲವರನ್ನು ನಾಶಪಡಿಸಿತು. ಭೀತಿಯ ಸರ್ವಾಧಿಕಾರ ತಾಂಡವವಾಡಲು ಕಾರಣವಾಯಿತು. ದುರ್ಗದ ಆಂತರಿಕ ಕಲಹದ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಸಿಕ್ಕಿತು. ನಯವಂಚನೆಯ ಹಲವು ವಿಧಗಳು ವ್ಯಕ್ತವಾದವು. ಎಲ್ಲರ ಕತ್ತಿಗಿಂತಲೂ ಮುದ್ದಣ್ಣನಾಯಕನ ಬುದ್ಧಿ ಭಯಂಕರವಾದದ್ದು. ಅವನ ಮಾತಿನ ಸತ್ಯಕ್ಕೆ ಅವನ ಆತ್ಮವು ಸಾಕ್ಷಿಯಾಗಿರಲಿಲ್ಲ. ಅವನಿಗೆ ಇದ್ದದ್ದು ಒಂದೇ–ರಾಜ್ಯದಾಹ ಎಂಬುದು ಸ್ಪಷ್ಟವಾಯಿತು. ಅಧಿಕಾರದಾಹದಿಂದ ದುರ್ಗದ ಅರಸರ ನೆತ್ತಿಯನ್ನು ಕತ್ತರಿಸಿ, 'ಇವನು ಮನುಷ್ಯನಲ್ಲ, ನರರಕ್ಕಸ' ಎಂಬ ಅಪಖ್ಯಾತಿಗೆ ಪಾತ್ರನಾಗಿದ್ದರೂ ದುರ್ಗವನ್ನು ಎಂಥ ಶತ್ರುವಿನಿಂದಲೂ ರಕ್ಷಿಸಬಲ್ಲ ಸಮರ್ಥನೀತ' ಎಂಬ ಪ್ರಶಂಸೆಗೆ ಒಳಗಾಗಿದ್ದನು. ಜೊತೆಗೆ ಚಿಕ್ಕಣ್ಣನಾಯಕನ ನಂಬಿಕೆಗೆ ಅರ್ಹನಾಗಿದ್ದನು! ಸ್ನೇಹವನ್ನು ಸಂಪಾದಿಸಿದ್ದನು. ಈ ಕಾರಣವಾಗಿಯೇ, 'ದುರ್ಗದ ಸಿಂಹಾಸನ, ಅದಕ್ಕೆ ನ್ಯಾಯಬದ್ಧ ವಾರಸುದಾರರಾದ ಸರ್ಜೇರಾಯರ ಸಂಸಾರಕ್ಕೆ ಸೇರಬೇಕೆಂಬುದೇ ಮುದ್ದಣ್ಣನ ಬಯಕೆ' ಎಂಬ ನಂಬಿಕೆ ಚಿಕ್ಕಣ್ಣನಲ್ಲಿ ಬೇರೂರಿತ್ತು. ಆದರೆ ಇಂಥ ನಂಬಿಕೆ ಲಿಂಗಣ್ಣನಾಯಕನಿಗೆ ಇರಲಿಲ್ಲ. "ರಾಜ್ಯವೂ ಬೇಡ, ರಾಜಕಾರಣವೂ ಬೇಡ. ನನ್ನ ಪಾಲಿಗೆ ಇನ್ನಿದೆಲ್ಲವೂ ನಾಯಿ ಮುಟ್ಟಿದ ಮಡಕೆ" ಎಂಬ ತೀರ್ಮಾನಕ್ಕೆ ಬಂದು ಎಲ್ಲವನ್ನು ತೊರೆದನು.

'ಹೆಬ್ಬಯಕೆ, ಹೆಂಡಕ್ಕಿಂತಲೂ ಹೆಚ್ಚು ಅಮಲೇರಿಸುವ ವಸ್ತು' (ಪು.ಸಂ. 74) ಎಂಬ ಮಾತನ್ನು ಹೆಚ್ಚು ಹೊಂದಿಸಿಕೊಂಡವನು ಮುದ್ದಣ್ಣ ನಾಯಕ. ಅಧಿಕಾರದ ಹೆಬ್ಬಯಕೆಯನ್ನು ಹೆಚ್ಚಿಸಿಕೊಂಡು ಚಿಕ್ಕಣ್ಣ ನಾಯಕನನ್ನು ದಾಳವನ್ನಾಗಿಸಿಕೊಂಡನು. ಏಕಕಾಲದಲ್ಲಿ ನಂಬಿಕೆ ಮತ್ತು ದ್ರೋಹ ಎರಡನ್ನೂ ಪ್ರಯೋಗಿಸಿ ಚಿಕ್ಕಣ್ಣನಾಯಕನನ್ನು ಅಧಿಕಾರದಲ್ಲಿಟ್ಟು ಅಧಿಕಾರದಲ್ಲಿ ಇರದಂತೆ ಮಾಡಿದನು. ಒಂದು ರೀತಿಯಲ್ಲಿ ಚಿಕ್ಕಣ್ಣನಾಯಕನು ಉತ್ಸವ ಮೂರ್ತಿಯಾದರೆ, ಮೂಲಮೂರ್ತಿ ಮುದ್ದಣ್ಣ ನಾಯಕ! ಹೀಗಾಗಿ "ಚಿತ್ರದುರ್ಗದ ರಾಜ್ಯ ನಾನು ಬಯಸಿದ ಹೆಣ್ಣು. ಇದು ನನ್ನದಾಗಬೇಕು; ನನ್ನದೇ ಆಗಬೇಕು. ಯಾರೊಂದಿಗೂ ಇದನ್ನು ಹಂಚಿ ಉಣ್ಣುವ ಯೋಚನೆ ನನಗಿಲ್ಲ.... ಈ ದುರ್ಗ ನನ್ನದಾಗಿರುವವರೆಗೂ, ಇದರ ಗಡಿಯ ಅಂಗುಲ ಭೂಮಿಯನ್ನೂ ಕಂಡವರಿಗೆ ಒಪ್ಪಿಸುವುದಿಲ್ಲ. ನಾನು ಬದುಕಲಿ, ಸಾಯಲಿ, ನನ್ನ ಮೈಯಲ್ಲಿ ಕೊನೆಯ ಉಸಿರು ಇರುವವರೆಗೂ ಈ ರಾಜ್ಯದ ಕೂದಲು ಕೊಂಕಲು ಅವಕಾಶ ಕೊಡುವುದಿಲ್ಲ" (ಪು.ಸಂ. 78). ಇಂಥ ಬದ್ಧತೆಯೊಂದಿಗೆ ಚಿತ್ರದುರ್ಗವನ್ನು ಪ್ರೀತಿಸುವ, ಬಯಸುವ ಮುದ್ದಣ್ಣ ನಾಯಕ ವ್ಯತಿರಿಕ್ತ ವ್ಯಕ್ತಿತ್ವ ಹೊಂದಿದವನಾಗಿ ಕಂಡುಬರುತ್ತಾನೆ. ಅಷ್ಟೇ ಅಲ್ಲದೆ, "ಚಿತ್ರದುರ್ಗದ ರಾಜ್ಯಶ್ರೀ ನನ್ನವಳಾಗಬೇಕು, ನನ್ನವಳಾಗಬೇಕು. ನನ್ನವಳೇ ಆಗಬೇಕು, ರಾಮಣ್ಣ. ನನ್ನ ತೊಡೆಯ ಮೇಲಿನ ಹೆಣ್ಣಿನ ಕಡೆ ಬೇರಾರೂ ಕಣ್ಣೆತ್ತಿ ನೋಡಬಾರದು; ಹಾಗೆ ನೋಡಿದವರು ಉಳಿಯಬಾರದು" (ಪು.ಸಂ. 79) ಇಂತಹ ಪರಿಪಕ್ವ ಹಠದೊಂದಿಗೆ ದುರ್ಗವನ್ನು ಬಯಸುವ ಮುದ್ದಣನು ಚಿಕ್ಕಣ್ಣನಾಯಕನಿಗಿಂತ ಬಲದ ನೆಲೆಯಲ್ಲಿ ಬಲಶಾಲಿಯಾಗಿ ಕಂಡುಬರುತ್ತಾನೆ.

ಮುದ್ದಣ್ಣನ ಕುತಂತ್ರದಿಂದ ಚಿಕ್ಕಣ್ಣನು ಚಿಕ್ಕಣ್ಣ ನಾಯಕನನ್ನು ಮದ್ಯ, ಮಾನಿನಿಯರ ಅಮಲಿಗೆ ಸೆಳೆಯುವಾಗ "ಸಿಂಹಾಸನ ಮನುಷ್ಯನಿಗೆ ಕೊಡಲಾಗದ ಸುಖ ಯಾವುದಿದೆ?" (ಪು.ಸಂ. 85). "ಆಡುವ ನಾಲಗೆಗೆ ನಮ್ಮ ಜೀವನವನ್ನು ಗುತ್ತಿಗೆ ಹಾಕಿಕೊಟ್ಟು, ಗುಲಾಮಗಿರಿಯ ಬಾಳು ನಡೆಸುವುದಾದರೆ, ಅರಸು ಪದವಿ ಏಕೆ ಬೇಕು, ಮಹಾಸ್ವಾಮಿ ? ಅಂಥ ಅರಸುತನಕ್ಕಿಂತ, ಸನ್ಯಾಸತನ ಲೇಸು" – ಎಂದು ಹೇಳುವ ಮೂಲಕ ಚಿಕ್ಕಣ್ಣ ನಾಯಕ ತನ್ನ ನಿಯಂತ್ರಣದಲ್ಲಿ ತಾನು ಇಲ್ಲವಾಗುವಂತೆ ಮಾಡುತ್ತಾನೆ. ಅರ್ಥಾತ್ ಮುದ್ದಣ್ಣ ನಿರ್ಮಿಸಿದ ವಿಲಾಸ ಪಂಜರದೊಳಗೆ ಚಿಕ್ಕಣ್ಣ ನಾಯಕನು ಬಂಧಿಯಾಗುತ್ತಾನೆ. ಆತನ ಮಿದುಳಿನಾಳದಲ್ಲೆಲ್ಲೋ ಪ್ರಚಂಡ ಆಸ್ಫೋಟನವಾದಂತಾಗಿ, ವಿಕಟಾಟ್ಟಹಾಸಕ್ಕೆ ಒಳಗಾಗುತ್ತಾನೆ.

ಹೀಗೆ 'ರಾಜ್ಯದಾಹ' ಅರಸುತನದ ಪರಿಣಾಮಗಳನ್ನು ಅನಾವರಣ ಮಾಡುತ್ತಲೇ ಚಿತ್ರದುರ್ಗದ ಐತಿಹಾಸಿಕ ಸಂಗತಿಗಳನ್ನು ತಿಳಿಸುತ್ತದೆ. ಇಲ್ಲಿ ಕೇಂದ್ರಸ್ಥಾನ ಚಿತ್ರದುರ್ಗವಾದರೂ ಅಲ್ಲಿಯ ಸಂಗತಿಗಳಾದರೂ ರಾಜಪ್ರಭುತ್ವದ ನೆಲೆಯೊಳಗೆ ಊಹಿಸಲಾರದ ಸಂಗತಿಗಳು ಕಣ್ಮುಂದೆ ದಾಖಲಾಗುವಾಗ ಸಾರ್ವತ್ರಿಕರಣಗೊಳ್ಳುತ್ತವೆ.

■■

– *8ನೇ ಪುಟದಿಂದ ಮುಂದುವರೆದುದು*

ಪಟ್ಟಣಗಳ ಕಡೆ ಮುಖ ಮಾಡಿರುವುದರಿಂದ ಇಂದಿನ ದಿನಗಳಲ್ಲಿ ವ್ಯವಸಾಯ ಮರೀಚಿಕೆಯಾಗಿ ಪರಿಣಮಿಸುತ್ತಿದೆ. ಹಳ್ಳಿಗಳಲ್ಲಿ ತರುಣರ ಸಂಖ್ಯೆ ಕಡಿಮೆಯಾಗುತ್ತಿದ್ದು, ವಯಸ್ಸಾದ ವೃದ್ಧರು ವಾಸ ಮಾಡುತ್ತಿದ್ದಾರೆ. ಕುಲ–ಕಸುಬುಗಳು ಮಾಯವಾಗಿವೆ. ನಿರುದ್ಯೋಗ ಸಮಸ್ಯೆಗೆ ಪರಿಹಾರವೇ ಇಲ್ಲವಾಗಿದೆ. ಇವೆಲ್ಲದ್ದಕ್ಕೂ ರಾಮಬಾಣವೆಂದರೆ ಗಾಂಧೀಜಿಯವರ ಮೂಲ ಶಿಕ್ಷಣ ಎಂದರೆ ತಪ್ಪಾಗಲಾರದು.

## ಪರಾಮರ್ಶನ ಗ್ರಂಥಗಳು


- **ಮೋ. ಕ. ಗಾಂಧೀ (1966)** : ಜೀವನ ಶಿಕ್ಷಣ, ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ.
- **ಭನ್ನ, ಸುರೇಂದ್ರ ಮತ್ತು ಗೂಲಮ್ ವಹೀದ್ (2005)** : ದಿ ಮೇಕಿಂಗ್ ಆಫ್ ಪೊಲಿಟಿಕಲ್ ರಿಫಾರ್ಮರ್ : ಗಾಂಧಿ ಇನ್ ಸೌತ್ ಆಫ್ರಿಕಾ, 1893–1914. ನವ ದೆಹಲಿ ಮನೋಹರ್
- **ಗಾಂಧಿ ಮಹಾತ್ಮ (1994)** : ದಿ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮ ಗಾಂಧಿ. ನವ ದೆಹಲಿ: ಪ್ರಕಟಣಾ ವಿಭಾಗ, ಮಾಹಿತಿ ಮತ್ತು ಪ್ರಸರಣಾ ಇಲಾಖೆ, ಭಾರತ ಸರ್ಕಾರ.
- **ಫಿಷರ್ ಲ್ಯೂಯಿಸ್ (2002)** : ದಿ ಎಸೆನ್ಷಿಯಲ್ ಗಾಂಧಿ: ಆನ್ ಆಂಥಾಲಜಿ ಆಫ್ ಹಿಸ್ ರೈಟಿಂಗ್ಸ್ ಆನ್ ಹಿಸ್ ಲೈಫ್, ವರ್ಕ್, ಅಂಡ್ ಐಡಿಯಾಸ್. ವಿಂಟೇಜ್ : ನ್ಯೂ ಯಾರ್ಕ್.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸ್ವಾತಂತ್ರ್ಯೋತ್ಸವದ 75ರ ಸಂದರ್ಭದಲ್ಲಿ ಭಾರತದ ಪ್ರಜಾಪ್ರಭುತ್ವ ಎದುರಿಸುತ್ತಿರುವ ಸವಾಲುಗಳು

✍ **ಬಸವರಾಜೇಶ್ವರಿ ಆರ್. ಪಾಟೀಲ್,** ಸಹಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ.

*ಸಾರಾಂಶ*

**ಭಾರತೀಯ ಸಂವಿಧಾನ ಸಮಾನತೆಯ ತಳಹದಿಯ ಮೇಲೆ ಸಮಗ್ರ ಪ್ರಜಾಪ್ರಭುತ್ವ ಹೊಂದುವ ಆಶಯದೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಭಾರತ ಸ್ವತಂತ್ರ್ಯಗೊಂಡು 75 ವರ್ಷಗಳಾದ ಈ ಸಂದರ್ಭದಲ್ಲಿ, ಸಂವಿಧಾನದ ಆಶಯದಂತೆ ಸಮಾನತೆಯ ತಳಹದಿಯ ಮೇಲೆ ಸಮಗ್ರ ಪ್ರಜಾಪ್ರಭುತ್ವ ಹೊಂದುವ ಪ್ರಯತ್ನದಲ್ಲಿ ಭಾರತವು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಭಾರತ ಎದುರಿಸುತ್ತಿರುವ ಸವಾಲುಗಳು, ಅವುಗಳಿಗೆ ಕಾರಣ ಮತ್ತು ಅವುಗಳ ಪರಿಸ್ಥಿತಿಗಳನ್ನು ಅವಲೋಕಿಸಿದಾಗ ದೊರೆತ ಅಂಕಿ ಅಂಶಗಳು ಭಾರತ ಅಭಿವೃದ್ಧಿಯ ಮಿಶ್ರಿತ ಲಕ್ಷಣಗಳನ್ನು ಎತ್ತಿ ತೋರಿಸಿವೆ. ಅವುಗಳಿಗೆ ಕಾರಣಗಳು ಹಾಗೂ ಪರಿಹಾರಗಳನ್ನು ಹುಡುಕುವ ನಿಟ್ಟಿನಲ್ಲಿ ಈ ಲೇಖನ ಮೂಡಿಬಂದಿದೆ.**

## ಪೀಠಿಕೆ

ಒಂದು ರಾಷ್ಟ್ರವು ಪ್ರಜಾಪ್ರಭುತ್ವರಾಷ್ಟ್ರ ಎಂದು ಕರೆಸಿಕೊಳ್ಳಬೇಕೆಂದರೆ ಅಲ್ಲಿ ಪ್ರಜೆಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಆಕಾಂಕ್ಷಿಗಳು ಈಡೇರಬೇಕು. ಇದನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು, ಮೊದಲನೆಯದು ರಾಜಕೀಯ ಪ್ರಜಾಪ್ರಭುತ್ವ, ಎರಡನೆಯದು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ. ರಾಜಕೀಯ ಪ್ರಜಾಪ್ರಭುತ್ವ ಎಂದರೆ ಎಲ್ಲ ಪ್ರಜೆಗಳಿಗೆ ಮೂಲಭೂತ ಹಕ್ಕುಗಳನ್ನು ನೀಡುವುದು ಮತ್ತು ತನ್ನ ಪ್ರತಿನಿಧಿಯನ್ನು ಆಯ್ಕೆಮಾಡುವ ಸ್ವಾತಂತ್ರ್ಯವನ್ನು ನೀಡುವುದು, ಆ ಮೂಲಕ ರಾಜಕೀಯದಲ್ಲಿ ಭಾಗವಹಿಸುವ ಅವಕಾಶವನ್ನು ಕಲ್ಪಿಸುವದು. ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವೆಂದರೆ ಪ್ರಜಾಪ್ರಭುತ್ವ ಮೌಲ್ಯಗಳನ್ನು ಒಳಗೊಂಡ ಸಾಮಾಜಿಕ ಅಭಿವೃದ್ಧಿಯು ಎಲ್ಲಾವರ್ಗಗಳ ಪ್ರಜೆಗಳಿಗೆ ಸಾಮಾಜಿಕ ಭದ್ರತೆ ಸಮಾನತೆಯನ್ನು ನೀಡುವಂತಿರಬೇಕು, ಹಾಗೂ ಆರ್ಥಿಕ ಅಭಿವೃದ್ಧಿಯು ಹಿಂದುಳಿದ, ಬಡವ ಮತ್ತು ದುರ್ಬಲ ವರ್ಗಗಳಿಗೆ ಸಮಾನ ಅವಕಾಶವನ್ನು ನೀಡಿ ಅವರ ಅಭಿವೃದ್ಧಿಗೆ ಪೂರಕವಾಗುವ ರೀತಿಯಲ್ಲಿ ಇರಬೇಕು. ಮಹಾತ್ಮ ಗಾಂಧೀಜಿಯವರು "ನನ್ನ ಪ್ರಕಾರ ಪ್ರಜಾಪ್ರಭುತ್ವ ಎಂದರೆ ಪ್ರಬಲನಿಗೆ ಸಿಗುವ ಅವಕಾಶಗಳು ದುರ್ಬಲನಿಗೂ ಸಮಾನವಾಗಿ ಲಭಿಸುವದಾಗಿದೆ" ಎಂದಿದ್ದರು ಅಂದರೆ ಮಹಾತ್ಮ ಗಾಂಧೀಜಿ ಅವರ ಪ್ರಕಾರ ಪ್ರಜಾಪ್ರಭುತ್ವವು ಸಮಾನತೆಯ ಆಧಾರದ ಮೇಲೆ ರಚನೆಯಾಗಿರಬೇಕು. ಕಾರ್ಲ್‌ಮಾರ್ಕ್ಸ್ ಅವರು "ಪ್ರಜಾಪ್ರಭುತ್ವವು ಸಮಾಜವಾದವನ್ನು ಸಾಧಿಸುವ ಮಾರ್ಗವಾಗಿದೆ" ಎಂದಿದ್ದರು ಅಂದರೆ ಸಮಾನತೆಯನ್ನು ಹೊಂದಿರುವ ಸಮಾಜದ ನಿರ್ಮಾಣಕ್ಕೆ ಪ್ರಜಾಪ್ರಭುತ್ವ ಪೂರಕವಾಗಿದೆ ಎಂಬುದು ಇವರ ಅಭಿಪ್ರಾಯವಾಗಿತ್ತು.

ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ತನ್ನ ಎಲ್ಲಾ ಪ್ರಜೆಗಳಿಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ವ್ಯಕ್ತಿಘನತೆಯನ್ನು ರಕ್ಷಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿ ಭ್ರಾತೃತ್ವವನ್ನು ಸ್ಥಾಪಿಸಬೇಕು. ಈ ತತ್ವಗಳನ್ನು ಮೂಲವಾಗಿರಿಸಿಕೊಂಡ ಸ್ವತಂತ್ರ ಭಾರತವು ಒಂದು ಸಾರ್ವಭೌಮ ರಾಷ್ಟ್ರವಾಗಿ, ಲಿಖಿತ ಸಂವಿಧಾನವನ್ನು ಅಳವಡಿಸಿಕೊಂಡು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿ ರಾಜ್ಯಗಳ ಒಕ್ಕೂಟ ಎಂದು ಘೋಷಿಸಿಕೊಂಡಿತು. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎಂಬ ಭಾರತೀಯ ಸಂವಿಧಾನದ ಪ್ರಜಾಪ್ರಭುತ್ವದ ಮೂಲ ಅಂಶಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಸಂವಿಧಾನದ ಪೂರ್ವಪೀಠಿಕೆ, ಮೂಲಭೂತ ಹಕ್ಕುಗಳು ಮತ್ತು ರಾಜನೀತಿ ನಿರ್ದೇಶಕ ತತ್ವಗಳನ್ನು ರಚಿಸಲಾಗಿದೆ. 138 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಭಾರತವು ವಿಶ್ವದಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಸ್ವಾತಂತ್ರ್ಯೋತ್ಸವದ 75 ವರ್ಷಗಳನ್ನು ಆಚರಿಸುವ ಸಂದರ್ಭದಲ್ಲಿ ಭಾರತವು ಅನೇಕ ಸಾಧನೆಗಳನ್ನು ಮಾಡಿದ್ದರೂ ಕೂಡ, ಸಂವಿಧಾನದ ಆಶಯಕ್ಕೆ ಅನುಗುಣವಾಗಿ ರಾಜಕೀಯ ಪ್ರಜಾಪ್ರಭುತ್ವದ ಜೊತೆಗೆ ಸಾಮಾಜಿಕ ಆರ್ಥಿಕ ಪ್ರಜಾಪ್ರಭುತ್ವವನ್ನು ನೆಲೆಗೊಳಿಸಲು ಇನ್ನೂ ಶ್ರಮಿಸಬೇಕಿದೆ. ವಿಶ್ವದಲ್ಲಿ ಅತಿ ಹೆಚ್ಚು ಅಸಮಾನತೆಯನ್ನು ಹೊಂದಿರುವ ರಾಷ್ಟ್ರ ಭಾರತ ಎಂಬ ವರದಿಯು ಭಾರತವು ಎಲ್ಲಾ ರಂಗಗಳಲ್ಲಿ ಪ್ರಜಾಪ್ರಭುತ್ವ ತತ್ವಗಳನ್ನು ಜಾರಿಗೊಳಿಸುವಲ್ಲಿ ಸವಾಲುಗಳನ್ನು ಹೊಂದಿದೆ ಎಂಬುದನ್ನು ಪುಷ್ಠಿಕರಿಸುತ್ತದೆ. "ಸಾರ್ವತ್ರಿಕ ಮತದಾನ ಪದ್ಧತಿ ಮತ್ತು ಚುನಾವಣೆಗಳನ್ನು ನಡೆಸುವ ಮೂಲಕ ಪ್ರಕ್ರಿಯಾತ್ಮಕ ರಾಜಕೀಯ ಪ್ರಜಾಪ್ರಭುತ್ವವನ್ನು ಹೊಂದಿರುವ ಭಾರತ ಸ್ವಾತಂತ್ರ್ಯೋತ್ಸವದ 75ರ ಸಂದರ್ಭದಲ್ಲಿ ಸಮಗ್ರ ಪ್ರಜಾಪ್ರಭುತ್ವ ಹೊಂದುವಲ್ಲಿ ತನ್ನದೇ ಆದ ಸವಾಲುಗಳನ್ನು ಎದುರಿಸುತ್ತಿದೆ" ಎಂಬ ಊಹೆಯೊಂದಿಗೆ ಈ ಚರ್ಚೆಯನ್ನು ಮುಂದುವರಿಸಬಹುದು.

## ಚರ್ಚೆ

ಭಾರತದ ಸಂವಿಧಾನ ರಚನೆಯ ಸಂದರ್ಭದಲ್ಲಿ ಪಾಶ್ಚಿಮಾತ್ಯ ರಾಜಕೀಯ ಚಿಂತಕರು ಸಂವಿಧಾನ ತಜ್ಞರು ಭಾರತಕ್ಕೆ ಪ್ರಜಾಪ್ರಭುತ್ವ ಸೂಕ್ತವಲ್ಲ ಕಾರಣ ಭಾರತೀಯರು ಆಳಿಸಿಕೊಳ್ಳುವ ವರ್ಗದ ಜನರು ಹಾಗೂ ಇದೀಗ ಸ್ವತಂತ್ರಗೊಂಡಿರುವ ಭಾರತ ಸದ್ಯ ಪ್ರಜಾಪ್ರಭುತ್ವಕ್ಕೆ ಸಿದ್ಧವಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಪಾಶ್ಚಿಮಾತ್ಯ ರಾಜಕೀಯ ಚಿಂತಕರಾದ ಜೆ.ಎಸ್.ಮಿಲ್ ಅವರು ಹೇಳುವಂತೆ "ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಲು ರಾಷ್ಟ್ರದಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಿರಬೇಕು, ರಾಷ್ಟ್ರವು ಶ್ರೀಮಂತರ ರಾಷ್ಟ್ರವಾಗಿರಬೇಕು, ಒಂದೇ ಭಾಷೆ ಮಾತನಾಡುವ ಜನರ ಇರಬೇಕು" ಆದರೆ ಇದೆಲ್ಲದಕ್ಕೂ ವ್ಯತಿರಿಕ್ತವಾದ ಸಂದರ್ಭದಲ್ಲಿ ಭಾರತದ ಸಂವಿಧಾನ ರಚನಾಕಾರರು ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿದರು. ಆಗ ಭಾರತದಲ್ಲಿ ಶೇಕಡ 17ರಷ್ಟು ಸಾಕ್ಷರತೆ ಪ್ರಮಾಣವಿತ್ತು. ರಾಷ್ಟ್ರದಲ್ಲಿ ಶೇಕಡ 60ಕ್ಕೂ ಹೆಚ್ಚು ಜನ ಬಡತನ ರೇಖೆಗಿಂತ ಕೆಳಗಿದ್ದರು. ಇಪ್ಪತ್ತಕ್ಕೂ ಹೆಚ್ಚು ಭಾಷೆಗಳು ಬಳಕೆಯಲ್ಲಿದ್ದವು. ಇಂತಹ ಸಂದರ್ಭದಲ್ಲಿ ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿತು. ಇದು ಇಡೀ ವಿಶ್ವಕ್ಕೆ ಒಂದು ಪ್ರಯೋಗ, ಆಶ್ಚರ್ಯ, ಮುಖ್ಯವಾಗಿ ವ್ಯರ್ಥ ಪ್ರಯತ್ನ ಎಂಬ ಭಾವನೆ ಮೂಡಿಸಿತ್ತು. ಆದರೆ ಭಾರತದ ಸಂವಿಧಾನ ರಚನಾಕಾರರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ವ್ಯತಿರಿಕ್ತವಾಗಿರುವ ಸ್ಥಿತಿಯಲ್ಲಿಯೂ ಕೂಡ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯನ್ನು ತರಲು ನಿರ್ಧರಿಸಿದರು. ಆದ್ದರಿಂದ ಇಲ್ಲಿ, ಪ್ರಜೆಗಳಿಗೆ ವ್ಯವಸ್ಥೆಯೇ ಪ್ರಜಾಪ್ರಭುತ್ವ ತತ್ವಗಳನ್ನು ಬೋಧಿಸುವ ಶಿಕ್ಷಕನಾಗುವುದು ಅನಿವಾರ್ಯವಾಯಿತು. ಅಂದರೆ ವ್ಯವಸ್ಥೆಯಲ್ಲಿದ್ದುಕೊಂಡೇ ಅದನ್ನು ಕಲಿಯುವ ಅದಕ್ಕೆ ಹೊಂದಿಕೊಳ್ಳುವ ಹಾಗೂ ಆ ಮೂಲಕ ತಾನು ಬೆಳೆದು ರಾಷ್ಟ್ರವನ್ನು ಬೆಳೆಸುವುದು ಇಲ್ಲಿಯ ಸರ್ಕಾರ ಮತ್ತು ಪ್ರಜೆಗಳ ಕರ್ತವ್ಯವಾಯಿತು. ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿರುವ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣಕ್ಕೆ ಸಾರ್ವತ್ರಿಕ ಮತದಾನ ಪದ್ಧತಿಯನ್ನು ಹಾಗೂ ಆ ಮೂಲಕ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಳ್ಳಲಾಯಿತು. ಆದರೆ ಕೇವಲ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಹೊಂದಿರುವ ಪ್ರಜಾಪ್ರಭುತ್ವವನ್ನು ಸಾಧಿಸುವುದರಿಂದ ಭಾರತದಲ್ಲಿ ಪರಿಪೂರ್ಣ ಪ್ರಜಾಪ್ರಭುತ್ವರಾಷ್ಟ್ರ ಸ್ಥಾಪಿಸಲು ಸಾಧ್ಯವಿಲ್ಲ ಎಂಬುದರ ಬಗ್ಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಹೇಳುತ್ತಾ, "ರಾಜಕೀಯ ಪ್ರಜಾಪ್ರಭುತ್ವವನ್ನು ಸಾಧಿಸಬೇಕೆಂದರೆ ಅಲ್ಲಿ ಸಾಮಾಜಿಕ ಪ್ರಜಾಪ್ರಭುತ್ವವು ಸ್ಥಾಪನೆಯಾಗಬೇಕು, ಸಾಮಾಜಿಕ ಪ್ರಜಾಪ್ರಭುತ್ವ ಎಂದರೆ ಸ್ವಾತಂತ್ರ್ಯ ಸಮಾನತೆ, ಭ್ರಾತೃತ್ವಗಳನ್ನು ಹೊಂದಿದ ಸಾಮಾಜಿಕ ಜೀವನ ಕ್ರಮ ಇವುಗಳನ್ನು ಹೊಂದದೆ ಭಾರತವು ಸಂಪೂರ್ಣ ಪ್ರಜಾಪ್ರಭುತ್ವವನ್ನು ಹೊಂದಲು ಸಾಧ್ಯವಿಲ್ಲ" ಎಂದರು. ಅಂದರೆ ಭಾರತದಲ್ಲಿ ನೈಜ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದರೆ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ಹೊಂದಿದ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸಬೇಕು ಆ ಮೂಲಕ ಅಭಿವೃದ್ಧಿಪರ ಪ್ರಜಾಪ್ರಭುತ್ವ ರಾಷ್ಟ್ರವನ್ನು ನಿರ್ಮಿಸಲು ಸಾಧ್ಯ ಎಂಬುದು ಇದರ ತಾತ್ಪರ್ಯ. ಸಾರ್ವತ್ರಿಕ ಮತದಾನಪದ್ಧತಿ ಹಾಗೂ ಚುನಾವಣಾ ಪದ್ಧತಿಯ ಮೂಲಕ ಭಾರತವು ರಾಜಕೀಯವಾಗಿ ಪ್ರಕ್ರಿಯಾತ್ಮಕ ಪ್ರಜಾಪ್ರಭುತ್ವವನ್ನು ಸಾಧಿಸಿದ್ದರು ಕೂಡ ವಸ್ತುನಿಷ್ಠ ಪ್ರಜಾಪ್ರಭುತ್ವವನ್ನು ಹೊಂದಲು ಸ್ವಾತಂತ್ರ್ಯದ 75 ವರ್ಷಗಳ ಸಂದರ್ಭದಲ್ಲಿ ಕೂಡ ಶ್ರಮಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮೊದಲನೆಯದಾಗಿ ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಭಾರತೀಯ ಸಂವಿಧಾನ ಯಾವ ಅಂಶಗಳನ್ನು ಅಳವಡಿಸಿಕೊಂಡಿದೆ ಹಾಗೂ ಸದ್ಯದ ಭಾರತದ ಆರ್ಥಿಕ ಸಮಾನತೆ ಯಾವ ರೀತಿ ಇದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಭಾರತೀಯ ಸಂವಿಧಾನದ ಮೂರನೇ ಭಾಗದಲ್ಲಿರುವ 14ನೇ ವಿಧಿಯ ಸಮಾನತೆಯ ಹಕ್ಕಿನ ಪ್ರಕಾರ ಹಾಗೂ ಸಂವಿಧಾನದ ನಾಲ್ಕನೇ ಭಾಗದ 37 ರಿಂದ 51ನೇ ವಿಧಿಗಳ ಪ್ರಕಾರ, ಎಲ್ಲಾ ನಾಗರಿಕರಿಗೆ ಉತ್ತಮ ಜೀವನ ಹೊಂದಲು ಸಮಾನ ಅವಕಾಶವನ್ನು ಕಲ್ಪಿಸಬೇಕು, ರಾಷ್ಟ್ರೀಯ ಸಂಪತ್ತಿನ ಹಾಗೂ ಸಂಪನ್ಮೂಲಗಳ ಸಮಾನ ಹಾಗೂ ಸಮರ್ಪಕ ಹಂಚಿಕೆಯನ್ನು ರಾಷ್ಟ್ರವೂ ಮಾಡಬೇಕು. ಆ ಮೂಲಕ ಉಳ್ಳವರು ಮತ್ತು ಇಲ್ಲದೇ ಇರುವವರ ನಡುವಿನ ಅಂತರವನ್ನು ತಗ್ಗಿಸಬೇಕು. ಆದರೆ 'ವರ್ಲ್ಡ್ ಇನ್ ಇಕ್ವಾಲಿಟಿ ಲ್ಯಾಬ್' ಪ್ರಕಟಗೊಳಿಸಿದ, "ವರ್ಲ್ಡ್ಇನ್ ಇಕ್ವಾಲಿಟಿ ರಿಪೋರ್ಟ್ 2022" ರ ಪ್ರಕಾರ ಭಾರತವು ವಿಶ್ವದಲ್ಲಿ ಅತಿ ಹೆಚ್ಚು ಆರ್ಥಿಕ ಅಸಮಾನತೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಈ ವರದಿಯ ಪ್ರಕಾರ ಭಾರತದ ಮೊದಲ 10% ನಷ್ಟು ಶ್ರೀಮಂತರು ರಾಷ್ಟ್ರೀಯ ಆದಾಯದಲ್ಲಿ 57% ಪಾಲು ಹೊಂದಿದ್ದಾರೆ ಹಾಗೂ ಮೊದಲ ಶೇಕಡಾ 1% ಶ್ರೀಮಂತರು ರಾಷ್ಟ್ರೀಯ ಆದಾಯದಲ್ಲಿ 22% ಹೊಂದಿದ್ದಾರೆ. ಈ ವರದಿಯ ಪ್ರಕಾರ ಖಾಸಗಿ ಆಸ್ತಿಯು 1980 ರಲ್ಲಿ 290% ಇದ್ದದ್ದು 2020 ರಲ್ಲಿ 560% ನಷ್ಟು ಏರಿದೆ.

ಮೊದಲ 10% ನಷ್ಟು ಶ್ರೀಮಂತರು 65% ನಷ್ಟು ಸಂಪತ್ತು ಹೊಂದಿದ್ದರೆ ಮೊದಲ 1 % ಎಷ್ಟು ಶ್ರೀಮಂತರು 33% ನಷ್ಟು ಸಂಪತ್ತು ಹೊಂದಿದ್ದಾರೆ. ಆದರೆ ರಾಷ್ಟ್ರದ ಕೆಳ 50% ನಷ್ಟು ಜನಸಂಖ್ಯೆ ಯಾವುದೇ ರೀತಿಯ ಸ್ವಂತ ಸ್ವತ್ತನ್ನು ಹೊಂದಿಲ್ಲ. 'ಭಾರತದ 2011ರ ಜನಗಣತಿ'ಯ ಪ್ರಕಾರ ದೇಶದ 0.15% ಜನರು ಇನ್ನೂ ವಾಸಕ್ಕೆ ಮನೆಯನ್ನು ಹೊಂದಿಲ್ಲ. 'ನ್ಯಾಷನಲ್ ಹೆಲ್ತ ಪ್ರೊಫೈಲ್ ರಿಪೋರ್ಟ್ (ಎನ್ಎಚ್‌ಪಿ) 2021' ರ ವರದಿಯ ಪ್ರಕಾರ ದೇಶದ 23% ನಷ್ಟು ಜನ ವೈದ್ಯಕೀಯ ವೆಚ್ಚಕ್ಕೂ ಹಣವನ್ನು ಹೊಂದಿಲ್ಲ. ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ದೇಶದ ಜಿಡಿಪಿಯ 2% ನಷ್ಟು ಮಾತ್ರ ಬಳಕೆಯಾಗುತ್ತದೆ. ಆದರೆ ಜಾಗತಿಕ ಗರಿಷ್ಠ ದರ 6% ಇದೆ. ಇದರಿಂದಾಗಿ ಪ್ರತಿ ನಾಲ್ಕನೆಯ ಒಂದು ಕುಟುಂಬ ವೈದ್ಯಕೀಯ ವೆಚ್ಚಕ್ಕಾಗಿ ಸಾಲಮಾಡುವ ಅಥವಾ ಸ್ವತ್ತನ್ನು ಮಾರುವ ಅನಿವಾರ್ಯತೆಯನ್ನು ಹೊಂದಿದೆ. ಇದರಿಂದ ಭಾರತದಲ್ಲಿ 55 ಮಿಲಿಯನ್ ನಷ್ಟು ಜನ ಬಡತನಕ್ಕೆ ಇಳಿಯುತ್ತಿದ್ದಾರೆ. ಮತ್ತು 38 ಮಿಲಿಯನ್ ಜನ ಬಡತನ ರೇಖೆಗಿಂತ ಕೆಳಗೆ ಜಾರುತ್ತಿದ್ದಾರೆ ಎಂದು ವರದಿಯಾಗಿದೆ. ಒಂದು ಕಡೆ ರಾಷ್ಟ್ರದ ಶ್ರೀಮಂತರ ಸಂಪತ್ತು ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಿರುವುದು ಸಂತಸದ ವಿಷಯವಾಗಿದ್ದರೆ, ನಿರುದ್ಯೋಗ, ವೈದ್ಯಕೀಯ ವೆಚ್ಚ, ಹಣದುಬ್ಬರ ಮಧ್ಯಮವರ್ಗವನ್ನು ಆರ್ಥಿಕವಾಗಿ ಮೇಲೇರಲು ಬಿಡುತ್ತಿಲ್ಲ. ನಡು ಮಧ್ಯಮವರ್ಗದಲ್ಲಿ 2019ರಲ್ಲಿ 33% ಇದ್ದ ನಿರುದ್ಯೋಗ 2021–22 ರಲ್ಲಿ 39.5% ರಷ್ಟು ಹೆಚ್ಚಾಗಿದೆ. ಇದರಿಂದ ನಡು ಮಧ್ಯಮ ವರ್ಗ ಕೆಳ ಮಧ್ಯಮ ವರ್ಗಕ್ಕೆ ಜಾರುತ್ತಿದೆ. 2019ರಲ್ಲಿ 390 ಮಿಲಿಯನ್ ಇದ್ದ ನಿರುದ್ಯೋಗ ಪ್ರಮಾಣ 2021–22 ರಲ್ಲಿ 44 ಮಿಲಿಯನ್‌ಗೆ ಏರಿಕೆಯಾಗಿದೆ. ಇದು ಮಧ್ಯಮ ವರ್ಗವನ್ನು ಭಾಗಿಸುತ್ತಿರುವ ವಿಷಯ. ದೇಶದ ಕಡು ಬಡತನ ಪ್ರಮಾಣ 7%ಗೆ ಇಳಿದಿರುವುದು ಸಮಾಧಾನದ ವಿಷಯವಾಗಿದ್ದರೂ ಕೂಡ ನಿರುದ್ಯೋಗ ಮತ್ತು ಹಣದುಬ್ಬರ, ಕೆಳ ಮಧ್ಯಮವರ್ಗವನ್ನು ಬಡತನಕ್ಕೆ ದೂಡುವ ಭೀತಿ ಇದೆ. ದೇಶವು ಒಂದು ಕಡೆ ಜಿಡಿಪಿಯಲ್ಲಿ ಏರಿಕೆ ಕಾಣುತ್ತಿದೆ. 2021–22 ರಲ್ಲಿ ರಾಷ್ಟ್ರದ ಗ್ರಾಹಕ ದರ 31.9 % ಗೆ ಏರಿಕೆಯಾಗಿದೆ. ಈ ಎಲ್ಲಾ ಅಂಕಿ ಅಂಶಗಳು ರಾಷ್ಟ್ರದಲ್ಲಿ ಸಂಪತ್ತಿನ ಅಸಮಾನ ಹಂಚಿಕೆಗೆ ಸಾಕ್ಷಿ ಎಂಬಂತಿವೆ ಹಾಗೂ ರಾಷ್ಟ್ರದ ಅಭಿವೃದ್ಧಿಯು ಸರ್ವರನ್ನು ಒಳಗೊಂಡು ಆಗುತ್ತಿಲ್ಲ ಎಂಬುದನ್ನ ಸ್ಪಷ್ಟಪಡಿಸುತ್ತದೆ.

ಸಾಮಾಜಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದರೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಹೊಂದಿರುವ ಸಮಾಜವನ್ನು ಸ್ಥಾಪಿಸಬೇಕು ಎಂಬ ಆಶಯದೊಂದಿಗೆ ಭಾರತೀಯ ಸಂವಿಧಾನದ ಪೂರ್ವಪೀಠಿಕೆಯಲ್ಲಿ ಸಮಾಜವಾದಿ ಧರ್ಮ ನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯ ಎಂಬ ಪದಗಳನ್ನು ಬಳಸಲಾಗಿದೆ. ಸಂವಿಧಾನದ ಪೀಠಿಕೆಯಲ್ಲಿ ಬಳಸಿರುವ ನ್ಯಾಯ ಎಂಬ ಪದವು ಪ್ರಜೆಗಳಿಗೆ ಸಾಮಾಜಿಕ ಆರ್ಥಿಕ ರಾಜಕೀಯ ನ್ಯಾಯವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಅದಕ್ಕಾಗಿ ಸಂವಿಧಾನದ ಮೂರನೇ ಭಾಗವಾದ ಮೂಲಭೂತ ಹಕ್ಕುಗಳಲ್ಲಿ ಮತ್ತು ನಾಲ್ಕನೇ ಭಾಗವಾದ ರಾಜನೀತಿ ನಿರ್ದೇಶಕ ತತ್ವಗಳಲ್ಲಿ ಜಾತಿ, ವರ್ಣ, ಜನಾಂಗ, ಧರ್ಮ, ಲಿಂಗ ಮುಂತಾದವುಗಳ ಆಧಾರದ ಮೇಲೆ ತಾರತಮ್ಯ ಮಾಡದೆ, ಎಲ್ಲ ನಾಗರಿಕರನ್ನು ಸಮಾನವಾಗಿ ಕಾಣಬೇಕು ಎಂದು ಹೇಳಲಾಗಿದೆ. ಹಾಗೂ ಲಿಂಗ ತಾರತಮ್ಯ ಹೋಗಲಾಡಿಸಲು ಸಮಾನ ಕೆಲಸಕ್ಕೆ ಸಮಾನ ವೇತನ ಎಂದು 39ಬಿ ಮತ್ತು 41ನೇ ವಿಧಿಯಲ್ಲಿ ಹೇಳಲಾಗಿದೆ. ಅಸ್ಪೃಶ್ಯತೆ ಆಚರಣೆ ಕಾನೂನು ಬಾಹಿರ ಮತ್ತು ಶಿಕ್ಷಾರ್ಹ ಅಪರಾಧ ಎಂದು ಹೇಳಲಾಗಿದೆ. ಇನ್ನು ಸಂವಿಧಾನದ ಪೂರ್ವ ಪೀಠಿಕೆಯಲ್ಲಿನ ಭ್ರಾತೃತ್ವ ಎಂಬ ಅಂಶವು ಭಾರತದ ಎಲ್ಲಾ ನಾಗರಿಕರಿಗೆ ವ್ಯಕ್ತಿಗನತೆಯನ್ನು ಖಾತ್ರಿಪಡಿಸಬೇಕು, ಮತ್ತು ಭಾರತದಲ್ಲಿ ಏಕತೆ ಮತ್ತು ಸಮಗ್ರತೆಯನ್ನು ಸಾಧಿಸಬೇಕು ಎಂಬ ಉದ್ದೇಶವನ್ನು ಹೊಂದಿದೆ. ಸಂವಿಧಾನದ 42ನೇ ತಿದ್ದುಪಡಿಯ ಮೂಲಕ 1976ರಲ್ಲಿ ಸಮಗ್ರತೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂಬ ಶಬ್ದವನ್ನು ಸಂವಿಧಾನದ ಪೂರ್ವ ಪೀಠಿಕೆಗೆ ಸೇರಿಸಲಾಗಿದೆ. ವಿಶ್ವಮಾನವ ಹಕ್ಕುಗಳ ಘೋಷಣೆಯ ಮೊದಲನೇ ವಿಧಿಕೂಡ, ಸಮಾನವಾಗಿ ಘನತೆ, ಸ್ವಾತಂತ್ರ್ಯ, ಸಮಾನತೆ ಮತ್ತು ಹಕ್ಕುಗಳನ್ನು ಎಲ್ಲಾ ಮಾನವರು ಹುಟ್ಟಿನಿಂದಲೇ ಪಡೆದಿದ್ದಾರೆ. ಮತ್ತು ಒಬ್ಬರು ಮತ್ತೊಬ್ಬರ ಬಗ್ಗೆ ಭ್ರಾತೃತ್ವ ಭಾವನೆಯಿಂದ ನಡೆದುಕೊಳ್ಳಬೇಕು ಎಂದು ಹೇಳಲಾಗಿದೆ. ಪ್ರಜಾಪ್ರಭುತ್ವದ ಜಾರಿಗೆ 21ನೇ ವಿಧಿಯು ವ್ಯಕ್ತಿಘನತೆಯನ್ನು ಖಾತ್ರಿಪಡಿಸುತ್ತದೆ. ಭಾರತದ ಸರ್ವೋಚ್ಚನ್ಯಾಯಾಲಯವು 2014ರಲ್ಲಿ "ನ್ಯಾಷನಲ್ ಲೀಗ್ ಸರ್ವೀಸ್ ಅಥಾರಿಟಿ ವಿರುದ್ಧ ಯೂನಿಯನ್ ಆಫ್ ಇಂಡಿಯಾ" ಎಂಬ ಕೇಸಿನಲ್ಲಿ ದ್ವಿಲಿಂಗಿಗಳನ್ನು ತೃತೀಯಲಿಂಗ ಎಂದು ಪರಿಗಣಿಸಬೇಕು, ಹಾಗೂ ಸಂವಿಧಾನದ ಮೂರನೇ ಭಾಗದಲ್ಲಿರುವ ಎಲ್ಲಾ ಮೂಲಭೂತ ಹಕ್ಕುಗಳು ತೃತೀಯ ಲಿಂಗಗಳಿಗೆ ಸಮಾನವಾಗಿ ಅನ್ವಯವಾಗುತ್ತವೆ. ತೃತೀಯ ಲಿಂಗದ ಜನರು ಕೂಡ ವ್ಯಕ್ತಿಗೌರವದ ಜೀವನ ಹೊಂದುವುದು ಅವಶ್ಯಕ, ಅದಕ್ಕೆ ಲಿಂಗವನ್ನು ಹೆಸರಿಸುವ ಸಂದರ್ಭದಲ್ಲಿ ಸ್ತ್ರೀ, ಪುರುಷ ಮತ್ತು ತೃತೀಯಲಿಂಗ ಎಂದು ಗುರುತಿಸಬೇಕು ಎಂಬ ನಿರ್ದೇಶನವನ್ನು ಸರ್ವೋಚ್ಚನ್ಯಾಯಾಲಯವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನೀಡಿದೆ. ಆದರೆ ಸಂವಿಧಾನದಲ್ಲಿ ಬರೆಯಲ್ಪಟ್ಟಿರುವ ಅಂಶಗಳು, ಮತ್ತು ನ್ಯಾಯಾಲಯದ ನಿರ್ದೇಶನಗಳು ಭಾರತವನ್ನು ಸಾಮಾಜಿಕ ಸಮಾನತೆ ಹೊಂದಿದ ಪ್ರಜಾಪ್ರಭುತ್ವ ರಾಷ್ಟ್ರವಾಗಿ ನಿರ್ಮಿಸಿವೆಯೇ ಎಂಬುದನ್ನ ಮತ್ತೆ ಪರೀಕ್ಷೆಗೆ ಒಳಪಡಿಸಬೇಕಿದೆ. ಕಾರಣ ಅಮೇರಿಕ ಮೂಲದ 'ಫ್ರೀಡಂ ಹೌಸ್' ಎಂಬ ಸರ್ಕಾರೇತರ ಸಂಸ್ಥೆ ನಡೆಸುವ "ಫ್ರೀಡಂ ಇನ್ ದಿ ವರ್ಲ್ಡ್ ಎಂಬ ಸಮೀಕ್ಷೆಯ 2022ನೇ ವರ್ಷದ ವರದಿಯ ಪ್ರಕಾರ" ಭಾರತವು ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ತನ್ನ ಪ್ರಜೆಗಳಿಗೆ ನೀಡುವ ವಿಷಯದಲ್ಲಿ ವಿಶ್ವದಲ್ಲಿ 66ನೇ ಸ್ಥಾನದಲ್ಲಿದೆ ಎಂದು ಹೇಳಲಾಗಿದೆ. ಇದರ ಪ್ರಕಾರ ಭಾರತವು ತನ್ನ ಎಲ್ಲಾ ಪ್ರಜೆಗಳಿಗೆ ಸಮಾನವಾಗಿ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಕಲ್ಪಿಸುವಲ್ಲಿ ಭಾಗಶಹ ಯಶಸ್ವಿಯಾಗಿದೆ ಎಂದು ಹೇಳಬಹುದು. ಹಾಗೆಯೇ "ವರ್ಲ್ಡ್ ಎಕನಾಮಿಕ್ ಫೋರಂನ ಗ್ಲೋಬಲ್ ಜಂಡರ್ ಗ್ಯಾಪ್ ಇಂಡೆಕ್ಸ್ 2022" ವರದಿಯಲ್ಲಿ ಭಾರತ 146 ರಾಷ್ಟ್ರಗಳಲ್ಲಿ 135ನೇ ಸ್ಥಾನದಲ್ಲಿದೆ. 2021 ರಲ್ಲಿ 156 ರಾಷ್ಟ್ರಗಳಲ್ಲಿ 140ನೇ ಸ್ಥಾನದಲ್ಲಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಸ್ವಲ್ಪ ಪ್ರಮಾಣದ ಬೆಳವಣಿಗೆ ಕಂಡಿದ್ದರು ರಾಷ್ಟ್ರೀಯ ಜನಸಂಖ್ಯೆಯ ಸುಮಾರು ಅರ್ಧದಷ್ಟು ಮಹಿಳೆಯರನ್ನು ಅಭಿವೃದ್ಧಿಯಿಂದ ದೂರ ಇಡುವುದು ಎಂದರೆ, ದೇಶವನ್ನೇ ಅಭಿವೃದ್ಧಿಯಿಂದ ದೂರವಿಟ್ಟಂತೆ. ಆದರೆ ಮಹಿಳೆಯ ಸ್ಥಾನಮಾನ ಭಾರತದಲ್ಲಿ ಇನ್ನೂ ಪರಾವಲಂಬಿಯಾಗಿಯೇ ಗುರುತಿಸಿಕೊಳ್ಳುತ್ತದೆ. ಸ್ತ್ರೀ ಭ್ರೂಣ ಹತ್ಯೆಯಿಂದ ಕೆಲಸದ ಸ್ಥಳದಲ್ಲಿನ ಶೋಷಣೆ ಮತ್ತು ತಾರತಮ್ಯದವರೆಗೆ ಎಲ್ಲ ಹಂತಗಳಲ್ಲಿ ಭಾರತೀಯ ಸ್ತ್ರೀ ದುರ್ಬಲವರ್ಗವಾಗಿಯೇ ಇದ್ದಾಳೆ. ನಮ್ಮ ರಾಷ್ಟ್ರದಲ್ಲಿ ಮಹಿಳಾ ಕಾರ್ಮಿಕ ಆದಾಯ ಕೇವಲ 18% ಇದೆ. ಇದು ವಿಶ್ವದಲ್ಲೇ ಅತಿ ಕಡಿಮೆ ಮಹಿಳಾ ಕಾರ್ಮಿಕ ಆದಾಯವಾಗಿದೆ. ದೇಶದಲ್ಲಿ 30% ಗಿಂತ ಹೆಚ್ಚು ಆದಾಯದ ಅಸಮಾನತೆಯು ಇನ್ನೂ ಜಾತಿ,ಧರ್ಮ,ಲಿಂಗ ಕೌಟುಂಬಿಕ ಹಿನ್ನೆಲೆಯನ್ನು ಆಧರಿಸಿ ಇದೆ. ಈಗಲೂ ನಮ್ಮ ದೇಶದಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಸಣ್ಣ ಮಗುವೊಂದು ನೀರಿನ ಮಡಿಕೆಯನ್ನು ಸ್ಪರ್ಶಿಸಿದ್ದಕ್ಕೆ ಇತ್ತೀಚೆಗೆ ರಾಜಸ್ಥಾನದಲ್ಲಿ ಶಾಲಾ ಶಿಕ್ಷಕ ಮಗುವನ್ನು ಹೊಡೆದ ಪರಿಣಾಮ ಆ ಮಗು ಸಾವನ್ನಪ್ಪಿದೆ. ಜಾತಿಯ ಆಧಾರದ ಮೇಲೆ ಇಂತಹ ಅಮಾನುಷ ಕೃತ್ಯಗಳು ಇನ್ನೂ ನಡೆಯುತ್ತಿರುವುದು ಭಾರತೀಯ ನಾಗರಿಕ ಸಮಾಜವನ್ನು ಅಣಕಿಸುವಂತಿದೆ. ದೇಶದ 60% ರಷ್ಟು ಕಾರ್ಮಿಕ ವರ್ಗ ಪಿಂಚಣಿ, ಪ್ರಾವಿಡೆಂಟ್‌ಫಂಡ್, ಆರೋಗ್ಯವಿಮೆ, ಜೀವವಿಮೆ ಮುಂತಾದ ಸಾಮಾಜಿಕ ಭದ್ರತೆ ಇಲ್ಲದೆ ಬದುಕುತ್ತಿದ್ದಾರೆ. ದೇಶದಲ್ಲಿ 31% ರಷ್ಟಿರುವ ಫ್ಯಾಮಿಲಿ ಹೆಲ್ಪ್ ವರ್ಕ್ ಫೋರ್ಸ್ ಅನ್ನು ರಾಷ್ಟ್ರೀಯ ವರ್ಕ್ ಫೋರ್ಸ್‌ನಲ್ಲಿ ಪರಿಗಣಿಸಿಲ್ಲ. ದೇಶದ 67% ನಷ್ಟು ಜನಸಂಖ್ಯೆ ಇನ್ನೂ ಕೂಡ ನೀರಿನ ಸೌಲಭ್ಯವನ್ನು ಹೊಂದಿಲ್ಲ. ಭಾರತವು ಬಯಲು ಶೌಚಮುಕ್ತ ರಾಷ್ಟ್ರ ಎಂದು ಘೋಷಿಸಿಕೊಂಡಿದ್ದರು, "ನ್ಯಾಷನಲ್ ಆನಿವಲ್ ರೂರಲ್ ಸ್ಯಾನಿಟೈಜೇಷನ್ ಸರ್ವೆ 2019–20"ರ ವರದಿಯ ಪ್ರಕಾರ ಭಾರತದ ಗ್ರಾಮೀಣ ಪ್ರದೇಶದಲ್ಲಿ ಇನ್ನೂ 0.8% ಜನರು ಶೌಚಾಲಯಗಳನ್ನು ಹೊಂದಿಲ್ಲ. ಇಷ್ಟೇ ಅಲ್ಲದೆ ಅಸಮಾನ ಪ್ರಾದೇಶಿಕ ಅಭಿವೃದ್ಧಿ, ಬೆಳೆಯುತ್ತಿರುವ ಗ್ರಾಮೀಣ ಮತ್ತು ಶಹರಗಳ ನಡುವಿನ ಸಾಮಾಜಿಕ ಹಾಗೂ ಆರ್ಥಿಕ ಅಂತರ, ಅಸಮಾನ ವೇತನ, ಧಾರ್ಮಿಕ ದಂಗೆಗಳು ಇವೆಲ್ಲವುಗಳ ಮಧ್ಯೆ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತ ನ್ಯಾಯದಾನದಲ್ಲೂ ವಿಳಂಬ ನೀತಿಗೆ ಹೆಸರಾಗಿದೆ. ಅಗಸ್ಟ್ ಎರಡು 2022 ರಂದು ಭಾರತದ ಕೇಂದ್ರ ಕಾನೂನು ಮತ್ತು ನ್ಯಾಯಮಂತ್ರಿಗಳು ನೀಡಿದ ವರದಿಯ ಪ್ರಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ 71411 ಕೇಸುಗಳು ಇತ್ಯರ್ಥವಾಗದೆ ಉಳಿದಿವೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಹೇಳುವಂತೆ ಜುಲೈ 2022 ರ ವರೆಗೆ ಭಾರತದಲ್ಲಿ 25 ಹೈಕೋರ್ಟ್‌ಗಳಲ್ಲಿ 59,55,907 ಕೇಸುಗಳು ಇತ್ಯರ್ಥವಾಗದೆ ಉಳಿದಿವೆ. ಮತ್ತು ಕೆಳನ್ಯಾಯಾಲಯಗಳಲ್ಲಿ 4.13 ಕೋಟಿ ಕೇಸುಗಳು ಇತ್ಯರ್ಥವಾಗದೆ ಉಳಿದಿವೆ. ಸುಮಾರು 1,82,000 ಕೇಸುಗಳು 30 ವರ್ಷಗಳಿಂದಲೂ ಇತ್ಯರ್ಥವಾಗದೆ ಉಳಿದಿದೆ. ವಿಳಂಬವಾಗಿ ದೊರೆಯುವ ನ್ಯಾಯದಿಂದ ನ್ಯಾಯ ದೊರೆತರೂ ನ್ಯಾಯವನ್ನು ನಿರಾಕರಿಸಿದಂತೆ ಇರುತ್ತದೆ ಎಂದು ಹೇಳಲಾಗುತ್ತದೆ. (Justice delayed is justice denied) ಇದಕ್ಕೆ ನ್ಯಾಯಾಂಗದಲ್ಲಿರುವ ನ್ಯಾಯಾಧೀಶರ ನೇಮಕದ ಕೊರತೆ ಮುಖ್ಯ ಕಾರಣ ಎಂದು ಹೇಳಲಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತವು ಇನ್ನೂ ಹೆಚ್ಚು ಸಂವೇದನಾಶೀಲವಾಗಿ ನಡೆದುಕೊಳ್ಳಬೇಕಿದೆ. ಒಂದೆಡೆ ದುರ್ಬಲ ವರ್ಗಗಳಲ್ಲಿ ಕೆಲವರು ತಮಗಿರುವ ವಿಶೇಷ ಕಾನೂನನ್ನು ಬಳಸಿಕೊಂಡು ಸುಳ್ಳುಕೇಸುಗಳನ್ನು ದಾಖಲಿಸುತ್ತಿದ್ದಾರೆ ಎಂದು ಹೇಳುವ ಸಂದರ್ಭದಲ್ಲಿಯೇ, ಎನ್‌ಸಿಆರ್‌ಬಿ ಕ್ರೈಂ ಇನ್ ಇಂಡಿಯಾ ವರದಿ 2020 ರ ಪ್ರಕಾರ ಭಾರತದಲ್ಲಿ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆಕಾಯ್ದೆ ಅಡಿಯಲ್ಲಿ ದಾಖಲಾದ 8138 ಕೇಸುಗಳಲ್ಲಿ 3588 ಕೇಸಗಳಲ್ಲಿ ಮಾತ್ರ ಅಪರಾಧ ಸಾಬೀತಾಗಿದೆ. ಮತ್ತು ಈ ವರದಿಯ ಪ್ರಕಾರ ಸುಮಾರು 12% ಕೇಸುಗಳು ಸುಳ್ಳು ಎಂದು ಪೊಲೀಸ ತನಿಖೆಯಿಂದ ನಿರ್ಧರಿಸುವುದು ವರದಿಯಾಗಿದೆ. ಮಹಿಳೆಯರು ಕೂಡ ಕೌಟುಂಬಿಕ ದೌರ್ಜನ್ಯ ತಡೆಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಲೈಂಗಿಕ ಕಿರುಕುಳ ಕಾಯ್ದೆ ಅಂತಹ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡಿರುವುದು ವರದಿಯಾಗಿದೆ ಇಂತಹ ಕೇಸುಗಳಲ್ಲಿ ಸುಮಾರು 10% ಕೇಸುಗಳು ಸುಳ್ಳು ಎಂದು ಎನ್‌ಸಿಆರ್‌ಬಿ ರಿಪೋರ್ಟ್‌ನಲ್ಲಿ ಹೇಳಲಾಗಿದೆ. ದುರ್ಬಲ ವರ್ಗಗಳನ್ನು ಶೋಷಣೆಯಿಂದ ರಕ್ಷಿಸಲು ರಚಿಸಿರುವ ಕಾಯ್ದೆಗಳನ್ನು ಕೆಲವರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ, ಮತ್ತೊಂದೆಡೆ ಜಾತಿ ಹಾಗೂ ಲಿಂಗದ ಆಧಾರದ ಮೇಲೆ ಅಪರಾಧಗಳು ನಡೆದು ನಾಗರಿಕ ಸಮಾಜ ತಲೆತಗ್ಗಿಸುವಂತಹ ಸಂದರ್ಭಗಳಿವೆ. ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯೂರೋ ವರದಿಯ ಪ್ರಕಾರ ಕಳೆದ ವರ್ಷ 45,852 ಅಪರಾಧಗಳು ಜಾತಿ ಮತ್ತು ಲಿಂಗದ ಆಧಾರದ ಮೇಲೆ ನಡೆದಿವೆ. ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯೂರೋ ಪ್ರಕಾರ ಕಳೆದ ವರ್ಷಕ್ಕಿಂತ (2020) ಈ ವರ್ಷ (2021) 70.7% ನಷ್ಟು ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿವೆ, ರಾಷ್ಟ್ರೀಯ ಮಹಿಳಾ ಆಯೋಗ 2020ರಲ್ಲಿ 31 ಸಾವಿರ ಕೇಸುಗಳನ್ನು ಸ್ವೀಕರಿಸಿದೆ. ಇದು ಹಳೆಯ ದಾಖಲೆಗಿಂತ 30% ಹೆಚ್ಚು. ನ್ಯಾಷನಲ್ ಸರ್ವೆ ಆಫ್ ಇಂಡಿಯಾ ಪ್ರಕಾರ ಭಾರತದಲ್ಲಿ 77.7% ನಷ್ಟು ಸಾಕ್ಷರತೆ ಇದೆ. ಆದರೆ ಸಾಕ್ಷರತೆಯ ಪ್ರಮಾಣಕ್ಕೂ ಉದ್ಯೋಗ ಪ್ರಮಾಣಕ್ಕೂ ವ್ಯತ್ಯಾಸವಿರುವುದು ಸಾಮಾಜಿಕ ಅಸಮಾನತೆಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಾರಣವಾಗಿದೆ. ಇಷ್ಟೇ ಅಲ್ಲದೆ ಬಾಲಕಾರ್ಮಿಕ ಪದ್ಧತಿ, ಸ್ತ್ರೀಭ್ರೂಣಹತ್ಯೆ, ಬುಡಕಟ್ಟು ಜನಾಂಗಗಳ ನಿರ್ಲಕ್ಷ, ಹಿರಿಯನಾಗರಿಕರ ಸಮಸ್ಯೆಗಳು, ಸ್ವಜನಪಕ್ಷಪಾತದಂತಹ ಸಾಮಾಜಿಕ ಸಮಸ್ಯೆಗಳನ್ನು ಭಾರತ ಎದುರಿಸುತ್ತಿದೆ.

"ನ್ಯಾಷನಲ್ ಎಲೆಕ್ಷನ್ ವಾಚ್ ಅಂತ್ ಅಸೋಸಿಯೇಶನ್ ಫಾರ್ ಡೆಮಾಕ್ರೆಡಿಟ್ ರಿಫಾರ್ಮರ್ಸ್" ಸಮೀಕ್ಷೆಯ ವರದಿಯ ಪ್ರಕಾರ ಭಾರತದ 40% ನಷ್ಟು ಜನಪ್ರತಿನಿಧಿಗಳ ವಿರುದ್ಧ ಕ್ರಿಮಿನಲ್ ಕೇಸ್‌ಗಳಿವೆ ಮತ್ತು 12% ರಷ್ಟು ಜನಪ್ರತಿನಿಧಿಗಳ ಮೇಲೆ ಗಂಭೀರ ಸ್ವರೂಪದ ಕ್ರಿಮಿನಲ್ ಕೇಸುಗಳಿವೆ. ಈವರದಿಯ ಪ್ರಕಾರ 2018 ಮತ್ತು 2022ರ ನಡುವೆ ಭಾರತದಲ್ಲಿ ನಡೆದ ವಿವಿಧ ಚುನಾವಣೆಗಳಲ್ಲಿ 1.29 ಕೋಟಿ ಮತಗಳು ನೋಟಾಗೆ ಬಿದ್ದಿವೆ. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಆದಾಯ ಮತ್ತು ಸಂಪತ್ತು ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಗೆ ಏರುತ್ತಿದೆ. ಚುನಾವಣಾ ಭ್ರಷ್ಟಾಚಾರ ಕೂಡ ಭಾರತದಲ್ಲಿ ವರದಿಯಾಗುತ್ತಿವೆ. ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲದಿರುವುದು, ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಸಮಾನ ಪ್ರಾತಿನಿಧ್ಯ ಸಿಗದೇ ಇರುವುದು, ರಾಜಕೀಯ ಪಕ್ಷಗಳಲ್ಲಿರುವ ಕುಟುಂಬ ರಾಜಕಾರಣ, ಪಕ್ಷಾಂತರ ಮುಂತಾದ ಸಮಸ್ಯೆಗಳು ಭಾರತದಲ್ಲಿ ಎಲ್ಲಾ ಪ್ರಜೆಗಳಿಗೆ ಸಮಾನ ರಾಜಕೀಯ ಅವಕಾಶ ದೊರೆಯುವಲ್ಲಿ ತೊಡಕುಗಳಾಗಿವೆ.

2021 ಕರಪ್ಷನ್ ಪರಸ್ಪ್ಶನ್ ಇಂಡೆಕ್ಸ್ ಟ್ರಾನ್ಸಫರೆನ್ಸಿ ಇಂಟರ್‌ನ್ಯಾಷನಲ್ ವರದಿಯ ಪ್ರಕಾರ ರಾಷ್ಟ್ರಗಳಲ್ಲಿ ಭಾರತವು ಭ್ರಷ್ಟಾಚಾರದಲ್ಲಿ 85ನೇ ಸ್ಥಾನದಲ್ಲಿದೆ ಎಂಬುದು ಸಮಾಧಾನದ ವಿಷಯವಾದರೂ ಕೂಡ ಭ್ರಷ್ಟಾಚಾರ ಮುಕ್ತ ಭಾರತ ಪ್ರಜಾಪ್ರಭುತ್ವದ ಜಾರಿಗೆ ಅಗತ್ಯವಾಗಿದೆ.

ಪ್ರಕ್ರಿಯಾತ್ಮಕ ಪ್ರಜಾಪ್ರಭುತ್ವವನ್ನು ಹೊಂದಿರುವ ಭಾರತ ಸ್ವಾತಂತ್ರೋತ್ಸವದ 75ರ ಸಂದರ್ಭದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆ ಇರುವ ಪ್ರಜಾಪ್ರಭುತ್ವ ಹೊಂದುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂಬ ಊಹೆಯೂ ಈ ಚರ್ಚೆಯಿಂದ ಸಾಬೀತಾಗುತ್ತದೆ ಎಂದು ಮೇಲಿನ ವರದಿಗಳ ಆಧಾರದ ಮೇಲೆ ಹೇಳಬಹುದು. ಆದರೆ, ಭಾರತದಂತಹ ಬೃಹತ್, ವೈವಿಧ್ಯಮಯ ರಾಷ್ಟ್ರಕ್ಕೆ ಸಂಪೂರ್ಣ ಪ್ರಜಾಪ್ರಭುತ್ವ ಸಾಧಿಸಲು 75 ವರ್ಷಗಳು ಒಂದು ಸಣ್ಣ ಅವಧಿ ಎಂದೇ ಹೇಳಬಹುದು. ಸಂವಿಧಾನದ ಆಶಯದಂತೆ ಈ ಉದ್ದೇಶ ಇಡೇರಿಸಲು ಸರ್ಕಾರ ಮತ್ತು ಪ್ರಜೆಗಳು ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಅಗತ್ಯವಿದೆ.

## ಉಪಸಂಹಾರ

ಭಾರತದ ಸಂವಿಧಾನ ರಚನಾಕಾರರು ಪ್ರಜಾಪ್ರಭುತ್ವ ರಾಷ್ಟ್ರವನ್ನು ನಿರ್ಮಿಸುವ ಮೂಲಕ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಈ ಉದ್ದೇಶ ಸಾಧನೆಗಾಗಿ ಭಾರತದಲ್ಲಿ ಅರೆ ಸಂಯುಕ್ತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಾರಂಭದಲ್ಲಿ ಸಂವಿಧಾನ ರಚನಾಕಾರರು ಸಂಯುಕ್ತ ವ್ಯವಸ್ಥೆಯ ಪರವಾಗಿಯೇ ಇದ್ದರು, ಆದರೆ ಭಾರತದಲ್ಲಿ ಏಕತೆ, ಸಮಗ್ರತೆ ಮತ್ತು ಭ್ರಾತೃತ್ವವನ್ನು ಸಾಧಿಸಲು ಜಾತಿ ಹಾಗೂ ಲಿಂಗ ತಾರತಮ್ಯವನ್ನು ನಿರ್ಮೂಲನೆಗೊಳಿಸಲು ಭಾರತಕ್ಕೆ ಸ್ವಲ್ಪಮಟ್ಟಿಗೆ ಕೇಂದ್ರಿಕೃತ ಅಧಿಕಾರದ ಅಗತ್ಯವಿದೆ ಎಂದು ಡಾ. ಬಿ. ಆರ್. ಅಂಬೇಡ್ಕರ್‌ರವರು ಹಾಗೂ ಪಂಡಿತ್ ಜವಾಹರಲಾಲ್ ನೆಹರೂ ಅವರು ಅಭಿಪ್ರಾಯಪಟ್ಟಿದ್ದರು. ಆ ಕಾರಣಕ್ಕಾಗಿ ಹೆಚ್ಚು ಅಧಿಕಾರಗಳನ್ನು ಹೊಂದಿರುವ ಕೇಂದ್ರಸರ್ಕಾರದ ರಚನೆಯನ್ನು ಬೆಂಬಲಿಸಿದರು. ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರ, ನ್ಯಾಯಾಂಗ ವ್ಯವಸ್ಥೆ ಸಂವಿಧಾನದ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿಹಿಡಿದು ಸಾಮಾಜಿಕ ಆರ್ಥಿಕ ರಾಜಕೀಯ ಸಮಾನತೆ ಹೊಂದಿದ ಸಮಾಜ ನಿರ್ಮಿಸಲು ಪ್ರಯತ್ನಿಸುತ್ತಿದ್ದರು ಕೂಡಾ ಇನ್ನೂ ಪ್ರಬಲ ಇಚ್ಛಾಶಕ್ತಿಯ ಅವಶ್ಯಕತೆ ಇದೆ. ಪ್ರಕ್ರಿಯಾತ್ಮಕ ಪ್ರಜಾಪ್ರಭುತ್ವದಿಂದ ವಸ್ತುನಿಷ್ಠ ಪ್ರಜಾಪ್ರಭುತ್ವದ ಕಡೆಗೆ ಸಾಗಲು ಭಾರತದ ಪ್ರಜಾಪ್ರತಿನಿಧಿಗಳು, ಆಡಳಿತಗಾರರು ಹಾಗೂ ಪ್ರಜೆಗಳು ಸಂವಿಧಾನವನ್ನು ಅರ್ಥೈಸಿಕೊಂಡು, ಸಂವಿಧಾನಕ್ಕೆ ಅನುಗುಣವಾಗಿ ತಮ್ಮ ಹಕ್ಕುಗಳನ್ನು ಹೊಂದಿ ಕರ್ತವ್ಯಗಳನ್ನು ಪಾಲಿಸಬೇಕಿದೆ. ಕೃಷಿ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಿಗೆ ಹೆಚ್ಚಿನ ಬೆಂಬಲ ನೀಡುವ ಅಗತ್ಯವಿದೆ. ಔಪಚಾರಿಕ ಶಿಕ್ಷಣದ ಜೊತೆಗೆ ಅನೌಪಚಾರಿಕ ಶಿಕ್ಷಣ, ಸಾಮಾಜಿಕ ಮೌಲ್ಯಗಳು, ಮಾನವೀಯತೆ, ಸಹಾನುಭೂತಿ, ವ್ಯಕ್ತಿಗೌರವಕ್ಕೆ ಮನ್ನಣೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಭಾರತವು ಹೆಚ್ಚು ಸಂವೇದನಾಶೀಲವಾಗಿ ವರ್ತಿಸುವ ಮೂಲಕ ಸಮಗ್ರ ಪ್ರಜಾಪ್ರಭುತ್ವ ನಿರ್ಮಿಸುವ ಪ್ರಯತ್ನವನ್ನು ಮಾಡಬೇಕಿದೆ. ಗಾಂಧೀಜಿಯವರ ಕನಸಿನಂತೆ ಅಂತ್ಯೋದಯ ಸಾಧ್ಯವಾದಾಗಲೇ ಸಮಾನತೆ ಹೊಂದಿದ ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರಜಾಪ್ರಭುತ್ವ ಸಾಕಾರಗೊಳ್ಳುತ್ತದೆ.

## ಪರಾಮರ್ಶನ ಗ್ರಂಥಗಳು


- **ಡಾ. ಎಚ್.ಎಮ್. ರಾಜಶೇಖರ (2015) :** "ಭಾರತ ಸಂವಿಧಾನ ಮತ್ತು ಸರ್ಕಾರ" ಮೈಸೂರು ಕಿರಣ ಪ್ರಕಾಶನ, 14ನೇ ಪರಿಷ್ಕೃತ ಆವೃತ್ತಿ.
- **Louise Tillin (2019) :** "Indian Federalism" London Oxford University Press.
- **M P Singh (2022) :** "Federalism in India" New Delhi Sage Publications,
- **Mokbul Ali Laskar (2015) :** "Dynamics of Indian Federalism" New Delhi Notion Press Publisher.
- **Bidyut Chakrabarty (2014) :** "Coalition Politics in India" New Delhi Oxford University Press.
- **E. Sridharan (2019) :** "Coalition Politics in India: Selected Issues at the Centre and the States" Academic Foundations Publication, Kolkata. 2014. New Delhi Lexis Nexis Publication.
- **D D Basu (2019) :** "Introduction to the Constitution of India" New Delhi Lexis Nexis Publication.
- https://www.livelaw.in/top-stories/over-71000-cases-pending-in-supreme-court-59-lakhs-in-high-courts-law-minister-tells-rajya-sabha-205784
- https://indianexpress.com/article/opinion/columns/the-inequality-epidemic-india-wealth-billionaires-7746491/
- https://www.epw.in/journal/2022/32/special-articles/socio-economic-inequality-longevity-india.html
- https://theconversation.com/the-multiple-faces-of-inequality-in-india-182074
- https://www.nextias.com/current-affairs/18-06-2022/criminalization-of-politics
- https://scroll.in/article/1023171/mukhtar-abbas-naqvi-claims-india-has-seen-no-major-communal-riot-in-7-8-years-how-wrong-is-he
- https://www.lawyersclubindia.com/articles/concept-of-social-justice-under-indian-constitution-3685.asp
- https://freedomhouse.org/country/india/freedom-world/2022
- https://m.economictimes.com/news/economy/indicators/india-amongst-the-most-unequal-countries-in-the-world-report/articleshow/88141807.cms


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ತೃತೀಯ ಲಿಂಗಿಗಳ ಪ್ರಸ್ತುತ ಶಿಕ್ಷಣ, ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳು

✍ **ಪ್ರಕಾಶ.** ಸಿ. ಸಂಶೋಧನಾರ್ಥಿ, ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

✍ **ಡಾ. ಜಗನ್ನಾಥ ಕೆ. ಡಾಂಗೆ,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

*ಸಾರಾಂಶ*

*ಭಾರತ ದೇಶ ಪ್ರಜಾಪ್ರಭುತ್ವ ದೇಶವಾಗಿದೆ ಮತ್ತು ಪ್ರತಿಯೊಬ್ಬ ಪ್ರಜೆಗೂ ಸಮಾನ ಅವಕಾಶ ಕಲ್ಪಿಸುವುದು ಭಾರತೀಯ ಸಂವಿಧಾನದ ಆಶಯವಾಗಿದೆ. ಜಾತಿ, ಧರ್ಮ ಅಥವಾ ಲಿಂಗವನ್ನು ಲೆಕ್ಕಿಸದೆ ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಮತ್ತು ಸಾಧಿಸುವುದು ಪ್ರತಿಯೊಬ್ಬರಿಗೂ ಭಾರತೀಯ ಸಂವಿಧಾನದಲ್ಲಿ ಅವಕಾಶವಿದೆ. ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದ ಅಭಿವೃದ್ಧಿಗೆ ಶಿಕ್ಷಣ ಅತ್ಯಗತ್ಯವಾಗಿದೆ. ಇಂತಹ ಶಿಕ್ಷಣವು ಜಾತಿ, ಧರ್ಮ, ಲಿಂಗಗಳ ತಾರತಮ್ಯವಿಲ್ಲದೆ ಸರ್ವರಿಗೂ ಸಲ್ಲಬೇಕಾಗಿದೆ. ಲಿಂಗಗಳ ಆಧಾರದ ಮೇಲೆ ನೋಡುವುದಾದರೆ ಮಂಗಳಮುಖಿಯರು ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ಮಂಗಳಮುಖಿಯರನ್ನು ಸರ್ಕಾರವು ತೃತೀಯ ಲಿಂಗಕ್ಕೆ ಸೇರಿಸಿದೆ. 2011ರ ಜನಗಣತಿಯ ಪ್ರಕಾರ, ಭಾರತದಲ್ಲಿ ಸುಮಾರು 4.9 ಲಕ್ಷತೃತೀಯ ಲಿಂಗಿಗಳು ಇದ್ದಾರೆ. ಮಂಗಳಮುಖಿ ಎಂದರೆ – "ಹೆಣ್ಣು ಅಲ್ಲದ ಗಂಡು ಅಲ್ಲದ ಒಂದು ವ್ಯಕ್ತಿಯ ಮನಃಸ್ಥಿತಿ". 'ತೃತೀಯ ಲಿಂಗ' ಅಥವಾ 'ಮಂಗಳಮುಖಿ' ಎನ್ನುವ ಪರಿಭಾಷೆಗಳು ಇತ್ತೀಚೆಗೆ ಅಧಿಕೃತವಾಗಿ ಮತ್ತು ಹೆಚ್ಚಾಗಿ ಬಳಕೆಯಾಗುತ್ತಿವೆ. ಈ ಪದಗಳ ಬಳಕೆಗಿಂತ ಮುಂಚೆ ಇಂತಹವರನ್ನು ನಪುಂಸಕ, ಚಕ್ಕ, ಕೋಜಾ, ಹಿಜ್ರಾ, ಚನ್ನಪಟ್ಟಣ, ದ್ವಿಲಿಂಗಿ, ಶಿಖಂಡಿ ಮುಂತಾದ ಪದಗಳು ಬಳಕೆಯಾಗುತ್ತಿದ್ದವು. ಹಿಜರಾ ಎನ್ನುವುದಕ್ಕೆ ಪರ್ಷಿಯನ್ ಭಾಷೆಯಲ್ಲಿ ವಲಸೆ ಹೋಗುವವರು ಎನ್ನುವ ಅರ್ಥವಿದೆ. ತೃತೀಯ ಲಿಂಗಿಗಳಿಗೆ ಪ್ರಸ್ತುತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡಲಾಗುತ್ತಿದೆ. ಆದರೂ ಸಹ ಇತರೆ ಮಕ್ಕಳಂತೆ ಸೂಕ್ತ ಕಲಿಕಾ ವಾತಾವರಣ, ಸಮಾನ ಕಲಿಕಾ ಅವಕಾಶಗಳು ಮತ್ತು ಸ್ವಂತ ಅಭಿಪ್ರಾಯ, ಭಾವನೆಗಳಿಗೆ ಮುಕ್ತ ಮತ್ತು ಸೂಕ್ತ ಮನ್ನಣೆ ನೀಡಲಾಗುತ್ತಿಲ್ಲ ಎಂಬ ಸಂಗತಿಯು ನಾಗರಿಕ ಸಮಾಜವನ್ನು ತಲೆ ತಗ್ಗಿಸುವಂತೆ ಆಗಿದೆ. ತೃತೀಯ ಲಿಂಗಿಗಳು ಸಂಸ್ಕೃತಿಕ ಭಾಗವಹಿಸುವಿಕೆ, ಕುಟುಂಬ ಮತ್ತು ಸಮಾಜದಿಂದ ದೂರವಿರುತ್ತಾರೆ. ತೃತೀಯ ಲಿಂಗಿಗಳಿಗೆ ಸರಿಯಾದ ಶಿಕ್ಷಣ, ಉದ್ಯೋಗವಿಲ್ಲದೆ ಬೀದಿಯಲ್ಲಿ ಭೀಕ್ಷೆ ಬೇಡಿ ದೈನಂದಿನ ಜೀವನ ನಡೆಸುವಂತೆ ಆಗಿದೆ. ತೃತೀಯ ಲಿಂಗಿಗಳಿಗೂ ಸಮಾಜದಲ್ಲಿ ಎಲ್ಲರಂತೆ ಬದುಕುವ ಹಕ್ಕು ಇದೆ. ಮಂಗಳಮುಖಿಯರೆಂದು ಹೀಯಾಳಿಸಿ, ತಾತ್ಸಾರ ಮನೋಭಾವನೆಯಿಂದ ಕಾಣುವುದನ್ನು ಬಿಡಬೇಕು. ನಾಗರಿಕ ಸಮಾಜ ಮಾನವೀಯತೆ ದೃಷ್ಟಿಯಿಂದ ಒಪ್ಪಿಕೊಂಡು ಗೌರವಯುತವಾಗಿ ಬದುಕಲು ಅವಕಾಶ ಮಾಡಿಕೊಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಶೈಕ್ಷಣಿಕ ನೀತಿಗಳು, ಜಾಗೃತಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರೂ ಸಹ ಮಾಹಿತಿ ಕೊರತೆ, ಅಧಿಕಾರಿಗಳ ಉದಾಸಿನತೆ ಕಾಣುತ್ತಿದೆ. ತೃತೀಯ ಲಿಂಗಿಗಳು ವಲಸೆ ಹೋಗುವ ಕಾರಣ ಯಾವುದೇ ಕಾರ್ಯಕ್ರಮಗಳು ನಿರೀಕ್ಷಿತ ಮಟ್ಟದಲ್ಲಿ ತಲುಪುತ್ತಿಲ್ಲ. ಈ ಲೇಖನವು ತೃತೀಯ ಲಿಂಗಿಗಳ ಪ್ರಸ್ತುತ ಶಿಕ್ಷಣ, ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳ ಕುರಿತು ಬೆಳಕು ಚೆಲ್ಲುತ್ತಿದೆ. ಅದರೊಂದಿಗೆ ತೃತೀಯ ಲಿಂಗಿಗಳು ವೃತ್ತಿ ಶಿಕ್ಷಣ ಸೇರಿದ್ದಂತೆ ಮುಖ್ಯವಾಹಿನಿಯ ಶಿಕ್ಷಣಕ್ಕೆ ಯಾವುದೇ ಅಡಚಣೆಗಳು ಇಲ್ಲದೆ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಸಂಘ ಸಂಸ್ಥೆಗಳು, ಸಮಾಜ ಮತ್ತು ಸರ್ಕಾರದ ಕರ್ತವ್ಯವಾಗಿದೆ ಎಂದು ತಿಳಿಸುತ್ತದೆ.*

*ಪ್ರಮುಖ ಪದಗಳು : ಮಂಗಳಮುಖಿ, ತೃತೀಯ ಲಿಂಗಿಗಳು, ಸಮನ್ವಯತೆ, ಮುಖ್ಯವಾಹಿನಿ*

## ಪೀಠಿಕೆ

ಮಂಗಳಮುಖಿ ಎಂದರೆ ಹೆಣ್ಣು ಅಲ್ಲದ ಗಂಡು ಅಲ್ಲದ ಒಂದು ಮನಃಸ್ಥಿತಿ. 'ತೃತೀಯ ಲಿಂಗ' ಅಥವಾ 'ಮಂಗಳಮುಖಿ' ಎನ್ನುವ ಪರಿಭಾಷೆಗಳು ಇತ್ತೀಚೆಗೆ ಅಧಿಕೃತವಾಗಿ ಮತ್ತು ಹೆಚ್ಚಾಗಿ ಬಳಕೆಯಾಗುತ್ತಿವೆ. ಈ ಪದಗಳ ಬಳಕೆಗಿಂತ ಮುಂಚೆ ಇಂತವರನ್ನು ನಪುಂಸಕ, ಚಕ್ಕ, ಕೋಜಾ, ಹಿಜ್ರಾ, ಚನ್ನಪಟ್ಟಣ, ದ್ವಿಲಿಂಗಿ, ಶಿಖಂಡಿ ಮುಂತಾದ ಪದಗಳು ಬಳಕೆಯಾಗುತ್ತಿದ್ದವು. 'ಹಿಜರಾ' ಎನ್ನುವುದಕ್ಕೆ ಪರ್ಷಿಯನ್ ಭಾಷೆಯಲ್ಲಿ 'ವಲಸೆ ಹೋಗುವವರು' ಎನ್ನುವ ಅರ್ಥವಿದೆ. (ಅಕ್ಕಯ್ ಪದ್ಮಶಾಲಿ 2021).'ತೃತೀಯ ಲಿಂಗ' ಎಂಬ ಪದವು ಲೈಂಗಿಕ ದೃಷ್ಟಿಕೋನ ಅಥವಾ ದೈಹಿಕ ಲೈಂಗಿಕ ಗುಣಲಕ್ಷಣಗಳನ್ನು ಒಳಗೊಂಡಿಲ್ಲ, ಆದರೆ ವಾಸ್ತವವಾಗಿ ಲಿಂಗ ಗುರುತಿಸುವಿಕೆ ಮತ್ತು ಲಿಂಗ ಅಭಿವ್ಯಕ್ತಿಗೆ ಸಂಬಂಧಿಸಿದ ವೈದ್ಯಕೀಯ ಪದವಾಗಿದೆ. 'ತಾವು ಇರುವ ಕತ್ತಲೆಯನ್ನು ಅರಿಯದವರು ಬೆಳಕಿಗಾಗಿ ಎಂದೂ ಹುಡುಕುವುದಿಲ್ಲ. ಉತ್ತಮ ಶಿಕ್ಷಣ ಈ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ'. – "ಡಾ. ಬಿ. ಆರ್. ಅಂಬೇಡ್ಕರ್"ರವರ ಆಶಯದಂತೆ ತೃತೀಯ ಲಿಂಗಿಗಳು ಸುಶಿಕ್ಷಿತರಾಗುವುದರಿಂದ ಬಡತನ, ಭೀಕ್ಷಾಟನೆ, ನಿರುದ್ಯೋಗ ಎಂಬ ಕತ್ತಲೆಯಿಂದ ಹೊರಬಂದು ಶೈಕ್ಷಣಿಕ ಹಾಗೂ ಆರ್ಥಿಕ ಸಬಲತೆಯನ್ನು ಸಾಧಿಸಬಹುದು. (ಅಗರ್ವಾಲ್ ಮತ್ತು ಸೌಮ್ಯ. 2015). "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ನಾಣ್ನುಡಿಯಂತೆ ತೃತೀಯ ಲಿಂಗಿಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕಾಗಿದೆ. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಸದೃಢತೆಯನ್ನು ಸಮನಾಗಿ ಸಾಧಿಸಬೇಕಾಗಿದೆ. ಸಮ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ ಶೈಕ್ಷಣಿಕವಾಗಿ, ವ್ಯಕ್ತಿಗತವಾಗಿ ಬಲಗೊಳಿಸಬೇಕು. ಏಕೆಂದರೆ ಶಿಕ್ಷಣ ಒಂದೇ ಮನುಷ್ಯನಲ್ಲಿ ವಿಶಾಲ ಮನೋಭಾವವನ್ನು ಮೂಡಿಸುವಂತಹದ್ದು. ಆದರೆ, ಪ್ರಸ್ತುತ ಸಂದರ್ಭದಲ್ಲಿ ತೃತೀಯ ಲಿಂಗಿಗಳು ಶಾಲಾ ಕಾಲೇಜುಗಳಲ್ಲಿ ಈ ಕೆಳಕಂಡ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳೆಂದರೆ –

## ಶಿಕ್ಷಣ ಪಡೆಯುವಲ್ಲಿ ತೃತೀಯ ಲಿಂಗಿಗಳು ಎದುರಿಸುತ್ತಿರುವ ಸಮಸ್ಯೆಗಳು (Problems of transgender in education )

**1. ಕ್ಯಾಂಪಸ್‌ನಲ್ಲಿ ಅಸುರಕ್ಷತೆ** (No safety on campus) **:** ತೃತೀಯ ಲಿಂಗಿಗಳಿಗೆ ಕಾಲೇಜಿನ ಆವರಣದಲ್ಲಿ ಇತರರಿಗಿಂತ ನಡೆನುಡಿಗಳು ಭಿನ್ನವಾಗಿರುವ ಕಾರಣ ತಮ್ಮ ಸಹಪಾಠಿಗಳಿಂದ ದೈಹಿಕ, ಮಾನಸಿಕ ಕಿರುಕುಳ ಎದುರಿಸುತ್ತಾರೆ.(ಚಂದ್ರ, ಎಸ್. 2017). ಕಾಲೇಜಿನ ಕ್ಯಾಂಪಸಗಳು ತೃತೀಯ ಲಿಂಗಿಗಳ ಮೇಲೆ ನಡೆಯುವ ದೈಹಿಕ ಮತ್ತು ಮಾನಸಿಕ ಕಿರುಕುಳಗಳಿಂದ ಮುಕ್ತವಾಗಿಲ್ಲ ಹಾಗೂ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ಅಧ್ಯಾಪಕರ ಮತ್ತು ಸಿಬ್ಬಂದಿಗಳಿಂದ ಪ್ರೋತ್ಸಾಹ ದೊರಕುತ್ತಿಲ್ಲ.

**2. ತಾರತಮ್ಯ ನೀತಿಗಳು** (Discrimination policies) : ಪ್ರಸ್ತುತ ನೀತಿಗಳು ಸಾಮಾನ್ಯವಾಗಿ ಲಿಂಗಾಧಾರಿತವಾಗಿರುತ್ತವೆ. ಶಿಕ್ಷಣ ತಜ್ಞರು ನೀತಿಗಳನ್ನು ರಚಿಸುವಾಗ ತೃತೀಯ ಲಿಂಗಿಗಳನ್ನು ಹೆಚ್ಚಿನದಾಗಿ ಗಮನದಲ್ಲಿಟ್ಟುಕೊಂಡು ನೀತಿಗಳನ್ನು ಜಾರಿಗೊಳಿಸುವುದಿಲ್ಲ, ಆದ್ದರಿಂದ ಹಲವು ನೀತಿಗಳು ತೃತೀಯ ಲಿಂಗಿಗಳಿಗೆ ಅನ್ವಯಿಸುವುದಿಲ್ಲ. ಈ ತಾರತಮ್ಯದ ನೀತಿಗಳಿಂದ ತೃತೀಯ ಲಿಂಗದ ವಿದ್ಯಾರ್ಥಿಗಳು ಶೋಷಣೆ ಮತ್ತು ಕಹಿ ಕಲಿಕಾ ಅನುಭವವನ್ನು ಅನುಭವಿಸುತ್ತಾರೆ. ಈ ತಾರತಮ್ಯದ ನೀತಿಗಳು ತೃತೀಯ ಲಿಂಗಿಗಳ ಮಾನಸಿಕ ಮತ್ತು ದೈಹಿಕ ಸ್ಥೈರ್ಯವನ್ನು ಕುಂಠಿತಗೊಳಿಸುವುದಲ್ಲದೆ, ತಾವು ಇತರ ವಿದ್ಯಾರ್ಥಿಗಳಿಗಿಂತ ಕೀಳು ಎಂಬ ಭಾವನೆ ಮೂಡಿಸುತ್ತದೆ.

**3. ಶಾಲಾ/ಕಾಲೇಜು ದಾಖಲೆಗಳಲ್ಲಿ ಲಿಂಗ ತಾರತಮ್ಯ** (Gender discriminations on collage records) : ತೃತೀಯ ಲಿಂಗಿಗಳು ಶಾಲಾ /ಕಾಲೇಜು ದಾಖಲಾಗುವ ಸಂದರ್ಭದಲ್ಲಿ ನೋಂದಣಿ ಅರ್ಜಿ ಭರ್ತಿ ಮಾಡುವಾಗ ಹೆಣ್ಣು ಅಥವಾ ಗಂಡು ಎಂಬ ಕಾಲಂಗಳಷ್ಟೇವಿರುವುದನ್ನು ಗಮನಿಸಿ ತಮ್ಮದು ಭಿನ್ನ ಲಿಂಗವೆಂದು ತಿಳಿದು ಮುಜುಗರ ಕೊಳ್ಳಪಡುವುದಲ್ಲದೆ ಹಾಗೂ ಅಧ್ಯಾಪಕರು, ಸಿಬ್ಬಂದಿ ವರ್ಗದವರು ಪ್ರವೇಶ ನಿರಾಕರಿಸುತ್ತಾರೆ. (ಸೆರಾಹ್ ಜೆಬಕಾನಿ, ಎನ್. 2013). ಕೆಲವೊಮ್ಮೆ ಪ್ರವೇಶಾತಿ ದೊರಕಿದರು, ಜನಗಣತಿ ಸಂದರ್ಭದಲ್ಲಿ ತೃತೀಯ ಲಿಂಗಿಗಳ ಬಗ್ಗೆ ಸರಿಯಾದ ಅಂಕಿ–ಅಂಶಗಳು ನೀಡದೆ ಇರುವುದರಿಂದ ಅವರನ್ನು ಸರ್ಕಾರದ ಸೌಲಭ್ಯಗಳಿಂದ ವಂಚಿತರನ್ನಾಗಿಸುತ್ತಾರೆ. ಶಿಕ್ಷಣ ವ್ಯವಸ್ಥೆಯಲ್ಲದೆ ಇತರೆರಂಗದಲ್ಲೂ ತೃತೀಯ ಲಿಂಗಿಗಳು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳೆಂದರೆ–

## ತೃತೀಯ ಲಿಂಗದ ವಿದ್ಯಾರ್ಥಿಗಳು ಎದುರಿಸುವ ಇತರೆ ಸಮಸ್ಯೆಗಳು (Problems faced by transgender students)

ತೃತೀಯ ಲಿಂಗದ ವಿದ್ಯಾರ್ಥಿಗಳು ಪ್ರತಿದಿನ ದೈಹಿಕ, ಮಾನಸಿಕ ಕಿರುಕುಳವನ್ನು ಅನುಭವಿಸುತ್ತಾರೆ ಹಾಗೂ ಕುಟುಂಬ ಮತ್ತು ಸಮಾಜದಿಂದ ಬಹಿಷ್ಕರಿಸಲ್ಪಡುತ್ತಾರೆ. ಆದ್ದರಿಂದಾಗಿ ಅವರುಗಳು ಶಿಕ್ಷಣದಿಂದ ಹೊರಗುಳಿಯುತ್ತಾರೆ. ಅಸುರಕ್ಷತೆ ಭಾವನೆಯ ಒತ್ತಡವನ್ನು ತಡೆಯಲಾಗದೆ ಔಷಧಿಗಳ ಮೊರೆ ಹೊಗುತ್ತಾರೆ. (ಅಶೋಕರಾಜ್, ಎಸ್. 2019). ಕೆಲವರು ಆತ್ಮಹತ್ಯಗೆ ಶರಣಾಗುವುದನ್ನು ಕಾಣಬಹುದು. ಕುಟುಂಬ ಮತ್ತು ಸಮಾಜಗಳಲ್ಲಿ ಅವರ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶಗಳು ದೊರಕುವುದಿಲ್ಲ, ಆದ್ದರಿಂದಾಗಿ ಸೂಕ್ತ ಮಾರ್ಗದರ್ಶನದ ಕೊರತೆಯುಂಟಾಗುತ್ತದೆ. ಮೇಲಿನ ಸಮಸ್ಯೆಗಳ ಜೊತೆಗೆ ಕೆಲವು ಈ ಕೆಳಕಂಡ ಸವಾಲುಗಳನ್ನು ನಾವು ಶಿಕ್ಷಣರಂಗದಲ್ಲಿ ಕಾಣಬಹುದಾಗಿದೆ;

## ಶಿಕ್ಷಣ ಪಡೆಯುವಲ್ಲಿ ತೃತೀಯ ಲಿಂಗಿಗಳು ಎದುರಿಸುವ ಸವಾಲುಗಳು (Challenges of transgender education)

**1. ಶಾಲಾ/ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸಮನ್ವಯ ಶಿಕ್ಷಣದ ಕೊರತೆ** (Inclusion in school/collage and Universities): ತೃತೀಯ ಲಿಂಗದವರ ನಡೆ–ನುಡಿಗಳು ಭಿನ್ನವಾಗಿರುವಕಾರಣ ಶಾಲಾ/ಕಾಲೇಜುಗಳಲ್ಲಿ ಇವರಿಗೆ ಸ್ತ್ರೀ ಮತ್ತು ಪುರುಷ ಲಿಂಗದ (ಸಾಮಾನ್ಯ) ವಿದ್ಯಾರ್ಥಿಗಳೊಂದಿಗೆ ಸಮನ್ವಯ ಶಿಕ್ಷಣ ನೀಡುವುದು ಸವಾಲಿನ ಸಂಗತಿಯಾಗಿದೆ. ಈ ಸಮುದಾಯದ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ನಿರ್ದಿಷ್ಟ ಸ್ಥಳ ನಿಗದಿ ಮಾಡುವುದು ಸವಾಲಿನ ಸಂಗತಿಯಾಗಿದೆ.

**2. ಅಗೌರವದ ಹೆಸರು ಮತ್ತು ಸರ್ವನಾಮಗಳ ಬಳಕೆ** (Use of disrespectful names and pronouns) : ತೃತೀಯ ಲಿಂಗಿಗಳು ತಮ್ಮ ಹುಟ್ಟಿನಿಂದ ಬಂದಂತಹ ಹೆಸರನ್ನು ಸಾಮಾನ್ಯವಾಗಿ ಬದಲಾಯಿಸಿ ಕೊಳ್ಳುತ್ತಾರೆ. ಕಾರಣ ಪುರುಷರು ಮಹಿಳೆಯರಾಗಿ ಅಥವಾ ಮಹಿಳೆಯರು ಪುರುಷರಾಗಿ ಬದಲಾಗುವುದರಿಂದ ಪ್ರಸ್ತುತವಾಗಿ ಜನರು ಅವರನ್ನು ಚಕ್ಕ, ಶಿಖಂಡಿ ಇತ್ಯಾದಿ ಅಗೌರವದಿಂದ ಮತ್ತು ಇತರ ಕೀಳುಮಟ್ಟದ ಶಬ್ದಗಳಿಂದ ಕೂಡಿದ ಸರ್ವನಾಮಗಳನ್ನು ಬಳಸಿ ಅವರನ್ನು ಕರೆಯುತ್ತಾರೆ. ಈ ಕಾರಣದಿಂದ ತೃತೀಯ ಲಿಂಗಿಗಳು ಮುಜುಗರದ ಸನ್ನಿವೇಶ ಎದುರಿಸುತ್ತಾರೆ.

**3. ಸೂಕ್ತ ವಿಶ್ರಾಂತಿ ಕೊಠಡಿಗಳ ಸೌಲಭ್ಯಗಳ ಕೊರತೆ** (Lack of access to appropriate room facilities): ತೃತೀಯ ಲಿಂಗಿಗಳು ಶಾಲಾ/ಕಾಲೇಜುಗಳಲ್ಲಿ ಸೂಕ್ತ ವಿಶ್ರಾಂತಿ ಕೊಠಡಿಗಳ ಸೌಲಭ್ಯಗಳಿಲ್ಲದೆ ಶಾಲಾ/ಕಾಲೇಜುಗಳಿಂದ ಹೊರಗುಳಿಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ವಾಸಕ್ಕೆ ಸೂಕ್ತ ಮನೆ ಮತ್ತು ವಿದ್ಯಾರ್ಥಿನಿಲಯಗಳ ಕೊರತೆ, ಕನಿಷ್ಟಪಕ್ಷ ಸೂಕ್ತ ವಿಶ್ರಾಂತಿ ಕೊಠಡಿಗಳಿಲ್ಲದೆ ಶಾಲಾ/ಕಾಲೇಜುಗಳಲ್ಲಿ ನರಳುವ ಸ್ಥಿತಿ ಮನಕಲುಕುವಂತಿದೆ. (ಚಟರ್ಜಿ ಸುಭ್ರಜಿತ್. 2018).

**4. ಗೌಪ್ಯತೆ** (Confidentiality) : ಶಾಲಾ/ಕಾಲೇಜುಗಳಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ತೃತೀಯ ಲಿಂಗಿಗಳ ಸಮಸ್ಯೆಗಳು ಮತ್ತು ವೈಯಕ್ತಿಕ ವಿವರಗಳನ್ನು ಗೌಪ್ಯತೆಯಿಂದ ಕಾಪಾಡುವುದು ಸೂಕ್ತ. ಬಹಿರಂಗಗೊಳಿಸಿದಲ್ಲಿ ಅವರ ಮೇಲೆ ಹಲ್ಲೆ, ಕಿರುಕುಳ, ವಾಸಕ್ಕೆ ಮನೆ ನಿರಾಕರಣೆ, ಮನೆಯಿಂದ ಹೊರಹಾಕುವಿಕೆಯಂತಹ ಸಂಗತಿಗಳನ್ನು ಎದುರಿಸಬೇಕಾಗುತ್ತದೆ. (ಸಂತೋಷ್‌ಕುಮಾರ ಮೆಹೆಂದಳೆ. 2022).

**5. ಆದರ್ಶ ವ್ಯಕ್ತಿಗಳಕೊರತೆ** (Lack of ideal personalities): ಜೀವನದಲ್ಲಿ ಯಾವುದೇ ವ್ಯಕ್ತಿಯು ತನ್ನಗುರಿ ಸಾಧನೆಗಾಗಿ ಒಬ್ಬ ಆದರ್ಶ ವ್ಯಕ್ತಿಯ ಸನ್ಮಾರ್ಗಗಳನ್ನು ಅನುಸರಿಸಿ ಗುರಿಮುಟ್ಟುತ್ತಾನೆ. ಪ್ರಸ್ತುತ ಸಂದರ್ಭದಲ್ಲಿ ಯಾವುದೇ ಅಡೆ–ತಡೆಗಳಿಲ್ಲದೆ, ಉನ್ನತ ಮಟ್ಟದ ಸಾಧನೆ ಮಾಡಿರುವ /ಮಾಡುತ್ತಿರುವ ತಮ್ಮ ಸಮುದಾಯದ ವ್ಯಕ್ತಿಗಳ ಕೊರತೆಯ ಕಾರಣದಿಂದ ತಮ್ಮ ಚಿಂತನೆಗಳಲ್ಲಿ, ಸಾಧನೆಯ ಪಥಗಳಲ್ಲಿ ಏಕಾಂಗಿತನವನ್ನು ಅನುಭವಿಸುತ್ತಾರೆ. (ಹಬಿನ್. ಎಚ್. 2021).

## ತೃತೀಯ ಲಿಂಗೀಯ ವಿದ್ಯಾರ್ಥಿಗಳು ಎದುರಿಸುವ ಸವಾಲುಗಳು (Challenges faced by transgender students)

1. ದೈಹಿಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸೂಕ್ತ ಚಿಕಿತ್ಸಾಲಯಗಳ ಕೊರತೆ.
2. ಸುರಕ್ಷಿತ ಮತ್ತು ಆರಾಮದಾಯಕ ವಸತಿಗಳಲ್ಲಿ ಇರಿಸಲಾಗಿಲ್ಲ.
3. ಸಾಂಸ್ಥಿಕ ಬೆಂಬಲ ಅಥವಾ ರಕ್ಷಣೆಯ ಕೊರತೆ.
4. ತೃತೀಯಲಿಂಗಿಗಳ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡುವ ಸಂಪನ್ಮೂಲ ಕೇಂದ್ರಗಳ ಕೊರತೆಯಿದೆ.

## ಶೈಕ್ಷಣಿಕ ನಿಹಿತಾರ್ಥಗಳು (Educational Implications)

1. ತೃತೀಯ ಲಿಂಗಿಗಳಿಗೆ ವೈಯಕ್ತಿಕ ಗಮನ ಅಥವಾ ಪರಿಹಾರ ಶಿಕ್ಷಣ ನೀಡುವಲ್ಲಿ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಸುಧಾರಿಸಲು ಸಮಾಜದ ಮೂಲಕ ಸಾಧ್ಯವಾಗುತ್ತದೆ.
2. ಶಾಲಾ/ಕಾಲೇಜುಗಳಲ್ಲಿ ಶಿಕ್ಷಕರು ತೃತೀಯ ಲಿಂಗೀಯ ವಿದ್ಯಾರ್ಥಿಗಳೊಂದಿಗೆ ಪ್ರೀತಿಯಿಂದ, ಸಹಾನುಭೂತಿಯಿಂದ ವರ್ತಿಸಬೇಕು.
3. ಪ್ರತಿಯೊಬ್ಬ ಶಿಕ್ಷಕನು ತೃತೀಯ ಲಿಂಗೀಯ ವಿದ್ಯಾರ್ಥಿಗಳನ್ನು ಇತರೆ ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ವಿಭಿನ್ನವಾದ ಕ್ರಿಯೆಗಳಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸಿದಲ್ಲಿ ತೃತೀಯ ಲಿಂಗದವರು ಶೈಕ್ಷಣಿಕವಾಗಿ ಹೆಚ್ಚು ಬೆಳೆಯಲು ಕಾರಣವಾಗುತ್ತದೆ.

*– 42ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಪಂಚಾವರಂ ನಾಟಕದಲ್ಲಿ ಸಂಘರ್ಷ : ನಿರ್ಗತಿಕ ನೆಲೆ

✍ **ನಿಂಗರಾಜು ಹೆಚ್.ಎಸ್.**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ-571401.

ಪ್ರಸಕ್ತ ಬರಹಗಾರರಲ್ಲಿ ಪ್ರಮುಖರೆನಿಸಿದ ಮಹಾಂತೇಶ್ ನವಲಕಲ್ ಅವರು ಕಥೆ ಮತ್ತು ನಾಟಕ ಸಾಹಿತ್ಯದಲ್ಲಿ ಪ್ರಸಿದ್ಧರೆನಿಸಿದವರು. ವರ್ತಮಾನದ ತಲ್ಲಣಗಳಿಗೆ ಅಂತಃಕರಣದ ಸೂಕ್ಷ್ಮನೋಟ ಹೊಂದಿದವರು.ಅವರ ಸೃಜನಶೀಲತೆ, ರೂಪಕ ಶಕ್ತಿ, ಕಾಲಪ್ರಜ್ಞೆಯ ವಾಸ್ತವಿಕ ಅರಿವಿಗೆ 'ಪಂಚಾವರಂ' ನಾಟಕ ಸಾಕ್ಷಿಯಾಗಿದೆ. 'ಪಂಚಾವರಂ' ನಾಟಕವು ವರ್ತಮಾನದ ಸಂಕೀರ್ಣ ಸಮಸ್ಯೆಯಾದ ಬಡತನ, ನಿರ್ಗತಿಕತನಗಳು ತಂದೊಡ್ಡುವ ಶೋಷಣೆಯ ಮೂಲನೆಲೆಯ ಸ್ವರೂಪವನ್ನು ನಾಟಕ ಶೋಧಿಸುತ್ತದೆ.

ಮನುಷ್ಯನ 'ಬದುಕು' ವಿಚಿತ್ರ ವೈರುಧ್ಯಗಳಿಂದ ಕೂಡಿದೆ. ಈ ಲೋಕದಲ್ಲಿ ಮನುಷ್ಯ ವ್ಯಾಪಾರಗಳೂ ವಿಚಿತ್ರವಾಗಿವೆ. ಮಜಿದ್‌ರೆಹೆನೆಮಾ ಹೇಳುವಂತೆ "ಬಡತನ ಎಂಬ ಶಬ್ದಕ್ಕೆ ಈ ಲೋಕದಲ್ಲಿ ಎಷ್ಟೆಲ್ಲ ಮಾನವ ಜೀವಿಗಳಿದ್ದಾರೋ ಅಷ್ಟೇ ವಿಭಿನ್ನ ಅರ್ಥಗಳಿವೆ. ಬಡತನವೆಂಬುದು ಸಾಮಾಜಿಕವಾಗಿ ರೂಪಿತವಾಗುವ ಒಂದು ಪರಿಕಲ್ಪನೆ. ಹಲವಾರು ಬಾಹ್ಯ ಸಂಗತಿಗಳು ಸಹಯೋಗಗೊಂಡು ಈ ಕಲ್ಪನೆಯನ್ನು ಕಟ್ಟುತ್ತೇವೆ; ಜತೆಗೆ, ಸಮಾಜದ ಪ್ರತಿನಿಧಿಯೂ ಕ್ರಿಯಾಮೂಲವೂ ಆಗಿರುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವೈಯಕ್ತಿಕತೆ ನೆಲೆಯಲ್ಲಿಯೇ ವ್ಯಾಖ್ಯಾನಿಸಿಕೊಳ್ಳುವ ಒಂದು ಪರಿಭಾಷೆ"[1] ಬಡತನವು ಮನುಷ್ಯನ ಸ್ವಯಂಕೃತ ತಪ್ಪಿನಿಂದ ನಿರ್ಮಿತವಾಗಿರುತ್ತವೆ. ಅದು ಪ್ರಭುತ್ವ, ಧಾರ್ಮಿಕ ಚೌಕಟ್ಟುಗಳು, ಅನಕ್ಷರತೆ (ಚಿಂತನೆಗಳ ಕೊರತೆ) ಮುಂತಾದ ಕಾರಣಗಳಿಂದ ನಿರ್ಮಿತವಾಗಿರುತ್ತವೆ.

ಬಡತನವೆಂಬುದು ಸಂಪತ್ತಿನ ಅಸಮಾನ ಹಂಚಿಕೆಯಿಂದ ಉಂಟಾಗುವುದು.ಇದಲ್ಲದೆ ಆಧ್ಯಾತ್ಮಿಕ ಬಡತನವನ್ನೂ ನಮ್ಮ ಪರಂಪರೆಯಲ್ಲಿ ಕಾಣುತ್ತೇವೆ. ಮೊದಲನೆಯದು ವರ್ಣವ್ಯವಸ್ಥೆಯ ಸಮಾಜದಿಂದ ನಿರ್ಮಾಣವಾದರೆ, ಎರಡನೆಯದು ಆತ್ಮ ಸಾಕ್ಷಾತ್ಕಾರಕ್ಕಾಗಿ ಸ್ವಯಮಿಚ್ಛೆಯಿಂದ ಕೂಡಿದ್ದಾಗಿದೆ.ಇದಕ್ಕೆ ಕನಕದಾಸ, ಪುರಂದರದಾಸ, ಗಾಂಧೀಜಿ ಮುಂತಾದವರನ್ನು ಉದಾಹರಿಸಬಹುದು. ಇವೆರಡನ್ನೂ ಮೀರಿದ ಮತ್ತೊಂದು ಬಗೆಯೆಂದರೆ, ನಿರ್ಗತಿಕತನ. "ನಿರ್ಗತಿಕರೆಂದರೆ, ಅವರು ಸಾಧಾರಣವಾಗಿ ಇಬ್ಬಗೆಯ ಸಂಕಟಗಳನ್ನು ಒಮ್ಮೆಗೇ ಅನುಭವಿಸುತ್ತಿರುವ ಜನ – ಹೊರನೋಟಕ್ಕೆ ಕಾಣುವಂತೆ ಅವರು, ತಮ್ಮ ಸಾಮಾಜಿಕ ಸ್ಥಿತಿಯಲ್ಲಿ ಅತ್ಯಂತ ಪ್ರತ್ಯೇಕಿತರಾಗಿ ಒಬ್ಬಂಟಿತನದಲ್ಲಿ ಬದುಕುವವರು. ಪರ್ಷಿಯನ್ ಭಾಷೆಯಲ್ಲಿ ಅಂಥವರನ್ನು 'ಬಿ ಖಾಸ್' (ಕಾಳಜಿ ಮಾಡಲಿಕ್ಕೆ ಯಾರೂ 'ಗತಿಯಿಲ್ಲದವರು') ಎಂದು ಕರೆಯಲಾಗಿದೆ; ತಮ್ಮ ಅಡಿಯಲ್ಲಿ ಯಾವುದೇ ಆಧಾರಭೂಮಿಕೆ ಅಥವಾ ರಕ್ಷಣಾ ವ್ಯವಸ್ಥೆಯಿಲ್ಲದಂತಹ ಜನ ಅವರು.ಇನ್ನು ತಮ್ಮ ಆಂತರ್ಯದಲ್ಲಿ ಕೂಡ ಅವರು ತಮ್ಮ ಅಂತಃಶಕ್ತಿಯನ್ನೂ ಪುನರ್‌ನಿರ್ಮಿತಿಯ ಚೈತನ್ಯವನ್ನೂ ಕಳೆದುಕೊಂಡವರು."[2] ಈ ದೃಷ್ಟಿಯಿಂದ ಪ್ರಸ್ತುತ ನಾಟಕವು ನಿರ್ಗತಿಕತನ ಬದುಕಿನ ಅಸ್ತಿತ್ವದ ಸಂಘರ್ಷದಲ್ಲಿ ತಂದೊಡ್ಡುವ ಸ್ವರೂಪವನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತದೆ. ಹಸಿವು ನೀಗಿಸಲು ದೇಹವನ್ನು ಮಾರಿಕೊಳ್ಳುವ, ಮಕ್ಕಳನ್ನು ಮಾರಿಕೊಳ್ಳುವ ಸಂಕೇತಗಳನ್ನು ನಾಟಕ ತನ್ನ ಹೂರಣವಾಗಿಟ್ಟುಕೊಂಡ ವಿಶಿಷ್ಟ ನಾಟಕ. 'ಬದುಕಿಗಾಗಿ ಶೀಲ ಮತ್ತು ಮಕ್ಕಳನ್ನು ಮಾರಿಕೊಳ್ಳುವ' ಕಥನವು ಕಾಲ, ಸಮಾಜ, ಬಡವರ ಬದುಕು ಪ್ರತಿಬಿಂಬವಾಗಿ 'ಬಯಲಾಟ'ದ ತಂತ್ರ/ಫಾರಂ(ಶೈಲಿ) ಬಳಸಿ ಶೋಷಣಾತ್ಮಕ ಕಥನವನ್ನು ನಾಟಕಕಾರರು ರೂಪಿಸಿದ್ದಾರೆ. ನಾಟಕವು ಸಾಂಕೇತಿಕ ಪ್ರತಿಮಾ ನೆಲೆಯಲ್ಲಿ ಸಾರಥಿ ಪೆಂಗ್ಯಾನ ಮೂಲಕ ತೆರೆದುಕೊಳ್ಳುತ್ತದೆ. ಜಂಝುಣ್ಣನ ಜಾತ್ರೆ, ಜಾತ್ರೆಗೆ ಬರುವ ಬಾಂಬೆ ಸೇಟುಗಳು, ಕಳ್ಳ ವ್ಯಾಪಾರ, ಸಂತಾನಲಕ್ಷ್ಮಿಯ ಪೂಜೆಯ ಚಿತ್ರಣಗಳಿವೆ. ನಂತರ ರಾಮಭಾನುವಿನಸೊಸೆಯರವೇಶ್ಯಾವಾಟಿಕೆ, ಕರುಳಬಳ್ಳಿಗಳನ್ನು ಮಾರುವ ಚಿತ್ರಣಗಳಿವೆ. ಇಂತಹ ಅನೈಕತೆಯ ಹಿಂದಿರುವ ನಿರ್ಗತಿಕತನ ಮತ್ತು ನಿರ್ಗತಿಕತನದ ಮೂಲ ಕಾರಣಗಳು ಇವೆಲ್ಲವನ್ನು ನಾಟಕ ಅನಾವರಣಗೊಳಿಸುತ್ತದೆ.

ಪಂಚಾವರಂ ಒಂದು ಹಾಡಿಯ ಹೆಸರು ರಾಮಭಾನು ಅಲ್ಲಿನ ಒಡೆಯ.ಕಾಡು ಅವರ ಜೀವನೋಪಾಯಕ್ಕೆ ಇರುವ ಆಧಾರ. ಹೊರ ಜಗತ್ತಿನ ಯಾವ ಜೀವನ ಕಲೆಯ ಅರಿವೂ ಅವರಿಗಿಲ್ಲ. ಕಾಡಿನ ಬದುಕಿನಲ್ಲಿ ನೆಮ್ಮದಿಯ ಜೀವನ ಅವರದಾಗಿದೆ. ಪ್ರಸಕ್ತ ಅವರು ನಿರ್ಗತಿಕರಾಗಿದ್ದಾರೆ. ಕಾಡಿಗೆ ಉತ್ಪನ್ನಗಳ ಮೇಲೆ ಸರ್ಕಾರ ವಿಧಿಸಿದ ನಿರ್ಬಂಧ ಅದರ ಮುಖ್ಯ ಕಾರಣವಾಗಿದೆ.

"**ರಾಮಭಾನು** : ಎಷ್ಟು ಶ್ರೀಮಂತ ಕಾಲವಾಗಿತ್ತು ನಮಗೆ ನಮ್ಮ ಕಾಡು ಬೇಡಿದ್ದನ್ನು ಕೊಡುತ್ತಿತ್ತು. ಜಂಝುಣ್ಣ ನಮ್ಮ ಕಾಡನ್ನು ಹಗಲು ರಾತ್ರಿಯೆನ್ನದೇ ಕಾಯುತ್ತಿದ್ದ. ಆತನ ಕಾಯುವಿಕೆಯ ಕಾರಣ ಹಸಿವು ನೀಗಿಸುವದು ಆಗಿತ್ತು.ನಾವು ಸ್ವರ್ಗಕ್ಕೆ ಕಿಚ್ಚು ಹಚ್ಚಿದ್ದೆವು. ಆದರೆ...... ಆದರೆ......

**ಡಂಗುರ ಹೊಡೆಯುವವ** : ..., ಪಂಚಾವರಂ ಘನ ಅರಣ್ಯವನ್ನು ಕಾಯ್ದಿಟ್ಟ ಅರಣ್ಯವೆಂದು ಸರ್ಕಾರ ಘೋಷಿಸಿದೆ. ಕಾಡಿನ ಸಂಪತ್ತಾದ ಹಣ್ಣು, ಪ್ರಾಣಿಗಳು, ಕಟ್ಟಿಗೆ ಜೇನು, ಔಷಧಿ ಯಾರಾದರೂ ಉಪಯೋಗಿಸಿದರೆ ಅವರಿಗೆ ಕಠಿಣ ಶಿಕ್ಷೆ ಕೊಡಲಾಗುವುದು. ಕೇಳ್ರಪ್ಪೋ ಕೇಳ್ರೀ....."[3] ತಮ್ಮಜೀವನಾಧಾರವಾದ ಮೂಲನೆಲೆಯಾದ ಕಾಡನ್ನು ಕಳೆದುಕೊಂಡ ಇವರುಹೊಟ್ಟೆಪಾಡಿಗೂ ಗತಿಯಿಲ್ಲದೆ ನಿರ್ಗತಿರಾಗುತ್ತಾರೆ. ಸಬಾಲ್ಟ್ರನ್ ನೆಲೆಯೊಳಗೆ ಬದುಕುವ ಇವರು ತಮ್ಮ ಬದುಕಿಗಾಗಿ ಅನ್ಯ ಮಾರ್ಗೋಪಾಯವನ್ನು ಕೇಳಿ ಪಡೆಯುವ ಸಾಮರ್ಥ್ಯವನ್ನೂ ಹೊಂದಿರುವುದಿಲ್ಲ. "ಸಬಾಲ್ಟ್ರನ್ ಪದದ ತಿರುಳು ಏನೆಂದರೆ ಮೇಲಿನವರ ಆದೇಶವನ್ನು ತಲೆಬಾಗಿ ಪಾಲಿಸುವವನು/ಳು ಇಲ್ಲವೇ ಅನುಸರಿಸುವವನು/ಳು ಎಂಬುದಾಗಿದೆ. ಇನ್ನೊಬ್ಬರ ಆದೇಶವನ್ನು ಪಾಲಿಸುವವರಿಗೆ ತಮ್ಮ ಬದುಕಿಗೆ ಸಂಬಂಧಿಸಿದ ಯಾವುದೇ ತೀರ್ಮಾನವನ್ನೂ ಕೈಗೊಳ್ಳುವ ಸಾಮಾಜಿಕ ಸ್ವಾಯುತ್ತತೆ ಇರುವುದಿಲ್ಲ. ಹಾಗೂ ಅಂತಹ ಅವಕಾಶಗಳಿಂದಲೂ ಈ ಸಬಾಲ್ಟ್ರನ್ ಸಮೂಹಗಳು ವಂಚಿತವಾಗಿರುತ್ತವೆ."[4] ಎಂದು ವ್ಯಾಖ್ಯಾನಿಸಲಾಗಿದೆ. ಈ ದೃಷ್ಟಿಯಿಂದ ಪ್ರಕೃತಿಯೊಂದಿಗೆ ಸಹಜ ಜೀವನಕ್ಕೆ ಹೊಂದಿಕೊಂಡಿದ್ದ ಇವರಿಗೆ ಧುತ್ತೆಂದು ಎರಗಿದ ಆಘಾತ ಸಂಕಷ್ಟವನ್ನೊಡ್ಡುತ್ತದೆ. ಪಂಚಾವರಂ ಬುಡಕಟ್ಟಿನ ಸ್ಥಿತಿಯು, ಆಧುನಿಕತೆಯ ಭರಾಟೆಗೆ ಸಿಲುಕಿದ ಪ್ರಭುತ್ವವೊಂದು ಕೈಗೊಳ್ಳಬಹುದಾದ ಪ್ರಗತಿಪರ ಯೋಜನೆಗಳಿಂದ ಕಾಲ್ತೊಡರಿನಲ್ಲಿಯೇ ಸಂಭವಿಸುವ ಆಂತರಿಕ ಸಮಸ್ಯೆಗೆ ಪ್ರತಿಮೆಯಾಗಿದೆ. ಪ್ರಭುತ್ವದ ನೋಟಕ್ರಮದಲ್ಲಿ ಸಬಾಲ್ಟ್ರನ್ ನೆಲೆಯ ಜೀವನಕ್ರಮ ಅಲಕ್ಷ್ಯಕ್ಕೆ ಗುರಿಯಾಗಿರುತ್ತದೆ. ಕಾಡಿನ ಉತ್ಪನ್ನಗಳ ಮೇಲೆ ನಿರ್ಬಂಧ ಹೇರಿದ ಸರ್ಕಾರ ಅವರ ಜೀವನೋಪಾಯಕ್ಕೆ ಯಾವ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪರ್ಯಾಯ ಮಾರ್ಗವನ್ನೂ ಸೂಚಿಸುವುದಿಲ್ಲ. ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಸಂಕ್ರಮಣಿಕೆಯಲ್ಲಿ ಸದಾ ಸಂಘರ್ಷಕ್ಕೆ ಸಿಲುಕುವುದು ಶ್ರಮಿಕ ವರ್ಗವೇ ಆಗಿರುತ್ತದೆ. ದೈಹಿಕ ಶ್ರಮವನ್ನೇ ಬದುಕಿನ ಆಸರೆಯಾಗಿಸಿಕೊಂಡ ಪಂಚಾವರಂ ಜನ ನಿರ್ಗತಿಕರಾಗುತ್ತಾರೆ. ಅನ್ನಮಾರ್ಗದ ಹುಡುಕಾಟದ ಸಂದರ್ಭದಲ್ಲಿ ವೇಶ್ಯಾವೃತ್ತಿಗೆ ಅವರನ್ನು ದೂಡಲಾಗುತ್ತದೆ.

'ವೇಶ್ಯಾವೃತ್ತಿ' ಎನ್ನುವುದು ಪುರುಷ ಪ್ರಧಾನವ್ಯವಸ್ಥೆಯು ಸೃಷ್ಟಿಸಿದ ಹೆಣ್ಣಿನ ಪಾಲಿನ ತುಚ್ಛ ಪರಿಕಲ್ಪನೆ. ಮಾರ್ಕ್ಸ್‌ವಾದಿಗಳ ಪ್ರಕಾರ "ಪ್ರಾಚೀನ ಸಾಮ್ಯವಾದಿ ಪದ್ಧತಿಯು ಸಮಾಜದ ಮಡಿಲಿನಲ್ಲಿ ಕಾಲಕ್ರಮೇಣ ಖಾಸಗಿ ಆಸ್ತಿಯ ಬಯಕೆ ಮತ್ತು ಆಬಯಕೆಯನ್ನು ಈಡೇರಿಸಿಕೊಳ್ಳುವ ವ್ಯವಸ್ಥೆ ಜಾರಿಗೆ ಬಂದಿತು. ಶಕ್ತಿಶಾಲಿಯಾದ ಪುರುಷ, ಅನ್ನವನ್ನು ಕೊಡುವ ಭೂಮಿ, ಸಂಪತ್ತು ಅದರ ಉತ್ಪಾದನೆಯ ಉಪಕರಣಗಳನ್ನೆಲ್ಲಾ ತನ್ನ ಸ್ವಂತ ಆಸ್ತಿಯನ್ನಾಗಿ ಮಾಡಿಕೊಂಡ ಮುಂದುವರಿದು ಸಂಪತ್ತಿನ ಉತ್ಪಾದನೆಯ ಉಪಕರಣಗಳಲ್ಲೊಂದಾದ ಸಂತಾನೋತ್ಪತ್ತಿಗೆ ಕಾರಣಳಾದ ಹೆಣ್ಣನ್ನು ತನ್ನ ಆಸ್ತಿಯನ್ನಾಗಿ ಮಾಡಿಕೊಂಡ. ತನ್ನ ಅಧಿಕಾರದ ಲಾಂಛನವಾಗಿ ಆಕೆಯ ಹಣೆಯ ಮೇಲೆ ಏಕಪತ್ನಿತ್ವದ ಮುದ್ರೆಯನ್ನೊತ್ತಿ ತನ್ನ ಮಟ್ಟಿಗೆ ಬಹುಪತ್ನಿತ್ವದ ಅಧಿಕಾರವನ್ನು ಉಳಿಸಿಕೊಂಡ"[5] ಎಂದಿದ್ದಾರೆ. ಡಾ. ಸರಸ್ವತಿ ಕೆ. ಬಿ. ತಮ್ಮ ಲೇಖನದಲ್ಲಿ "ಹಮ್ಮುರಬಿ ಶಾಸನದಲ್ಲಿ ಹೆಣ್ಣಿನ ದೇಹವನ್ನು ಗಂಡಿನ ಆಸ್ತಿಯೆಂದು ವ್ಯಾಖ್ಯಾನಿಸಲಾಗಿದೆ."[6] ಎಂದಿದ್ದಾರೆ. ಹೀಗೆ ಹೆಣ್ಣನ್ನು ಆಸ್ತಿ ಎಂದು ಪರಿಗಣಿಸದ್ದರ ಪರಿಣಾಮವಾಗಿ 'ವೇಶ್ಯೆ'ಯೆಂಬ ಪರಿಕಲ್ಪನೆಯ ಹುಟ್ಟಿಗೆ ಮೂಲ ಕಾರಣವಾಗಿದೆ. ಹೆಣ್ಣಿನ ಮೇಲಿನ ಲೈಂಗಿಕ ನಿರ್ಬಂಧದ ವಿವಾಹವಾದ ಪತಿಯ ಹೊರತಾದ ಅನ್ಯವ್ಯಕ್ತಿಯೊಂದಿಗಿನ ಲೈಂಗಿಕತೆಗೆ ಅನೈತಿಕತೆಯ ಪಟ್ಟ ಕಟ್ಟಲಾಯಿತು. ಒಟ್ಟಾರೆ ಲೈಂಗಿಕ ಸ್ವಾತಂತ್ರ್ಯಹರಣ ಹಾಗೂ ಹೆಣ್ಣನ್ನು ವಸ್ತುವಾಗಿ ಪರಿಗಣಿಸಿದ ಪರಿಣಾಮ ವೇಶ್ಯೆಯೆಂಬ ಪರಿಕಲ್ಪನೆಯ ಹುಟ್ಟಿಗೆ ಕಾರಣವಾಯಿತು. ಈ ವ್ಯಾಖ್ಯಾನವು ಹಣ ಮತ್ತಿತರ ಸಂಪತ್ತಿನ ಅಪೇಕ್ಷೆಯನ್ನು ಒಳಗೊಳ್ಳದಿರುವುದರಿಂದ ಅದು ವೃತ್ತಿಯ ಪರಿಧಿಯೊಳಗೆ ಬರುವುದಿಲ್ಲ. ಸಮಾಜಶಾಸ್ತ್ರಜ್ಞರು ಲಿಂಗಭೇದವಿಲ್ಲದೆ, ಹಣ ಮತ್ತಿತರ ಸಂಪತ್ತಿನ ಅಪೇಕ್ಷೆಗಳೊಂದಿಗೆ 'ವೇಶ್ಯಾವೃತ್ತಿ'ಯನ್ನು ವ್ಯಾಖ್ಯಾನಿಸುತ್ತಾರೆ.ಈ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಪ್ರಸ್ತುತ ನಾಟಕದಲ್ಲಿ ಪಂಚಾವರಂನ ಪುರುಷ ಮತ್ತು ಸ್ತ್ರೀಪಾತ್ರಗಳೆರಡೂ ವೇಶ್ಯೇ ವೃತ್ತಿ ಮಾಡಿದವರಾಗುತ್ತಾರೆ.ಇದು ಅವರ ಅಪವಿತ್ರ/ಅನೈತಿಕತನದ ಮೂಲಪ್ರವೃತ್ತಿಯಿಂದ ಬಂದದ್ದಲ್ಲ. ಹೆಣ್ಣಿನ ಹರಿಬಕ್ಕೆ ಉರಿದೇಳುವ ಸ್ವಭಾವ ಅಲ್ಲಿನ ಗಂಡಸಿನದು.ಆದರೆ ನಿರ್ಗತಿಕತನ ಮತ್ತು ಬೌದ್ಧಿಕ ಕೊರತೆಯ ಪರಿಣಾಮ ಜೀವನೋಪಾಯಕ್ಕಾಗಿ ದೇಹವನ್ನೇ ಆಧರಿಸಿದ್ದ ಅವರಿಗೆ ಸದ್ಯ ಮಾರಾಟವಾಗುವ ಸರಕಾಗಿ ಕಂಡಿದ್ದು ಹೆಣ್ಣಿನ ಯೌವ್ವನ. ಆದ್ದರಿಂದ ಇಲ್ಲಿ ವೇಶ್ಯಾವೃತ್ತಿ ಎಂಬುದು ಅನ್ನಪಾನೀಯ ನೆಲೆಯಲ್ಲಿ ಅಪ್ಪಿಕೊಂಡ ಮಾರ್ಗವಾಗಿದೆ.

"**ಮುಕಡ್ಯಾ ರಾಮ್ಯ :** ......, ನಿಮ್ಮ ಮಯ್ಯಾಗ ಯೌವ್ವನ ತುಳಕ್ಯಾಡ್ಲಕತ್ತ್ಯಾದ, ಚರ್ಮ ಇನ್ನೂ ಹೊಳಿಯಾಕತ್ಯಾದ, ಅದರ ಉಪಯೋಗ ಯಾಕ ತಗೋಬಾರದು.

**ಅರ್ಜುನಭಾನು :** ಸರಕೋ ನರಕೋ ಈಗಂತೂ ನಾವೂ ಬದುಕ ಬೇಕಾಗಿದೆ. ನೋಡ್ರಿ, ಜೆಮಿಲಾಬಾಯಿ, ತುಳಜಾಭಾಯಿಗಂತೂ ಮಾರ್ಕೆಟ್ ಅದ, ಆದ್ರ ಅಲ್ಲಾಬಾಯಿಗೇನ ಯಾರೂ ಕೇಳಂಗಿಲ್ಲ.

**ಲಕ್ಷ್ಮಣಭಾನು :** ಯಾಕ್ಲೆ ಮುಕ್ಕಡ್ಯಾರಾಮ್ಯ ನನ್ನ ಹೆಂಸ್ತಿ ಮ್ಯಾಲ ಯಾಕ್ಲೆ ಕಣ್ಣು ಮಗನೆ"[7] ಒಂದೆಡೆ ಹಸಿವಿನ ಭೀಕರ ಸಂಕಟ ಮತ್ತೊಂದೆಡೆ ಶೀಲತ್ವ ಪ್ರಶ್ನೆ ; ಇವೆರಡರ ನಡುವಿನ ಸಂಘರ್ಷದಲ್ಲಿ ಸಾವು ಬದುಕಿನ ಪ್ರಶ್ನೆಯಾದ ಹೊಟ್ಟೆಪಾಡು ಮುನ್ನೆಲೆಗೆ ಬರುತ್ತದೆ. ಗಾಂಧೀಜಿಯವರು "ಹಸಿದ ಜನಕೋಟಿಯ ಕಣ್ಣಲ್ಲಿ ಶಾಂತಿ ಇಲ್ಲ. ಅವರಿಗೆ ಅನ್ನ ಒಂದೇ ದೇವರು. ಅವರ ಮುಂದೆ ದೇವರ ಸಂದೇಶವನ್ನು ಇಡುವುದೂ, ನಾಯಿಯ ಮುಂದೆ ಇಡುವುದೂ ಎರಡೂ ಒಂದೇ".[8] –ಎಂದು ಹೇಳುವಂತೆ ಹಸಿವಿನ ಪರಿತಾಪದ ಮುಂದೆ ವೇಶ್ಯಾವೃತ್ತಿ ಅನೈತಿಕವೆನಿಸುವುದಿಲ್ಲ. ಹೆಣ್ಣಿಗೆ ಪಾತಿವ್ರತ್ಯವನ್ನು ಪರಮ ಮೌಲ್ಯವೆಂದು ಸಾರಿದ ಪುರುಷನ ಅಹಂಕಾರವೂ ನೆಲಕಚ್ಚುವುದನ್ನು ನಾವಿಲ್ಲಿ ಕಾಣುತ್ತೇವೆ. ಜಗತ್ತಿನಾದ್ಯಂತ ಇರುವ ಯಾವುದೇ ಶೋಷಿತ ಸಮುದಾಯಕ್ಕಿಂತ ದುರಂತಮಯ ಶೋಷಿತ ವರ್ಗವೆಂದರೆ ಮಹಿಳೆ. ಕುಟುಂಬದೊಳಗೆ ಮತ್ತು ಹೊರಗಿನ ಸಮಾಜದಲ್ಲಿ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ.ಅದರಲ್ಲೂ ತಳವರ್ಗದ ಮಹಿಳೆಯರು ಎದುರಿಸುವ ಶೋಷಣೆ ಊಹೆಗೂ ನಿಲುಕದಷ್ಟು ನೀಚತರದ್ದಾಗಿರುತ್ತದೆ. ಪ್ರಸ್ತುತ ನಾಟಕದಲ್ಲಿನ ದಮನಿತ ಬುಡಕಟ್ಟು ಸಮುದಾಯದ ಮಹಿಳೆಯರ ಶೋಷಣೆಯೂ ಇದೇ ಸ್ವರೂಪದ್ದಾಗಿದೆ. ಜೀವದ ಉಳಿವಿನಂಚಿನ ಸ್ಥಿತಿಯಲ್ಲಿ ಇಲ್ಲಿನ ಹೆಂಗಸರು ವೇಶ್ಯೆತನವನ್ನು ಸ್ವೀಕರಿಸಿ ಬದುಕು ಕಟ್ಟಿಕೊಡುತ್ತಾರೆ. ಶೋಷಿತ ತಳವರ್ಗವಾದ ಹೆಣ್ಣು ನೋಟಕ್ರಮದ ಮೂಲಕ 'ವೇಶ್ಯಾವೃತ್ತಿ'ಯ ಮೂಲನೆಲೆಯನ್ನು ನಾಟಕವು ಬಿಚ್ಚಿಡುತ್ತದೆ.

ಆಧುನೀಕರಣದ ತೀವ್ರ ಭರಾಟೆಯು ಸಮಾಜದಲ್ಲಿ ಉಂಟು ಮಾಡುತ್ತಿರುವ ನೈತಿಕ ಮೌಲ್ಯಗಳ ಅಧಃಪತನ, ಭ್ರಷ್ಟತೆಯ ಸ್ವರೂಪವನ್ನು ನಾಟಕವು ಅನಾವರಣಗೊಳಿಸುತ್ತದೆ. ಜಾಗತೀಕರಣ ಉದಾರೀಕರಣ ಮಂತ್ರ ಜಪಿಸುವ ವರ್ತಮಾನದಲ್ಲೂ ಜಾತಿ ಮತ್ತು ಲಿಂಗತಾರತಮ್ಯಗಳು ಹೊಸಬಗೆಯ ವಿನ್ಯಾಸದೊಂದಿಗೆ ಎಗ್ಗಿಲ್ಲದೆ ಮುಂದುವರಿಯುತ್ತಿದೆ. ದಮನಿತರ ಬೌದ್ಧಿಕ ಬಡತನವನ್ನು ದುರುಪಯೋಗಪಡಿಸಿಕೊಳ್ಳುವ ವ್ಯಕ್ತಿಗತ ಹಾಗೂ ಸಾಂಸ್ಥಿಕ ದಲ್ಲಾಳಿಗಳು ನಾಯಿಕೊಡಗಳಂತೆ ಬೆಳೆದಿರುವ ಚಿತ್ರಣವನ್ನು ಕಟ್ಟಿಕೊಡುತ್ತದೆ. ನಿರ್ಗತಿಕರ ಹೊಟ್ಟೆಪಾಡಿನಲ್ಲಿ ತಮ್ಮ ಹೊಟ್ಟೆಬಾಕತನಕ್ಕಾಗಿ ಇವು ಸದಾ ಹವಣಿಸುತ್ತಿರುತ್ತವೆ. ಪ್ರಸ್ತುತ ನಾಟಕದಲ್ಲಿ ಪಂಚಾವರಂನ ಜನರ ಹಸಿವಿನ ಸ್ಥಿತಿಯಲ್ಲಿ ಮಧ್ಯವರ್ತಿಯಾಗಿ ಬರುವವನು ಮುಕಡ್ಯಾ ರಾಮ್ಯಾ. ಇವನು ಹಿತೈಷಿ ಮುಖವಾಡ ಹೊತ್ತು ಅವರನ್ನು ವೇಶ್ಯಾವೃತ್ತಿಗೆ ತಳ್ಳುತ್ತಾನೆ. ಜಮೀಲಾಬಾಯಿಗೆ ಲಕ್ಷ್ಮೀಬಾಯಿ ಕೊಟ್ಟ ಹತ್ತು ಸಾವಿರ ರೂಪಾಯಿಯನ್ನು ಕಬಳಿಸಿಬಿಡುತ್ತಾನೆ. ಮೋಹನ್ ಸಾಳುಂಕೆ ಎಂಬ ಬಾಡಿಗೆ ಗಂಡನಿಗೆ ವೇಶ್ಯಾವೃತ್ತಿಯ ಕಮೀಷನ್ ದಿನಕ್ಕೆ 300 ರೂ ಒಂದು ಕ್ವಾಟರ್ ರಮ್, ಅರ್ಧ ಕೆ.ಜಿ. ಚಿಕನ್, ಜೊತೆಗೆ ಈ ಅನೈತಿಕತೆಯ ರಕ್ಷಣೆಗೆ ಪೋಲೀಸರಿಗೆ ತೆರಬೇಕಾದ ಕಮೀಷನ್. ಮುಖ್ಯವಾಗಿ ಹೆಣ್ಣಿನ ಶೋಷಣೆಯಲ್ಲಿ ತೊಡಗಿರುವ ಮತ್ತೊಂದು ಹೆಣ್ಣು ಲಕ್ಷ್ಮೀಬಾಯಿ. ಹೀಗೆ ಸಮಕಾಲೀನ ಸಮಾಜದಲ್ಲಿ ಹೆಣ್ಣಿನ ಶೋಷಣೆಯ ಹಲವು ಮಜಲುಗಳನ್ನು ನಾಟಕ ಪ್ರಕಟ ಪಡಿಸುತ್ತದೆ.

ನಿರ್ಗತಿಕ ನೆಲೆಯಲ್ಲಿ ಜರುಗುವ ಸಂಘರ್ಷದಿಂದ ಕ್ರೂರಸ್ವರೂಪದ ಶೋಷಣೆಗೆ ಮಹಿಳೆ ಒಳಗಾಗುವುದನ್ನು ನಾಟಕ ಅನಾವರಣಗೊಳಿಸುತ್ತದೆ. ಜಾಗತೀಕರಣದಿಂದಾಗಿ ಜೀವ, ನಿರ್ಜೀವವೆನ್ನದೆ ಎಲ್ಲವೂ ಮಾರುಕಟ್ಟೆಯ ಸರಕಾಗಿವೆ. ಹಸಿವೆಂಬ ಹೆಬ್ಬಾವು ಎಲ್ಲ ಸಂಬಂಧ, ಭಾವನೆಗಳನ್ನೂ ಬೆಲೆಕಟ್ಟುವ ವಸ್ತುವಾಗಿಸಿ ನುಂಗಿ ನೊಣೆದುಬಿಡುತ್ತದೆ.ಪ್ರಸ್ತುತ ನಾಟಕವು ಉಳಿವಿನ ಸಂಘರ್ಷದಲ್ಲಿ ಮನುಷ್ಯ ತಳೆಯಬಹುದಾದ ನಿಲವುಗಳು ಉಗ್ರ ಸಾರ್ವಕಾಲಿಕ ಸತ್ಯವೆನಿಸಿದ 'ತಾಯಿಗಿಂತ ಬಂಧುವಿಲ್ಲ ....,' ಎಂಬ ಗಾದೆ ಮಾತಿನ ಬೇರುಗಳು ಸಡಿಲವಾದಂತೆನಿಸುತ್ತದೆ.ಅನ್ನಮೂಲಕ್ಕಾಗಿ ಹೆಣ್ಣು ಇಲ್ಲಿ ಕರಳಬಳ್ಳಿಯನ್ನೂ ಕತ್ತರಿಸಿ ಮಾರುವ ಧಾರುಣತೆಯನ್ನು ನಾವಿಲ್ಲಿ ಕಾಣುತ್ತೇವೆ. ಚಾತುರ್ವಣ್ಯದಿಂದ ಸಂರಚನೆಗೊಂಡ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಭೂಮಿಯ ಹಕ್ಕಿಲ್ಲದ ಶೂದ್ರಾತಿಶೂದ್ರರು ಜೀವನ ನಿರ್ವಹಣೆಗಾಗಿ ತಮ್ಮ ಮಕ್ಕಳನ್ನೂ ಜಮೀನ್ದಾರರಲ್ಲಿ ಜೀತಕ್ಕಿಡುತ್ತಿದ್ದರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇದನ್ನು ಬಡತನದ ವ್ಯಾಪ್ತಿಯಲ್ಲಿ ನಿರ್ವಚಿಸಬಹುದು. ಆದರೆ ನಿರ್ಗತಿಕತನದ ಸ್ವರೂಪ ಇದಕ್ಕಿಂತಲೂ ಭಿನ್ನವಾದುದು. ಇಂತಹ ಸ್ಥಿತಿಯಲ್ಲಿ ಅವರು ತಮ್ಮ ಅಂತಃಶಕ್ತಿಯನ್ನೂ, ಪುನರ್ ನಿರ್ಮಿತಿಯ ಚೈತನ್ಯವನ್ನೂ ಕಳೆದುಕೊಂಡವರಾಗುತ್ತಾರೆ. ಹಸಿವು ಅವರ ಚಿಂತನೆಗಳನ್ನೆಲ್ಲಾ ಆಕ್ರಮಿಸಿಬಿಡುತ್ತದೆ. ಅವರು ಮಧ್ಯವರ್ತಿಗಳ ವಶವಾಗಿ ಮೋಸಹೋಗುತ್ತಾರೆ. ಸಂದರ್ಭದ ಲಾಭ ಪಡೆಯುವ ಮಧ್ಯವರ್ತಿಗಳ ಮಾತಿಗೆ ಮರುಳಾಗಿ ಅವರ ಪಾಪಕೂಪಕ್ಕೆ ದೂಡಲ್ಪಡುತ್ತಾರೆ.ಪಂಚಾವರಂನ ಜನರು ಇಂತಹದ್ದೇ ನೆಲೆಯಲ್ಲಿ ತಮ್ಮ ಕರುಳ ಬಳ್ಳಿಯನ್ನೇ ಕತ್ತರಿಸಿ ಮಾರುವ ಕಠಿಣ ಮನಸ್ಕರಾಗುತ್ತಾರೆ. "ಹಸಿವು ಮನುಷ್ಯನನ್ನು ವಜ್ರದಂತೆ ಕಠಿಣ ಮಾಡಿಸುತ್ತದೆ.ಎಂದು ಕೇಳಿದ್ದೇನೆ."[9] ಎನ್ನುವ ಅರ್ಜುನಭಾನುವಿನ ಮಾತಿನಲ್ಲಿ ಮಕ್ಕಳನ್ನೇ ಮಾರುವ ಕಠಿಣ ನಿಲುವಿಗೆ ಅವರು ಪಕ್ಕಾಗುವುದರ ಸಮರ್ಥನೆಯಿದೆ.

ಪುರುಷ ಪ್ರಧಾನ ವ್ಯವಸ್ಥೆಯ ಚರಿತ್ರೆಯಲ್ಲಿ ನೈಜ ಉದ್ದೇಶದಿಂದಲೋ, ಸೋಮಾರಿತನದಿಂದಲೋ, ಹೊಣೆಗೇಡಿತನದಿಂದಲೋ ಬಿಟ್ಟುಹೋದ ಕುಟುಂಬದ ರಕ್ಷಣೆಯ ಜವಾಬ್ದಾರಿಯನ್ನು ಸಮರ್ಥವಾಗಿ ಮಹಿಳೆ ನಿಭಾಯಿಸಿದ್ದಾಳೆ. ಪ್ರಸ್ತುತ ನಾಟಕದಲ್ಲಿ ಪುರುಷ ತನ್ನ ಸೋಮಾರಿತನದಿಂದ ಕುಟುಂಬ ರಕ್ಷಣೆಗೆ ಹೆಣ್ಣಿನ ಮೊರೆಹೋಗುತ್ತಾನೆ. ಮಧ್ಯವರ್ತಿ ಮುಕಡ್ಯಾ ರಾಮ್ಯಾನು ಹೆತ್ತ ಮಕ್ಕಳನ್ನು ಮಾರಾಟ ಮಾಡುವ ಸಲಹೆ ನೀಡಿದಾಗ ಲಕ್ಷ್ಮಣಭಾನು ಮತ್ತಿತರರು ಒಪ್ಪಿ ಹೆಂಡಂದಿರ ಸಲಹೆ ಕೇಳುತ್ತಾರೆ.

**ಜಮೀಲಾಬಾಯಿ :** ನಿಮಗ ತಾಯಿಗಳ ಸಂಕಟ ಗೊತ್ತಾಗಲ್ಲ. ಅದಕ್ಕ ಹೀಗೆಲ್ಲ ಮಾತಾಡಕತ್ತೀರಿ.

**ಲಕ್ಷ್ಮಣಭಾನು :** ಜಮೀಲಾಬಾಯಿ ನಮಗ ದುಡಿಯೋ ಮಾತು ಗೊತ್ತಿಲ್ಲ, ಈ ಕಾಡು ಮತ್ತು ನಮ್ಮಪ್ಪ ನಮ್ಮನ್ನು ಮೈಗಳ್ಳರನ್ನಾಗಿ ಮಾಡ್ಯಾರ.

**ಜಮೀಲಾಬಾಯಿ :** ನಿಮ್ಮ ಶರೀರದಾಗ ಸಾಮಾನ ಅದಾವಲ್ಲ ಅವನ್ನು ಮಾರಿ ಬದುಕರಿ ನಮಗ್ಯಾಗ ಗಂಡು ಬಿದ್ದೀರಿ.

**ಲಕ್ಷ್ಮಣಭಾನು :** ನೀ ಹೀಂಗ ಅಂದೆಂದ್ರ ಉರ್ಲು ಹಾಕ್ಕೊಂಡು ಸತ್ತು ಹೋಗತೀನಿ.

**ರಾಮಭಾನು :** (ಅವಸರದಲ್ಲಿ ಒಂದು) ಯಾಕಲೇ ಲಚುಮ್ಯಾ ಸಾಯೋ ಮಾತಾಡ್ತಿ.

**ಲಕ್ಷ್ಮಣಭಾನು :** ಯಪ್ಪ ಮುಕ್ಕಡ್ಯಾ ನಮಗ ದೇವರಾಗಿ ಬಂದಾನ, ಜಮೀಲಿ ಒಲ್ಲೆ ಅಂತಾಳ ನೋಡು.

**ರಾಮಭಾನು :** (ಕೈಮುಗಿಯುವನು) ಯವ್ವಾ, ಇದೊಂದು ಸಲ ಒಂದೊಂದು ಮಕ್ಕಳನ್ನು ಕೊಟ್ಟು ಬಿಡ್ರಿ, ನಾನು ಕೈಮುಗಿದು ಬೇಡಿಕೊಳ್ಳಾಕ ಹತ್ತೀನಿ.

**ತುಳಜಾಬಾಯಿ :** ಬಾಬ ನೀವು ದುಃಖ ಪಡಬ್ಯಾಡ್ರಿ. ನಿಮಗಾಗಿ ಒಂದೊಂದು ಮಕ್ಕಳನ್ನು ಹಡದು ಅದು ನಮ್ಮದಲ್ಲ ಅಂತ ಬಾಬ್ಯಾನ ಕೈಯಾಗ ಕೊಡೋ ಜವಾಬ್ದಾರಿ ನಮ್ಮದು.ತಂಗಿ ಜಮೀಲಿ ಅಕ್ಕ ಅಲ್ಲಾಬಾಯಿ, ನನ್ನ ಮಾತು ಕೇಳ್ರಿ, ಈ ಕುಟುಂಬನ ಕಷ್ಟದಿಂದ ಪಾರು ಮಾಡೋಣ. ನೀವು ಒಲ್ಲೆ ಅನ್ನಬ್ಯಾಡ್ರಿ".[10] ಇಲ್ಲಿನ ಸಂಭಾಷಣೆಯು ಗಂಡಿನ ಸೋಮಾರಿತನ, ಅಸಹಾಯಕತೆಯನ್ನೂ, ಕುಟುಂಬ ರಕ್ಷಣೆಗಾಗಿ ಮಹಿಳೆಯ ತ್ಯಾಗದ ಚಿತ್ರಣವನ್ನು ವ್ಯಕ್ತಪಡಿಸುತ್ತದೆ.

ನಾಟಕದಲ್ಲಿ ಪುರುಷ ಪಾತ್ರಗಳು ಹಸಿವಿನ ಸಂಕಟಗಳನ್ನು ಎದುರಿಸಿಯೂ ಪೂರ್ವಾಪರ ಚಿಂತನೆಗಳಿಗೆ ಒಳಗಾಗದ ಲೋಲುಪರು. ಮಹಿಳೆಯರ ಶೋಷಣೆಯಿಂದ ಬಂದ ಹಣದಲ್ಲಿ ಹೆಂಡ ಕುಡಿಯುವವರು. ಆದರೆ ಇಲ್ಲಿನ ಮಹಿಳೆಯರು ಬದುಕಿನ ಆಘಾತ, ವೈಪರೀತ್ಯಗಳನ್ನು ಎದುರಿಸಿ ಗಟ್ಟಿಗೊಂಡವರು. ತಾವು ಹೆತ್ತ ಕರುಳಬಳ್ಳಿಗಳ ಕಥೆಯನ್ನು ತಿಳಿಯಬಲ್ಲವರು. ಮುಕಡ್ಯಾರಾಮ್ಯಾನ ಮೋಸವನ್ನು ಪತ್ತೆಹಚ್ಚಬಲ್ಲ ಚಿಂತನೆ ಬೆಳೆಸಿಕೊಳ್ಳುವವರಾಗಿದ್ದಾರೆ.

ಒಟ್ಟಾರೆ ನಾಟಕವು ಆಧುನೀಕರಣ ತಂದೊಡ್ಡುವ ಅಪಾಯವನ್ನು, ಪ್ರಭುತ್ವದ ವಿಫಲತೆ ಉಂಟುಮಾಡುವ ಸಾಮಾಜಿಕ ಸಮಸ್ಯೆಯ ವಿವಿಧ ಮುಖಗಳನ್ನು ಚಿತ್ರಿಸುತ್ತದೆ. ನಿರ್ಗತಿಕ ನೆಲೆಯಲ್ಲಿ ಬದುಕಿನ ಸಂಘರ್ಷ ಹಾಗೂ ಮಹಿಳೆಯ ಶೋಷಣೆಯ ಕರಾಳ ಚಿತ್ರಣವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ.

## ಅಡಿ ಟಿಪ್ಪಣಿಗಳು

1. ವಿನಯಲಾಲ್ ಮತ್ತು ಆಶೀಶ್‌ನಂದಿ ಸಂ. (2010) : ಪರಿಭಾಷಾಕೋಶ, ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, ಹೆಗ್ಗೋಡು ಅಕ್ಷರ ಪ್ರಕಾಶನ, ಪು.ಸಂ.171.
2. ಅದೇ, ಪು.ಸಂ. 173
3. ಮಹಾಂತೇಶ್ ನವಲಕಲ್, ಪಂಚಾವರಂ (2021) : ಕಲಬುರಗಿ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಪು.ಸಂ.44
4. ಮೇಟಿ ಮಲ್ಲಿಕಾರ್ಜುನ, (ಯೋ.ಸಂ) (2017) : ತಾತ್ವಿಕತೆ, ಕರ್ನಾಟಕ ಸಬಾಲ್ಟ್ರನ್ ಓದು ಮಾಲಿಕೆ, ಸಂ–1, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮುದ್ರಣ–1, ಪ್ರಸ್ತಾವನೆ ಪು.2.
5. ತ.ರಾ.ಸು. ಮಸಣದ ಹೂ, ಮುನ್ನುಡಿ 5, 1953.
6. ಮೇಟಿ ಮಲ್ಲಿಕಾರ್ಜುನ (ಯೋ.ಸಂ) (2017), ಎಚ್.ಎಸ್.ಅನುಪಮಾ, ಸಬಿತಾ ಬನ್ನಾಡಿ(ಸಂ), ಹೆಣ್ಣು ನೋಟಕ್ರಮ, ಕರ್ನಾಟಕ ಸಬಾಲ್ಟ್ರನ್ ಓದು ಮಾಲಿಕೆ, ಸಂ–3, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮುದ್ರಣ–1, 2017, ಪ್ರಸ್ತಾವನೆ ಪು. 451.
7. ಮಹಾಂತೇಶ್ ನವಲಕಲ್ ಪಂಚಾವರಂ (2021) : ಕಲಬುರಗಿ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಪು.ಸಂ. 45.
8. ನೀಲತ್ತಹಳ್ಳಿ ಕಸ್ತೂರಿ, ಗಾಂಧೀ ತತ್ವಚಿಂತನೆ, ಪ್ರಸಾರಾಂಗ ಕನ್ನಡ ವಿ.ವಿ., 2ನೆಯ ಮುದ್ರಣ, 2014, ಪು.ಸಂ. 38.
9. ಮಹಾಂತೇಶ್ ನವಲಕಲ್, ಪಂಚಾವರಂ (2021) : ಕಲಬುರಗಿ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಪು.ಸಂ. ಪು.ಸಂ. 66.
10. ಅದೇ, ಪು.ಸಂ. 68.

■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಜನಪದ ನಂಬಿಕೆಗಳು

✍ **ಡಾ. ಎಂ.ಎಸ್. ಮಾಗಣಗೇರಿ,** ಮುಖ್ಯಸ್ಥರು ಕನ್ನಡ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ. ವಿಜಯಪುರ ಜಿಲ್ಲೆ.

ಜನಪದ ನಂಬಿಕೆಗಳು ಪರಂಪರಾನುಗತವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಹೀಗೆ ಅಂಗೀಕೃತವಾಗುವಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷಣೆಗಳು ಮುಖ್ಯವಾಗುತ್ತವೆ. ನಂಬಿಕೆಗಳು ಜನಪದರ ಜೀವನಾನುಭವದ ಉತ್ಪನ್ನಗಳು. ಹೀಗಾಗಿ ಮಾನವ ಬದುಕಿಗೂ ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧ. ಅದು ಸೂಚನೆ, ನಿಯಮ, ವಿಧಿನಿಷೇಧ, ನಿರ್ದೇಶನ, ಆಗ್ರಹ, ಆದೇಶ ಮತ್ತು ಆಜ್ಞೆಗಳ ರೂಪದಲ್ಲಿ ನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿದೆ. ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಕ್ರಮ, ಸಂಪ್ರದಾಯ ಆಚರಣೆಗೆಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾದವು. ನಂಬಿಕೆ ಸಂಪ್ರದಾಯ, ಆಚರಣೆಗಳೊಂದಿಗೆ ಅಂತರ್ ಸಂಬಂಧವನ್ನು ಹೊಂದಿದ್ದು, ಆ ಮೂಲಕ ಕ್ರಿಯಾರೂಪವನ್ನು ತಾಳುತ್ತದೆ. ಅದು ಜನಪದ ಪ್ರಕಾರಗಳಾದ ಗಾದೆ, ಜನಪದ ವೈದ್ಯ, ಜನಪದ ಕತೆ, ಜನಪದ ಐತಿಹ್ಯ, ಜನಪದ ಪುರಾಣ, ಜನಪದ ಮಂತ್ರವಿದ್ಯೆ, ಜನಪದ ಧರ್ಮ ಇವುಗಳೊಂದಿಗೆ ಒಳ ಸಂಬಂಧವನ್ನು ಹೊಂದಿದ್ದು ಸಂಕೀರ್ಣ ಸ್ವರೂಪದ್ದಾಗಿದೆ.

ಜನಪದ ನಂಬಿಕೆಗಳು ಜನಜೀವನದಲ್ಲಿ ನಡೆದಾಡುವ ನಾಣ್ಯಗಳಿದ್ದಂತೆ. ಅವು ಜನತೆಯ ಜೀವನಾನುಭವದ ಮೂಸೆಯಿಂದ ಮೂಡಿ ಬಂದು, ಬದುಕಿನಲ್ಲಿ ಬೆರೆತು ಪರಿಣಾಮಕಾರಿಯಾಗಿ ಪ್ರಭಾವಬೀರಿ ಜೀವಂತವಾಗಿವೆ. ಜನತಾಭಾವದ ಅಭಿವ್ಯಕ್ತಿಗಳಾದ ಜನಪದ ನಂಬಿಕೆಗಳು, ಜನತೆಯ ಪರಂಪರಾಗತ ಜ್ಞಾನಸುಧೆ, ಸುಸಂಸ್ಕೃತ ಹೃದಯದ ಪರಿಪಕ್ವ ಅನುಭವದ ಸಾರವೆಂದು ಹೇಳಬಹುದು. ಹೀಗಾಗಿ ಇವು ಜನಜೀವನದಲ್ಲಿ ಹಾಸುಹೊಕ್ಕಾಗಿ ಸೆರಿ, ಅವರ ಬದುಕನ್ನೇ ನಿಯಂತ್ರಿಸಿ ನಿರ್ದೇಶಿಸುವ ಪ್ರಮುಖ ಶಕ್ತಿಯಾಗಿ ಪರಿಣಾಮಿಸಿ, ಜನಪದ ಬದುಕಿಗೆ ವಜ್ರಕವಚವಾಗಿದೆ.

ಈ ಹಿನ್ನೆಲೆಯಲ್ಲಿ ಜನಪದ ನಂಬಿಕೆಗಳ ಒಂದು ಪ್ರಮುಖ ಅಂಗವಾದ **'ಮಾನವ ಸಂಬಂಧಿ ನಂಬಿಕೆ'** ಗಳನ್ನು ಕುರಿತು ಇನ್ನು ನೋಡಬಹುದು. ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಶ್ಶಾಸ್ತ್ರ ಹಾಗೂ ಜಾನಪದ ವಿಜ್ಞಾನ ಮುಂತಾದ ಶಾಖೆಗಳ ಮಾನವನ ಸಂಬಂಧನಿಷ್ಠ, ಗುಣನಿಷ್ಠ, ಮನೋನಿಷ್ಠ ಹಾಗೂ ಆಚರಣೆನಿಷ್ಠ ಸರ್ವ ಸಂಗತಿಗಳು ಈ ಪ್ರಬಂಧದ ನೀಲನಕ್ಷೆಗೆ ಆಹಾರ ಒದಗಿಸುತ್ತವೆ. ಮನುಷ್ಯನ ವಿವಿಧ ಅವಸ್ಥೆ –ಆಚರಣೆಗಳಿಗೆ ಸಂಬಂಧಿಸಿದ ಭಾವ ಪ್ರಧಾನ ಹಾಗೂ ಕಲ್ಪನಾಪ್ರಧಾನ ಅಂಶಗಳೆಲ್ಲವೂ ಇದರಲ್ಲಿ ಸೇರುತ್ತವೆ. ಕಾಯುವ ದೇವರು, ಕಾಡುವ ದೆವ್ವ, ಉಪಕರಿಸುವ ಪ್ರಾಣಿ–ಪಕ್ಷಿ ಹಾಗೂ ಆಯುರಾರೋಗ್ಯ ನೀಡುವ ಸಸ್ಯ ಸಂಪತ್ತು ಮುಂತಾದವುಗಳ ನಿಕಟ ಸಂಪರ್ಕವು ಮಾನವನಿಗಿದೆ ಯಾದವರೂ, ಆ ಬಗ್ಗೆ ಪ್ರತ್ಯೇಕ ಪ್ರಬಂಧಗಳಿರುವದರಿಂದ ಅವನ್ನು ಹೊರತುಪಡಿಸಿ, ಕೇವಲ ಮಾನವನ ಆಂಗಿಕ ಆಚರಾಣಾತ್ಮಕ ಅಂಶಗಳಿಗೆ ಮಾತ್ರ ಪ್ರಬಂಧದ ವಿಷಯವನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ಹುಟ್ಟು ಸಾವುಗಳ ಮಾರ್ಗಮಧ್ಯದ ವೈವಿಧ್ಯಮಯವಾದ ಈ ಸಂಸಾರ ಯಾತ್ರೆಯಲ್ಲಿ ಲೆಕ್ಕವಿಡಲು ಬೇಸರಪಡುವಷ್ಟು ನಂಬಿಕೆಗಳು ಮನುಷ್ಯನ ಬಾಳಿನಲ್ಲಿ ಸೇರಿಕೊಂಡಿವೆಯಾದರೂ, ಆ ಎಲ್ಲ ನಂಬಿಕೆಗಳ ಮಹಾಂಬುಧಿಯನ್ನು ಈಜುವ ಸಾಹಸಕ್ಕೆ ತೊಡಗದೇ ಆಚಾರ–ವಿಚಾರ, ಕ್ರಿಯೆ–ಕಲ್ಪನೆಗಳಿಗೆ ಸಂಬಂಧಿಸಿದಂತೆ, ಮಾನವನು ಅಳವಡಿಸಿಕೊಂಡ ಆಂತರಿಕ ಮತ್ತು ಬಾಹ್ಯವ್ಯಕ್ತಿತ್ವದ ವಿಚಾರಗಳಿಗೆ ಮಾತ್ರ ಇಲ್ಲಿ ಒತ್ತು ಕೊಡಲಾಗಿದೆ. ನಿತ್ಯ ಜೀವನದಲ್ಲಿ ಅನ್ಯ ವ್ಯಕ್ತಿಯೊಂದಿಗೆ ಸಮೂಹದೊಂದಿಗೆ ಆತ ಇರಿಸಿಕೊಂಡ ನಿಕಟ ಸಂಪರ್ಕದಲ್ಲಿ ಬಂಗಾರದ ಎಳೆಯಂತೆ ಮಿಂಚುವ ವಿಧಿ ನಿಷೇಧಾತ್ಮಕ ನಂಬಿಕೆಗಳ ಸಂಗ್ರಹ ಹಾಗೂ ವಿಶ್ಲೇಷಣೆ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ. ಅಂತೆಯೆ ಮದುವೆ, ಗೃಹಜೀವನ, ಗರ್ಭಿಣಿ, ಕೂಸು, ಉಡುಗೆ–ತೊಡುಗೆ, ಹಬ್ಬ–ಹರಿದಿನ, ವಾರ–ನಕ್ಷತ್ರ, ಊಟ, ಯಾತ್ರೆ, ಪೂಜೆ, ನಿದ್ರೆ, ಕನಸು, ಅವಯವ, ರೋಗ, ಸುಳಿ ಶುಭಾ–ಅಶುಭಗಳ ಕಲ್ಪನೆ, ಶಕುನ ಹಾಗೂ ಶವ ಇವೇ ಮುಂತಾದ ವಿಷಯಗಳನ್ನೊಳಗೊಂಡ ಭಾವನಾತ್ಮಕ ಮಾನವ ಸಂಬಂಧಿ ನಂಬಿಕೆಗಳ ವಿಶ್ಲೇಷಣೆಯನ್ನು ಗಮನಿಸಬಹುದು.

ಪ್ರಾಚೀನ ಕಾಡು ಮಾನವನಿಂದ ಇತ್ತೀಚಿನ ನಾಡು ಮಾನವನವರೆಗೆ ಆಯಾ ಕಾಲಘಟ್ಟದ ಪರಿಜ್ಞಾನಕ್ಕೆ ತಕ್ಕಂತೆ ನಿತ್ಯ ಜೀವನದ ಆಚರಣೆಯ ಸತ್ಯ ಸಂಗತಿಗಳಾಗಿ ಮಾನವ ನಿಷ್ಠ ನಂಬಿಕೆಗಳು ಜನ್ಮ ತಾಳುತ್ತಲೇ ಬಂದಿವೆ. ನಂಬಿಕೆಯ ಬೆಸುಗೆಯಿಂದಲೇ ಪರಸ್ಪರ ಮಾನವ ಸಂಬಂಧದ ಕೊಂಡಿ ಗಟ್ಟಿಗೊಳ್ಳುತ್ತಲಿದೆಯೆಂಬುದಕ್ಕೆ ಮಾನವನ ನಿತ್ಯ ಜೀವನವೇ ಸಾಕ್ಷಿಯಾಗಿದೆ. ಪ್ರಬುದ್ಧ ಧರ್ಮಗಳು ಬೆಳಕಿಗೆ ಬರುವ ಮುನ್ನ ನೈಸರ್ಗಿಕ ಧರ್ಮ ಮಾನವನನ್ನು ನಿಯಂತ್ರಿಸುತ್ತ ಬಂದ ಸಂಗತಿ ಇತಿಹಾಸದಿಂದ ತಿಳಿದುಬರುತ್ತದೆ. ಈ ನೈಸರ್ಗಿಕ ಶಕ್ತಿಯ ಪ್ರಭಾವದಿಂದ ಅತಿಮಾನುಷ ಶಕ್ತಿಯ ಭಯಕ್ಕೊಳಗಾದ ಗತಕಾಲದ ಮಾನವ ಸಿಡಿಲು, ಮಿಂಚು, ಗಾಳಿ, ಬೆಂಕಿ ಮುಂತಾದ ನೈಸರ್ಗಿಕ ಶಕ್ತಿಗಳಿಂದ ಭಯಗೊಂಡು, ಅವುಗಳನ್ನು ದೈವತ್ವಕ್ಕೇರಿಸಿ ಪೂಜಿಸಲು ಪ್ರಾರಂಭಿಸಿದನೆಂದು ಕಾಣಿಸುತ್ತದೆ. ಈ ನೈಸರ್ಗಿಕ ನಂಬಿಕೆಗಳೇ ಶಕುನ ರೂಪದಲ್ಲಿ ಧಾರ್ಮಿಕ ನಿಯಮಗಳನ್ನು ಅಳವಡಿಸಿಕೊಂಡು, ಶಿಷ್ಟ ಸಂಪ್ರದಾಯಕ್ಕೆ ತಿರುಗಿ ಜ್ಯೋತಿಷ್ಯ ಸೃಷ್ಟಿಯಾಗಿರಬೇಕು. ಜ್ಯೋತಿಷ್ಯ ಮಾನವನ ಶ್ರೇಯೋಭಿವೃದ್ಧಿಗೆ ಪೂರಕ ಹಾಗೂ ಮಾರಕವಾದ ಮಾಹಿತಿಯನ್ನು ಒದಗಿಸುವ ಮಾನವ ಸಂಬಂಧಿ ನಂಬಿಕೆಗಳ ವಿಶ್ವಕೋಶವೆಂದೇ ಹೇಳಬೇಕು.

ಈ ಹಿನ್ನೆಲೆಯಲ್ಲಿ ಶಿಷ್ಟರ ಜೋತಿಷ್ಯ, ಸಾಮಾನ್ಯರ ಶಕುನ ಹಾಗೂ ಜಾನಪದೀಯರ ಶಾಸ್ತ್ರ ಇವೇ ಮುಂತಾದವುಗಳ ಸಂಪರ್ಕ ಪಡೆದು ಮಾನವ ಸಂಬಂಧಿ ನಂಬಿಕೆಗಳು ವೈವಿಧ್ಯಮಯ ಸಂಸ್ಕಾರಕ್ಕನುಗುಣವಾಗಿ ಸಾಮೂಹಿಕ ಬೆಳವಣಿಗೆ ಪಡೆದು, ರಾಶಿರಾಶಿಯಾಗಿ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿವೆ. ಮಾನವ ಸಂಬಂಧಿ ನಂಬಿಕೆಗಳು ಬುದ್ಧಿಪೂರ್ವಕವಾಗಿ ಆಲೋಚನಾ ಹಂತಗಳನ್ನೇರಿ ಹೃದಯದಿಂದ ಮೂಡಿಬಂದ ಮಾನವ ಜೀವನದ ನಿತ್ಯನೇಮಗಳಾಗಿವೆ. ವೈಜ್ಞಾನಿಕ ಸತ್ಯ ಹಾಗೂ ಸಾಮಾನ್ಯ ತಿಳುವಳಿಕೆಗಳಿಂದ ಮಾನವನ ಅಂಧಶ್ರದ್ಧೆಯನ್ನು ತಿದ್ದುವದರೊಂದಿಗೆ, ಇವು ಅವರ ಚಿತ್ರಮಯ ಬದುಕಿಗೆ ಬರೆದಿಟ್ಟ ಸಚಿತ್ರ ಶಾಸನಗಳಾಗಿವೆ. ತಟ್ಟಿದರೆ ಶಿಕ್ಷೆ ಎನ್ನುವ ರೀತಿಯಲ್ಲಿ ಸಮಾಜದ ಬಹುಪಾಲು ಜನರು ಮುಚ್ಚುಮರೆಯಿಲ್ಲದೆ ಬಹು ಎಚ್ಚರಿಕೆಯಿಂದ ಇವುಗಳನ್ನು ಪಾಲಿಸುತ್ತ ಬಂದಿರುವರು.

## ನಂಬಿಕೆಗಳ ಉಗಮ

ಪ್ರಕೃತಿಯ ರಹಸ್ಯವನ್ನು ಭೇದಿಸುವಲ್ಲಿ ಆದಿಮಾನವನ ವಿಫಲತೆ, ಹುಟ್ಟು–ಬದುಕು–ಸಾವಿನ ನಿಗೂಢತೆಯನ್ನು ಅರ್ಥೈಸಲಾಗದ ಆತಂಕ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಜಾತಿ ಮತ್ತು ಧರ್ಮ ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟ ಈ ಹಿನ್ನೆಲೆಯಲ್ಲಿ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ಈ ದೃಷ್ಟಿಯಿಂದ ಜನಪದ ನಂಬಿಕೆಗಳ ಉಗಮವನ್ನು ಧಾರ್ಮಿಕ ನಂಬಿಕೆಗಳು, ಸಾಂಸ್ಕೃತಿಕ ನಂಬಿಕೆಗಳು, ವೈಯಕ್ತಿಕ ನಂಬಿಕೆಗಳು ಎಂದು ಮೂರು ವಿಧವಾಗಿ ಗುರುತಿಸಬಹುದು.

### ಧಾರ್ಮಿಕ ನಂಬಿಕೆಗಳು

ಮಾನವ ಮನಸ್ಸಿನ ಭಯ ಮತ್ತು ಆತಂಕಗಳು ಈ ಬಗೆಯ ಧಾರ್ಮಿಕ ನಂಬಿಕೆಗಳಿಗೆ ಮೂಲ. ಇಂತಹ ಸಂದರ್ಭಗಳಲ್ಲಿ ಅವನಿಗೆ ಆಲಂಬನವಾಗಿ ಹುಟ್ಟಿಕೊಂಡವುಗಳು ದೇವರು, ದೈವ್ವಗಳು. ಆಗ ದೇವರ ಸ್ವರೂಪ, ಕಾರ್ಯಗಳಿಗೆ ಸಂಬಂಧಿಸಿದಂತೆ ಅನೇಕ ನಂಬಿಕೆಗಳನ್ನು ಹುಟ್ಟುಹಾಕಿದ ಅಮೂರ್ತ ದೇವರನ್ನು ವಾಸ್ತವ ಜಗತ್ತಿನ ವಸ್ತು ವಿಷಯಗಳೊಂದಿಗೆ ಸಮೀಕರಿಸಿ ಪೂಜಿಸತೊಡಗಿದ. ಉದಾಹರಣೆಗೆ ತೆಂಗಿನಕಾಯಿಯನ್ನು ಕಾಲಿನಿಂದ ತುಳಿಯಬಾರದು. ಅದು ಮುಕ್ಕಣ್ಣ. ಬೀಸುವ ಕಲ್ಲನ್ನು ತುಳಿಯಬಾರದು ಅದು ಲಕ್ಷ್ಮೀ. ಲೌಕಿಕ ಕ್ರಿಯೆಯೊಂದನ್ನು ಸಮರ್ಪಕವಾಗಿ ಮಾಡಲು ಅಥವಾ ನಿಷೇಧಿಸಲು ಅದಕ್ಕೆ ಧಾರ್ಮಿಕ ಚೌಕಟ್ಟನ್ನು ಒದಗಿಸುವುದುಂಟು. ಉದಾ: ಕಾಲನ್ನು ತೊಳೆಯುವಾಗ ಹಿಮ್ಮಡ ಪೂರ್ತಿ ನೆನೆಯಬೇಕು. ಇಲ್ಲದಿದ್ದರೆ ಶನಿ ಹಿಡಿದುಕೊಳ್ಳುತ್ತದೆ. ಸಂಜೆ ಹೊತ್ತಲ್ಲಿ ಕಸಗುಡಿಸಿ ಹೊರಹಾಕಬಾರದು. ಲಕ್ಷ್ಮೀ ಹೊರಟು ಹೋಗುತ್ತಾಳೆ. ಮೊದಲನೆಯದರಲ್ಲಿನ ಲೌಕಿಕ ಉದ್ದೇಶ ಕಾಲನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು ಎನ್ನುವುದು. ಎರಡನೆಯದು ಕತ್ತಲೆಯಲ್ಲಿ ಕಸದೊಂದಿಗೆ ಬೆಲೆಬಾಳುವ ವಸ್ತುಗಳೂ ಹೋಗಬಹುದು ಎನ್ನುವುದು.

### ಸಾಂಸ್ಕೃತಿಕ ನಂಬಿಕೆಗಳು

ಹುಟ್ಟಿನ ಬಗೆಗಿನ ಕುತೂಹಲ, ಸಾವಿನ ಕುರಿತ ಭಯ, ತನ್ನ ಬದುಕನ್ನು ರೂಪಿಸಿದ ಋತುಮಾನಗಳ ಚಲನೆಗಳು ಅನೇಕ ಜೀವನಾವರ್ತನ ಹಾಗೂ ವಾರ್ಷಿಕಾವರ್ತನಗಳ ನಂಬಿಕೆಗಳನ್ನು ರೂಪಿಸಿವೆ.

**ಉದಾ :**

- ತೆಂಗಿನಕಾಯಿ ತಿಂದರೆ ಮದುವೆಯಲ್ಲಿ ಮಳೆ ಬರುತ್ತದೆ.
- ಆರತಿಯ ದೀಪ ಆರಿದರೆ ಅಪಶಕುನ.
- ಉತ್ತರಾಯಣದಲ್ಲಿ ಸತ್ತರೆ ಸ್ವರ್ಗ.
- ಆಷಾಢದಲ್ಲಿ ಅತ್ತ–ಸೊಸೆ ಒಂದೇ ಬಾಗಿಲಲ್ಲಿ ಓಡಾಡಬಾರದು.
- ಭರಣಿ–ಕೃತಿಕಾ ನಕ್ಷತ್ರಗಳಲ್ಲಿ ಯಾವ ಕೆಲಸ ಆರಂಭಿಸಿದರೂ ಪೂರ್ಣಗೊಳ್ಳುವುದಿಲ್ಲ.

### ವೈಯಕ್ತಿಕ ನಂಬಿಕೆಗಳು

ವೈಯಕ್ತಿಕ ನಂಬಿಕೆಗಳು ಮೊದಲಿಗೆ ವ್ಯಕ್ತಿಯೊಬ್ಬನ ಉತ್ಪನ್ನವಾಗಿದ್ದು ಮುಂದೆ ಸಾಮಾಜೀಕರಣದ ಫಲವಾಗಿ ಅದು ಸಾಂಸ್ಕೃತಿಕ ರೂಪವನ್ನು ತಾಳುತ್ತವೆ. ಬದುಕಿನ ಘಟನೆಯೊಂದಿಗೆ ಕಾಕತಾಳೀಯ ಸಂಬಂಧವನ್ನು ಕಂಡುಕೊಂಡ ಒಂದು ಸಂಖ್ಯೆ, ದಿನ, ಉಂಗುರ, ಬಣ್ಣಗಳು ಅವನ ವೈಯಕ್ತಿಕ ನಂಬಿಕೆಯಾಗಿ ಮಾರ್ಪಡುತ್ತವೆ. ಒಬ್ಬನಿಗೆ ಶುಭ ಅಥವಾ ಅದೃಷ್ಟದ ಸೂಚನೆಯಾದ ಇವು ಇನ್ನೊಬ್ಬನಿಗೆ ಅಶುಭ ಅನ್ನಿಸಬಹುದು. ಉದಾ. ಶನಿವಾರ ಹೊಸ ಬಟ್ಟೆ ಉಡಬಾರದು, 7ರ ಸಂಖ್ಯೆ ಶುಭ, ಮಂಗಳವಾರ, ಶುಕ್ರವಾರ ಮದುಮಗಳು ತಾಯಿಮನೆಯಿಂದ ಹೊರಡಬಾರದು.

### ನಂಬಿಕೆಗಳ ವರ್ಗೀಕರಣ

ನಂಬಿಕೆಗಳ ವರ್ಗೀಕರಣದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಅವುಗಳ ಸಂಕೀರ್ಣ ಸ್ವರೂಪದಿಂದಾಗಿ ವಿಂಗಡಣೆ ತುಂಬ ತೊಡಕಾಗುತ್ತದೆ. ನಂಬಿಕೆಗಳ ಸ್ವರೂಪ ಹಾಗೂ ಕಾರ್ಯಕ್ಕನುಸರಿಸಿ ಹಲವು ಬಗೆಯ ವರ್ಗೀಕರಣ ರೂಢಿಯಲ್ಲಿದೆ. ಜನಪದ ನಂಬಿಕೆಗಳ ವ್ಯವಸ್ಥಿತ ಅಧ್ಯಯನಕ್ಕೆ ವಿಷಯಾನುಕ್ರಮ ವರ್ಗೀಕರಣ ಅಗತ್ಯ. ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ಜನಪದ ನಂಬಿಕೆಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಲು ಪ್ರಯತ್ನಿಸಿರುವರು.

**ಆರ್. ಎಸ್. ಬಾಗ್ಸ್ ಪ್ರಕಾರ –**

1. ಪುರಾಣ
2. ಐತಿಹ್ಯ
3. ಪದ್ಧತಿ
4. ಮಾಂತ್ರಿಕತೆ
5. ವೈದ್ಯ
6. ಕಾಲಜ್ಞಾನ ಇವುಗಳನ್ನು ಅವರು ಮತ್ತೆ ಹಲವಾರು ಉಪವಿಭಾಗಗಳಾಗಿ ಒಡೆದಿದ್ದಾರೆ.

**ವೇಲ್ಯಾಂಡ್ ಅವರ ಪ್ರಕಾರ –**

1. ಮನುಷ್ಯ ಶರೀರ ಹಾಗೂ ವೈದ್ಯಕ್ಕೆ ಸಂಬಂಧಿಸಿದವು.
2. ಜೀವನ ಚಕ್ರಕ್ಕೆ ಸಂಬಂಧಿಸಿದವು.
3. ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು.
4. ಮಾಟ ಮತ್ತು ಮಂತ್ರವಿದ್ಯೆ.
5. ಭೂತಪ್ರೇತ, ಸಾವು ಮುಂತಾದವುಗಳಿಗೆ ಸಂಬಂಧಿಸಿದವು.
6. ಸಂಖ್ಯೆಗಳು ಮತ್ತು ಖಗೋಳ ಸಂಗತಿಗಳು
7. ಬೇಸಾಯಕ್ಕೆ ಸಂಬಂಧಿಸಿದವು. ಇದರೊಳಗೆ ಹವಾಮಾನ, ಪ್ರಾಣಿಸಾಕಣೆ, ಕೃಷಿ, ಬೇಟೆ, ಮೀನುಗಾರಿಕೆ ಇತ್ಯಾದಿ ಒಳಗೊಳ್ಳುತ್ತದೆ. ಈ ವರ್ಗೀಕರಣದೊಳಗೂ ಸೇರದ ಅನೇಕ ನಂಬಿಕೆಗಳಿವೆ.

**ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದ ಪ್ರಕಾರ –**

1. ಅತಿಮಾನುಷ
2. ಮಾನುಷ
3. ಪ್ರಾಣಿ
4. ಪ್ರಕೃತಿ
5. ಕೌಟುಂಬಿಕ
6. ಸಂಕೀರ್ಣ

**ದೇಜಗೌ ಅವರ ಪ್ರಕಾರ –**

ದೇಜಗೌ ಅವರು ದಕ್ಷಿಣ ಭಾರತದ ನಂಬಿಕೆಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ನಂಬಿಕೆಗಳನ್ನು ಹತ್ತು ಗುಂಪಾಗಿ ವಿಂಗಡಿಸಿದ್ದು ಹೆಚ್ಚು ಸೂಕ್ತವಾಗಿದೆ ಎನಿಸುತ್ತದೆ.

1. ಧಾರ್ಮಿಕ ನಂಬಿಕೆಗಳು
2. ಐತಿಹ್ಯಾತ್ಮಕ ನಂಬಿಕೆಗಳು
3. ಗೃಹನಂಬಿಕೆಗಳು
4. ವೈದ್ಯಕೀಯ ನಂಬಿಕೆಗಳು
5. ಔದ್ಯೋಗಿಕ ನಂಬಿಕೆಗಳು
6. ನೈಸರ್ಗಿಕ ನಂಬಿಕೆಗಳು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

7. ಪ್ರಾಣಿ ನಂಬಿಕೆಗಳು
8. ಮಂತ್ರ ಸಂಬಂಧಿ ನಂಬಿಕೆಗಳು
9. ಜ್ಯೋತಿಷ್ಯಾತ್ಮಕ ನಂಬಿಕೆಗಳು
10. ಸಂಕೀರ್ಣ ನಂಬಿಕೆಗಳು

ಈ ಬಗೆಯ ಸೂಕ್ಷ್ಮ ವರ್ಗೀಕರಣದ ಫಲವಾಗಿ ಅಧ್ಯಯನಕ್ಕೆ ಖಚಿತತೆ ಬರುತ್ತದೆ.

## ಮಾನವ ಸಂಬಂಧಿ ನಂಬಿಕೆಗಳು

'ಗಂಡಿನ ಬಲಗಣ್ಣು ಹಾಗೂ ಬಲಭುಜ ಅದರಿದರೆ ಶುಭವಾಗುವದು' ಅಲ್ಲದೆ 'ಹೆಣ್ಣಿಗೆ ಎಡಗಣ್ಣು ಅದರಿದರೆ ಶುಭವಾಗುವದು' ಎಂಬ ನಂಬಿಕೆಗಳಿವೆ. ಉಪ್ಪು ತುಳಿದರೆ ಕಣ್ಣು ಕುರುಡಾಗುವವು ಇಂಥ ಕೆಲ ನಂಬಿಕೆಗಳು ಉಪಯುಕ್ತವೆಂದೇ ಹೇಳಬೇಕು. ಉಪ್ಪಿನಲ್ಲಿ ಅನ್ನದ ಸಾರವನ್ನು ಹೆಚ್ಚಿಸುವ ಗುಣವಿದೆ. ಅದಕ್ಕಾಗಿ 'ಉಪ್ಪಿಗಿಂತ ರುಚಿಯಿಲ್ಲ, ಎಂಬ ಮಾತು ಜನಭರಿತವಾಗಿದೆ. ಅನ್ನದ ಬಗ್ಗೆ ಇರುವ ಭಕ್ತಿ ಉಪ್ಪಿನ ಮೇಲೆಯೂ ಇರಬೇಕೆಂಬ ಬೋಧನೆ ಮಾಡುವಾಗ ಕಣ್ಣು ಕುರುಡಾಗುವವು' ಎಂಬ ಬೆದರಿಕೆ ಹಾಕಿರಬೇಕು. ಅನ್ನದೇವರೆಂಬಂತೆ ಉಪ್ಪಿನ ಬಗ್ಗೆಯೂ ದೈವೀಕಲ್ಪನೆ ಕುದುರಿಸುವದಕ್ಕಾಗಿ ಈ ಹಿತೋಕ್ತಿ ನಂಬಿಕೆಯ ರೂಪಧರಿಸಿ ಬಳಕೆಗೆ ಬಂದಿರಬೇಕು.

ಕಣ್ಣಿನ ಕುರಿತ ಕೆಲವು ಮೂಢನಂಬಿಕೆಗಳೂ ಇವೆ. 'ಹುಬ್ಬಿನ ಕೂದಲು ಕೂಡಿದರೆ ನಪೂಂಸಕರಾಗುವರು', 'ಮೆಳ್ಳಗಣ್ಣಿನ ಸೊಸೆ ಇದ್ದರೆ ಮನೆ ಏರುತ್ತದೆ', 'ಕರಿಕಣ್ಣಿನ ಹೆಣ್ಣನ್ನು ಮದುವೆಯಾದರೆ ಮಸಣ ಸಮೀಪ' ಮೊದಲಾದವು ಕಣ್ಣನ್ನು ಕುರಿತ ರೂಢಿಯಲ್ಲಿರುವ ಅರ್ಥವಿಲ್ಲದ ನಂಬಿಕೆಗಳು.

ಕಾಯಕ ಮಾಡುವ ಕೈಗಳ ಬಗ್ಗೆ ಜನಪದೀಯರಲ್ಲಿ ಎಲ್ಲಿಲ್ಲದ ಅಭಿಮಾನ. ಸಮರ್ಥ ರೀತಿಯಲ್ಲಿ ಚಿಕಿತ್ಸೆ ನೀಡುವ ವೈದ್ಯರನ್ನು ಅವರ ಚಿಕಿತ್ಸೆಯ ರೀತಿಯನ್ನು ಗಮನಿಸದೇ 'ಕೈಗುಣ ಒಳ್ಳೆಯದು' ಎಂದು, ಕೊಟ್ಟ ದುಡ್ಡು ಮರಳಿ ಬರದಾದಾಗ 'ಕೈಗುಣ್ಣ ಕೆಟ್ಟದ್ದು' ಎಂದು ತೀರ್ಮಾನಿಸುವಲ್ಲಿ 'ಕೈ' ಮೊದಲ ಮಾತಾಗಿ ಬರುತ್ತದೆ ಈ ಅಂಗವನ್ನು ಕುರಿತು ಸಾಕಷ್ಟು ನಂಬಿಕೆಗಳು ರೂಢಿಯಲ್ಲಿವೆ.

'ತಲೆಯ ಮೇಲೆ ಕೈಹೊತ್ತು ಕುಳಿತರೆ ಬಡತನ ಬರುತ್ತದೆ', 'ಕೈಕಟ್ಟಿ ಕುಳಿತಕೊಂಡರೆ ದಾರಿದ್ರ್ಯ ಅಪ್ಪಳಿಸುತ್ತದೆ' ಎಂಬ ನಂಬಿಕೆಗಳು ಚಿಂತೆ ಹಾಗೂ ದಾರಿದ್ರ್ಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದು, ಕೆಲಸ ಮಾಡುವ ಕೈಗಳನ್ನು ಬಂಧಿಸಿ ಕೂಡುವುದು ಒಳ್ಳೆಯದಲ್ಲ. ಕಾರ್ಯಶೀಲನಾಗು, ಕ್ರಿಯಾಶೀಲತೆಯಿಂದ ಏನೆಲ್ಲವನ್ನೂ ಪಡೆಯಲು ಸಾಧ್ಯವೆಂಬ ಪರೋಕ್ಷ ಬೋಧನೆ ಇಂಥ ನಂಬಿಕೆಗಳಿಗೆ ಹಿನ್ನೆಲೆಯಾಗಿದೆ. 'ಕೈಕೆಸರಾದರೆ ಬಾಯಿ ಮೊಸರು' ಎಂಬ ನಾಣ್ಣುಡಿ ಇಂಥ ನಂಬಿಕೆಗಳಿಗೆ ಪೋಷಣೆ ನೀಡುವದು.

'ಆಕಳಿಸುವಾಗ ಕೈಬೆರಳ ಚಟಕಿ ಹೊಡೆಯಬಾರದು' ಆಕಳಿಕೆ ನಿದ್ರೆಯ ಸೂಚನೆಯನ್ನು ನೀಡುವದಾಗಿದೆ. ಬಾಯಿಗೆ ಅಂಗೈ ಮುಚ್ಚಿ ಆಕಳಿಸುವದು ಆರೋಗ್ಯದಾಯಕ ಲಕ್ಷಣ. ಆಕಳಿಸುವಾಗ ಏದುಸಿರನ್ನು ಒಳಗೆ ಎಳೆದುಕೊಂಡು ಹೊರಗೆ ಬಿಡುವ ಕ್ರಿಯೆ ನಡೆಯುವದು. ಆಕಳಿಸುವ ವ್ಯಕ್ತಿ ರೋಗದಿಂದ ಬಳಲುವವನಾಗಿದ್ದರೆ, ಆತನ ಅಂತರಾಳದಿಂದ ಬರುವ ಬಿರುಸಿನ ಬಿಸಿಯುಸಿರು ಎದುರಿಗೆ ಕುಳಿತವರಿಗೆ ಬಡಿಯದಿರಲೆಂದು, 'ಅಂಗೈಯಿಂದ ಬಾಯಿ ಮುಚ್ಚಿ ಆಕಳಿಸುವದು ಆರೋಗ್ಯದಾಯಕ' ಎಂಬ ನಂಬಿಕೆ ರೂಢಿಯಲ್ಲಿ ಬಂದಿರಬೇಕು.

- 'ಆರು ಬಟ್ಟಿನ ಕೂಸು ಹುಟ್ಟಿದರೆ ಅನ್ನ ಹೆಚ್ಚುವದು.'
- 'ಮುತ್ತೈದೆಯರು ಮುಂಗೈಗೆ ಹಸಿರು ಬಳೆ ಧರಿಸಬೇಕು.'
- 'ಎರಡೂ ಕೈಗಳಿಂದ ತಲೆ ತುರಿಸಬಾರದು'

ಇವೆಲ್ಲ 'ಕೈ'ಯನ್ನು ಕುರಿತ ಆರೋಗ್ಯದಾಯಕ ನಂಬಿಕೆಗಳಾದರೆ, ಅರ್ಥವಿಲ್ಲದ ಕೆಲ ನಂಬಿಕೆಗಳನ್ನು ಈ ಕೆಳಕಂಡಂತೆ ಗುರುತಿಸಬಹುದು.

**ಉದಾ.** 'ಅಂಗೈ ತುರಿಸಿದರೆ ರೊಕ್ಕ ಖರ್ಚಾಗುವವು'

- 'ಹೆಣ್ಣು ಮಕ್ಕಳ ಕೈಮೇಲೆ ಕೂದಲು ಇದ್ದರೆ ಬೇಗನೆ ಅಮಂಗಲೆಯರಾಗುವರು.'

ಇಂಥ ನಂಬಿಕೆಗಳಿಗೆ ಅರ್ಥ ಹುಡುಕುವದು ಕಷ್ಟದ ಕೆಲಸವೆಂದೇ ಹೇಳಬೇಕು.

'ಮೂಗು', ಮುಖಕ್ಕೆ ಮೆರಗು ತರುವ ಪ್ರಮುಖ ಅಂಗ. ಅದು ನೀಟಾಗಿರಬೇಕೆಂಬುದೇ ಸರ್ವರ ಅಭಿಲಾಷೆ. ಸೌಂದರ್ಯ ವರ್ಣನೆಯ ಸಂದರ್ಭದಲ್ಲಿ ಮೂಗನ್ನು ಸಂಪಿಗೆ ಎಸಳಿಗೆ ಹೋಲಿಸಿ ಹೇಳುವ ಸನ್ನಿವೇಶಗಳು ಸಾಹಿತ್ಯದಲ್ಲಿ ವಿಪುಲವಾಗಿ ಬೆಳೆದು ಬಂದಿವೆ. 'ಬಟ್ಟನ್ನು ಮುಖಕ್ಕೆ ನೆಟ್ಟನ್ನು ಮೂಗು' ಎಂದು ಜನಪದ ಗೀತೆಗಳಲ್ಲಿ ವರ್ಣಿಸಲಾಗಿದೆ. ಅದಕ್ಕಾಗಿ ಎದ್ದು ಕಾಣುವ ಮೂಗು ಸೌಂದರ್ಯದ ಹೆಚ್ಚಳಕ್ಕೆ ಪೂರಕವೆಂಬ ಕಲ್ಪನೆಯಿಂದ 'ಮೂಗು ಉದ್ದ ಇದ್ದವರು ಪುಣ್ಯವಂತರು' ಎಂಬ ನಂಬಿಕೆ ಹುಟ್ಟಿಕೊಂಡಿದೆ. ಮೂಗಿಗೂ ಪುಣ್ಯವಂತರಾಗುವದಕ್ಕೂ ಯಾವುದೇ ಸಂಬಂಧವಿಲ್ಲದೇ ಹೋದರೂ ಸಹ, ಚಪ್ಪಟೆ ಮೂಗು ಸೌಂದರ್ಯವರ್ಧಕ ಅಲ್ಲವೆಂಬುದು ಗಮನಾರ್ಹ.

## ನಂಬಿಕೆ – ಮೂಢನಂಬಿಕೆ

ನಂಬಿಕೆಗಳನ್ನು ನಂಬಿಕೆ, ಮೂಢ'ನಂಬಿಕೆ ಎಂದು ವರ್ಗೀಕರಿಸಿಕೊಂಡು ಅಧ್ಯಯನ ನಡೆದುಬಂದಿದೆ. ಆದರೆ ವಾಸ್ತವಿಕವಾಗಿ ಈ ವರ್ಗೀಕರಣ ಸಮಂಜಸವಲ್ಲ ಯಾಕೆಂದರೆ ನಂಬಿಕೆಯೊಂದು ದೇಶ, ಕಾಲ, ವ್ಯಕ್ತಿಯೊಂದಿಗೆ ಸಾಪೇಕ್ಷ ಸಂಬಂಧ ಹೊಂದಿರುವಂತಹದು. ಒಂದು ನಂಬಿಕೆ ಒಬ್ಬನಿಗೆ ನಂಬಿಕೆಯಾಗಿದ್ದರೆ, ಇನ್ನೊಬ್ಬನಿಗೆ ಅದು ಮೂಢನಂಬಿಕೆಯಾಗಬಹುದು. ಅಥವಾ ಆ ವ್ಯಕ್ತಿಗೆ ಕೆಲವು ಕಾಲದ ಅನಂತರ ಮೂಢನಂಬಿಕೆ ಎನಿಸಬಹುದು. ಉದಾಹರಣೆಗೆ ವಿಧವೆ ಅಪಶಕುನ ಎನ್ನುವ ಭಾರತದ ನಂಬಿಕೆ ಅಮೇರಿಕನ್‌ರಿಗೆ ಮೂಢ ನಂಬಿಕೆಯಾಗುತ್ತದೆ ಅಥವಾ ಭಾರತದಲ್ಲೂ ವಿಚಾರವಂತರಿಗೆ ಅದು ಮೂಢನಂಬಿಕೆ ಎನಿಸುತ್ತದೆ. ಇದನ್ನು ಬಲವಾಗಿ ನಂಬಿದ್ದ ವ್ಯಕ್ತಿಗೂ ಕಾಲಸರಿದಾಗ ಅದು ಮೂಢನಂಬಿಕೆಯಾಗುವ ಸಾಧ್ಯತೆ ಇದೆ. ಅಂದರೆ ಇಲ್ಲಿರುವ ತರ್ಕವನ್ನು ನಂಬಿಕೆಯ ಪ್ರಮಾಣದಲ್ಲಿರುವ ವ್ಯತ್ಯಾಸವಾಗಿ ಗ್ರಹಿಸಬೇಕಾಗಿದೆ. ಒಂದು ನಂಬಿಕೆ ಕಾರ್ಯಕಾರಣ ಸಂಬಂಧವನ್ನು ಕಳೆದುಕೊಂಡಾಗ ಆಗ ನಂಬಿಕೆಗಳು ಜನಬದುಕಿನಿಂದ ದೂರವಾಗಿ ವಿಸ್ಮೃತಿಯನ್ನು ಸೇರುತ್ತವೆ, ಅಥವಾ ಅದರ ಗರ್ಭಕೋಶದಿಂದ ಇನ್ನೊಂದು ನಂಬಿಕೆಯಾಗಿ ರೂಪಾಂತರಗೊಳ್ಳುತ್ತದೆ. ಉದಾಹರಣೆಗೆ ಸೂರ್ಯ–ಚಂದ್ರರನ್ನು ರಾಹು–ಕೇತುಗಳು ನುಂಗಿದಾಗ ಗ್ರಹಣವಾಗುತ್ತದೆ ಎನ್ನುವ ನಂಬಿಕೆಯನ್ನು ಖಗೋಳಶಾಸ್ತ್ರದ ವೈಜ್ಞಾನಿಕ ಬೆಳವಣಿಗೆ ಸಡಿಲಗೊಳಿಸಿದೆ. ಮನಿಪ್ಲಾಂಟ್ ಗಿಡ ಮನೆಯಲ್ಲಿ ಹುಲುಸಾಗಿ ಹಬ್ಬಿದರೆ ಸಂಪತ್ತು ಹೆಚ್ಚುತ್ತದೆ.

## ನಂಬಿಕೆ – ಸಂಪ್ರದಾಯ – ಆಚರಣೆ

ನಂಬಿಕೆ, ಸಂಪ್ರದಾಯ, ಆಚರಣೆಗಳು ಪರಸ್ಪರ ಸೋದರ ಸಂಬಂಧಿಯಾದವುಗಳು. ಇವುಗಳ ಸಂಬಂಧವನ್ನು ಯಾವುದು, ಏನು ಮತ್ತು ಹೇಗೆ ಎನ್ನುವ ನೆಲೆಯಲ್ಲಿಟ್ಟು ವಿಶ್ಲೇಷಿಸಬಹುದು. ಕಾಡ್ಯನಾಟ ಆಡಿಸಿದರೆ ಸಂತಾನ ಪ್ರಾಪ್ತಿಯಾಗುತ್ತದೆ ಎನ್ನುವುದು ದಕ್ಷಿಣ ಕನ್ನಡದ ಪರಿಶಿಷ್ಟ ಜನಾಂಗ ಮೇರರಲ್ಲಿರುವ ಒಂದು ನಂಬಿಕೆ. ಜಾತಿ ಬಾಂಧವರು

*– 35ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಿಶ್ವಗುರು ಬಸವಣ್ಣನವರ ವಚನಗಳಲ್ಲಿ ಅಡಕವಾದ ಮೌಲ್ಯಯುತ ವಿಚಾರಗಳು–ಒಂದು ನೋಟ

✍ **ಶಿವಾನಂದ ಹಿರೇಮಠ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುಲೇಪೇಟ.

ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಪ್ರಾಚೀನತೆ ಇದೆ. ಪ್ರಾರಂಭದಲ್ಲಿ ಕೇವಲ ಪದಗಳ ರೂಪದಲ್ಲಿ ಶಾಸನ ಹಾಗೂ ಅನ್ಯ ಭಾಷಾ ಗ್ರಂಥಗಳಲ್ಲಿ ಗೋಚರವಾದ ಕನ್ನಡ ಭಾಷೆ ಮುಂದೆ ವಿಫುಲವಾಗಿ ಕಂಡುಬಂದು ತನ್ನದೇ ಆದ ವೈಶಿಷ್ಟ್ಯತೆಯಿಂದ ವಿಶ್ವವ್ಯಾಪಕತೆಯ ಮಟ್ಟವನ್ನು ತಲುಪಿದೆ. ಇಂದು ಭಾರತವೇ ಅಲ್ಲ ಪ್ರಪಂಚದಲ್ಲಿಯೂ ತನ್ನದೇ ಆಗಿರುವ ವಿಶೇಷವಾದ ಛಾಪು ಕನ್ನಡ ಭಾಷೆಗಿದೆಯೆಂದರೆ ಅತಿಶಯೋಕ್ತಿ ಎನಿಸಲಾರದು. ಹಲವಾರು ಚಂಪೂ ಕವಿಗಳು ಮಹಾಕಾವ್ಯವನ್ನು ಬರೆದು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದರು. ತದನಂದರ ಬಂದ ಶರಣಪುಂಗವರು ವಚನರಚನೆಯ ಮೂಲಕ ಸಮಾಜವನ್ನು ಶುಭ್ರಗೊಳಿಸುವ ಕೆಲಸದಲ್ಲಿ ನಿರತರಾದರು. ಪ್ರಾಚೀನ ಕಾಲದಲ್ಲಿ ಕೇವಲ ರಾಜಾಶ್ರಯದಲ್ಲಿ ಬಂಧಿಯಾಗಿದ್ದ ಸಾಹಿತ್ಯ ಬೀದಿಗೆ ಬರಲು ಕಾರಣವಾದದ್ದು ಈ ಶರಣವರೇಣ್ಯರ ಪ್ರಯತ್ನದ ಫಲದಿಂದ ಮಾತ್ರವಾಗಿದೆ. ಆಳುವ ಅರಸರನ್ನು ಧಿಕ್ಕರಿಸಿ, ಅವರನ್ನೇ ಖಡಾಖಂಡಿತವಾಗಿ ಟೀಕಿಸಿ ಸಾಹಿತ್ಯವನ್ನು ರಚಿಸಿ ಜನಮಾನಸ ಸೇರಿದ್ದು ಒಂದು ಪವಾಡವೇ ಸರಿ.

ವೇದಾಗಮ ಪುರಾಣಗಳೆಲ್ಲವೂ ಸಂಸ್ಕೃತಜನ್ಯವಾಗಿದ್ದು ಜನಸಾಮಾನ್ಯರಿಂದ ತುಂಬಾ ದೂರದಲ್ಲಿ ನಿಂತಿದ್ದವು. ಅಂತಹ ಸಂದರ್ಭದಲ್ಲಿ ಬಸವಗಣದ ಪ್ರಧಾನರಾದ ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಚನ್ನಬಸವಣ್ಣ, ಹಡಪದ ಅಪ್ಪಣ್ಣ, ಅಂಬಿಗರ ಚೌಡಯ್ಯ ಹೀಗೆ ನೂರಾರು ವಚನಕಾರರು ನಿತ್ಯ ಜೀವನದಲ್ಲಿ ಬಳಕೆಯಾಗುವ ಆಡುಮಾತಿನ ಸರಳತೆಯ ಸಾಹಿತ್ಯವನ್ನು ರಚಿಸಿ ಜನರನ್ನು ತಮ್ಮತ್ತ ಆಕರ್ಶಿಸಿದರು. ಹೀಗೆ ಶರಣರು ಸಮಾಜಕ್ಕೆ ಬದುಕಿನ ನೈಜಮಾರ್ಗವನ್ನು ಅರುಹಿದರು. ಅವರ ಸರಳತನ, ಸತ್ಯ, ನಿರಾಡಂಬತೆ, ಅಂತ್ಯಜರ ಕುರಿತಾಗಿನ ಕಾಳಜಿ ಇಂತಹ ಹಲವಾರು ಮಾನವೀಯ ಅಂಶಗಳು ಜನರ ಕಣ್ಣು ತೆರೆಯಿಸಿದವು. ಪುರೋಹಿತ ವರ್ಗವು ಮುಕ್ತಿಗೆ ದಾರಿಯೆಂದು ತೋರಿಸುತ್ತಿದ್ದ ಕುಟಿಲ ಭಕ್ತಿ, ಆಡಂಬರದ ಪೂಜೆ, ದುಬಾರಿಯಾದ ದಾನಗಳು ಅರ್ಥಹೀನವೆಂದು ಮನಗಂಡ ಅಂದಿನ ಸಮಾಜದಲ್ಲಿ ಗಮನಾರ್ಹವಾದ ಬದಲಾವಣೆಗಳು ರಕ್ತಗತ ಮಾಡಿಕೊಳ್ಳಲು ಪ್ರಾರಂಭಿಸಿತು. ಜನರು ವೈದಿಕ ಪರಂಪರೆಯಿಂದ ದೂರಸಾಗಲು ಪ್ರಾರಂಭಿಸಿ ಹೊಸ ಆಲೋಚನಾ ಲಹರಿಯ ವೀರಶೈವ ಲಿಂಗಾಯತ ವಿಚಾರಧಾರೆಯೆಡೆಗೆ ಸಾಗಿಬಂದರು. ಈ ಎಲ್ಲ 'ಸಾಮಾಜಿಕ ಕ್ರಾಂತಿಯ ಪಿತಾಮಹ ಬಸವಣ್ಣ'ನೆಂಬ ಮಾತು ಅಕ್ಷರಶಃ ಸತ್ಯವಾಗಿದೆ. ಅಣ್ಣನವರು ಅಲ್ಪಕಾಲ ಬದುಕಿದ್ದರೂ ಸಹ ತಮ್ಮ ಅಸಾಧಾರಣವಾದ ಕಾರ್ಯ ಕ್ಷಮತೆಯಿಂದ ಇಡೀ ಜಗತ್ತಿಗೆ ಮಾರ್ಗ ದರ್ಶಕರಾದರು. ಎಲ್ಲಾ ರೀತಿಯ ಜನರಿಗೂ ಸುಲಭವಾಗಿ ಗ್ರಾಹ್ಯವಾಗುವಂತೆ ಸಂಸ್ಕೃತದಲ್ಲಿದ್ದ ಜ್ಞಾನ ರಾಶಿಯನ್ನು ಸರಳ ಸುಂದರ ರೂಪವಾಗಿಸಿ ಕನ್ನಡಿಸಿದ ಹಿರಿಮೆ ಅಣ್ಣನವರದಾಗಿದೆ.

ಸಮಾಜದಲ್ಲಿ ಕಾಣಬರುವ ಮೌಢ್ಯತೆ, ಕಂದಾಚಾರ, ಮತೀಯತೆ, ಜಾತೀಯತೆ, ನಿಮ್ನ ವರ್ಗಗಳ ಮೇಲಿನ ಬಲಾಢ್ಯತೆ, ಡಾಂಭಿಕ ಭಕ್ತಿ ಹೀಗೆ ಹಲವಾರು ವಿಚಾರಗಳನ್ನು ಬಸವಣ್ಣನವರು ತಮ್ಮ ವಚನ ವಾಙ್ಮಯದಲ್ಲಿ ಖಂಡಿಸಿದ್ದಾರೆ. ಹಲವಾರು ದೈವಗಳನ್ನು ಪೂಜಿಸುವುದರ ಮೂಲಕ ತಾನೇ ಗೊಂದಲದಲ್ಲಿ ಸಿಲುಕುವ ಭಕ್ತರನ್ನು ಟೀಕಿಸುತ್ತಾರೆ. ಮುಕ್ಕೋಟಿ ದೇವರೆಂದು ಪೂಜಿಸುವ ಅಣ್ಣಗಳಿರಾ ನೀವೇನು ಬಲ್ಲಿರಿ ದೇವರ ಇರುವಿಕೆಯೆಂದು ಪ್ರಶ್ನಿಸುತ್ತಾರೆ.

**ದೇವನೊಬ್ಬ ನಾಮ ಹಲವು**
**ಪರಮ ಪತಿವ್ರತೆಗೆ ಗಂಡನೊಬ್ಬ**
**ಮತ್ತೊಂದಕ್ಕೆರಗಿದರೆ ಕಿವಿಮೂಗ ಕೊಯ್ಯುವನು**
**ಹಲವು ದೈವದೆಂಜಲವ ತಿಂಬುವವರ ಏನೆಂಬೆ ಕೂಡಲಸಂಗಮದೇವಾ.**

ಅಣ್ಣನವರ ವಚನಗಳಲ್ಲಿ ಅಡಕವಾದ ಅಂತರಾಳದ ಕಳಕಳಿಯನ್ನು ಗಮನಿಸಿದಾಗ ಅವರ ವ್ಯಕ್ತಿತ್ವದ ದರ್ಶನ ಓದುಗನಿಗೆ ಉಂಟಾಗುತ್ತದೆ. ಪರಿಶುದ್ಧವಾದ ಸಮಾಜವನ್ನು ಕಟ್ಟುವಲ್ಲಿ ಅವರ ವಚನಗಳ ಪಾತ್ರ ಮಹತ್ವದ್ದಾಗಿದೆ. ಅಂದಿನ ಕ್ಲಿಷ್ಟ ಸಮಾಜವನ್ನು ಟೀಕಿಸುವುದು ಸುಲಭ ಗ್ರಾಹ್ಯವಾದ ಕಾರ್ಯವಾಗಿರಲಿಲ್ಲ. ಇಂದಿನ ತಂತ್ರಜ್ಞಾನ ಕಾಲದಲ್ಲೇ ಜಾತಿಯ ಮಾತುಗಳು ಕಷ್ಟವಾಗಿರುವಾಗ ಸಾಸಿರ ವರ್ಷಗಳ ಹಿಂದೆ ಮಾಡಿದ ಅಣ್ಣನವರ ವಿಡಂಬನಾ ಕಾರ್ಯ ಜೇನುಗೂಡಿಗೆ ಕಲ್ಲೆಸೆದ ಸಾಹಸವೇ ಆಗಿತ್ತು. ತಮ್ಮ ಇಡೀ ಬದುಕನ್ನೇ ಸಮಾಜಕ್ಕೆ ಅರ್ಪಿಸಿದ ಮಹನೀಯರಾದ ಬಸವಣ್ಣ ಸದಾ ಸಮಾಜಮುಖಿ ಚಿಂತಕರಾಗಿ ಮಿನುಗುತ್ತಾರೆ.

ದೀನದಲಿತರ, ದಾರಿದ್ರ್ಯರ ಕುರಿತಾಗಿನ ಅವರ ಚಿಂತನೆಗಳು ಪ್ರತಿಯೋರ್ವರ ಮನಸನ್ನು ಆರ್ದ್ರಗೊಳಿಸುತ್ತವೆ. ಸಮಾಜದ ಉನ್ನತವರ್ಗದ ವಿರೋಧವನ್ನು ಕಟ್ಟಿಕೊಂಡು ಸುಧಾರಣೆಗೈವ ಅವರ ಮನೋಬಲ ಮೆಚ್ಚುವಂತದ್ದಾಗಿದೆ. ನೇರ ನುಡಿವುಳ್ಳ ಅಣ್ಣನವರು ಶ್ರೀಮಂತರ ಕುಟಿಲ ವ್ಯಾಪಾರವನ್ನು ಬಯಲಿಗೆಳೆಯುತ್ತಾರೆ.ಸಂಪತ್ತಿನ ಮೋಹ ಆವರಿಸಿದ ವ್ಯಕ್ತಿಗೆ ಎದುರಿಗಿರುವ ಸಾಮಾನ್ಯನು ಕುಬ್ಜನಾಗಿ ತೋರುತ್ತಾನೆಂದು ತಮ್ಮದೊಂದು ವಚನದಲ್ಲಿ ಹೀಗೆ ತಿಳಿಸಿದ್ದಾರೆ.

**ಹಾವುತಿಂದವರ ನುಡಿಸಬಹುದು**
**ಗರಹೊಡೆದವರ ನುಡಿಸಬಹುದು**
**ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ**

ಧನಪಿಶಾಚದ ಮನೋವೃತ್ತಿಯ ಮಾನವ ಸದಾ ಹಣ ಸಂಗ್ರಹಿಸುವಲ್ಲಿ ವಾಮಮಾರ್ಗದಲ್ಲಿ ಸಾಗಲು ಹಿಂಜರಿಯಲಾರನು. ತನಗಲ್ಲದೆ ತನ್ನ ಮುಂದಿನ ನಾಲ್ಕೈದು ತಲೆಮಾರಿಗೆ ಸಾಕಾಗುವಷ್ಟು ಸಂಪತ್ತನ್ನು ಸಂಗ್ರಹಿಸುತ್ತಾನೆ. ಎಷ್ಟೇ ಸಂಪತ್ತನ್ನು ಕೂಡಿಹಾಕಿದರು ಆತನಿಗೆ ತೃಪ್ತಿ ಎಂಬುದಿಲ್ಲ. ಹೀಗೆ ಗಳಿಸಿದ ಹಣವನ್ನು ಕುರಿತು ಅಣ್ಣನವರು ತಮ್ಮದೊಂದು ವಚನದಲ್ಲಿ ಹೀಗೆಂದು ಹೇಳುತ್ತಾರೆ.

**ಪಾಪಿಯ ಧನ ಪ್ರಾಯಶ್ಚಿತ್ತಕಲ್ಲದೆ**
**ಸತ್ಪಾರಕ್ಕೆ ಸಲ್ಲದಯ್ಯ**
**ನಾಯಿ ಹಾಲು ನಾಯಿಗಲ್ಲದೆ**
**ಪಂಚಾಮೃತಕ್ಕೆ ಸಲ್ಲದಯ್ಯ**

ಬಸವಾದಿ ಶರಣರು ಕರಾರುವಕ್ಕಾದ ನೈತಿಕ ಬದುಕನ್ನು ಸವಿಸಿದರೆಂಬುದು ಅವರ ವಚನಗಳಿಂದ ಪ್ರತಿಯೊಬ್ಬರಿಗೂ ವೇದ್ಯವಾಗುವ ಪ್ರಾಥಮಿಕ ತಿಳಿವಳಿಕೆಯಾಗಿದೆ. ಸಂಪತ್ತಿಗೆ ಆಸೆಗೈಯ್ಯದೆ, ಐಶಾರಾಮಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬದುಕಿಗೆ ಅಂಟದೇ ಕಾಯಕ ನಿರತರಾದ ಶರಣರು **ನುಡಿದಂತೆ ನಡೆದು** ಬಾಹ್ಯ ಪ್ರಪಂಚಕ್ಕೆ ಮಾದರಿಯಾಗಿದ್ದಾರೆ. ಮನೋವಿಕಾರಗಳಿಂದ ಮುಕ್ತರಾಗಿ ಬದುಕಿನ ಅತೀವ ಜಂಜಾಟದಿಂದ ದೂರವೇ ಇದ್ದ ಶರಣರು ಸಾವಿನ ಕುರಿತಾಗಿ ಧನಾತ್ಮಕವಾದ ಮನೋಭಾವವನ್ನು ತಾಳಿದವರಾಗಿದ್ದರು. ಮರಣವನ್ನು ಕುರಿತಾಗಿ **ಮರಣವೇ ಮಹಾನವಮಿ** ಎಂತಾಗಿ ಆಚರಿಸಬೇಕೆಂಬ ಅವರ ಧೈರ್ಯ ಶರಣರಿಗೆ ಮಾತ್ರ ಸಾದುವಾಗುವಂತಹುದಾಗಿದೆ. ಅಣ್ಣನವರು ಸಾವಿನ ಆಹ್ವಾನವನ್ನು ತುಂಬಾ ಮಾರ್ಮಿಕವಾಗಿ ತಮ್ಮದೊಂದು ವಚನದಲ್ಲಿ ಉಲ್ಲೇಖಿಸಿದ್ದಾರೆ.

**ನಾಳೆ ಬಪ್ಪುದು ನಮಗಿಂದೇ ಬರಲಿ**
**ಇಂದು ಬಪ್ಪುದು ನಮಗೀಗಲೇ ಬರಲಿ**
**ಇದಕ್ಕಂಜುವರಾರು ? ಇದಕ್ಕಳುಕುವರಾರು ?**
**ಜಾತಸ್ಯಮರಣಂ ಧ್ರುವಂ**

ಹುಟ್ಟಿದೊಂದು ದಿನ ಎಲ್ಲವೂ ಕೊನೆಗಾಣಲೇಬೇಕೆಂಬ ಬಸವಣ್ಣನವರ ಜಾತಸ್ಯ ಮರಣಂ ಧ್ರುವಂ ಎಂಬ ಮಾತು ಅಂತರ್ಗತವಾದ ಮಾನಸಿಕ ಸಿದ್ಧತೆಯನ್ನು ಪ್ರತಿನಿಧಿಸುತ್ತದೆ. ಸಾವನ್ನೇ ಸರಳವಾಗಿ ಸ್ವೀಕರಿಸುವ ಪರಿಯನ್ನು ಕಂಡಾಗ ಕೋಟಿಗೊಬ್ಬನೇ ಶರಣನಾಗಲು ಸಾಧ್ಯವೆಂಬ ಮಾತು ದಿಟವಾಗುತ್ತದೆ.

ಸಮಾಜದ ಅನಿಷ್ಟ ಸಂಪ್ರದಾಯಗಳಾದ ಮರವನ್ನು ಸುತ್ತುವ, ಕೆರೆಯಲ್ಲಿ ಮುಳುಗುವ, ಬರಿಗಾಲ ದೇವದರ್ಶನ, ಉಪವಾಸದಂತ ಆಚರಣೆಗಳನ್ನು ಅಲ್ಲಗಳೆದಿದ್ದಾರೆ. ಬರೀ ದೇಹವನ್ನು ದಂಡಿಸಿದರೆ ಸಾಲದು ಅದು ಅರ್ಥಹೀನ ಆಚರಣೆಯಾಗಿದ್ದು ಮನಶುದ್ಧಿಯ ಕಡೆಗೆ ಸಾಗುವಂತೆ ಕರೆನೀಡಿದರು.

**ನೀರಕಂಡಲ್ಲಿ ಮುಳುಗುವರಯ್ಯ**
**ಮರವಕಂಡಲ್ಲಿ ಸುತ್ತುವರಯ್ಯ**
**ಬತ್ತುವಜಲವ, ಒಣಗುವ ಮರವ ಮೆಚ್ಚಿದವರು**
**ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ**

ಬಸವಣ್ಣನವರು ಹಲವಾರು ವಚನಗಳಲ್ಲಿ ದೈಹಿಕ ನಶ್ವರತೆಯನ್ನು ಕುರಿತು ಬರೆದಿದ್ದಾರೆ. ಇಂದ್ರಿಯ ಸುಖಕ್ಕಾಗಿ ಹಾತೊರೆದರೆ ನೈತಿಕ ಅಧಃಪತನ ಏರ್ಪಡುತ್ತದೆಂದು ಸಾರಿ ಹೇಳಿದ್ದಾರೆ. ಜೀವವಿರುವಾಗ ದೇಹಕ್ಕೆ ಇರುವ ಬೆಲೆ ಹಾರಿ ಹೋದ ಮೇಲೆ ತೃಣಕ್ಕೆ ಸಮಾನವಾಗುತ್ತದೆಂದು ಪ್ರಾತ್ಯಕ್ಷತೆ ಮೂಲಕ ತಿಳಿಸುತ್ತಾರೆ.

**ವ್ಯಾಧನೊಂದು ಮೊಲವ ತಂದಡೆ**
**ಸಲುವ ಹಾಗಕ್ಕೆ ಬೆಲೆಗೈಯ್ಯುವರಯ್ಯ**
**ನೆಲನಾಳ್ವನ ಹೆಣನಂದಡೆ ಒಂದಡಕೆಗೆ**
**ಕೊಂಬುವರಿಲ್ಲ ನೋಡಾ**
**ಮೊಲನಿಗಿಂತಲೂ ಕರಕಷ್ಟ ನರನ ಬಾಳುವೆ**
**ಸೆಲೆನಂಬೋ ನಮ್ಮ ಕೂಡಲಸಂಗಮದೇವನ**

ಶರಣರೆಲ್ಲರು ಅಂತರಾತ್ಮದಲ್ಲಿ ಅಡಕವಾದ ಶಿವನನ್ನು ಪೂಜಿಸುತ್ತಿದ್ದರು. ಹೃದಯದ ಸಾಂಗತ್ಯದಲ್ಲಿ ಲಿಂಗವನ್ನು ಕಟ್ಟಿಕೊಂಡು ಆ ಮಹೇಶ್ವರನನ್ನು ತಮ್ಮ ಹೃದಯ ಮಂಟಪದಲ್ಲಿ ನಿಲ್ಲಿಸಿಕೊಂಡಿದ್ದರು. ಜಗತ್ತಿನ ಮೂಢರು ನಿರ್ಮಿಸಿದ ಸ್ಥಾವರಗಳ ಹಾಗೂ ಆಡಂಬರದ ಪೂಜೆಯನ್ನು ನಿರಾಕರಿಸಿದ್ದರು. ಶೂನ್ಯಸಿಂಹಾಸನಾಧೀಶರಾದ ಅಲ್ಲಮರು **"**ಕಲ್ಲು ಮನೆಯಾ ಮಾಡಿ ಕಲ್ಲು ದೇವರ ಮಾಡಿ ಆ ಕಲ್ಲಮೇಲೆ ಕಲ್ಲ ಜಡೆದರೆ ದೇವರೆತ್ತ ಹೋದನೋ**"** ಎಂದು ಸಾರಿ ಸ್ಥಾವರ ವಿರೋಧಿಯಾದ ನಿಲುವನ್ನು ಎತ್ತಿ ಹಿಡಿದರು. ಬಸವಣ್ಣನವರು ಈ ರೀತಿಯ ಸ್ಥಾವರಾದಿಗಳ ನಿರ್ಮಾಣ ಮಾಡಬೇಕೆಂಬ ವಿಚಾರದಲ್ಲಿ ತುಂಬ ವಿಭಿನ್ನರಾಗಿ ತೋರುತ್ತಾರೆ. ದೇಹವನ್ನೆ ದೇವಾಲಯವಾಗಿಸಿ ಅಂತರಾತ್ಮದಲ್ಲಿ ಶಿವನನ್ನು ಐಕ್ಯಗೊಳಿಸುವ ಪರಿ ತುಂಬಾ ಮಾರ್ಮಿಕವಾಗಿದೆ.

**ಉಳ್ಳವರು ಶಿವಾಲಯ ಮಾಡುವರಯ್ಯ**
**ನಾನೇನು ಮಾಡಲಿ ಬಡವನಾನಯ್ಯ**
**ಎನ್ನ ಕಾಲೇಕಂಬ, ದೇಹವೇ ದೇಗುಲ**
**ಶಿರವೇ ಹೊನ್ನ ಕಳಸವಯ್ಯ**
**ಕೂಡಲ ಸಂಗಮನಲ್ಲಿ ಬೇಡುವೆಯನಯ್ಯ**
**ಸ್ಥಾವರ ಕಳಿವುಂಟು ಜಂಗಮಕಳಿವಿಲ್ಲ.**

ಮನುಷ್ಯನ ಸಹಜಸ್ವಭಾವಗಳಾದ ಆಸೆ, ಆಕಾಂಕ್ಷೆ, ರೋಷ, ಲೋಭ, ಮದ ಮತ್ಸರ ಭಾವನೆಗಳನ್ನು ಹಿಡಿದಿಟ್ಟುಕೊಳ್ಳುವಂತೆ ಅರುಹುತ್ತಾರೆ. ಪ್ರಪಂಚದ ಎಲ್ಲಾ ದುಃಖಗಳಿಗೆ ಮೂಲ ಪ್ರೇರಣೆ ಆಸೆಯೆಂಬ ಮಾತು ಸತ್ಯವಾಗಿದೆ. ಅದು ಬದುಕಿನ ಪ್ರೇರಕ ಶಕ್ತಿ ಹೌದು, ಆಸೆ ಇರಬೇಕೆ ಹೊರತು ದುರಾಸೆಯ ದಾರಿಯನ್ನು ಅದು ಹಿಡಿಯಬಾರದು. ಬಸವಣ್ಣನವರು ತಮ್ಮದೊಂದು ವಚನದಲ್ಲಿ ಹಲವಾರು ಜ್ಞಾನಸಂಪಾದನೆ ಮಾಡಿದರೂ, ಜ್ಞಾನಿಗಳ ಹಿತವಚನವನ್ನು ನಿತ್ಯ ಕೇಳಿದರೂ ಆಸೆಯನ್ನು ಬಿಡದಿದ್ದರೆ ಲಾಭವೇನೆಂದು ಪ್ರಶ್ನಿಸುತ್ತಾರೆ.

**ನೂರನೋದಿ ನೂರಕೇಳಿದರೇನು ?**
**ಆಸೆ ಹರಿಯದು ರೋಷ ಬಿಡದು**

ಶರಣರು ಸಾವಿರಾರು ವಚನಗಳನ್ನು ಬರೆದು ಸಾಮಾಜಿಕ ಅವ್ಯವಸ್ಥೆಯನ್ನು ಸರಿದೂಗಿಸಲು ಪ್ರಯತ್ನಿಸಿದರು. ಅವರಲ್ಲಿ ಬಸವಣ್ಣನವರು ಮೇರುಪರ್ವತದಂತೆ ಗೋಚರವಾಗುತ್ತಾರೆ. ಇಪ್ಪತ್ತೊಂದನೆ ಶತಮಾನದ ಪ್ರಪಂಚಕ್ಕೆ ಇಷ್ಟೊಂದು ಪರಿಪೂರ್ಣನಾದ ವ್ಯಕ್ತಿ ಭೂಮಿಯ ಮೇಲೆ ಇದ್ದನೆಂಬ ಸಂಶಯ ಒಂದು ಕ್ಷಣ ಬಾರದಿರಲಾರದು? ನುಡಿದಂತೆ ನಡೆ ಈ ಜನ್ಮ ಕಡೆ ಎಂಬ ಧ್ಯೇಯ ವಾಕ್ಯದೊಂದಿಗೆ ಬದುಕಿದ್ದ ಅವರು ದೈವೀ ಸ್ವರೂಪವನ್ನು ಈ ಯುಗದಲ್ಲಿ ಪಡೆದಿಕೊಂಡಿದ್ದಾರೆ. ಅರಸನಲ್ಲಿ ಅರ್ಥಮಂತ್ರಿಯಾಗಿದ್ದರೂ ಸದಾ ಸರಳಜೀವನದ ತುಡಿತ ಅವರದಾಗಿತ್ತೆಂದರೆ ತುಂಬಾ ಸೋಜಿಗದ ಸಮಾಚಾರವಾಗಿ ಗೋಚರವಾಗುತ್ತದೆ. ತಾವು ವಾಸವಿದ್ದ ಸ್ಥಾನದಲ್ಲಿಯೇ ಅಯಸ್ಕಾಂತದ ಕಲ್ಲಿನಂತೆ ನೂರಾರು ಶರಣರನ್ನು ಕರೆಯಿಸಿಕೊಳ್ಳಬೇಕಾದರೆ ಅವರ ಪ್ರಭೆ ಸಾಮಾನ್ಯವಾಗಿರಲಿಲ್ಲ. ಬಂದ ಶರಣರೆಲ್ಲರೂ ಕಾಯಕವನ್ನೇ ಉಸಿರಾಗಿಸಿಕೊಂಡು ಸಮಾಜಕ್ಕೆ ಕಾಯಕದ ಮಹತ್ವವನ್ನು ಸಾರುವಲ್ಲಿ ಎಲೆಮರೆಯ ಕಾಯಿಯಂತೆ ಸ್ಫೂರ್ತಿಯ ಸೆಲೆ ಅಣ್ಣನವರಾಗಿದ್ದರೆಂಬ ಮಾತು ತುಂಬಾಸಹಜ ಸುಂದರ ಹಾಗೂ ಸಹಜವೆನಿಸುತ್ತದೆ.

## ಪರಾಮರ್ಶನ ಗ್ರಂಥಗಳು


- **ಡಾ. ಚಿದಾನಂದಮೂರ್ತಿ :** ಬಸವಣ್ಣನವರು
- **ಡಾ. ಆರ್.ಸಿ. ಹಿರೇಮಠ :** ಶರಣ ಚರಿತಾಮೃತ
- **ಫ.ಗು. ಹಳಕಟ್ಟಿ :** ಚರಿತ್ರ ಸಾಹಿತ್ಯ–2


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನ್ನಡ ಸಾಹಿತ್ಯದಲ್ಲಿ ಶಾಂತಿ ಮತ್ತು ಸೌಹಾರ್ದತೆ

✍ **ಡಾ. ಅಣ್ಣಪ್ಪ ಭೀ. ರೊಟ್ಟಿಗವಾಡ.** ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಅಣ್ಣಿಗೇರಿ.

## ಪೀಠಿಕೆ

ಕನ್ನಡ ಸಾಹಿತ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ. ಸುಮಾರು ಒಂದೂವರೆ ಸಾವಿರ ವರ್ಷಗಳ ಹಳಮೆಯನ್ನು ಹೊಂದಿದ ಕನ್ನಡ ಸಾಹಿತ್ಯ ಎಲ್ಲೂ ಹರಿಗಡಿಯದೆ ಬೆಳೆಯುತ್ತ ಬಂದಿದೆ. ನಮ್ಮ ಸಾಹಿತ್ಯದುದ್ದಕ್ಕೂ ಪರಧರ್ಮ ಸಹಿಷ್ಣುತೆ, ಧರ್ಮಸಮನ್ವಯ ಭಾವನೆಗಳನ್ನು ಕವಿಗಳು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸುತ್ತಾ ಬಂದುದನ್ನು ಕಾಣುವೆವು. ಇದಕ್ಕೆ ಕನ್ನಡ ನಾಡನ್ನು ಆಳಿದ ಅನೇಕ ರಾಜರೂ ಪರಸ್ಪರ ಧರ್ಮಸಮನ್ವಯ ಭಾವನೆಯನ್ನು ಜನತೆಯಲ್ಲಿ ಬೆಳೆಸಲು ಅನುವು ಮಾಡಿಕೊಡುತ್ತ ಬಂದಿದ್ದಾರೆ. ಮೊದಲಿನಿಂದಲೂ ಕನ್ನಡನಾಡು ಸರ್ವಧರ್ಮಗಳ ಆಡುಬೋಲವಾಗಿ ಬೆಳೆದು ಬಂದುದನ್ನು ಕಾಣುವೆವು. ಪರಧರ್ಮ ಹಾಗೂ ಪರಧರ್ಮಗಳ ತತ್ವಗಳನ್ನು ಆದರಿಸುವ, ಗೌರವಿಸುವ ಭಾವನೆ ಕನ್ನಡಿಗರಲ್ಲಿ ರಕ್ತಗತವಾಗಿ ಹೋದುದನ್ನು ಕವಿರಾಜಮಾರ್ಗಕಾರನು ಉಲ್ಲೇಖಿಸಿದುದನ್ನಿಲ್ಲಿ ಸ್ಮರಿಸಬಹುದು. ಜೈನ, ಬೌದ್ಧ, ಶೈವ, ವೀರಶೈವ, ಬ್ರಾಹ್ಮಣ, ಮುಸ್ಲಿಂ, ಕ್ರೈಸ್ತ ಮುತಾಂದ ಧರ್ಮಗಳ ಜನತೆ ಇಲ್ಲಿ ಅಣ್ಣತಮ್ಮಂದಿರ ಹಾಗೆ ಬಾಳುತ್ತ ಬಂದುದಕ್ಕೆ ನಮ್ಮ ಇತಿಹಾಸವೇ ಸಾಕ್ಷಿಯಾಗಿದೆ. ಕೋಮುಗಲಭೆ ಮತ್ತು ಮತಗಳ ನಡುವೆ ಸಂಘರ್ಷ ನಡೆದೇ ಇಲ್ಲವೆಂದಲ್ಲ, ಅಲ್ಲಲ್ಲಿ ಸ್ವಲ್ಪ ಮಟ್ಟಿಗೆ ನಡೆದರೂ ಅದನ್ನು ರಾಜರು, ಮಹಾಜನತೆ ಹತ್ತಿಕ್ಕುತ್ತಲೇ ಶಾಂತಿಯನ್ನು ನೀಡುತ್ತಲೇ ಬಂದಿದ್ದಾರೆ. ತಮ್ಮ ವಿಶಾಲ ಹೃದಯವನ್ನು ಪ್ರದರ್ಶಿಸುತ್ತಲೇ ಬಂದುದಕ್ಕೆ ನಮ್ಮ ಕನ್ನಡ ಸಾಹಿತ್ಯವೇ ಸಾಕ್ಷಿಯಾಗಿದೆ.

ಈ ದೇಶದಲ್ಲಿ ಸಾಮಾನ್ಯ ಜನ ಒಬ್ಬರಿಗೊಬ್ಬರು ಗೌರವಿಸುತ್ತ, ಸಹಕರಿಸುತ್ತ, ಪರಸ್ಪರ ಪ್ರೀತಿ–ವಿಶ್ವಾಸಗಳಿಂದ ಶಾಂತತೆಯಿಂದ ಬದುಕುತ್ತಾ ಬಂದಿದ್ದಾರೆ. ಕರ್ನಾಟಕದ ಕಬೀರರೆಂದೇ ಖ್ಯಾತರಾದ ಶಿಶುನಾಳ ಶರೀಫರ ಗುರು, "ಗೋವಿಂದ ಭಟ್ಟ", ಮೋಟ್ನಳ್ಳಿ ಹಸನಸಾಬ, ಚೆನ್ನೂರು ಜಲಾಲ ಸಾಹೇಬರ ಹಾಡುಗಳು ಎಂಥ ಹಿಂದೂ ತತ್ವಜ್ಞಾನಿಯ 'ಮಟ್ಟ' ವನ್ನೂ ಮೀರಿ ನಿಲ್ಲುತ್ತವೆ. ಗೋನವಾರದ ಬಡೇಸಾಬ ಮಾಸ್ತರರು 'ರಾಮದೇವರ' ಭಕ್ತರು, ತಮ್ಮನ್ನು ತಾವು 'ರಾಮದಾಸ' ಎಂದೇ ಕರೆದುಕೊಂಡು ಅವರು ಸಾಹಿತ್ಯ ಕೃಷಿ ಮಾಡಿದ್ದಾರೆ. ಹರದೇಶಿ–ನಾಗೇಶಿ ಹಾಡುವ ಮುಸ್ಲಿಂ ಬಂಧುಗಳು ಬಿಡಿಸುವ ಹಿಂದೂ ಪುರಾಣ ದೇವತೆಗಳ ಕಥೆಗಳು ಶಾಂತಿಯನ್ನು ನೀಡುವಲ್ಲಿ ಮೂಡಿಸುವಂಥವು.

**ರಾಬರ್ಟ ಸ್ಪಿಲ್ಲರ್** : ಎಂಬ ಸಾಹಿತ್ಯ ಚರಿತ್ರೆಕಾರ ಸಾಹಿತ್ಯ ಓದುವುದರಿಂದ ಆಗುವ ಅಂಶಗಳನ್ನು ತಿಳಿಯಬೇಕಾದರೆ ಮೊದಲು ಸಾಹಿತಿಯ ಜೀವನ ಚರಿತ್ರೆ ತಿಳಿಯುವುದು ಅವಶ್ಯಕವಾದದ್ದು ಎನ್ನುತ್ತಾನೆ. ಅಲ್ಲದೆ ಅದು ಒಬ್ಬ ಲೇಖಕನ ಅಥವಾ ಒಂದು ಕಾಲದ ಜೀವನಾನುಭವ ಸಾರವಾಗಿದೆ. ಆ ಕಾಲದಲ್ಲಿ ರಚಿತವಾದ ಸಾಹಿತ್ಯವು ಓದುಗನ ಮನೋಭಿಲಾಸೆಯನ್ನು ಹೊತ್ತಕೊಂಡು ಪ್ರಸಿದ್ಧಿಯನ್ನು ಪಡೆದಿರುತ್ತದೆ. ಸಾಹಿತ್ಯವನ್ನು ಓದುತ್ತಾ ಹೋದಂತೆ ಓದುಗರಲ್ಲಿ / ಜನಗಳಲ್ಲಿ ಶಾಂತಿ, ಸೌಹಾರ್ದತೆ, ಸಾಹಿತ್ಯಾಭಿರುಚಿ ಹಾಗೂ ಸಂಸ್ಕೃತಿಯ ಭಾಸವಾಗುತ್ತದೆ. ನಮ್ಮ ಸಾಂಸ್ಕೃತಿಕ ನೈತಿಕ ಗುಣ ವಿಶೇಷಗಳನ್ನು ಅರಿಯಬೇಕಾದರೆ ನಮ್ಮ ಸಾಹಿತ್ಯಕ್ಕೆ ಶರಣು ಹೋಗಬೇಕು. ಕನ್ನಡ ಸಾಹಿತ್ಯ ಚರಿತ್ರೆಯಲಿ ರತ್ನತ್ರಿಯರೆನಿಸಿಕೊಂಡ ಪಂಪ, ಪೊನ್ನ, ರನ್ನರಂತಹ ಮಹಾನ ಕವಿಗಳು ರಚನೆ ಮಾಡಿದ ಮಹಾನ ಕೃತಿಗಳ ವಸ್ತುವನ್ನು ಮೆಲ್ನೋಟಕ್ಕೆ ಗ್ರಹಿಸುತ್ತಾ ಹೋದರೆ ಸ್ನೇಹ ಸೌಹಾರ್ದತೆಯ ಕೇಲವೊಂದು ತುಣುಕುಗಳು ಕಂಡುಬರುತ್ತವೆ.

## ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಶಾಂತಿ ಸೌಹಾರ್ದತೆ

ಮಾನವನ ಪ್ರತಿಂಯೊಂದು ಅನುಭವಕ್ಕೂ ಒಂದು ಇತಿಹಾಸವಿರುವಂತೆ ಮಾನವ ನಿರ್ಮಿತ ಸಾಹಿತ್ಯಕ್ಕೂ ಒಂದು ಇತಿಹಾಸವಿದೆ. ಸಮಕಾಲೀನ ಸಾಹಿತ್ಯವನ್ನು ಅರಿತರೆ ಮಾತ್ರ ಸಾಲದು.ಆ ಸಾಹಿತ್ಯ ಹಿಂದಿನ ಚರಿತ್ರೆಯನ್ನು ಅರಿಯಬೇಕು. ಅದನ್ನು ಅರಿಯಲು ಆಧಾರಗಳು ಅವಶ್ಯಕ, ಕೆಲವೊಮ್ಮೆ ಆಧಾರಗಳು ಸಿಗದೇ ಹೋಗಬಹುದು ಇದರಿಂದ ಆ ಭಾಷೆಯ ಸಾಹಿತ್ಯ ಚರಿತ್ರೆಯನ್ನು ಕ್ರಮವಾಗಿ ನಿರೂಪಿಸಲು ಅಸಾಧ್ಯವಾಗುತ್ತದೆ. ಆದುದರಿಂದ ಸಾಹಿತ್ಯ ಚರಿತ್ರೆಗೆ ಮುಖ್ಯ ಆಧಾರವೆಂದರೆ ಆ ಭಾಷೆಯಲ್ಲಿರುವ ಗ್ರಂಥ ಸಮುದಾಯ. ಇಂಥ ಒಂದು ಗ್ರಂಥ ಸಮುದಾಯದ ವ್ಯವಸ್ಥಿತ ಅಧ್ಯಯನವೆ ಸಾಹಿತ್ಯ ಚರಿತ್ರೆಯಾಗುತ್ತದೆ. ಹೀಗೆ ರಚಿತವಾದ ಸಾಹಿತ್ಯವನ್ನು ಅಭ್ಯಸಿಸುವುದರಿಂದ ಸಹೃದಯನ ಮನಸಿಗೆ ಆಹ್ಲಾದವನ್ನು, ಶಾಂತಿಯನ್ನು, ಮತ್ತು ತನ್ನಲ್ಲಿರುವ ಕೀಳುರುಮೆಯನ್ನು ತೋರೆದು ಎಲ್ಲರೊಂದಿಗೆ ಸೌಹಾರ್ಧತೆಯಿಂದ ಬದುಕುತ್ತಾನೆ.

ಮನುಷ್ಯ ಮನುಷ್ಯರ ಮಧ್ಯೆ ಭೇಧದ ಸೌಧ ನಿರ್ಮಿಸಿದ ಜಾತಿಯ ಭೂತವನ್ನು ಬಡಿದೋಡಿಸಿ ಶಾಂತಿ ನೆಲೆಸುವಂತೆ ನಮ್ಮ ಕನ್ನಡ ಸಾಹಿತ್ಯ ಕವಿಗಳು ಅನೇಕ ರೀತಿಯಿಂದ ಶ್ರಮಿಸಿದ್ದಾರೆ. ಪರರ ಮತವನ್ನು ಅಭಿಮತವನ್ನು ಪುರಸ್ಕರಿಸುವುದು ನಿಜವಾದ ಕಸವರವೆಂಬ ಶ್ರೀವಿಜಯನ ಕಾವ್ಯಧೋರಣೆ ನಮ್ಮಲ್ಲಿ ಅವಿಚ್ಛಿನ್ನವಾಗಿ, ಗುಪ್ತಗಾಮಿಯಾಗಿ ಹರಿದು ಬಂದಿದೆ. ಪಂಪನಂತೂ, 'ಕುಲವು ಕುಲವಲ್ಲ, ಛಲ, ವೀರ, ಅಭಿಮಾಗಳೇ ಕುಲಗಳು' 'ಮುನುಜ ಜಾತಿ ತಾನೊಂದೆ ವಲಂ' ಎಂದು ಹೇಳುತ್ತಾ ಸಹೃದಯ ಕನ್ನಡಿಗನಲ್ಲಿ ಶಾಂತಿ ನೆಲೆಸುವಂತೆ ರಚಿಸಿದ್ದಾರೆ. ಬಸವಾದಿ ಶಿವಶರಣರು, ಹರಿಹರ ರಾಘವಾಂಕರು, ಪುರಂದರ – ಕನಕದಾಸರು ಮಾನವರೆಲ್ಲ ಸರಿಸಮಾನರು ಎಂದು ಕೃತಿಗಳ ಮೂಲಕ ಶಾಂತಿಯನ್ನು ತೊರ್ಪಡಿಸುತ್ತಾರೆ.

'ಅತಿಹುಸಿವ ಯತಿ ಹೊಲೆಯ, ಹುಸಿಯದಿಹ ಹೊಲೆಯ ಉನ್ನತ ಯತಿವಯನ' ಎಂದು ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ವ್ಯಕ್ತಪಡಿಸಿದ್ದು ಧರ್ಮ ಸಮನ್ವಯ ಭಾವನೆಗೆ ನಿದರ್ಶನವಾಗಿದೆ. ಪುರಂದರದಾಸರಂತೂ ಜಾತಿ ಬೇದವನ್ನು ಕಿತ್ತು ಹಾಕಿ ಜನರಲ್ಲಿ ಶಾಂತಿ ನೆಲೆಸುವಂತೆ ತಮ್ಮ ಕೀರ್ತನಗಳಲ್ಲಿ "ಹೊಲೆಯ ಹೊರಗಿಹನೆ ? ಊರೊಳಗಿಲ್ಲವೆ ?" ಎಂದು ಜಾತಿ ಬೇದ ಮಾಡುವವರನ್ನು ಪ್ರಶ್ನಿಸಿದ್ದಾರೆ. ಕನಕದಾಸರು ಇದರ ಹೊರತಾಗಿಲ್ಲ "ಕುಲ ಕುಲವೆಂದು ಬಡದಾಡದಿರಿ..... ಎಂದು ಆತ್ಮ ಯಾವ ಕುಲ ಪೇಳಿರಯ್ಯ ?" ಎಂದು ಕನಕದಾಸರು ಕುಲ ಭ್ರಾಂತಿಯಿಂದ ಬೀಗುವವರನ್ನು ಪ್ರಶ್ನಿಸಿ, ಪ್ರೀತಿ, ವಿಶ್ವಾಸ, ಮೇಲು–ಕೀಳು ಬಿಟ್ಟು ಶಾಂತಿ ಸಹಕಾರದಿಂದ ಸಮನ್ವಯಗೊಳಿಸಿದ್ದಾರೆ. ಹೀಗೆ ಅನೇಕ ಕವಿ ಪುಂಗವರು, ಶರಣರು, ದಾಸರು ಮಾನವ ಪ್ರೀತಿಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಾವ್ಯ ಅದನ್ನು ಹಸನುಗೊಳಿಸುವ ಕಾರ್ಯವನ್ನು ಕೈಗೊಳ್ಳುತ್ತಲೇ ಸಾಮರಸ್ಯದಿಂದ, ಸಮನ್ವಯ ಶಾಂತಿ ಭಾವನೆಯಿಂದ ಬಾಳಿ ಬದುಕಿದ್ದಾರೆ.

## ಶಾಸನಗಳಲ್ಲಿ ಶಾಂತಿ ಸೌಹಾರ್ದತೆ

ಬುಕ್ಕನ ಕಾಲದಲ್ಲಿ ರಚನೆಯಾದ ಶಾಸನವು ಪರಸ್ಪರ ಧಾರ್ಮಿಕ ಸೌಹಾರ್ದ, ಭ್ರಾತೃತ್ವಗಳನ್ನು ಸಾರಿದ ಶಾಸನವು ಒಂದು ಪವಿತ್ರ ಹಾಗೂ ಹೆಮ್ಮೆಯ ದಾಖಲೆ; ಕರ್ನಾಟಕದ ರಾಜರು ತುಂಬ ಉದಾರ ಹೃದಯಿಗಳು ಎಲ್ಲ ಧರ್ಮಗಳನ್ನು ನಿರ್ಮಿಸಿದ್ದಾರೆ. ಹೊಯ್ಸಳರ ಶಿವನಿಗೊ ವಿಷ್ಣುವಿಗೊ ಸಮಾನವಾಗಿ ಕಂಡರು ವೆಂಬುದಕ್ಕೆ ಶಾಸನಗಳು ಸಾಕ್ಷಿಯಾಗಿವೆ.

ಬಾದಾಮಿ ಚಾಲುಕ್ಯ ವಿಜಯಾದಿತ್ಯ ಸತ್ಯಾಶ್ರಯನ ಕಾಲದ ಶಾಸನವೊಂದರಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಈ ತ್ರಿಮೂರ್ತಿಗಳನ್ನು ಒಂದೇ ಕಾಲದಲ್ಲಿ ಸ್ಥಾಪಿಸಿದ ಬಗ್ಗೆ ಉಲ್ಲೇಖವಿದೆ. ಇದರಿಂದ ಸರ್ವಧರ್ಮಿಯನ್ನು ಸಮನ್ವಯ ಭಾವದಿಂದ ಕಂಡು ಶಾಂತಿ ಸೌಹಾರ್ದತೆ ನೆಲೆಸುವಂತೆ ಮಾಡಿದ್ದರು. ರಾಷ್ಟ್ರಕೂಟರ ಜಯಸಿಂಹನ ಕಾಲದ ಬೇಲೂರಿನ ಶಾಸನದಲ್ಲಿ ಸರ್ವಧರ್ಮಸನ್ವಯ ಭಾವನೆಯ ವಿಚಾರಗಳಿರುವುದನ್ನು ಗುರುತಿಸಬಹುದು.

ಕನ್ನಡ ನಾಡಿನಲ್ಲಿ ಇಂಥ ಅನೇಕ ಧರ್ಮಸಮನ್ವಯ ತಂದು ಶಾಂತಿ ನೆಲೆಸುವಂತೆ ಮಾಡಿ ಸಹೋದರತ್ವ ಭಾವನೆಯನ್ನು ಸಾರುವ ಶಾಸನಗಳು ಸಿಕ್ಕಿವೆ. ಶಾಸನ ಕವಿಯೊಬ್ಬ ಬೆಳುವಲ ನಾಡನ್ನು ಕುರಿತು ಶಾಸನವೊಂದರಲ್ಲಿ "ಬಹುಧರ್ಮಧೇನು ನಿವಹಕ್ಕಾಡುಬೊಲಂ" ಎಂದು ಹೇಳಿ ಇಡೀ ಕರ್ನಾಟಕಕ್ಕೇ ಮತ್ತು ಮಾನವ ಜಗತ್ತಿಗೆ ತಿಳಿ ಹೇಳಿದ್ದಾನೆ. ಪ್ರಾಚೀನ ಕಾಲದಿಂದಲೂ ಇಲ್ಲಿ ಎಲ್ಲಾ ಧರ್ಮಗಳ ಜನರು ಸಹೋದರರಂತೆ ಬಾಳುತ್ತ ಶಾಂತಿ, ಸೌಹಾರ್ದತೆಯಿಂದ ಬದುಕನ್ನು ಕಳೆಯುತ್ತಿದ್ದಾರೆ.

## ವಚನ ಹಾಗೂ ಕೀರ್ತನಗಳಲ್ಲಿ ಶಾಂತಿ

ವಚನ ಸಾಹಿತ್ಯ ಹಾಗೂ ಕೀರ್ತನ ಸಾಹಿತ್ಯ ಇವೆರಡೂ ಕನ್ನಡ ಸಾಹಿತ್ಯ ಕಣ್ಣುಗಳಿದ್ದಂತೆ. ವಚನಕಾರರು ಹನ್ನೆರಡನೇ ಶತಮಾನದ ಜನತೆಯಲ್ಲಿ ರಕ್ತಗತವಾಗಿ ಹೋಗಿದ್ದ ಮೇಲಿ-ಕೀಳು, ಮೂಢನಂಬಿಕೆ, ಜಾತೀಯತೆ, ಲಿಂಗತಾರತಮ್ಯ ಮುಂತಾದ ಅನಿಷ್ಟಗಳನ್ನು ಕಿತ್ತೊಗೆದು ಶಾಂತಿ ಸಮಾನತೆಯನ್ನು ಎಲ್ಲರಲ್ಲೂ ತರಲು ಶ್ರಮಿಸಿದರು.

ಹುಟ್ಟಿನಿಂದ ಎಲ್ಲರೂ ಒಂದೇ. ಹುಟ್ಟು ಮನುಷ್ಯನ ಶ್ರೇಷ್ಠತೆಯನ್ನು ಅಳೆಯುವ ಅಳತೆಗೋಲಲ್ಲ ಎಂದು ಶರಣರು ಹಾಗೂ ಹರಿದಾಸರು ಸಾರಿ ತಮ್ಮ ಹೃದಯ ವೈಶಾಲ್ಯತೆಯನ್ನು ತೋರಿದ್ದಾರೆ. ಬಸವಾದಿ ಶರಣರು ವಚನಗಳಲ್ಲಂತೂ ಶಾಂತಿ, ಸೌಹಾರ್ದತೆಯ ಸಾಮರಸ್ಯದ ಬದುಕಿಗೆ ಬೇಕಾಗುವ ಹಲವಾರು ಸಂಗತಿಗಳು ವ್ಯಕ್ತಗೊಂಡುದನ್ನು ಕಾಣುವೆವು.

**"ಅಪ್ಪನು ನಮ್ಮ ಮಾದಾರ ಚೆನ್ನಯ್ಯ**
**ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ**
**ಚಿಕ್ಕಯ್ಯ ನಮ್ಮಯ್ಯ ಕಾಣಯ್ಯ**
**ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ"**

ಎಂದು ನುಡಿದುದು ಭಾವೈಕ್ಯತೆಗೆ ಉಜ್ವಲ ನಿದರ್ಶನವಾಗಿದೆ. ಎಲ್ಲ ಜಾತಿ-ವರ್ಗಗಳ ಜನರು ಪರಸ್ಪರ ಸೋದರ ಭಾವನೆಯಿಂದ ಬದುಕಬೇಕೆಂಬುದು ಶರಣರ ಧ್ಯೇಯವಾಗಿತ್ತು. ಸಮಾನತೆಯ ಕುರಿತು ನುಡಿದಿರುವ ನುಡಿಗಳೂ ಇಂದಿಗೂ ವಿನೂತನವೆನ್ನಿಸುವುವು,

ಹರಿದಾಸರು ವಚನಕಾರರಂತೆಯೆ ಪ್ರಗತಿಪರ ವಿಚಾರವಾದಿಗಳು, ಸಮಾಜ ಸುಧಾರಕರು ಆಗಿದ್ದರು. ಜಾತಿ ಮತಗಳ ಗೋಡೆಗಳನ್ನು ಕುಟ್ಟಿ, ಕೆಡವಿ ಸಮಾನತೆಯನ್ನು ತರುವುದೇ ಹರಿದಾಸರ ಧ್ಯೇಯವಾಗಿತ್ತು. ಸಮಾಜದ ಪರಿವರ್ತನೆ ಇವರ ಪ್ರಮುಖ ಗುರಿಯಾದರೂ ಸಮಾಜದಲ್ಲಿದ್ದ ಮೇಲು-ಕೀಳು ಭಾವನೆಗಳನ್ನು ಕಿತ್ತು ಹಾಕಿ ಶಾಂತಿ, ಸಮಾನತೆಯನ್ನು ಸಾಧಿಸುವುದೇ, ಅವರ ಪ್ರಮುಖ ಗುರಿಯಾಗಿದೆ.ಪುರಂದರದಾಸರು ಒಂದೆಡೆ "ಆವ ಕುಲವಾದರೇನು, ಆವನಾದರೇನು ಎಲ್ಲರೂ ನಮ್ಮವರೆ" ಎಂದು ನುಡಿದುದು ಭಾವೈಕ್ಯತೆಗೆ ಶ್ರೇಷ್ಠ ನಿದರ್ಶನವಾಗಿದೆ. ಆನತೆಗೆ ಆ ಜಾತಿ ಈ ಜಾತಿ ಎಂದು ಕಚ್ಚಾಡುವವರಿಗೆ ಶಾಂತಿ-ಸೌಹಾರ್ದತೆಯ ಪಾಠವನ್ನು ತಮ್ಮ ಕೀರ್ತನೆಗಳ ಮೂಲಕ ಸಾರಿದ್ದಾರೆ. ಕನಕದಾಸರು ತಮ್ಮ ಕೀರ್ತನಗಳಲ್ಲಿ

**"ನಾನು ನೀನು ಎನ್ನದಿರೋ ಹೀನ ಮಾನವ**
**ಜ್ಞಾನದಿಂದ ನಿನ್ನ ನೀನೇ ತಿಳಿದು ನೋಡೆರೊ ಪ್ರಾಣಿ"**

ಎನ್ನುವ ಬುದ್ಧಿಯನ್ನು ತಿಳಿಸುತ್ತಾ ಆತ್ಮಾವಲೋಕನಕ್ಕೆ ಹಚ್ಚಿದ್ದು ಮಾರ್ಮಿಕವಾಗಿದೆ.

## ಜನಪದ ಸಾಹಿತ್ಯದಲ್ಲಿ ಶಾಂತಿ

ಧರ್ಮಸಮನ್ವಯ ಭಾವನೆ, ಶಾಂತಿ ಸೌಹಾರ್ದತೆ ಮಾನವ ಜನಾಂಗವನ್ನು ಒಗ್ಗೂಡಿಸುವ ಅಮೂಲ್ಯ ತತ್ವವಾಗಿದೆ. ಜನಪದರು, ವರ್ಗ-ವರ್ಣ, ಮೇಲು-ಕೀಳು ಭಾವನೆಗಳನ್ನು ಬೆಳೆಸಿಕೊಡು ಬಂದ ಜನರಲ್ಲಿ ಶಾಂತಿ ಸೌಹಾರ್ದತೆಯನ್ನು ಮೂಡಿಸಲು ಯತ್ನಿಸಿದುದನ್ನು ಕಾಣವೆವು. ಸಾವಳಗಿ ಮಹ್ಮದ ಎಂಬ ಕವಿ 'ಈಶ ಸಿವಲಿಂಗ' ಅಂಕಿತದಲ್ಲಿ ಲಾವಣಿ ಪದಗಳನ್ನು ರಚಿಸಿ ಜನಸಾಮಾನ್ಯರಿಗೆ ತಿಳಿಯುವಂತೆ ಮಾಡಿದ್ದಾರೆ. ಜನಪದರು ತಮ್ಮ ಸಾಹಿತ್ಯ ರಚನೆಯಲ್ಲಿ ಶಾಂತಿ ಸಹಬಾಳ್ವೆ ತರುವುದು ಮುಖ್ಯವೇ ಹೊರತು ಜಾತಿ, ಮತ ಪಂಥಗಳಲ್ಲಿ "ದೇವನೊಬ್ಬ ನಾಮ ಹಲವು" ವಿಚಾರಕ್ಕೆ ಬದ್ಧರಾಗಿರುವುದುಂಟು. ಅವರಿಗೆ ಆಚಾರದಂತೆ ವಿಚಾರವೂ ಮುಖ್ಯ, ಆದ್ದರಿಂದಲೇ ಅವರು ನುಡಿದಂತೆ ನಡೆಯುವರು. ಅವರ ಸಾಹಿತ್ಯದಲ್ಲಿರುವುದು ಶಾಂತಿ, ನೆಮ್ಮದಿಯಿಂದ ಕೂಡಿದ ಬಾಳು.

ಹಿಂದೂ-ಮುಸ್ಲಿಂ ಧರ್ಮಗಳ ಜನತೆಯಲ್ಲಿ ಧರ್ಮಸಮನ್ವಯ ಭಾವನೆಯನ್ನು ಮೂಡಿಸುವಲ್ಲಿ ಈ ದೇವಾಲಯಗಳು ತುಂಭಾ ಸಮರ್ಥವಾಗಿವೆ. ಇವು ಇಂದಿಗೂ ಶಾಂತಿ, ಸೌಹಾರ್ದತೆಯ ನಿರಂತನ ನೆಲೆಗಳಾಗಿ ನಿಂತಿವೆ.

## ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶಾಂತಿ

ನಮ್ಮ ದೇಶವನ್ನು ಇಬ್ಬಾಗಮಾಡಿ ಆಡಳಿತ ನಡೆಸಿದ ಬ್ರಿಟಿಷರ ಇಂಥ ಹುನ್ನಾರವನ್ನು ಸರಿಯಾಗಿಯೇ ಗುರುತಿಸಿದ್ದಾರೆ.

**"ವೇದ ಬೇರೆ, ಭಾಷೆ ಬೇರೆ ದೇಶವೊಂದೆ ಭಾರತ**
**ಒಂದೆ ತಾಯಿ ಮಕ್ಕಳೆಂದು ಘೋಷಿಸೊಣ ಸತ್ವತ/**

**ಸಾ. ಶಿ. ಮರಳಯ್ಯ**

ನಮ್ಮ ಮತ ಧರ್ಮಗಳಲ್ಲಿರುವ ಭೇದಗಳನ್ನು ತಮ್ಮ ಆಡಳಿತಾನುಕೂಲಕ್ಕೆ ಬಗ್ಗಿಸಿಕೊಳ್ಳಲೆತ್ನಿಸಿದ ಆಂಗ್ಲರ ಕುತಂತ್ರವನ್ನು ನಮ್ಮ ಕವಿಗಳು ಸರಿಯಾಗಿಯೇ ಬಯಲಿಗೆ ಎಳೆದಿದ್ದಾರೆ. 'ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು' ಎಂಬ ಕವಿ ತತ್ವವನ್ನು ಮನಗಂಡರು. ಶಾಂತಿ, ಸಹಬಾಳ್ವೆಯನ್ನು ಕಾವ್ಯಗಳ ಮುಖಾಂತರ ನೀಡುವಲ್ಲಿ ಮಾಡಿದ ಹೋರಾಟ ಅನನ್ಯವಾದುದು. ರಾಷ್ಟ್ರಕವಿ ಕುವೆಂಪು ಅವರು ಎಲ್ಲರನ್ನೂ 'ಮನುಜಮತ ವಿಶ್ವಪಥಕ್ಕೆ' ಬನ್ನಿರೆಂದು ಕರೆದಿದ್ದಾರೆ.

**"ಓ, ಬನ್ನಿ, ಸೋದರರೆ ಬೇಗ ಬನ್ನಿ;**
**ಗುಡಿ ಚರ್ಚು ಮಸೀದಿಗಳ ಬಿಟ್ಟ ಹೊರಬನ್ನಿ**
**ಬಡತನದ ಬುಡಮಟ್ಟ ಕೀಳಬನ್ನಿ;**
**ಸಾಕಿನ್ನು ಸೇರಿರೈ ಮನುಜ ಮತಕ್ಕೆ**
**ಓ, ಬನ್ನಿ; ಸೋದರರೆ ವಿಶ್ವಪಥಕ್ಕೆ;**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಮ್ಮ ಕವಿ ಗೋಪಾಲಕೃಷ್ಣ ಅಡಿಗರು 'ಜಾತಿ ಮತದ ಗೋಡೆಗಳನ್ನು ಪುಡಿ ಮಾಡಿ ಶಾಂತಿ ಯಿಂದ ಹೊಸ ನಾಡನ್ನು ಕಟ್ಟುವೆವು' ಎಂದು ಹಾಡಿದ್ದಾರೆ. ಮತ್ತೊಂದಡೆ ಜಿ.ಎಸ್.ಶಿವರುದ್ರಪ್ಪನವರು

**"ಸುತ್ತಲು ಕವಿಯುವ ಕತ್ತಲೆಯೊಳಗೆ**
**ಪ್ರೀತಿಯ ಹಣತೆಯ ಹಚ್ಚೋಣ**
**ನಾಳಿನ ಕನಸನ್ನು ಬೆಳೆಯೋಣ.**

ಈ ಹಿನ್ನೆಲೆಯಲ್ಲಿ ಕನ್ನಡ ಕಾವ್ಯವು ರಾಷ್ಟ್ರ ನೆಮ್ಮದಿಗೆ ಸ್ಫೂರ್ತಿಯಾಗಿದೆ. ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಲ್ಲಪಂಥದ ಕವಿಗಳು ಮಾನವೀಯತೆಗೆ ಸ್ಪಂದಿಸಿದ್ದಾರೆ. ಇಲ್ಲಿ ಎಲ್ಲ ಕವಿಗಳು ಜಾಗ ಪಡೆಯದಿದ್ದರೂ, ಕನ್ನಡ ನಾಡಿನ ಬಹುಸಂಖ್ಯೆಯ ಕವಿಗಳು ಮನುಜ ಮನುಜರ ಮಧ್ಯದ ಪ್ರೀತಿ ಪ್ರೇಮಕ್ಕೆ, ಸ್ನೇಹ, ಶಾಂತಿ, ಸೌಹಾರ್ದತೆಗೆ ತಮ್ಮ ಕಾವ್ಯಧಾರೆ ಹನಿಸಿರುವುದನ್ನು ಎಲ್ಲರೂ ಮನಗಾಣಬಹುದಾಗಿದೆ.

ಒಟ್ಟಿನಲ್ಲಿ ಸ್ವಾಮಿ ವಿವೇಕಾನಂದರು ಸಾಹಿತ್ಯವನ್ನು ಅಧ್ಯಯನ ಮಾಡುವುದರಿಂದ ಮಾನವೀಯ ಮೌಲ್ಯಗಳನ್ನು ಕೈಕೊಳ್ಳಬಹುದು ಎಂದಿದ್ದಾರೆ. ಜೋತೆಯಲ್ಲಿ ಮಾನವ ಸಂಬಂಧಗಳು ಮತ್ತು ಮೌಲ್ಯಗಳನ್ನು ಬೆಳೆಸುವಲ್ಲಿ ಸಾಹಿತ್ಯ ಸೇತುವೆಯಂತೆ ಕೇಲಸ ನಿರ್ವಹಿಸುತ್ತದೆ. ಸಾಹಿತ್ಯ ಅಧ್ಯಯನದಿಂದ ಸಹೃದಯರಲ್ಲಿ ಪ್ರೀತಿ ಪ್ರೇಮ, ಸಹನೆ, ಬ್ರಾತೃತ್ವ ಜಾತ್ಯತೀಯತೆ, ಸಮಾನತೆ ಮುಂತಾದವುಗಳನ್ನು ತಿಳಿಯುವುದರಿಂದ ಒಂದು ಸಾಂಸ್ಕೃತಿಕ ಪರಿಸರ ಏರ್ಪಟ್ಟು ಎಲ್ಲರೂ ಸೌಹಾರ್ದತೆಯಿಂದ ಜೀವಿಸುತ್ತಾರೆಂದು ಹೇಳಿದ್ದಾರೆ. 'ಋಷಿಯಾಗದೆ ಕವಿಯಾಗಲಾರೆಂಬಂತೆ' ಕವಿಯು ತನ್ನ ಬರವಣಿಗೆಯ ಮೂಲಕ ಜೀವನ ತತ್ವಗಳನ್ನು, ಆಧ್ಯಾತ್ಮಿಕ ಚಿಂತನೆಯನ್ನು ರೂಪಿಸಿರುತ್ತಾನೆ. ಇಂತಹ ದಾರ್ಶನಿಕತೆಯನ್ನು ಕುವೆಂಪು, ಬೇಂದ್ರೆ, ಗೋಕಾಕ, ಸಿಂಪಿ ಲಿಂಗಣ್ಣ, ಮಧುರ ಚನ್ನ, ಮೊದಲಾದವರ ಕೃತಿಗಳಲ್ಲಿ ಶಾಂತಿ ಮತ್ತು ಸೌಹಾರ್ಧತೆಯನ್ನು ಗುರುತಿಸಬಹುದಾಗಿದೆ.

## ಪರಾಮರ್ಶನ ಗ್ರಂಥಗಳು


- **ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆ (2011) :** ಚೆನ್ನುಡಿ ಭಾಗ–ಎರಡು ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ. ಧಾರವಾಡ ಜೆ.ಎಸ್.ಎಸ್. ವಿದ್ಯಾಗಿರಿ.
- **ರಾಜಪ್ಪ ದಳವಾಯಿ (2003)** ಕನ್ನಡ ಸಾಹಿತ್ಯ ಕೋಶ ಬೆಂಗಳೂರು ಡೆಸ್ಕ್‌ಟಾಪ್ ಪಬ್ಲಿಕೇಷ್‌ನ ಚಾಮರಾಜ ಪೇಟೆ.
- **ಡಾ. ವ್ಹಿ. ಜಿ. ಪೂಜಾರ (2006) :** ಕನ್ನಡ ಸಾಹಿತ್ಯ ಕೋಮು ಸೌಹಾರ್ದತೆ ಮಂಟಪ ಮಾಲೆ, ಹಂಪಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- **ಡಾ. ಜಿ. ಸಿ. ನಿಂಗಣ್ಣ :** ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ ಗುಲಬರ್ಗಾ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮ.
- **ಎಲ್.ಎಸ್.ಶೇಷಗಿರಿರಾವ್ :** ಹೊಸಗನ್ನಡ ಸಾಹಿತ್ಯ ಚರಿತ್ರೆ ಬೆಂಗಳೂರು ಅಂಕಿತ ಪುಸ್ತಕ, ಗಾಂಧಿಬಜಾರ್, ಮುಖ್ಯ ರಸ್ತೆ, ಬಸವನಗುಡಿ.


■■

*– 30ನೇ ಪುಟದಿಂದ ಮುಂದುವರೆದುದು*

ಕಾಡ್ಯನ ಗುಡಿಯಲ್ಲಿ ಸೇರಿ ಮಂಡಲ ಬರೆದು ಕಾಡ್ಯನಾಟದ ಹಾಡುಗಳನ್ನು ಹಾಡಿ ನಾಲ್ಕು ರಾತ್ರಿ ಮೂರು ಹಗಲುಗಳ ಕಾಡ್ಯನಾಟವನ್ನು ಆಡಬೇಕು ಎನ್ನುವುದು ಸಂಪ್ರದಾಯ. ಮಂಡಲವನ್ನು ಹೇಗೆ ಬರೆಯಬೇಕು, ಕಾಡ್ಯನ ಕಲಶವನ್ನು ಹೇಗೆ ನಿರ್ಮಿಸಬೇಕು. ಹೇಗೆ ಪೂಜೆ ನಡೆಸಬೇಕು ಎನ್ನುವುದು ಆಚರಣೆ. ಕಾಡ್ಯನಾಟ ನಡೆಸುವ ಬೈದ್ಯ, ಪಾತ್ರ, ಕಲಶಗಳನ್ನು ಹೊರುವ ಕುಟುಂಬದ ಹೆಂಗಸರು ಉಪವಾಸ ಇರಬೇಕು ಎನ್ನುವುದು ವಿಧಿ. ಸೂತಕ ಇರುವವರು, ಮುಟ್ಟಾದ / ಬಾಣಂತಿ ಹೆಂಗಸರು ಕಾಡ್ಯನಾಟದ ಆವರಣಕ್ಕೆ ಬರಬಾರದು ಎನ್ನುವುದು ನಿಷೇಧ.

ಸಂಪ್ರದಾಯದ ಬೀಜರೂಪದಲ್ಲಿ ಒಂದು ನಂಬಿಕೆ ಇದ್ದೇ ಇರುತ್ತದೆ. ಅಂದರೆ ಸಂಪ್ರದಾಯಗಳೆಲ್ಲವೂ ನಂಬಿಕೆಗಳಾಗಿರುತ್ತದೆ. ಆದರೆ ಎಲ್ಲ ನಂಬಿಕೆಗಳು ಸಂಪ್ರದಾಯಗಳಲ್ಲ. ನಂಬಿಕೆಯೊಂದು ಐತಿಹ್ಯ, ಪುರಾಣ, ಧರ್ಮಗಳೊಂದಿಗೆ ಸಂಬಂಧವನ್ನು ಪಡೆದುಕೊಂಡು ಸಮುದಾಯದ ಶ್ರದ್ಧೆಯೊಂದಿಗೆ ರೂಢಿಗಿಳಿದಾಗ ಸಂಪ್ರದಾಯವಾಗುತ್ತದೆ. ಇಂತಹ ಸಂಪ್ರದಾಯದ ಪ್ರಾಯೋಗಿಕ ಅಥವಾ ಕ್ರಿಯಾರೂಪಗಳೇ ಆಚರಣೆಗಳು. ನಂಬಿಕೆ ಧರ್ಮದ ಅವಲಂಬನೆಯ ರೂಪ, ಆಚರಣೆ ಅದರ ಕ್ರಿಯಾ ರೂಪ ಎನ್ನುವ ಡಾ. ವಿವೇಕ ರೈಯವರು ಅಭಿಪ್ರಾಯಪಡುತ್ತಾರೆ. ಹೀಗಾಗಿ ನಂಬಿಕೆಗಿಂತ ಸಂಪ್ರದಾಯ, ಆಚರಣೆಗಳಿಗೆ ಹೆಚ್ಚಿನ ವ್ಯಾಪ್ತಿ ಇದೆ. ವೈಯಕ್ತಿಕ ಅಥವಾ ಕೌಟುಂಬಿಕಕ್ಕೆ ಸೀಮಿತವಾಗಿರುವ ಒಂದು ಆಚರಣೆ ವಾಡಿಕೆ ಅಥವಾ ರೀತಿ ರಿವಾಜು ಎನಿಸುತ್ತದೆ. ಇಂತಹ ವಾಡಿಕೆ ಅಥವಾ ರಿವಾಜುಗಳು ಒಂದು ಸಮಾಜ ಅಥವಾ ಪ್ರದೇಶದೊಳಗೆ ಸ್ವೀಕಾರಗೊಂಡು ಸಾಮೂಹಿಕತೆಯನ್ನು ಪಡೆದುಕೊಂಡಾಗ ಅದು ಸಂಪ್ರದಾಯವಾಗುತ್ತದೆ. ಸಂಪ್ರದಾಯಗಳು ಒಂದು ಸಮಾಜದ ಸಾಮೂಹಿಕತೆಯಲ್ಲಿ ವಿಕಾಸಗೊಳ್ಳುವುದರಿಂದ ಅಲಿಖಿತ ಕಾನೂನುಗಳಾಗಿ, ನೀತಿ ಶಾಸ್ತ್ರಗಳಾಗಿ ಕಾರ್ಯ ನಿರ್ದೇಶಿಸುತ್ತವೆ. ಒಂದು ಸಮಾಜದ ಸಾಂಸ್ಕೃತಿಕ ಮೌಲ್ಯಗಳೇ ಈ ಸಂಪ್ರದಾಯ ಎನ್ನಬಹುದು.

## ಪರಾಮರ್ಶನ ಗ್ರಂಥಗಳು


- **ಜನಪದ ನಂಬಿಕೆಗಳು :** ಕನ್ನಡ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ
- **ಡಾ.ಡಿ.ಕೆ.ರಾಜೇಂದ್ರ :** ನಮ್ಮ ನಂಬಿಕೆಗಳು –
- **ಜಿ.ವಿ.ದಾಸೇಗೌಡ :** ನಮ್ಮ ಜನಪದ ನಂಬಿಕೆಗಳು.
- **ಡಾ.ಬಿ.ಎ.ವಿವೇಕ ರೈ :** ಆನ್ವಯಿಕ ಜಾನಪದ.
- **ಡಾ. ಮಲ್ಲಿಕಾರ್ಜುನ ಲಠ್ಠೆ :** ಉತ್ತರ ಕರ್ನಾಟಕದ ಜನಪದ ನಂಬಿಕೆಗಳು.
- **ಡಾ. ಬಿ.ಎ.ವಿವೇಕ ರೈ :** ಕನ್ನಡ ಜನಪದ ನಂಬಿಕೆಗಳು –
- **ಸುವರ್ಣ ಜಾನಪದ ಲೇಖನಗಳು :** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು


■■




ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ, ಎಸ್.ಪಿ. ಗದಗ ಕಂಪೌಡ,
ಜೆ.ಟಿ. ಮಠ ರೋಡ, ಗದಗ-582 101 ದೂರವಾಣಿ : 08372–200527
e-mail : vidyanidhiprakashana@gmail.com.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನ್ನಡ ಆತ್ಮಕಥನ ಸಾಹಿತ್ಯದಲ್ಲಿ ದಲಿತ ಮತ್ತು ಮುಸ್ಲಿಂ ಮಹಿಳಾ ಪ್ರತಿನಿಧೀಕರಣ

✍ **ಶ್ರೀಮತಿ ಸಾವಿತ್ರಿ ಬಸಯ್ಯ ಮಠ,** ಶಿಕ್ಷಕರು, ಕಲಬುರಗಿ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗೆ ಒಂದು ಪರಂಪರೆ ಇರುವಂತೆ ದಲಿತ ಮತ್ತು ಮುಸ್ಲಿಂ ಮಹಿಳಾ ಸಂವೇದನೆಗೂ ಒಂದು ಪರಂಪರೆ ಇರುವುದು ಕಂಡುಬರುತ್ತದೆ. ಜಾತಿಯತೆಯಿಂದ ಕೂಡಿದ ಭಾರತೀಯ ಸಮಾಜದಲ್ಲಿ ಬ್ರಾಹ್ಮಣ ಸ್ತ್ರೀಯರ ಅನುಭವ, ದಲಿತ ಸ್ತ್ರೀಯರ ಅನುಭವಗಳು ಭಿನ್ನವಾಗಿರುವಂತೆ ಮುಸ್ಲಿಂ ಸ್ತ್ರೀಯರ ಅನುಭವಗಳು ಸಹಜವಾಗಿ ಭಿನ್ನವಾಗಿವೆ. ಸಾವಿರದ ಏಳುನೂರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ 1970–80ರ ದಶಕದಲ್ಲಿ ದಲಿತ ಸಾಹಿತ್ಯ ಅಭಿವ್ಯಕ್ತಿ ಕಾಣಿಸಿಕೊಂಡಿತು. ಆದ್ದರಿಂದ 70–80ರ ದಶಕವು 'ಪುನರುತ್ಥಾನದ ಯುಗ' ಎಂದು ಕರೆಯಿಸಿಕೊಂಡಿದೆ. ದಲಿತ ಸಂವೇದನೆಯುಳ್ಳ ಕವಿಗಳು, ಲೇಖಕರು, ಸಾಹಿತಿಗಳು ಈ ದಶಕದ ಕಾಲದಲ್ಲಿ ದಮನಿತರ ನೋವಿಗೆ ದನಿಯಾದ ಸಾಹಿತ್ಯ ರಚಿಸತೊಡಗಿದರು. ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸಿ ತಮ್ಮ ನೋವುಗಳನ್ನು ಅಕ್ಷರ ರೂಪಕ್ಕಿಳಿಸಿರುವುದು ದಲಿತ ಸಾಹಿತ್ಯದ ಅರುಣೋದಯವಾಯಿತು. ಇಲ್ಲಿ ಬದುಕಿನ ಅನುಭವವೇ ಬರಹ ರೂಪಕ್ಕಿಳಿಯಿತು. ಹಿರಿಯ ಸಾಹಿತಿಗಳು, ಕವಿಗಳು ದಲಿತರ ಆಶಯ, ಚಿಂತನೆ, ಭಾವಗಳನ್ನು ಅಭಿವ್ಯಕ್ತಿಸುವುದರ ಮೂಲಕ ದಲಿತರ ಶೋಷಿತ ಬದುಕಿನ ಪ್ರತಿನಿಧಿಕರಣ ಜಗತ್ತಿಗೆ ಅನಾವರಣಗೊಂಡಿತು.

ಕನ್ನಡ ಸಾಹಿತ್ಯಕ್ಕೆ ಸ್ತ್ರೀವಾದಿ ಸಾಹಿತ್ಯವೆಂಬ ಹೊಸ ಆಯಾಮವೊಂದು ಇಪ್ಪತ್ತನೆಯ ಶತಮಾನದ ಕಾಲಮಾನದಲ್ಲಿ ಬೆಳೆಯತೊಡಗಿತು. ಮಿತಿಗಳ ಚೌಕಟ್ಟಿನಲ್ಲೇ ಸೆರೆಯಾದ ಮಹಿಳೆಯರ ಕಷ್ಟ ಕೋಟಲೆಗಳು ಮಹಿಳಾ ಸಂವೇದನೆಯ ಮೂಲಕ ಜಗತ್ತಿಗೆ ಪರಿಚಯವಾಗತೊಡಗಿತು. ಅದರಲ್ಲಿ ದಲಿತ ಮಹಿಳಾ ಸಂವೇದನೆಯು ಪ್ರಮುಖ ಘಟ್ಟವಾಗಿದೆ. 'ದಲಿತ ಮಹಿಳೆ' ಎಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಹೆಣ್ಣುಮಕ್ಕಳೆಂದು ಗುರುತಿಸಲಾಗುತ್ತದೆ. ದಲಿತ ಮಹಿಳೆ ಬೇರೆ ವರ್ಗದ ಜಾತಿಯ ಹೆಣ್ಣು ಮಕ್ಕಳಿಗಿಂತಲೂ ವಿಭಿನ್ನ. 'ದಲಿತ ಮಹಿಳೆ' ಎಂಬ ಪದ ಸೇರಿಕೊಳ್ಳುವುದು ಕೇವಲ ಲಿಂಗ ಪ್ರತ್ಯೇಕತೆಯನ್ನು ತೋರಿಸುವುದಕ್ಕಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಅವರ ಅನುಭವವು ವಿಭಿನ್ನವಾಗಿರುತ್ತವೆ ಎಂಬುದನ್ನು ತೋರಿಸುವ ಕಾರಣಕ್ಕೆ. ತನ್ನ ಅಸ್ಮಿತೆಯನ್ನು ಕಂಡುಕೊಳ್ಳಲು ಈ ಸಮಾಜದ ಜೊತೆಗೆ ಎದುರಿಸುತ್ತಿರುವ ಸವಾಲುಗಳನ್ನು ಅನುಭವದ ಮೂಲಕ ಅಭಿವ್ಯಕ್ತಿಸಲು ಆಯ್ದುಕೊಂಡ ಸಾಹಿತ್ಯಿಕ ಮಾರ್ಗಗಳನ್ನು, ರೂಪಗಳನ್ನು ಗುರುತಿಸುವ ಪ್ರಯತ್ನ. ಮಹಿಳೆ ತನ್ನ ಐಡೆಂಟಿಟಿಯನ್ನು, ಅಸ್ಮಿತೆಯನ್ನು ಗುರುತಿಸಿಕೊಳ್ಳಲು ಜಗತ್ತಿನ ಮುಂದೆ ತನ್ನ ಅನೇಕ ಸಂಗತಿಗಳನ್ನು ತೆರೆದಿಡತಕ್ಕದ್ದು ಅನಿವಾರ್ಯ. ಸಾಮಾಜಿಕ ವ್ಯವಸ್ಥೆಯನ್ನು ಅದು ನಿರ್ಮಿಸಿದ ಸಂದಿಗ್ದತೆಗಳನ್ನು ಎದುರಿಸಲು ಮಾಡಿರುವ ಪ್ರಯತ್ನಗಳನ್ನು ಅಭಿವ್ಯಕ್ತಿಸಲು ತನ್ನ ಸಂವೇದನೆಗಳನ್ನು ಅಕ್ಷರದ ಮೂಲಕ ದಾಖಲಿಸುತ್ತಾಳೆ. ಅವುಗಳಲ್ಲಿ ಆತ್ಮಕಥೆ ಪ್ರಕಾರವು ಒಂದಾಗಿದೆ. ಬಿ.ಟಿ. ಲಲಿತಾ ನಾಯಕ್, ದು. ಸರಸ್ವತಿ, ಅಂಬವ್ವ ತಿಕೋಟ, ಸಮತಾ ದೇಶಮಾನ್ಯೆ, ಕೆ. ಸುಮಿತ್ರಾಬಾಯಿ ಮತ್ತು ನೇತ್ರಾ ಇವರು ಇಂತಹ ದಲಿತ ಮಹಿಳೆಯರ ಪ್ರತಿನಿಧಿಗಳಾಗಿ ತಮ್ಮ ಆತ್ಮಕಥನಗಳಲ್ಲಿ ಆದ ಅನ್ಯಾಯಗಳು, ಶೋಷಣೆಗಳು, ಅವಮಾನಗಳನ್ನು ನಿರೂಪಿಸಿದ್ದಾರೆ.

"ಮದುವೆಯಾಗಿ ಪತಿಯ ಮನೆ–ತಿಪ್ಪಾಪುರ ತಾಂಡಾಕ್ಕೆ ಕಾಲಿಟ್ಟ ನನಗೆ ಅಲ್ಲಿಯ ಬಡತನ ಹಸಿವು ಕಂಡು ಖೇದವೆನಿಸಿತು. ನನ್ನ ತೌರೂರಿಗಿಂತಲೂ ಇದು ಅತ್ಯಂತ ಹೀನಾಯ ಸ್ಥಿತಿಯಲ್ಲಿತ್ತು. ಅತಿಯಾದ ಕುಡುಕುತನ ಮತ್ತು ಅತಿ ಸಂತಾನವೇ ಅಲ್ಲಿಯ ದುಃಸ್ಥಿತಿಗೆ ಕಾರಣವಾಗಿತ್ತು .... .... .... ಈ ತಾಂಡಾದಲ್ಲಿರೋ 70 ಮನೆಗಳು ಒಬ್ಬನೇ ಹಿರಿಯನ ಒಕ್ಕಲು, ಎಲ್ಲರೂ ಆತನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೇ. ಇಲ್ಲಿ ಯಾರೂ ಪರಕೀಯರಲ್ಲ ಬೇಜಾರು ಪಟ್ಕೋಬೇಡ, ಎಂದು ನವ ವಧುವಾದ ನನಗೆ ಸಣ್ಣ ಅತ್ತೆ ಧೈರ್ಯ ಹೇಳಿದಾಗ ಸುಸ್ತಾಗಿ ಕುಂತೆ" (ಲೇಖ–ಲೋಕ ಸಂ: 1, 1998, ಪು: 53) ಎಂದು ಅಭಿವ್ಯಕ್ತಿಸುತ್ತಾರೆ. ಈ ಅತೀ ಸಂತಾನದ ಕುರಿತು 'ಚಂದ್ರಪರಾಭವ' ಎಂಬ ರೇಡಿಯೋ ನಾಟಕವನ್ನು ಬರೆಯುತ್ತಾರೆ. ಇದಕ್ಕೆ ಅವರ ಗಂಡನೇ ಪ್ರೋತ್ಸಾಹಿಸಿ ಹೆಸರು ಕೂಡ ಅವರೇ ಸೂಚಿಸುತ್ತಾರೆ. ಗಂಡನ ಮೆಚ್ಚುಗೆ, ಪ್ರೋತ್ಸಾಹಗಳಿಂದ ಲಲಿತಾ ನಾಯಕ ಅವರು ಲೇಖನ, ಕಥೆ, ಕವನಗಳನ್ನು ಬರೆಯುತ್ತಾರೆ. ನನ್ನ ಬರವಣಿಗೆಗೆ ನನ್ನ ಗಂಡನೇ ಸ್ಫೂರ್ತಿ, ಕಾರಣ ಎನ್ನುವ ಲಲಿತಾ ನಾಯಕ ಗಂಡನ ಇನ್ನೊಂದು ಚಹರೆಯನ್ನು ಪರಿಚಯಿಸುತ್ತಾರೆ. ಹೆಂಡತಿಯ ಜನಪ್ರಿಯತೆಯನ್ನು ಸಹಿಸದ ಗಂಡ ದುಶ್ಚಟಗಳ ದಾಸನಾಗುತ್ತಾನೆ. ಅವುಗಳನ್ನು ಬಿಡುವಂತೆ ಹೇಳಿ, ಪ್ರತಿಭಟಿಸಿದಾಗ ಹೆಂಡತಿಯ ವಿರುದ್ಧ ತಿರುಗಿ ಬೀಳುತ್ತಾರೆ. "ನಾನು ಮದುವೆ ಮಾಡಿಕೊಂಡು ಬಂದ ಮೂರುಕಾಸಿನ ಹೆಣ್ಣು ನೀನು, ನಿನ್ನಿಂದ ನನಗೆ ಉಪದೇಶ ಬೇಕಾಗಿಲ್ಲ. ನಾನು ದುಡಿಯುತ್ತೇನೆ–ಕಳೆಯುತ್ತೇನೆ ಅಥವಾ ಸಂಪಾದಿಸುತ್ತೇನೆ. ಅದನ್ನು ಕೇಳುವ ಹಕ್ಕು ನಿನಗಿಲ್ಲ. ತಂದು ಹಾಕಿದ್ದನ್ನು ತಿಂದು ನಿನ್ನ ಕೆಲಸ ನೀನು ಮಾಡಿಕೊಂಡಿರು ಅಷ್ಟೇ" (ಅದೇ ಪುಟ) ಎಂದು ಖಡಾಖಂಡಿತವಾಗಿ ಹೇಳಿದ ಗಂಡನ ಮಾತಿಗೆ ಚಿಂತಿತಳಾಗುತ್ತಾಳೆ. ಇದೇ ವಿಷಯವನ್ನಿಟ್ಟುಕೊಂಡು 'ಮೂರು ಕಾಸಿನ ಹೆಣ್ಣು' ಮತ್ತು 'ಅವಳು, ನಾನು ಮತ್ತು ಕನ್ನಡಿ' ಎಂಬ ಲೇಖನಗಳನ್ನು ವಿಡಂಬನಾತ್ಮಕವಾಗಿ ಅಭಿವ್ಯಕ್ತಿಸಿ ಬರೆಯುತ್ತಾರೆ. ಗಂಡಸು ಎಷ್ಟೇ ಬೌದ್ಧಿಕ ಬೆಂಬಲ ನೀಡಿದರೂ ಹೆಣ್ಣು ತನಗಿಂತ ಒಂದು ಹೆಜ್ಜೆನೂ ಮುಂದೆ ಪ್ರಗತಿ ಸಾಧಿಸಿಬಾರದು ಎಂಬ ಮನೋಧೋರಣೆ ಪುರುಷ ಪ್ರಧಾನ ಸಮಾಜದಲ್ಲಿ ಬೇರೂರಿದ ಸ್ವಯಂ ಸಿದ್ಧ ನಿಯಮ. 'ನಾನು ದುಡಿಯುತ್ತೇನೆ–ಕಳೆಯುತ್ತೇನೆ ಅದನ್ನು ಕೇಳುವ ಹಕ್ಕು ನಿನಗಿಲ್ಲ' ಎಂಬ ಮಾತಿನಲ್ಲಿ ಗಂಡಸಿನ ದರ್ಪ, ಕ್ರೌರ್ಯ, ದೌರ್ಜನ್ಯ ಎಲ್ಲವೂ ಕಾಣುತ್ತದೆ. ದುಡಿದು ಸಂಪಾದಿಸುವ ಗಂಡಿಗೆ ಬೆಲೆ, ಅದೇ ಮನೆಯ ಎಲ್ಲ ಜವಾಬ್ದಾರಿಯನ್ನು ಹೊತ್ತು ದುಡಿಯುವ ಹೆಣ್ಣು 'ಮೂರು ಕಾಸಿನ ಕಿಮ್ಮತ್ತೂ' ಇಲ್ಲದವಳು. ಇದು ಸಾಮಾಜಿಕ ವ್ಯವಸ್ಥೆಯ ಸ್ವಯಂ ಸಿದ್ಧ ಚೌಕಟ್ಟು. ಇಂತಹ ಪೂರ್ವಾಗ್ರಹ ಪೀಡಿತ ಗಂಡ ಬಿ.ಟಿ. ಲಲಿತಾ ನಾಯಕರನ್ನು ವಿಚಿತ್ರ ಮನಸ್ಥಿತಿಯಲ್ಲಿ ನೋಡುತ್ತ ಮನಸ್ಸಿನ ನೆಮ್ಮದಿಯನ್ನೇ ಕಳೆದುಕೊಳ್ಳುತ್ತಾರೆ. ಇಂತಹ ಅನೇಕ ವಿಷಯಗಳ ಕುರಿತು ಹೆಣ್ಣುಮಕ್ಕಳು ಹೆಜ್ಜೆಹೆಜ್ಜೆಗೂ ಅನುಭವಿಸುತ್ತಿರುವ ಶೋಷಣೆಯ ಬಗ್ಗೆ ನಾನಿನ್ನೂ ಬರೆಯಬೇಕು ಎಂಬ ಆಶಯವನ್ನು, ಬರೆಯುವ ಭರವಸೆಯನ್ನು ತಮ್ಮ ಆತ್ಮಕಥನದಲ್ಲಿ ಹಂಚಿಕೊಂಡಿದ್ದಾರೆ.

'ಮಾತಂಗಿ ದೀವಟಿಗೆ' ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಸಮತಾ ದೇಶಮಾನೆ ಅವರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆತ್ಮಕಥನ. ಕನ್ನಡದ ಆತ್ಮಕಥನ ಸಾಹಿತ್ಯದಲ್ಲಿ ದಲಿತ ಮಹಿಳಾ ಪ್ರತಿನಿಧಿಕರಣವಾಗಿ ಮತ್ತು ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲ ದಲಿತ ಮಹಿಳಾ ಆತ್ಮಕಥೆ ಎಂಬುದು ಇದರ ವಿಶೇಷತೆ. ಇದು ಕೇವಲ ವೈಯಕ್ತಿಕ ನೆಲೆಯಲ್ಲಿ ರಚನೆಯಾದ ಆತ್ಮಚರಿತ್ರೆ ಆಗಿರದೆ, ಸಾಹಿತ್ಯ ವಿಭಾಗಕ್ಕೆ ಕನ್ನಡ ಸಾಹಿತ್ಯದಲ್ಲಿ ದಲಿತ ಮಹಿಳಾ ಸಮುದಾಯವನ್ನು ಪ್ರತಿನಿಧಿಸುವ ಆತ್ಮಕಥೆ. ಸಮತಾ ಅವರ ಆತ್ಮಚರಿತ್ರೆಯು ದಲಿತ ಸಮುದಾಯದ ಎಲ್ಲ ಮಹಿಳೆಯರ 'ಜೀವನ ಚರಿತ್ರೆ'ಯಂತೆ ಕನ್ನಡ ಸಾಹಿತ್ಯವನ್ನು ಪ್ರತಿನಿಧಿಸುತ್ತದೆ.

ಪ್ರೊ. ಜೋಗನ್ ಶಂಕರ್ ಅವರು ಮುನ್ನುಡಿಯಲ್ಲಿ ಹೇಳುವಂತೆ 'ದಲಿತ ಸಮುದಾಯದಲ್ಲಿ ಹುಟ್ಟಿ ಬೆಳೆದು ಅನೇಕ ಅಸಾಧಾರಣ ಸಾಧನೆಗಳನ್ನು ತನ್ನದಾಗಿಸಿಕೊಂಡು, ಹೆಜ್ಜೆ–ಹೆಜ್ಜೆಗೂ ಅನುಭವಿಸಿದ ಅಸ್ಪೃಶ್ಯತೆಯ ಚಾಟಿ ಏಟುಗಳು, ಸ್ವಾಭಿಮಾನಕ್ಕೆ ಸವಾಲಾಗುವ ಸಂದರ್ಭಗಳನ್ನು, ಹರಿದು ಮುಕ್ಕುವ ಬಡತನ, ಅವಮಾನಗಳನ್ನು ದಲಿತ ಮಹಿಳೆಯರಿಗೆ ವಿಶೇಷವಾಗಿ ಎದುರಾಗುವ ಜಾತಿ ಆಧಾರಿತ ಮತ್ತು ಪುರುಷ ಪ್ರಧಾನ ಸಮಾಜದ ವಿಷಕಾರಕ ಧೋರಣೆಯಿಂದ ನಲುಗಿ ಹೋಗದೆ ಅದನ್ನು ಪ್ರಶ್ನಿಸುತ್ತಾ ಸವಾಲಾಗಿ ಎದುರಿಸಿದ ವಿಶೇಷ ಸಾಧನೆಯ ಮೂರ್ತಿಯಂತೆ ನಮ್ಮನ್ನೆಲ್ಲ ಪ್ರೇರೇಪಿಸುವ ಡಾ. ಸಮತಾ ದೇಶ ಮಾನೆಯವರ ಈ ಆತ್ಮಚರಿತ್ರೆಯು ಅನನ್ಯವಾದದ್ದು ಮತ್ತು ಪ್ರಬುದ್ಧವಾದದ್ದು'.

'ಸಮಾಜದಲ್ಲಿ ನೂರಾರು ಬಾರಿ ಬೆಳಕಿಲ್ಲದೆ ದಾರಿ ಕಾಣುವುದಿಲ್ಲ. ಹಾಗೇ ತಗ್ಗು, ದಿನ್ನೇ, ಮುಳ್ಳುಗಳು ದಾಟುತ್ತಲೇ ಇರಬೇಕು. ಬದುಕಿನ ದೋಣಿ ಸಾಗುತ್ತಲೇ ಇರಬೇಕು. ಎಷ್ಟೇ ಪ್ರವಾಹ ಉಕ್ಕಿ ಹರಿಯುತ್ತಿದ್ದರೂ ನದಿಗೆ ಬಿದ್ದು ಈಜುವ ಶಕ್ತಿ ಮನುಷ್ಯನಿಗಿದೆ. ಎಂಥ ಗಳಿಗೆಯಲ್ಲೂ ಅಭಿನಯವನ್ನು ಮಾಡುವ ಕಲೆ ಗೊತ್ತಿರುವುದು ಮನುಷ್ಯನಿಗೆ ಮಾತ್ರ' ಎನ್ನುವಂತೆ ಜೀವನ ನಡೆಸಿ ತೋರಿದ ಸಾಧನೆ ಸಮತಾ ಅವರದು ಎಂದು ಈ ಆತ್ಮಕಥೆ ದಲಿತ ಮಹಿಳೆಯರೂ ಕೂಡ ಅವಕಾಶ ಸಿಕ್ಕರೆ ಇತರ ಮಹಿಳೆಯರಂತೆ ಛಲದಿಂದ ಬದುಕನ್ನು ಸಾಧಿಸಿ ತೋರಿಸಬಲ್ಲರು ಎಂಬುದನ್ನು ಅನಾವರಣಗೊಳಿಸಿದೆ.

ಅಂಬವ್ವ ತಿಕೋಟಾ ದೇವದಾಸಿತನದಿಂದ ಸಿಡಿದು ಬಂದು ಸಾಂಸ್ಕೃತಿಕ ಕಲೆ ಗೀಗೀ ಕಲೆಯನ್ನು ತನ್ನ ಜೀವನಾಧಾರಕ್ಕಾಗಿ ಮಾಡಿಕೊಂಡು ನಾಗೇಶಿ ಪಕ್ಷ ಹಿಡಿದು ಹಾಡುತ್ತಾ, ಜನರನ್ನು ರಂಜಿಸುತ್ತ ತನ್ನೊಡಲ ದುಃಖವನ್ನು ನುಂಗಿಕೊಳ್ಳುತ್ತ ಬಂದಿರುವ ಬದುಕಿನ ಬಗ್ಗೆ ವಿವರಣೆ ಸಾಂಸ್ಕೃತಿಕ, ಸಾಮಾಜಿಕ ಸಂಕಥನವಿದೆ. "ದಲಿತರಿಗೆ ಬದುಕಲು ಆರ್ಥಿಕವಾದ ಸಬಲತೆ, ಸಾಮಜಿಕವಾದ ಭದ್ರತೆ ಇಂದಿಗೂ ಕೂಡ ಇಲ್ಲ. ಕೃಷಿ ಕೂಲಿ ಕೆಲಸ ಸಿಕ್ಕರೆ ಮಾಡಬೇಕು. ಇಲ್ಲದಿದ್ದರೆ ಬೊಂಬಾಯಿ, ಪೂನಾ, ಗೋವಾ ಮತ್ತು ಹೈದರಾಬಾದನಂತಹ ಮಹಾನಗರಗಳಿಗೆ ವಲಸೆ ಹೋಗಿ ಬದುಕಬೇಕು" (ಮಹಿಳಾ ಅಧ್ಯಯನ ಸಂ. 6, ಸಂಯುಕ್ತ ಸಂಚಿಕೆ 1–2, ಜನವರಿ–ಡಿಸೆಂಬರ್ 2004, ಪು: 212) ಇಂದಿಗೂ ಜೀವನಾದಾರಕ್ಕಾಗಿ ದಲಿತ ಮಹಿಳೆಯರು ನಗರಗಳಿಗೆ ವಲಸೆ ಹೋಗುತ್ತಿರುವರು ಎಂಬುದನ್ನು ಹೇಳುತ್ತಾಳೆ.

"ಒಂದು ಹೆಣ್ಣು ಸಾವಿರಾರು ಜನಗಳ ಮಧ್ಯೆ ಸವಾಲ್–ಜವಾಬ ಹಾಡಿನ ಪ್ರಕಾರದಲ್ಲಿ ಅಶ್ಲೀಲದ ಪದಗಳನ್ನು ಬಳಸಿಕೊಂಡು ಹಾಡುವ ಹಾಡಿಕೆ, ಅಂತಹ ಸಂದರ್ಭದಲ್ಲಿ ಜನ ತಮ್ಮ ಸಂತೋಷಕ್ಕಾಗಿ ಒನ್ಸಮೋರ್ ಹಾಡಬೇಕು ಅಂತ ಕೇಳವರು, ಓಡಿಹೋಗಿ ದಂಡಿ ತಂದು ಕಟ್ಟವರು, ಆ ಕಟ್ಟೋ ನೆಪದಲ್ಲಿ ನನಗ ಮುಟ್ಟವರು, ದೂರದ ಸಭೆಯೊಳಗಿಂದ ಹರಳು ಒಗೆಯುವರು. ಹೀಗೆ ಅವರಿಗೆ ಮೋಜು ನೀಡಿ ಮುಜಗುರವನ್ನು ಅನುಭವಿಸಿದ್ದೇನೆ" (ಅದೇ ಪು: 213) ಎಂದು ಹೇಳುವಲ್ಲಿ ದೇವದಾಸಿಯರ ಮಹಿಳೆಯ ಪರಿಸ್ಥಿತಿಯನ್ನು ನೆನೆದರೆ ತಂತಿ ಮೇಲಿನ ಜೀವನ ಎನಿಸುತ್ತದೆ. ಯಾರೋ ಮಾಡಿದ (ತಂದೆ– ತಾಯಿ ಮೌಢ್ಯದಿಂದ ದೇವದಾಸಿತನಕ್ಕೆ ಒಳಗಾದ) ತಪ್ಪಿಗಾಗಿ ದಲಿತ ಹೆಣ್ಣುಮಕ್ಕಳು ಅನ್ಯಾಯವಾಗಿ ಬಲಿಯಾದ ಕಟುಸತ್ಯವನ್ನು ಈ ಅನುಭವ ಕಥನ ನಿರೂಪಿಸುತ್ತದೆ. ಇದು ಕೇವಲ ಒಂದು ಕಡೆ ಮಾತ್ರ ನಡೆಯುವ ಸನ್ನಿವೇಶ ಆಗಿರದೆ, ಹಾಡುಗಾರಿಕೆಯ ಸಂದರ್ಭದಲ್ಲಿ ಅನುಭವಿಸಿದ ಮುಜುಗುರದ ಕ್ಷಣಗಳನ್ನು ಹತ್ತಾರು ಜಾತ್ರೆಗಳ ಸಂದರ್ಭದಲ್ಲಿ ನಡೆಯುವ ಕ್ರಿಯೆಯಾಗಿತ್ತು ಎಂದು ದುಃಖದಿಂದ ಅನುಭವಿಸಬೇಕಾದ ಅನಿವಾರ್ಯದ ಪರಿಸ್ಥಿತಿಗೆ ಒಗ್ಗಿಕೊಳ್ಳಬೇಕಿತ್ತು ಎಂದು ವಿಷಾದದಿಂದ ಅನುಭವವನ್ನು ಹಂಚಿಕೊಂಡಿದ್ದಾರೆ. ಇದು ಕೇವಲ ಅಂಬವ್ವಳ ಕಥೆ ಮಾತ್ರ ಅಲ್ಲ ದಲಿತ ಸಮುದಾಯದಲ್ಲಿ ಮೌಢ್ಯತೆಗೆ ಒಳಗಾಗಿ, ಪುರುಷ ಸಂಸ್ಕೃತಿಯ ಶೋಷಣೆಗೆ ಒಳಗಾಗಿ ಬದುಕಿದ ಇಂತಹದೇ ದೇವದಾಸಿ ಮಹಿಳೆಯರ ಕಥೆಯಾಗಿದೆ.

ದು. ಸರಸ್ವತಿ ಅವರು ತಮ್ಮ ಬರೆವಣಿಗೆಯ ಮೂಲಕ ದಲಿತ ಮಹಿಳಾ ಸಂವೇದನೆಗೆ ವಿಶಿಷ್ಟ ಸ್ಥಾನವನ್ನು ನೀಡಿದವರು. ಬಿ.ಟಿ. ಲಲಿತಾನಾಯಕರ ನಂತರ ಅನುಭವ ಕಥನದ ಮೂಲಕ ದಲಿತ ಮಹಿಳೆಯ ಪ್ರತಿನಿಧಿಕರಣ ತೋರಿದವರು. ಅವರ 'ಈಗೇನ್ ಮಾಡೀರಿ' ಎಂಬ ಅನುಭವ ಕಥನದ ಮೂಲಕ ಸಾಹಿತ್ಯ ಲೋಕಕ್ಕೆ ಪರಿಚಿತರಾದವರು. ಅವರ ಕೃತಿ 'ಈಗೇನ್ ಮಾಡೀರಿ' ಆತ್ಮಕಥನವು ಪ್ರಶ್ನೆಯನ್ನು ಇಟ್ಟುಕೊಂಡೇ ಹತ್ತು ವರುಷದ ನ್ಯಾಯಾಂಗ ಹೋರಾಟದ ಹಾದಿಯ ಪಕ್ಷಿನೋಟ ಬೀರಿದ್ದಾರೆ. ಇಲ್ಲಿ ಅವರು ಅನುಭವಿಸಿದ ಪ್ರತಿಯೊಂದು ಕ್ಷಣವು ಹಲವು ಮಹಿಳೆಯರ ಅನುಭವದ ಕ್ಷಣಗಳಾಗಿ ಚಿತ್ರಿತಗೊಂಡಿವೆ. ಒಬ್ಬ ಮುಗ್ದ ಹೆಣ್ಣಮಗಳು ಹೇಗೆಲ್ಲಾ ಮೋಸಕ್ಕೆ ಬಲಿಯಾಗುತ್ತಾಳೆ ಎಂಬುದನ್ನು ವಿವರಿಸುವ ಕೃತಿ. ಈ ಕೃತಿಯ ಆರಂಭದಲ್ಲಿ ಅವರ ತಾಯಿ ಮತ್ತು ಬಾಲ್ಯದ ಕುರಿತಾಗಿ ಹೇಳುವ ಸಂದರ್ಭದಲ್ಲಿ ಬಳಸಿದ ಭಾಷೆಯು ಓದಲು ಕಷ್ಟವಾದರೂ ಭಾವನಾತ್ಮಕ ಬಂಧದಲ್ಲಿ ಸಶಕ್ತವಾಗಿ ಪ್ರಾದೇಶಿಕ ಆಡುಭಾಷೆಯನ್ನು ಬಳಸಿಕೊಂಡಿರುವುದು ವಿಶಿಷ್ಟವಾಗಿದೆ.

ಜಗತ್ತಿನ ವ್ಯವಹಾರ ಅರಿಯದ ಮುಗ್ದ ಮನಸ್ಸಿನ ಮಹಿಳೆ ತಾನು ಮಾಡದೆ, ಇತರರು ಎಸಗಿದ ತಪ್ಪಿಗಾಗಿ ಹಿಂಸೆ, ನೋವು ಅನುಭವಿಸಬೇಕಾದ ಪ್ರಸಂಗದ ವಿವರಗಳನ್ನು ಈ ಅನುಭವಕಥನ ದಾಖಲಿಸಿದೆ. ನಂಬಿದವರೇ ಮಾಡುವ ಮೋಸ, ವಂಚನೆ ದಗಲಬಾಜಿತನವು ಅವರ ವ್ಯಕ್ತಿತ್ವವನ್ನೇ ನಾಶಗೈಯಲು ಪ್ರಯತ್ನಿಸಿದ ಕುರಿತು ಮಾಡಿದ ಪ್ರಯತ್ನಗಳನ್ನು ಅನಾವರಣಗೊಳಿಸಿದೆ. ತೀರಾ ಆಘಾತಕ್ಕೊಳಗಾದ ಮನಸ್ಸು ಗೆಳೆಯ/ಗೆಳತಿಯರ ಸಹಾಯ ಮತ್ತು ಪ್ರೋತ್ಸಾಹದಿಂದ ಗಟ್ಟಿಯಾಗಿ ನಿಂತು ಭರವಸೆಯಿಂದ ಹೋರಾಟ ನಡೆಸಿದ್ದು ಈ ಕೃತಿಯು ತಿಳಿಸುತ್ತದೆ. ಕೆ. ವಿ. ನಾರಾಯಣ ಅವರು ಮುನ್ನುಡಿಯಲ್ಲಿ ಹೇಳುವಂತೆ 'ಸರಸ್ವತಿಯವರ ಈ ಕಥನವನ್ನು ಒಂದು ಅನುಭವ ಕಥನವನ್ನಾಗಿ ಮಾತ್ರ ಓದುವುದು ಸಾಧ್ಯವಿಲ್ಲ. ವಿಕಾಸಗೊಳ್ಳುತ್ತ ಹೋದಂತೆ, ಜೀವನದ ವಲಯ ಹಿಗ್ಗುತ್ತ ಹೋದಂತೆ ಒದಗುವ ಕುಗ್ಗಿಸುವ ಅನುಭವಗಳ ನೋವನ್ನು ವ್ಯಕ್ತಿ ಎದುರಿಸುವ ಕ್ರಮವನ್ನು ನಮ್ಮೆದುರು ತೆರೆದಿಡುವ ಕಥನವಿದು. ಇದು ಜೀವನ ಶ್ರದ್ಧೆಯ ಕಥನ' ಎಂಬ ಮಾತು ಸತ್ಯವಾದುದು.

"ಮತ್ತೊಬ್ಬರಿಗೆ ಸೇರಿದ ಐದು ಪೈಸೆಯನ್ನು ಮುಟ್ಟುವುದೂ ಪಾಪ ಎಂಬ ಅಮ್ಮನ ಲೋಕದ ನಂಬಿಕೆಯಲ್ಲಿ ಜೀವಿಸುತ್ತಿದ್ದವಳು ಲಕ್ಷಾಂತರ ರೂಪಾಯಿಗಳನ್ನು ನುಂಗಿದ್ದೇನೆಂಬ ಆರೋಪ ನನ್ನೊಳಗೆ ಹುಟ್ಟಿಸಿದ ತಲ್ಲಣವನ್ನು ನಾನು ಬರೆದೇ ನೀಗಿಸಿಕೊಳ್ಳಬೇಕಿತ್ತು. ಕಣ್ಣಿಗೆ ಕಾಣುವ ದಾಖಲೆಯನ್ನಷ್ಟೇ ನಂಬುವ ನ್ಯಾಯ ವ್ಯವಸ್ಥೆಯಲ್ಲಿ ಕಾಣಿಸದ ಅವ್ವನ ಲೋಕದ ನಂಬಿಕೆಗಳು ಮುಖಾಮುಖಿಯಾಗಿ ಬಿಚ್ಚಿಕೊಂಡ ಸತ್ಯಗಳನ್ನು ದಾಖಲಿಸುವ ಮೂಲಕ ಸಂವಾದಿಸುವುದು ಮುಖ್ಯವೆನಿಸಿತು" ಎಂದು ಕೃತಿಯ ಆಶಯವನ್ನು ಕಥನದ ಆರಂಭದಲ್ಲೇ ವ್ಯಕ್ತಪಡಿಸಿದ್ದಾರೆ. ಈ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆಶಯದಂತೆ ತನ್ನತನದ ಶೋಧ, ಅಂತಸತ್ವದ ಪರೀಕ್ಷೆ, ಪ್ರಾಮಾಣಿಕತೆಗಳ ಮೊತ್ತವೆಂಬಂತೆ 'ಈಗೇನ್ ಮಾಡೀರಿ' ರಚನೆಯಾಗಿದೆ.

'ಒಕ್ಕಲಿಗರ ಮನೆಯಲ್ಲಿ ಹುಟ್ಟಿದಿದ್ದರೆ' ಎಂಬುದು ನೇತ್ರಾ ಅವರ ಆತ್ಮಕಥನ. ಶೀರ್ಷಿಕೆಯ ಉದ್ಘಾರದೊಂದಿಗೆ ಈ ಆತ್ಮಕಥನ ವಿಶೇಷ ಗಮನ ಸೆಳೆಯುತ್ತದೆ. ದಲಿತ ಮಹಿಳಾ ಆತ್ಮಕಥೆಗಳು ಯಾರೂ ಕಂಡರಿಯದ ಕ್ರೌರ್ಯಗಳ ಕಥೆ, ವ್ಯಥೆಗಳಾಗಿವೆ ಎಂಬುದನ್ನು ಈ ಆತ್ಮಕಥೆಯ ಶೀರ್ಷಿಕೆಯೇ ನಿರೂಪಿಸುತ್ತದೆ. ಕೃತಿ ಓದುವ ಮುಂಚೆಯೇ ಶೀರ್ಷಿಕೆಯಲ್ಲೇ ಅವರಿಗೆ ಜಾತಿ ಮೂಲದಿಂದ ಆದ ನೋವು, ಅಪಮಾನಗಳನ್ನು ಅರಿಯಬಹುದಾಗಿದೆ. ಅವರ ಆತ್ಮಕಥೆ 'ಒಕ್ಕಲಿಗರ ಮನೆಯಲ್ಲಿ ಹುಟ್ಟಿದಿದ್ದರೆ' ಎಂಬುದು ಬಾಲ್ಯದಲ್ಲಿ ಅನುಭವಿಸಿದ ಜಾತಿ ನಿಂದನೆ, ಅವಮಾನಕರ ಶೋಷಣೆ, ಬಡತನ–ಹಸಿವು, ಅಸ್ಪೃಶ್ಯತೆ, ಅಸಮಾನತೆಗೆ ಒಳಗಾಗಿದ್ದನ್ನು ಚಿತ್ರಿಸುತ್ತದೆ. ಅವರ ತಂದೆ ತಾತಂದಿರು ಮಾಡುವ ಕೆಲಸ, ಊರಲ್ಲಿನ ಸತ್ತ ದನ ಸಾಗಿಸುವುದು, ಡೊಳ್ಳು, ಹಲಗೆ ಬಡಿಯುವುದು, ಕುಣಿ ತೋಡುವುದು ಇವುಗಳನ್ನು ಚಿತ್ರಿಸಿರುವುದು ಕೇವಲ ಅವರಿಗಷ್ಟೇ ಸೀಮಿತವಾಗಿರದೆ ಆ ಕಾಲದಲ್ಲಿ ಇಡೀ ದಲಿತ ಸಮುದಾಯವನ್ನು ಪ್ರತಿನಿಧಿಸುತ್ತದೆ.

ಕನ್ನಡ ಆತ್ಮಕಥನ ಸಾಹಿತ್ಯದಲ್ಲಿ ದಲಿತ ಮಹಿಳೆಯರ ಸಂವೇದನೆಯನ್ನು ಪ್ರತಿನಿಧಿಸುವ ಎರಡನೆಯ ಪೂರ್ಣ ಪ್ರಮಾಣದ ಸ್ವತಂತ್ರ ಆತ್ಮಕಥೆ ಕೆ. ಸುಮಿತ್ರಾಬಾಯಿ ಅವರ 'ಸೂಲಾಡಿ ಬಂದೊ ತಿರುತಿರುಗಿ'. ಸಮಾಜಶಾಸ್ತ್ರದ ಅಧ್ಯಾಪಕಿಯಾಗಿ ಕುಟುಂಬ ವ್ಯವಸ್ಥೆಯೊಳಗಿನ ಮಹಿಳಾ ಶೋಷಣೆಗಳನ್ನು, ಪುರುಷ ಸಂಸ್ಕೃತಿಯನ್ನು ತಡೆಗಟ್ಟಲು ಸಾಂಸ್ಕೃತಿಕ ರಚನೆಯಲ್ಲಿ ಮಹಿಳಾ ಬದುಕಿನ ಸ್ಥಿತ್ಯಂತರಗಳಾಗಬೇಕಿದೆ ನಮ್ಮ ಸಂಸ್ಕೃತಿಯು ಸ್ತ್ರೀ–ಪುರುಷರಿಬ್ಬರನ್ನೂ ಸಮಾನವಾಗಿ ಕಾಣಬೇಕು ಎಂಬ ಆಶಯದೊಂದಿಗೆ ರಚನೆಯಾಗಿದೆ.

### ಆತ್ಮಕಥನಗಳಲ್ಲಿ ಮುಸ್ಲಿಂ ಮಹಿಳಾ ಪ್ರತಿನಿಧಿಕರಣ

ಕನ್ನಡ ಸಾಹಿತ್ಯ ವಲಯಕ್ಕೆ ಮುಸ್ಲಿಂ ಸಮುದಾಯದ ಮಹಿಳಾ ಸಂವೇದನೆಯನ್ನು ಮೊಟ್ಟಮೊದಲು ಪರಿಚಯಿಸಿದ ಮಹಿಳೆ ಸಾರಾ ಅಬೂಬಕರ ಅವರು. 1984ರಲ್ಲಿ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಬರೆಯುವ ಮೂಲಕ ಸಾರಾ ಅಬೂಬಕರ ಅವರು ಆಧುನಿಕ ಕನ್ನಡ ಸಾಹಿತ್ಯಕ್ಕೆ ಮುಸ್ಲಿಂ ಮಹಿಳೆಯರ ಸಂವೇದನೆಯನ್ನು ಪರಿಚಯಿಸಿಕೊಟ್ಟರು. ಅದೇ ಕೃತಿಯಿಂದ ಸಾಹಿತ್ಯ ವಲಯದಲ್ಲಿ ಪ್ರಸಿದ್ಧರೂ ಆದರು. ಇವರು ಕೇವಲ ಲೇಖಕಿಯಷ್ಟೇ ಅಲ್ಲದೇ ಮಹಿಳಾ ಸಂಘಟನೆಗಳಲ್ಲಿಯೂ ಸಕ್ರಿಯವಾಗಿದ್ದು, ಮಹಿಳೆಯ ಅನೇಕ ಸಮಸ್ಯೆಗಳಿಗೆ ಸೃಜನಶೀಲ ಸಾಹಿತ್ಯದ ಮೂಲಕವಲ್ಲದೇ ಸೃಜನೇತರವಾಗಿಯೂ ಸ್ಪಂದಿಸಿದವರು.

ಸಾರಾ ಅಬೂಬಕರ ಅವರು 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯನ್ನು ಬರೆಯುವ ಮೂಲಕ ಮುಸ್ಲಿಂ ಮಹಿಳೆಯರ ತಲ್ಲಣಗಳಿಗೆ, ಹಿಂಸೆ, ಶೋಷಣೆಗಳಿಗೆ ಧ್ವನಿಯಾದ ಮೊಟ್ಟಮೊದಲ ಮುಸ್ಲಿಂ ಮಹಿಳೆ. ಈ ಕಾದಂಬರಿಯನ್ನು ಬರೆದಾದ ಮೇಲೆ ಸಾರಾ ಅಬೂಬಕರ ಅವರು 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಅನುಭವ ಕಥನ ಬರೆದರು. ಇದು ಅವರ ಆತ್ಮಕಥೆಯ ಸಂಕ್ಷಿಪ್ತ ರೂಪ. ಅದನ್ನೇ ಮುಂದೆ 'ಹೊತ್ತು ಕಂತುವ ಮುನ್ನ' ಎಂದು ವಿಸ್ತರಣೆಯಾಗಿ ಆತ್ಮಕಥೆಯನ್ನು ಸಂಪೂರ್ಣವಾಗಿ ಬರೆದ್ದಾರೆ.

ಮುಸ್ಲಿಂ ಮಹಿಳೆಯರಿಗೆ ತಮ್ಮ ಅನಿಸಿಕೆಗಳನ್ನು ಹೊರಹಾಕಲು, ಅನುಭವಗಳಿಗೆ ಅಭಿವ್ಯಕ್ತಿ ನೀಡಲು ಯಾವ ವೇದಿಕೆಯೂ ಇಲ್ಲದ ಕಾಲದಲ್ಲಿ ಸಾರಾ ಅಬೂಬಕರ ಅವರು ಮುಸ್ಲಿಂ ಸಮುದಾಯದ ಎಲ್ಲ ಮಹಿಳೆಯರ ಧ್ವನಿಯಾಗಿ ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಿ ಮಾಡಿದ ಮೊದಲ ಮುಸ್ಲಿಂ ಮಹಿಳೆ ಎಂಬುದನ್ನು 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಅನುಭವ ಕಥನ ಪ್ರತಿನಿಧಿಯಾಗಿ ಪ್ರಕಟವಾಯಿತು ಎಂಬುದು ಗಮನಾರ್ಹವಾದುದು. ಮುಸ್ಲಿಂ ಸಮಾಜ ಹೆಣ್ಣು ಮಕ್ಕಳು ಓದುವುದನ್ನು ಸಹಿಸುತ್ತಿರಲಿಲ್ಲ. ಹಾಗಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗಬೇಕು, ಇದಕ್ಕಾಗಿ ಹೋರಾಡಬೇಕು ಎಂದು ನಾನು ಆಗಲೇ ನಿರ್ಧರಿಸಿಕೊಂಡೆ ಎನ್ನುತ್ತಾರೆ. ಸುಲಭದ ವಿವಾಹ ವಿಚ್ಛೇದನ ಮತ್ತು ಬಹುಪತ್ನಿತ್ವ ಮುಸ್ಲಿಂ ಸಮುದಾಯದ ಮಹಿಳೆಯರು ಎದುರಿಸುವ ಬಹು ದೊಡ್ಡ ಸಮಸ್ಯೆಗಳು. ಇವು ಹೆಣ್ಣಿಗೆ ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯಗಳು. ಲಂಕೇಶರಿಂದ 'ನಿಮ್ಮ ಸಮಾಜದ ಕುರಿತು ಒಂದು ಸಣ್ಣ ಕತೆ ಅಥವಾ ಒಂದು ಚಿಕ್ಕ ಕಾದಂಬರಿ ಬರೆಯಿರಿ' ಎಂದು ಪತ್ರ ಬಂದಾಗ ಹೆಣ್ಣಿಗೆ ಧರ್ಮದ ಹೆಸರಿನಲ್ಲಿ ಆಗುವ ಈ ಅನ್ಯಾಯವನ್ನೇ ಬರೆದರೆ ನಮ್ಮ ಸಮಾಜದ ನೂರಾರು ಹೆಣ್ಣು ಮಕ್ಕಳ ನೋವಿಗೆ ಧ್ವನಿಯಾಗಬಹುದಲ್ಲವೇ ? ಎಂಬ ಯೋಚನೆ ಮಾಡಿ ಸುಲಭದ ವಿವಾಹ ವಿಚ್ಛೇದನದ ಸಮಸ್ಯೆಗನ್ನು ಇಟ್ಟುಕೊಂಡು 1984ರಲ್ಲಿ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಬರೆದೆ ಎನ್ನುತ್ತಾರೆ.

'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಪ್ರಕಟವಾದ 28 ವರ್ಷಗಳ ನಂತರ ಅವರ ಪೂರ್ಣ ಪ್ರಮಾಣದ ಆತ್ಮಕಥೆ 'ಹೊತ್ತು ಕಂತುವ ಮುನ್ನ' ಪ್ರಕಟವಾಗಿದೆ. "ನಾನು ಓರ್ವ ಮುಸ್ಲಿಂ ಹೆಣ್ಣಾದ ಮಾತ್ರಕ್ಕೆ ಸಮಾಜದಿಂದ ಹಲವು ವಿಧದ ಕಿರುಕುಳಗಳನ್ನು ಅನುಭವಿಸುವಂತಾದಾಗ ಇವೆಲ್ಲವೂ ನನ್ನೊಡನೆಯೇ ಅಳಿದು ಹೋಗಬಾರದೆಂದು ಯೋಚಿಸಿ ಈ ಎಲ್ಲ ಅನುಭವಗಳನ್ನೂ ಆತ್ಮಚರಿತ್ರೆಯ ರೂಪದಲ್ಲಿ ಬರೆದಿಡಬೇಕೆಂದು ಹತ್ತು ವರ್ಷಗಳ ಹಿಂದೆಯೇ ತೀರ್ಮಾನಿಸಿದೆ" (ಹೊತ್ತು ಕಂತುವ ಮುನ್ನ–2010, ಮುನ್ನುಡಿ)ಎಂದು ಕೃತಿ ರಚನೆಯ ಉದ್ದೇಶವನ್ನು ವಿವರಿಸುತ್ತಾರೆ. ಪ್ರಗತಿಪರ ವಿಚಾರ ಉಳ್ಳ ತಂದೆಯು ತನ್ನ ಮಗಳಿಂದಲಾದರೂ ಸಮುದಾಯದವರು ತಮ್ಮ ಹೆಣ್ಣುಮಕ್ಕಳಿಗೆ ಶಾಲೆಗೆ ಕಳಿಸಲಿ ಎಂಬ ಉದ್ದೇಶದಿಂದ ಶಾಲೆಗೆ ಕಳಿಸುತ್ತಾರೆ. ಆ ಸಮುದಾಯದ ಯಾವ ಒಬ್ಬರಿಗೂ ಸ್ವತಃ ಸಾರಾ ಅವರ ತಾಯಿಗೂ ತಮ್ಮ ಮಗಳು ಶಾಲೆಗೆ ಹೋಗುವುದು ಇಷ್ಟವಿರಲಿಲ್ಲ. ಅದಕ್ಕೆ ಸಾರಾ ಅವರು 'ನನ್ನ ಹೈಸ್ಕೂಲು ಜೀವನವೂ ತುಂಬಾ ಸುಖಮಯವಾಗಿಯೇನೂ ಇರಲಿಲ್ಲ. ಶಾಲೆಗೆ ಹೋಗಲು ದೊರೆತ ಬಹುದೊಡ್ಡ ಕೊಡುಗೆ ಎಂಬಂತಾಗಿತ್ತು ಅಷ್ಟೇ. ಆದ್ದರಿಂದ ತರಗತಿಯ ಇತರ ಹುಡುಗಿಯರಿಗಿದ್ದ ಯಾವ ಸ್ವಾತಂತ್ರ್ಯವೂ ಇರಲಿಲ್ಲ' ಎನ್ನುತ್ತಾರೆ. ಇದು ಪ್ರಗತಿಪರ ಧೋರಣೆಯುಳ್ಳ ಮನೆಯ ಹೆಣ್ಣುಮಗಳ ಪರಿಸ್ಥಿತಿಯಾದರೆ ಸಮುದಾಯದ ಇತರ ಹೆಣ್ಣುಮಕ್ಕಳ ಸ್ಥಿತಿಯನ್ನು ಊಹಿಸಿಕೊಳ್ಳಿ. ಇಂತಹ ಸ್ಥಿತಿಗತಿ ಮುಸ್ಲಿಂ ಮಹಿಳೆಯರದ್ದು. ಇದು ಈಗಲೂ ಪ್ರತಿಯೊಂದು ಮುಸ್ಲಿಂ ಕುಟುಂಬದಲ್ಲಿ ಕಂಡುಬರುವ ಧಾರುಣ ಸ್ಥಿತಿ ಎಂಬುದೂ ಒಪ್ಪಿಕೊಳ್ಳಬೇಕಾದ ವಿಷಾದನೀಯ ಸಂಗತಿ.

ಆ ಕಾಲದಲ್ಲಿ ಸಾರಾ ಶಾಲೆಗೆ ಹೋಗುವದೇ ಅಪರಾಧ, ಧರ್ಮದ ವಿರುದ್ಧ ಎಂದು ಸಮುದಾಯದವರು ತಿಳಿದಿದ್ದರು. ಎಷ್ಟೋ ಸಲ ಶಾಲೆಗೆ ಹೋಗುವುದನ್ನು ತಡೆಯಲು ಪ್ರಯತ್ನ ಕೂಡ ಮಾಡುತ್ತಾರೆ. ದೊಡ್ಡ ಮನೆಯವಳು ಎಂಬ ಕಾರಣಕ್ಕೆ ತಡೆಯಲು ಧೈರ್ಯ ಬರುವುದಿಲ್ಲ. "ಆಗ ನಮ್ಮೂರಿನ ಮುಸ್ಲಿಂರಿಗೆ ನಾನೊಂದು ವಸ್ತು ಸಂಗ್ರಾಹಾಲಯದ ವಸ್ತುವಿನಂತೆ ಕಾಣಿಸುತ್ತಿದ್ದೆನೇನೋ. ನಾನು ಮುಸ್ಲಿಂರ ಅಂಗಡಿಗಳನ್ನೂ, ಮನೆಗಳನ್ನೂ ದಾಟಿಕೊಂಡು ಶಾಲೆಗೆ ಹೋಗಬೇಕಾಗಿತ್ತು. ನಾನು ಶಾಲೆಗೆ ಹೋಗುವಾಗ ಮುಸ್ಲಿಂ ಮಹಿಳೆಯರು ತಮ್ಮ ಕಿಟಕಿಗಳೆಡೆಯಿಂದ ನಾನು ಕಣ್ಮರೆಯಾಗುವ ವರೆಗೂ ನೋಡುತ್ತಿದ್ದರು. ಹಾಗೆಯ ಕೆಲವು ಪುರುಷರೂ ಅಂಗಡಿಗಳಲ್ಲಿ ನಿಂತುಕೊಂಡು ನೋಡುತ್ತಿದ್ದರು. ನಾನು ಯಾವುದನ್ನು ಕಾಣದಂತೆ ತಲೆ ತಗ್ಗಿಸಿಕೊಂಡು ಗೆಳತಿಯರೊಡನೆ ನಡೆಯುತ್ತಿದ್ದೆ" (ಹೊತ್ತು ಕಂತುವ ಮುನ್ನ: 2010, ಪು: 39) ಎಂದು ತಮ್ಮ ಶಾಲಾ ದಿನಗಳ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸ್ಥಿತಿಗತಿಯನ್ನು ಆತ್ಮಕಥೆಯಲ್ಲಿ ನಿರೂಪಿಸುತ್ತಾರೆ. ಇಷ್ಟಾಗಿಯೂ ಸಾರಾಳ ಶಿಕ್ಷಣ ಹತ್ತನೇ ಕ್ಲಾಸಿಗೆ ಕೊನೆಯಾಗುತ್ತದೆ ಎಂಬುದು ವಿಚಾರಾರ್ಹವಾದುದು. ಪುರುಷ ಸಂಸ್ಕೃತಿಯು ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ಬಂಧಿಸಿ ಶೋಷಣೆಗೆ ಒಳಪಡಿಸುತಿದ್ದುದು ಅಭಿವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಇದು ಕೇವಲ ಸಾರಾಳ ಒಬ್ಬಳ ಸಮಸ್ಯೆಯಾಗಿ ಪ್ರತಿಪಾದಿತವಾಗಿಲ್ಲ. ಇಂದೂ ಕೂಡ ಅದೆಷ್ಟೋ ಮುಸ್ಲಿಂ ಹೆಣ್ಣುಮಕ್ಕಳ ಸಮಸ್ಯೆಯಾಗಿ, ಸಮುದಾಯದಲ್ಲೇ ಬೇರೂರಿರುವುದು ಎಂಬುದನ್ನು ಈ ಆತ್ಮಕಥೆಯು ಪ್ರತಿಪಾದಿಸುತ್ತದೆ.

ಇವರಂತೆ ಜಗತ್ತಿನ ಪ್ರಸಿದ್ಧ ಮಾಡಲಿಂಗ್ ಆದ ದಕ್ಷಿಣ ಆಫ್ರಿಕಾದ ಮಹಿಳೆ ವಾರಿಸ್ ಡಿರಿಯ ಆತ್ಮಕಥೆ 'ಮರಭೂಮಿಯ ಹೂ' ಕೂಡ ಮಹಿಳಾ ಆತ್ಮಕಥೆಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಬಾಲ್ಯದಿಂದಲೇ ಅತ್ಯಂತ ಕ್ರೂರ ರೀತಿಯ ಅನ್ಯಾಯಗಳಿಗೆ ಒಳಗಾದ ವಾರಿಸ್ ಡಿರಿ ಅನಿರೀಕ್ಷಿತವಾಗಿ ಮಾಡೆಲಿಂಗ್ ಜಗತ್ತನ್ನು ಪ್ರವೇಶಿಸುತ್ತಾರೆ. ಮುಸ್ಲಿಂ ಬುಡಕಟ್ಟು ಸಮುದಾಯಕ್ಕೆ ಸೇರಿದ ವಾರಿಸ್ ಡಿರಿ ಅವರು ತಮ್ಮ ಆತ್ಮಕಥೆಯಲ್ಲಿ ಧರ್ಮದ ಹೆಸರಿನಲ್ಲಿ ಪುರುಷರು ಹೆಣ್ಣುಮಕ್ಕಳಿಗೆ ಮಾಡುವ ಅನ್ಯಾಯಗಳನ್ನು ಜಗತ್ತಿನ ಎದುರಿಗೆ ತೆರೆದಿಟ್ಟಿದ್ದಾರೆ. ಅವರ ಮಾತಿನಲ್ಲೆ ಹೇಳುವದಾದರೆ "ಇಲ್ಲಿನ ಪುರುಷ ಸಮಾಜಕ್ಕೆ ಹೆಣ್ಣನ್ನು ಮತ್ತು ಅಧಿಕಾರವನ್ನು ಸದಾ ತನ್ನ ಅಧೀನದಲ್ಲಿಟ್ಟುಕೊಳ್ಳಬೇಕೆಂಬ ಬಯಕೆ. ಹಾಗಾಗಿ ಇವರಿಗೆ ಮಾನವೀಯತೆಯಾಗಲಿ, ಅಂತಃಕರಣವೆಂಬುದಾಗಲಿ ಇಲ್ಲ. ಅವೆಲ್ಲವೂ ಇವರಿಗೆ ಅಪರಿಚಿತವಾದ ಶಬ್ದವಾಗಿದ್ದವು. ಹಾಗಾಗಿ ಆಫ್ರಿಕಾದ ಮಹಿಳೆಯೆಂದರೆ, ಇವರಿಗೆಲ್ಲಾ ತಾವು ಸಾಕುತ್ತಿರುವ ಪ್ರಾಣಿಗಳ ಸಮಾನ. ಇದು ಕಠಿಣ ಶಬ್ದವಾದರೂ ಸರಿಯೇ, ನಾನು ಎಷ್ಟೋ ಬಾರಿ ಇಲ್ಲಿನ ಪುರುಷರ ಬಗ್ಗೆ ಈ ರೀತಿ ಯೋಚಿಸುತ್ತಾ ಇರುತ್ತೀನಿ. ಆಫ್ರಿಕಾದ ಪುರುಷರ ಗುಪ್ತಾಂಗಗಳನ್ನು ಕತ್ತರಿಸಿ ಬಿಸಾಡಬೇಕು. ದ್ವಿಚಕ್ರ ವಾಹನಕ್ಕೆ ಕಾಲು ಸಿಕ್ಕಿಸಿಕೊಂಡ ನಾಯಿಮರಿ ಘೀಳಿಸುವ ಹಾಗೆ, ಸುರಿಯುವ ರಕ್ತದ ಜೊತೆ ಇವರು ಅತ್ತಿಂದ ಇತ್ತ, ಇತ್ತಿಂದ ಅತ್ತ ಓಡಾಡುವುದನ್ನು ನಾನು ನೋಡಬೇಕು, ಆಗ ಮಾತ್ರ ಇವರಿಗೆ ಯೋನಿಛೇದನ ಮಾಡಿಸಿಕೊಂಡ ಹೆಣ್ಣೊಬ್ಬಳ ಸಂಕಟ ಏನೆಂದು ಅರಿವಾಗುತ್ತದೆ. ತಮ್ಮ ಸ್ವಾರ್ಥಕ್ಕೆ ದೇವರನ್ನು ಧರ್ಮವನ್ನು ಯಾವುದೇ ಎಗ್ಗಿಲ್ಲದೇ ಬಳಸಿಕೊಂಡ ನಾಚಿಕೆಗೇಡಿನ ಪುರುಷ ಸಮಾಜಕ್ಕೆ ಒಂದಿಷ್ಟು ಪ್ರಜ್ಞೆ ಮೂಡಲು ಸಾಧ್ಯವಾಗಬಲ್ಲದು" (ಮರಭೂಮಿಯ ಹೂ: 2019, ಪು: 114) ಎಂದು ತನ್ನ ಆಕ್ರೋಶವನ್ನು ಆತ್ಮಕಥೆಯಲ್ಲಿ ಹೊರಹಾಕಿದ್ದು ನೋಡಿದರೆ, ಅಲ್ಲಿನ ಸಮಾಜ, ಸಮಾಜದಲ್ಲಿನ ಪುರುಷ ಅವರನ್ನು ( ಅಷ್ಟೇ ಅಲ್ಲ ಎಲ್ಲ ಮಹಿಳೆಯರನ್ನು) ಎಷ್ಟೊಂದು ಹಿಂಸೆ, ಶೋಷಣೆಗೆ ಒಳಪಡಿಸಿದ್ದಾರೆ ಎಂದು ಅರ್ಥವಾಗುತ್ತದೆ. ಇಂತಹ ಸಮಾಜಕ್ಕೆ ಧಿಕ್ಕಾರ ಹೇಳುತ್ತಾರೆ ಅವರು.

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಮುದಾಯವನ್ನು ಪ್ರತಿನಿಧಿಸಿದ ಎರಡನೆಯ ಆತ್ಮಕಥನಗಾರ್ತಿ ಕೆ. ಷರೀಫಾ ಅವರು. ಹೈದ್ರಾಬಾದ ಕರ್ನಾಟಕ ಪ್ರದೇಶದವರಾದ ಇವರು ಉರ್ದು ಪ್ರಭಾವಿರುವ ಕಲಬುರ್ಗಿ ನಗರದಲ್ಲಿ ಹುಟ್ಟಿ ಬೆಳೆದು ಹಿಂದು ಗೆಳತಿಯ ಪ್ರಭಾವಕ್ಕೊಳಗಾಗಿ ಕನ್ನಡ ಮಾಧ್ಯಮದ ಶಾಲೆಗೆ ಸೇರುತ್ತಾರೆ. ತಂದೆ ಶಿಕ್ಷಣದ ವಿರೋಧಿಯಾಗಿದ್ದರೂ, ಅವರು ಹೇಳುವಂತೆ "ಗಂಡ ಬರೆದ ಪತ್ರ ಓದಲಿಕ್ಕೆ ಬಂದ್ರೆ ಸಾಕ್ರಿ ಅಥವಾ ಗಂಡನಿಗೆ ಪತ್ರ ಬರೆಯಲು ಈಕಿಗಿ ಬಂದ್ರ ಸಾಕ್ರಿ, ಜಾಸ್ತಿ ಹೆಣ್ಮಕ್ಕಿಗೆ ಓದಸ್ಬಾರ್ದುರಿ. ಹೆಚ್ಚಾಗಿ ಓದಿದ್ರ ಹೆಂಗಸರ ತೆಲಿ ಕೆಡ್ತದರಿ" ಎನ್ನುವ ತಂದೆಯ ಮಾತು ಶಿಕ್ಷಣದ ಕುರಿತು ಅವರಿಗಿದ್ದ ಧೋರಣೆಯನ್ನು ನಿರೂಪಿಸುತ್ತದೆ. ತಾಯಿ ಮತ್ತು ಗೆಳತಿಯ ಬೆಂಬಲದಿಂದ ಕನ್ನಡ ಓದಿ ಕತೆ, ಕವನ ಬರೆಯಲು ಆರಂಭಿಸಿದೆ ಎಂದು 'ಬದುಕೆಂಬ ಅಗ್ನಿದಿವ್ಯ' ಎಂಬ ಆತ್ಮಕಥನದಲ್ಲಿ ನಿರೂಪಿಸಿದ್ದಾರೆ. ಮತೀಯವಾದಿಗಳ ವಿರೋಧದ ಮಧ್ಯೆಯೂ ಶಿಕ್ಷಣ ಪಡೆದು, ಮುಸ್ಲಿಂ ಮಹಿಳೆಯರ ಸಮಸ್ಯೆಗಳ ಕುರಿತು ಬರೆವಣಿಗೆಯ ಮೂಲಕ ಧ್ವನಿ ಎತ್ತುತ್ತಾರೆ. ಮುಸ್ಲಿಂ ಮಹಿಳೆಯರು ಬುರ್ಖಾ ಧರಿಸುವುದರಿಂದ ಅವರಿಗೆ ವಿಟಾಮಿನ್ ಡಿ ಕೊರತೆ ಉಂಟಾಗುತ್ತದೆ ಎಂದು 'ಬುರ್ಖಾ ಮತ್ತು ಮಹಿಳೆ' ಎಂಬ ಲೇಖನ ಬರೆದಾಗ ಮತೀಯವಾದಿಗಳಿಂದ ಕೊಲೆ ಬೆದರಿಕೆಯ ಪತ್ರವೂ ಬರುತ್ತದೆ. 'ಹೀಗೆ ಬರಹ ಕತ್ತಿ ಅಲುಗಿನಂತೆ ಕೆಲವೊಂದು ಸಲ ಝಳಪಿಸುತ್ತದೆ' ಎಂದು ಬರವಣಿಗೆಯ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಎಷ್ಟೆಲ್ಲಾ ಬೆದರಿಕೆ, ಶೋಷಣೆ ನಡೆದರೂ ಕೂಡ ಅದನ್ನೆಲ್ಲ ಧೈರ್ಯದಿಂದ ಎದುರಿಸಿ ಮುಂದೆ ಮುಸ್ಲಿಂ ಮಹಿಳೆಯರ ಹಕ್ಕುಗಳಿಗಾಗಿ ಹೋರಾಟವನ್ನು ಮಾಡಿರುವುದನ್ನು ಈ ಆತ್ಮಕಥನ ಅನಾವರಣಗೊಳಿಸಿದೆ.

ಮುಸ್ಲಿಂ ಸಮುದಾಯವನ್ನು ಪ್ರತಿನಿಧಿಸಿದ ಇನ್ನೊಬ್ಬ ಮಹಿಳೆ ಸಬಿಹಾ ಭೂಮಿಗೌಡ. ಇವರು ಉತ್ತರ ಕರ್ನಾಟಕದ ಗದಗ ಪ್ರದೇಶದವರು. ಇವರ ತಂದೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರಿಂದ ಮಂಗಳೂರಿನ ಸೂರತ್ಕಲ್ ಕ್ಯಾಂಪಸ್‌ನಲ್ಲಿ ಬೆಳೆದವರು. ಅವರ ಬಾಲ್ಯದಲ್ಲಿದ್ದ ಕೋಮು ಸಾಮರಸ್ಯದ ವಾತಾರಣ ತಮ್ಮ ಮಗಳ ಬಾಲ್ಯದವರೆಗೆ ಇರಲಿಲ್ಲ ಎಂಬ ವಿಷಾದವನ್ನು ಆತ್ಮಕಥನದಲ್ಲಿ ಅಭಿವ್ಯಕಿಸಿದ್ದಾರೆ. ಮುಸ್ಲಿಂ ಹೆಣ್ಣು ಮಕ್ಕಳು ಬುರ್ಖಾ, ಸ್ಕಾರ್ಫ ಧರಿಸಿ ಶಾಲಾ ಕಾಲೇಜುಗಳಿಗೆ ಹೋಗುತ್ತಿರುವುದು ಇತ್ತೀಚೆಗೆ ಹೆಚ್ಚಾಗಿದೆ. ಇದು ಸಾಂಪ್ರದಾಯಿಕ 'ಹಿಮ್ಮುಖ ಚಲನೆ'ಗೆ ಕಾರಣವಾಗಿದೆ. ಇದರ ಹಿಂದೆ ರಾಜಕೀಯ, ಧಾರ್ಮಿಕ ಮತ್ತು ಪುರುಷ ಪ್ರಧಾನ ಸಂಸ್ಕೃತಿಯ ಹಿತಾಸಕ್ತಿಗಳು ಪ್ರಮುಖ ಕಾರಣವಾಗಿವೆ ಎಂಬ ನೋವನ್ನು ವಿಷಾದವನ್ನು ಆತ್ಮಕಥನದಲ್ಲಿ ವ್ಯಕ್ತಪಡಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು


- **ಡಾ. ಸಬಿಹಾ ಭೂಮಿಗೌಡ (2011) :** ಅನುಸಂಧಾನ : ಕಲಬುರಗಿ ಶ್ರೀ ಸಿದ್ಧಲಿಂಗೇಶ್ವರ ಪುಸ್ತಕ ಪ್ರಕಾಶನ,
- **ಡಾ. ಸಬಿಹಾ ಭೂಮಿಗೌಡ (2007) :** ಮಹಿಳಾ ಆತ್ಮಕಥೆಗಳು : ಅನುಸಂಧಾನ,
- **ಸಾ.ರಾ. ಅಬೂಬಕರ (2010) :** ಹೊತ್ತು ಕಂತುವ ಮುನ್ನ : ಮಂಗಳೂರು ಚಂದ್ರಗಿರಿ ಪ್ರಕಾಶನ.
- **ಸಾ.ರಾ. ಅಬೂಬಕರ (2017) :** ಚಂದ್ರಗಿರಿ ತೀರದಲ್ಲಿ : ಮಂಗಳೂರು ಚಂದ್ರಗಿರಿ ಪ್ರಕಾಶನ.
- **ದು. ಸರಸ್ವತಿ (2001) :** ಈಗೇನ್ ಮಾಡೀರಿ, ಬೆಂಗಳೂರು ಮಾನಸ.
- **ಶಿವಾನಂದ ವಿರಕ್ತಮಠ (2003) :** ಮಹಿಳಾ ಅಧ್ಯಯನ ಸಂ. 4, ಸಂಚಿಕೆ 2, ಪ್ರಸಾರಾಂಗಾ, ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ವಸುಂದರಾ ಭೂಪತಿ, ಡಾ. ಸಬಿಹಾ ಭೂಮಿಗೌಡ (2016) :** ಲೇಖ–ಲೋಕ: ಸಂ. 5. ಪ್ರೊ. ಕೆ ಸುಮಿತ್ರಾಬಾಯಿ (2018): ಸೂಲಾಡಿ ಬಂದೋ ತಿರುತಿರುಗೀ, ಮೈಸೂರು ಅಭಿರುಚಿ ಪ್ರಕಾಶನ.
- **ಶೃತಿ ಎನ್., ಡಾ. ಹೊಂಬಯ್ಯ (2019) :** ಮಹಿಳಾ ದಲಿತ ಆತ್ಮಕಥೆಗಳು, ಮೈಸೂರು ಶ್ರೀ ವಿಘ್ನೇಶ್ವರ ಪ್ರಕಾಶನ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಚನ ಸಾಹಿತ್ಯದಲ್ಲಿ ವೈಚಾರಿಕ ನೆಲೆಗಳು

✍ **ಸುಧಾಕರ ಕೆ. ಎಸ್.,** ಕನ್ನಡ ವಿಶ್ವವಿದ್ಯಾಲಯ, ಜಾನಪದ ಅಧ್ಯಯನ ವಿಭಾಗ, ಹಂಪಿ.

ಚರಿತ್ರೆಯೆನ್ನುವುದು ಘಟನೆಗಳ ಜೋಡಣೆ ಅಥವಾ ಸರಮಾಲೆಯೊಂದಿಗೆ ಪೋಣಿಸಿರುವಂತದ್ದು. ಅಲ್ಲಿ ಉಬ್ಬು–ತಗ್ಗು ಏರಿಳಿತಗಳೆಲ್ಲವೂ ಕೂಡಿರುತ್ತದೆ. ತರ್ಕ, ಚಿಂತನೆ, ಆಧ್ಯಾತ್ಮಿಕತೆ, ಮತ, ಸಂಸ್ಕೃತಿಗಳ ಉಗಮ ಇತ್ಯಾದಿ ವಿಷಯಗಳು ಪ್ರಕೃತಿ ಮತ್ತು ಮನುಷ್ಯನ ನಾಗರೀಕತೆಗಳ ಜೊತೆ ಜೊತೆಗೆ ತಿಕ್ಕಾಟದಿಂದ ಪ್ರಜ್ವಲಿಸಿ ಅಸತ್ಯ ಕೊನೆಯಾಗಿ ಸತ್ಯ ಮುನ್ನಲೆಗೆ ಬರುವುದು ಒಂದು ಕಡೆ. ಸತ್ಯವನ್ನ ಮರೆಮಾಚಿ ಸುಳ್ಳಿನ ಸೌಧವನ್ನ ನಿರ್ಮಿಸಿ ಸಂಸ್ಕೃತಿ, ಧರ್ಮ ಅಥವಾ ಮತಗಳನ್ನ ಬಳಸಿಕೊಂಡು ಮನುಷ್ಯನ ಅಂತಃಕರಣವನ್ನು ಸಂಯೋಜಿಸಿ ಯಜಮಾನ್ಯ ವ್ಯವಸ್ಥೆ ಆಡಳಿತಾರೂಢಿಯಾಗಿರುವಂತದ್ದು ಚರಿತ್ರೆಯ ಇನ್ನೊಂದು ಮಗ್ಗುಲು.

ಚರಿತ್ರೆಯಲ್ಲಿ ಕ್ಷುದ್ರ ಸಂಗತಿಗಳು ಕೃತಕವಾಗಿ ಸೇರ್ಪಡೆಯಾಗಿ(ಮತ ಸಂಸ್ಕೃತಿಯ ಮೂಲಕ) ಮನುಷ್ಯನ ಸಾಂಸ್ಕೃತಿಕ ಜೀವಮಾನದಲ್ಲಿ ಕಂದಕವನ್ನುಂಟು ಮಾಡಿವೆ. ಮಾತ್ರವಲ್ಲ ಆ ಮೂಲಕ ಅಸಮಾನತೆ, ಶೋಷಣೆ, ಶ್ರೇಷ್ಠ–ಕನಿಷ್ಠ, ಲಕ್ಷ–ಅಲಕ್ಷ, ಭಾವನೆಗಳನ್ನ ಕ್ರಿಯಾತ್ಮಕವಾಗಿ ಧರ್ಮದ ಮತ್ತು ಸಂಸ್ಕೃತಿಯ ಮುದ್ರೆ ಹೊತ್ತಿ ಚಲಾಚಣೆಗೆ ಬಿಟ್ಟಿವೆ. ಇದರ ನಿರ್ವಹಣೆಗೆ ಯಜಮಾನ್ಯ ವ್ಯವಸ್ಥೆಯೇ ಆಗಿರುತ್ತದೆ. ಇಂತಹ ಸುಳ್ಳಿನ ಅಥವಾ ಅಸತ್ಯದ ಬಿಂಬಗಳನ್ನು ಹಾಗೂ ವ್ಯವಸ್ಥೆಗಳನ್ನು ಒಡೆಯಲು ತರ್ಕ ವಿಜ್ಞಾನ, ವೈಜ್ಞಾನಿಕತೆ ಎಂಬ ಅಸ್ತ್ರಗಳೊಂದಿಗೆ ಬೌದ್ಧ, ಜೈನ, ಚಾರ್ವಾಕರು ಹುಟ್ಟಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಹನ್ನೆರಡನೇ ಶತಮಾನದಲ್ಲಿ ವಚನ ಚಳವಳಿ ಮುಖ್ಯವಾಗುತ್ತದೆ.

ಕರ್ನಾಟಕದ 12 ನೇ ಶತಮಾನದಲ್ಲಿ ಚಾರಿತ್ರಿಕವಾಗಿ ನಡೆದ ವಚನ ಚಳವಳಿ ಭಾಷಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುದೊಡ್ಡ ತಿರುವಾಗಿತ್ತು. ಹಾಗಾಗಿ ಅದನ್ನ ಸಾಮಾಜಿಕ ಬಹುದೊಡ್ಡ ಚಳವಳಿ ಎಂದರೆ ತಪ್ಪಾಗಲಾರದು. ಪ್ರಜ್ಞಾಪೂರ್ವಕವಾಗಿ ರಾಜಕೀಯ ಪ್ರಭುತ್ವದ (ಬಿಜ್ಜಳನ ಸಹಯೋಗದಿಂದ) ಜೊತೆಗೆ ಸಮಾಜದಲ್ಲಿ ಅಸಮಾನತೆಯ ವಿರುದ್ಧ ದೊಡ್ಡ ಮಟ್ಟದ ಪ್ರತಿಭಟನೆ ಮಾಡಿದ್ದು ಈ ಚಳವಳಿ. ಇದು ಜಾತಿ, ಮತ, ಲಿಂಗಗಳನ್ನ ಮೀರಿ ಜೀವಪರ ನಿಲುವುಗಳನ್ನ ಪ್ರತಿಪಾದಿಸುತ್ತ ತಾಮಸಕಳೆಯನ್ನ ಬೆಳಗುತ್ತದೆ.

ಈ ಚಳವಳಿಯ ಮುಖ್ಯಧಾರೆಯ ತಾತ್ವಿಕತೆಗಳಲ್ಲಿ ಒಂದು ವೈಜ್ಞಾನಿಕತೆ. ಸ್ಥಾಪಿತ ಮೌಲ್ಯಗಳನ್ನು ಅನುಮಾನದಿಂದ ಕಂಡು, ನಿರಾಕರಿಸಿ ಅಲ್ಲಿಯೇ ಜೀವಪರ ಮೌಲ್ಯಗಳನ್ನು ಕಟ್ಟುವ ಕ್ರಿಯೆ ಚಲನಶೀಲವಾದುದು. ಮಾತ್ರವಲ್ಲದೆ ಆತ್ಮ ನಿರೀಕ್ಷೆ, ಮನದಳಲು, ಜಂಗಮ, ಲಿಂಗ, ದಾಸೋಹ, ಭಕ್ತಿ, ಕುಲ, ಸತಿ–ಪತಿ ಭಾವ, ಬೆಡಗು, ಕಾಯಕ, ಲೋಕ–ವಿವೇಕ, ನಡೆ–ನುಡಿ, ಜಾತಿ–ಕುಲ, ವೇಷಧಾರಿ ಭಕ್ತ, ಕಿರುಕುಳದ ದೈವಗಳು ಹಾಗೂ ಸಮಾನತೆ ಇತ್ಯಾದಿ ತಾತ್ವಿಕತೆಗಳನ್ನ ನಡೆ–ನುಡಿ ಮೂಲಕ ಕ್ರಿಯಾಶೀಲವಾಗಿ ಹರಿದುಬಿಡುತ್ತಾರೆ.

ಬಿಜ್ಜಳ ಸಾಮಂತನಾಗಿ ನಂತರ ಅರಸನಾದ ಬಳಿಕ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವಿಪ್ಲವಗಳು ಅಧೋಗತಿಗೆ ಬಂದಿರುತ್ತವೆ. ಧರ್ಮದ ದುರ್ನಡೆಯ ಪರವಾಗಿ ಪುರೋಹಿತಶಾಹಿ ಪ್ರಭುತ್ವ ಸಮಾಜವನ್ನ ಅಸ್ಪೃಶ್ಯತೆಯ ಆಧಾರದ ಮೇಲೆ ಶೋಷಣೆಗೆ ಒಳಪಡಿಸಿ, ಸಮಾಜದಲ್ಲಿ ಅಸಮಾನತೆಯ ವರ್ಗವನ್ನು ಸೃಷ್ಟಿಸಿರುತ್ತದೆ. ಅದೇ ಸಮಯಕ್ಕೆ ಅಲ್ಲಮ, ದಾಸಿಮಯ್ಯ ಮತ್ತು ಬಸವಣ್ಣನ ಮೇರು ಪ್ರವೇಶಿಕೆಯೊಂದಿಗೆ ಲಿಂಗ, ಜಂಗಮ, ಕಾಯಕ, ಭಕ್ತಿಯ ಮೂಲಕ ವೈದಿಕ ಧರ್ಮಕ್ಕೆ ಪ್ರತಿ ಸಂಸ್ಕೃತಿಯನ್ನ ಕಟ್ಟುತ್ತಾರೆ ಪ್ರಭುತ್ವದ ಅನುಸಂಧಾನದೊಂದಿಗೆ.

ಅಧಿಕಾರ, ನ್ಯಾಯ ಮತ್ತು ವ್ಯವಸ್ಥೆಯ ಹೆಸರಿನಲ್ಲಿ ಸ್ನಾಯುಬಲವೂ, ಬುದ್ಧಿಬಲವೂ ಆಗಿದ್ದ ವೈದಿಕ ಕೇಂದ್ರವನ್ನು ತಿರಸ್ಕರಿಸಿ, ಜನಪರವೂ, ಜೀವಪರವೂ ಆದ ದುಡಿಮೆಯ ಸಮಾನ ಹಂಚಿಕೆಯ, ವರ್ಗ ಮತ್ತು ವೃತ್ತಿ ಪ್ರಧಾನವಾದ ಕೇಂದ್ರ ಸ್ಥಾಪನೆಗೆ ಮುಂದಾಗಿದ್ದು ಚರಿತ್ರೆಯಲ್ಲಿ ದಾಖಲಾದ ದೊಡ್ಡ ಚಲನೆ. ಸಾಮಾನ್ಯರಿಗೆ ಎಟುಕದ ದೇವಾಲಯಗಳನ್ನು ನಿರಾಕರಿಸಿ ಆತ್ಮಲಿಂಗಕ್ಕೆ ಹಾಗೂ ಜಂಗಮಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು, ಶರಣರೆಲ್ಲಾ ಒಂದು ಜಾತಿಯೆಂಬ ಅವರ ವೈಜ್ಞಾನಿಕ ತತ್ವ ಚಿಂತನೆ ಸರ್ವಕಾಲಿಕವಾದುದು.

ವೈಚಾರಿಕ ನೆಲೆಗಟ್ಟಿನಲ್ಲಿ ಜಡತ್ವಗೊಂಡಿದ್ದ ಸ್ಥಾಪಿತ ಹಿತಾಸಕ್ತಿ ಅಥವಾ ನಂಬಿಕೆಗಳಿಗೆ ಮೊದಲು ಪೆಟ್ಟುಕೊಟ್ಟು ದೇವರು, ನಂಬಿಕೆ, ಭಕ್ತ ಎಂಬ ಆಚರಣೆಯ ಮೂಲಕ ಸಮಾಜದಲ್ಲಿ ಸಾಮಾಜಿಕ ಅಂತರವನ್ನು ಸೃಷ್ಟಿ ಮಾಡಿಕೊಂಡು ಬೀದಿಗೊಂದು ದೇವಸ್ಥಾನಗಳನ್ನ ಕಟ್ಟಿಕೊಂಡು ಕೆಳಜಾತಿಗಳಿಗೆ ದರ್ಶನ ಮತ್ತು ಪ್ರವೇಶಗಳನ್ನು ನಿರಾಕರಿಸಿದ್ದನ್ನ ಕಂಡ ಬಸವಣ್ಣ ಪ್ರತಿ ಒಂದನ್ನ ಕಟ್ಟಿ, ಸಾಮಾನ್ಯರ ಬದುಕನ್ನ ದೇವರು, ಸಂಸ್ಕೃತಿ, ನಂಬಿಕೆ ಎನ್ನುವ ಅಕಲ್ಪಿತ ಸಂವಿಧಾನಗಳಿಂದ ಬಿಡುಗಡೆ ಗೊಳಿಸುವುದನ್ನು ಇಲ್ಲಿ ಕಾಣಬಹುದು.

> **"ಉಳ್ಳವರು ಶಿವಾಲಯವ ಮಾಡುವರು;**
> **ನಾನೇನ ಮಾಡುವೆ, ಬಡವನಯ್ಯ,**
> **ಎನ್ನ ಕಾಲೇ ಕಂಬ, ದೇಹವೇ ದೇಗುಲ,**
> **ಶಿರ ಹೊನ್ನ ಕಳಸವಯ್ಯಾ,**
> **ಕೂಡಲಸಂಗಮದೇವಾ, ಕೇಳಯ್ಯಾ**
> **ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ".**

ಈ ವಚನವನ್ನು ಗಮನಿಸಬಹುದು ದೇಹವೆ ದೇವಾಲಯವೆಂಬ ಸ್ಪಷ್ಟ ಸಂಗತಿಗಳು ಬೇರಾವ ಧರ್ಮದಲ್ಲು ಕಾಣಲು ಸಾಧ್ಯವಿಲ್ಲ. ಇದು ಬಸವಣ್ಣನ ವೈಚಾರಿಕತೆಯ ನಿಲುವು. ಮುಂದುವರಿದು ಹೇಳುತ್ತಾನೆ, ಅವನು ತಾಳುವ ನಿರ್ಧಾರ ಮತ್ತು ಸತ್ಯವೂ ಕೂಡ ' ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ' ಕಲ್ಲು ಮಣ್ಣುಗಳಿಂದ ಕಟ್ಟಿದ ಗುಡಿಗೆ ಯಾವತ್ತಾದರೂ ಒಮ್ಮೆ ಅಳಿವು ಕಂಡಿತ ಅಥವಾ ಆ ಗುಡಿ ಭಿನ್ನವಾಗಬಹುದು ನಶಿಸಬಹುದು. ಆದರೆ 'ಜಂಗಮ' ಎಂಬ ಅನುಭಾವಿಕ ಶಕ್ತಿಗೆ ಯಾವ ಅಳಿವು ಇರುವುದಿಲ್ಲ. ಸ್ಥಾವರ ಎಂದರೆ ನಶ್ವರ ಸ್ಥಗಿತವಾದುದ್ದು. ಜಂಗಮ ಎಂದರೆ ಸಾಮಾಜೀಕೃತಗೊಳ್ಳುವುದು. ಸ್ಥಾವರಕ್ಕೆ ಸೀಮೆ ಎಲ್ಲೆ ಇದೆ. ಸಮುದ್ರಕ್ಕು ಭೂಮಿಯ ಸೇರಿ ಒಂದು ಸೀಮೆ ಇರುತ್ತದೆ. ಹರಿವ ನದಿ, ಜಂಗಮ ಎಲ್ಲೆಯನ್ನ ಮೀರಿದ್ದು. ಅದರ ವ್ಯಾಪ್ತಿ ಸ್ವರೂಪ ತನ್ನ ಅಂತರಂಗಕ್ಕೆ ಸಂಬಂಧಿಯಾಗಿರುವಂತದ್ದು. ಇದುಸಂಪ್ರದಾಯಸ್ಥ ಧಾರ್ಮಿಕ ಸ್ವರೂಪಕ್ಕೆ ಪ್ರತಿರೋಧವಾಗಿ ರೂಪುಗೊಂಡಿರುವಂತದ್ದು. ಮಾತ್ರವಲ್ಲ ಜಂಗಮವು ಅತ್ಯಂತ ಶ್ರೇಷ್ಠವಾದದುರಿಂದ ಬಸವಣ್ಣ ಯಾವಾಗಲೂ ತನ್ನನ್ನ ಭಕ್ತನೆಂದೆ ಕರೆದುಕೊಳ್ಳುತ್ತಾನೆ. ಅವನ ಬಹುಪಾಲು ವಚನಗಳು ಭಕ್ತ ಮತ್ತು ಭಕ್ತನಾಗುವ ಅಂದರೆ ಜಂಗಮನಾಗುವುದನ್ನ ಒತ್ತಿ ಒತ್ತಿ ಹೇಳುತ್ತವೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅವರು ತಂದ ಕಾಯಕ ಪರಿಕಲ್ಪನೆ ವೃತ್ತಿ ಪ್ರಧಾನವಾದುದು, ಅಲಕ್ಷಿತವಾಗಿದ್ದ ಸಮುದಾಯಗಳ ಕಸುಬುಗಳನ್ನು ಮುನ್ನಲೆಗೆ ತಂದು ಅವುಗಳನ್ನು ವೃತ್ತಿ ಸೂಚಕವಾಗಿ ಮಾಡಿ ವೃತ್ತಿಗೆ ಅಂಟಿಕೊಂಡಿದ್ದ ಜಾತಿಗಳನ್ನ ಮತ್ತು ಸಾಮಾಜಿಕ ಆರ್ಥಿಕ ಸಮಾನತೆಯ ದೃಷ್ಟಿಯಿಂದ ಶ್ರೇಷ್ಠ ಎಂಬ ಅಕಲ್ಪಿತ ಮೌಲ್ಯವನ್ನ ಹೊಡೆಯಲು ಕಾಯಕ ಸಿದ್ಧಾಂತವನ್ನ ಕೈಗೆತ್ತಿಕೊಳ್ಳುತ್ತಾರೆ. ಎರಡನೆಯದು ಪುರೋಹಿತ ಅಥವಾ ವೃತ್ತಿಗಳೆ ಜಾತಿಗಳೆಂದು ನಂಬಿದ್ದ ಮೌಲ್ಯಕ್ಕೆ ಪೆಟ್ಟು ಕೊಟ್ಟು ಕೆಳವರ್ಗದ ವೃತ್ತಿಗಳನ್ನು ಉಳಿಸುವ ಮತ್ತು ಬೆಳೆಸುವ ಆ ವೃತ್ತಿಯ ಬಗ್ಗೆ ಆತ್ಮಗೌರವ ಹೊಂದುವಂತೆ ಮಾಡುತ್ತಾರೆ. ಹಾಗಾಗಿಯೆ ವಚನಕಾರರು ತಮ್ಮ ಹೆಸರುಗಳ ಜೊತೆಗೆ ತಮ್ಮ ತಮ್ಮ ಜಾತಿಗಳ ಅಥವಾ ವೃತ್ತಿಗಳ ಹೆಸರನ್ನು ಇಟ್ಟುಕೊಂಡಿರುವುದನ್ನ ಕಾಣಬಹುದು. ಅಂಬಿಗರ ಚೌಡಯ್ಯ, ಆಯ್ದಕ್ಕಿ ಮಾರಯ್ಯ, ಮಡಿವಾಳ ಮಾಚಯ್ಯ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ ಇತ್ಯಾದಿ.

ಮೂರನೆಯದು ಕೇವಲ ಕಾಯಕವಷ್ಟಕ್ಕೆ ಮಹತ್ವ ಕೊಡದೆ ಭಕ್ತಿಯೊಂದಿಗೆ ಕಾಯಕವನ್ನು ಬೆಸೆಯುವ, ಅನುಸಂಧಾನಗೊಳಿಸುವ ಕೆಲಸ ಮಾಡುತ್ತಾರೆ. ಈ ವಚನವನ್ನ ಕಾಣಬಹುದು.

**"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ**
**ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ**
**ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು**
**ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕರ"**

ಲಕ್ಕಮ್ಮ ಭಕ್ತಿಯಿಲ್ಲದ ಕಾಯಕ ಮತ್ತು ಕಾಯಕವಿಲ್ಲದ ಭಕ್ತಿ ಅವಳಿಗೆ ಅರ್ಥಹೀನವಾದದ್ದು. ಕಾಯಕದಿಂದ ಮಾತ್ರವೇ ಅವಳಿಗೆ ಭಕ್ತಿ ಪ್ರಾಪ್ತವಾಗುವಂತದ್ದು. ಈ ವಚನ ಚಿತ್ತಶುದ್ಧ ಕಾಯಕದ ಬಗ್ಗೆ ಮಾತನಾಡುತ್ತದೆ. ಮುಂದುವರಿದು ಕಾಯಕಕ್ಕೆ ಸಂಬಂಧಿಸಿದಂತೆ ತನ್ನ ಗಂಡನಿಗೇ ಉಪದೇಶ ಮಾಡುವುದನ್ನ ಕಾಣಬಹುದು, ಇಲ್ಲಿ ತನ್ನ ಗಂಡನಿಗೆ ಗುರುವಾಗುತ್ತಾಳೆ..........

**"ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ**
**ಭಾವಶುದ್ಧವಾಗಿ ಮಹಾಶರಣತಿಪ್ಪೆಯ ತಪ್ಪಲ ಅಕ್ಕಿಯ ತಂದು**
**ನಿಶ್ಚೈಸಿ ಮಾಡಬಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ**
**ಬೇಗ ಹೋಗು ಮಾರಯ್ಯ".**

ಮೇಲೆ ತಿಳಿಸಿದ ಹಾಗೆ ಕಾಯಕದ ಪರಿಕಲ್ಪನೆ ಕೇವಲ ದುಡಿಮೆಗೆ ಮಾತ್ರ ಸೀಮಿತವಾಗಿರಲಿಲ್ಲ.ಅಸ್ಪೃಶ್ಯತೆಯ ಆಧಾರದ ಮೇಲೆ ಕೆಳ ಜಾತಿಯವರಿಗೆ ದೇವಾಲಯದ ಪ್ರವೇಶವನ್ನು ನಿರಾಕರಿಸಿದ್ದರಿಂದ ಎಲ್ಲರಿಗೂ ಅಧ್ಯಾತ್ಮಿಕ ಭಕ್ತಿಯ ಪರಿಕಲ್ಪನೆಯನ್ನ ಮುನ್ನಲೆಗೆ ತಂದು ಸಾಮಾನ್ಯರಿಗೆ ಸಿಗದ ದೇವರನ್ನ ಇಷ್ಟಲಿಂಗದ ಮೂಲಕ ಅಂಗೈಗಿರಿಸಿ ಶ್ರೇಷ್ಠಕುಲ ಮತ್ತು ಜಾತಿಯನ್ನ ಮುರಿಯುವುದು. ಎರಡನೆಯದು ಯಾವಾಗಲೂ ಕಾಣದ ದೇವರ ದರ್ಶನಕ್ಕಾಗಿ ಅದೇ ಚಿಂತನೆಯಲ್ಲಿ ಮುಳುಗದೆ ತನ್ನ ಜೀವನೋಪಾಯಕ್ಕಾಗಿ ಕಸುಬುಗಳಿಗೆ ಪ್ರಧಾನತೆ ಕೊಟ್ಟು ಸುಲಭವಾಗಿ ಸಿಗದ ದೇವರ ದರ್ಶನಕೆ ಕಾದು ಕುಳಿಯುವ ಬದಲು ಅಂಗದ ಮೇಲೆ ಲಿಂಗವನ್ನಿಟ್ಟು ಬಿಡುವಿನ ವೇಳೆಯಲ್ಲಿ ಮಾತ್ರ ಭಕ್ತಿ ಕಾಣುವ ಉದ್ದೇಶ. ಹಾಗಾಗಿ ಈ ಕಲ್ಪನೆ ಕೇವಲ ಉದ್ಯೋಗ ಭಕ್ತಿಯ ವಿಷಯವಾಗಿರಲಿಲ್ಲ, ಆ ಮೂಲಕ ಕಸುಬುಗಳನ್ನ ಮುನ್ನಲೆಗೆ ತಂದು ಶ್ರೇಷ್ಠ ಕನಿಷ್ಟ ವರ್ಗ ರಹಿತ ಸಮಾಜ ನಿರ್ಮಾಣದ ಉದ್ದೇಶವೂ ಅದರ ಹಿಂದೆ ಬಲವಾಗಿತ್ತು.

ಚರಿತ್ರೆಯಲ್ಲಿ ಹೆಣ್ಣು ಕಳೆದು ಹೋದ ಅಥವಾ ಮರೆಮಾಚಿದ ಸಂಗತಿಯಾಗಿದ್ದಾಳೆ. ಇತಿಹಾಸದ ಪುಟಗಳಲ್ಲಿ ಕಾಣಿಸಿಕೊಳ್ಳುವುದೆ ಕಡಿಮೆ. ಮಾತೃಪ್ರಧಾನತೆಯಿಂದ ಪಿತೃ ಪ್ರಧಾನತೆಗೆ ಹೊರಳಿದ ನಂತರ ತನ್ನ ಚರಿತ್ರೆಗೆ ಸಾಕ್ಷಿಯನ್ನ ಹುಡಕುವ ಪರಿಸ್ಥಿತಿ ಉಂಟಾಗಿರುವುದು ದುರ್ದೈವದ ಸಂಗತಿಯೇ ಸರಿ. ಸಾಹಿತ್ಯದ ಸಂದರ್ಭದಲ್ಲಿ ಮಾರ್ಗಕಾರನಿಂದ ಆಧುನಿಕ ಸಾಹಿತ್ಯವರೆಗೆ ನೋಡುವುದಾದರೆ ಬಹುಪಾಲು ಪುರುಷಾಧಿಕಾರವೆ ನಡೆದಿರುವಂತದ್ದು. ಜೈನ ಪರಂಪರೆ ಸ್ತ್ರೀ ಯರಿಗೆ ಸಮಾನತೆ ನೀಡಿತ್ತು ಎನ್ನುವುದಾದರೆ ಆ ಕಾಲದ ಸ್ತ್ರೀಯರು ಏಕೆ ಸಾಹಿತ್ಯ ರಚಿಸಲಿಲ್ಲ ಎಂಬ ಪ್ರಶ್ನೆ ಹೇಳಬಹುದು. ವಚನಚಳವಳಿಯಲ್ಲಿ ಸ್ತ್ರೀಯ ಆ ಧ್ವನಿ ಕೇಳುತ್ತದೆ. ಹಾಗಾಗಿಯೆ ಇತ್ತೀಚಿನ ಯಾವುದೇ ಸ್ತ್ರೀ ಸಂವೇದನೆಗಳೂ ಕೂಡ ತನ್ನ ಮೂಲವನ್ನ ಗುರುತಿಸಿಕೊಳ್ಳೂವುದು ಅಕ್ಕ ಮಹಾದೇವಿ ಮತ್ತು ವಚನ ಚಳವಳಿಯ ಮೂಲಕವೆ.

ವೈದಿಕ ಧರ್ಮದ ಆಚರಣೆಯಿಂದ ಅಂಚಿಗೆ ತಳ್ಳಲ್ಪಟ್ಟಿದ್ದ ಮಹಿಳೆಯರಿಗೆ ಮೊದಲ ಬಾರಿಗೆ ಸಮಾಜಿಕವಾಗಿ ಅಭಿವ್ಯಕ್ತಿಸುವ ಮುಕ್ತ ಅವಕಾಶವನ್ನ ಈ ಚಳವಳಿಯಿಂದ ದೊರೆಯುತ್ತದೆ. ಹಾಗಾಗಿ ಅಕ್ಕನಿಂದ ಇಡಿದು ಸೂಳೆ ಸಂಕವ್ವನ ವರೆಗು ತನ್ನೊಡಳನ್ನ ವಚನಗಳ ಮೂಲಕ ಅಭಿವ್ಯಕ್ತಿಸಿಕೊಳ್ಳುತ್ತಾರೆ. ಅಭಿವ್ಯಕ್ತಿಸಿಕೊಳ್ಳುವುದು ಎಂದರೆ ಕೇವಲ ವಚನ ಕಟ್ಟುವುದಾಗಿರಲಿಲ್ಲ. ಅಸಮಾನತೆ, ಶೋಷಣೆ, ಲಿಂಗ ತಾರತಮ್ಯದ ವಿರುದ್ಧ ನಡೆಸುವ ನೈತಿಕ ಹೋರಾಟವಾಗಿತ್ತು. ಮಾತ್ರವಲ್ಲ ಜೈವಿಕ ಹೋರಾಟವೂ ಹೌದು. ಈ ಕೆಳಗಿನ ವಚನಗಳನ್ನ ಗಮನಿಸಬಹುದು,,,

**"ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ**
**ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ**
**ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ**
**ಮನದ ಮುಂದಣ ಆಸೆಯೆ ಮಾಯೆ ಕಾಣ ಗುಹೇಶ್ವರ"**

**"ಮೊಲೆ ಮೂಡಿ ಬಂದೆಡೆ ಹೆಣ್ಣೆಂಬರು**
**ಮೀಸೆ ಕಾಸೆ ಬಂದೆಡೆ ಗಂಡೆಂಬರು**
**ಈ ಉಭಯದ ಜ್ಞಾನ**
**ಹೆಣ್ಣೋ ಗಂಡೋ ನಾಸ್ತಿನಾಥಾ?"( ದುಗ್ಗವ್ವೆ)**

ಈ ಮೇಲಿನ ಎರಡೂ ವಚನಗಳಲ್ಲಿ ಹೆಣ್ಣನ್ನ ಪ್ರತಿಗಾಮಿ ಮೌಲ್ಯಗಳಿಂದ ಬಿಡಿಸಿ ನಿಸರ್ಗದತ್ತ ಜೈವಿಕ ಸ್ವರೂಪವನ್ನ ಒಪ್ಪಿ ಮಹಿಳೆ ಪುರುಷನಂತೆ ಒಂದು ಜೀವಿಯೆಂಬಂತೆ ನೋಡುತ್ತಾರೆ.'ಹೆಣ್ಣು ಮಣ್ಣು ಹೊನ್ನು' ಈ ಮೂರು ಸಂಗತಿಗಳು ಪುರುಷ ಸವಾಜದಲ್ಲಿ ಪುರುಷಸತ್ತೆಗೋಸ್ಕರ ಸಿದ್ದಮಾಡಿಸಿಕೊಂಡ ಉಪಯೋಗದ ವಸ್ತುಗಳಂತೆ ಬಳಸಿಕೊಂಡು ಇವರ ಮೂಲ ಅಸ್ತಿತ್ವವನ್ನ ಮರೆಮಾಚಲಾಗಿದೆ. ತನಗೆ ಮಾತ್ರ ಸೀಮಿತ ಮತ್ತು ಸ್ವಂತ ಎಂದು ಭಾವಿಸಿಕೊಳ್ಳಲಾಗಿರುವಂತದ್ದು. ಆರಂಭದ ಅಥವಾ ಬಸವನ ನಂತರದ ವಚನಕಾರರು ಮಹಿಳೆಗೆ ಹೆಚ್ಚಿನ ಸ್ವಾತಂತ್ರವನ್ನ ಕೊಟ್ಟಹಾಗೆ ಕಂಡುಬರುವುದಿಲ್ಲ. "ಬಚ್ಚಲ ಉಚ್ಚೆಯ ಸೋಸುವರಿಗೆ ಲಿಂಗವೇತಕೊ" ಎನ್ನುತ್ತಾರೆ. ಮೇಲಿನ ಮೂರು ಅಂಶಗಳು ಅಧ್ಯಾತ್ಮಿಕ ಚಿಂತನೆಗೆ ಅಡ್ಡಿ ಎಂದು ಭಾವಿಸಿ ಭೋಗದ ವಸ್ತುಗಳಾಗಿ ನೋಡುತ್ತದೆ ಸಮಾಜ. ಮನದ ಮುಂದಣ ಆಸೆಯೆ ಕಾರಣ ಎಂದು ಹೇಳುತ್ತ ಜೀವಪರವಾದ ಮತ್ತು ಲಿಂಗ ಸಮಾನತೆಯನ್ನ ಸಾರುತ್ತದೆ ಮೇಲಿನ ವಚನ. ಎರಡನೆಯ ವಚನದಲ್ಲಿ ದುಗ್ಗವ್ವೆ ಪುರುಷನಿಗಿಂತ ಕೀಳೆನ್ನುವುದಕ್ಕೆ ದೈಹಿಕ ಆಧಾರವನ್ನು ಬಿಟ್ಟರೆ ಯಾವ ಆಧಾರಗಳು ವೈಜ್ಞಾನಿಕವಲ್ಲವೆಂದು ಹೇಳುವ ಪರಿ ವಿಶಿಷ್ಟವಾದುದು.

ವಚನ ಚಳವಳಿ ದೊಡ್ಡ ಮಟ್ಟದ ವಿಚಾರ ಕ್ರಾಂತಿಯೂ ಹೌದು.ಯಾವುದನ್ನೆ ಆಗಲಿ ಒಪ್ಪಿಕೊಳ್ಳದೆ ಚರ್ಚೆ ತರ್ಕ ವಾಗ್ವಾದಗಳ ಮೂಲಕ ಅಭಿವ್ಯಕ್ತಿಸುವ ಪದ್ಧತಿ ವಚನಕಾರರದು. ಇದಕ್ಕೆ ಅನುಭವ ಮಂಟಪವೆ ಸಾಕ್ಷಿ. ವೈದಿಕರ ಆಚರಣೆಗಳನ್ನ ಅಷ್ಟು ದೊಡ್ಡ ಮಟ್ಟದಲ್ಲಿ ವಿರೋಧಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ವ್ರತ, ನೇಮಗಳು, ಯಜ್ಞಗಳು ಇತ್ಯಾದಿಗಳನ್ನ ಖಂಡಿಸಿ ಜೈವಿಕ ನಿಷ್ಟವಾದ ಮೌಲ್ಯಗಳನ್ನ ಕಟ್ಟ ಹೊರಟಿದ್ದು ವೈಚಾರಿಕತೆಯು ಹೌದು ಆ ಕಾಲಕ್ಕೆ ಆದು ಆಧುನಿಕ ಚಿಂತನೆಯೂ ಹೌದು. ಈ ಕೆಳಗಿನ ಒಂದು ವಚನವನ್ನ ಗಮನಿಸಬಹುದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**"ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ,**
**ಚಂದ್ರ ಕುಂದೆ ಕುಂದುವುದಯ್ಯಾ.**
**ಚಂದ್ರಂಗೆ ರಾಹು ಅಡ್ಡ ಬಂದಲ್ಲಿ**
**ಅಂಬುಧಿ ಬೊಬ್ಬಿಟ್ಟಿತ್ತೆ, ಅಯ್ಯಾ?"**

ಇವತ್ತಿಗೂ ಅಮವಾಸೆ ಪೌರ್ಣಮಿಯನ್ನ ನಿಗೂಢತೆಯ ಶಕ್ತಿಯಂತೆ ಕಾಣುವ ಮನಸ್ಸುಗಳಿಗೆ ಈ ವಚನ ತಟ್ಟಬೇಕಿದೆ. ಇದು ಇವತ್ತಿನ ಮತ್ತು ಆ ಹೊತ್ತಿನ ಆಧುನಿಕ ಜ್ಞಾನವೂ ಹೌದು. ಚಂದ್ರ ಭೂಮಿಗೆ ಹತ್ತಿರ ಬಂದಾಗ ಎರಡೂ ಗ್ರಹಗಳ ಗುರುತ್ವಾಕರ್ಷಣ ಬಲಗಳ ತಿಕ್ಕಾಟದಿಂದ ಸಮುದ್ರದ ಅಲೆಗಳು ಆಳದಿಂದ ದೊಡ್ಡ ಆಕಾರದಲ್ಲಿ ಬರುತ್ತವೆ. ಇಂದು ನಾವು ನಂಬಿರುವ ವೈಜ್ಞಾನಿಕ ಸತ್ಯವೂ ಕೂಡ.

ಒಟ್ಟಾರೆಯಾಗಿ ಈ ಚಳವಳಿ ಮೋಕ್ಷಕ್ಕಾಗಿ ಬದುಕನ್ನ ಒಡ್ಡಿದ, ಅರ್ಪಿಸಿದ ಚಳವಳಿ ಆಗಿರಲಿಲ್ಲ. ಮೂಲಭೂತ ಮೌಲ್ಯಗಳ ನೆಲೆಗಟ್ಟಿನ ಮೇಲೆ ಹೊಸ ಸಮಾಜವನ್ನ ನಿರ್ಮಿಸಲು ಹೊರಟ ಸಾಮಾಜಿಕ ಕ್ರಾಂತಿಯಾಗಿತ್ತು. ಬಹುರೂಪಿಯಾಗಿ ಗ್ರಹಿಸುವ ಹಾಗು ಗತದ ಜೊತೆ, ಪರಂಪರೆಯ ಜೊತೆ ಅರ್ಥಪೂರ್ಣ ಅನುಸಂಧಾನಗೊಳಿಸುವ ಮತ್ತು ಎಲ್ಲಾ ಸಾಧ್ಯತೆಗಳನ್ನು ಚರ್ಚಿಸುವ ದೊಡ್ಡ ಸ್ಪೇಸ್ ಈ ಚಳವಳಿ ಆಗಿದೆ.

■■

*– 24ನೇ ಪುಟದಿಂದ ಮುಂದುವರೆದುದು*

## ಪರಿಹಾರ ಮಾರ್ಗಗಳು / ಶಿಫಾರಸ್ಸುಗಳು (Remedial measures / recommendations)

1. ತೃತೀಯ ಲಿಂಗೀಯ ವಿದ್ಯಾರ್ಥಿಗಳಿಗೆ ವೃತ್ತಿಪರ ಮತ್ತು ಕೌಶಲ್ಯ ತರಬೇತಿ ನೀಡಬೇಕು.
2. ಶಾಲಾ/ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ಇತರೆ ಸಿಬ್ಬಂದಿಗಳು ತೃತೀಯ ಲಿಂಗೀಯ ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಸಂವೇದನಾಶೀಲಾರಾಗಿರಬೇಕು.
3. ತೃತೀಯ ಲಿಂಗೀಯ ವಿದ್ಯಾರ್ಥಿಗಳಿಗೆ ವೃತ್ತಿಪರ ತರಬೇತಿ ಒದಗಿಸಿ ಅವರನ್ನು ಯಾವುದಾದರೊಂದು ಸೂಕ್ತ ಉದ್ಯೋಗಕ್ಕೆ ಸಿದ್ದಗೊಳಿಸಬೇಕು.
4. ತೃತೀಯ ಲಿಂಗೀಯ ವಿದ್ಯಾರ್ಥಿಗಳನ್ನು ಸ್ವಾವಲಂಭಿಯನ್ನಾಗಿಸುವದರಿಂದ ಅವರ ನೈತಿಕ ವಿಶ್ವಾಸವನ್ನು ಹೆಚ್ಚಿಸಬಹುದು.
5. ತೃತೀಯ ಲಿಂಗೀಯ ವಿದ್ಯಾರ್ಥಿಗಳಿಗೆ ಗೌರವ ಸೂಚಿತ ಹೆಸರುಗಳ ಮೂಲಕ ಸಂವಹನ ನಡೆಸಬೇಕು.
6. ಸಂವಿಧಾನದಲ್ಲಿ ಉಲ್ಲೇಖಿಸಿರುವ ಹಕ್ಕುಗಳ ಸದುಪಯೋಗದ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಬೇಕು.

## ಉಪಸಂಹಾರ

ಶಿಕ್ಷಣವು ಸಮಾಜದ ಅಭಿವೃದ್ಧಿಗೆ ಪೂರಕವಾಗುವ ಮೂಲಕ ವ್ಯಕ್ತಿಯ ದೈಹಿಕ ಮತ್ತು ಮಾನಸಿಕವಾಗಿ ಪ್ರಗತಿಗೆ ಸಹಾಯ ಮಾಡುತ್ತದೆ. "ಮಾನವ ಕುಲಂ ತಾನೊಂದೆ ವಲಂ" ಎಂಬ ಸಂದೇಶದಂತೆ ಸಮಾಜದಲ್ಲಿ ಮಾನವರೆಲ್ಲರೂ ಸಮಾನರು, ಅದರಂತೆ ಸಮಾಜದಲ್ಲಿ ತೃತೀಯ ಲಿಂಗಿಗಳನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಭಿನ್ನತೆಯಿಂದ ಕಾಣುವುದನ್ನು ನಿಲ್ಲಿಸಿ, ಅವರನ್ನು ಸಮಾನ ದೃಷ್ಠಿಕೋನದಿಂದ ನೋಡಬೇಕು. ಸಮಾಜದಲ್ಲಿ ತೃತೀಯ ಲಿಂಗಿಗಳು ಶಿಕ್ಷಣವನ್ನು ಪಡೆಯುವುದರ ಮೂಲಕ ಅವರ ಮೂಲಭೂತ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಅನುಕೂಲವಾಗುತ್ತದೆ. ಹಾಗೂ ಇವರು ಈ ಸಮಾಜದಲ್ಲಿ ಸ್ವಾವಲಂಬಿ ಮತ್ತು ಸ್ವತಂತ್ರವಾಗಿ ಬದುಕಲು ಸರ್ಕಾರ ಮತ್ತು ಸಮಾಜ ಇವರಿಗೆ ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕು. ಶಿಕ್ಷಣ ಕ್ಷೇತ್ರವು ಇಂದಿನ ದಿನಗಳಲ್ಲಿ ಸ್ಪರ್ಧಾತ್ಮಕ ಜಗತ್ತಾಗಿರುವುದರಿಂದ, ಸಮಾಜವು ವಾಸ್ತವವಾಗಿ ತೃತೀಯ ಲಿಂಗಿಗಳ ಕಲಿಕೆಗೆ ಸೂಕ್ತ ವಾತಾವರಣ ಕಲ್ಪಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು. ಶಿಕ್ಷಣ ಸಂಸ್ಥೆಯ ಮಂಡಳಿಯವರು, ಆರಕ್ಷಕ ದಳದವರು ತೃತೀಯ ಲಿಂಗದವರು ಕಿರುಕುಳಕ್ಕೆ ಒಳಗಾದಗ ಅಹವಾಲು ಸಲ್ಲಿಸಿದಾಗ ನಿರಾಕರಿಸದೆ ತಕ್ಷಣ ಕ್ರಮ ಕೈಗೊಳ್ಳಬೇಕು. ಸಮಾಜದಲ್ಲಿ ತೃತೀಯ ಲಿಂಗದವರಿಗೆಎಲ್ಲರಂತೆ ಶೈಕ್ಷಣಿಕ ಹಾಗೂ ಇತರೆ ಹಕ್ಕುಗಳನ್ನು ನೀಡುವುದರಿಂದ ಅವರು ಸಹ ದೇಶದ ಅಭಿವೃದ್ಧಿಯಲ್ಲಿ ಮಹತ್ವ ಪೂರ್ಣಕೊಡುಗೆ ಸಲ್ಲಿಸಬಹುದು. ತೃತೀಯ ಲಿಂಗದ ವಿದ್ಯಾರ್ಥಿಗಳ ವಿರುದ್ಧ ಯಾವುದೇ ರೀತಿಯ ತಾರತಮ್ಯ ಮತ್ತು ಕಿರುಕುಳವನ್ನು ಮೇಲ್ವಿಚಾರಣೆ ಮಾಡಲು ಶಾಲಾ/ಕಾಲೇಜುಗಳಲ್ಲಿ ಅಥವಾ ಶೈಕ್ಷಣಿಕ ವ್ಯವಸ್ಥೆಯಲ್ಲಿ ತೃತೀಯ ಲಿಂಗಿಗಳ ತಾರತಮ್ಯ ವಿರೋಧಿ ಘಟಕಗಳನ್ನು ಸ್ಥಾಪಿಸಬೇಕು. ಈ ಲೇಖನದ ಮೂಲಕ ತಿಳಿಸುವುದೆನೆಂದರೆ ಇತರೆ ವಿದ್ಯಾರ್ಥಿಗಳಂತೆ ತೃತೀಯ ಲಿಂಗದ ವಿದ್ಯಾರ್ಥಿಗಳಿಗೆ ಸೂಕ್ತ ಶಿಕ್ಷಣ ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಬೇಕು.

## ಪರಾಮರ್ಶನ ಗ್ರಂಥಗಳು


- **ಅಕ್ಕಯ್ ಪದ್ಮಶಾಲಿ. (2021) :** ಅಕ್ಕಯ್ ಬಹುರೂಪಿ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್.
- **ಅಗರ್ವಾಲ್ ಮತ್ತು ಸೌಮ್ಯ. (2015) :** ಭಾರತದಲ್ಲಿ ತೃತೀಯ ಲಿಂಗಿಗಳ ಹಕ್ಕುಗಳು ಯಾವುವು. https://blog.ipleaders.in/legal-rights-of-transgender-india/on 28/12/2016 ಪಡೆಯಲಾಗಿದೆ.
- **ಅಶೋಕರಾಜ್, ಎಸ್. (2019) :** ತೃತೀಯ ಲಿಂಗಿಗಳ ಸಮಸ್ಯೆಗಳು ಮತ್ತು ಸವಾಲುಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಸ್ಥಿತಿ, ಭಾರತೀಯ ವಿಶ್ವವಿದ್ಯಾಲಯ, ಪಿಎಚ್.ಡಿ., ಅಪ್ರಕಟಿತ ಪ್ರಬಂಧ.
- **ಚಂದ್ರ, ಎಸ್. (2017) :** ತೃತೀಯ ಲಿಂಗಿಗಳ ಮಕ್ಕಳ ಶಿಕ್ಷಣ ಮತ್ತು ಸಮಾಜದಲ್ಲಿಅವರ ಮರು ತೊಡಗಿಸಿಗೊಳ್ಳುವಿಕೆ. ಇಂಟರ್ನ್ಯಾಷನಲ್ ಜರ್ನಲ್ ಆಫ್ ಎಜುಕೇಷನಲ್ ರಿಸರ್ಚ್ ಸ್ಟಡೀಸ್, 2(8), 875–890, GOI(2014), ತೃತೀಯ ಲಿಂಗಿಗಳ ಹಕ್ಕುಗಳ ಮಸೂದೆ–2014, ©¯ïNo.XLIXC-C 2014, ಲೋಕಸಭೆ, ಭಾರತದ ಸಂಸತ್ತು, ನವದೆಹಲಿ.
- **ಚಟರ್ಜಿ ಸುಭ್ರಜಿತ್. (2018) :** ಭಾರತದಲ್ಲಿ ತೃತೀಯ ಲಿಂಗಿಗಳ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು : ಕೆಲವು ಶಿಫಾರಸ್ಸುಗಳು, ಇಂಟರ್ನ್ಯಾಷಲ್ ಜರ್ನಲ್ ಆಫ್ ಕ್ರಿಯೇಟಿವ್ ರಿಸರ್ಚ್ ಥಾಟ್ಸ್. (IJCRT), 6 (1).
- **ಸಂತೋಷ್‌ಕುಮಾರ ಮೆಹೆಂದಳೆ (2022) :** ಮಂಗಳ ಮುಖಿಯರ ಸಂಗದಲ್ಲಿ, ಬೆಂಗಳೂರು ಸ್ನೇಹ ಬುಕ್ ಹೌಸ್.
- **ಸೆರಾಹ್ ಚೆಬಕಾನಿ, ಎನ್. (2013):** ತಮಿಳುನಾಡು ಸರ್ಕಾರವು ಜಾರಿಗೆ ತಂದಿರುವ ಕಾರ್ಯಕ್ರಮಗಳ ಪ್ರಭಾವದ ಕುರಿತಾದ ಚೆನ್ನೈನ ತೃತೀಯ ಲಿಂಗಿಗಳ ಒಂದು ಅಧ್ಯಯನ, ಮದ್ರಾಸ್ ವಿಶ್ವವಿದ್ಯಾನಿಲಯ, ಪಿಎಚ್.ಡಿ., ಪ್ರಕಟಿಸಲಾಗಿದೆ.
- **ಹಬಿನ್ ಎಚ್. (2021) :** ಭಾರತದಲ್ಲಿ ತೃತೀಯ ಲಿಂಗಿಗಳ ಸಮುದಾಯ : ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸ ಕುರಿತು ಒಂದು ಅಧ್ಯಯನ. ಬಹುಶಿಸ್ತೀಯ ಶೈಕ್ಷಣಿಕ ಸಂಶೋಧನೆಯ ಇಂಟರ್ನ್ಯಾಷನಲ್ ಜರ್ನಲ್, 10,1(4),pp.19-21.http://hdl.handle.net/10603/185885.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವೈದೇಹಿ ಅವರ 'ಕ್ರೌಂಚ ಪಕ್ಷಿಗಳು' – ಒಂದು ಒಳನೋಟ

✍ **ಡಾ. ದೇವಿಕ. ಎಸ್**. ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದ ಪರಿಸರದಲ್ಲಿ ಹುಟ್ಟಿ ಬೆಳೆದ ವೈದೇಹಿ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಭಿನ್ನ ಮಾದರಿಯ ಕಥಾನಕಗಳನ್ನು ರಚಿಸುವ ಮೂಲಕ ವಿಶಿಷ್ಟವಾಗಿ ಕಂಗೊಳಿಸಿದ್ದಾರೆ. ಕೌಟುಂಬಿಕ ಜಗತ್ತಿನ ನಾಲ್ಕು ಗೋಡೆಗಳ ಒಳಗೆ ನರಳುವ ಹೆಂಗಸರ ಒಳ ಮತ್ತು ಹೊರಮುಖಗಳನ್ನು ಹೆಂಗಸರ ಬವಣೆ, ಬದುಕಿನ ಹಿಂಸೆಯ ಒಳಗೇ ನಗುವ, ಸ್ತ್ರೀಲೋಕದ ಅದ್ಭುತ ಅನುಭವಗಳನ್ನು ವೈದೇಹಿ ಅವರಕಥಾನಕಗಳಲ್ಲಿ ಕಾಣಬಹುದಾಗಿದೆ. ಬದುಕನ್ನು ವಿಶಾಲ ದೃಷ್ಟಿಕೋನದಿಂದ ನೋಡುವ ವೈದೇಹಿ ಅವರು ತಮ್ಮ ಸಾಹಿತ್ಯದ ಮೂಲಕ ಬದುಕನ್ನು ಹಿಡಿಯಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜೀವನದ ವಾಸ್ತವತೆಗಳನ್ನು, ಪುರುಷ ಮತ್ತು ಸ್ತ್ರೀಯರ ನಡುವಿನ ತಾರತಮ್ಯಗಳನ್ನು, ವಿರೋಧಾಭಾಸಗಳನ್ನು , ಕುಟುಂಬ ಜೀವನದ ಸಂಕಷ್ಟಗಳ ಬಿಸಿ, ವಿಷಾದ, ವಿನೋದ, ಗಾಂಭೀರ್ಯಗಳನ್ನು ತಮ್ಮ ಕಥಾನಕಗಳ ಮೂಲಕ ವಿವರಿಸಿದ್ದಾರೆ. 'ಮರಗಿಡ ಬಳ್ಳಿ', 'ಅಂತರಂಗದ ಪುಟಗಳು', 'ಗೋಲ', 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಮತ್ತು 'ಕ್ರೌಂಚ ಪಕ್ಷಿಗಳು' ಎಂಬವು ವೈದೇಹಿ ಅವರ ಪ್ರಮುಖ ಕಥಾ ಸಂಕಲಗಳು. ಸಂಪ್ರದಾಯಸ್ಥ ಪರಿಸರದೊಳಗೆ ಬದುಕಬೇಕಾದ ಅನಿವಾರ್ಯತೆಯಲ್ಲಿ ಹೆಣ್ಣಿನ ಅನುಭವಗಳು, ವಿಭಿನ್ನ ಗ್ರಹಿಕೆಗಳು, ಜೀವನ ಅರಳುವ ಇಲ್ಲವೇ ಮುದುಡಿ ಹೋಗುವ ಬಗೆಗಳನ್ನು ಅವರ ಸ್ವಂತ ಪರಿಸರದಲ್ಲಿಯೇ ಸೂಕ್ಷ್ಮವಾಗಿಗ್ರಹಿಸಿ ಅದನ್ನು ಕಥೆಯಾಗಿಸುವ ಅವರ ಪರಿ ಶ್ಲಾಘನೀಯವಾದುದಾಗಿದೆ.

ವೈದೇಹಿ ತಮ್ಮ ಕಥೆಗಳಲ್ಲಿ ಹೆಣ್ಣನ್ನೇ ಕೇಂದ್ರವಾಗಿಟ್ಟುಕೊಂಡು ಚಿತ್ರಿಸುತ್ತಾರೆ. ಬಾಲ್ಯ, ಹರೆಯ, ಪ್ರೌಢತ್ವ, ನಡುಹರೆಯ, ವೃದ್ಧಾಪ್ಯ ಎಲ್ಲ ಘಟ್ಟಗಳಲ್ಲಿನ ಸ್ತ್ರೀಯರು ಇವರ ಕಥೆಗಳಲ್ಲಿ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತವೆ. ಪ್ರತಿಯೊಂದು ಘಟ್ಟದಲ್ಲಿಯೂ ಸ್ತ್ರೀ ಒಂದು ನಿರ್ದಿಷ್ಟ ಚೌಕಟ್ಟಿನೊಳಗೆ ಬದುಕುವ ಹವಣಿಕೆ , ಬಿಡಿಸಿಕೊಳ್ಳುವ ತವಕ, ಆತುರ, ಮಾನವ ಸಂಬಂಧಗಳ ಗೋಜಲು ಪರಿಸ್ಥಿತಿ, ಇಷ್ಟರ ನಡುವೆ ಹೆಣ್ಣಿನ ದಿಟ್ಟತನ, ಕುತೂಹಲ, ಆಸೆ, ಕನಸು, ಸಿಟ್ಟುಎಲ್ಲವೂ ವೈದೇಹಿಯವರ ಕಥೆಗಳಲ್ಲಿ ಸ್ಪಷ್ಟವಾಗಿ ಚಿತ್ರಿತಗೊಂಡು ಬಿತ್ತರಗೊಂಡಿವೆ.

'ಕ್ರೌಂಚ ಪಕ್ಷಿಗಳು' ಕಥಾ ಸಂಕಲನದಲ್ಲಿನ ಎಲ್ಲಾ ಕಥೆಗಳ ಕೇಂದ್ರ ಪಾತ್ರ 'ಸ್ತ್ರೀ' ಎಂದೇ ಹೇಳಬೇಕು. ಈ ಕಥಾ ಸಂಕಲನದಲ್ಲಿ 'ದಾಳಿ', 'ನಟಿ', 'ಸಬಿತಾ', 'ಮಾತು ಸೋತಕ್ಷಣ', 'ಮನೆಯವರೆಗಿನ ಹಾದಿ', 'ಪ್ರಶ್ನೆ' 'ಒಗಟು', 'ಅವರರವರ ಭಾವಕ್ಕೆ', 'ತೆರೆಯದ ಪುಟಗಳು', 'ಕ್ರೌಂಚ ಪಕ್ಷಿಗಳು' ಎಂಬ ಹತ್ತು ಕಥೆಗಳನ್ನು ನೋಡಬಹುದಾಗಿದೆ. ಸ್ತ್ರೀ ಕೇಂದ್ರಿತ ಕಥೆಗಳಾದ ಇವು ಹೆಣ್ಣಿನ ಹುಡುಕಾಟಗಳನ್ನು ದಾಖಲಿಸುತ್ತವೆ. ಹೆಣ್ಣು – ಗಂಡಿನಿಂದ ರಚನೆಯಾಗುವ ಕುಟುಂಬ ವ್ಯವಸ್ಥೆಯಲ್ಲಿ ವಿನೋದ, ಗಾಂಭೀರ್ಯ, ಮಿಥುನ, ವಿಚ್ಛೇದನ, ಸಂತೋಷ, ಸುಖದುಃಖಗಳ ಮೈತ್ರಿಯಿರುತ್ತದೆ. ಇವೆಲ್ಲವನ್ನು ಈ ಕಥೆಗಳಲ್ಲಿ ಕಟ್ಟಿಕೊಟ್ಟಿರುವ ಲೇಖಕಿ ಈ ಕಥಾ ಗುಚ್ಛಕ್ಕೆ 'ಕ್ರೌಂಚಪಕ್ಷಿಗಳು' ಎಂಬ ತಲೆಬರಹಕೊಟ್ಟು ಅವರ ಕಥನಕ್ರಮದ ಪ್ರತಿಮೆಯನ್ನು ಅನಾವರಣಗೊಳಿಸಿದ್ದಾರೆ. ರಾಮಾಯಣದ ಕಥೆಯನ್ನು ಬರೆಯಲು ವಾಲ್ಮೀಕಿಗೆ ಪ್ರೇರಣೆಯಾದ ' ಮಾ ನಿಷಾದ' ಶ್ಲೋಕವು ಕ್ರೌಂಚ ಪಕ್ಷಿಗಳ ದುರಂತ ಕಥೆಯೊಂದಿಗೆ ಆರಂಭವಾಗುತ್ತದೆ. ಜೀವನಕೂಡ ಎಲ್ಲವನ್ನೂ ಒಳಗೊಂಡು ಏನೂ ಇಲ್ಲವೆಂಬಂತೆ ಗಂಡು ಹೆಣ್ಣುಗಳೆಂಬ ಭೇದವಿಲ್ಲದಎಲ್ಲರ ಬದುಕು ಪೂರ್ಣತೆ ಮತ್ತು ಅಪೂರ್ಣತೆಗಳ ಮಧ್ಯೆ ಮಿಂದು, ಜರ್ಜರಿತ ಭಾವದಿಂದ ತುಂಬಿ ನಿಧಾನವಾಗಿ ಎಲ್ಲವನ್ನು ಸಹಿಸುವ ಭಾವಕ್ಕೆ ತಂದು ನಿಲ್ಲಿಸುವ ಪರಿಯನ್ನು ಕಟ್ಟಿಕೊಡುವ ವೈದೇಹಿಯವರ ಕಥೆಗಳು ಪ್ರಸ್ತುತ ಆಧುನಿಕ ಸಂದರ್ಭದ ಮಾನವೀಯ ತೊಳಲಾಟಗಳನ್ನು ಸಶಕ್ತವಾಗಿ ಚಿತ್ರಿಸಿವೆ.

**'ದಾಳಿ'** ಕಥೆಯಲ್ಲಿ ಕಂಡಕ್ಟರೊಬ್ಬ ಒಂದು ಹೆಂಗಸಿನ ಮೇಲೆ ದಬ್ಬಾಳಿಕೆ ನಡೆಸುವ ಚಿತ್ರಣವಿದೆ. ಸೀಟು ಕೊಡಲು ಕೇಳುವ ಹೆಂಗಸನ್ನು ಅವಮಾನಿಸುವ ಕಂಡಕ್ಟರ್ ಮೊದಲಿನಿಂದ ಕೊನೆಯವರೆಗೆ ಆಕೆಯನ್ನು ಹೀಯಾಳಿಸಿ ಅವಮಾನಿಸಿ ಮಾತನಾಡುತ್ತಾನೆ. ಬಸ್ಸಿನಲ್ಲಿ ನಿಂತಿದ್ದ ಆ ಹೆಂಗಸು ಮುಗುಳ್ನಗುತ್ತಾ ಅವಮಾನವನ್ನು ಸಹಿಸುತ್ತಾಳೆ. ಆದರೆ ಅಲ್ಲಿದ್ದ ಯುವತಿಯರು ಕಂಡಕ್ಟರನ ಅಮಾನವೀಯ ವರ್ತನೆಗೆ ಬೇಸರಿಸುತ್ತಾರೆ. ಒಬ್ಬ ಯುವತಿ ಆ ಹೆಂಗಸನ್ನು ನೀವು ಇಷ್ಟೊಂದು ಸಹಿಸಿಕೊಳ್ಳಬಾರದಿತ್ತು, ನೀವು ಬೈದು ದಾಳಿ ಮಾಡಬೇಕಿತ್ತು ಎಂದು ಹೇಳುತ್ತಾಳೆ. ಆದರೆ ಹೆಂಗಸು ಆ ಯುವತಿಯರನ್ನು ದೀರ್ಘವಾಗಿ ನೋಡಿ ಸಣ್ಣಗೆ ನಕ್ಕು ಗಂಭೀರವಾಗುತ್ತಾಳೆ. ಆ ಹೆಂಗಸು ತನ್ನ ಅವಮಾನವನ್ನು ಮೌನದಲ್ಲಿಯೇ ದಾಳಿ ಮಾಡಿರುವುದನ್ನು ಲೇಖಕಿ ಸೂಚ್ಯವಾಗಿ ತಿಳಿಸಿ ಕಥೆಯನ್ನು ಮುಗಿಸಿಬಿಡುತ್ತಾರೆ. ಬೈಯ್ದಾಟ, ಹೊಡೆದಾಟಗಳ ಬಹಿರಂಗದ ಚಕಮಕಿಯ ದಾಳಿಗಿಂತ ಮೌನದ ಅಂತರಂಗದದಾಳಿ ಹೆಚ್ಚು ಪರಿಣಾಮಕಾರಿ ಎಂಬುದನ್ನು ಈ ಕಥೆ ಪ್ರತಿನಿಧಿಸುತ್ತದೆ.

**'ನಟಿ'** ಸಂಪ್ರದಾಯಸ್ಥ ಬ್ರಾಹ್ಮಣ ಸಮಾಜದ ಒಳಗಿನ ಹೆಣ್ಣಿನ ಕಥನ. 'ನಟಿ' ಕಥೆಯಲ್ಲಿ ಕುಂದಾಪುರದ ಬ್ರಾಹ್ಮಣ ಸಮುದಾಯದ ಆಚರಣೆ ಮತ್ತು ಸಂಸ್ಕೃತಿಯ ಚಿತ್ರಣವಿದೆ. ಯಾರನ್ನಾದರೂ ಮಾತು ಮತ್ತು ಅಭಿನಯದ ಮೂಲಕ ಕಣ್ಣೆದುರು ಕಟ್ಟಿ ನಿಲ್ಲಿಸಿ ಕೊಡುವುದನ್ನು 'ಪಾರ್ಸು' ಎಂದು ಕರೆಯುತ್ತಾರೆ. ಪಾರ್ಸು ಮಾಡುವುದರಲ್ಲಿ ಗುರುತಿಸಿಕೊಂಡಿದ್ದ ರತ್ನ, ಎಲ್ಲರನ್ನು ತನ್ನ ಪಾರ್ಸಿನ ಮೂಲಕ ರಂಜಿಸುತ್ತಾಳೆ. 'ಕೋಟೆ ಅಜ್ಜಿ ಗುಡ್ಡಕ್ಕೆ ಹೋಗಿ ಬಂದದ್ದು', 'ರುಕ್ಮಿಣಿ ಚಿಕ್ಕಿ ಪಾರ್ಸು', 'ವಡ್ಡರ್ಸೆ ವನಜಾಕ್ಷಮ್ಮನ ಪಾರ್ಸು' ಮುಂತಾದ ಪಾರ್ಸುಗಳನ್ನು ಮಾಡುತ್ತಾ ಎಲ್ಲರನ್ನು ನಗಿಸುತ್ತಿದ್ದ ರತ್ನ ತನ್ನನ್ನು ಕೂಡಾ ಪಾರ್ಸು ಮಾಡಿ ತೋರಿಸುತ್ತಾಳೆ. ಅವಳ ಪಾರ್ಸಿನ ಸಂದರ್ಭದಲ್ಲಿ ಅದನ್ನು ರಂಜನೆಗಾಗಿ ನೋಡುತ್ತಿದ್ದ ಹೆಂಗಸರು ರತ್ನಾಳ ಜೀವನದ ಕುರಿತು, ಸಂಸಾರ , ಮಗಳು, ಗಂಡನಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ರತ್ನಅತ್ಯಂತ ನೋವಿನಿಂದ ಕ್ಷಣ ಮಂಕಾದರೂ ಧೈರ್ಯವಾಗಿ ಉತ್ತರಿಸುತ್ತಾಳೆ. ಬೇಜವಾಬ್ದಾರಿ ಗಂಡ, ಖಾಯಿಲೆಯ ಮಗಳು, ನೌಕರಿಗಾಗಿ ಅಲೆದಾಡುವ ಮಗನ ಕುರಿತು ತಿಳಿಸುತ್ತಾಳೆ. ಮಗಳ ಚಿತೆಗೆ ಬೆಂಕಿ ಕೊಟ್ಟ ಬಗ್ಗೆ ಪ್ರಶ್ನಿಸಿದಾಗ ರತ್ನ ತಾನು ಹೆಣ್ಣಾದರೆ ಏನಂತೆ ? ನಾನುತಾಯಿ, ನನ್ನ ಮಗಳಿಗೆ ನಾನು ಬೆಂಕಿ ಕೊಟ್ಟರೆ ತಪ್ಪೇನು ? ಎಂದು ಮರುಪ್ರಶ್ನೆ ಹಾಕುತ್ತಾಳೆ. ಪಾರ್ಸಿನ ಮೂಲಕ ಬ್ರಾಹ್ಮಣ ಸಮುದಾಯದ ಮಡಿಯನ್ನು, ಹೆಂಗಸರ ವಿಪರೀತ ನಡವಳಿಕೆಗಳನ್ನು ಅಣಕಿಸುವುದಲ್ಲದೇ ತನ್ನ ಜೀವನದ ಸ್ಥಿತಿಗೆ ನೊಂದು ತನ್ನ ಸಮುದಾಯದ ಆಚರಣೆಗೆ ವಿರುದ್ಧ ನಿಂತು ಎಲ್ಲರನ್ನು ಮಣಿಸುತ್ತಾಳೆ. ಪಾರ್ಸು ಮಾಡುವಲ್ಲಿ ಒಳ್ಳೆಯ ನಟಿ ಎನಿಸಿಕೊಂಡಿದ್ದರತ್ನ, ನಿಜ ಜೀವನದಲ್ಲಿಯೂ ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡು ಎಲ್ಲರ ಅಚ್ಚರಿಗೆ ಕಾರಣವಾಗುತ್ತಾಳೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**'ಸಬಿತಾ'** ಕಥೆಯಲ್ಲಿ ನೇರ ನಡೆ ನುಡಿಯ ಮಧ್ಯಮ ಕುಟುಂಬದ ಹೆಣ್ಣೊಬ್ಬಳ ಚಿತ್ರಣವಿದೆ. ಸಬಿತಾ ಆಸೆ ತುಂಬಿದ ಹೆಣ್ಣು, ಶ್ರೀಮಂತರ ಶ್ರೀಮಂತಿಕೆಯನ್ನು ನೋಡಿ ಅಸೂಯೆ ಪಡುತ್ತಾಳೆ ಮತ್ತು ಹಾಸ್ಯ ಮಾಡುವ ಮೂಲಕ ತನ್ನ ಬಾಯಿಚಪಲ ತೀರಿಸಿಕೊಳ್ಳುತ್ತಾಳೆ. ಮಧ್ಯಮ ವರ್ಗದ ಹೆಣ್ಣೊಬ್ಬಳ ಆಸೆ ಆಕಾಂಕ್ಷೆಗಳ ಕನಸಿನ ಕನ್ಯೆಯಾಗಿ ಸಬಿತಗೋಚರಿಸುತ್ತಾಳೆ. ಕಾರು ಬಂಗಲೆ ಇಟ್ಟುಕೊಂಡು ಬದುಕುವ ಆಸೆ ವ್ಯಕ್ತಗೊಳಿಸುತ್ತಾ ತನ್ನ ಪರಿಸ್ಥಿತಿಗೆ ನೊಂದು ಬೇಸರಿಸಿಕೊಳ್ಳುತ್ತಾಳೆ. ಗೆಳತಿಯೊಂದಿಗೆ ಎಲ್ಲವನ್ನು ಹೇಳಿಕೊಳ್ಳುವ ಸಬಿತಾ, ತನ್ನ ಮುಂದಿನ ಮನೆಯ ಶ್ರೀಮಂತರ ನಡೆ ನುಡಿಗಳನ್ನು ಗಮನಿಸುವ ಹವ್ಯಾಸಕ್ಕೆ ಬಿದ್ದು, ನೋಡಿದ್ದನ್ನೆಲ್ಲಾ ತನ್ನ ಗ್ರಹಿಕೆಯಲ್ಲಿ ಕಥೆ ಕಟ್ಟಿಕೊಳ್ಳುತ್ತಾಳೆ. ಆದರೆ ಆ ಮನೆಯ ಶ್ರೀಮಂತ ಹೆಂಗಸು ತಾನೇ ಆತ್ಮಹತ್ಯೆ ಮಾಡಿಕೊಂಡಾಗ ಆಕೆಗೆ ಎಲ್ಲವೂ ಇತ್ತು, ಆಕೆಯ ಜೀವನ ಜಿಗುಪ್ಸೆಗೆ ಕಾರಣ ಗೊತ್ತಾಗಲಿಲ್ಲವೆಂದು ಪರಿತಪಿಸುತ್ತಾಳೆ. ವಿವಿಧ ವರ್ಗದ ಹೆಣ್ಣಿನ ದೃಷ್ಟಿಕೋನ, ಜೀವನವನ್ನು ಅವರು ಕಂಡುಕೊಂಡ ಬಗೆ ಇಲ್ಲಿ ಸುಂದರವಾಗಿ ಮೂಡಿ ಬಂದಿದೆ. ಅಂದರೆ ಹಣವೇ ಮನದಎಲ್ಲ ಬೇಗುದಿಗಳಿಗೆ ಪರಿಹಾರವಲ್ಲಎಂಬುದನ್ನು ಈ ಕಥೆ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ.

**'ಮಾತು ಸೋತಕ್ಷಣ'** ಕಥೆಯಲ್ಲಿ ಸಾವಿನ ಮನೆಗೆ ಬಂದ ವೃದ್ಧನೊಬ್ಬನ ಅಂತರಂಗದ ಮಿಡಿತದ ಚಿತ್ರಣವಿದೆ.ಆ ಮನೆಯ ಯಜಮಾನ ತನ್ನ ಹೆಂಡತಿಯನ್ನು ಕಳೆದುಕೊಂಡಿರುತ್ತಾನೆ. ಆಕೆಯ ಬಂಧುಎನಿಸಿದ ಹಣ್ಣು ಮುದುಕ ಸಾಂತ್ವನ ಹೇಳಿ ಮಾತನಾಡಿಸಲು ಬಂದವನು ಆ ಯಜಮಾನನಿಗೆ ಸಾಂತ್ವನ ಹೇಳಲೂ ಸಾಧ್ಯವಾಗದೇ, ಮಾತು ಹೊರಬರದೇ ದುಃಖದಿಂದ ನರಳುತ್ತಾನೆ. ಮುದುಕ ಮಾತು ಸೋತಕ್ಷಣ ಮತ್ತು ಅರ್ಥಗರ್ಭಿತ ಮೌನ ಶೋಕದ ತೀವ್ರತೆಯನ್ನು ತಿಳಿಸುತ್ತದೆ. ಮಾತು ಬಂಜೆ ಎಂಬ ವಚನಕಾರರ ಮಾತಿನಂತೆ ಅಂತರಂಗದ ಮನದ ಭಾವ ತೀವ್ರತೆಯನ್ನು ಮಾತಿನ ಮೂಲಕ ಎಳೆದು ತರಲಾಗುವುದಿಲ್ಲ ಎಂಬ ವಾಸ್ತವತೆಯ ಚಿತ್ರಣವನ್ನು ಈ ತಿಳಿಸಿಕೊಡುತ್ತದೆ.

**'ಮನೆಯವರೆಗಿನ ಹಾದಿ'** ಕಥೆಯಲ್ಲಿ ರಸ್ತೆ ಇಲ್ಲದ ಊರು, ಆ ರಸ್ತೆಗೆ ಬೆಸೆದುಕೊಂಡ ಆ ಜನರ ಬದುಕಿನ ಚಿತ್ರಣವಿದೆ. ತಗ್ಗು ದಿಬ್ಬದ ಹಾದಿಯಲ್ಲಿ ನಡೆಯಲು ಪಾಡುಪಡುವ ಜನ ಬದುಕನ್ನು ಕಂಡುಕೊಳ್ಳುವಲ್ಲಿ ಪಡುವ ವ್ಯಥೆಯನ್ನು ಕಾಣಬಹುದು. ರಸ್ತೆ ಮಾಡಿಸಿದ ನಂತರ ವೈವಾಹಿಕ ಸಂಬಂಧ ಏರ್ಪಡುವ ರೀತಿ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಜೊತೆಗೆ ವ್ಯಾಪಾರಿ ಉದ್ದೇಶಗಳು ಪ್ರಾರಂಭವಾಗುತ್ತವೆ. ಹಾಲು ಮಾರುವುದು, ಅಡಕೆಕದ್ದು ಮಾರುವುದು ಮುಂತಾದ ವಿಚಿತ್ರಕೆಲಸಗಳು ನಡೆಯುತ್ತವೆ. ಪಟ್ಟಣದೊಂದಿಗೆ ಬೆಸೆದುಕೊಂಡ ಹಳ್ಳಿಗರ ಜೀವನದ ಏರುಪೇರುಗಳ ಚಿತ್ರಣವನ್ನುಕೂಡ ಈ ಕಥೆಯಲ್ಲಿ ಕಾಣಬಹುದಾಗಿದೆ. ನಾಗರೀಕತೆಯ ನೆಪದಲ್ಲಿ ನಮ್ಮ ಗ್ರಾಮಗಳು ಕಾಂಕ್ರಿಟ್ ಕಾಡುಗಳಾಗುತ್ತಿರುವ ಪರಿ, ಜನರು ವ್ಯಾಪಾರೀಕರಣದ ನೆಪದಲ್ಲಿ ಭಾವ ಮುಕ್ತರಾಗಿ ಜೀವಿಸುತ್ತಿರುವುದರ ಚಿತ್ರಣ ಇಲ್ಲಿ ಕಂಡು ಬರುತ್ತದೆ. ಇದುಕೇವಲ 'ಮನೆಯವರೆಗಿನ ಹಾದಿ'ಯಾಗದೇ ಭಾರತದ ಪ್ರತಿಯೊಂದು ಹಳ್ಳಿಯ ಮುಗ್ಧಮನಸಿನ ಪರಿವರ್ತನೆಯ ಹಾದಿಯಾಗಿ ಈ ಕಥೆ ಮೂಡಿಬಂದಿದೆ.

**'ಪ್ರಶ್ನೆ'**ಕಥೆಯಲ್ಲಿ ಭಾಷಣಕಾರನೊಬ್ಬನ ಭಾಷಣ ಕೇಳುತ್ತಿದ್ದ ಜನತೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಅಲ್ಲಿದ್ದ ಭುವಿ ಮತ್ತು ಅನು ಎಂಬ ಹುಡುಗಿಯರು ಆತನ ಮಾತು ಕೇಳುತ್ತಾ ಕೇಳುತ್ತಾ ಆತನ ಆಕರ್ಷಣೆಗೆ ಒಳಾಗುತ್ತಾರೆ. ಆತನ ಜೊತೆ ಒಂದು ರಾತ್ರಿ ಅಥವಾ ಒಂದು ಗಂಟೆ ಕಳೆಯಲು ಬಯಸಿದ್ದೇನೆ. ಏನು ಹೇಳುತ್ತೀರಿ ಎಂದು ಪ್ರಶ್ನೆ ಕಳಿಸಿತ ಮಾಷೆ ನೋಡುತ್ತಾರೆ. ಈ ರೀತಿಯ ಆಸೆ ಭುವಿಯಲ್ಲಿ ಹುಟ್ಟುತ್ತದೆ. ಆದರೆ ಅನು ಅದಕ್ಕೆ ಪ್ರತಿಕ್ರಿಯಿಸಿ ಆ ವ್ಯಕ್ತಿಯೊಂದಿಗೆ ನಡೆದು ತನ್ನ ಆಸೆಯ ಬೆನ್ನು ಹತ್ತುತ್ತಾಳೆ. ಭುವಿಗೆ ಸಂಕಟವಾಗುತ್ತದೆ, ಏನೋ ಕಳೆದುಕೊಂಡಂತೆ, ಯಾರೋ ತನ್ನಿಂದ ಏನೋಕಿತ್ತು ಕೊಂಡಂತೆ ಅನಿಸುತ್ತದೆ. ಮತ್ತೆ ಆಕೆ ತಾನು ನಡೆಯುತ್ತಿದ್ದ ಯಾವುದೋ ದುರಂತದಿಂದ ಪಾರಾದಂತೆಯೂ ಭಾವಿಸುತ್ತಾಳೆ. ಪ್ರಶ್ನೆ ಕಥೆಯ ಈ ಪಾತ್ರಗಳು ಹೆಣ್ಣಿನ ಯೌವ್ವನದ ದೈಹಿಕ ಬಯಕೆಯ ಹುಚ್ಚು ಮನಸ್ಸಿನ ಓಟವನ್ನು ಈ ಕಥೆಯು ಸಮರ್ಥವಾಗಿ ಬಿಂಬಿಸಿದೆ.

**'ಒಗಟು'** ಕಥೆಯಲ್ಲಿ ಒಂದು ಹೆಣ್ಣಿನ ಶಾಂತವಾದ ಬದುಕಿನ ಒಳಗೆ ಬೇಧಿಸಲಾಗದ ಒಗಟಿನ ಚಿತ್ರಣವಿದೆ. ಸದಾ ಮನೆಯಲ್ಲಿಯೇ ಇರಲು ಬಯಸುವ ಹೆಣ್ಣು, ಸಂಸಾರವನ್ನು ಸರಿಯಾಗಿ ತೂಗಿಸುವ ಹೆಣ್ಣು ,ಎಲ್ಲರ ವಿಶ್ವಾಸಗಳಿಸಿರುವ ಹೆಣ್ಣು ಇದ್ದಕ್ಕಿದ್ದಂತೆ ನಿಗೂಢವಾಗಿ ಎಲ್ಲಿಗೋ ಪ್ರಯಾಣಿಸುತ್ತಾಳೆ. ಮತ್ತೆ ತನ್ನ ಊರಿಗೆ ಬಂದು ಮನೆ ಮಾಡಿಕೊಂಡು ನೆಲೆಸುತ್ತಾಳೆ. ಆಹುಡುಗಿ ಮತ್ತೆ ಮತ್ತೆತನ್ನ ಮನೆಗೆ ಬರುವುದಲ್ಲದೆ, ತಾನೊಬ್ಬಳೇ ಹೊರಗಡೆ ಸುತ್ತಾಡಿ ಬರುತ್ತಾಳೆ. ಆ ಹುಡುಗಿಯೊತನ್ನ ಮನೋಗತವನ್ನು ಯಾರಲ್ಲಿಯೂ ಹೇಳಿಕೊಳ್ಳುವುದಿಲ್ಲ ಹಾಗೂ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಆಕೆಯ ಮೌನ, ನಗು ಮತ್ತು ಶಾಂತತೆಎಲ್ಲವೂ ಒಗಟಾಗಿಯೇ ಉಳಿಯುತ್ತವೆ. ಹೆಣ್ಣಿನ ಮನೋವ್ಯಾಪಾರಗಳು ಯಾರಿಗೂ ಸುಲಭವಾಗಿ ಅರ್ಥವಾಗುವುದಿಲ್ಲ ಹಾಗೂ ತನ್ನೆಲ್ಲಾ ಭಾವನೆಗಳನ್ನು ಅಷ್ಟು ಸುಲಭವಾಗಿ ಯಾರೊಂದಿಗೂ ಹೇಳಿಕೊಳ್ಳುವುದಿಲ್ಲ ಎಂಬ ಪ್ರಶ್ನೆಗೆ ಉತ್ತರವಾಗಿ ಈ ಒಗಟಿನ ಮೂಲಕವೇ ಉತ್ತರಕೊಟ್ಟಿದೆ.

**'ಅವರವರ ಭಾವಕ್ಕೆ'** ಕಥೆಯಲ್ಲಿ ಸಮಿತಾ ಮತ್ತು ರಮೇಶ ದಂಪತಿಗಳು ತಮ್ಮ ಮನೆಯ ಮೇಲೆ ಬಾಡಿಗೆ ಕೊಡಲು ಒಂದು ಮನೆಯನ್ನು ಕಟ್ಟಿಸುತ್ತಾರೆ. ಬೇಕೆಂದೇದೇವರ ಮನೆ ಕಟ್ಟುವುದಿಲ್ಲ. ಬಾಡಿಗೆ ಬರುವವರು ದೇವರಲ್ಲಿ ನಂಬಿಕೆ ಉಳ್ಳವರೋ, ಇಲ್ಲವೋ ಅವರಿಷ್ಟದಂತೆ ಮಾಡಿಕೊಳ್ಳಲಿ ಎಂದು ಚರ್ಚಿಸುತ್ತಾರೆ. ಮೂರು ವರ್ಷಗಳಲ್ಲಿ ವರ್ಗವಾಗಿ ಹೋಗುವಂಥ ನೌಕರರು ಆ ಮನೆಯ ಬಾಡಿಗೆದಾರರಾಗಿ ಬರುತ್ತಾರೆ. ಮೊದಲು ಬಂದವರು ಸಂಪ್ರದಾಯಸ್ಥರು, ದೇವರಲ್ಲಿ ನಂಬಿಕೆ ಉಳ್ಳವರು ಅವರು ಅಡಿಗೆ ಮನೆಯಲ್ಲಿ ಒಂದು ಮೂಲೆಯಲ್ಲಿ ದೇವರ ಸ್ಥಳ ಸ್ಥಾಪಿಸಿಕೊಳ್ಳುತ್ತಾರೆ. ಎರಡನೆಯ ಬಾರಿ ಬಾಡಿಗೆಗೆ ಬಂದವರು ದೇವರಲ್ಲಿ ನಂಬಿಕೆ ಇಲ್ಲದವರು ಅವರು ಆ ಸ್ಥಳದಲ್ಲಿ ಕುಡಿಯುವ ಬಾಟಲುಗಳನಿಟ್ಟು ಬಾಗಿಲು ಮುಚ್ಚುತ್ತಾರೆ. ನಂತರ ಬಾಡಿಗೆಗೆ ಬಂದ ಜನ ಆ ಜಾಗದಲ್ಲಿ ಒಂದು ಪುಸ್ತಕವನ್ನಿಟ್ಟು ಅದರ ಮೇಲೆ ಒಂದು ಹೂವನ್ನಿಟ್ಟು ಪೂಜಿಸುತ್ತಾರೆ. ಅವರ ನಂತರ ಗಂಡ ಹೆಂಡತಿ ಮತ್ತು ಮಗು ಇರುವ ಪುಟ್ಟ ಸಂಸಾರ ಬಾಡಿಗೆಗೆ ಬರುತ್ತದೆ. ಅವರು ಯಾವ ಜಾತಿ ಧರ್ಮಕ್ಕೆ ಸೇರಿದವರೆಂದು ಹೇಳಿಕೊಳ್ಳುವುದಿಲ್ಲ. ಬದಲಾಗಿ ನಗುತ್ತಾ ಮಾತನಾಡಿ ಸುಮ್ಮನಾಗುತ್ತಾರೆ. ಅವರು ದೇವರ ಜಾಗದಲ್ಲಿದ್ದ ಮರದ ಕಟ್ಟೆಯನ್ನು ತೆಗೆದು ಬಿಡುತ್ತಾರೆ. ಮನೆಯೊಡತಿ ಸಮಿತಾ ಕುತೂಹಲ ತಡೆಯಲಾಗದೇ ಆ ಜಾಗದಲ್ಲಿ ಏನಿಟ್ಟಿದ್ದಾರೆಂದು ನೋಡಲು ಅಡಿಗೆ ಮನೆಗೆ ಹೋಗುತ್ತಾಳೆ. ಆ ತಾಯಿ ತನ್ನ ಮಗುವನ್ನು ಆ ಜಾಗದಲ್ಲಿ ಕೂಡಿಸಿ ಆಟವಾಡಿಸುತ್ತಾ ಅಡಿಗೆ ಮಾಡುತ್ತಿರುತ್ತಾಳೆ. ಎಲ್ಲರಿಗಿಂತ ಶ್ರೇಷ್ಠ ದೇವರು ಮಗುವೆಂದು ಭಾವಿಸಿ ಅರ್ಥಮಾಡಿಕೊಂಡ ಸಮಿತಾ ತಮಗೆ ಮಕ್ಕಳಿಲ್ಲದ ಕೊರಗನ್ನು ಮರೆತು ಆ ಮಗುವನ್ನು ಮುದ್ದಿಸುತ್ತಾಳೆ. ದೈವದ ನಂಬಿಕೆಯ ವಿಚಾರಗಳು ಅವರವರ ಭಾವಕ್ಕೆ ಬಿಟ್ಟಿದ್ದು ಎಂದು ಕಥೆಗಾರ್ತಿ ಅನೇಕ ನಿದರ್ಶನಗಳ ಮೂಲಕ ಸ್ಪಷ್ಟವಾಗಿ ಎಳೆ ಎಳೆಯಾಗಿ ಬಿಡಿಸಿತೋರಿಸಿದ್ದಾರೆ.

**'ತೆರೆಯದ ಪುಟಗಳು'** ಕಥೆಯಲ್ಲಿ ಮೂರು ತಲೆಮಾರುಗಳಲ್ಲಿ ಹಂಚಿಕೊಂಡಿರುವ ಸ್ತ್ರೀ ಸಮುದಾಯದ ಭಾವನೆಗಳ ಎರಕವಿದೆ. ರಾಜತ್ತೆಯ ಮನೆಯ ಸಮಾರಂಭಗಳಲ್ಲಿ ಸೇರುವ ಎಲ್ಲ ವಯಸ್ಸಿನ ಹೆಣ್ಣು ಮಕ್ಕಳ

*– 84ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಆಟೋರಿಕ್ಷಾ ಹಿಂಬರಹಗಳು

✍ **ಡಾ. ಜ್ಯೋತಿ ಕೆ.ಬಿ,** ಸಹಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ.

ಪ್ರಸಿದ್ಧ ಕಾದಂಬರಿಕಾರ ಡಿ. ಎಚ್. ಲಾರೆನ್ಸರು ಹೇಳುವಂತೆ ಬಂಡವಾಳಶಾಹಿ ಪ್ರಪಂಚದ ಆಕರ್ಷಣೆಗೆ ಒಳಗಾಗಿ ಕೆಳವರ್ಗದ ಜನರು ತಮ್ಮ ಸುತ್ತಮುತ್ತ ಪ್ರಬಲವಾಗಿರುವ ವಿಚಾರ ಸಿದ್ಧಾಂತಗಳ ಪ್ರಭಾವಕ್ಕೆ ಒಳಗಾಗಿ ಕೊನೆಯಿಲ್ಲದ ಆನಂದವನ್ನು ಅನುಭವಿಸುತ್ತಾರೆ. ಪ್ರಚಲಿತ ಸಿದ್ದಾಂತಗಳ ಪಡಿಯಚ್ಚುಗಳನ್ನು ಬಳಸುತ್ತಾರೆ.ಇಂತಹ ಅಭಿಪ್ರಾಯಕ್ಕೆ ವಿರುದ್ಧವಾಗಿ ಪ್ರಸಿದ್ಧ ಮಾರ್ಕ್ಸವಾದಿ ವಿಮರ್ಶಕ ಹೊಗ್ಗಾರ್ಟ್ ವಾದಿಸುತ್ತಾ, "ಪ್ರತೀ ವರ್ಗವು ಪ್ರಬಲ ಸಿದ್ದಾಂತಗಳಿಗೆ ವಿಭಿನ್ನವಾಗಿ ಸ್ಪಂದಿಸುತ್ತದೆ ಮತ್ತು ಅವುಗಳಿಗೆ ಎದುರಾಗಿ ತನ್ನದೇ ಆದ ಸಾಂಸ್ಕೃತಿಕ ರೂಪ ಹಾಗು ಆಕಾರಗಳನ್ನು ಆಳವಡಿಸಿಕೊಂಡಿರತ್ತದೆ. ಪ್ರಚಲಿತ ವಿಚಾರ ಸಿದ್ದಾಂತಗಳು ಎಷ್ಟೇ ಆಕರ್ಷಣೀಯವಾಗಿದ್ದರು, ಅವುಗಳನ್ನು ಕುರುಡಾಗಿ ನಕಲು ಮಾಡುವುದಿಲ್ಲ," ಎಂದು ಹೇಳುತ್ತಾರೆ.

ಇಂದಿನ ಜಾಗತೀಕರಣ, ಆಧುನೀಕರಣ, ವಾಣಿಜ್ಯೀಕರಣ, ಬಹುಸಂಸ್ಕೃತಿಯ ಕಾಲಘಟ್ಟದಲ್ಲಿ, ಈ ಮೇಲಿನ ವಾದಗಳಲ್ಲಿ ಯಾವುದು ಸೂಕ್ತವಾಗಿದೆ ಎನ್ನುವುದನ್ನು ಪತ್ತೆ ಹಚ್ಚಲು ಹಾಗೂ ಇಂದಿನ ದಿನಮಾನಗಳಲ್ಲಿ ವಿವಿಧ ವರ್ಗಗಳು ಯಾವ ರೀತಿಯ ಸಾಂಸ್ಕೃತಿಕ ಆಕಾರಗಳನ್ನು, ಹಾಗೂ ರೂಪಗಳನ್ನು ಪಡೆದಿವೆ ಎನ್ನುವ ಅಧ್ಯೆಯನ ನೆಡೆಸಲು ಆಟೋ–ರಿಕ್ಷಾಗಳನ್ನು ಓಡಿಸುವ ಚಾಲಕರ ಹಿಂಬರಹಗಳನ್ನು ಆಯ್ದುಕೊಳ್ಳಲಾಯಿತು. ರೇಮಂಡ್ ವಿಲಿಯಂನ್ ಪ್ರಕಾರ ಸಂಸ್ಕೃತಿ ಎಂದರೆ ಒಂದು ಸಮೂಹದ ಜೀವನದ ಶೈಲಿ ಅಥವಾ ವಿಧಾನ ಅಥವ ವ್ಯವಸ್ಥೆಯಾಗಿರುತ್ತದೆ. ಈ ಜೀವನ ಶೈಲಿ ಆ ಸಂಸ್ಕೃತಿಯ ಮೌಲ್ಯಗಳು ಮತ್ತು ಅರ್ಥಗಳನ್ನು ವಿವರಿಸುತ್ತದೆ. ಇಂಥಹ ಸಂಸ್ಕೃತಿಯನ್ನು ನಾವು ಆ ಸಂಸ್ಕೃತಿಯಿಂದ ಹೊರಬಂದಿರುವ ಸಾಹಿತ್ಯದಲ್ಲಿ ಹಾಗೂ ಉತ್ಪನ್ನಗಳಲ್ಲಿ ಕಂಡುಹಿಡಿಯಬಹುದಲ್ಲದೆ ಆ ಸಂಸ್ಕೃತಿಯ ಸಾಧಾರಣ ಜೀವನದಲ್ಲಿಯೂ ಕಂಡು ಹಿಡಿಯಬಹುದಾಗಿದೆ. ಆಟೋ ಚಾಲಕರ ಅಭಿವ್ಯಕ್ತಿಗಳು ಕೂಡಾ ಸಂಸ್ಕೃತಿಯಿಂದ ಹೊರಬಂದಂತಹ ಉತ್ಪನ್ನಗಳೇ ಆಗಿವೆ. ಹಾಗಾಗಿ ಅವು ತನ್ನದೇ ವರ್ಗದ ಸಂಸ್ಕೃತಿಯನ್ನು ಬಿಂಬಿಸುತ್ತದೆ.

ಯಾವುದೆ ರೀತಿಯ ಸಾರ್ವಜನಿಕ ಅಭಿವ್ಯಕ್ತಿ, ಸಮಕಾಲಿನ ಪ್ರಪಂಚದಲ್ಲಿ ಒಂದು ಪ್ರತಿನಿಧೀಕರಣ, ಅಸ್ಥಿತ್ವದ ಗುರುತು, ಅರ್ಥದ ಉತ್ಪಾದನೆ ಹಾಗು ಪ್ರಸರಣೆ ಆಗುತ್ತದೆ, ಈ ಅಧ್ಯಯನದಲ್ಲಿ ಆಟೋಚಾಲಕರ ಅಭಿವ್ಯಕ್ತಿಯ ಮುಖಾಂತರ ಆ ವರ್ಗದ ಸಂಸ್ಕೃತಿಯ ಆಕಾರವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.ಸುಮಾರು 30 ಆಟೋರಿಕ್ಷಾಗಳ ಹಿಂಬರಹಗಳನ್ನು ನಮ್ಮ ಊರಿನ ಆಟೋಗಳಲ್ಲಿ ಗುರುತಿಸಿ, ಸಂಗ್ರಹಿಸಲಾಯಿತು. ಹಾಗೆಯೆ ಕೆಲವನ್ನು https://kannada.drivespeak.com ಹಾಗೂ https://quotestats.com ವೆಬ್‌ಸೈಟ್‌ಗಳಲ್ಲಿ ಸಂಗ್ರಹಿಸಲಾಯಿತು. ಈ ವೆಬ್‌ಸೈಟ್‌ಗಳು ನಮಗೆ ಕನ್ನಡದಲ್ಲಿ ಇರುವ ಹೆಸರು ವಾಸಿ ಆಟೋ ಹಿಂಬರಹಗಳನ್ನು ಗುರುತಿಸಿಕೊಟ್ಟವು.

ಮೊದಲಿಗೆ ಹೆಚ್ಚಿನ ಸಂಖ್ಯೆಯ ಬರಹಗಳು ಮೂಲ ಅವಶ್ಯಕತೆಗಳ (ಆಹಾರ, ಆಶ್ರಯ, ನಿದ್ದೆ, ಕುಡಿಯುವ ನೀರು) ಶ್ರೇಣಿಯನ್ನು ದಾಟಿ ಪ್ರೀತಿ, ಪ್ರೇಮ, ಮದುವೆ ಹಾಗೂ ಹಣ ಇವುಗಳ ಬಗೆಗ ಇದೆ. ಮಾನವ ಜನಾಂಗಕ್ಕೆ ಎತ್ತರದ ಸ್ಥರದ ಬೌದ್ಧಿಕ ಸಾಮರ್ಥ್ಯ, ಯೋಗ್ಯತೆ ಹಾಗು ಮನಶಕ್ತಿ ಇದೆ. ಹಾಗಾಗಿ ಆತನ ಅವಶ್ಯಕತೆಗಳು ಮೂಲಭೂತ ಅವಶ್ಯಕತೆಯ ಪೂರೈಕೆಯ ನಂತರ ಪ್ರೀತಿ, ಪ್ರೇಮ, ಸ್ನೇಹ, ರಕ್ಷಣೆ, ಸಂಬಂಧಗಳ ನಿರೀಕ್ಷೆಯತ್ತ ಸಾಗುತ್ತದೆ. ಹಾಗೆಯೆ ಇವು ಕೂಡ ಪೂರೈಕೆಯಾದರೆ ಮಾನವ ಕ್ರಿಯಾತ್ಮಕತೆ, ಆತ್ಮಸಂತೋಷ, ಸಾಹಸ, ಖಾಸಗಿತನ, ತನ್ಮಯತೆ, ಸ್ವಇಚ್ಛೆ, ಗೌರವಗಳಿಗಾಗಿ ಸ್ಥಳಾವಕಾಶ ನಿರೀಕ್ಷಿಸುತ್ತಾನೆ. ಇದು ಮೊಸಲೊವ್ನ ಹೈರಾರ್ಕಿ ಆಫ್ ನೀಡ್ಸನ ಅನುಕ್ರಮಣಿಯಕೆ. ಈ ಶ್ರೇಣಿಯು ಮೇಲು ಶ್ರೇಣಿಯಲ್ಲಿರುವ ವ್ಯಕ್ತಿ ತನ್ನ ಎಲ್ಲಾ ಕ್ರಿಯಾತ್ಮಕತೆ, ತರ್ಕ ಸಾಮರ್ಥ್ಯ, ಗ್ರಹಿಕೆ, ಯೋಗ್ಯತೆ, ನೆನಪು, ಮನಶ್ಶಕ್ತಿ, ಅಂತರ್‌ದೃಷ್ಠಿ, ಕೊನೆಯಿಲ್ಲದ ಜಾಣ್ಮೆ, ಜ್ಞಾನ ಹಾಗೂ ಪ್ರಜ್ಞೆಯನ್ನು ಉಪಯೋಗಿಸಬಲ್ಲವನಾಗಿ ಸಂಪೂರ್ಣ ಮಾನವತೆಯ ಸಿಹಿಯನ್ನು ಅನುಭವಿಸುತ್ತಾನೆ. ಇಂತಹ ಮಾನವ ವ್ಯವಸ್ಥೆಯಲ್ಲಿ ಈ ಆಟೋ ಹಿಂಬರಹಗಳು ಎಲ್ಲಿ ನಿಲ್ಲುತ್ತವೆ ಎಂದು ವಿಶ್ಲೇಷಿಸೋಣ.

ಅಟೋ ಹಿಂಬರಹಗಳು ಎರಡನೆಯ ಹಂತವಾದ ಪ್ರೀತಿ, ಪ್ರೇಮ, ಸ್ನೇಹ, ಸಂಬಂಧಗಳ ಮಟ್ಟದಲ್ಲಿ ಸಿಲುಕಿ ಹಾಕಿಕೊಂಡು ಹೆಣಗಾಡುತ್ತಾ ಪ್ರಯಾಸಪಡುತ್ತಿರುವಂತಿದೆ. ಮಾನವ ಜೀವಿಯ ಅತ್ಯುನ್ನತ ಶಕ್ತಿಗಳಾದ ಶಕ್ತಿ, ಸಾಮರ್ಥ್ಯ, ಯೋಗ್ಯತೆ, ಪ್ರಾಣ, ಹೃದಯ, ಉಸಿರುಗಳನ್ನು ಪ್ರೀತಿ, ಸ್ನೇಹಗಳನ್ನು ಹೊಂದಲು ಶರಣಾಗಿಸಲು ತಯಾರಾಗಿದ್ದಾನೆ. ಒಂದು ಆಟೋ ಹಿಂಬರಹ ಹೀಗೆ ಬರೆದಿರುತ್ತದೆ.

**"ಮನಸ್ಸಿಗೆ ಬಂದ ಹುಡುಗಿಗೆ**
**ಹೃದಯದಲ್ಲಿ ಜಾಗ ಕೊಟ್ಟು**
**ಹಾಳಾದ ಪ್ರೀತಿಗೆ ಹೃದಯವನ್ನು ಉಸಿರಾಗಿಟ್ಟು**
**ಕಾಯುವೆ ಗೆಳತಿ ನಿನ್ನ ಪ್ರೀತಿಗೆ**
**ನನ್ನ ಪ್ರಾಣವನ್ನು ಮುಡಿಪಾಗಿಟ್ಟು"**

**"ಮುಳ್ಳು ಇಲ್ಲದೆ ಗುಲಾಬಿ**
**ಬೆಳೆದೋರ‍್ಯಾರು,**
**ನೋವಿಲ್ಲದ ಪ್ರೀತಿ ಪಡೆದೋರ‍್ಯಾರು"**

ಪ್ರೀತಿ ಎಂದರೆ ನೋವು, ಪ್ರೀತಿಯೇ ಜೀವನದ ಅಂತಿಮ ಗುರಿ, ಕೊನೆಯ ಆಸೆ ಎಂದು ಹೇಳಲಾಗಿದೆ. ಪ್ರೀತಿಗಾಗಿ ಜೀವವನ್ನೇ ಮುಡುಪಾಗಿಡಲು ತೀರ್ಮಾನಿಸಲಾಗಿದೆ, ಒಂದು ಹಿಂಬರಹ ಹೀಗೆ ಹೇಳುತ್ತದೆ.

**"ಪ್ರೀತಿ ಎಂದರೆ ಅಷ್ಟೇ**
**ಬಿಟ್ಟು ಬದುಕುವ ಶಕ್ತಿ ಇರಲ್ಲ**
**ಜೊತೆಯಲ್ಲಿ ಇರೋಕೆ ಅದೃಷ್ಟ ಇರಲ್ಲ"**

**"ಪ್ರೀತಿ ಹಾಗು ನೋವನ್ನು ಸಮಾನವಾಗಿ ನೋಡಲಾಗಿದೆ,**
**ಮುಳ್ಳು ಇಲ್ಲದೆ ಗುಲಾಬಿ ಬೆಳೆದೋರ‍್ಯಾರು ನೋವಿಲ್ಲದ**
**ಪ್ರೀತಿ ಪಡೆದೋರ‍್ಯಾರು ?"**

ಸಮಕಾಲಿನ ಭಾರತದಲ್ಲಿ ವ್ಯಕ್ತಿಯೊಬ್ಬನ ಮೂಲಭೂತ ಅವಶ್ಯಕತೆಗಳಾದ ಆಹಾರ, ಆಸರೆಗಳನ್ನು ಪೂರೈಸಲು ಸರ್ಕಾರದ ಪಡಿತರ ವ್ಯವಸ್ಥೆಯೋ, ಕುಟುಂಬವೋ, ಸಾಮಾಜ ಕಲ್ಯಾಣ ಸಂಸ್ಥೆಗಳ ಆಶ್ರಯವೋ ಪೂರೈಸಬಲ್ಲದು. ಆದರೆ ಲೈಂಗಿಕ ಅವಶ್ಯಕತೆಗಳಿಗೆ ಮಾತ್ರ ವ್ಯಕ್ತಿಯೊಬ್ಬ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತನ್ನ ವೈಯಕ್ತಿಕ ಯೋಗ್ಯತೆಯ ಮೇಲೆಯೇ ಅವಲಂಬಿತವಾಗಬೇಕಾಗುತ್ತದೆ. ಈ ಅವಶ್ಯಕತೆಯನ್ನು ಪೂರೈಸಲು ಸಮಾಜದ ಹಲವು ಬೇಡಿಕೆಗಳನ್ನು, ಕಟ್ಟುಪಾಡುಗಳನ್ನು ಪೂರೈಸಬೇಕಾಗುತ್ತದೆ. ಅದು ಜಾತಿ, ಧರ್ಮ, ಪಂಗಡಗಳು ನೀತಿ-ನಿಯಮಗಳಾಗಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಸಮಾಜವು ಒಬ್ಬ ಪುರುಷನಲ್ಲಿ ಮದುವೆಯಾದ ಹುಡುಗಿಯನ್ನು ಸಾಕುವ ಮಟ್ಟ, ಆರ್ಥಿಕ ಸೌಲಭ್ಯ, ಮಕ್ಕಳನ್ನು ಸಲಹುವ, ವಿದ್ಯೆ ನೀಡುವ, ಆರೋಗ್ಯ ಕೊಡಬಲ್ಲಂಥ ಆರ್ಥಿಕ ಸಬಲತೆಯನ್ನು ನಿರೀಕ್ಷಿಸುತ್ತದೆ. ಗಂಡಿಗೆ ಹೆಣ್ಣೊಬ್ಬಳು ಸಾಮಾಜಿಕ ವಸ್ತು. ಹಾಗೆಯೇ ಹೆಣ್ಣಿಗೆ ಗಂಡು ಕೂಡ. ಹಾಗೆಯೇ ಸಮಾಜವು ಹೆಣ್ಣಿಗೆ, ಮಕ್ಕಳನ್ನು ಹೆರುವ, ಹೊರುವ, ಕುಟುಂಬವನ್ನು ಸಾಕುವ, ಸಲುಹುವ ಜವಾಬ್ದಾರಿಯನ್ನು ನಿರೀಕ್ಷಿಸುತ್ತದೆ.

ಇಂತಹ ಸಾಮಾಜಿಕ ಕಟ್ಟುಪಾಡುಗಳನ್ನು ಗೆಲ್ಲುವಲ್ಲಿ ಆಟೋ ಚಾಲಕರು ಸಿಲುಕಿ ಹಾಕಿಕೊಂಡಿದ್ದಾರೆ ಅನ್ನುವ ವಿಷಯ ಈ ಹಿಂಬರಹಗಳಲ್ಲಿ ಪ್ರತಿಧ್ವನಿಸುತ್ತಿದೆ. ಆಟೋಚಾಲಕರ ಕನಿಷ್ಠ ಆರ್ಥಿಕ ಪರಿಸ್ಥಿತಿ, ಸಮಾಜದ ಜಾತಿ ಪಂಗಡ, ಧರ್ಮಗಳ ಕಟ್ಟುಪಾಡು, ಹೆಣ್ಣು ಮಕ್ಕಳ ಆಯ್ಕೆ ಸ್ವಾತಂತ್ರ್ಯ, ಆಟೋ ಚಾಲಕರನ್ನು ಇಂತಹ ಇಕ್ಕಟ್ಟಿನ ಪರಿಸ್ಥಿತಿಗೆ ತಳ್ಳಿರಬಹುದು. ಹಲವಾರು ಕಾರಣಗಳ ಈ ಗಲಿಬಿಲಿಯಲ್ಲಿ ಕೆಲವು ಆಟೋ ಚಾಲಕರನ್ನು ತಮ್ಮನ್ನು ತಾವು ದುರಾದೃಷ್ಟವಂತರು ಎಂದು ಹತಾಷೆ, ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಯಾರು ಇದಕ್ಕೆಲ್ಲಾ ನೇರ ಕಾರಣ ಎಂದು ಗುರುತಿಸುವಲ್ಲಿ ಅವರಿಗೆ ಅಸ್ಪಷ್ಟತೆ ಹಾಗು ಗಲಿಬಿಲಿ ಉಂಟಾಗಿರುತ್ತದೆ.

**"ಕಾಯುವೆ ಗೆಳತಿ ನಿನ್ನ ಪ್ರೀತಿಗೆ,**
**ನನ್ನ ಪ್ರಾಣವನ್ನು ಮುಡಿಪಾಗಿಟ್ಟು"**

ಕೆಲವು ಹಿಂಬರಹಗಳು ಪ್ರೀತಿಯ ಸ್ವರೂಪ, ವಿನ್ಯಾಸ, ಹಾಗು ತೀವ್ರತೆಯ ಬಗ್ಗೆ ಮಾತನಾಡಿವೆ.

**"ಪ್ರೀತಿಗಾಗಿ ಪ್ರಾಣ ಕೊಡುವುದು ಕಷ್ಟವಲ್ಲ,**
**ಪ್ರಾಣಕೊಡುವಂಥ ಪ್ರೀತಿ ಸಿಗೋದು ಕಷ್ಟ"**

ಈ ಬರಹಗಳು ಆದರ್ಶ ಪ್ರೀತಿಯನ್ನು ಹಂಬಲಿಸಿದರೆ, ಹೆಚ್ಚು ಸಂಖ್ಯೆಯ ಬರಹಗಳು ಬೌತಿಕ ಮಟ್ಟದ ದೈಹಿಕ ಸಂಬಂದ, ಮದುವೆಯ ಸಾಮಾಜಿಕ ಅವಶ್ಯಕತೆಯ ಚರ್ಚೆಯಲ್ಲಿಯೇ ಮುಗಿದುಹೋಗುತ್ತದೆ.

ಕೆಲವು ಹಿಂಬರಹಗಳು ತಮ್ಮ ಅಸಹಾಯಕತೆಗೆ ಹಾಗು ಸಂಕಟಕ್ಕೆ ಹೆಣ್ಣನ್ನೇ ನೇರ ಕಾರಣವೆಂದು ಆಕೆಯನ್ನು ನಿಂದಿಸುವ, ನಿರ್ದೇಶಿಸುವ ಹಾಗು ಆಡಿಕೊಂಡು ವ್ಯಂಗ್ಯ ಮಾಡುವ ಹಿಂಬರಹಗಳಾಗಿವೆ.

**"ಮಾತನಾಡಿಸಿ ಮರೆಯಬೇಡ**
**ಮನಸ್ಸು ಕೊಟ್ಟು ನೋಯಿಸಬೇಡ"**

ಹೆಣ್ಣಿನೊಂದಿಗೆ ಸಂಬಂಧ ಪಾಪವೆಂಬ ಹಾಗು ನಷ್ಟವೆಂಬ ಬಿಂಬಗಳು ಈ ಹಿಂಬರಹಗಳಲ್ಲಿವೆ.

**"ಮಚ್ಚಲ್ಲಿ ಹೊಡುದ್ರೆ ಒಂದೇ ಏಟು**
**ಲವ್ವಲ್ಲಿ ಬಿದ್ರೆ ಬದುಕೋದೆ ದೌಟು"**

**"ಹಾಕ್ರೆ ಮೈತುಂಬಾ ಬಟ್ಟೇನ**
**ಉಳುಸ್ರೇ ಹುಡುಗರು ಜೈಲಿಗೆ ಹೋಗೋದನ್ನ"**

ಪ್ರೀತಿಯ ವಿವಿಧ ಆಯಾಮಗಳಾದ ಆತ್ಮರತಿ, ಸಾತ್ವಿಕ ಪ್ರೀತಿ, ಆಧ್ಯಾತ್ಮಿಕ ಪ್ರೀತಿ, ಉದಾರ ಪ್ರೀತಿಗಳನ್ನು ಗೌಣಮಾಡಿ ಪ್ರೀತಿ-ಪ್ರೇಮ-ಮದುವೆಯನ್ನು ಪರಿಗಣಿಸುವ ಸಾಮಾಜಿಕ ಮಾದರಿಯ ಮೇಲೆ ಮಾತ್ರ ಬೆಳಕು ಚೆಲ್ಲಲಾಗಿದೆ. ಪ್ರೀತಿಯ ಎಲ್ಲಾ ಬಣ್ಣಗಳನ್ನು ಒಂದೇ ರೂಪದಲ್ಲಿ-ಅಂದರೆ ಸಮಾಜದಲ್ಲಿ ಮಾನ್ಯ ಮಾಡಲಾದ ಮಾದರಿಯಲ್ಲಿಯೇ ನೋಡಲಾಗಿದೆ.

ಪ್ರೀತಿ ಪಡೆದುಕೊಳ್ಳುವ ಹಾದಿಯಲ್ಲಿ ಆಟೋ ಚಾಲಕರ ಸಾಮಾನ್ಯ ಶತ್ರುಗಳು ಯಾಕೆಂದರೆ ಪ್ರೀತಿಸಿದ ಹುಡುಗಿಯ ಅಪ್ಪ, ಅಣ್ಣ, ಆಕೆಯ ಕುಟುಂಬ, ಹಾಗೂ ಸ್ವತಃ ಹುಡುಗಿಯೇ. ಒಂದು ಹಿಂಬರಹ ಹೀಗಿದೆ:-

**"ಗಾಡಿಯಲ್ಲಿ ಬಿದ್ದೆ ಅಂತ**
**ಬೈಕು ಓಡ್ಸದೆ ಇರೋಕಾಗಲ್ಲ**
**ಹುಡ್ಗೀಗೆ ಅಣ್ಣ ಇದ್ದಾನೆ ಅಂತ**
**ಲವ್ ಮಾಡದೆ ಇರೋಕ್ ಆಗಲ್ಲ,**

**ಹುಟ್ಟೋ ಸೂರ್ಯನ್ನ ಮುಟ್ಟೋಕಾಗಲ್ಲ**
**ಪ್ರೀತ್ಸೋ ಹುಡ್ಗೀನ ಮರಿಯೋಕಾಗಲ್ಲ"**

ಒಂದು ಹುಡ್ಗಿಯನ್ನು ಒಲಿಸಿಕೊಳ್ಳುವುದು ಪ್ರಳಯವಾದಷ್ಟೇ ಕಷ್ಟವೆಂದು ಒಂದು ಹಿಂಬರಹ ಹೇಳುತ್ತದೆ,

**"ಭೂಮಿ ನಕ್ಕರೆ ಪ್ರಳಯ**
**ನೀ ನಕ್ಕರೆ ನಿಮ್ಮಪ್ಪನಿಗೆ ನಾ ಅಳಿಯ"**

ಮಹಿಳೆಯ ಆಯ್ಕೆ ಸ್ವಾಂತಂತ್ರವನ್ನು ಎತ್ತಿ ಹಿಡಿಯುವ ಸಂವಿಧಾನ ಹಾಗೂ ಪ್ರಬಲ ಕಾನೂನು ಸುವ್ಯವಸ್ಥೆ ಪುರುಷನ ಆಯ್ಕೆಯನ್ನು ಕಡಿವಾಣದಲ್ಲಿರಿಸಿದೆ. ಪ್ರಚಲಿತ ಜಾತಿ ವ್ಯವಸ್ಥೆ ಹಾಗೂ ಸಂಪ್ರದಾಯಗಳಲ್ಲಿ ತನ್ನ ಇಚ್ಛೆಯ ಹೆಣ್ಣನ್ನು ಹಾಗೂ ಪ್ರೀತಿಯನ್ನು ಪಡೆಯುವುದು ಆಟೋ ಚಾಲಕರಿಗೆ ಕಷ್ಟವಾಗಿದೆ. ಹಾಗಾಗಿ ಅವರು ಹೆಣ್ಣನ್ನು ತನ್ನ ಆಯ್ಕೆ ಸ್ವಾತಂತ್ರ್ಯವನ್ನು ಜಾತಿ ಧರ್ಮದ ಭಯಕ್ಕೆ ಸಿಲುಕದೆ ಮುಕ್ತ ಆಯ್ಕೆ ಮಾಡಲು ಉತ್ತೇಜಿಸಿದ್ದಾರೆ.

ಪ್ರೀತಿಯ ಹಾದಿಯಲ್ಲಿ ಬಂದಿರುವ ಹಲವಾರು ಅಡೆತಡೆಗಳಿಗೆ ಆಟೋ ಚಾಲಕರು ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಾರೆ. ಕೆಲವರು ಪ್ರೀತಿಗೋಸ್ಕರ ಕಾಯುತ್ತಲೇ ಮುದುಕರಾಗುತ್ತಿದ್ದರೆ, ಕೆಲವರು ಪ್ರೀತಿಯನ್ನು ಕಲ್ಪನಾ ಲೋಕದಲ್ಲಿ ಪಡೆದು ಸಿಹಿ ಕನಸಿನಲ್ಲಿಯೇ ಮುಗಿಸಿದ್ದಾರೆ.

ಕೆಲವರಿಗೆ ಪ್ರೀತಿ ಮನಸ್ಸಿನ ವಿಷಯವೋ, ಹೃದಯದ ವಿಷಯವೋ ಅಥವಾ ದೇಹಕ್ಕೆ ಸಂಬಂಧಿಸಿದ ಉದ್ದೇಶವೋ ಗೊತ್ತಿಲ್ಲ. ಈ ಗಲಿಬಿಲಿಯಲ್ಲಿ ಸ್ನೇಹವು ಪ್ರೀತಿಯ ತರಹವೇ ಕಂಡಿದೆ.

ಒಂದು ಹಿಂಬರಹ ಈ ರೀತಿ ಇದೆ –

**"ಸ್ನೇಹಕ್ಕೆ ಬೇಕು ಮನಸ್ಸು**
**ಮನಸ್ಸಿಗೆ ಬೇಕು ಪ್ರೀತಿ**
**ಪ್ರೀತಿಗೆ ಬೇಕು ಹೃದಯ**
**ಹೃದಯಕ್ಕೆ ಬೇಕು ಒಲವು**
**ಒಲವಿಗೆ ಬೇಕು ನಮ್ಮಂಥ ಸ್ನೇಹಿತರು"**

ತಮ್ಮ ಸಂಕಟಕ್ಕೆ ಆರ್ಥಿಕ ಪರಿಸ್ಥಿತಿಯೇ ಕಾರಣಯನ್ನುವ ತೀರ್ಮಾನವನ್ನು ಹಲವಾರು ಹಿಂಬರಹಗಳು ಒತ್ತಿ ಹೇಳುತ್ತವೆ. ತಮ್ಮ ಆರ್ಥಿಕ ಸ್ಥಿತಿ ಸುಧಾರಣೆಗೆ ಎಲ್ಲಾ ನೀತಿ ನಿಯಮಗಳನ್ನು, ಮೌಲ್ಯಗಳನ್ನು, ಅಂತ ಸಾಕ್ಷಿಯನ್ನು ಗಾಳಿಗೆ ತೂರಿಬಿಡುವ ಮನಸ್ಥಿತಿಗೆ ಹಲವು ಚಾಲಕರು ಬಂದಿದ್ದಾರೆ.

**ಪಾಪ ಪುಣ್ಯ ಪಂಡರಾಪುರದಲ್ಲಿ**
**ಧರ್ಮ ಕರ್ಮ ಪುಸ್ತಕದಲ್ಲಿ**
**ದುಡ್ಡಿದ್ರೆ ದುನಿಯಾ ಬೆಂಗ್ಳೂರ್ನಲ್ಲಿ**

ಯಾವುದೇ ವಿಚಾರ ಸಿದ್ಧಾಂತ, ಪ್ರಾಮುಖ್ಯತೆಗೆ ಬರಬೇಕಾದರೆ ಒಂದು ಸೂಕ್ತವಾದ ಸನ್ನಿವೇಶ ಹಾಗೂ ಪರಿಸ್ಥಿತಿಗಳಿರಬೇಕು. 19 ಹಾಗು 20ನೇ ಶತಮಾನಗಳಲ್ಲಿ, ನಗರೀಕರಣ ಹಾಗು ಕೈಗಾರಿಕರಣದಿಂದ ಮಧ್ಯಮ ವರ್ಗದ ಸೃಷ್ಟಿಯಾಯಿತು. ಅದರಿಂದಲೇ ಆರ್ಥಿಕ ವ್ಯವಸ್ಥೆ, ತರ್ಕ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬದ್ಧವಾದ ವೈಜ್ಞಾನಿಕ ಲೆಕ್ಕಾಚಾರ, ತರ್ಕ, ಹಾಗೂ ಸಂವಹನ ಪ್ರಾರಂಭವಾಯಿತು. ಇಂತಹ ಲೆಕ್ಕಾಚಾರದ ವ್ಯವಸ್ಥೆಗೆ ಸರಿಹೊಂದುವಂತಹ ವಿಚಾರ ಸಿದ್ಧಾಂತಗಳಾದ ಬಂಡವಾಳಶಹಿ ವ್ಯವಸ್ಥೆ ಹಾಗೂ ಕಮುಯನಿಸಂ ಅಭಿವೃದ್ಧಿಯಾದವು. ಬಂಡವಾಳಶಾಹಿ ವ್ಯವಸ್ಥೆ ವ್ಯಕ್ತಿಯ ವೈಯಕ್ತಿಕ ಹಿತ ಹಾಗು ಖಾಸಗಿ ಸಂಪತ್ತನ್ನು ಹೊಂದುವ ಎಲ್ಲಾ ವಾದಗಳನ್ನು ತರ್ಕಬದ್ದವಾಗಿ ಮಂಡಿಸಿದರೆ, ಕಮ್ಯೂನಿಸ್ಟ್ ವ್ಯವಸ್ಥೆ, ಸಾಮಾಜಿಕ ಸಂಪನ್ಮೂಲಗಳ ವ್ಯವಸ್ಥೆಯ ವಾದವನ್ನು ತರ್ಕವಾಗಿ ಮಂಡಿಸಿದರು. ಎರಡು ವಿಚಾರ ಸಿದ್ಧಾಂತಗಳಿಗೂ ಸಾಕಷ್ಟ ವಾದ ಹಾಗೂ ಸಾಕ್ಷಿಗಳು ಲಭ್ಯ ಇವೆ. ಹಲವಾರು ದೇಶಗಳು ಈ ವಿಚಾರ ಸಿದ್ಧಾಂತಗಳಿಂದ ಪ್ರಭಾವಿತವಾಗಿ ತಮಗೆ ಬೇಕಾದ ಸಿದ್ಧಾಂತವನ್ನು ಆಯ್ಕೆಮಾಡಿಕೊಂಡವು. ವ್ಯಾಪಾರ, ವಾಣಿಜ್ಯ, ತರ್ಕ ಮುನ್ನೆಲೆಗೆ ಬಂದಾಗ ಕ್ಯಾಪಿಟಲಿಸಂ ಮತ್ತು ಸಕುಯನಿಸಂನಂತಹ ತಾರ್ಕಿಕ ವಿಚಾರ ಸಿದ್ಧಾಂತಗಳು ಪ್ರಬಲವಾದವು. ಪ್ರಸ್ತುತ ಇಪ್ಪತ್ತೊಂದನೆಯ ಶತಮಾನ ಕೈಗಾರಿಕರಣ ಹಾಗೂ ಜಾಗತೀಕರಣ ಫಲಿತಗಳನ್ನು ಉಣ್ಣುವ ಕಾಲ ಈಗ ಭೋಗವಾದ ಅಥವಾ ಸುಖವಾದ ಮುನ್ನೆಲೆಗೆ ಬಂದಿದೆ.

ಪ್ರಾಚೀನ ಸಮಾಜಗಳಲ್ಲಿ ನಂಬಿಕೆ, ವಿಶ್ವಾಸಗಳು ಪ್ರಮುಖವಾಗಿದ್ದಾಗ ಸಾಮ್ರಾಜ್ಯಶಾಹಿ ವಿಚಾರ ಸಿದ್ಧಾಂತಗಳು ಪ್ರಚಲಿತವಾಗಿದ್ದವು. 19 ಮತ್ತು 20ನೇ ಶತಮಾನದಲ್ಲಿ ಎಲ್ಲಾ ವಿಚಾರ ಸಿದ್ಧಾಂತಗಳೂ ಮೂಲದಲ್ಲಿ ತರ್ಕ ಅಥವ ವಾದದ ಉತ್ಪನ್ನಗಳೇ ಆಗಿವೆ. 21ನೇ ಶತಮಾನದಲ್ಲಿ ಪ್ರಚೇಂದ್ರಿಯಿಗಳ ಸಂತೋಷ, ಆರಾಮಗಳಿಗೆ ಒತ್ತು ಸಿಕ್ಕಿ ತರ್ಕ, ವಿಶ್ವಾಸ, ಭರವಸೆ, ಪಾಪ ಪುಣ್ಯಗಳು ಹಿಂದೆ ಸರಿದಿವೆ. ದೇಹದ ಇಂದ್ರಿಯಾಸಕ್ತಿಗಳೇ ಪ್ರಮುಖವಾಗಿವೆ.

ಇಂತಹ ವ್ಯವಸ್ಥೆಗೆ ಹಣ ಬೇಕು. ಹೆಚ್ಚಿನ ಹಿಂಬರಹಗಳು ಹಣದ ಪ್ರಾಮುಖ್ಯತೆಯ ಬಗ್ಗೆ ಮಾತಾಡಿವೆ. ಯಾವ ತರ್ಕವೂ ಇಂತಹ ಪ್ರವೃತ್ತಿಯನ್ನು ಬಿಡಿಸಲಾಗಿಲ್ಲ, ಒಂದು ಹಿಂಬರಹ ಹೀಗಿದೆ–

**"ಹಣ ಇದ್ದರೆ ಸತ್ತ ಪ್ರೇಯಸಿಗೆ**
**ತಾಜ್‌ಮಹಲ್ ಬೇಕಾದರು ಕಟ್ಟಬಹುದು**
**ಹಣ ಇಲ್ಲದಿದ್ರೆ ಬದುಕಿರೋ ಪ್ರೇಯಸಿಗೆ**
**ತಾಳಿನೂ ಕಟ್ಟೋಕೆ ಆಗಲ್ಲ"**

ಕೆಲವು ಚಾಲಕರು ಜೀವನ ಶೈಲಿಯನ್ನೇ ಶ್ರೀಮಂತಿಕೆ ಅಂದುಕೊಂಡು ತಮ್ಮ ಹೆಂಡತಿಯರಿಗೆ ಹಾಗೂ ಪ್ರೇಯಸಿಯರಿಗೆ ಶ್ರೀಮಂತ ಜೀವನ ಶೈಲಿಯನ್ನು ಒದಗಿಸುವ ಪ್ರಮಾಣ ಮಾಡುತ್ತಾರೆ.

20ನೇ ಶತಮಾನದಲ್ಲಿ ಹೊಸ ವಿಚಾರಗಳು, ಸಿದ್ಧಾಂತಗಳ, ತರ್ಕಗಳು ಇದ್ದರೆ 21ರಲ್ಲಿ ಹೊಸ ಆರಾಮಗಳು, ಆಸೆಗಳು, ಕನಸುಗಳು, ಅನುಕೂಲಗಳ ಹೊಳೆ ಹರಿಯುತ್ತಿದೆ. ಇವೆಲ್ಲವನ್ನೂ ಪೂರೈಸಿಕೊಳ್ಳಲು ಹಣ ಬೇಕು. ಹಣ ಒಂದೇ ಇಂದಿನ ಪ್ರಮುಖ ಅವಶ್ಯಕತೆ, ಹಾಗೂ ಅಂತಿಮ ಕನಸು.ತರ್ಕ, ಆತ್ಮಬಲ, ಹೋರಾಟ, ಹೊಂದಾಣಿಕೆ ಇಂತಹ ಮೌಲ್ಯಗಳಿಗೆ ಪ್ರಾಮುಖ್ಯತೆ ಇಲ್ಲ. ಹಣದ ಗಳಿಕೆಯಲ್ಲಿ ಇಂತಹ ಅಡೆತಡೆಗಳಿಗೂ ಜಗ್ಗದೆ, ಗೀಳಿನ ರೀತಿಯಲ್ಲಿ ಹಿಂಬಾಲಿಸುವ ಪ್ರವೃತಿಯನ್ನು ಈ ಹಿಂಬರಹಗಳು ತೋರುತ್ತವೆ.

ಕೆಲವು ಬರಹಗಳು ಸಾಂಪ್ರದಾಯಿಕತೆ, ರೂಢಿಯಲ್ಲಿರುವ ವ್ಯವಸ್ಥೆ ಹಾಗು ವಿಚಾರ ಸಿದ್ಧಾಂತಗಳಿಗೆ ಜಾರಿ ಸಮಾಧಾನಪಟ್ಟುಕೊಂಡಂತಿದೆ.

**'ಎಷ್ಟಿದ್ದರೇನು ಹಣ**
**ತೀರಿಸಲಾಗದು**
**ಹೆತ್ತ ತಂದೆ ತಾಯಿ ಋಣ'**

**'ಇದ್ದಾಗ ಕಡೆಗಣಿಸಿ, ಸತ್ತಾಗ ಅತ್ತರೆ**
**ಮತ್ತೆ ಸಿಗುವರೆ ಹೆತ್ತವರು'**

**ಯುಗ ಕಳೆದರು**
**ಜಗವೇ ಹತ್ತಿ ಉರಿದರು**
**ಮರೆಯಲಾಗದ ಮುತ್ತು**
**ಬೆಲೆಕಟ್ಟಲಾಗದ ಸ್ವತು**
**'ಅಮ್ಮ'**

ಕೆಲವು ಹಿಂಬರಹಗಳು ಪ್ರಚಲಿತವಿರುವ ವಿಚಾರ ಸಿದ್ಧಾಂತಗಳ ಹರಿಕಾರವಾಗಿವೆ, ಸ್ಥಳೀಯತೆಯನ್ನು ಬಿಂಬಿಸುವ ಒಂದು ಹಿಂಬರಹ ಹೀಗಿದೆ,

**"ಇಲ್ಲಿ ಅನ್ನ**
**ತಿನ್ನುವ ಮುನ್ನ**
**ಕಲಿ ಕನ್ನಡವನ್ನ"**

**"ಆಹಾರವಿಲ್ಲದ ಜೀವ**
**ಸೊರಗುವಂತೆ**
**ವಿಚಾರವಿಲ್ಲದ ಜೀವ**
**ಕೊರಗುತ್ತದೆ"**

ಆಟೋ ಹಿಂಬರಹಗಳು ಪ್ರಮುಖ ಕಂಪನಿಗಳ ಜಾಹಿರಾತುಗಳಿಗಿಂತ ನೈಜ ಹಾಗೂ ಆಕರ್ಷಕವಾಗಿರುತ್ತವೆ. ಏಕೆಂದರೆ ಇವು ಚಲಿಸುತ್ತವೆ ಮತ್ತು ಹೆಚ್ಚು ಅನುಭವ ಜನ್ಯವಾಗಿವೆ. ಇಂತಹ ನಾಣ್ನುಡಿಗಳ ಮೇಲೆ ಹೆಚ್ಚು ವಿಶ್ವಾಸವಿದೆ. ಏಕೆಂದರೆ ಈ ಹಿಂಬರಹಗಳ ಹಿಂದೆ ಯಾವುದೇ ಲಾಭದ ದೃಷ್ಟಿಕೋನವಿಲ್ಲವೆಂದು. ಇವುಗಳನ್ನು ಸರಳ ಭಾಷೆಯಲ್ಲಿಟ್ಟಿವೆ. ಸುಂದರವಾಗಿ ಬರೆಸಲಾಗಿದೆ. ಸರಳ ಪದಗಳು, ವಾಕ್ಯ ರಚನೆ, ಅಲಂಕಾರಗಳಿಂದ ಈ ನಾಣ್ನುಡಿಗಳು ಎಲ್ಲಾ ವರ್ಗದ ಹಾಗೂ ವಯಸ್ಸಿನ ಜನರನ್ನು ತಲುಪುತ್ತವೆ. ಈ ಬರಹಗಳು ಆಟೋ ಚಾಲಕರ ಸ್ವಗತಗಳು, ಚಾಲಕರದ್ದೇ ಆದ ಕವನಗಳು, ಕಲಾತ್ಮಕ ಕೃತಿಗಳು. ತಮಗಿಷ್ಟವಾದ ಬಣ್ಣ, ಫಾಂಟ್, ವಿನ್ಯಾಸ, ಬೆರಳಚ್ಚು, ಪ್ರಾಸ, ಛಂದಸ್ಸು ಹಾಗೂ ಪದಗಳ ಪ್ರಾಮುಖ್ಯತೆಯನ್ನು ಇದರಲ್ಲಿ ವ್ಯಕ್ತಪಡಿಸಿದ್ದಾರೆ.

ಹೆಚ್ಚು ವಾಕ್ಯಗಳು ಸರಳ ವರ್ತಮಾನ ಕಾಲದಲ್ಲಿ ಹೇಗೆ ಸೂರ್ಯನು ಪೂರ್ವದಲ್ಲಿ ಹುಟ್ಟುತ್ತಾನೆ ಎನ್ನುವ ವಾಕ್ಯರಚನೆ ಸಾಮಾನ್ಯ ಸತ್ಯವನ್ನು ಹೇಳುತ್ತದೆಯೋ ಹಾಗೆಯೇ ಈ ವಾಕ್ಯಗಳು ಕೂಡ ಸಾಮಾನ್ಯ ಕರ್ತೃ, ಕರ್ಮ–ಕ್ರಿಯಾ ಪದದ ವಾಕ್ಯ ವಿನ್ಯಾಸವನ್ನು ಹೊಂದಿದೆ. ಹಲವು ಕ್ರಿಯೆಗಳನ್ನು ಹಾಗೂ ಚಟುವಟಿಕೆಗಳನ್ನು ಕೂಡಿಸಿ ಅವುಗಳನ್ನು ಕೃದಂತಗಳಾಗಿ ಮಾಡಲಾಗಿದೆ, ಹೀಗೆ ಮಾಡುವುದರಿಂದ ಕ್ರಿಯೆಗಳನ್ನು ಸ್ಥಿರಗೊಳಿಸಿ ಅವುಗಳ ಬಗ್ಗೆ ಧ್ಯಾನಿಸಲು, ಆಲೋಚಿಸಲು ಸಹಾಯಕ ವಾಗುತ್ತದೆ. ಉದಾಹರಣೆಗೆ : 'ಮುಳ್ಳಿಲ್ಲದ ಪ್ರೀತಿ', 'ನೋವಿಲ್ಲದ ಪ್ರೀತಿ', 'ಮನಸ್ಸಿಗೆ ಬಂದ ಹುಡುಗಿ', 'ಹಣ ಇದ್ರೆ', 'ನನ್ನ ಪ್ರಾಣವನ್ನು ಮುಡಿಪಿಟ್ಟು'....

■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಜಾನಪದ ಒಡಪುಗಳು

✍ **ಶ್ರೀಮತಿ ಡಾ. ಭವಾನಿ ಗೋಳೇದ** (ಸ.ಶಿ), ಸರಕಾರಿ ಪ್ರೌಢ ಶಾಲೆ ಹಾವನೂರ, ತಾ. ಅಫಜಲಪೂರ ಜಿ. ಕಲಬುರಗಿ

ಕರ್ನಾಟಕದಲ್ಲಿ ಜನಪದ ಪ್ರಕಾರಗಳು ಹಾಸು ಹೊಕ್ಕಾಗಿವೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ 'ಒಡಪು' ಎನ್ನುವ ಪ್ರಕಾರ ಬಹು ಜನಪ್ರಿಯ ಹಾಗೂ ವಿಶಿಷ್ಟತೆಯಿಂದ ಕೂಡಿದೆ. 'ಒಡಪು'ಗಳು ಜನಸಾಮಾನ್ಯರ ಬದುಕಿನ ಭಾವನಾತ್ಮಕ ಬಂಧದಿಂದ ಮೂಡಿದವುಗಳಾಗಿವೆ. ಜನಪದದ ಚಿಕ್ಕ ಘಟಕ ಎಂದು ಕರೆಸಿಕೊಳ್ಳುವ ಒಡಪುಗಳು ತನ್ನದೆ ಆದ ಹಿರಿತನವನ್ನು ಹೊಂದಿದೆ. ಒಲವು ತೋರ್ಪಡಿಸುವ ಒಲವಿನ ಒಡಪುಗಳು ಹಿಂದೆಗಿಂತಲೂ ಇಂದು ಅಗತ್ಯವಾಗಿ ಅವಶ್ಯಕವಾಗಿವೆ. ಹಿಂದೆ ಕುಟುಂಬಗಳು ಒಟ್ಟಾಗಿದ್ದು ಸುಖ–ದುಃಖಗಳಿಗೆ ಸ್ಪಂದಿಸುತ್ತಿದ್ದವು. ಇಂದು ಕುಟುಂಬಗಳು ಒಡೆದ ಆಣೆ ಕಟ್ಟಿನಂತಾಗಿದೆ. ಅಂದು ಒಂದು ಕುಟುಂಬ ಎಂದರೆ ಮನೆಯವರೆಲ್ಲ ಎಂಬ ಅರ್ಥವಿತ್ತು, ಇಂದು ಕುಟುಂಬವೆಂದರೆ ಗಂಡ–ಹೆಂಡತಿ ಇಬ್ಬರಾದರೂ ಮಕ್ಕಳೊಂದಿಗೆ ಇರುವ ಕುಟುಂಬ ಎಂಬ ಅರ್ಥದಲ್ಲಿ ಇಂದಿನ ಸಮಾಜ ಸಾಗಿದೆ. ಹಿಂದಿನ ಕಾಲದಲ್ಲಿ ನಮ್ಮ ಜನಪದರ ಅನುಭವವದ ನುಡಿಗಳನ್ನು ಅನುಸರಿಸುತ್ತಿದ್ದ ಜನರಿದ್ದರು. ಅವರು ಸಮಷ್ಟಿ ಜೀವನವನ್ನು ಕಟ್ಟುತ್ತಿದ್ದರು. ಅದಕ್ಕೆ ಜನಪದ ಪ್ರಕಾರಗಳೆ ಉಸಿರಾಗಿದ್ದವು, ಇವುಗಳು ಇಂದಿನ ಕೌಟುಂಬಿಕ ಜೀವನಕ್ಕೆ ಅವಶ್ಯಕ ಎಂದೆನಿಸುತ್ತದೆ.

ಬಾಳಿನಲ್ಲಿ ದಾಂಪತ್ಯ ಜೀವನ ಸುಖಕರವಾಗಿರಬೇಕಾದರೆ ಅದರ ಎರಡು ಚಕ್ರಗಳಂತಿರುವ ಸತಿ–ಪತಿಯಲ್ಲಿ ಪ್ರೀತಿ–ಪ್ರೇಮ ಎಂಬ ಕಡುಗೋಲು ಅತಿ ಅವಶ್ಯಕವಾಗಿದೆ. ಅಂತಹ ದಾಂಪತ್ಯ ಪ್ರೇಮದ ಕುರಿತು ಜನಪದ ಪ್ರಕಾರಗಳನ್ನು ಕಾಣುತ್ತೇವೆ.

ಒಡಪುಗಳಲ್ಲಿ ಜನಪದರ ಅನುಭವಗಳು ಅಗಾಧವಾದುದು "ಒಡಪುಗಳು ದಾಂಪತ್ಯದ ಸವಿಯನ್ನು ಹೆಚ್ಚಿಸಲು ಒಡ ಮೂಡಿದ ಒಲವಿನ ಹನಿಗವನಗಳಾಗಿವೆ", ನನ್ನ ಪ್ರಕಾರ ಅಭಿಪ್ರಾಯವಾಗಿದೆ. "ಹಳ್ಳಿಗರು ದಾಂಪತ್ಯ ಪ್ರೇಮವನ್ನು ಹೇಗೆ ಪ್ರಕಟಿಸಬಲ್ಲರೆಂಬುದಕ್ಕೆ ಈ ಒಡಪು ಸಾಹಿತ್ಯ ಸುಂದರ ಪ್ರಮಾಣಗಳನ್ನು ಒದಗಿಸಿಕೊಡುವುದೆಂದು ಹಾಗೇ ಇವು ಮಾಧುರ್ಯದ ವೇದಗಳು" ಎಂದು ಬೆಟಗೇರಿ ಕೃಷ್ಣಶರ್ಮರು (ಹೆ.ಹೆ.ಓ ಮುನ್ನುಡಿ) ಯಲ್ಲಿ ಹೇಳಿರುವ ಮಾತು ನಿಜವೆನಿಸುತ್ತದೆ.

ಮದುವೆಯು ಮಧುರ ಕ್ಷಣದಲ್ಲಿ ಹೆಣ್ಣಿಗೆ ಹೊಸ ಜೀವನದ ಬಂಧದಲ್ಲಿ ಕಾಲಿಡುತ್ತಿರುವ ನಾಚಿಕೆ ಜೊತೆಯಲ್ಲಿ ಭಯ, ಇರುವುದು ಸಹಜ, ತಾನೂ ಹೇಳುತ್ತಿರುವ ಹೆಸರು ತಾನೂ ಎಂದೂ ಕೂಡ ಮೊಗವನ್ನೆ ನೋಡದ ತನ್ನ ಇನಿಯನ ಹೆಸರು ಹೇಳುವುದನ್ನು ನೆನೆಯುತ ಕಿರುನಗು ಬಿರುವಳು ಮದುವೆಯೆಂಬ ಪ್ರತಿಶಾಸ್ತ್ರದಲ್ಲಿ ಪೀಡಿಸಿ–ಕಾಡಿಸುವ ಹೆಂಗಳತಿಯರೊಂದಿಗೆ ಇನಿಯನಿಗೊಂದು ಮಾತು ಒಪ್ಪಿಸುವ ಅವಕಾಶ ಇದು 'ಒಡಪು' ಎಂಬ ಹೆಸರಿನಿಂದ ಕರೆಯುವ ಮಾತು.

**ಆಕಾಸಕ್ಕೆ ಆರು ಮಾತು ಪಾಸ್**
**ಮದ್ರಾಸಗೆ ಮೂರು ಮಾತು ಪಾಸ್**

ನಮ್ಮ ರಾಯರು....ನವರು ನಮಗೆ ಪಾಸ ಕೊಡಲೆ ನೆರೆದವರೆಲ್ಲ ನಗೆ ಬೀರುವರು ? ಈ ಗರತಿಯ ಒಡಪು ಅವಳ ಒಡವೆಗಿಂತ ಸುಂದರವಾಗಿ ಕಾಣುವುದು.

**ಬೆಳದಿಂಗಳ ಬೆಳಕ**
**ಕಲ್ಲ ಸಕ್ಕರಿ ಹೊಳಕ**

ಅತ್ತಿ ಹೊಟ್ಟೆಲಿ ಮುತ್ತು ಹುಟ್ಯಾನ.... ಎನ್ನುವ ಮೂಲಕ ತನ್ನ ವೇಗದ ಇನಿಯನಿಗೆ ಮತ್ತೊಮ್ಮೆ ಪ್ರೇಮಗೀತೆ ಒಡಪಿನ ಮೂಲಕ ತಿಳಿಸುವಳು.

ಶುಭ ಮಂಗಳಕರವಾದ ಪದ್ಧತಿ ಇರುವ ಸಂದರ್ಭದಲ್ಲಿ ಆರತಿ ಮಾಡುವ ಸಂಪ್ರದಾಯವಿರುವುದು. ಆರತಿ ಕೇಳಗಿಡುವಾಗ ಒಡಪು ಹೇಳಲೇಬೇಕು. ಒಡಪು ಹೇಳದೇ ಬಿಡುವುದಿಲ್ಲ. ಎಲ್ಲರೂ ಪಿಡಿಸಿದಾಗ ಉಸಿರಿದ ಮಾತು ಈ ಒಡಪಾಗುವುದು.

**ದೇವ ದೇವದಲ್ಲಿ ದೇವೆಂದ್ರ ಸೊಸಿದೆರೂ**
**ಸಾಲಾ ಮುತ್ತೈದೆರು ಸೆರಗ ಹಿಡಿದು ಕೇಳುವಾಗ**
**ನಮ್ಮ ರಾಂಬರ ಹೆಸರ ನಾವೆನೂ ಬಲ್ಲೇನು**
**ಸೇರಗ ಹಿಡಿ ಬ್ಯಾಡರಿ ಸೇರ ಮುತ್ತು ಉದುರುತಾವ**
**ನೀಲಿಗಿ ಹಿಡಿ ಬ್ಯಾಡರಿ ನೀಲ ಮುತ್ತು ಉದುರತಾದ**
**ಸನೆಗೆ ನಿಂತು ಕೇಳ್ರಿ ಸರಸತಿ ಹೆಸರ**
**ದೂರ ನಿಂತು ಕೇಳ್ರಿ ದ್ರೂಪದಿ ಹೆಸರ**
**ಹತ್ತು ಮಂದ್ಯಾಗ ಕೇಳ್ರಿ ನಮ್ಮ ಮನಿ ಮಾಲಕರ ಹೆಸರ**
**ಇಲ್ಲಿ ಗರತಿಯ ಕಲ್ಪನೆಗೆ ಎಣೆಯಿಲ್ಲವೆಂದೂ ಹೇಳಬಹುದು.**

ಒಡಪುಗಳು ನೈತಿಕತೆ ಸಾರುವ ಮೂಲಕ ದುರ್ವತನೆಗೆ ತಿಲಾಂಜಲಿ ಇಡುವಂತೆ ತಿಳಿಸುತ್ತಾ ಸಮಾಜವನ್ನು ನೈತಿಕತೆಯತ್ತ ಕೊಂಡ್ಯೊಯುವ ಕೆಲಸ ಸಮರ್ಥವಾಗಿ ಮಾಡಿರುವುದನ್ನು ಕಾಣಬಹುದು. ಗರತಿಗೆ ತನ್ನ ಸಂಸಾರವೇ ಸ್ವರ್ಗ. ಅವಳು ತನ್ನ ಹೊಲ ಗದ್ದೆ ಕೆಲಸದಲ್ಲೆ ಧನ್ಯತೆಯನ್ನು ಪಡೆದುಕೊಳ್ಳುವಳು ಅದರಲ್ಲಿ ತನ್ನ ಗಂಡನ ಸಹಕಾರವಿದ್ದರೆ ಅವಳ ಜೀವನದಲ್ಲಿ ಎಲ್ಲಿಲ್ಲದ ಧನ್ಯತಾಭಾವ ಹೊಂದುವಳು. ಆದರೆ ಸೋಮಾರಿ ಯಜಮಾನನಿಂದ ಬಾಳು ಗೋಳಾಗುವುದು ಕಂಡು ಬರುವುದು, ಆದರೆ ಗಂಡನನ್ನು ಪ್ರೀತಿಯಿಂದ ಹೊಲದ ಕೆಲಸಕ್ಕೆ ಹೋಗಿರೆಂದು ತಿಳಿಸುವ ಪರಿ. ಸೋಗಸಾಗಿ ಮೂಡಿ ಬಂದಿದೆ.

**ಹತರಕಿ ಹದ ಮಾಡಿ**
**ಪುಂಡಿ ಪಲ್ಯ ಸಿಹಿ ಮಾಡಿ**
**ಆರೂ ರೊಟ್ಟಿ ಬುತ್ತಿ ಕಟ್ಟಿ**
**ಮೂರು ರೊಟ್ಟಿ ಕೈಯಾಗೆ ಕೊಟ್ಟೆ**
**ಹರಗಲಕ ಹೊಗೆಂದ್ರ**
**ತಿರುಗಲಕ ಹೊತ್ತಾನ....**
**ಒಂಬತ್ತು ಬೆರಳಾಗ ಒತ್ತುಂಗರ**
**ಹತ್ತನೇ ಬೆರಳಿಗಿ ಮುತ್ತುಂಗುರ**
**ಹತ್ತು ಮಂದ್ಯಾಗ ಹೌದೆನಿಸಿಕೊಳ್ಳಲಾರೆ**

ಗಂಡನ ತೊಡುಗೆಗಳ ವರ್ಣನೆ ಕುರಿತಾದ ಒಡಪಾದೆ. ಎಲ್ಲರೂ ಒಪ್ಪುವಂತ ಗುಣದಂತವನು ತನ್ನ ಗಂಡ ಎನ್ನುವಳು ಗಂಡನ ಗುಣಗಾನ ಮಾಡುವಳು. ಯಾವುದೇ ಆಭರಣದ ವ್ಯಾಮೋಹಕ್ಕಿಂತ ಬದುಕು ಬಂಗಾರವಾಗುವಂತೆ ನೋಡಿಕೊಂಡಳು. ಅನುಭವ ದಾಂಪತ್ಯ ಜೀವನ ಗಟ್ಟಿಗೊಳಿಸಿತ್ತು. ಅನುಭವ ಇಂತಹ ಸಾಹಿತ್ಯದಿಂದ ಸೊಸಿ ಬಂದಿರುವುದು ಕಾಣಬಹುದು ಒಡಪುಗಳ ದಾಂಪತ್ಯ ಜೀವನದ ಮಾದರಿಗಳೆನ್ನಬಹುದು. ಒಡಪಿನಲ್ಲಿ ತನ್ನ ಇನಿಯನ ಹೆಸರು ತಿಳಿಸುತ್ತ ದಾಂಪತ್ಯದ ಸುಖ ಅನುಭವಿಸುವಳು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಗುಲಗಂಜಿ ಗುಂಪ, ಮಾವಿನ ಗಿಡ ತಂಪ**
**ನನಕಿಂತ ನಮ್ಮ ರಾಯರು ಬಲುಕೆಂಪ**

ತನ್ನ ರಾಯ ರಾಜನಂತಿರುವ ಗಂಡನ ರೂಪವನ್ನು ವರ್ಣಿಸಲು ಅವಳಿಗೆ ಪದ ಸಾಲದು ತನ್ನ ಗಂಡನೇ ತನಗಿಂತ ಸುಂದರ ಎಂದು ವರ್ಣಿಸುವಳು.

**ಕತ್ತೆ ಅಂತಾ ಬೈತಾರ ಮತ್ತೆ ಮುಂದೆ ಕರಿತಾರ ।**
**ಸುತ್ತ ಮುತ್ತ ನೋಡತಾರೆ, ಮತ್ತ ಮತ್ತ ನಗತಾರ ।**
**ಮಾವಿನ ಹೆಸರು ಮಲ್ಲಿಗೆ ಹೂ**
**ಅತ್ತೆ ಹೆಸರು ಸಂಪಿಗೆ ಹೂ**
**ನನ್ನ ಹೆಸರು ಸುಗಂಧಿಹೂ**
**ಸುಗಂಧಿ ಹೂವಿನ ಕೂಡಾ ಸುಖವಾಗಿ ಇರತಾರ ।**

ಒಂದು ಹಳ್ಳಿ ತನಗರಿವಿಲ್ಲದೆ ತನ್ನ ತೆಕ್ಕೆಯಲ್ಲಿ ಇಂತಹ ವಿಶಿಷ್ಟವಾದ ಸಾಹಿತ್ಯ ಪ್ರಕಾರವನ್ನು ಹೊಂದಿರುತ್ತದೆ. ಅದನ್ನೆ ನಾವು ಮೌಖಿಕ ಪರಂಪರೆ ಎನ್ನುತ್ತೇವೆ. ಇದು ಸಮಷ್ಟಿಕೃತವಾಗಿ ಮೂಡಿಬಂದದ್ದಾಗಿದೆ. ಪ್ರತಿಯೊಬ್ಬರ ಮನೆ ಮತ್ತು ಮನ ಸೂರೆಗೊಂಡ ಪ್ರಕಾರವಿದು. ಗಾದೆ ಮಾತು ನಮ್ಮ ಮನೆಯಲ್ಲಿ ಸರ್ವ ವ್ಯಾಪಿಯಾಗಿ ಬಳಕೆಯಲ್ಲಿರುವಂತಹದು. ಗಾದೆ, ಒಗಟು, ಗೀತೆ, ಕಥೆ, ಒಗಟು, ಒಡಪು ಮೊದಲಾದವುಗಳು ನಮ್ಮ ಸಮೀಪದ ಸಂಬಂಧಿಗಳಂತೆ ಹತ್ತಿರ ಸುಳಿದಾಡುವಂತಹದಾಗಿವೆ.

ನಾನು ಒಡಪು ಸಂಗ್ರಹಿಸಲು ಹೋದಾಗ ಹತ್ತಿ ಹೊಲದ ಹೆಣ್ಣು ಮಕ್ಕಳ ಮಾತು ಕೇಳಿ ಜನಪದ ಪ್ರಕಾರಗಳು ಸಾಂದರ್ಭಿಕವಾಗಿ ಅಭಿವ್ಯಕ್ತಗೊಳ್ಳುವವು ಎನ್ನುವ ಅಂಶ ಸ್ಪಷ್ಟವಾಯಿತು. ಅವರೇ ಹೇಳುವಂತೆ "ನೀವು ಒಡಪು ಅಂತ ಹೇಳಿದ್ರ ಹ್ಯಾಂಗ್ರಿ ಅರ್ಥಕಟ್ಟಿ ಹೇಳ್ರಿ ಅಂತ ಅಂದ್ರ ನಮಗ ತಿಳೀತೈತ್ರಿ ಈಗಿಂದಲೇ ಹೇಳ್ರಿ ಅಂತ ಅಂದ್ರ ಬರಲ್ರಿ, ಏನಾದರೂ ಕಾರ್ಯಕ್ರಮಗಳಿದ್ದರ ತನ್ನ ತಾನೇ ಒಂದರ ಹಿಂದ ಒಂದು ಸರಸರ ಅಂತ ಅರ್ಥ ಬರ್ತಾವ್ರಿ. ಅದೂ ಬಿಟ್ಟು ನೀವು ಬರಕೋತ್ತಿನಿ ಅಂತ ಹೇಳಿದ್ರ ನಮಗ ಧ್ಯಾಸ (ನೆನಪಿಗೆ) ಆಗಲ್ರಿ" ಅಂತ ಹೇಳುತ್ತಾ ತಮಗೆ ಬರುವ ಕೆಲವು ಒಡಪು ಹೇಳಿದರು.

ಇಲ್ಲಿ ಅವರೇ ಹೇಳುವಂತೆ 'ಅರ್ಥ ಅಂತ ಹೇಳಿದ್ರ ತಿಳಿತೈತ್ರಿ' ಎನ್ನುವ ಮಾತು ಅದೂ ಜನಪದ ಪ್ರಕಾರಗಳು ಪ್ರದೇಶದಿಂದ ಪ್ರದೇಶಕ್ಕೆ ಹೆಸರು ಬೇರೆ ಇರಬಹುದೆಂಬುದು ಸ್ಪಷ್ಟವಾಗುತ್ತದೆ.

ಹಾಗಾದರೆ ಒಡಪು ಎಂದರೆ 'ಒಡಪು' ಪದನಿಷ್ಪತ್ತಿ ಕುರಿತು ವಿದ್ವಾಂಸರು ಈ ರೀತಿ ಹೇಳುವರು 'ಒಡಪು' ಎನ್ನುವ ಶಬ್ದ 'ಪಡರ್ಪು' ಶಬ್ದದಿಂದ ಬಂದಿರಬಹುದೆಂದು ಅಭಿಪ್ರಾಯವಿದೆ. 'ಪೊಡರ್' ಮೂಲ ಶಬ್ದಕ್ಕೆ 'ಪು' ಪ್ರತ್ಯಯ ಸೇರಿ ಪೊಡಪು ಆಗಿದೆ. ಅದು ಮುಂದೆ ಪೊಡರ್ಪು–ಒಡಪು ಎಂದಾಗಿರಬೇಕು ಎಂಬುದು ಎಂ.ಎಸ್.ಲಠ್ಠೆಯುವರ ಅಭಿಪ್ರಾಯವಾಗಿದೆ. (ಉ.ಕ.ಒ ಡಾ.ಎಂ.ಎಸ್.ಲಠ್ಠೆ 12–13)

ಒಡಪ್ಪನ್ನು ಗದ್ಯ ಮಾದರಿ ಎನ್ನದೆ ರೂಪದಲ್ಲಿ ರಚನೆಯಲ್ಲಿ ಭಾಷೆಯಲ್ಲಿ ಕಾವ್ಯದ ಶಕ್ತಿಯಲ್ಲಿ ವಚನ ಸಾಹಿತ್ಯವನ್ನು ಹೋಲುವುದರಿಂದ 'ಪದ್ಯ ಗಂಧಿಗದ್ಯ' ಮಾದರಿ ಎಂದು ಡಾ॥ ವೀರಣ್ಣ ದಂಡೆಯವರು (ಆ.ಕ.ಸಾ.ಚ.ಸಂ–8) ಹೇಳಿರುವರು. ಈ ಒಡಪುಗಳು ಸಂದರ್ಭಾಪೇಕ್ಷ ಗಳಾಗಿವೆ. ಒಡಪುಗಳಿಗೆ ಸಂದರ್ಭವೆಂದರೆ ಮದುವೆಯ ಶಾಸ್ತ್ರಗಳ ಸಂದರ್ಭ ಹಿಂದೆ ವಧು–ವರರ ಮೊದಲ ಭೇಟಿ ಎಂದರೆ ಮದುವೆದಿನ. ಒಡಪುಗಳು ಪರಿಚಯಕ್ಕೆ ವಿಷಯ ಒದಗಿಸಿ ಪರಸ್ಪರರನ್ನು ಅರಿಯುವಂತೆ ತಿಳಿಸಲು ಬಳಸುವ ಹನಿ ಗವನಗಳು. ಒಡಪುಗಳು ನೈತಿಕತೆ ಸಾರುವ ಮೂಲಕ ದುರ್ವತನೆಗೆ ತಿಲಾಂಜಲಿ ಇಡುವಂತೆ ತಿಳಿಸುತ್ತಾ ಸಮಾಜವನ್ನು ನೈತಿಕತೆಯತ್ತ ಕೊಂಡೊಯ್ಯುವ ಕೆಲಸ ಸಮರ್ಥವಾಗಿ ಮಾಡಿರುವುದನ್ನು ಕಾಣಬಹುದು.

ಒಟ್ಟಿನಲ್ಲಿ ಒಡಪುಗಳು ದಾಂಪತ್ಯದ ಗಟ್ಟಿತನ, ಗಂಡ–ಹೆಂಡತಿಯ ಒಲವು ನೀತಿ ಬೋಧೆ, ವ್ಯಂಗ, ಹಾಸ್ಯ, ವಿಡಂಬನೆ ಎಲ್ಲವನ್ನು ಒಳಗೊಂಡಿರುತ್ತವೆ. ನವ ನಾಗರಿಕತೆ ತೆಕ್ಕೆಯಲ್ಲಿ ಇಂದಿನ ಸಮಾಜದಲ್ಲಿ ಮದುವೆ ಎಂಬ ಗಟ್ಟಿ ಸಂಬಂಧಗಳು ಟೊಳ್ಳಾಗುತ್ತಿವೆ. ಇಂತಹ ಸಾಹಿತ್ಯ ಪ್ರಕಾರಗಳ ಬಳಕೆಯು ಸಾಮಾಜಿಕ ಮೌಲ್ಯ ಗಟ್ಟಿಗೊಳಿಸುತ್ತ ಕುಟುಂಬ ವ್ಯವಸ್ಥೆ ಚೆನ್ನಾಗಿ ಇರಲು ಸಾಧ್ಯವಾಗುತ್ತದೆ. ಸಮಾಜಮುಖಿಯಾದ ಇಂತಹ ಪ್ರಕಾರ ಉಳಿಸಿ ಬೆಳೆಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ಅರಿವಿನಲ್ಲಿ ಇರಬೇಕು.

## ಪರಾಮರ್ಶನ ಗ್ರಂಥಗಳು


- **ಸಂ. ಜ್ಯೋತಿ ಹೊಸೂಡಿ (ಸಂ.) (1971)** : ಹೆಸರ ಹೇಳಿಸಿ ಒಡಪಕಟ್ಟಿ ಹಾರೂಗೇರಿ, ಜಿ.ಬೆಳಗಾಂವ್ ಜಾನಪದ ಮಂಟಪ,
- **ಡಾ. ಎಂ.ಎಸ್.ಲಠ್ಠೆ (1978)** : ಉತ್ತರ ಕರ್ನಾಟಕದ ಒಡಪುಗಳು
- **ಡಾ. ವೀರಣ್ಣ ದಂಡೆ (2015)** : ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–8 ಜಾನಪದ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ.
- **ಶ್ರೀಮತಿ ಭವಾನಿ ಗೋಳೆದ** : ಒಡಪುಗಳ ಸಂಗ್ರಹ ಸಂಶೋಧನ ಕ್ಷೇತ್ರಕಾರ್ಯ.


■■





ವಿದ್ಯಾನಿಧಿ ಪ್ರಕಾಶನ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ,
ಎಸ್.ಪಿ. ಗದಗ ಕಂಪೌಂಡ, ಜೆ.ಟಿ. ಮಠ ರೋಡ, ಗದಗ–582 101
ದೂರವಾಣಿ : 08372–200527
e-mail : vidyanidhiprakashana@gmail.com.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ತೇಜಸ್ವಿಯವರ ಅವನತಿ ಕಥೆಯಲ್ಲಿ : ಗ್ರಾಮ ಭಾರತದ ಅವನತಿಯ ಹಲವು ಸಂವೇದನೆಗಳು

✍ **ದಯಾನಂದ,** ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು ಸುಲೇಪೇಟ್.

## ಪೀಠಿಕೆ

ಕೆ. ಪಿ. ಪೂರ್ಣಚಂದ್ರ ತೇಜಸ್ವಿಯುವರ 'ಅಬಚೂರಿನ ಪೋಸ್ಟಾಫೀಸ್' ಕಥಾ ಸಂಕಲನದಲ್ಲಿ ಬರುವ ಒಂದು ಪ್ರಮುಖ ಕಥೆ 'ಅವನತಿ'. 'ಈ ಕಥೆ ಜಗತ್ತಿನ ಶ್ರೇಷ್ಠ ಕಥೆಗಳಲ್ಲೊಂದು' ಎಂದು ಯು.ಆರ್. ಅನಂತಮೂರ್ತಿಯವರು ಪ್ರಶಂಸಿಸಿದ್ದಾರೆ. ಈ ಕಥಾ ಪರಿಸರವು ಇಸ್ಲಾಪುರ, ಇತ್ತಾವರ, ಜೋಗತಿ ಪೇಟೆ ಮತ್ತು ಮಾಲೂರು ಎಂಬ ಹಳ್ಳಿಗಳನ್ನು ಒಳಗೊಂಡಿದ್ದು ಇಲ್ಲಿನ ಜನರು ಒಂದು ರೀತಿಯ ವಿಚಿತ್ರ ವ್ಯವಹಾರದ ಮನಸ್ಥಿತಿಯವರು. ಭೂತ, ಪ್ರೇತ, ಮಾರಿ, ಮಸಣಿಗಳ ತಾಪತ್ರಯದಲ್ಲಿ ಸಿಲುಕಿ ಒದ್ದಾಡುವ ಜನರ ಪರಿಸ್ಥಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದು ರೀತಿ ಇಡೀ ಗ್ರಾಮೀಣ ಭಾರತದ ಪರಿಸ್ಥಿತಿಯನ್ನೇ ಧ್ವನಿಸುತ್ತವೆ.

ಇಸ್ಲಾಪುರದ ಸೂರಾಚಾರಿ ಮತ್ತು ಇತ್ತಾವರದ ಸುಬ್ಬಯ್ಯನ ಹೆಂಡತಿ ಗೌರಿ ಈ ಕಥೆಯ ಕೇಂದ್ರ ಪಾತ್ರಗಳು. ಒಂದು ಕಡೆ ಅದ್ಭುತ ಶಿಲ್ಪಿಯಾದ ಸೂರಾಚಾರಿಯ ಪ್ರತಿಭೆಯ ಅವನತಿಯನ್ನು ಮತ್ತು ಇನ್ನೊಂದೆಡೆ ಇತ್ತಾವರದ ಅಪೂರ್ವ ಸೌಂದರ್ಯದ ಖಣಿಯಾಗಿರುವ ಗೌರಿ ಎಂಬ ಕೆಳವರ್ಗದ ಹೆಣ್ಣು ಮಗಳ ಸೌಂದರ್ಯ ಕುರಿತಾದ ಸಮಾಜಕ್ಕಿರುವ ತಾತ್ಸಾರ ಮತ್ತು ಆಕೆಯ ಸೌಂದರ್ಯದ ಅವನತಿಯನ್ನು ಸೂಚಿಸುವ ಜೊತೆಗೆ ಅಜ್ಞಾನ, ಅಂಧಕಾರ, ಮೂಢ ನಂಬಿಕೆಗಳ ಕೂಪಗಳಾದ ಭಾರತದ ಗ್ರಾಮಗಳ ಅವನತಿಯ ದುರಂತವನ್ನು ಚಿತ್ರಿಸಿದ್ದಾರೆ. ಇಲ್ಲಿ ಯಾವುದರ ಅವನತಿ ಎಂಬುವುದನ್ನು ಇಡೀ ಕಥೆಯಲ್ಲಿ ಎಲ್ಲೂ ವಾಚ್ಯವಾಗಿಸುವುದಿಲ್ಲ, ಓದುಗರೇ ಕಥೆಯನ್ನು ಓದಿ ಕಂಡುಕೊಳ್ಳುತ್ತ ಹೋದಾಗ ಅನೇಕ ಬಗೆಯ ಅವನತಿಯ ಸಂವೇದನೆಗಳನ್ನು ಗುರುತಿಸಬಹುದಾಗಿದೆ. ತೇಜಸ್ವಿಯವರು ಹಾಸ್ಯಾತ್ಮಕವಾಗಿ ಕಥೆ ಹೇಳುತ್ತಾ ಹೋಗುವುದು ಈ ಕಥೆಯ ವಿಶೇಷತೆ.

ಅಸಾಮಾನ್ಯ ಪ್ರತಿಭೆ, ಕೌಶಲ್ಯ, ಕಲೆಗಾರಿಕೆಯನ್ನು ಹೊಂದಿದ ಸೂರಾಚಾರಿ ಆಧುನಿಕ ಸಮಾಜದಲ್ಲಿ ತನ್ನ ಕಲಾವಂತಿಕೆಯನ್ನು ಸದುಪಯೋಗಪಡಿಸಿಕೊಳ್ಳಲಾರದೆ ತನಗೆ ಉಪಯೋಗಕ್ಕೆ ಬಾರದ ಹತ್ತು ಹಲವು ಕ್ಷುಲ್ಲಕ ಕೆಲಸಗಳಲ್ಲಿ ತೊಡಗಿಸಿಕೊಂಡು ಅವನತಿಯತ್ತ ಸಾಗುವುದರ ಜೊತೆಗೆ ಅಪೂರ್ವ ಸುಂದರಿ ಗೌರಿಯ ಸುಂದರ ಕಾಯವನ್ನು ಸುಟ್ಟು ಹಾಳುಮಾಡುವ ಮಟ್ಟಕ್ಕೆ ಇಳಿಯುವ ದುರಂತವನ್ನು 'ಅವನತಿ' ಕಥೆಯು ಚಿತ್ರಿಸುತ್ತದೆ. ತನ್ನಕಲೆಯ ಮೂಲಕ ಶಿಲೆಯಲ್ಲಿ ಸುಂದರ ಶಿಲ್ಪಗಳನ್ನು ಅರಳಿಸಬೇಕಾದ ಸೂರಾಚಾರಿಜೀವಂತ ಶಿಲಾಬಾಲಿಕೆಯನ್ನು ಮೀರಿಸುವ ಶಿಲ್ಪದಂತಿದ್ದ ಗೌರಿಯ ಸುಂದರ ದೇಹವನ್ನು ಸುಟ್ಟು ಆಕೆಯ ಸೌಂದರ್ಯದ ಅವನತಿಗೆ ಕಾರಣನಾಗುತ್ತಾನೆ.

ಇಸ್ಲಾಪುರದ ವಾಸಿ ಸೂರಾಚಾರಿಯ ಮೂಲ ಕಸುಬು ಕಲ್ಲಿನ ಕೆತ್ತನೆಯ ಕುಸುರಿ ಕೆಲಸ, ಹೊಯ್ಸಳರ ಕಾಲದಿಂದಲೂ ಅದ್ಭುತ ಕಲಾಕೃತಿಗಳನ್ನು ರೂಪಿಸಿದ ಶಿಲ್ಪಕಾರರ ಮನೆತನದಲ್ಲಿ ಹುಟ್ಟಿದವನು. ಮೂಲತಃ ಹಳೇಬೀಡಿನ ಸಮೀಪದ ಪನ್ನಥಾಪುರದ ವಾಸಿಯಾಗಿದ್ದ ಆತ ಇಸ್ಲಾಪುರಕ್ಕೆ ದೇವಸ್ಥಾನದ ನಿರ್ಮಾಣದ ಕೆಲಸಕ್ಕಾಗಿ ಬರುತ್ತಾನೆ. ಆದರೆ ದೇವಸ್ಥಾನದ ಪುಜಾರಿ ಹಣ ದುರುಪಯೋಗಿಸಿಕೊಂಡು ಓಡಿ ಹೋಗಿರುವ ಕಾರಣ ದೇವಸ್ಥಾನದ ನಿರ್ಮಾಣದ ಕೆಲಸ ರದ್ದಾಗುತ್ತದೆ. ಇಸ್ಲಾಪುರಕ್ಕೆ ಬರುವ ಮುಂಚೆ ಮಹಾನ್ ಕಲಾವಿದನಾಗಿದ್ದ ಆತ ಮಲೆನಾಡಿನ ಸೀಮೆಗೆ ಬಂದ ನಂತರ ದೇವಸ್ಥಾನದ ಕಂಭ, ದೇವರ ವಿಗ್ರಹಗಳ ಕುಸುರಿ ಕೆಲಸ ಸಿಗುವುದಿಲ್ಲ. ಅವನಿಗೆ ಸಿಕ್ಕ ಕೆಲಸವೆಂದರೆ ಮಾರಿ ಜಾತ್ರೆಗೆ ಮರದ ಮಾರಿ ಗೊಂಬೆಗಳನ್ನು ಮಾಡಿಕೊಡುವುದು. ಪ್ರಾರಂಭದಲ್ಲಿ ಆ ಗೊಂಬೆಗಳ ಪ್ರಮಾಣಬದ್ಧ ನಿಲುವು, ಮುಖದ ಅಭಿವ್ಯಕ್ತಿ, ಸಮಪ್ರಮಾಣದ ಕುಚಗಳು, ಕರಾರುವಕ್ಕಾದ ಭಂಗಿಯನ್ನು ಕಂಡ ಜನ 'ನಿಮ್ಮ ಬೊಂಬೆಯನ್ನು ನೋಡಿದರೆ ಮಾರಿಯನ್ನು ನೋಡಿದ ಅನುಭವವೇ ಆಗುವುದಿಲ್ಲ' ಎಂದು ಆತನ ಕಲೆಗಾರಿಕೆಯನ್ನೇ ಅಪಹಾಸ್ಯ ಮಾಡುತ್ತಾರೆಯೇ ಹೊರತು ಆತನ ಕಲೆಗಾರಿಕೆಯನ್ನು ಗುರುತಿಸುವುದಿಲ್ಲ. ಆಗ ಸೂರಾಚಾರಿ ಬೇರೆ ದಾರಿಗಾಣದೆ ಕೊಕ್ಕರೆ ಮೂಗು, ಬಿಡುಗಣ್ಣಿನ ಕಿಸುಬಾಯಿಯ ಮಡಕೆ ಮಾಲೆಗಳ ಮಾರಿಗೊಂಬೆಗಳನ್ನು ಮಾಡಿಕೊಡುತ್ತ ತನ್ನ ಕಲೆಗಾರಿಕೆಯ ವಿಕೃತಿಗೆ ಕಾರಣನಾಗುತ್ತಾನೆ. ಜೀವನೋಪಾಯಕ್ಕಾಗಿ ಇದೂ ಸಾಲದೆ ಮಂತ್ರ, ತಂತ್ರತಾಯಿತ ಕೊಡುವುದು, ಭತ್ತದ ವ್ಯಾಪಾರ, ಎತ್ತಿನ ವ್ಯಾಪಾರ ಮುಂತಾಗಿ ಅರ್ಥಹೀನವಾದ ಅಸಂಬದ್ಧವಾದ ಹಲವು ಕಸುಬುಗಳನ್ನು ಮಾಡುತ್ತ ಈ ಕಸುಬುಗಳಿಂದ ಒಂದು ನಯ ಪೈಸೆ ಲಾಭ ಇಲ್ಲದಿದ್ದರೂ ಸುಮ್ಮನೆ ಕಾಲ ಕಳೆಯಲು, ಜನರ ಎದುರು ತಾನೊಬ್ಬ ಪಂಡಿತ, ವ್ಯವಹಾರತಜ್ಞ, ನಾಟಿವೈದ್ಯ, ದುಷ್ಟಶಕ್ತಿ ನಿಗ್ರಹಕ ಎಂದು ಪೋಜು ಕೊಟ್ಟು ಅವರನ್ನು ಮೆಚ್ಚಿಸಲು ಈ ಎಲ್ಲ ಕೆಲಸಕ್ಕೆ ಕೈಹಾಕಿದ್ದನು.

ಈ ಕಥೆಯ ಇನ್ನೊಂದು ಪ್ರಮುಖ ಪಾತ್ರ ಇತ್ತಾವರದ ಸುಬ್ಬಯ್ಯನ ಹೆಂಡತಿಗೌರಿ, ಆಕೆ ಅದ್ಭುತ ಸೌಂದರ್ಯವತಿ, ಸಕಲ ಶಿಲ್ಪಶಾಸ್ತ್ರಗಳ ಲಕ್ಷಣಗಳ ಅವತಾರ ಪಡೆದಂತೆ ಆಶ್ಚರ್ಯ ಅದ್ಭುತವಾಗಿದ್ದಳು. ಆಕೆಯ ಮೂಗು, ಕಣ್ಣು, ಹುಬ್ಬು, ಕೂದಲು, ತುಟಿ, ಸ್ತನಗಳು, ನಡು, ಕಾಲು, ಎಲ್ಲ ಇನ್ನೇನು ಮಡಿದರೂ ಅವಳ ಸೌಂದರ್ಯವನ್ನು ಹೆಚ್ಚಿಸದಷ್ಟು ಅದ್ಭುತ ಸಾಮರಸ್ಯದಲ್ಲಿ ಮಿಳಿತವಾಗಿದ್ದವು. ಅದಕ್ಕಿಂತ ಮಿಗಿಲಾಗಿ ಅವಳ ನಡೆ, ಚರ್ಯೆ, ನಿಲ್ಲುವ ನಡೆಯುವ ಭಂಗಿ, ಇವುಗಳ ವಿನ್ಯಾಸವಂತೂ ಸೌಂದರ್ಯವೇ ಛಂದೋಬದ್ಧವಾದಂತೆ ಕಾಣುತ್ತಿತ್ತು. ಕುಳಿತರೆ, ನಿಂತರೆ, ನಕ್ಕರೆ, ಒಂದೊಂದು ಸಾರಿಯೂ ಒಂದೊಂದು ಸಾಕ್ಷಾತ್ಕಾರ ವಾದಂತಾಗುತ್ತಿತ್ತು. ಆದರೆ ತನ್ನ ಸೌಂದರ್ಯದ ಬಗ್ಗೆ ತನಗೆ ಗೊತ್ತು ಗೊತ್ತಿಲ್ಲದಂತೆ ಇರುವ ಅಸ್ಪಷ್ಟತೆಯ ಪ್ರಜ್ಞೆ ಆಕೆಯನ್ನು ಆವರಿಸಿತ್ತು. ಸುತ್ತಲಿನವರಿಗೂ ಕೂಡ ಅವಳ ಸೌಂದರ್ಯದ ಬಗ್ಗೆ ಹೆಮ್ಮೆಗಿಂತ ಸಂಶಯವೇ ಆವರಿಸಿತ್ತು. ಅವಳು ಸುಂದರಿ ಎಂದು ಕ್ಷೀಣವಾಗಿ ಅನಿಸಿದ ಕೆಲವರು ಅವಳ ಹುಟ್ಟಿನ ಬಗ್ಗೆಯೇ ಸಂಶಯ ಸಂದೇಹ ಹೊಂದಿದ್ದರು. ಬ್ರಾಹ್ಮಣರ ಜಾತಿಗೆ ಅಡ್ಡ ಹುಟ್ಟಿರಬಹುದು ಎಂಬ ಸಂಶಯ ಅವರಿಗೆ, ವ್ಯಕ್ತಿಯ ಹುಟ್ಟಿನಲ್ಲಿ, ಆತನ ರೂಪದಲ್ಲಿಯೂ ಕೂಡ ಜಾತಿಯನ್ನು ಕಾಣುವ ಗ್ರಾಮೀಣ ಪ್ರದೇಶದ ಮನಸ್ಥಿಯನ್ನು ಬಿಂಬಿಸುತ್ತದೆ.

ಗೌರಿ ಹಾಗೂ ಸುಬ್ಬಯ್ಯ ದಂಪತಿಗಳಿಗೆ ಮದುವೆಯಾದ ನಾಲ್ಕು ವರ್ಷದಲ್ಲಿ ಮೂರು ಮಕ್ಕಳು ಹುಟ್ಟಿ ಕೇಲವೇ ವಾರಗಳಲ್ಲಿ ಅವು ತೀರಿಕೊಂಡವು. ಸುಬ್ಬಯ್ಯನಿಗೆ ಏನಾದರೂ ಒಳರೋಗ, ದೋಸ ಉಂಟಾ ಎಂಬ ಈರೇಗೌಡನ ಮಾತನ್ನು ಕೇಳಿ ಹಲ್ಲುಕಡಿದಿದ್ದ ಅಲ್ಲದೇ ಚಿಂತಿತನಾಗಿದ್ದಾನೆ. ಈರೇಗೌಡ ಸೂರಾಚಾರಿ ಇಬ್ಬರು ಎತ್ತು ಖರೀದಿಗಾಗಿ ಸುಬ್ಬಯ್ಯನ ಮನೆಗೆ ಬಂದಾಗ ಅಲ್ಲಿ ನಡೆಯುವ ವ್ಯವಹಾರ ರೀತಿ

*– 53ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಶರಣರ ವಚನಗಳಲ್ಲಿ ಅನ್ವಯಿಕ ಕಾಯಕ ಪ್ರಜ್ಞೆ

✍ **ಡಾ. ಚಿತ್ತಯ್ಯ ಕೆ.,** ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಚ್‌ಪಿಪಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.

## ಪ್ರಸ್ತಾವನೆ

ಸಮಾನತೆಯು ಆಶಯುವಾಗಿ ಸಾಮಾಜಿಕ ನ್ಯಾಯುವನ್ನು ಮುಂದಿಟ್ಟುಕೊಂಡು ಅಂದಿನ ವರ್ಗ, ವರ್ಣ, ಜಾತೀಯತೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ಮೌಢ್ಯ ಹಾಗೂ ಕಂದಾಚಾರಗಳನ್ನು ವಿರೋಧಿಸುವುದರ ಮೂಲಕ ಕನ್ನಡದ ನೆಲದಲ್ಲಿ ರೂಪುಗೊಂಡ ಒಂದು ಸಂಘಟಿತ ಹೋರಾಟ. ಇದು ಮೇಲ್ನೋಟಕ್ಕೆ ಧಾರ್ಮಿಕ ಚಳವಳಿಯಾಗಿ ಕಂಡು ಬಂದರೂ ತನ್ನ ಅಂತರಾಳದಲ್ಲಿ ಮನುಷ್ಯನ ಸೂಕ್ಷ್ಮಮತೀಯ ವಿಚಾರ–ಚಿಂತನೆಗಳು ಹರಳುಗಟ್ಟಿವೆ. ಎಲ್ಲಾ ವರ್ಗದ ಶ್ರಮಿಕ (ಕಾಯಕ) ಜೀವಿಗಳು ಸಮಾನತೆಗೆ ನಡೆಸಿದ ಆಂದೋಲನವಾಗಿದೆ. ಹೀಗಾಗಿ ಹನ್ನೆರಡನೆ ಶತಮಾನದ ಸಮಾಜ, ಸಂಸ್ಕೃತಿ, ಧರ್ಮ ಮತ್ತು ಸಾಹಿತ್ಯ ಹಲವು ವೈಶಿಷ್ಟ್ಯತೆಗಳಿಂದ ಕೂಡಿದೆ. ಜನಸಾಮಾನ್ಯರಲ್ಲಿದ್ದ ಮರ್ತ್ಯ–ದೇವಲೋಕಗಳ ಭಿನ್ನತೆ, ಭಕ್ತಿ ಮತ್ತು ಭಗವಂತನ ಸಂಬಂಧವೂ ಸೇರಿದಂತೆ ಭಕ್ತಿಯ ವಿವಿಧ ಬಗೆಯ ಸ್ವರೂಪ. ಕಾಯ, ಕಾಯಕ ತತ್ವ, ಅಂತರಂಗ, ಬಹಿರಂಗ, ಶುದ್ಧತೆ, ಅಶುದ್ಧತೆ ಮುಂತಾದ ವಿಷಯವನ್ನು ಅನಾವರಣಗೊಳಿಸಿದೆ.

ಆಗಿನ ಜನ ಸಮುದಾಯಕ್ಕೆ ವಚನ ಚಳವಳಿಯು ನೀಡಿದ ಹೊಸ ಪರಿಕಲ್ಪನೆಗಳಿಂದ ಜನರಲ್ಲಿ ಹೊಸ ಭರವಸೆಯುಂಟಾಯಿತು. ಆತ್ಮಸ್ಥೈರ್ಯ ಒದಗಿಬಂತು. ತುಳಿತಕ್ಕೆ ಹಾಗೂ ಅನ್ಯಾಯಕ್ಕೆ ಒಳಗಾಗಿದ್ದ ಜನರಲ್ಲಿ ಇದ್ದ ಅನುಮಾನ, ಅತೃಪ್ತಿ ಅಸಮಧಾನಗಳಿಗೆ ವಚನಕಾರರು ಸ್ಪಷ್ಟ ರೂಪವನ್ನಿತ್ತು ಅವರ ಹೃದಯಕ್ಕೆ ಹತ್ತಿರವಾದರು. ಈ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಜೇಡರದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ, ಉರಿಲಿಂಗಿಪೆದ್ದಿ, ಅಂಬಿಗರ ಚೌಡಯ್ಯ, ಮಾದಾರಚೆನ್ನಯ್ಯ, ಹಾವಿನಾಳ ಕಕ್ಕಯ್ಯ ಇವರುಗಳ ಜತೆಗೆ ವಚನಕಾರ್ತಿಯರಾದ ವೀರವಿರಾಗಿಣಿ ಅಕ್ಕಮಹಾದೇವಿ, ಅಮುಗೆ ರಾಯಮ್ಮ, ನಿತ್ಯಮುಕ್ತೆ ಕಾಳವ್ವೆ, ಪುಣ್ಯಸ್ತ್ರೀ ರೇಚವ್ವೆ, ಗಂಗಾಬಿಕೆ, ವ್ರತನಿಷ್ಠೆ ಕೇತಲದೇವಿ, ನಾಗಲಾಂಬಿಕೆ, ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಅಕ್ಕಮ್ಮ, ಕದರೆ ರೆಮ್ಮವ್ವೆ, ಮುಕ್ತಾಯಕ್ಕ ಮುಂತಾದ ವಚನಕಾರರು, ಕಾಯ ಮತ್ತು ಕಾಯಕವನ್ನು ಕೇಂದ್ರವಾಗಿಟ್ಟು ಕೊಂಡು ತಮ್ಮ ಅನುಭವಗಳನ್ನು ವಚನ ರಚನೆಯ ಮೂಲಕ ಅಭಿವ್ಯಕ್ತಿಸಿದ್ದಾರೆ. ಈ ವಚನ ಪರಂಪರೆಯಲ್ಲಿ ದೇವರು, ಭಕ್ತಿ, ಶುದ್ಧತೆಯ ಜತೆಗೆ ಸಾಮಾಜಿಕ ಅಸಮಾನತೆಗಳು ಜಾಗ ಪಡೆದಂತೆ ದೇಹವೂ ಕೂಡ ಪ್ರಮುಖ ಮಾಧ್ಯಮವಾಗಿ ಸಾರ್ಥಕತೆ ಪಡೆದಿದ್ದರಿಂದ ಮನುಷ್ಯನ ಸಾಧನೆಗೆ ದೇಹ ಒಂದು ಮಾಧ್ಯಮವೂ ಆಯಿತು. ಶರಣರು ಅಥವಾ ವಚನಕಾರರು ಈ ದೇಹವನ್ನು ಭೌತಿಕವಾಗಿ ನೋಡದೆ ಅದಕ್ಕೊಂದು ಆಧ್ಯಾತ್ಮಿಕ ಸ್ವರೂಪವನ್ನು ತಂದುಕೊಟ್ಟರು. ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಉನ್ನತೀಕರಿಸುತ್ತಲೇ ಅದಕ್ಕೊಂದು ಪಾವಿತ್ರ್ಯತೆಯ ನೆಲೆಯನ್ನು ಒದಗಿಸಲು ಪ್ರಯತ್ನಿಸಿದರು. ಪವಿತ್ರ ದೇಹವನ್ನು ದೇವಾಲಯವನ್ನಾಗಿ ಸಾರಿದರು. ಆ ಕಾರಣಕ್ಕಾಗಿಯೇ ಶರಣರಿಗೆ ದೇಹವು ಕೈಲಾಸವಾಯಿತು, ದೇವಾಲಯವಾಯಿತು, ತಂಬೂರಿಯಾಯಿತು, ಕೊನೆಗೆ ಮನೆಯೂ ಆಯಿತು. ಕಾಯ(ದೇಹ)ದಿಂದ ಲಿಂಗ, ಜಂಗಮವೂ ಆಗಿದೆ.

**ಕಾಯವಿಡಿದು ಲಿಂಗವಿದೆ.**
**ಲಿಂಗವಿಡಿದು ಕಾಯವಿದೆ**

– ಅಲ್ಲಮ ಪ್ರಭು

ಇದರಲ್ಲಿ ದೇಹ ಮತ್ತು ದೇವರ ಸಂಬಂಧವನ್ನು ಹೇಳುತ್ತಾರೆ.ದೇಹ ಮುಕ್ತಿಯ ಸಾಧನ. ಕಾಯ(ದೇಹ)ದ ವಿವಿಧ ಬಗೆಯ ಸ್ವರೂಪವನ್ನು ಕುರಿತು ಚರ್ಚಿಸಿದರು. ಮನುಷ್ಯನ ದೇಹ ಸದ್ಗುಣಗಳಿಂದ ಕೂಡಿರಬೇಕು. ಯಾರಿಗೂ ಹಾನಿಯುಂಟು ಮಾಡಬಾರದು. ಸರ್ವರಿಗೂ ಒಳಿತನ್ನು ಬಯಸುವ ಗುಣದಿಂದ ಕೂಡಿರಬೇಕು. ದೇಹವು ಸಂಪನ್ನಗುಣದಿಂದ ಕೂಡಿದ್ದರೆ, ಅಂತರಂಗವೂ ಕೂಡ ಸಂಪನ್ನವಾಗಿರುತ್ತದೆ. ಹೀಗೆ ಅಂತರಂಗ –ಬಹಿರಂಗ ಎರಡೂ ಶುದ್ಧತೆಯಿಂದ ಕೂಡಿರಬೇಕು ಎಂಬ ನಿಲುವು ವಚನಕಾರರದಾಗಿತ್ತು.

ಕಾಯಕ ಎಂಬ ಶಬ್ದವು 'ಕಾಯ' ಎಂದರೆ ದೇಹಕ್ಕೆ ಸಂಬಂಧಪಟ್ಟ ಎಂಬ ಅರ್ಥದಲ್ಲಿ ಹಿಂದೆ ಬಳಕೆಯಲ್ಲಿತ್ತು (ಈ ವಿಶೇಷಣದ ಸರಿಯಾದ ಸಂಸ್ಕೃತ ರೂಪವೇ ಕಾಯಿಕ) ಶರಣರು ಆ ಶಬ್ದದ ಮೂಲಕ ಒಂದು ವಿಶಿಷ್ಟ ಪರಿಕಲ್ಪನೆಯನ್ನು ಪ್ರಚುರಪಡಿಸಿದರು. ಆತ್ಯಂತಿಕ ನೆಲೆಯಲ್ಲಿ ಐಹಿಕತೆಯು ತ್ಯಾಜ್ಯವೇ ಸರಿ, ಆದರೆ ಬದುಕಿರುವವರೆಗೆ ಐಹಿಕ ಜೀವನವನ್ನು ನಡೆಸುವ ವಿಧಾನವನ್ನು ಕಾಯಕ ತತ್ವವು ನಿರ್ದೇಶಿಸುತ್ತದೆ. ಹಾಗೆ ಸಂಸಾರ ಅಥವಾ ಐಹಿಕತೆಯನ್ನು ವಿವಿಧ ನೆಲೆಗಳಲ್ಲಿ ಪರಿಭಾವಿಸಿದ ಶರಣರು, ಹೆಣ್ಣು, ಹೊನ್ನು ಮಣ್ಣು ಪಡೆಯುವುದು ವಿವಾಹವಾಗಿ ಕೊಂಡು ಬಳಲಿ ದೊರಕಿಸಿ ಅನುಭವಿಸಬೇಕಾದ ನ್ಯಾಯಮಾರ್ಗವನ್ನು ತೋರಿಸಿಕೊಟರು. ವ್ಯಕ್ತಿ ಮತ್ತು ಸಮಾಜ ಸಂಬಂಧದ ಸ್ವರೂಪವು ಇರಬೇಕಾದ ಬಗೆಯನ್ನು ಕಾಯಕ–ದಾಸೋಹದ ಜೋಡಿಕಲ್ಪನೆಯಲ್ಲಿ ವ್ಯಕ್ತವಾಗಿದೆ.

ಸಮಾಜದ ಸದಸ್ಯನಾದ ವ್ಯಕ್ತಿಯು ಅದಕ್ಕೆ ಹೊರೆಯಾಗಿ ಬಾಳಬಾರದು. ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಾದ ವೃತ್ತಿಯೊಂದನ್ನು ಅನುಸರಿಸುವ ಮೂಲಕ ಉಪಯುಕ್ತನಾಗಬೇಕು. ವೃತ್ತಿಯು ದೇಹ ಅಥವಾ ಮನಸ್ಸು (ಬುದ್ಧಿ)ಗಳ ಬಳಲಿಕೆಯಿಂದ ನಡೆಯುವಂಥದು. ಇಂಥ ಕೆಲಸವನ್ನು ಶ್ರದ್ಧಾಭಕ್ತಿಗಳಿಂದ ನಡೆಸುವುದು ಕಾಯಕ ತತ್ವ. ಕಾಯಕದಲ್ಲಿ ನಿರತನಾದವನು ಗುರುಲಿಂಗ ಜಂಗಮರನ್ನೂ ಮರೆಯಬೇಕೆಂದು ಕಾಯಕದ ಶ್ರದ್ಧೆಯನ್ನು ತಿಳಿಸಿದ್ದಾರೆ. ಯಾವುದೇ ವೃತ್ತಿಯಾಗಿರಲಿ ಅದು ಕಾಯಕವಾಗುವುದು ಜೀವನ ನಿರ್ವಹಣೆಗೆ ಬೇಕಾದ ದ್ರವ್ಯ ಸಂಪಾದನೆಯ ಮಾರ್ಗವಾಗುವುದರ ಜೊತೆಗೆ, ಆಧ್ಯಾತ್ಮಿಕ ಸಾಧನೆಯ ಮಾರ್ಗವು ಆಗಬೇಕು. ಹಾಗಾಗಿ ಕಾಯಕಗಳಲ್ಲಿ ಮೇಲುಕೀಳು ಯಾವ ತರಹದ ಭಾವನೆಗೆ ಅವಕಾಶವಿರುವುದಿಲ್ಲ. ಹಲವಾರು ವಚನಕಾರರ ವಿಶೇಷಣವು ಅವರ ಕಾಯಕ ಸೂಚಿ ಪದವಾಗಿರುವುದು ಅವರು ಕಾಯಕ್ಕೆ ನೀಡಿದ ಮಹತ್ವದ ಸಂಕೇತವಾಗಿದೆ. ಹೀಗೆ ವಚನಗಳಲ್ಲಿ ಶಿವಶರಣರ ಅನ್ವಯಿಕ ಕಾಯ–ಕಾಯಕ ಪ್ರಜ್ಞೆ ಇಂದಿಗೂ ಪ್ರಸ್ತುತವಾಗಿದೆ.

ಉದಾ : ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ, ತುರುಗಾಹಿ ರಾಮಣ್ಣ, ಬಹುರೂಪಿ ಕರ್ಮಯೋಗಿ ಸಿದ್ಧರಾಮ, ಅಂಬಿಗರ ಚೌಡಯ್ಯ, ಆಯ್ದಕ್ಕಿ ಮಾರಯ್ಯ, ಹೆಂಡದ ಮಾರಯ್ಯ, ಕದಿರ ಕಾಳವ್ವೆ, ರಾಟೆ ರೆಮ್ಮವ್ವೆ, ಕೊಟ್ಟಣದ ಸೋಮವ್ವ, ಸತ್ಯ ಸದಾಚಾರಿ ಸತ್ಯಕ್ಕ, ಹಾದರ ಕಾಯಕದ ಗಂಗಮ್ಮ, ಹಡಪದ ಲಿಂಗಮ್ಮ, ಸ್ವಾಭಿಮಾನಿ ಸಂಕವ್ವೆ, ಮೋಳಿಗೆ ಮಹಾದೇವಿ ಮುಂತಾದ ಶರಣ–ಶರಣೆಯರನ್ನು ಕಾಣಬಹುದು.

ಭವಿಗಳು ತಮ್ಮ ಜೀವನೋಪಾಯಕ್ಕಾಗಿ ಮಾಡುವ ವೃತ್ತಿ, ಉದ್ಯೋಗ ಅದು ಕಸುಬು ಎನಿಸಿಕೊಳ್ಳುತ್ತದೆ. ಅಲ್ಲಿ ತಲ್ಲೀನನಾಗಿ ಹೆಂಡತಿ, ಮಕ್ಕಳು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂಬ ಸ್ವಾರ್ಥಪರ ಚಿಂತನೆ, ಮೋಸ, ವಂಚನೆ ಇರುತ್ತದೆ. ಆದರೆ ಭಕ್ತರು, ತಮ್ಮ ಪವಿತ್ರವಾದ ಮನಸ್ಸು, ದೇಹದಿಂದ ಸತ್ಯಶುದ್ಧವಾಗಿ ಮಾಡುವ ಕೆಲಸ ಕಾಯಕವಾಗುತ್ತದೆ. ಇಲ್ಲಿ ಸ್ವಾರ್ಥಪರತೆ ಮೋಸ, ವಂಚನೆ, ಕಪಟ ಯಾವುದೂ ಇರುವುದಿಲ್ಲ. ಎಲ್ಲರು ಸಮಾನರು. ನಾವು ಕೈ ಕೊಳ್ಳುವ ಕಾರ್ಯದಲ್ಲಿ ಶಿವನಿದ್ದಾನೆ. ಅಲ್ಲಿ ಕೈಲಾಸವಿದೆ. ಹಾಗಾಗಿ ಕಾಯಕವೇ ಕೈಲಾಸ ಎಂಬ ಭಾವವೂ ಇದೆ. ಗುರು, ಲಿಂಗ, ಜಂಗಮಕ್ಕಿಂತ ಕಾಯಕ ಪ್ರಜ್ಞೆ ಸರ್ವಶ್ರೇಷ್ಠ. ಕಾಯಕದಲ್ಲಿ ನಿರತರಾದಾಗ ಬೇರೆ ಕಡೆಗೆ ಗಮನಹರಿಸಬಾರದು ಎನ್ನುವ ತತ್ವ ಶರಣರಲ್ಲಿ ಇತ್ತು.

ಸತ್ಯ ಶುದ್ಧ ಕಾಯಕದಿಂದ ಗಳಿಸಿದ ಸಂಪತ್ತನ್ನು ನಿರ್ಮಲ ಮನಸ್ಸಿನಿಂದ ಲಿಂಗ, ಜಂಗಮಕ್ಕೆ ಅರ್ಪಿಸುವುದು ದಾಸೋಹ. ಭಕ್ತಿಯಿಂದ ಭಗವಂತನಿಗೆ ಪ್ರೀತಿಯಿಂದ ಸಮರ್ಪಿಸುವ ಪವಿತ್ರವಾದ ಭೋಜನವೇ ದಾಸೋಹ. ಕಾಯಕದಲ್ಲಿ ನಿರತರಾದವರಿಗೆ ಅಂತರಂಗ– ಬಹಿರಂಗ ಶುದ್ಧವಿರಬೇಕು. **"ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದದು ಲಿಂಗಕ್ಕೆ ಅರ್ಪಿತವಲ್ಲದೆ"** ಕಾಯಕ ಎನ್ನುವುದು ತವನಿಧಿ ಬೆಳೆದಂತೆ.

ಹಿರಿಯ ಅನುಭಾವಿ ಅಲ್ಲಮ ಈ ಲೋಕದಲ್ಲಿ ಇದ್ದು ಇಲ್ಲದಂತೆ ನಿರ್ಲಿಪ್ತ. ಆತನ ವಚನಗಳು ವೈಚಾರಿಕ ನಿಲುವು ತುಂಬಿಕೊಡುತ್ತದೆ.

**ಕಾಲೇ ಕಂಬಗಳಾದವೆನ್ನ**
**ದೇಹವೇ ದೇಗುಲವಾಯ್ತಿತ್ತಯ್ಯ**
**ಎನ್ನ ನಾಲಿಗೆಯೆ ಗಂಟೆ**
**ಶಿರ ಸುವರ್ಣದ ಕಳಶವಿದೇನಯ್ಯ**
**ಸ್ವರವೇ ಲಿಂಗಕ್ಕೆ ಸಿಂಹಾಸನವಾಗಿರ್ದದು ಗುಹೇಶ್ವರ**
**ನಿಮ್ಮ ಪ್ರಾಣಲಿಂಗ ಪ್ರತಿಷ್ಠ ಪಲ್ಲಟವಾಗದಂತಿದೇನಯ್ಯ**

**– ಅಲ್ಲಮ**

ಇದರಲ್ಲಿ ದೇಹವೇ ದೇಗುಲ ಎಂಬ ರೂಪಕ ಅಲ್ಲಮನ ವೈಯಕ್ತಿಕ ಅನುಭವವನ್ನು ಕಟ್ಟಿಕೊಡುತ್ತದೆ.

ಬಸವಣ್ಣನ ಜೀವನ ದ್ರವ್ಯ ಲೌಕಿಕವಾದುದು. ಅವನ ಭಕ್ತಿಗೆ ಸಾಮಾಜಿಕ ಆಯಾಮವಿದೆ. ಈ ಲೋಕದ ಬದುಕು ಹಸನಾಗಬೇಕೆಂಬ ಹಂಬಲವಿದೆ. ಹಾಗಾಗಿ ತನ್ನ ವಿಚಾರಗಳಿಗೆ ಸುತ್ತಲಿನ ಜನ ಸಮುದಾಯವನ್ನು ಒಲಿಸಿಕೊಳ್ಳುವ, ಎಚ್ಚರಿಸುವ , ತನ್ನೊಂದಿಗೆ ಕರೆದೊಯ್ಯುವ ಹಂಬಲವಿದೆ. ಜನ ಸಮುದಾಯದ ಚಿಂತನೆ ಇದೆ. ಇಷ್ಟಲಿಂಗವನ್ನು ಎದೆಯ ಮೇಲೆ ಕಟ್ಟಿಕೊಳ್ಳಬೇಕು. ಆ ಲಿಂಗಕ್ಕೆ ಸಹಜವಾಗಿ ದೇಹವೇ ದೇಗುಲವಾಗುತ್ತದೆ. ಪ್ರಾಣಲಿಂಗ, ದೇವರು ದೇಹದ ಒಳಗೇ ಇದ್ದಾನೆ ಭಕ್ತಿಯ ಮೂಲಕ ಅವನನ್ನು ಆರಾಧಿಸಬೇಕು ಎಂದಿದ್ದಾನೆ. ಶಿವಾಲಯ ಸ್ಥಾವರ ದೇಹ ಜಂಗಮ, ಬಸವಣ್ಣ ಎಲ್ಲರನ್ನು ಒಂದೇ ಧರ್ಮದ ಆಶ್ರಯದಲ್ಲಿ ಒಗ್ಗೂಡಿಸುವ ಹಾಗೂ ಸಮ ಸಮಾಜ ನಿರ್ಮಾಣದ ದೃಷ್ಟಿಯಿಂದ ಸಾಮಾಜಿಕ ಮತ್ತು ಧಾರ್ಮಿಕ ನೆಲೆಯಲ್ಲಿ ಸ್ಥಾವರ ರೂಪದ ದೇವಾಲಯ ತಿರಸ್ಕರಿಸುತ್ತಾನೆ.

**ಉಳ್ಳವರು ಶಿವಾಲಯವ ಮಾಡುವರು**
**ನಾನೇನ ಮಾಡುವೆ, ಬಡವನಯ್ಯ**
**ಎನ್ನ ಕಾಲೇ ಕಂಭ**
**ದೇಹವೇ ದೇಗುಲ**
**ಶಿರವೇ ಹೊನ್ನ ಕಳಶವಯ್ಯ**
**ಕೂಡಲಸಂಗಮ ದೇವಾ ಕೇಳಯ್ಯ**
**ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲಾ.**

ಇದರಲ್ಲಿ ಸಮುದಾಯವೊಂದರ ಸ್ಪಷ್ಟ ಪರಿಕಲ್ಪನೆ ಇದೆ. ಸಮಾಜದಲ್ಲಿ ಉಳ್ಳವರು(ಶ್ರೀಮಂತರು)ಮತ್ತು ಬಡವರು ಇದ್ದು ಹಣ ವ್ಯಯಮಾಡಿ ವೈಭವದ ದೇವಾಲಯ ಕಟ್ಟುವುದು ಅರ್ಥಹೀನ ಕೆಲಸ. ಬದುಕನ್ನು ಕಟ್ಟುವ ಕೆಲಸಕ್ಕೆ ಬದುಕನ್ನೇ ಆಧ್ಯಾತ್ಮಿಕ ಲೇಪದಿಂದ ಜೀವಿಸುವ ಅವಶ್ಯಕತೆಗೆ ಪ್ರಾಮುಖ್ಯತೆ ನೀಡಿದರು. ಬದುಕು, ಜೀವಪರತೆ ಹಾಗೂ ಸಮಷ್ಟಿ ದೃಷ್ಟಿಗಳೇ ಜಂಗಮವೆಂದೂ, ನಿರ್ಜೀವದ ಉಪಾಸನೆ, ಜನ ವಿರೋಧಿ ಧೋರಣೆ, ಸ್ವಾರ್ಥಪರತೆಗಳೇ ಸ್ಥಾವರವೆಂದೂ ಸಾರಿದರು.

ಪುರೋಹಿತಶಾಹಿಯನ್ನು ಧಿಕ್ಕರಿಸಿ ದೇವಸ್ಥಾನವೆಂಬ ಸಂಸ್ಥೆಯನ್ನು ಅಲ್ಲಗಳೆದರು. ಶರಣರು ಪ್ರತಿಪಾದಿಸಿದ ಕಾಯಕ ತತ್ವಕ್ಕೂ ದೇವಾಲಯಗಳ ಕಲ್ಪನೆ ಅಡ್ಡಿಯಾಗುತ್ತಿತ್ತು. ದಿನ ನಿತ್ಯದ ಬದುಕಿಗೆ ತಮ್ಮ ಕಾಯಕವನ್ನೇ ಅವಲಂಬಿಸಿದ್ದ ರೈತರು, ಕಸುಬುದಾರರು ತಮ್ಮ ಜೀವನೋಪಾಯದ ಉದ್ಯೋಗವನ್ನು ಬಿಟ್ಟು ದೇವಾಲಯ ಮತ್ತು ವ್ರತಾಚರಣೆಯಲ್ಲಿ ಕಾಲ ಕಳೆಯಲು ಇಷ್ಟವಿರಲಿಲ್ಲ. ಕಾಯಕವೇ ಕೈಲಾಸವೆಂದು ನಂಬಿದ ಕಾರಣ **"ಅಮರೇಶ್ವರ ಲಿಂಗಾವಾಯಿತ್ತಾದರೂ ಕಾಯಕದೊಳಗು"** ಎಂಬ ಆಯ್ದಕ್ಕಿ ಮಾರಯ್ಯನ ವಚನ ಶರಣರು ಕಾಯಕಕ್ಕೆ ಕೊಟ್ಟ ಮಹತ್ವವನ್ನು ತಿಳಿಸುತ್ತದೆ. ಇಷ್ಟಲಿಂಗ(ಪ್ರಾಣಲಿಂಗ) ಧರಿಸಿಕೊಂಡವನು ಎಲ್ಲಿ ಬೇಕಾದರೂ, ಯಾವಾಗಬೇಕಾದರೂ ನೆನೆಯಬಹುದಿತ್ತು. ಆದ್ದರಿಂದ ಯಾವುದೇ ರೀತಿಯ ಕಾಯಕ್ಕೆ ಅಡ್ಡಿಯುಂಟಾಗುತ್ತಿರಲಿಲ್ಲ. ದುಡಿಯುವ(ಶ್ರಮ) ವರ್ಗವನ್ನು ಲಕ್ಷ್ಯದಲ್ಲಿಟ್ಟುಕೊಂಡಿರುವುದನ್ನು ಮರೆಯಬಾರದು.

ಕಾಯಕ ವ್ಯಕ್ತಿಯ ವೈಯಕ್ತಿಕ ಬದುಕಿಗೆ ಎಷ್ಟು ಆಧಾರ ಮುಖಿಯಾಗಿರಬೇಕು. ಅಷ್ಟೇಮಟ್ಟಿಗೆ ಸಮಾಜದ ಹಿತವನ್ನು ಗೌರವಿಸಿದಂತೆ ಸಮುದಾಯ ನಿಷ್ಠವಾಗಿರಬೇಕು. ಆಧ್ಯಾತ್ಮ ಚಿಂತನೆಯ ಬೀಜರೂಪವಾದುದು ಕಾಯಕ, ಸತ್ಯಶುದ್ಧದ ಕೆಲಸ. ಅದು ಸಮಾಜ ಮುಖಿಯಾಗಿರಬೇಕು.

**"ಕೃತ್ಯ ಕಾಯಕ ವಿಲ್ಲದವನು ಭಕ್ತರಲ್ಲ**
**ಸತ್ಯಶುದ್ಧ ವಲ್ಲದುದು ಕಾಯಕವಲ್ಲ**
**ಆಸೆಯೆಂಬುದು ಭವದ ಬೀಜ**
**ನಿರಾಸೆಯೆಂಬುವುದು ನಿತ್ಯ ಮುಕ್ತಿ"**

ಪ್ರತಿಯೊಬ್ಬ ಶರಣರು ಕಾಯಕ ಮಾಡಬೇಕು ಕಾಯಕ ಮಾಡದವನು ಶರಣನೇ ಅಲ್ಲ. ವೃತ್ತಿಯನ್ನು ಕಾಯಕದ ಮಟ್ಟಕ್ಕೆ ಏರಿಸುವುದಲ್ಲದೆ, ಕಾಯಕಗಳೆಲ್ಲ ಸಮಾನ ಗೌರವದಿಂದ ಕಾಣುತ್ತಿದ್ದರು. ಯಾರು ಯಾವ ವೃತ್ತಿಯನ್ನು ಅವಲಂಬಿಸಿದರೂ ಒಂದೇ ಎಂಬ ಭಾವನೆ ಬಲಿಯುತ ಬಂತು. ವೃತ್ತಿಯನ್ನು ಮೀರಿದ ಎಂದರೆ ಶರಣನಾಗುವಿಕೆ ಎಂಬ ಭಾವನೆ ಬಂತು. ಕಾಯಕನಿರತ ಹೆಣ್ಣು ಮಗಳು ಅಕ್ಕಮ್ಮ. ಈಕೆ ತನ್ನ ಕಾರ್ಯ ಪ್ರಜ್ಞೆಯಲ್ಲಿ ವೇಶ್ಯವೃತ್ತಿಯನ್ನು ಸ್ವೀಕರಿಸಿದ್ದ ಶರಣೆ. ತನ್ನ ಕಾಯ ಸಂಬಂಧದ ಕಾಯಕದಲ್ಲಿ ಮುಟ್ಟುವಿಕೆಗೆ, ಕೂಡುವಿಕೆಗೆ ಹಾಕಿದ ಶೀಲವತೆ ಆಚಾರ, ವಿಧಿಗಳು, ಇದು ದೇಹಧರ್ಮವನ್ನು ವೈಜ್ಞಾನಿಕ ನೆಲೆಯಲ್ಲಿ ಅರಿತಂತೆ ಹಾಕಿಕೊಂಡ ಅರಿವಿನ ಆಚಾರವೇ ಹೊರತು ಮೈಲಿಗೆ ಎಂಬ ಭಾವದಲ್ಲಿ ನಿಷೇಧಾತ್ಮಕವಾಗಿ ಹೇರಿಕೊಂಡ ಆಸ್ಪೃಶ್ಯತೆಯ ಕಟ್ಟುಪಾಡುಗಳಲ್ಲಿ. ಅದೂ ಅಲ್ಲದೆ ತನ್ನ ವ್ರತಾಚಾರಕ್ಕೆ ಬದ್ಧನಲ್ಲದ ಯಾವ ಗಂಡನನ್ನು ತಾನು ಕೂಡುವುದಿಲ್ಲ ಎಂದು ಹೇಳುತ್ತಿದ್ದಾಳೆ.

ಕಾಯಧರ್ಮ ನಿಯುಕ್ತವಾದ ಮೇಲೆ ಕಾಯಕ ಕೂಡದು. ಕಾಯಕ ಬಯಸಿ ಬಂದವನು ಗುರುಲಿಂಗ ಜಂಗಮವಾದರೂ ನಿರಾಕರಿಸಬೇಕು ಎಂಬ ನಿಲುವಿದೆ. ದೇಹವನ್ನು ದೇವಾಲಯವೆಂದು ಭಾವಿಸಿದ ಶರಣತತ್ವದಲ್ಲಿ ದೇಹಾಲಯದ ದೈವಿಕತೆಯನ್ನು ಅಕ್ಕಮ್ಮ ಭಾವಿಸಿದ ಪರಿ ಅನನ್ಯವಾದ ಅನುಭಾವಿಕತೆಯ ತೇಜಸ್ಸಿನಿಂದ ಕೂಡಿದೆ. ದೇಹಧರ್ಮವರಿತ ಶುದ್ಧಭಾವದ ಕಾಯಕ ತತ್ವದ ಮಹತ್ವವನ್ನು ತಿಳಿಸಿದ್ದಾರೆ.

ಬೀದಿ ಕಸಗುಡಿಸುವ ನಿಷ್ಠಾವಂತ ಕಾಯಕ ಜೀವಿ ಸತ್ಯಕ್ಕ. ಕಸಗುಡಿಸುವುದರಲ್ಲಿ ನಿಷ್ಠೆ ಗೌರವಗಳು ಆಕೆಯ ಎದೆಯಲ್ಲಿ ಮನೆ ಮಾಡಿಕೊಂಡಿದ್ದವು. ಕಾಯದಲ್ಲಿ ದೇವರನ್ನು ಕಾಣುವ ಪ್ರವೃತ್ತಿ ಬೆಳೆಸಿಕೊಂಡಿದ್ದಳು. ಇಲ್ಲಿ ಕುವೆಂಪುರವರ ಜಲಗಾರ ಆಟಕವನ್ನು ಸ್ಮರಿಸಬಹುದು. ಕಾಯಕ ಮಾಡುವ ಮನಸ್ಸು ಪರಧನಕ್ಕೆ ಆಸೆಪಡಬಾರದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**"ಈಸಕ್ಕಿಯಾಸೆ ನಮಗೇಕೆ ? ಈಶ್ವರನೊಪ್ಪ**
**ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರಮಾರಯ್ಯ**

ಆಯ್ದಕ್ಕಿ ಲಕ್ಕಮ್ಮ ಕಾಯಕದ ಕೇಡುನ್ನು ಕಂಡು ಕಳವಳ ಪಡುತ್ತಾಳೆ. ಹಾಸ್ಯವನ್ನು ಕಾಯಕಮಾಡಿಕೊಂಡು ಜಂಗಮಕ್ಕೆ ನೀಡಿ ನಿಜಮುಕ್ತರಾದವರು ನಗೆ ಮಾರಿತಂದೆ. ಹನ್ನೆರಡನೆ ಶತಮಾನದ ಶರಣರು ಕೈಲಾಸವನ್ನು ಭೂಮಿಗೆ ಇಳಿಸಲಲ್ಲಿ ಭೂಮಿಯನ್ನೆ ಕೈಲಾಸ ಮಾಡಿದರು. ತಮ್ಮ ಕಾಯಕ ನಿಷ್ಠೆಯಿಂದ ಕೈಲಾಸದ ಗಣ ಪದವಿಗಿಂತ ಭೂಮಿಯ ಮೇಲಿನ ಕಾಯಕ ಜೀವನ ಹಿರಿದಾದುದು ಎಂಬುವುದನ್ನು ಶರಣರು ಬಾಳಿ ತೋರಿದ್ದಾರೆ.

ಶಿವಶರಣರು, ತಮ್ಮ ನಿಜ ಅನುಭವಗಳನ್ನು ವಚನಗಳ ಮೂಲಕ ಹನ್ನೆರಡನೇ ಶತಮಾನದ ಜನ ಸಮುದಾಯದ ವಾಸ್ತವಿಕ ಬದುಕಿನ ನೆಲೆಗಳನ್ನು ತೆರೆದಿಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಸಮಾಜದಲ್ಲಿ ಹೆಚ್ಚುತ್ತಿರುವ ವರ್ಗ, ವರ್ಣ, ಅಸ್ಪೃಶ್ಯತೆ, ಜಾತಿ–ಬೇಧ ತಾರತಮ್ಯ, ಮೌಢ್ಯ ಮತಾಚಾರಗಳನ್ನು ಹತ್ತಿಕ್ಕಲು ವೈಚಾರಿಕ–ತಾತ್ವಿಕ ಚಿಂತನೆಗಳನ್ನೊಳಗೊಂಡ ಶರಣರ ವಚನಗಳ ಅಧ್ಯಯನ, ಅವುಗಳ ವಿವರಣೆ ಮತ್ತು ವಿಶ್ಲೇಷಣೆ ಎಂದಿಗಿಂತಲು ಇಂದು ತುಂಬಾ ಅಗತ್ಯವೆನಿಸುತ್ತದೆ. ಕಾಯ–ಕಾಯಕದ ಮಹತ್ವದ ಚಿಂತನೆಗಳಿಂದ ವಿಶ್ವ ಸಾಹಿತ್ಯದಲ್ಲೇ ಗುರುತಿಸಿಕೊಂಡಿರುವ ಕನ್ನಡದ ವಚನ ಸಾಹಿತ್ಯ, ವೈಶಿಷ್ಟ ಪೂರ್ಣವಾಗಿದೆ. ಹಾಗಾಗಿ ಹನ್ನೆರಡನೇ ಶತಮಾನದ ಶರಣರು ನಡೆದ ಕಾಯಕದ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ. ನಮ್ಮಲ್ಲಿನ ಅರಿವನ್ನು ವಿಸ್ತರಿಸಿಕೊಳ್ಳುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


- **ಕರೀಗೌಡ ಬೀಚನಹಳ್ಳಿ :** ಬಸವಣ್ಣ ಪುನರ್ಲೇಖ
- **ಎಸ್.ಜಿ. ಸಿದ್ದರಾಮಯ್ಯ, ಜಿ.ಎನ್.ಮಲ್ಲಿಕಾರ್ಜುನಪ್ಪ, ಸಿ.ಟಿ.ಜಯಣ್ಣ (ಸಂ.):** ವಚನ ಮಾರ್ಗ
- **ಎಸ್. ಜಿ. ಸಿದ್ದರಾಮಯ್ಯ :** ವಚನ ಸಂಸ್ಕೃತಿ– ಸಾಹಿತ್ಯ ಸಂಗತಿ
- **ಪಿ. ವಿ. ನಾರಾಯಣ :** ವಚನ ಸ್ವರೂಪ.
- **ಜಿ. ಕಾವ್ಯಶ್ರೀ :** ವಚನಕಾರ್ತಿಯರು ಮತ್ತು ವೈಚಾರಿಕ ಪ್ರಜ್ಞೆ
- **ಗಿರಡ್ಡಿ ಗೋವಿಂದರಾಜ :** ವಚನ ವಿನ್ಯಾಸ
- **ವಿ. ಕಮಲಮ್ಮ :** ಹನ್ನೆರಡನೆ ಶತಮಾನದ ವಚನ ಸಾಹಿತ್ಯದಲ್ಲಿ ಚಿತ್ರಿತವಾದ ಆದರ್ಶ ಕುಟುಂಬ ವ್ಯವಸ್ಥೆ
- **ಸಿ.ವೀರಣ್ಣ :** ಹನ್ನೆರಡನೇ ಶತಮಾನದ ಕಾಯಕಜೀವಿಗಳ ಚಳವಳಿ


■■

*– 50ನೇ ಪುಟದಿಂದ ಮುಂದುವರೆದುದು*

ಹಾಸ್ಯಾತ್ಮಕ ಸನ್ನಿವೇಶವಾಗಿದೆ. ಅದೇ ಸಮಯದಲ್ಲಿ ಕಣ್ಣಿಗೆ ಗಾಯ ಮಾಡಿಕೊಂಡಿದ್ದ ಸುಬ್ಬಯ್ಯನ ತಂದೆಗೆ ಒಣ ಶುಂಟಿ ಸುಟ್ಟು ಭಸ್ಮಮಾಡಿ ಎದೆಹಾಲಿನಲ್ಲಿ ಬೆರಸಿ ಕಣ್ಣಿಗೆ ಹಾಕಿಕೊಳ್ಳಲು ಸೂರಾಚಾರಿ ಸಲಹೆ ನೀಡುತ್ತಾನೆ. ಆಗ ಸಂತೆಗೆ ಹೋದತನ್ನ ಸೊಸೆ ಗೌರಿಯಿಂದ ಎದೆ ಹಾಲು ಇಸ್ಕೊಂಡು ಬರಲು ವಿಶ್ವನಾಥನನ್ನು ಅಟ್ಟುತ್ತಾನೆ. ಇಲ್ಲಿ ಮಗುವಿಗೆ ಆಹಾರವಾಗಬೇಕಿದ್ದ ಮೊಲೆ ಹಾಲು ಮತ್ತೊಬ್ಬರಿಗೆ ಔಷಧಿಗಾಗಿ ಬಳಕೆಯಾಗುತ್ತಿದೆ. ವ್ಯಾಪಾರಕ್ಕೆ ಬಳಕೆಯಾಗುತ್ತಿದೆ. ಅದೇ ಸಂದರ್ಭದಲ್ಲಿ ತನ್ನ ಸಮಸ್ಯೆಗೆ ಸೂರಾಚಾರಿಯಿಂದ ಏನಾದರೂ ಪರಿಹಾರ, ಚಿಕಿತ್ಸೆ ಸಿಗಬಹುದೆಂಬ ಆಸೆಯಿಂದ ಸುಬ್ಬಯ್ಯ ತನ್ನ ಮೂರು ಮಕ್ಕಳು ಹುಟ್ಟಿ ಕೆಲ ದಿನದ ನಂತರ ಸತ್ತ ವಿಷಯ ತಿಳಿಸಿದಾಗ ಸೂರಾಚಾರಿ ಮಹಾನ ವೈದ್ಯನಂತೆ ಇದು ಮಲೆ ದೋಸಾನೆ ಎಂಬ ತೀರ್ಮಾನಕ್ಕೆ ಬರುತ್ತಾನೆ. 'ಮಲೆಲಿ ಮೇಲುಗಡೆ ಒಂದು ನೀಲಿ ನರ ಇರ್ತದೆ ಅದರೊಳಗಿರ್ತದೆ ನೋಡು ಹುಳ ಅರಿಶಿನ ಕೊಂಬಿನ ಕೆಂಡ ಮಾಡಿ ಅದನ್ನು ಸುಟ್ಟು ತಗೀಬೇಕು. ಇಲ್ಲದಿದ್ದರೆ ಒಂದಲ್ಲಾ ಮೂರಲ್ಲಾ ನೂರು ಮಕ್ಕಳಾದ್ರು ಒಂದು ಉಳಿಯಕ್ಕಿಲ್ಲ, ಎನ್ನುತ್ತಾನೆ. ಅದ್ಭುತ ಸೌಂದರ್ಯವತಿಯಾದ ಗೌರಿಯ ಮೊಲೆಯಲ್ಲಿ ದೋಷವನ್ನು ಹುಡುಕುವ, ಅದನ್ನು ಸುಟ್ಟು ವಿಕೃತಗೊಳಿಸುವ ಪ್ರಯತ್ನದ ಮೂಲಕ ತನ್ನ ವ್ಯಕ್ತಿತ್ವದ ಅವನತಿಗೆ ತಾನೇ ಕಾರಣನಾಗುತ್ತಾನೆ. ಈಗಾಗಲೇ ಮೂರು ಮಕ್ಕಳನ್ನು ಕಳೆದುಕೊಂಡಿದ್ದ ಈರೇಗೌಡನಿಗೆ ಸೂರಾಚಾರಿ ಆಪದ್ಬಾಂದವನಂತೆ ಕಾಣುತ್ತಾನೆ. ಅವನಿಂದ ಬೇಗ ಇದಕ್ಕೊಂದು ಔಷಧಿ ಮಾಡಿಸಬೇಕು. ತಾನು ಸತ್ತಾಗ ಹಾಲು ತುಪ್ಪ ಬಿಡಕ್ಕಾದ್ರು ಮಕ್ಕಳನ್ನು ಪಡೆಯಲು ಬೇಗ ಇದಕ್ಕೊಂದು ಔಷಧಿ ಮಾಡಿಕೊಡಲು ಸೂರಾಚಾರಿಯ ಕಡೆ ಆರ್ತದೃಷ್ಟಿ ಬೀರಿದಾಗ ಸೂರಾಚಾರಿ ಸಿಕ್ಕಿಬಿದ್ದ ಕೂದಲಿನಲ್ಲಿ ಓಡಾಡುವ ಬಾಚಣಿಕೆಯಂತೆ ಕರ್ಮಜಾಲದ ಬಾಗಿಲಿಲ್ಲದ ಕೋಣೆಯೊಳಗೆ ಬಿದ್ದಾಂತಾಗಿ ಸೂರಾಚಾರಿಯ ಅಂಗಲಾಚುವಿಕೆಯನ್ನು ಕಂಡು ನಾಳಿದ್ದಿನ ಅಮಾಸೆ ಕಳಕುಂಡು ಹೆಂಗ್ಸು ಕರಕೊಂಡ ಬ ಏನಾರು ಒಂದು ಮಾಡಾನ ಎಂದು ಹೇಳುತ್ತಾನೆ. ಇಲ್ಲಿಗೆ ಕಥೆ ಮುಗಿಯುತ್ತದೆ. ತನ್ನ ಅಪ್ರತಿಮವಾದ ಶಿಲ್ಪಗಳ ಕುಸುರಿ ಕೆತ್ತನೆಯ ಕೆಲಸ ಬದಲಾಗಿ ಕಲೆಯ ವಿಕೃತಿಯನ್ನು ಸಾಂಕೇತಿಸುವ ಮಾರಿಗೊಂಬೆಗಳ ಕೆಲಸ ಕಲೆಯ ಅವನತಿಯನ್ನು ಸೂಚಿಸುತ್ತದೆ. ಜೊತೆಗೆ ಜೀವಂತ ಸೌಂದರ್ಯದ ಶಿಲ್ಪದಂತಿರುವ ಗೌರಿಯ ಸುಂದರ ಕಾಯವನ್ನು ಸುಟ್ಟು ವಿಕೃತಿಗೊಳಿಸಲು ಮುಂದಾಗುವ ಪರಿದುರಂತಮಯವಾಗಿದೆ.

ಆಸಕ್ತಿ ಅಭಿರುಚಿ ಇರುವ ಕ್ಷೇತ್ರಗಳಲ್ಲಿ ಇದ್ದು ಸಂಪೂರ್ಣವಾಗಿ ತೊಡಗಿಸಿಕೊಳ್ಳಲಾರದೆ ಏಗುವ ತನ್ಮೂಲಕ ಆಕ್ಷೇತ್ರಕ್ಕೂ ನ್ಯಾಯ ಸಲ್ಲಿಸದ ಅನೇಕರ ಜೀವನವನ್ನು ಕಥೆ ಸಾಂಕೇತಿಕವಾಗಿ ಬಿಂಬಿಸುತ್ತದೆ. ಓದುತ್ತಾ ಓದುತ್ತಾ ಹತ್ತು ಹಲವು ಚಿಂತನೆಗಳಿಗೆ ದಾರಿ ಮಾಡಿ ಕೊಡುವ 'ಅವನತಿ' ಕಥೆ ನಿಜಕ್ಕೂ ನಮಗೆ ಹಲವು ಬಗೆಯ ಅವನತಿಯ ಸಂವೇದನೆಗಳನ್ನು ತಿಳಿಸಿಕೊಡುತ್ತದೆ. ಒಂದು ಅತ್ಯದ್ಭುತ ಕಲೆ ತನ್ನಲ್ಲಿದ್ದರೂ ಕೂಡ ಅದರ ಪ್ರಜ್ಞೆಯಿಲ್ಲದ ಹಾಗೇ ಅಸಂಭದ್ದ ಕೆಲಸಗಳಲ್ಲಿ ತನ್ನ ಸಮಯ, ಶಕ್ತಿ, ಸಾಮರ್ಥ್ಯಗಳನ್ನು ವ್ಯಯಮಾಡುತ್ತಿರುವ ಸೂರಾಚಾರಿಯ ವ್ಯಕ್ತಿಗತವಾದ ಅವನತಿಯನ್ನು ಮುಖ್ಯವಾಗಿ ಕಂಡುಬರುತ್ತದೆ.

ಗೌರಿಯ ಅಪೂರ್ವ ಸೌಂದರ್ಯದ ಖಣಿಯನ್ನು ಕಾಣಲಾಗದೇ ಒಂದು ದಿಕ್ಕೆಟ್ಟ ಹಾಗೇ ಇರುವ ಅಲ್ಲಿನ ಪರಿಸರ. ಯಾವ ವೈಜ್ಞಾನಿಕ ತಳಹದಿಯಿಲ್ಲದೆ ಗೌರಿಗೆ ಮಲೆದೋಷವಿದೆ ಮಲೆಯ ನರವನ್ನು ಸುಡುವುದರ ಮೂಲಕ ಅದಕ್ಕೆ ಪರಿಹಾರ ಕಂಡುಕೊಳ್ಳುವ ಆಲೋಚನೆ ಸಮಾಜದ ಮನಸ್ಸಿನ ಅವನತಿಯನ್ನು ಸೂಚಿಸುತ್ತದೆ.

ನಮ್ಮ ಸುತ್ತಲಿನ ಸವಾಜ ಅಶಿಕ್ಷಿತವಾಗಿ ಅಜ್ಞಾನದಲ್ಲಿ ಮುಳುಗಿದಾಗ ಅದು ಹೇಗೆ ಒಬ್ಬ ವ್ಯಕ್ತಿಯ ಕಲೆಗಾರಿಕೆಯನ್ನು ಕಟ್ಟಿಹಾಕುತ್ತದೆ ಎಂಬುವುದನ್ನು ಗುರುತಿಸಬಹುದು. ಕಥೆ ಬರೆದು ಐವತ್ತು ವರ್ಷಗಳಾದರೂ ಇಂದಿಗೂ ಭಾರತದ ಬಹುತೇಕ ಗ್ರಾಮಗಳಲ್ಲಿ ಈ ಅಶಿಕ್ಷಿತತೆ, ಅಜ್ಞಾನವನ್ನು ಕಾಣಬಹುದು. ಇದರಿಂದ ಗ್ರಾಮೀಣ ಪ್ರದೇಶದ ಹಲವು ಪ್ರತಿಭೆಗಳಿಗೆ ಪ್ರೋತ್ಸಾಹ ಸಿಗದೇ ಅವುಗಳನ್ನು ಚಿವುಟಿ ಹಾಕುತ್ತಿರುವ ಹಲವಾರು ಉದಾಹರಣೆಗಳು ನಮ್ಮಕಣ್ಣ ಮುಂದೆ ಇವೆ. ಒಟ್ಟಾರೆಯಾಗಿ ಈ ಕಥೆಯ ಮೂಲಕ ತೇಜಸ್ವಿಯವರು ಗ್ರಾಮೀಣ ಭಾರತದ ಜನಜೀವನದ ಕೆಳಗಿಳಿಯುವಿಕೆ, ಸಮಾಜದ ವಾಸ್ತವಿಕತೆಯ ರೋಗಗ್ರಸ್ಥ ಮುಖವನ್ನು ಚಿತ್ರಿಸುತ್ತಾರೆ. ಅಲ್ಲದೇ ಹಳ್ಳಿಯ ಬಿತ್ತಿಯ ಮೂಲಕ ಗ್ರಾಮೀಣ ಭಾರತದ ಹಲವು ಮುಖಗಳ ಅವನತಿಯ ಸಂವೇದನೆಯನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ.

## ಪರಾಮರ್ಶನ ಗ್ರಂಥಗಳು


- **ಕೆ. ಪಿ. ಪೂರ್ಣಚಂದ್ರ ತೇಜಸ್ವಿ (1973) :** 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನ, ಮೈಸೂರು ಪುಸ್ತಕ ಪ್ರಕಾಶನ ಸರಸ್ವತಿಪುರಂ.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# "ಬಾಂಗ್ಲಾ-ನಿರಾಶ್ರಿತರ ಮಕ್ಕಳ ಮಹತ್ವಾಕಾಂಕ್ಷೆ ಮಟ್ಟ, ವೃತ್ತಿಯ ಆಯ್ಕೆ ಮತ್ತು ಅವರ ಶೈಕ್ಷಣಿಕ ಸಾಧನೆಯ ಸಮೀಕ್ಷಾ ಅಧ್ಯಯನ"

✍ **ಡಾ. ಪ್ರಕಾಶ ಕೆ. ಬಡಿಗೇರ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

*ಸಾರಾಂಶ*

*ಪ್ರಸ್ತುತ ಸಂಶೋಧನಾ ಲೇಖನವು ಕರ್ನಾಟಕದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ R.H.-1,2,3,4 & 5 ಕ್ಯಾಂಪ್ (ಬಂಗಾಲಿ ಕ್ಯಾಂಪ್)ಗಳಲ್ಲಿ ವಾಸಿಸುತ್ತಿರುವ ಬಾಂಗ್ಲಾ ನಿರಾಶ್ರಿತರ ಮಕ್ಕಳ ಕುರಿತಾದ ಸಮೀಕ್ಷಾ ಅಧ್ಯಯನವಾಗಿದೆ. ಬಾಂಗ್ಲಾ-ನಿರಾಶ್ರಿತರ ಮಕ್ಕಳ್ಲಲಿ ಮಹತ್ವಾಕಾಂಕ್ಷೆ ಮಟ್ಟ, ವೃತ್ತಿ ಆಯ್ಕೆ ಹಾಗೂ ಶೈಕ್ಷಣಿಕ ಸಾಧನೆ ಎಷ್ಟರ ಮಟ್ಟಿಗೆ ಸಹಸಂಬಂಧವನ್ನು ಹೊಂದಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಅಲ್ಲದೇ ಪ್ರಸ್ತುತ ಸಂಶೋಧನೆಯಿಂದ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರು ಉನ್ನತ ಮಟ್ಟದ ಗುರಿಯನ್ನು ಹೊಂದಿರುವುದು ಕಂಡುಬರುತ್ತದೆ.*

## ಪೀಠಿಕೆ

ಭಾರತ ದೇಶವು ಹಲವಾರು ಧರ್ಮ, ಸಂಸ್ಕೃತಿಗಳ ಬಿಡಾಗಿದ್ದು ಇಲ್ಲಿ ವಿವಿಧ ಜನ ಸಮುದಾಯಗಳು ವಾಸಿಸುತ್ತಿದ್ದು ಬೇರೆಬೇರೆ ದೇಶಗಳಿಂದ ನಿರಾಶ್ರಿತರಾಗಿ ಬಂದಂತಹ ಜನರಿಗೆ ಆಶ್ರಯ ತಾಣವಾಗಿದೆ. ಹೀಗೆ ಬೇರೆ ದೇಶಗಳಿಂದ ಬಂದಂತಹ ನಿರಾಶ್ರಿತರಲ್ಲಿ ಬಾಂಗ್ಲ ನಿರಾಶ್ರಿತರು ಒಬ್ಬರಾಗಿದ್ದು ಬಾಂಗ್ಲ ದೇಶದಲ್ಲಿ ನಡೆದ ಯುದ್ದದಲ್ಲಿ ಮನೆ, ಆಸ್ತಿಯನ್ನು ಕಳೆದುಕೊಂಡು ಭಾರತಕ್ಕೆ ವಲಸೆ ಬಂದರು ಭಾರತ ಸರ್ಕಾರವು ಇವರಿಗೆ ಆಶ್ರಯ ಕಲ್ಪಿಸಿಕೊಟ್ಟಿತು.

## ಚಾರಿತ್ರಿಕ ಹಿನ್ನೆಲೆ

1972ರಲ್ಲಿ ಭಾರತ ಮತ್ತು ಬಾಂಗ್ಲಾ ದೇಶದ ನಡುವೆ ಯುದ್ಧ ನಡೆದ ಸಂದರ್ಭದಲ್ಲಿ ಬಾಂಗ್ಲಾದೇಶದ ಮುಸ್ಲಿಂ ಜನಾಂಗವು ಅಲ್ಲಿರುವ ಹಿಂದೂಗಳಿಗೆ ಬಹಳ ಕಿರುಕುಳ ನೀಡಿದ ಕಾರಣ ಆ ಹಿಂದೂಗಳು ಭಾರತಕ್ಕೆ ಸಾವಿರಾರು ಸಂಖ್ಯೆಯಲ್ಲಿ ನಿರಾಶ್ರಿತರಾಗಿ ಬಂದರು. ಆಗ ಅಂದಿನ ಭಾರತದ ಪ್ರಧಾನ ಮಂತ್ರಿಯವರಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಈ ನಿರಾಶ್ರಿತರಿಗೆ ಭಾರತದಲ್ಲಿ ನೆಲೆಯನ್ನು ಕಲ್ಪಿಸಿಕೊಟ್ಟರು. ಕರ್ನಾಟಕದ ರಾಯಚೂರು ಜಿಲ್ಲೆಯ ಸಿಂಧನೂರು, ಮೈಸೂರು ಹಾಗೂ ಆಂಧ್ರ ಪ್ರದೇಶಗಳಲ್ಲಿ ಆಶ್ರಯ ಕಲ್ಪಿಸಿಕೊಟ್ಟರು. ಈ ಬಾಂಗ್ಲಾ-ನಿರಾಶ್ರಿತರು ಕರ್ನಾಟಕದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ R.H.-1,2,3,4,5 ಕ್ಯಾಂಪ್ (ಬಂಗಾಲಿ ಕ್ಯಾಂಪ್)ಗಳಲ್ಲಿ ವಾಸಿಸುತ್ತಿದ್ದಾರೆ. ಇವರು ಕೃಷಿ ಮತ್ತು ಮೀನುಗಾರಿಕೆಯನ್ನು ಅವಲಂಬನೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಭಾರತ ಸರ್ಕಾರವು ಈ ನಿರಾಶ್ರಿತ ಕುಟುಂಬಗಳಿಗೆ ತಲಾ 4 ಎಕರೆ ನೀರಾವರಿ ಭೂಮಿಯನ್ನು ನೀಡಿದೆ.

## ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ಬಾಂಗ್ಲಾ-ನಿರಾಶ್ರಿತರ ಮಕ್ಕಳ ಸ್ಥಿತಿಗತಿಗಳು ಅದರಲ್ಲಿ ಪ್ರಮುಖವಾಗಿ ಮಕ್ಕಳ ಮಹತ್ವಾಕಾಂಕ್ಷೆ ಮಟ್ಟ, ವೃತ್ತಿ ಆಯ್ಕೆ ಹಾಗೂ ಶೈಕ್ಷಣಿಕ ಸಾಧನೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ.

## ಅಧ್ಯಯನದ ಶೀರ್ಷಿಕೆ

"ಬಾಂಗ್ಲಾ-ನಿರಾಶ್ರಿತರ ಮಕ್ಕಳ ಮಹತ್ವಾಕಾಂಕ್ಷೆ ಮಟ್ಟ, ವೃತ್ತಿಯ ಆಯ್ಕೆ ಮತ್ತು ಅವರ ಶೈಕ್ಷಣಿಕ ಸಾಧನೆಯ ಸಮೀಕ್ಷಾ ಅಧ್ಯಯನ"

## ಅಧ್ಯಯನದ ಉದ್ದೇಶಗಳು

1. ಬಾಂಗ್ಲಾ ನಿರಾಶ್ರಿತರ ಮಕ್ಕಳ ಮಹತ್ವಕಾಂಕ್ಷೆ ಮಟ್ಟ ಹೇಗಿದೆ ಎಂಬುದನ್ನು ತಿಳಿಯುವುದು.
2. ಬಾಂಗ್ಲಾ ನಿರಾಶ್ರಿತರ ಮಕ್ಕಳ ವೃತ್ತಿ ಆಯ್ಕೆಗಳ ಬಗ್ಗೆ ತಿಳಿದುಕೊಳ್ಳುವುದು.
3. ಬಾಂಗ್ಲಾ ನಿರಾಶ್ರಿತರ ಮಕ್ಕಳ ಸ್ಥಿತಿಗತಿಗಳನ್ನು ತಿಳಿಯುವುದು.
4. ಬಾಂಗ್ಲಾ ನಿರಾಶ್ರಿತರ ಮಕ್ಕಳ ಶೈಕ್ಷಣಿಕ ಸಾಧನೆ ಬಗ್ಗೆ ತಿಳಿದುಕೊಳ್ಳುವುದು.
5. ಬಾಂಗ್ಲಾ ನಿರಾಶ್ರಿತರ ಮಕ್ಕಳ ಮಹತ್ವಾಕಾಂಕ್ಷೆ ಮಟ್ಟದಲ್ಲಿ ಗುರಿ ವ್ಯತ್ಯಾಸ ಸೂಚ್ಯಾಂಕ (ಜಿ.ಡಿ.ಎಸ್.) ಮತ್ತು ಸಾಧನೆ ವ್ಯತ್ಯಾಸ (ಎ.ಡಿ.ಎಸ್) ಗಳ ನಡುವಿನ ಸಹಸಂಬಂಧವನ್ನು ತಿಳಿಯುವುದು.

## ಅಧ್ಯಯನದ ಪ್ರಾಕಲ್ಪನೆಗಳು

1. ಬಾಂಗ್ಲಾ ನಿರಾಶ್ರಿತರ ಮಕ್ಕಳ ಮಹತ್ವಕಾಂಕ್ಷೆ ಮಟ್ಟದಲ್ಲಿ ವ್ಯತ್ಯಾಸ ಕಂಡುಬರುತ್ತದೆ.
2. ಬಾಂಗ್ಲಾ ನಿರಾಶ್ರಿತರ ಮಕ್ಕಳ ವೃತ್ತಿ ಆಯ್ಕೆ ಮಾಡುಕೊಳ್ಳುವಲ್ಲಿ ವ್ಯತ್ಯಾಸ ಕಂಡುಬರುತ್ತದೆ.
3. ಬಾಂಗ್ಲಾ ನಿರಾಶ್ರಿತರ ಮಕ್ಕಳ ಸ್ಥಿತಿಗತಿಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ.
4. ಬಾಂಗ್ಲಾ ನಿರಾಶ್ರಿತರ ಮಕ್ಕಳ ಮಹತ್ವಕಾಂಕ್ಷೆ ಮಟ್ಟದಲ್ಲಿ ಗುರಿ ವ್ಯತ್ಯಾಸ ಕಂಡುಬರುತ್ತದೆ (ಜಿ.ಡಿ.ಎಸ್) ಮತ್ತು ಸಾಧನೆ ವ್ಯತ್ಯಾಸ ಸೂಚ್ಯಂಕ (ಎ.ಡಿ.ಎಸ್) ಗಳ ನಡುವಿನ ಸಹಸಂಬಂಧದಲ್ಲಿ ವ್ಯತ್ಯಾಸ ಕಂಡುಬರುತ್ತದೆ.

## ಅಧ್ಯಯನದಲ್ಲಿ ಬಳಸಿದ ಪದಗಳ ಕಾರ್ಯಾತ್ಮಕ ವ್ಯಾಖ್ಯಾನ

**1. ನಿರಾಶ್ರಿತರು :** ಪ್ರಕೃತಿ ವಿಕೋಪ, ಯುದ್ಧ ಮುಂತಾದ ಕಾರಣಗಳಿಂದ ಮನೆ, ಆಸ್ತಿಯನ್ನು ಕಳೆದುಕೊಂಡ ನಿರ್ಗತಿಕರಾದ ಜನರನ್ನು ನಿರಾಶ್ರಿತರು ಎನ್ನುವರು.

**2. ಮಹತ್ವಾಕಾಂಕ್ಷೆ :** ವಿದ್ಯಾರ್ಥಿಯ ನಿರ್ದಿಷ್ಟಮಟ್ಟದ ಸಾಧನೆಯನ್ನು ಮಾಡಬೇಕೆನ್ನುವ ಬಯಕೆಯ ಆಕಾಂಕ್ಷೆಯನ್ನು ಮಹತ್ವಕಾಂಕ್ಷೆ ಎನ್ನುವರು.

**3. ವೃತ್ತಿ ಆಯ್ಕೆ:** ವ್ಯಕ್ತಿಯು ಆಸಕ್ತಿಗೆ ಮತ್ತು ಅರ್ಹತೆಗೆ ಅನುಗುಣವಾಗಿ ವೃತ್ತಿ ಆಯ್ಕೆಮಾಡಿಕೊಳ್ಳುವ ಕಾರ್ಯವನ್ನು ವೃತ್ತಿ ಆಯ್ಕೆ ಎನ್ನುವರು.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಅಧ್ಯಯನದ ಇತಿಮಿತಿಗಳು

1. ಈ ಅಧ್ಯಯನವು ಬಾಂಗ್ಲಾ ನಿರಾಶ್ರಿತರ ಮಕ್ಕಳ ಮಹತ್ವಾಕಾಂಕ್ಷೆ ಮಟ್ಟ, ವೃತ್ತಿ ಆಯ್ಕೆ ಹಾಗೂ ಶೈಕ್ಷಣಿಕ ಸಾಧನೆ ಮಾತ್ರ ಅಭ್ಯಸಿಸುವುದಾಗಿದೆ.

2. ಈ ಅಧ್ಯಯನವು ಸಿಂಧನೂರು ತಾಲೂಕಿನ R.H.No-3 ಸರಕಾರಿ ಉನ್ನತ್ತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಗೆ ಮಾತ್ರ ಸೀಮಿತವಾಗಿದೆ.

## ಅಧ್ಯಯನದ ವಿನ್ಯಾಸ

## ಅಧ್ಯಯನದ ವಿಧಾನ

ಈ ಸಂಶೋಧನೆಗೆ ಸಮೀಕ್ಷಾ ಪದ್ಧತಿಯನ್ನು ಬಳಸಲಾಗಿದೆ.

## ಪ್ರತಿಚಯನ

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಬಂಗಾಲಿ ಕ್ಯಾಂಪ್ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಆರ್.ಎಚ್.ಕಾಲೋನಿ-3 ನ್ನು ದತ್ತಾಂಶ ಸಂಗ್ರಹಣೆಗೆ ಸಂಶೋಧಕರು ಆಯ್ಕೆ ಮಾಡಿಕೊಂಡಿದ್ದಾರೆ. ಪ್ರತಿಚಯನವಾಗಿ ಆ ಶಾಲೆಯಲ್ಲಿ 7 ನೇ ತರಗತಿಯ 40 ವಿದ್ಯಾರ್ಥಿಗಳನ್ನು ಮತ್ತು 8 ನೇ ತರಗತಿಯ 40 ವಿದ್ಯಾರ್ಥಿಗಳನ್ನು ಒಟ್ಟು 80 ವಿದ್ಯಾರ್ಥಿಗಳನ್ನು ಈ ಸಂಶೋಧನೆಗೆ ಯಾದೃಚ್ಛಿಕ ವಿಧಾನದ ಮೂಲಕ ಪ್ರತಿಚಯನವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

## ಅಧ್ಯಯನದ ಸಾಧನಗಳು

1. ಡಾ. ಮಹೇಶ ಭಾರ್ಗವ ಹಾಗೂ ಡಾ. ಎಮ್.ಎ. ಶಹಾ (ಆಗ್ರಾ) ರವರು ರಚಿಸಿದ ಮಹತ್ವಾಕಾಂಕ್ಷೆ ಮಟ್ಟದ ಮಾಪಕ ಪ್ರಣಾಳಿ.
2. ಡಾ.ಜಿ.ಎಸ್. ಗ್ರೇವಲ್ ತಯಾರಿಸಿದ ವೃತ್ತಿ ಆಯ್ಕೆಗಳ ಪ್ರಣಾಳಿ.
3. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಅಂಕಪಟ್ಟಿ.

## ದತ್ತಾಂಶಗಳ ವಿಶ್ಲೇಷಣೆಯ ವಿಧಾನ

ಪ್ರಸ್ತುತ ಸಂಶೋಧನೆಯಲ್ಲಿ ದತ್ತಾಂಶಗಳ ವಿಶ್ಲೇಷಣೆಗೆ ಸರಾಸರಿ, ಶೇಕಡ, ಶತಾಂಶ ಹಾಗೂ ಚತುಷ್ಫೋಕ (Tetrachoric) ಸಹಸಂಬಂಧ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಲಾಗಿದೆ.

## ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶಗಳು

1. ಬಾಂಗ್ಲಾ-ನಿರಾಶ್ರಿತರ ಮಕ್ಕಳಲ್ಲಿ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರಲ್ಲಿ ಉನ್ನತಮಟ್ಟದ ಮಹತ್ವಾಕಾಂಕ್ಷೆ ಗುರಿಯನ್ನು ಹೊಂದಿದ್ದಾರೆ.
2. ಬಾಂಗ್ಲಾ-ನಿರಾಶ್ರಿತರ ಮಕ್ಕಳಲ್ಲಿ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರು ಹೆಚ್ಚಿನ ಮಟ್ಟದಲ್ಲಿ 'ಬ್ಯಾಂಕ್ ಮ್ಯಾನೇಜರ' ವೃತ್ತಿ ಆಯ್ಕೆಯನ್ನು ಮಾಡಿಕೊಳ್ಳುವಲ್ಲಿ ಇಷ್ಟ ಪಡುತ್ತಾರೆ.
3. ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರು ಕಡಿಮೆ ಮಟ್ಟದ ವಾದ್ಯಸಂಗೀತಗಾರ ವೃತ್ತಿ ಆಯ್ಕೆ ಮಾಡಿಕೊಳ್ಳುವಲ್ಲಿ ಕನಿಷ್ಠ ಆದ್ಯತೆ ನೀಡಿದ್ದಾರೆ.
4. ಬಾಂಗ್ಲಾ-ನಿರಾಶ್ರಿತರ ಮಕ್ಕಳಲ್ಲಿ ವಿದ್ಯಾರ್ಥಿನಿಯರು ಮಹತ್ವಾಕಾಂಕ್ಷೆ ಮಟ್ಟದಲ್ಲಿ ಹೆಚ್ಚಿನ ಸಾಧನೆ ಮಾಡಲು ಆಸಕ್ತಿ ಹೊಂದಿದ್ದಾರೆ.
5. ಬಾಂಗ್ಲಾ-ನಿರಾಶ್ರಿತರ ಮಕ್ಕಳಲ್ಲಿ 7 ನೇ ತರಗತಿಯ 40 ವಿದ್ಯಾರ್ಥಿಗಳಲ್ಲಿ 27 ವಿದ್ಯಾರ್ಥಿಗಳು ಪ್ರತಿಶತ 67.50% ರಷ್ಟು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.
6. ಅದೇ ರೀತಿ 8ನೇ ತರಗತಿಯ ಒಟ್ಟು 40 ವಿದ್ಯಾರ್ಥಿಗಳಲ್ಲಿ 28 ವಿದ್ಯಾರ್ಥಿಗಳು ಪ್ರತಿಶತ 70% ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.
7. ಬಾಂಗ್ಲಾ-ನಿರಾಶ್ರಿತರ ಮಕ್ಕಳಲ್ಲಿ 7 ನೇ ತರಗತಿ ವಿದ್ಯಾರ್ಥಿಗಳಲ್ಲಿ 11 ಜನ ವಿದ್ಯಾರ್ಥಿಗಳು ಪ್ರತಿಶತ 27.50% ರಷ್ಟು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದರೆ.
8. ಅದೇ ರೀತಿ 8 ನೇ ತರಗತಿಯ 8 ವಿದ್ಯಾರ್ಥಿಗಳು ಪ್ರತಿಶತ 20% ರಷ್ಟು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದರೆ.
9. ಬಾಂಗ್ಲಾ-ನಿರಾಶ್ರಿತರ ಮಕ್ಕಳ ಸಾಮಾಜಿಕ ಸ್ಥಿತಿಗತಿಗಳು ತಮ್ಮದೆಯಾದ ಸಂಪ್ರದಾಯಗಳೊಂದಿಗೆ ಜೀವನ ಮಾಡುತ್ತಾರೆ.
10. ಬಾಂಗ್ಲಾ-ನಿರಾಶ್ರಿತರ ಮಕ್ಕಳ ತಂದೆ ತಾಯಿಗಳು ಅನಕ್ಷರತೆ ಮತ್ತು ನಿರುದ್ಯೋಗದಿಂದ ಕೂಡಿರುವುದು ಕಂಡುಬರುತ್ತದೆ.
11. ಗುರಿ ವ್ಯತ್ಯಾಸ ಸೂಚ್ಯಂಕ (ಜಿ.ಡಿ.ಎಸ್) ಮತ್ತು ಸಾಧನೆಯ ವ್ಯತ್ಯಾಸ ಸೂಚ್ಯಂಕ (ಎ.ಡಿಎಸ್)ಗಳ ನಡುವೆ ಸಹಸಂಬಂಧದ ಬೆಲೆ ($r_t$) ದ ಬೆಲೆಯ −0.92 ಆಗಿದ್ದು ಉನ್ನತ ಮಟ್ಟದ ಋಣಾತ್ಮಕ ಸಹಸಂಬಂಧವನ್ನು ಹೊಂದಿರುವುದು ಕಂಡುಬಂದಿದೆ.
12. ಬಾಂಗ್ಲಾ-ನಿರಾಶ್ರಿತರ ಮಕ್ಕಳ ಗುರಿ ವ್ಯತ್ಯಾಸ ಸೂಚ್ಯಂಕ ಹೆಚ್ಚಾಗಿದ್ದರೆ, ಅದೆ ರೀತಿ ಸಾಧನೆ ವ್ಯಾತ್ಯಾಸ ಸೂಚ್ಯಂಕ ಕಡಿಮೆ ಪ್ರಮಾಣದ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತದೆ.

ಒಟ್ಟಾರೆಯಾಗಿ ಈ ಎಲ್ಲಾ ಅಂಶಗಳನ್ನು ಗಮನಿಸಿ ನೋಡಿದಾಗ, ಬಾಂಗ್ಲಾ-ನಿರಾಶ್ರಿತರ ಮಕ್ಕಳ ಮಹತ್ವಾಕಾಂಕ್ಷೆ ಮಟ್ಟ, ವೃತ್ತಿ ಆಯ್ಕೆ ಹಾಗೂ ಶೈಕ್ಷಣಿಕ ಸಾಧನೆ ಎಷ್ಟರ ಮಟ್ಟಿಗೆ ಸಹಸಂಬಂಧವನ್ನು ಹೊಂದಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯುಕವಾಗಿದೆ. ಹಾಗೂ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರು ಉನ್ನತ ಮಟ್ಟದ ಗುರಿಯನ್ನು ಹೊಂದಿರುವುದು. ಕಂಡುಬರುತ್ತದೆ. ಬಾಂಗ್ಲಾ ನಿರಾಶ್ರಿತರು ಪ್ರತ್ಯೇಕವಾಗಿ ವಾಸಿಸುವದರೊಂದಿಗೆ ತಮ್ಮದೆಯಾದ ವಿಶಿಷ್ಟ ಸಂಪ್ರದಾಯ ಆಚರಣೆ ಪೂಜೆ ವಿಧಾನಗಳೊಂದಿಗೆ ಉತ್ತಮ ಸಂಸ್ಕೃತಿಯನ್ನು ಹೊಂದಿದ್ದಾರೆ ಎಂದು ಹೇಳಬಹುದು.

## ಪರಾಮರ್ಶನ ಗ್ರಂಥಗಳು


- **Aggarwal, J.C. (1975) :** Educational Research: An Introduction. New Delhi, Arya Book Depot.
- **Best, J.W. (1971) :** Research in Education. New Jersey: Prentice-Hall.
- **Garret, H.E. (2006) :** Statistics in Psychology and Education. Surjet Publication.


■■


ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372-200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸಂಶೋಧನೆ RNI REG.NO.KARKAN/2011/38712

# ವಿದ್ಯಾರ್ಜನೆಗಾಗಿ, ನವೀನ ಒಳನೋಟ : ಒಂದು ವೈಜ್ಞಾನಿಕ ವಿಶ್ಲೇಷಣೆ !

✍ **ಡಾ. ಸತೀಶ್ ಎಲ್.ಎ.,** ಭೌತಶಾಸ್ತ್ರ ಸಹ ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ರಸ್ತೆ, ಬೆಂಗಳೂರು

✍ **ಪ್ರೊ. ಜ್ಯೋತಿ ಅರಹುಣಸಿ,** ಭೌತಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಕೆ.ಎಸ್.ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಗದಗ.

*ಅಮೂರ್ತ*

*ಶಿಕ್ಷಣಕ್ಕೆ ಹಲವಾರು ಆಯಾಮಗಳು. ಅದು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾಲಯದವರೆಗೆ ಕೂಡ ಇಂದಿಗೂ ಪ್ರಸ್ತುತ (ಉನ್ನತ ಶಿಕ್ಷಣ ಮತ್ತು ಕೌಶಲ್ಯಾಧಾರಿತ ತರಬೇತಿಗಳ ಬಗ್ಗೆ ಪ್ರಸ್ತಾಪಿಸಿಲ್ಲ). ಶಿಕ್ಷಣ ಮತ್ತು ಬೋಧನೆ ವಿಧಾನಗಳ ಬಗ್ಗೆ ವಿವಿಧ ಸಂಸ್ಥೆಗಳು ಸಂಶೋಧನೆಗಳನ್ನು ನಡೆಸುತ್ತ ಬಂದಿವೆ ಹಾಗೂ ಫಲಿತಗಳನ್ನು ಸಂಶೋಧನಾ ಲೇಖನಗಳ ಮೂಲಕ ಪ್ರಕಟಪಡಿಸುವುದರೊಂದಿಗೆ ಭಿತ್ತರಿಸುತ್ತಾ ಬಂದಿವೆ. ಶಿಕ್ಷಣವನ್ನು ಕುರಿತ ಸಂಶೋಧನಾ ಸಂಸ್ಥೆಗಳ ಈ ನಡೆಯು ಶೈಕ್ಷಣಿಕ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರುವಲ್ಲಿ ಹಾಗೂ ಯಶದೆಡೆಗೆ ಹೆಜ್ಜೆಹಾಕಲು ಸಹಕರಿಸುತ್ತಿವೆ. ವೃತ್ತಿಯಲ್ಲಿ ನಮ್ಮದು ಭೌತಶಾಸ್ತ್ರ ಅಧ್ಯಾಪನವಾಗಿದ್ದರೂ, ಬರವಣಿಗೆಯ ಪ್ರವೃತ್ತಿಯಲ್ಲಿ ತೊಡಗಿಸಿಕೊಂಡಿರುವ ನಾವು, ನಮ್ಮ ವೃತ್ತಿ ಜೀವನದ ಆರಂಭದಿಂದ, ಇಂದಿನವರೆಗೂ ಉದಯಿಸಿದ ಆಲೋಚನೆಗಳಿಂದ ಉದ್ಭವವಾಗಿರುವ ಈ ಲೇಖನವನ್ನು, ಹಲವು ವರ್ಷಗಳಿಂದ ರೂಪುಗೊಳಿಸಲು ಪ್ರಯತ್ನಿಸಿದ್ದೇವೆ ಮತ್ತು ಅವುಗಳನ್ನು ವಿವಿಧ ಉಪ ಶೀರ್ಷಿಕೆಗಳಲ್ಲಿ ಪ್ರಸ್ತುತಪಡಿಸಲಾಗಿದೆ . ಸದ್ಯ, ಬೋಧನಾ ವಿಧಾನಗಳ ಬಗ್ಗೆ ಯಾವುದೇ ದೃಷ್ಟಿಯನ್ನು ಹರಿಸದೆ, ಕಾಲಕ್ಕೆ ತಕ್ಕಂತೆ ಮೊನಚುಗೊಂಡು ಸಮಾಜದ ಉದ್ದಗಲಕ್ಕೂ ಹರಿಯುತ್ತಿರುವ ಈ ಜ್ಞಾನಪ್ರವಾಹದಲ್ಲಿ ಈಜಬೇಕಾಗಿರುವ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಬರೆದು ವಿಶ್ಲೇಷಿಸಲಾಗಿರುವ ಲೇಖನವಿದು. ಧನಾತ್ಮಕ ವಿಮರ್ಶೆಗಳನ್ನು ಮಿಂಚಂಚೆ ಮೂಲಕ ಸ್ವಾಗತಿಸಲಾಗಿದೆ.*

*ಮುಖ್ಯ ಸೂಚಿಪದಗಳು : ಏಕಾಗ್ರತೆ, ಕಲಿಕೆ, ಜೀವನ, ಮನಸ್ಸು, ವಿದ್ಯಾರ್ಜನೆ.*

## ಕಲಿಕೆ ಜೀವನದ ಸ್ವರಗಳು

ಸ್ವಯಂ ರಂಜತೇ ಇತಿಃ ಸ್ವರ. ಸ್ವತಂತ್ರವಾಗಿ ಉಚ್ಛರಿಸುವ ಅಕ್ಷರಗಳೇ ಸ್ವರಗಳು. ಸ್ವರಗಳನ್ನು ಭಾಷೆ ಮತ್ತು ವ್ಯಾಕರಣದಲ್ಲಿ ಪದಗಳನ್ನು ಮತ್ತು ವಾಕ್ಯಗಳನ್ನು ಸೃಜಿಸಲು ಬಳಕೆ ಮಾಡುತ್ತಾರೆ. ಸ್ವರಗಳಿಲ್ಲದೆ, ಪದವಿಲ್ಲ, ವಾಕ್ಯವಿಲ್ಲ, ಭಾಷೆಯಿಲ್ಲ. ಹೀಗಾಗಿ ಕಲಿಕೆಯ ಆರಂಭವೇ ಸ್ವರ ! ಈ ಹಿನ್ನಲೆಯಲ್ಲೊಂದು ವಿಶ್ಲೇಷಣೆ. ಓದು ಬರಹ ಬಲ್ಲವರು ತಿಳಿದಂತೆ *a e i o u* ಗಳು ಆಂಗ್ಲಭಾಷೆಯ ಸ್ವರಗಳು (Vowels). ಈ ಸ್ವರಗಳನ್ನು ಕಲಿಕಾ ಜೀವನದ ವ್ಯಾಪ್ತಿಯಲ್ಲಿ ಸಾಗುವ, ಇಚ್ಛಾನುಸಾರದ ಅಧ್ಯಯನ ಶೀಲತೆಯ ಹಾದಿಯಲ್ಲಿ, ವಿದ್ಯಾರ್ಥಿಗಳಿಗೆ ಎದಿರುಗೊಳ್ಳುವ ಬದುಕಿನ ರೀತಿಯಲ್ಲಿನ, ವರ್ತುಲತೆಗಳೊಂದಿಗೆ ಹೊರಹೊಮ್ಮುವ ತಿಳಿವಳಿಕೆಗಳನ್ನು ಲಯಬದ್ದವಾಗಿ ಆಂಗ್ಲಭಾಷೆಯ ಸ್ವರಗಳೊಂದಿಗೆ ಜೋಡಿಸಿ ಬರೆದಾಗ ಉದ್ಭವವಾಗುವ ಕೆಲವು ಬಾವಾರ್ಥಗಳನ್ನು ಈ ಕೆಳಕಂಡಂತೆ ಕಾಣಬಹುದು; F*a*llow ಎಂದರೆ, ಬೀಳುಬಿದ್ದ ಭೂಮಿ ಎಂದರ್ಥ. ಅಂದರೆ, ಜನ್ಮದಲ್ಲಿ ಯಾರಿಗೂ ಕೂಡ ವಿವೇಕ, ಜ್ಞಾನ, ನೈಪುಣ್ಯ ಅಥವಾ ಕೌಶಲ್ಯತೆಗಳಿರುವುದಿಲ್ಲ ಎಂದು ಅರ್ಥೈಸಿಕೊಳ್ಳಬಹುದು. ಈ ಗುಣಗಳು ಜನ್ಮಜಾತವಲ್ಲ, ಬದಲಾಗಿ, ಗಳಿಸಿಕೊಳ್ಳಲು ನಿರಂತರವಾಗಿ ಶ್ರಮವಹಿಸುತ್ತಿರಬೇಕು. F*a*llow ಎಂದರೆ, ಸಹಚರ ಎಂದರ್ಥ. ಜನ್ಮತಳೆದ ಮೊದಲ ಕ್ಷಣದಿಂದಲೇ ಈ ಜಗದಗಲಕ್ಕೆ ಸಹಚರರಾಗುತ್ತೇವೆ ಎಂದು ಅರ್ಥೈಸಿಕೊಳ್ಳಬಹುದು. ಈ ಭೂಮಂಡಲದ ಸಹಚಾರಿಯಾಗಿ ಕಲಿಕೆಯನ್ನು ಆರಂಭಿಸಬೇಕು. ಅದೇ, ಶ್ರಮದಾನದ ಮೊದಲ ಹೆಜ್ಜೆಯಾಗಬೇಕು. F*i*ll ಎಂದರೆ, ತುಂಬು ಅಥವಾ ಶೇಖರಣೆ ಎಂದರ್ಥ. ಮನಸ್ಸೆಂಬ ಅಗಾಧ ಪರಿಮಿತಿಯುಳ್ಳ ಗೋಳದಲ್ಲಿ ಈ ಜಗದಗಲದ ಸಹವರ್ತಿಗಳಾಗಿ ಜ್ಞಾನವನ್ನು ಭರ್ತಿಮಾಡುತ, ಅದನ್ನೇ ಪಸರಿಸುತಾ ಸಾಗಬೇಕು. F*o*llow ಎಂದರೆ, ಅನುಸರಣೆ ಎಂದರ್ಥ. ಏನನ್ನಾದರು ಗ್ರಹಿಸಬೇಕೆಂದರೆ ಅನುಸರಿಸಿಯೇ ನಡೆಯಬೇಕು. ತಿಳಿದುಕೊಳ್ಳಲು, ಅನುಸರಣೆ ಇಲ್ಲದಿದ್ದರೆ ಗ್ರಾಹ್ಯ ಅಸಾಧ್ಯ. ಅನುಸರಣೆಯನ್ನು ಕಲಿಕೆಯ ಜೀವನದುದ್ದಕ್ಕೂ ಅಭ್ಯಾಸಿಸಬೇಕು. F*u*ll ಎಂದರೆ, ಪೂರ್ಣ ಎಂದರ್ಥ. ಹಂತಹಂತವಾದ ಅನುಸರಣೆಯಿಂದ ಭರ್ತಿಮಾಡಲು ಪ್ರಾರಂಭಿಸಿದ ತರುವಾಯ ಜ್ಞಾನದ ದರ್ಶನವಾಗುತ್ತದೆ ಎಂದು ಅರ್ಥೈಸಿಕೊಳ್ಳಬಹುದು. ಇದು ವಿದ್ಯಾರ್ಥಿಗಳ ಕಲಿಕಾ ಬದುಕಿನ ಧ್ಯೇಯವಾಗಬೇಕಿದೆ. ಆರಂಭದಿಂದ ಅಂತ್ಯದವರೆಗೂ ಇದೇ ಬದುಕಿನ ತತ್ತ್ವವಾಗಬೇಕು ಮತ್ತು ಸತ್ತ್ವವಾಗಬೇಕು. ಶಿಕ್ಷಕನೂ, ಮೊದಲ ವಿದ್ಯಾರ್ಥಿಯೇ ಅಲ್ಲವೇ ? ಈ ಹಿನ್ನಲೆಯಲ್ಲಿ ಎಲ್ಲರಲ್ಲೂ ಕಲಿಕಾ ಜೀವನದ ಸ್ವರಗಳು ಆರಂಭವಾಗಬೇಕು.

## ಕಲಿಕೆ ಮತ್ತು ಜೀವನ

ವಿದ್ಯಾರ್ಥಿಗಳ ಜೀವನದ ವಿದ್ಯಾರ್ಜನೆಯ ಪ್ರತಿಯೊಂದು ಹಂತದಲ್ಲೂ, ಪ್ರತಿಯೊಂದು ಕ್ಷಣದಲ್ಲಿಯೂ ಕಲಿಯುತ್ತಾ (Learn) ನಡೆಯಬೇಕು. ಕಲಿಯಬೇಕೆಂದರೆ ನಮ್ಮನ್ನು ನಾವು ಮನಃಪೂರ್ತಿಯಾಗಿ ತೊಡಗಿಸಿಕೊಳ್ಳಬೇಕು (Involve), ತೊಡಗಿಸಿಕೊಂಡಲ್ಲಿ, ಕಂಡುಕೊಳ್ಳುವುದು (Find) ಖಚಿತ, ಕಂಡುಕೊಂಡ ಮೇಲೆ ವಿಕಸನ (Evolve) ಹೊಂದುವುದು ಕೂಡ ಅಷ್ಟೇ ಸತ್ಯ. Evolve ಎಂಬ ಪದ ವಿಶಿಷ್ಟವಾದುದು. ಕಾರಣ, ಒಮ್ಮೆ ಕಲಿಕೆಯಲ್ಲಿ ವಿಕಸನ ಹೊಂದಿದರೆ, ಜ್ಞಾನವೆಂಬ ವ್ಯೋಮದಲ್ಲಿರುವುದು ನಿಶ್ಚಿತ. ಬದುಕಿರುವಷ್ಟು ದಿನ ಕಾಲದೊಂದಿಗೆ ಕಾಲೋಚಿತಗೊಳ್ಳುತ್ತಿರಬೇಕು ಅಷ್ಟೆ !. ಆಂಗ್ಲಭಾಷೆಯ ಈ ನಾಲ್ಕು ಪದಗಳ ಮೊದಲ ಶಬ್ದಗಳನ್ನು ಒಂದೆಡೆ ಸೇರಿಸಿ ಬರೆದಾಗ ಜೀವನ/ಬದುಕು (Life) ಅಥವಾ ಜೀವನದ/ಬದುಕಿನ (Life Style) ರೀತಿ ಎಂದು ಬರುವುದು. ಇದೇ, ವಿದ್ಯಾರ್ಜನೆಯೆಂಬ ತಪೋವನದಲ್ಲಿನ ಜೀವನವಾಗಬೇಕು. ವಿದ್ಯಾರ್ಥಿಗೆ, ಜೀವನ–ಕಲಿಕೆ–ಜೀವನ ಒಂದಕ್ಕೊಂದು ಕೊಂಡಿಯಾದಂತಹ ಎಡೆಬಿಡದಂತೆ ಸಾಮ್ಯತೆಯಲ್ಲೇ ಸಂಚರಿಸುವ ಪದಗಳು. ಕಲಿಕೆ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದನ್ನೊಂದು ಬೇರ್ಪಡಿಸಲು ಸಾಧ್ಯವಿಲ್ಲ !. ಬೇರ್ಪಡಿಸಿದರೆ ಬೆಲೆಯಿಲ್ಲ !!. ಒಟ್ಟಿನಲ್ಲಿ ಕಲಿಕೆಯಿಲ್ಲದಿದ್ದರೆ ಜೀವನಕ್ಕೆ ಬೆಲೆಯಿಲ್ಲ !!!. ಅಧ್ಯಾಪಕರುಗಳು ಮೊದಲ ವಿದ್ಯಾರ್ಥಿಗಳು. ಹೀಗಾಗಿ, ವಿದ್ಯಾರ್ಜನೆಯೆಂಬ 'ನಾವೆ'ಯಲ್ಲಿರುವ 'ನಾವೆ'ಲ್ಲರೂ ವಿದ್ಯಾರ್ಥಿಗಳೇ ಅಲ್ಲವೇ ?. ಅದೇ ಕಲಿಕಾ ಜೀವನದ ನಾವೆ ಆಗಬೇಕು.

## ಚಿತ್ರಣವೆಂಬುದು ಸಾರ್ವತ್ರಿಕ ಸತ್ಯ

ಸರ್ವರಿಗೂ ತಿಳಿದಿರುವಂತೆ, ಮಗುವೊಂದು ಜನನವಾದಾಗ ಅದಕ್ಕೆ ಯಾವುದೇ ಭಾಷೆಯ ಅರಿವು ಇರುವುದಿಲ್ಲ, ವಿಶ್ಲೇಷಣಾ ಸಾಮರ್ಥ್ಯವೂ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಇರುವುದಿಲ್ಲ. ಮಗುವಿನ ಬೆಳವಣಿಗೆಯ ಆರಂಭಿಕ ಹಂತದಲ್ಲಿ, ತಾಯಿ, ಮಾಹಿತಿ ಒದಗಿಸುವ ಮೂಲ ಆಕರ. ಮಗುವಿಗೆ ವಸ್ತುಗಳನ್ನು, ಚಿತ್ರಗಳನ್ನು ಮತ್ತು ಆಕೃತಿಗಳನ್ನು ತೋರಿಸಿ ಕಲಿಸುವುದನ್ನು ಪ್ರಾರಂಭಿಸುತ್ತಾಳೆ. ಈ ಹಂತದಲ್ಲಿ ಮಗುವಿಗೆ ಅಕ್ಷರಗಳ ಅರಿವು ಮತ್ತು ಭಾಷೆಯ ಪರಿವೆ ಇಲ್ಲದಿದ್ದರೂ ಸಹ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರ, ಗಿಡ, ಮರ, ಬಳ್ಳಿ, ಖಗ, ಮೃಗ, ಹೂವು, ಹಣ್ಣು, ಬಸ್ಸು, ಕಾರು, ಗಾಡಿ, ಹೀಗೆ, ಬ್ರಹ್ಮಾಂಡದಲ್ಲಿ ಕಣ್ಮುಂದೆ ಕಾಣುವಂತಹ ಅನಂತ ಆಕಾರಗಳನ್ನು ತೋರಿಸಿ, ಪ್ರಪಂಚದ ಸಂಪೂರ್ಣ ಚಿತ್ರಣದ ಪರಿಚಯವನ್ನು ಮಗುವಿನ ಮನಸ್ಸಿನಲ್ಲಿ ಮೂಡಿಸುತ್ತಾಳೆ. ಭಾಷೆಯ ಗ್ರಹಿಕೆ, ಪರಿಭಾಷೆ ಮತ್ತು ಪಾರಿಭಾಷಿಕ ಪದಗಳ ಅರಿವು ಇಲ್ಲದಿದ್ದರೂ ಸಹ, ಜಗತ್ತಿನ ಛಾಪು ಬಾಲ್ಯಾವಸ್ಥೆಯಲ್ಲೆ ಮಗುವಿನ ಮನದಲ್ಲಿ ನಿರ್ಮಾಣವಾಗಿರುತ್ತದೆ. ನಂತರದ ಸಮಯದಲ್ಲಿ, ಭಾಷೆಯ ಸಹಾಯದಿಂದ, ಬರವಣಿಗೆಯ ಸಹಾಯದಿಂದ ಕಂಡುಕೊಂಡಿರುವ ಚಿತ್ರಣಗಳ ಅಭಿವ್ಯಕ್ತಿ ಪ್ರಾರಂಭವಾಗುತ್ತಾ ಹೋಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕಲಿಕೆಯ ಹಂತದಲ್ಲಿ ಪ್ರತಿಯೊಂದು ವಿಷಯದ ಅರಿವಿಗೂ ಚಿತ್ರಣದ ರೂಪ ಅಗತ್ಯವಾಗಿಬೇಕು. ಚಿತ್ರಣದ ತರುವಾಯ ಕಲಿಕೆಯ ಎಲ್ಲ ಆಯಾಮಗಳು ಸುಲಲಿತವಾಗಿ ಜರುಗುತ್ತಾ ಹೋಗುತ್ತವೆ. ಕಲಿಕೆಯ ಮೂಲ ರೂಪ ಚಿತ್ರಣವಲ್ಲವೇ ಎಂಬ ಪ್ರಶ್ನೆ ಇಲ್ಲಿ ಮೂಡುವುದರಲ್ಲಿ ಅನುಮಾನವೇ ಇಲ್ಲ ?. ಹೀಗಾಗಿ, ಚಿತ್ರಣದ ಚಿತ್ತಾರವನ್ನು ಮೂಡಿಸುವ ಪ್ರಯತ್ನದ ಪರಮ ಅಭಿವ್ಯಕ್ತಿಯಲ್ಲಿಯೇ ಶಿಕ್ಷಣ ನಡೆಯಬೇಕಲ್ಲವೇ ? ಅದೇ ಆದರ್ಶಮಾನ ಓಸುಗ ! (Noble Cause!).

### ಏಕಾಗ್ರತೆ ಮತ್ತು ಧನಾತ್ಮಕ ಪರಿಣಾಮ

ಏಕಾಗ್ರತೆಯೆಂಬುದು ಯಾವುದೇ ಕೆಲಸವನ್ನು ಮಾಡಲು ಬೇಕಾಗಿರುವ ಅವಶ್ಯ ಘಟಕಾಂಶ ಎಂದರೆ ತಪ್ಪಾಗಲಾರದು!. ಪ್ರಸಿದ್ಧ ಗ್ರಂಥಗಳಲ್ಲಿ, ಜನಪ್ರಿಯ ಪುಸ್ತಿಕೆಗಳಲ್ಲಿ ಸಾವಿರಾರು ಉದಾಹರಣೆಗಳು ಬರವಣಿಗೆಯ ರೂಪದಲ್ಲಿ ಲಭ್ಯವಿವೆ. ಆದರೂ ಸಹ, ಏಕಾಗ್ರತೆಗೆ ಇನ್ನೊಂದು ವೈಶಿಷ್ಟ್ಯಪೂರ್ಣ ಘಟನೆಯ ವಿಶ್ಲೇಷಣೆಯನ್ನು ಗಮನಿಸೋಣಾ ಮತ್ತು ಏಕಾಗ್ರತೆಯ ಧನಾತ್ಮಕ ಪರಿಣಾಮವನ್ನು ಅರಿತುಕೊಂಡು, ಅಳವಡಿಸಿಕೊಳ್ಳಲು ಪ್ರಯತ್ನಿಸೋಣಾ. ದೈನಂದಿನ ಜೀವನದಲ್ಲಿ ನಮ್ಮೆಲ್ಲರ ಕಣ್ಮುಂದೆ ಸಂಭವಿಸುವ ಒಂದು ಘಟನೆ. ಸೂರ್ಯ ನೈಸರ್ಗಿಕ ಬೆಳಕಿನ ಆಕರ. ಸೂರ್ಯನಿಂದ ಹೊರಹೊಮ್ಮುವ ಬೆಳಕಿನ ಕಿರಣಗಳನ್ನು (Light Rays) ಒಂದು ಕಾಗದದ ಚೂರಿನ (Piece of Paper) ಮೇಲೆ ಬೀಳುವಂತೆ ಮಾಡಿದಾಗ ಕಾಗದದ ದರ್ಶನವಾಗುತ್ತದೆ. ಇದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಆದರೆ, ಅದೇ ಸೂರ್ಯನ ಕಿರಣ ಮತ್ತು ಕಾಗದದ ನಡುವೆ ಒಂದು ಪೀನ ಮಸೂರವನ್ನು (Convex Lens) ನಿಗಧಿತ ಸ್ಥಳದಲ್ಲಿ ಹಿಡಿದುಕೊಂಡು ಬೆಳಕಿನ ಕಿರಣಗಳನ್ನು ಒಂದೆಡೆಗೆ ಕೇಂದ್ರೀಕರಿಸುವಂತೆ ಮಾಡಿದಾಗ, ಕೇಂದ್ರೀಕೃತಗೊಂಡ ಕಿರಣಗಳು ಕಾಗದವನ್ನು ಸುಟ್ಟುಹಾಕುತ್ತವೆ. ಇಲ್ಲಿ ಸೂರ್ಯನಿಂದ ಬರುತ್ತಿದ್ದ ಬೆಳಕಿನ ಕಿರಣಗಳನ್ನು ಹಾಗೆಯೇ ಬಿಟ್ಟಿದಿದ್ದರೆ, ಅವುಗಳು ಕೇವಲ ಕಾಗದದ ದರ್ಶನ ಮಾಡಿಸುತ್ತಿತ್ತು. ಆದರೆ, ಪೀನ ಮಸೂರದ ಸಹಾಯದಿಂದ ಒಂದೆಡೆಗೆ ಸಂಗಮಗೊಂಡ ಕಿರಣಗಳು ತೀಕ್ಷ್ಣಗೊಂಡು ಜ್ವಾಲೆಯನ್ನು ಉತ್ಪತ್ತಿ ಮಾಡುತ್ತವೆ!. ಈ ವಿವರಣೆಯನ್ನು ರಚನಾತ್ಮಕ ನೆಲೆಯಲ್ಲಿ ಮಾತ್ರ ಉದ್ಗರಿಸಲಾಗಿದೆ. ಹೀಗಾಗಿ ಇಲ್ಲಿ ಜ್ವಾಲೆಯೆಂದರೆ, ಮತಿ(ಬುದ್ಧಿಶಕ್ತಿ) ಎಂದು ಅರ್ಥೈಸಿಕೊಳ್ಳಬಹುದು. ಜ್ಞಾನಪ್ರಭೆ ಪ್ರಕಾಶಿಸಬೇಕೆಂದರೆ, ಮನುಜನ ಮಿದುಳಿನಲ್ಲಿ ಉದ್ಭವಿಸಿ, ವಿವಿಧ ದಿಕ್ಕಿನಲ್ಲಿ ಹರಿಯುವಂತಹ ಇಚ್ಛಾಶಕ್ತಿ (Will Power), ಭಾವನಾ ಶಕ್ತಿ (Imagination Power) ಮತ್ತು ಆಲೋಚನಾ ಶಕ್ತಿಗಳ (Thinking Power) ದಿಕ್ಕನ್ನು ಮನಸ್ಸೆಂಬ ಮಸೂರದ ಸಹಾಯದಿಂದ ಒಂದೆಡೆಗೆ ಕೇಂದ್ರೀಕರಿಸಲು ವಿದ್ಯಾರ್ಜನೆಯಲ್ಲಿನ ಬದುಕಿನುದ್ದಕ್ಕೂ ಶ್ರಮಿಸಬೇಕಿದೆ, ಅನವರತ. ಅದೇ ಏಕಾಗ್ರತೆಯ ಮೊದಲ ಹೆಜ್ಜೆಯಾಗಬೇಕು ಮತ್ತು ನಂತರದ್ದು, ಚಿಂತನೆ. ಅದನ್ನೇ ಅಭ್ಯಾಸಿಸಬೇಕಿದೆ ಅನುರಣಿತ ಜ್ಞಾನಪ್ರಭೆಯೆಡೆಗೆ, ಸಮಾಜದ ಉನ್ನತಿಯೆಡೆಗೆ. ಕಲಿಕೆಯ ಸಮಯದಲ್ಲಿ ಜ್ಞಾನಗ್ರಹಿಕೆಯ (Percentage of Absorption) ಅಂಶ ಹೆಚ್ಚುತ್ತಿರಬೇಕು, ಮನಸ್ಸಿನೊಳಗಿನ ಪ್ರತಿಫಲನ (Reflection Characters) ಗುಣಗಳು, ಆಲೋಚನೆಗಳ ಚದುರುವಿಕೆ ಯಿಂದಾದ (Scattering of Thoughts) ಮನಸ್ಥಿತಿಗಳನ್ನು ನಿಯಂತ್ರಣದಲ್ಲಿರಿಸಲು (Controlling of Mindset) ಸಂಯಮದ ಮೂಲಕ ಸರ್ವದಾ ಪ್ರಯತ್ನಿಸುತ್ತಿರಬೇಕು. ಹಾಗೂ, ಇದು ನಿರಂತರವಾಗಿರಬೇಕು (Continum), ತರುವಾಯದಲ್ಲಿ ದೊರಕುವ ಇಳುವರಿ (Yield) ಯೇ ಜ್ಞಾನಪ್ರಕಾಶ (Illumination)!. ಈ ಪ್ರಭೆ (Radiance) ಸುತ್ತಮುತ್ತಲಿನ ವಾತಾವರಣ ಮತ್ತು ಸಮಾಜವನ್ನು ಬೆರಗುಗೊಳಿಸುತ್ತಿರಬೇಕು. ಈ ಕಾಂತಿ ಇಡೀ ಜಗತ್ತನ್ನು ವ್ಯಾಪಿಸಲು ಎಲ್ಲರೂ ಏಕೀಕರಣ (Integration) ಗೊಂಡು ಕೈಜೋಡಿಸಬೇಕು, ಮುನ್ನಡೆಯಬೇಕು ಎಂದೆಂದಿಗೂ. ಈ ಪ್ರಭೆಯಿಂದ ಉದ್ಭವವಾದ ಮತಿಯು ಸಮಾಜವನ್ನು ಬೆಳಗಬೇಕು ನಿರಂತರವಾಗಿ !. ಅದೇ ಮನುಕುಲದ ಒಳಿತಿಗಾಗಿ ವಿದ್ಯಾರ್ಥಿಗಳ ಜ್ಞಾನದ ಬಳಕೆಯು ಕೊಡುಗೆಯಾಗಬೇಕು ಅಲ್ಲವೇ ?

### ವೈಜ್ಞಾನಿಕ ನೆಲೆಗಟ್ಟು ಮತ್ತು ಅವಶ್ಯಕತೆ

ವಿಜ್ಞಾನ ವಿಷಯಗಳ ಅಧ್ಯಯನ ಎಂಬುದು ಜ್ಞಾನಾರ್ಜನೆಯ ವಿಶಿಷ್ಟ ನಡೆ. ನಿಯಮಗಳಡಿಯಲ್ಲಿನ ಹದವಾದ ಮತ್ತು ಗಹನವಾದ ಚಿಂತನೆ ಎಂದು ಕರೆಯಬಹುದು. ಇದನ್ನು ಅರಿತುಕೊಳ್ಳಲು ಒಂದು ಕಿರು ಪ್ರಯತ್ನ. ಈ ಹಿನ್ನಲೆಯ ನೂರಾರು ವಿವರಣೆಗಳಿವೆ. ಆದರೂ, ಗೊತ್ತು–ಗುರಿಯಿಲ್ಲದ (Arbitrary) ಮತ್ತು ವಸ್ತುನಿಷ್ಠತೆಯ (Objective) ನಡುವಿನ ಅಂತರದ ಅರಿವಿಗಾಗಿ, ವೈಶಿಷ್ಟ್ಯಪೂರ್ಣ ವಿಶ್ಲೇಷಣೆ. ಪ್ರಪಂಚದ ಯಾವುದೇ ಮೂಲೆಯಲ್ಲಿನ, ಯಾವುದೇ ಗುಂಪಿನ ವಿದ್ಯಾರ್ಥಿ ಸಮೂಹಕ್ಕೆ ಒಂದು ವೃತ್ತವನ್ನು ರಚಿಸುವಂತೆ ಹೇಳಿದಾಗ, ಕೆಲವರು ಸಣ್ಣದಾದ, ಕೆಲವರು ದೊಡ್ಡದಾದ, ಕೆಲವರು ಮಧ್ಯಮ ಗಾತ್ರದ, ಕೆಲವರು ತೀರ ಸಣ್ಣದಾದ, ಕೆಲವರು ತೀರ ದೊಡ್ಡಗಾತ್ರದ ವೃತವನ್ನು ರಚಿಸಬಹುದು[5]. ಇಲ್ಲಿ ವಿದ್ಯಾರ್ಥಿ ಸಮೂಹಕ್ಕೆ ಕೇಳಿದ ಪ್ರಶ್ನೆ ಒಂದೇ ಆಗಿದ್ದರೂ, ವಿದ್ಯಾರ್ಥಿಗಳ ಉತ್ತರದ ಅಭಿವ್ಯಕ್ತಿಯ ರೂಪುರೇಷಗಳು ಹಲವಾರು. ಅಂದರೆ, ಅವರವರ ಮನಸ್ಸಿಗೆ ಬಂದಂತೆ ವಿವಿಧ ಗಾತ್ರದಲ್ಲಿ ರಚನೆ ಮಾಡಿರುತ್ತಾರೆ (ಯಾದೃಚ್ಛಿಕ)!. ಏಕೆ ಹೀಗೆ?, ಕಾರಣ ಏನಿರಬಹುದು?, ಅಥವಾ ಪ್ರಶ್ನೆಯೇ ಅಸ್ಪಷ್ಟವಾಗಿದೆಯೇ ?. ಈ ಗೊಂದಲವನ್ನು ಪರಿಹರಿಸುವುದಾದರು ಹೇಗೆ ? ಎಂಬ ಹಲವಾರು ಪ್ರಶ್ನೆಗಳು ಎಲ್ಲರಲ್ಲೂ ಮೂಡಬಹುದು. ಆ ಅನುಮಾನವನ್ನು ಸದ್ಯಕ್ಕೆ ಅಲ್ಲಿಗೇ ನಿಲ್ಲಿಸಿ, ಅದೇ ಪ್ರಶ್ನೆಯನ್ನು, ಅದೇ ಗುಂಪಿನ ವಿದ್ಯಾರ್ಥಿ ಸಮೂಹಕ್ಕೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಂದರೆ, ವೃತ್ತದ ಗಾತ್ರವನ್ನು ನಿರ್ಧರಿಸಿ (ಕೊಟ್ಟು), ವೃತ್ತವನ್ನು ರಚನೆಮಾಡಲು ಹೇಳಿದರೆ, ಪ್ರತಿಯೊಬ್ಬರೂ ಒಂದೇ ಗಾತ್ರದ ವೃತ್ತವನ್ನು ರಚಿಸುತ್ತಾರೆ (ವಸ್ತುನಿಷ್ಠತೆ) !. ಆಗ, ವೃತ್ತದ ಉಳಿದೆಲ್ಲಾ ವೈಶಿಷ್ಟ್ಯತೆಗಳಾದ ಪರಿಧಿ, ತ್ರಿಜ್ಯ, ಸುತ್ತಳತೆ ಎಲ್ಲವೂ, ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ಆಗಿರುತ್ತದೆ[6]. ಇದು ಆಶ್ಚರ್ಯವಾದರೂ ಸತ್ಯ !. ಅಂದರೆ, ಇಲ್ಲಿ ಯೋಚನಾಲಹರಿಯ(ಕೇಳುವ ಮನ–ಆಲಿಸುವ ಮನ) ಸಾಮ್ಯತೆಯ ಅಭಿವ್ಯಕ್ತಿಯಾಗಿದೆ ಎಂದರ್ಥ !. ಇದೇ ವಿಜ್ಞಾನ ಕಲಿಕಾ ವಿಧಾನದ ಮೊದಲ ಹೆಜ್ಜೆ. ಹಾಗೂ, ಇಲ್ಲಿ ವೈಜ್ಞಾನಿಕ ಮನಸ್ಥಿತಿಯ ಅನಾವರಣವಾಗಿದೆ ಎಂದು ಅರ್ಥೈಸಿಕೊಳ್ಳಬಹುದು. ನಂತರದ ಯಾವುದೇ ಗುಣಾತ್ಮಕ

ISSN : 2249-2429 ಸಂಶೋಧನೆ RNI REG.NO.KARKAN/2011/38712


ನಡಿಗೆಗಳಾದ ಸಮೀಕ್ಷೆ, ವಿಶ್ಲೇಷಣೆ, ಸಂಶ್ಲೇಷಣೆ, ಸಂಶೋಧನೆ ಇತ್ಯಾದಿಗಳು ವಿಜ್ಞಾನ/ತಂತ್ರಜ್ಞಾನ ವಿಷಯವನ್ನು ಅರಿಯಲು ಸಾಮಾನ್ಯವಾಗಿ ಬಳಸುವ ಅಂಶಗಳು. ಈ ವೈಜ್ಞಾನಿಕ ನೆಲೆಗಟ್ಟಿನ ಸಾಧನಗಳೊಂದಿಗೆ ಕಲಿಕೆಯ ಸ್ಪಷ್ಟ ಹೆಜ್ಜೆಗಳು ಪ್ರಾರಂಭವಾಗಬೇಕು ಅಲ್ಲವೇ ?!. ವೈಜ್ಞಾನಿಕ ಪಥ ಆರಂಭಿಕ ಹಂತದಲ್ಲೇ ನಿರ್ಮಾಣವಾಗಬೇಕು ಅಲ್ಲವೇ ?


## ಜ್ಞಾನ ವೃಕ್ಷ


ಕಲಿಕೆಯೆಂಬುದು ಬೀಜಮಂತ್ರ. ಕಲಿಕೆಯೆಂಬ ಬೀಜಮಂತ್ರವನ್ನು ಜ್ಞಾನ ವೃಕ್ಷವಾಗಿ ಪರಿವರ್ತಿಸಿ ಏರಬೇಕೆಂದರೆ ಶ್ರಮವಹಿಸಲೇಬೇಕು. ಈ ವಿಶ್ಲೇಷಣೆಯಲ್ಲಿ ಮರದ ಕಾಂಡವನ್ನು ಜ್ಞಾನವೆಂದು, ಶಾಖೆಗಳನ್ನು ಜ್ಞಾನದ ವಿವಿಧ ಕವಲುಗಳೆಂದು, ಬೇರುಗಳನ್ನು ಜ್ಞಾನದ ಅಧಮ್ಯ ಶಕ್ತಿ ಕೇಂದ್ರವೆಂದು ಮರದಲ್ಲಿನ ಹಣ್ಣುಗಳನ್ನು ಉತ್ತಮ ಫಲಿತಾಂಶದಿಂದ ಹೊರಬರುವ ವಿದ್ಯಾರ್ಥಿಗಳೆಂದು ಪರಿಕಲ್ಪಿಸಿಕೊಳ್ಳೋಣ. (ಹಣ್ಣುಗಳ ಚಿತ್ರವನ್ನು ಇಲ್ಲಿ ಬರೆದಿಲ್ಲ, ಕಾರಣ ಮರಗಳ ವೈಶಿಷ್ಟ್ಯತೆಗಳಿಗನುಸಾರವಾಗಿ ಹಣ್ಣುಗಳಿರುತ್ತವೆ.) ಯಾವುದೇ ವೃಕ್ಷವು ಬೇರಿನ ಗುಣವೈಶಿಷ್ಟ್ಯತೆಯ ಸಹಾಯದಿಂದ ತನ್ನ ಸುತ್ತಮುತ್ತ ಇರುವ ಮಣ್ಣಿನಲ್ಲಿನ ಖನಿಜಾಂಶಗಳನ್ನು ಸೆಳೆದುಕೊಂಡು ವೃಕ್ಷದ ಕಾಂಡ ಮತ್ತು ವಿವಿಧ ಶಾಖೆಗಳಿಗೆ ಪರಿಚಲಿಸಲು ಮತ್ತು ಬೆಳೆಯಲು ಅನುವು ಮಾಡಿಕೊಡುತ್ತದೆ. ನಂತರ ಇಳುವರಿಯ ರೂಪದಲ್ಲಿ ಹಣ್ಣುಗಳನ್ನು ಕೊಡುತ್ತವೆ. ಇಲ್ಲಿ ವೃಕ್ಷವನ್ನು ವಿದ್ಯಾಸಂಸ್ಥೆ (ಶಿಕ್ಷಕರು)ಗೂ, ಕಾಂಡವನ್ನು ಜ್ಞಾನಕ್ಕೂ, ಶಾಖೆಗಳನ್ನು ವಿವಿಧ ವಿಷಯಗಳಿಗೂ ಮತ್ತು ಹಣ್ಣುಗಳನ್ನು ಉತ್ತಮ ಫಲಿತಾಂಶದಿಂದ ಹೊರಬಂದ ವಿದ್ಯಾರ್ಥಿಗಳಿಗೂ ಹೋಲಿಸಿದಾಗ ತುಲನೆಯಲ್ಲಿ ಕೊಂಚವೂ ವ್ಯತ್ಯಯ ಕಾಣಸಿಗುವುದಿಲ್ಲ. ಈ ಹಿನ್ನಲೆಯಲ್ಲಿ ಫಲಭರಿತ ಹಣ್ಣುಗಳಾಗಿ ಹೊರಬರಬೇಕು ಪ್ರತಿಯೊಬ್ಬ ವಿದ್ಯಾರ್ಥಿಗಳು ಎಂದು ಪರಿಕಲ್ಪಿಸಿ ವಿಶ್ಲೇಷಿಸಲಾಗಿದೆ. ವಿದ್ಯಾರ್ಥಿಗಳ ಕೌಶಲ್ಯವನ್ನು, ನಿಪುಣತೆಯನ್ನು ಅರಿತ ವಿವಿಧ ಉದ್ಯಮಗಳು, ಉದ್ಯಮಿಗಳು, ಶಿಕ್ಷಣ ಸಂಸ್ಥೆಗಳಿಗೇ ಭೇಟಿಕೊಟ್ಟು ವಿದ್ಯಾರ್ಥಿಗಳನ್ನು ತಮ್ಮ ತಮ್ಮ ಕಂಪನಿಗಳಿಗೆ ಆಯ್ಕೆಮಾಡಿಕೊಂಡು ನೌಕರಿ ನೀಡುವುದರಲ್ಲಿ ಆಶ್ಚರ್ಯವಿಲ್ಲ!. ವಿದ್ಯಾರ್ಥಿಗಳ ಜ್ಞಾನವನ್ನು ಬಳಸಿಕೊಳ್ಳುವ, ಕೌಶಲ್ಯಗಳನ್ನು ಉಪಯೋಗಿಸಿ ಕೊಳ್ಳುವ ಕಂಪನಿಗಳಿಗೆ ಮತ್ತು ಸಮಾಜಕ್ಕೆ ಎಂದೆಂದಿಗೂ ಸಿಹಿ ಯನ್ನೀಯುವ ಹಣ್ಣುಗಳಾಗಿಯೇ ಇರಬೇಕು ಎಂದಿಗೂ, ಎಂದೆಂದಿಗೂ. ವಿದ್ಯಾರ್ಥಿಗಳ ಐಚ್ಛಿಕ ಇರಾದೆಗನುಸಾರ ವಾಗಿ ವಿವಿಧ ಶಾಖೆಗಳನ್ನೇರಿ ಜೀವನ ನಡೆಸಬಹುದು. ಅಂದರೆ, ವಿವಿಧ ವಿಷಯಗಳಲ್ಲಿ ಜ್ಞಾನವನ್ನು ಪಡೆದು ಕೊಳ್ಳಬಹುದು. ಇಲ್ಲವೇ ವೃಕ್ಷದ ಬೇರುಗಳಾಗಿ, ವೃಕ್ಷದ ಒಳಿತಿನ ಸ್ಥಂಭದ ಹಾಗೆ, ಸಂಶೋಧನೆ–ಆವಿಷ್ಕಾರ–ಅನ್ವೇಷಣೆ–ವಿಶ್ಲೇಷಣೆ–ಸಂಶ್ಲೇಷಣೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವಿಷಯದ ವಿಸ್ತಾರತೆಯನ್ನು ಅಭಿವೃದ್ಧಿ ಪಡಿಸಲು ಶ್ರಮಿಸಬಹುದು. ಇದಕ್ಕೆಲ್ಲಾ ಕಲಿಕೆಯೇ ಜೀವಾಳ ! ಇದು ಬದುಕಿನ ವಿವಿಧ ಸ್ತರಗಳಲ್ಲೂ, ಜೀವಾಳವಾಗಿಯೇ ಇರಬೇಕು. ಅದೇ ವಿದ್ಯಾರ್ಥಿಗಳು ಸಮಾಜಕ್ಕೆ ಮರುಸಂದಾಯ ಮಾಡುವ ಕೊಡುಗೆಯಾಗಬೇಕು. ಇದರಿಂದ ವಿದ್ಯಾರ್ಥಿ, ಶಿಕ್ಷಣ ಪಡೆದುಕೊಂಡ ಸಂಸ್ಥೆಗೆ, ನಿಮ್ಮನ್ನು ಬೆಳೆಸಿದ ಸಮಾಜಕ್ಕೆ ಮತ್ತು ಹುಟ್ಟಿ ಬೆಳೆದ ಹಳ್ಳಿ/ಜಿಲ್ಲೆ/ರಾಜ್ಯ/ದೇಶಕ್ಕೆ ಒಳ್ಳೆಯ ಹೆಸರನ್ನು ತಂದುಕೊಟ್ಟಂತಾಗುತ್ತದೆ. ಯಾವುದೇ ಫಲವತ್ತಾದ ಬೆಳೆಗೆ ನೀರು, ಗೊಬ್ಬರ–ಬೆಳಕು–ಔಷದ ಎಷ್ಟು ಮುಖ್ಯವೋ ಕಲಿತ ಸಂಸ್ಥೆಯು ಕೂಡ ಅಷ್ಟೇ ಮುಖ್ಯ. ಅಧ್ಯಾಪನೆ ಹಾಗೂ ಅಭ್ಯಾಸ ಇವು ವಿದ್ಯಾರ್ಥಿಗಳ ಧ್ಯೇಯವಾದಲ್ಲಿ, ಸಮಾಜಕ್ಕೆ ಉತ್ತಮ ಫಲವನ್ನು ಪ್ರತಿಯಾಗಿ ಕೊಡುವುದರಲ್ಲಿ ಅನುಮಾನವೇ ಇಲ್ಲ !. ಅದು, ಸದಾ ಫಲಭರಿತ ವೃಕ್ಷವಾಗಿರುತ್ತದೆ.


## ಮಾರ್ಗಗಳು ಮತ್ತು ಗೋಡೆಗಳು


ಸದ್ಯದ ಕಾಲಘಟ್ಟದಲ್ಲಿ ವಿಶ್ವಾದ್ಯಂತ ಕ್ವಾಂಟಮ್ ಡಾಟ್ಸ್ (Quantum Dots) ಗಳು ಮತ್ತು ಅವುಗಳ ಗುಣವೈಶಿಷ್ಟ್ಯತೆಗಳ ಬಗ್ಗೆ ಗಹನವಾದ ಸಂಶೋಧನೆಗಳು ಜರುಗುತ್ತಿವೆ. ಶೂನ್ಯ ಆಯಾಮದಲ್ಲಿ (Zero Dimension) ಕೆಲವೊಂದು ಧಾತುಗಳು (Elements) ಮತ್ತು ಧಾತುಗಳ ಮಿಶ್ರಣಗಳು (Alloy) ಪ್ರದರ್ಶಿಸುವ ಅಗಾಧ ಪ್ರಮಾಣದ ದ್ಯುತಿ (Optical) ಮತ್ತು ವಿದ್ಯುನ್ಮಾನ (Electronic) ಗುಣಗಳು ! ಈ ಕ್ವಾಂಟಮ್ ಬಿಂದುಗಳನ್ನು ಮನುಜನ ಆಲೋಚನೆಗಳಿಗೆ ಮತ್ತು ಮಿದುಳಿನಲ್ಲಿ ಸಂಭವಿಸುವ ಧನಾತ್ಮಕ ಮತ್ತು ಋಣಾತ್ಮಕ ಆವೇಗ (Impulse) ಗಳಿಗೆ ತುಲನೆ ಮಾಡಲಾಗಿದೆ. ಕಾರಣ, ಮಿದುಳಿನಲ್ಲಿ ಉಂಟಾಗುವ ಚಾಲನಶಕ್ತಿಗೆ ಮೂಲ, ನರಮಂಡಲದಲ್ಲಿ ಪ್ರವಹಿಸುವ ವಿದ್ಯುತ್ ! ಹೀಗಾಗಿ ಮಿದುಳಿನಲ್ಲಿ ಉದ್ಭವಿಸುವ ಯಾವುದೇ ಆಲೋಚನೆಗೆ, ವಿದ್ಯುನ್ಮಾನ ವಿಭವಾಂತರದ (Voltage) ಪ್ರಮಾಣಕ್ಕೂ ನೇರ ನಂಟಿದೆ ಎಂದು ಶರೀರಶಾಸ್ತ್ರದಲ್ಲಿ (Physiology) ಖಚಿತಪಡಿಸಲಾಗಿದೆ. ಕ್ವಾಂಟಮ್ ಓಪನಿಂಗ್ಸ್ (Quantum Openings ಚಿತ್ರ : 1) ಕ್ವಾಂಟಮ್ ಕ್ಲೋಶರ್ಸ್ (Quantum Closures ಚಿತ್ರ : 2) ಪರ್ಯಾಯ ಕ್ವಾಂಟಮ್ ಅತ್ಯಂತ ಚಿಕ್ಕ ಪ್ರಮಾಣದ ಶಕ್ತಿಯ ಪರಿಮಾಣವನ್ನು ಕ್ವಾಂಟಮ್ (Quantum) ಎಂದು ಕರೆಯುತ್ತಾರೆ. ಕ್ವಾಂಟಮ್ ತೆರೆಯುವಿಕೆಗಳು (Quantum openings) ಮತ್ತು ಕ್ವಾಂಟಮ್ ಮುಚ್ಚುವಿಕೆಗಳು (Quantum closures) ಇವೆರಡನ್ನೂ ಮಾರ್ಗ ಮತ್ತು ಗೋಡೆಗಳಿಗೆ ಹೋಲಿಸಿ, ಕ್ರಮವಾಗಿ ಧನಾತ್ಮಕ ಶಕ್ತಿ ಮತ್ತು ಋಣಾತ್ಮಕ ಶಕ್ತಿಯ ಸಂಕೇತಗಳೆಂಬ ನಾವಿನ್ಯ ವಿಶ್ಲೇಷಣಾ ಪ್ರಯತ್ನವಿದು. ವಿದ್ಯಾರ್ಥಿಯ ಮನೋವೃತ್ತಿಯು ಸರ್ವತೋಮುಖ ಬೆಳವಣಿಗೆಗೆ ಮುಖ್ಯಪಾತ್ರವನ್ನು ವಹಿಸುತ್ತದೆ. ಯಾವುದೇ ವಿದ್ಯಾರ್ಥಿಯ ಧೈರ್ಯ ಪ್ರವೃತ್ತಿ, ಇತರರೊಂದಿಗೆ ಬೆರೆಯುವ ಮನೋಭಾವ, ಸತತ ಪ್ರಯತ್ನ, ನಿರಂತರ ಅಭ್ಯಾಸ, ಮುನ್ನುಗ್ಗುವ ಛಲ, ಉತ್ಸಾಹ ಭರಿತತೆ, ಆಶಾವಾದ ಹೀಗೆ ಹತ್ತು–ಹಲವು ಧನಾತ್ಮಕ ಗುಣಗಳು ಜೀವನದ ಕೊನೆಯವರೆಗೂ ಕ್ವಾಂಟಮ್ ಓಪನಿಂಗ್ಸ್ (Quantum openings ಚಿತ್ರ:1) ಗಳಾಗಿರುತ್ತವೆ. ಹಾಗೂ ಪ್ರತಿ ಹೆಜ್ಜೆಯಲ್ಲೂ ಹೊಚ್ಚ ಹೊಸ ದಾರಿಗಳು ಕಾಣುತ್ತವೆ. ಆದರೆ, ಅಂಜಿಕೆ, ನಾಚಿಕೆ, ಏಕತಾನತೆ, ಸಂಕುಚಿತ ಮನೋಭಾವ, ಸ್ವ–ದೂಷಣೆ, ಋಣಾತ್ಮಕ ಊಹೆಗಳು, ಋಣಾತ್ಮಕ ವದಂತಿಗಳು, ಸ್ವ–ತಪ್ಪುಗಳನ್ನು ಮರೆಯದಿರುವುದು ಹೀಗೆ ಹತ್ತು ಹಲವು ಋಣಾತ್ಮಕ ಗುಣಗಳು. ಇವುಗಳೇ ಜೀವನದುದ್ದಕ್ಕೂ ಕ್ವಾಂಟಮ್ ಕ್ಲೋಶರ್ಸ್ (Quantum Closures) ಗಳಾಗಿ ಪರಿಣಮಿಸುತ್ತವೆ. ಅಂದರೆ ದಾರಿಗಳೇ ಇಲ್ಲಂದಂತಾಗುತ್ತದೆ. ಕ್ಲೋಶರ್ಸ್ ಎಂಬ ಈ ವ್ಯೂಹದಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಈ ಲೇಖನದಲ್ಲಿ ಪ್ರಸ್ತುತ ಪಡಿಸಿರುವ ಕ್ವಾಂಟಮ್ ಓಪನಿಂಗ್ಸ್ ಮತ್ತು ಕ್ವಾಂಟಮ್



ಚಿತ್ರ:1



ಚಿತ್ರ:2



ಚಿತ್ರ:3


ಚಿತ್ರ:4


ಚಿತ್ರ:5


ಚಿತ್ರ6


ಚಿತ್ರ:7


ಚಿತ್ರ:8

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕ್ಲೋಶರ್ಸ್ ಲೇಖಕರ ಸೃಷ್ಟಿಯ ನವೀನ ಪದಗಳು. ಒಮ್ಮೊಮ್ಮೆ ಸ್ವಭಾವಗಳು, ಪರ್ಯಾಯ ಮಾರ್ಗಗಳಾಗಿಯೂ ಮತ್ತು ಪರ್ಯಾಯ ಗೋಡೆಗಳಾಗಿಯೂ ಪರಿಣಮಿಸುತ್ತವೆ. ಸಾಮರಸ್ಯವಿಲ್ಲದ ನಡಗೆಗಳು, ಕ್ರಮರಹಿತ ಆಲೋಚನೆಗಳು ಆವರಿಸಿಕೊಂಡಲ್ಲಿ, ಅಸಂಗತ (Anamolous Quantum closures ಚಿತ್ರ:3 ಮತ್ತು 4) ಕ್ವಾಂಟಮ್ ಕ್ಲೋಶರ್ಸ್‌ಗಳಾಗಿ ಮತ್ತು ಅಸಂಗತ (Anamolous Quantum Openings ಚಿತ್ರ : 7 ಮತ್ತು 8) ಕ್ವಾಂಟಮ್ ಓಪನಿಂಗ್ಸ್‌ಗಳಾಗಿ ಪರಿಣಮಿಸುತ್ತವೆ. ಹೀಗಾಗಿ ಋಣಾತ್ಮಕ ಗುಣಗಳನ್ನು ಮತ್ತು ಅಸಂಗತ ಆಲೋಚನೆಗಳನ್ನು ಮೀರಿ ಕಲಿಕೆಯೆಂಬ ವ್ಯೋಮದಲ್ಲಿ ನಿರಂತರವಾಗಿ ಜೀವಿಸಲು ಪ್ರಯತ್ನಿಸಬೇಕು ಅನವರತ. ಆಗ ಪ್ರತಿಯೊಂದು ಹೆಜ್ಜೆಗಳು ಮಾರ್ಗಗಳೇ ಆಗುತ್ತವೆ. ಆರಂಭದಲ್ಲಿ ಧನಾತ್ಮಕ ಆಲೋಚನೆಗಳಿದ್ದರೂ ಸಹ, ನಂತರದಲ್ಲಿ ಋಣಾತ್ಮಕ ಆಲೋಚನೆಗಳು ಆವರಿಸಿಕೊಂಡು ಮೇಲ್ಗೈ ಸಾಧಿಸುವುದರಿಂದ ಗುರಿಮುಟ್ಟುವುದು ಅಸಾಧ್ಯ. ಅರೆಮನಸ್ಸಿನಿಂದ ಆರಂಭವಾಗುವ ಆಲೋಚನೆಗಳಿಗೆ ಅಲ್ಪಪ್ರಮಾಣದ ಧನಾತ್ಮಕತೆಯಿದ್ದರೂ ಕೂಡ ಪೂರ್ಣಪ್ರಮಾಣದಲ್ಲಿ ಲಕ್ಷ್ಯ ಕಾಣಸಿಗುವುದು ಮರೀಚಿಕೆ. ಆರಂಭದಲ್ಲೆ ಋಣಾತ್ಮಕ ಆಲೋಚನೆಗಳಿಂದಾದ ಗೋಡೆಗಳು (ಚಿತ್ರ : 2 ಮತ್ತು ಚಿತ್ರ : 4) ನಿರ್ಮಾಣವಾಗಿ ಇರುವುದರಿಂದ ಧನಾತ್ಮಕ ಶಕ್ತಿಯ ಉಗಮ ದುರ್ಲಭ. ಪರ್ಯಾಯ ಕ್ವಾಂಟಮ್ ಓಪನಿಂಗ್ಸ್(ಚಿತ್ರ:3), ಪರ್ಯಾಯ ಕ್ವಾಂಟಮ್ ಕ್ಲೋಶರ್ಸ್(ಚಿತ್ರ : 4), ಅಸಂಗತ ಕ್ವಾಂಟಮ್ ಓಪನಿಂಗ್ಸ್ (ಚಿತ್ರ : 5 ಮತ್ತು 6) ಮತ್ತು ಅಸಂಗತ ಕ್ವಾಂಟಮ್ ಕ್ಲೋಶರ್ಸ್ (ಚಿತ್ರ 7 ಮತ್ತು 8)ಗಳು ಸಂಕೀರ್ಣ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ. ಈ ಸ್ಥಿತಿಗಳು (ಚಿತ್ರ : 3 ರಿಂದ 8) ಎಂದೆಂದಿಗೂ ಮಾರ್ಗಗಳಾಗಿ ಪರಿಣಮಿಸುವುದಿಲ್ಲ. ನಿರಂತರ ಪ್ರಯತ್ನದಿಂದ ಕ್ವಾಂಟಮ್ ಕ್ಲೋಶರ್ಸ್ (ಚಿತ್ರ : 2) ಗಳನ್ನು ಮಾರ್ಗಗಳಾಗಿ ಪರಿವರ್ತಿಸಬಹುದು. ಈ ವಿಶ್ಲೇಷಣೆಯ ಆಧಾರದ ಮೇಲೆ ಧನಾತ್ಮಕ ಆಲೋಚನೆಗಳ (ಚಿತ್ರ : 1) ನೆಲೆಯಲ್ಲೇ ವಿದ್ಯಾರ್ಜನೆಯ ಆರಂಭವಾಬೇಕು ಮತ್ತು ಹಾಗೆಯೇ ಮುಂದುವರೆಯ ಬೇಕು.


## ಉಪಸಂಹಾರ

ಅಭ್ಯಾಸವೆಂಬುದು ಕಲಿಕಾ ಜೀವನದಲ್ಲಿ ನಿರ್ಣಾಯಕ ಮತ್ತು ಅನನ್ಯ ಘಟಕಾಂಶವಾದಲ್ಲಿ ವಿದ್ಯಾರ್ಥಿ ಜೀವನದ ಕಡಲಲ್ಲಿ ತೇಲುವುದು ಖಂಡಿತವಾಗಿಯೂ ಸುಲಲಿತ. ಪ್ರಸ್ತಾಪಿಸಿರುವ ಎಲ್ಲ ಅಂಶಗಳನ್ನು ಒಳಗೂಡಿಸಿಕೊಂಡು ಕಲಿಕಾ ಜೀವನದಲ್ಲಿ ಮುಂದಡಿಯನ್ನಿಟ್ಟರೆ ಸಾಧನೆಯೆಂಬ ಶಿಖರವನ್ನೇರುವುದು ಖಚಿತ. ಅಂತ್ಯದಲ್ಲಿ ಪರಿವರ್ತನೆಯ ಪರಿವರ್ತಕರಾಗಿ, ಪ್ರವರ್ತಕರಾಗುತ ಪ್ರವರ್ಧಮಾನಕ್ಕೆ ಬಂದು ಪ್ರಬುದ್ಧ ಬದಲಾವಣೆಗಳನ್ನು ತರಬಹುದು. ಅದೇ 'ಕಲಿಕಾ ಜಗದಲ್ಲಿ' ಎಲ್ಲರಿಗೂ ಒಳಸೂಚಿಯಾಗಬೇಕು.!

## ಪರಾಮರ್ಶನ ಗ್ರಂಥಗಳು


1. https://dictionary.cambridge.org/dictionary/english/vowel
2. https://en.wikipedia.org/wiki/Human_brain
3. https://en.wikipedia.org/wiki/Action_potential
4. https://en.wikipedia.org/wiki/Neurotransmitter
5. https://en.wikipedia.org/wiki/Language_ processing_ in_the_brain
6. https://neurosciencenews.com/image-processing-brain-10793/
7. https://en.wikipedia.org/wiki/Objectivity_(philosophy)
8. https://www.unicist.org/conceptual-thinking/human-mindset/
9. https://www.google.co.in/search?q=quantum+meaning&sxsrf
10. https://en.wikipedia.org/wiki/File:Action_Potential.gif


■■

ವಿದ್ಯಾನಿಧಿ VPG ಪ್ರಕಾಶನ®

ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ,
ಎಸ್.ಪಿ. ಗದಗ ಕಂಪೌಂಡ, ಜೆ.ಟಿ. ಮಠ ರೋಡ, ಗದಗ-582 101

ದೂರವಾಣಿ : 08372–237527, 277527

e-mail : vidyanidhiprakashana@gmail.com.

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಪ್ರಶಿಕ್ಷಣ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಪಾತ್ರ (OPEN EDUCATIONAL RESOUR CES-OERs)

✍ **ಬಾಲಚಂದ್ರ ಮಡಿವಾಳ್,** ಸಂಶೋಧನಾರ್ಥಿ, ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

✍ **ಡಾ. ಎಸ್.ಎಸ್. ಪಾಟೀಲ್,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

*ಸಾರಾಂಶ*

*ಮಲ್ಲಿಕಾರ್ಜುನ ಶಿಕ್ಷಣದ ಪ್ರತಿಯೊಂದು ಕ್ಷೇತ್ರದಲ್ಲೂ ಬದಲಾವಣೆಗಳು ಮತ್ತು ಮಾರ್ಪಾಡುಗಳು ಸಾಕಷ್ಟು ಸಾಮಾನ್ಯವಾಗಿವೆ. ಬೋಧನಾ-ಕಲಿಕೆಯಲ್ಲಿ ಸಮಕಾಲಿಕ (ಸಿಂಕ್ರೊನಸ್) ಮತ್ತು ಅಸಮಕಾಲಿಕ (ಅಸಿಂಕ್ರೊನೊಸ್) ವಿಧಾನಗಳ ಮೂಲಕ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ (Open Educational Resources -OERs) ಮುಖಾಂತರ ಮುಕ್ತವಾಗಿ ವಿಷಯವನ್ನು ಪ್ರವೇಶಿಸಲು ಇದು ಪ್ರಸ್ತುತ ಹೊಸ ರಂಗವಾಗಿದೆ. ಜಾಗತಿಕ ಸಾಂಕ್ರಾಮಿಕ ರೋಗದ ನಂತರ ಇಡೀ ಜಗತ್ತು ಭಾರತ ಸೇರಿದಂತೆ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಆಧಾರಿತ ಬೋಧನೆ ಮತ್ತು ಕಲಿಕೆಯಾಗಿ ಮಾರ್ಪಟ್ಟಿತು, ಇದು ಸಾಂಪ್ರದಾಯಿಕ ಪದ್ಧತಿಗೆ ಹೋಲಿಸಿದರೆ ಬಳಕೆದಾರರಿಗೆ ಸಮಯ, ಹಣ ಮತ್ತು ಶಕ್ತಿಯನ್ನು ಉಳಿಸುತ್ತದೆ. ಇದೇ ನಿಟ್ಟಿನಲ್ಲಿ ಈ ಲೇಖನವು ಮುಕ್ತ ಸಂಪನ್ಮೂಲಗಳ ಇತಿಹಾಸ, 5R ಚಟುವಟಿಕೆಗಳು, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಮುಕ್ತ ಸಂಪನ್ಮೂಲಗಳನ್ನು ಬಳಕೆ ಮಾಡುವುದು, ಪ್ರಯೋಜನಗಳು, ಇತರೆ ಲಾಭಗಳು, ಶಿಕ್ಷಕರನ್ನು ಸಬಲೀಕರಣಗೊಳಿಸುವುದು ಒಳಗೊಂಡಿದ್ದು, ಪ್ರಸ್ತತ ಶಿಕ್ಷಣ ವ್ಯವಸ್ಥೆಯಲ್ಲಿ ಮುಕ್ತ ಸಂಪನ್ಮೂಲಗಳು ಅತ್ಯಂತ ಮುಖ್ಯವಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದನ್ನು ಸಾದರಪಡಿಸಲಾಗಿದೆ.*

*ಇತ್ತೀಚಿನ ದಿನಗಳಲ್ಲಿ ಪ್ರಪಂಚದಾದ್ಯಂತದ ಶಿಕ್ಷಣ ವ್ಯವಸ್ಥೆಯು ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs)ಗಳಂತಹ ವಿವಿಧ ಮೂಲಗಳಿಂದ ಸಮೃದ್ಧವಾಗುತ್ತಿದೆ. ಶಿಕ್ಷಣದ ಒಟ್ಟಾರೆ ಗುಣಮಟ್ಟವನ್ನು ಸುಧಾರಿಸಲು, ವಿಶೇಷವಾಗಿ ಸ್ಥಳೀಯ ಬೆಳವಣಿಗೆಗೆ ಉತ್ತಮ ಭರವಸೆಗಳನ್ನು ಈ ಮೂಲಕ ನೀಡಲಾಗಿದೆ. ಹಿಂದೆ ಗುರುಕುಲ ಪದ್ಧತಿ ಇತ್ತು, ಈಗ ಅದು ಅಂತರ್ಜಾಲ ಸಂಪನ್ಮೂಲಗಳಿಗೆ ವರ್ಗಾಯಿತವಾಗಿದೆ. ಇದು ಬೆರಳ ತುದಿಯಲ್ಲಿ ಲಭ್ಯವಿರುವಅತೀದೊಡ್ಡ ಸಂಪನ್ಮೂಲಗಳ ಮೂಲವಾಗಿದ್ದು. ಸಂಪೂರ್ಣ ಶೈಕ್ಷಣಿಕ ಶಿಕ್ಷಣವನ್ನು ರೂಪಿಸಲಾಗಿದೆ ಮತ್ತು ಅದನ್ನು ವಿದ್ಯುನ್ಮಾನರೂಪ (ಇ-ಫಾರ್ಮ್)ಗೆ ಪರಿವರ್ತಿಸಲಾಗಿದೆ, ಪ್ರತಿ ಮಗುವೂ ಅದನ್ನು ಒಂದೇ ಹುಡುಕಾಟದಲ್ಲಿ ಸುಲಭವಾಗಿ ಪಡೆಯಬಹುದು. ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಹೋಲಿಸಿದರೆ, ಶಿಕ್ಷಕರಂತಹ ಪ್ರಾಥಮಿಕ ಬಳಕೆದಾರರು ಹಾಜರಾಗಲು ಮತ್ತು ಐಸಿಟಿಯನ್ನು ಕರಗತ ಮಾಡಿಕೊಳ್ಳಲು ಸಕ್ರಿಯಗೊಳಿಸಬೇಕಾಗಿದೆ.*

*ಪ್ರಪಂಚದಾದ್ಯಂತ ಬೋಧನೆ ಮತ್ತು ಕಲಿಕೆಯನ್ನು ಅಗಾಧವಾಗಿ ಹೆಚ್ಚಿಸಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು (OERs) ಸಹಾಯ ಮಾಡುತ್ತವೆ. ಇವುಗಳು ಹೆಚ್ಚಾಗಿ, ಕಲಿಕಾ ಸಾಮಗ್ರಿಗಳು "ಉಚಿತ ಮತ್ತು ಮುಕ್ತ" ಪರಿಕಲ್ಪನೆಯಾಗಿ ಲಭ್ಯವಿದೆ, ಇದು ಅಭಿವೃದ್ಧಿಶೀಲ ರಾಷ್ಟಗಳಿಗೆ ಉತ್ತಮ ಪ್ರಯೋಜನವನ್ನು ಒದಗಿಸುತ್ತದೆ. ಅಲ್ಲಿ ಅನೇಕ ಕಲಿಯುವವರು ಪಠ್ಯಪುಸ್ತಕಗಳನ್ನು ಪಡೆಯಲು ಸಾಧ್ಯವಾಗದಿರಬಹುದು, ಅಲ್ಲಿ ತರಗತಿಗಳಿಗೆ ಪ್ರವೇಶವು ಸೀಮಿತವಾಗಿರಬಹುದು ಮತ್ತು ಶಿಕ್ಷಕರ ತರಬೇತಿ ಕಾರ್ಯಕ್ರಮಗಳ ಕೊರತೆಯು ಇರಬಹುದು. (UNESCO, 2014).*

*ಪ್ರಪಂಚದಾದ್ಯಂತ ಶಿಕ್ಷಣ ವ್ಯವಸ್ಥೆಯು ವಿವಿಧ ಮೂಲಗಳಿಂದ ಪುಷ್ಟೀಕರಿಸಲ್ಪಟ್ಟಿದೆ. ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ (OER) ಬಳಕೆಯು ಎಲ್ಲ ಗುಣಮಟ್ಟದ ಪ್ರವೇಶವನ್ನು ಸುಧಾರಿಸುವ ಉತ್ತಮ ಭರವಸೆ ಹೊಂದಿದೆ. ವಿಶೇಷವಾಗಿ ಭಾರತದಂತಹ ಅಭಿವೃದ್ಧಿಶೀಲ ರಾಷ್ಟಕ್ಕೆ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು (OER) ಯಾವುದೇ ಮಾಧ್ಯಮದಲ್ಲಿ ಡಿಜಿಟಲ್ ಅಥವಾ ಸಾರ್ವಜನಿಕವಾಗಿ ಲಭ್ಯವಿರುವ ಅಥವಾ ಮುಕ್ತ ಪರವಾನಗಿ ಅಡಿಯಲ್ಲಿ ಬಿಡುಗಡೆ ಮಾಡಲಾದ ಬೋಧನೆ, ಕಲಿಕೆ ಮತ್ತು ಸಂಶೋಧನಾ ಸಾಮಗ್ರಿಗಳು ಯಾವುದೇ ಅಥವಾ ಮಿತಿಯಿಲ್ಲದ ಇತರರಿಂದ, ಯಾವುದೇ ವೆಚ್ಚದ ಪ್ರವೇಶ, ಬಳಕೆ, ರೂಪಾಂತರ ಮತ್ತು ವಿತರಣೆಯನ್ನು ಅನುಮತಿಸುತ್ತದೆ. 2002 ರಿಂದ ಶೈಕ್ಷಣಿಕ ಸಂಪನ್ಮೂಲಗಳನ್ನು ಗಮನಿಸಿದರೆ, ಇಂದಿನವರಗೆ (OER)ನ್ನು ವಿವಿಧ ಹಂತಗಳು ಮತ್ತು ವಿಶ್ವದಾದ್ಯಂತ ಶಿಕ್ಷಣದ ವಿಧಾನಗಳಿಂದ ಕಲಿಯುವವರಿಗೆ ಜೀವಮಾನದ ಕಲಿಕೆಯ ಅವಕಾಶಗಳನ್ನು ಒದಗಿಸುವ ಸವಾಲುಗಳನ್ನು ಎದುರಿಸಲು ಅಂತಾರಾಷ್ಟ್ರೀಯ ಸಮುದಾಯವು ನವೀನ ವಿಧಾನವಾಗಿ ಗುರುತಿಸಲ್ಪಟ್ಟಿದೆ. ಇದರ ಫಲವಾಗಿ 2002ರ ವೇದಿಕೆಯಲ್ಲಿ ಮುಕ್ತ ಶೈಕ್ಷಣಿಕ ಸಂಪನ್ಮೂಲ (OPEN EDUCATIONAL RESOURCES) ಎಂಬ ಪದವನ್ನು ರಚಿಸಲಾಗಿದೆ. ತರುವಾಯ ಈ ಸಂಪನ್ಮೂಲಗಳನ್ನು ಜಾಗತಿಕವಾಗಿ ವಿವಿಧ ಸಂಸ್ಥೆಗಳು ಬೋಧನೆ ಮತ್ತು ಕಲಿಕಾ ತಂತ್ರಗಳಲ್ಲಿ ಅಳವಡಿಸಿಕೊಳ್ಳುತ್ತಿವೆ.*

## ಪೀಠಿಕೆ

ಮುಕ್ತ ಶೈಕ್ಷಣಿಕ ಸಂಪನ್ಮೂಲಗಳೆಂದರೆ, ಅದು ಯಾವುದೇ ತರಹದ ಅಥವಾ ರೂಪದ ಬೋಧನೆಯಾಗಿದ್ದು, ಕಲಿಕೆ ಮತ್ತು ಸಂಶೋಧನೆಗೆ ಯಾವುದೇ ಮಾಧ್ಯಮಗಳಲ್ಲಿ ಅಥವಾ ನಿರ್ದಿಷ್ಟ ನಿರ್ಬಂಧಗಳಿಗೊಳಪಟ್ಟು ಸಾಮಗ್ರಿಗಳನ್ನು ಬಳಸಬಹುದಾದ, ಅಳವಡಿಸಬಹುದಾದ ಮತ್ತು ಹಂಚಿಕೆ ಮಾಡಬಹುದಾದ ವಿದ್ಯಾಮಾನಗಳನ್ನು ಒಳಗೊಂಡಿದೆ. OER- ಆಧಾರಿತ ಆನ್ಲೈನ್ ಕಲಿಕೆಯು ಕಲಿಕೆಯ ಇತ್ತೀಚಿನ ವಿಧಾನವಾಗಿದೆ. ಏಕೆಂದರೆ ಕಲಿಯುವವರು ಮತ್ತು ಶಿಕ್ಷಕರು ಶೈಕ್ಷಣಿಕ ಕೆಲಸಕ್ಕಾಗಿ ಹಕ್ಕು ಸ್ವಾಮ್ಯ-ಮುಕ್ತ ವಸ್ತುಗಳನ್ನು ಬಳಸುವ ಸ್ವಾತಂತ್ರ್ಯವನ್ನು ಪಡೆಯುತ್ತಾರೆ (ಕರುಣಾನಾಯಕ ಮತ್ತು ಇತರರು, 2016).

UNESCO ಮತ್ತು ಸ್ಲೋವೇನಿಯ ದೇಶದ ಜಂಟಿ ಸಹಾಭಾಗೀತ್ವದಲ್ಲಿ, ಅಲ್ಲಿನ ಶಿಕ್ಷಣ, ವಿಜ್ಞಾನ ಮತ್ತು ಕ್ರೀಡಾ ಸಚಿವಾಲಯ OER ಕ್ರಿಯಾಯೋಜನೆಯಲ್ಲಿ ಈ ಕೆಳಕಂಡ 5 ಶಿಫಾರಸ್ಸುಗಳನ್ನು ಒದಗಿಸುತ್ತದೆ.

1. ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ (OERs) ಹುಡುಕಾಟ, ಮರುಬಳಕೆ, ರಚನೆ ಮತ್ತು ಹಂಚಿಕೆಯಲ್ಲಿ ಬಳಕೆದಾರರ ಸಾಮರ್ಥ್ಯವನ್ನು ನಿರ್ಮಿಸುವುದು.
2. ಭಾಷೆ ಮತ್ತು ಸಂಸ್ಕೃತಿ ಸಮಸ್ಯೆ ಅರಿತು, ಜ್ಞಾನವನ್ನು ವಿಸ್ತರಿಸುವುದು.
3. ಗುಣಮಟ್ಟದ OER ಗೆ ಅಂತರ್ಗತ ಮತ್ತು ಸಮಾನ ಪ್ರವೇಶವನ್ನು ಖಾತ್ರಿಪಡಿಸುವುದು.
4. ಸಮರ್ಥನೀಯ ಮಾದರಿಗಳನ್ನು ಅಭಿವೃದ್ಧಿಪಡಿಸುವುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

5. ಶಿಕ್ಷಣವು ಒಂದು ಗತಿಶೀಲ ಪ್ರಕ್ರಿಯೆಯಾಗಿದ್ದು, ಜಾಗತಿಕ ಗುಣಾತ್ಮಕ ಬಳಕೆಗೆ ಪೂರಕವಾದ ವಾತಾವರಣವನ್ನು ಅಭಿವೃದ್ಧಿ ಪಡಿಸುವುದು.

**ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ (OER)ವಿಷಯಗಳು ಮತ್ತು ಸಂಪನ್ಮೂಲಗಳು**

- ಉಚಿತ ಕೋರ್ಸ್ಗಳು (Free Courses)
- ಪಠ್ಯಪುಸ್ತಕಗಳು (Text Books)
- ಮೊಡ್ಯೂಲ್ಗಳು (Modules)
- ಪಾಠ ಮತ್ತು ಪಾಠ ಯೋಜನೆಗಳು (Lesson & Lesson Plans)
- ಪರೀಕ್ಷೆಗಳು (Tests)
- ವಿಡಿಯೋಗಳು (Videos)
- ಪೂರಕ ಅಧ್ಯಯನ ಸಾಮಗ್ರಿಗಳು (Supplementary Study Materials )
- ತಂತ್ರಾಂಶ ? (Software)

ಶಿಕ್ಷಣವು ಕ್ರಿಯಾತ್ಮಕ ಪ್ರಕ್ರಿಯೆಯಾಗಿದ್ದು ಚಾಲ್ತಿಯಲ್ಲಿರುವ ಜಾಗತಿಕ ಸ್ಪರ್ಧಾತ್ಮಕ ವಾತಾವರಣದೊಂದಿಗೆ ಬದಲಾಗುತ್ತದೆ. ಪ್ರಪಂಚದಾದ್ಯಂತ ಜ್ಞಾನವನ್ನು ರಚಿಸುವ ಮತ್ತು ಪ್ರಸಾರ ಮಾಡುವ ಅಗತ್ಯವನ್ನು ಸಕ್ರಿಯವಾಗಿ ಅನುಭವಿಸಲಾಗಿದೆ. ಇದನ್ನು ಸಾಧಿಸುವ ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ ಬೃಹತ್ ಬ್ರಹ್ಮಾಂಡ ಇಂಟರ್ನೆಟ್ ಸಂಪರ್ಕ ಮೂಲಕ ಗುಣಮಟ್ಟದ ಮುಕ್ತ ಪ್ರವೇಶ (OA) ಸಾಮಗ್ರಿಗಳು ಮತ್ತು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು (OERs) ಪ್ರಸರಣವನ್ನು ಉತ್ತೇಜಸುವದು. (ರಾಷ್ಟೀಯ ಜ್ಞಾನ ಆಯೋಗ, 2007, ಪುಟಸಂಖ್ಯೆ 51)

ಡೇವಿಡ್ವೈಲಿಯವರು (OER) ಗಳ ಕುರಿತು '5R' ಚಟುವಟಿಕೆಗಳು /ಅನುಮತಿಗಳನ್ನು ಈ ಕೆಳಗಿನಂತೆ ಪ್ರಸ್ತಾಪಿಸಿದರು.

1. ಉಳಿಸಿಕೊಳ್ಳುವುದು (Retain) - ವಿಷಯದ ನಕಲು ಮಾಡುವ, ಹೊಂದುವ ಮತ್ತು ನಿಯಂತ್ರಿಸುವ ಹಕ್ಕು
2. ಮರುಬಳಕೆ (Reuse)–ವ್ಯಾಪಕ ಶ್ರೇಣಿಯ ರೀತಿಯಲ್ಲಿ ವಿಷಯವನ್ನು ಬಳಸುವ ಹಕ್ಕು
3. ಪರಿಷ್ಕರಣೆ (Revise) – ವಿಷಯವನ್ನು ಸ್ವತಃ ಅಳವಡಿಸಿಕೊಳ್ಳುವ, ಸರಿಹೊಂದಿಸುವ, ಮಾರ್ಪಡಿಸುವ ಅಥವಾ ಬದಲಾಯಿಸುವ ಹಕ್ಕು
4. ಮರುಸೇರ್ಪಡೆ (Remix) ಹೊಸದನ್ನು ರಚಿಸಲು ಮೂಲ ಅಥವಾ ಪರಿಷ್ಕೃತ ವಿಷಯವನ್ನು ಇತರ ವಸ್ತುಗಳೊಂದಿಗೆ ಸಂಯೋಜಿಸುವ ಹಕ್ಕು
5. ಮರು ಹಂಚಿಕೆ (Redistribution)– ಮೂಲ ವಿಷಯ ಪರಿಷ್ಕರಣೆಗಳು ಅಥವಾ ಮರು ಸೇರ್ಪಡೆಗಳ ನಕಲು ರೂಪಗಳನ್ನು ಹಂಚಿಕೊಳ್ಳುವ ಹಕ್ಕು.

ಪ್ರಶಿಕ್ಷಕರ ಸಾಮರ್ಥ್ಯಗಳು ತಮ್ಮದೇ ಆದ ಸಾಮರ್ಥ್ಯಗಳಿಂದ ಪ್ರಭಾವಿತವಾಗಿದ್ದು, ಅದು ಇತ್ತೀಚೆಗೆ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳಿಂದ ಹೆಚ್ಚು ಶ್ರೀಮಂತವಾಗಿದೆ. ಗುಣಮಟ್ಟದ ಬೋಧನೆಯ ದೃಷ್ಟಿಯಿಂದ ಪ್ರಶಿಕ್ಷಕರುಗಳು ಭಾವಿ ಪ್ರಶಿಕ್ಷಣಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸೇವಾ ಪೂರ್ವತರ ಬೇತಿಯಲ್ಲಿ ಆಳವಾದ ಜ್ಞಾನ ಹೊಂದಿರಬೇಕಾಗಿದ್ದು ಅನಿವಾರ್ಯ. ಇದು ಪ್ರಶಿಕ್ಷಕರ ಬೋಧನಾ ಮತ್ತು ತರಬೇತಿ ಸೂಕ್ಷ್ಮಗಳಿಂದ ಪ್ರಭಾವೀಕರಿಸಲ್ಪಟ್ಟಿದೆ. ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು ಈ ಕೊರತೆಯನ್ನು ನೀಗಿಸುವಲ್ಲಿ ತೆರೆದ ಅಥವಾ ಮುಕ್ತ ಕಿಟಕಿಗಳ ಮೂಲಕ ಸಾಧ್ಯವಾಗಿಸಿದೆ. ಇದು ಪ್ರತಿ ಬಳಕೆದಾರರಿಗೆ ಜಾಗತಿಕವಾಗಿ ಸಂವಹನ ನಡೆಸಲು, ಲಭ್ಯವಿರುವ ಸಂಪನ್ಮೂಲಗಳನ್ನು ನಿರ್ದಿಷ್ಟ ಮಿತಿಗೊಳಪಟ್ಟು ಬಳಸಲು, ಆ ಮೂಲಕ ಸ್ವಸಾಮರ್ಥ್ಯ ಗಳಿಸಲು ತುಂಬ ಅನುಕೂಲಕರವಾಗಿದೆ. CPPEE ಪ್ರಾಜೆಕ್ಟ್ ತನ್ನ ಮುಖ್ಯ ಶಿಫಾರಸ್ಸುಗಳಲ್ಲಿ ಸ್ಪಷ್ಟಪಡಿಸುವುದೇನೆಂದರೆ, ಕಲಿಕಾರ್ಥಿಗಳಿಗೆ ಜಾಗತಿಕವಾಗಿ ತೆರೆದುಕೊಳ್ಳಲು ಬಹು ವಿಧದ ಅಥವಾ ಬಹುಭಾಷಾ ಸಾಮರ್ಥ್ಯದ ಮಾರ್ಪಡಿಸಿದ ಶಿಕ್ಷಣಶಾಸ್ತ್ರದ ಉಪಕ್ರಮಗಳು ಅವಶ್ಯಕ. ಜಾಗತಿಕವಾಗಿ ಅಂತರಕ್ರಿಯಿಸಲು ಭಾಷೆ ಪ್ರಮುಖಸಾಧನವಾಗಿದ್ದು, ಬಳಕೆದಾರರು ಇದರ ಸ್ವಾಮಿತ್ವ ಹೊಂದಿರಬೇಕು. ಆದರೂ ಜಾಗತಿಕ ಭಾಷೆಯಾಗಿ ಇಂಗ್ಲಿಷ ಅದರ ಕೊರತೆಯನ್ನು ನೀಗಿಸಿರುವುದು ವೇದ್ಯವಾಗುತ್ತದೆ.

**ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ (OPEN EDUCATIONAL RESOURCES) ಸಂಕ್ಷಿಪ್ತ ಇತಿಹಾಸ**

ಶೈಕ್ಷಣಿಕ ಇತಿಹಾಸದಲ್ಲಿ 'ಮುಕ್ತ' ಎಂಬಪದವು 20ನೇ ಶತಮಾನದ ಆರಂಭದಲ್ಲಿ ಹಲವಾರು ಸತತ ಪ್ರಯತ್ನ ಮತ್ತು ಮಂಚೂಣಿಯ ಫಲವಾಗಿ ಉಚಿತ ಹಂಚಿಕೆ, ನಕಲು ತಡೆ, ನಿರ್ಬಂಧ ತಡೆ, ಬಳಕೆಯ ಕ್ರಮಗಳು ಮತ್ತು ಹಂಚಿಕೆದಾರರ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವ ಮನೋಭಾವನೆಯೊಂದಿಗೆ ಆರಂಭವಾಯಿತು. ಇದರ ಪ್ರಾಥಮಿಕ ಹುಟ್ಟು 1994 ರಲ್ಲಿ ಜೇಮ್ಸೋರ್ರ್ಜವರ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದೊಂದಿಗೆ ಉಗಮಿಸಿ, 1997ರಲ್ಲಿ ಕ್ಯಾಲಿಫೋರ್ನಿಯದ MERLOT ನಿಂದ ಜೊತೆಗೂಡಿ, ಮಾರು ವರ್ಷವೇ ಡೇ ವಿಡ್ವಾಲಿ ಪ್ರತಿಷ್ಠಾನದಿಂದ, ಅದರ ಸಂಸ್ಥಾಪಕರಾದ ಉತ್ಹ ರಾಜ್ಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡೇವಿಡ್ ವ್ಯಾಲಿರವರಿಂದ ಜಾಗತಿಕ ಮಟ್ಟಕ್ಕೆ ಪ್ರಚಾರವಾಯಿತು. 'ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು' ಎಂಬ ಪದವನ್ನು ಮೊದಲ ಬಾರಿಗೆ ಯುನೆಸ್ಕೋದ 2002ರ ವೇದಿಕೆಯಲ್ಲಿ ಅಭಿವೃದ್ಧಿಶೀಲ ರಾಷ್ಟಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ತೆರೆದ ಕೋರ್ಸ್ವೇರ್ (Open Course ware) ಪ್ರಭಾವದ ಮೇಲೆ ಅಳವಡಿಸಲಾಯಿತು.

**ಮಾಧ್ಯಮಿಕ ಹಂತದ ಶಿಕ್ಷಕರು ಮತ್ತು ಮಾಧ್ಯಮಿಕ ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಬಳಕೆ ಮಾಡ ಬಹುದಾದ ಪ್ರಮುಖ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು**

1. **ಇಂದಿರಾಗಾಂದಿ, ಮುಕ್ತ ವಿಶ್ವವಿದ್ಯಾನಿಲಯ – ಇಗ್ನೋ (Indira Gandhi National Open University -IGNOU) :** 2005 ರಲ್ಲಿ ಈ – ಜ್ಞಾನಕೋಶದ ಆರಂಭದೊಂದಿಗೆ ಮುಕ್ತವಾದ ರೂಪದಲ್ಲಿ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಬಂಢಾರವನ್ನು ಆರಂಭಿಸಲಾಯಿತು.
2. **ರಾಷ್ಟೀಯ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಬಂಢಾರ (National Repository for Open Educational Resources-NROER) :** ಇದು NCERT ನಿಂದ ಚಾಲನೆಗೊಂಡಿದ್ದು, ಮುಕ್ತವಾದ ರೂಪದಲ್ಲಿ ಶಿಕ್ಷಕರು ಮತ್ತು ಕಿಂಡರ್ಗಾರ್ಡನನಿಂದ ಉನ್ನತ ಮಾಧ್ಯಮಿಕದ 12 ನೇ ತರಗತಿವರೆಗೆ ದೇಶಾದಾದ್ಯಂತ ಆಡಿಯೋ ಮತ್ತು ವಿಡಿಯೋ ಆಧಾರಿತ ಡಿಜಿಟಲ್ ಸಂಪನ್ಮೂಲಗಳನ್ನು ಒದಗಿಸುತ್ತದೆ.
3. **ರಾಷ್ಟೀಯ ಮುಕ್ತ ಶಾಲೆಗಳು (National Institute of Open Schooling – NIOS) :** ಇದು ಜಗತ್ತಿನಲ್ಲಿರುವ ಅತೀ ದೊಡ್ಡ ಮುಕ್ತ ತೆರೆದ ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಒಂದಾಗಿದ್ದು, ಮುಕ್ತವಾದ ರೂಪದಲ್ಲಿ ಸ್ವಕಲಿಕೆಗೆ ಆಡಿಯೋ, ವಿಡಿಯೋ ಮತ್ತು ಬಹು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಂಪನ್ಮೂಲ ಆಧಾರಿತವಾಗಿದೆ. ಸಂಪನ್ಮೂಲಗಳನ್ನು ಬಾನುಲಿ, ಕಂಪಕ್ಷಿಸ್ಕ (CD) ಮತ್ತು ದೂರದರ್ಶನ ಇತ್ಯಾದಿಗಳ ಮೂಲಕ ಜ್ಞಾನವನ್ನು ಪ್ರಸಾರ ಮಾಡಲಾಗುತ್ತದೆ.

4. **ಖಾನ್‌ಅಕಾಡೆಮಿ (KHAN ACADEMY) :** 2005ರಲ್ಲಿ ಆರಂಭವಾದ, ಮುಕ್ತ ರೂಪದಲ್ಲಿ ಶಿಕ್ಷಕರು ಮತ್ತು ಕಿಂಡರ್ ಗಾರ್ಡನನಿಂದ ಉನ್ನತ ಮಾಧ್ಯಮಿಕದ 12 ನೇ ತರಗತಿವರೆಗೆ ಮುಕ್ತ ಮತ್ತು ಉಚಿತವಾಗಿ ಸಂಪನ್ಮೂಲಗಳನ್ನುಯುಟ್ಯೂಬ್ (YouTube) ರೂಪದಲ್ಲಿ ಒದಗಿಸುತ್ತದೆ.

5. **ಟೆಸ್–ಇಂಡಿಯಾ (TESS- India- Teacher Education Through School Based Support) :** ಭಾರತದಲ್ಲಿ ಉಚಿತವಾಗಿ ಬಹುಭಾಷಾ ಮಾಧ್ಯಮದಲ್ಲಿ ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಇಂಗ್ಲೆಂಡ ನೆರವಿನೊಂದಿಗೆ 2012ರಲ್ಲಿ ಉಚಿತ ಆನ್ಲೈನ್ಬೋದನೆಗೆ ಸಹಕಾರಿಯಾಗಿ ಆರಂಭವಾಯಿತು. ಭಾರತದಲ್ಲಿ ಮಾನವ ಅಭಿವೃದ್ಧಿ ಸಂಪನ್ಮೂಲ ಮಂತ್ರಾಲಯ ಮತ್ತು ಇಂಗ್ಲೆಂಡ್ ದೇಶದ ಮುಕ್ತ ವಿಶ್ವವಿದ್ಯಾಲಯವು ಜಂಟಿಯಾಗಿ ಶಿಕ್ಷಕರ ಶಿಕ್ಷಣಕ್ಕೆ ಸಂಬಂಧಿಸಿದ ಮುಕ್ತ ಸಂಪನ್ಮೂಲಗಳನ್ನು ಹಂಚುತ್ತಿವೆ.

6. **ಗೂರು (GOORU) :** ಇದು ಕೂಡ ಉಚಿತ ಆನ್‌ಲೈನ್ ಶೈಕ್ಷಣಿಕ ಸಂಪನ್ಮೂಲವಾಗಿದ್ದು, 12ನೇ ತರಗತಿ ಶಿಕ್ಷಕರಿಗೆ ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಇಂಗ್ಲಿಷ್ ಭಾಷಾ ವಿಷಯಕ್ಕೆ ಸಂಬಂಧಿಸಿದಂತೆ, ವಿಷಯ ವಸ್ತುವನ್ನು ಅಪ್ಲೋಡ್ ಮಾಡಲು ಮತ್ತು ಅಳವಡಿಸಿಕೊಳ್ಳಲು ಮುಕ್ತವಾಗಿ ಅವಕಾಶ ಒದಗಿಸುತ್ತದೆ.

7. **ಇಸ್ಕಾಮೆ (ISKME- Institute for the Study of Knowledge Management in Education) :** 2002ರಲ್ಲಿ ಆರಂಭವಾದ, ಇದೊಂದು ಲಾಭ ರಹಿತ ಮುಕ್ತ ಮತ್ತು ಸಾರ್ವಜನಿಕ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ವೇದಿಕೆಯಾಗಿದ್ದು ಸುಮಾರು 25,000 ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸ್ವಕಲಿಕಾರ್ಥಿಗಳು ಅಂದಾಜು 50,000 ಕ್ಕೂ ಹೆಚ್ಚು ಕಲಿಕಾ ಸಾಮಗ್ರಿಗಳನ್ನು ನಾವಿನ್ಯಯುತವಾದ ಬೋಧನೆ ಮತ್ತು ಕಲಿಕಾ ಅನುಭವಗಳನ್ನು ಆಧಾರಿಸಿ ಪ್ರೇರೇಪಿಸುತ್ತದೆ.

8. **ಕ್ಯೂರಿಕ್ಕಿ (CURIKKI) :** ಇದು ಸಹ 12ನೇ ತರಗತಿ ವಿದ್ಯಾರ್ಥಿಗಳ ಕಲಿಕೆಗೆ ಹಾಗೂ ಶಿಕ್ಷಕರಿಗೆ ತಮ್ಮ ಪಾಠ ಯೋಜನೆ, ಪಾಠಗಳು ಮತ್ತು ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮುಕ್ತ ಸಂಪನ್ಮೂಲಗಳನ್ನು ಹುಟ್ಟು ಹಾಕಲು, ಹಂಚಿಕೆ ಮಾಡಲು ವೇದಿಕೆ ಒದಗಿಸುತ್ತದೆ.

9. **ಸೆಮ್ಕಾ (CEMCA- Commonwealth Educational Media Centre for Asia) :** 1994ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ಏಷ್ಯಾದ ವಿವಿಧ ದೇಶಗಳನ್ನೊಳಗೊಂಡಿದ್ದು, ಭಾರತದೊಂದಿಗೆ 1998ರಲ್ಲಿ ಒಪ್ಪಂದಕ್ಕೆ ಒಳಪಟ್ಟು ನವದೆಹಲಿ ತನ್ನ ರಾಜಧಾನಿಯನ್ನಾಗಿಸಿದೆ. ಇದು ತಂತ್ರಜ್ಞಾನಾಧರಿತ ಮುಕ್ತಶೈಕ್ಷಣಿಕ ಸಂಪನ್ಮೂಲಗಳ ಬಳಕೆಗೆ ಶಿಕ್ಷಕರು ಮತ್ತು ಬೋಧಕರಿಗೆ ಅನುಕೂಲ ಮಾಡಿದೆ.

10. **ಎಡಕ್ಸ್ (edX) :** ಇದು 2012ರಲ್ಲಿ ಕಾರ್ಯರಂಭಗೊಂಡ ಅಮೇರಿಕಾ ದೇಶದ ಮೂಕ್ (MOOC – Massive Open Online Course) ಆಗಿದ್ದು ಉನ್ನತ ಶಿಕ್ಷಣಕ್ಕೆ ಸಂಭಂದಿಸಿದ ಲಾಭ ರಹಿತ ಮುಕ್ತಶೈಕ್ಷಣಿಕ ಸಂಪನ್ಮೂಲಗಳ ಬಳಕೆಗೆ ಅವಕಾಶ ಮಾಡುತ್ತದೆ.

11. **ಕೋರ್ (KOER- Karnataka Open Educational Resources ) :** ಕರ್ನಾಟಕದಲ್ಲಿ ಡ ಸೇರ್ಟ್– ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (DSERT- Department of Educational Research & Training) ಯು 2013 ರಲ್ಲಿ ಆರಂಭಿಸಿ, 2016ರಲ್ಲಿ ಕರ್ನಾಟಕದ 01 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಮತ್ತು ಆ ಹಂತದ ಶಿಕ್ಷಕರು ಮತ್ತು ಪ್ರಶಿಕ್ಷಕರಿಗೆ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ತರಗತಿವಾರು, ಉಚಿತವಾಗಿ ಲಭ್ಯವಾಗಿಸಿದೆ.

## ಕ್ರಿಯೇಟಿವ್‌ಕಾಮನ್ಸ್ (CREATIVE COMMONS)

ಕ್ರಿಯೇಟಿವ್ ಕಾಮನ್ಸ್ ಅಂತಾರಾಷ್ಟ್ರೀಯವಾಗಿ ಸಕ್ರಿಯವಾಗಿರುವ ಲಾಭ ರಹಿತಸಂಸ್ಥೆಯಾಗಿದ್ದು, ರಚನಕರಾರು ತಮ್ಮ ಕೆಲಸವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಉಚಿತ ಪರವಾನಿಗೆಗಳನ್ನು ಒದಗಿಸುತ್ತದೆ. ಈ ಪರವಾನಿಗೆಗಳು ಕೆಲವು ಷರತ್ತುಗಳ ಅಡಿಯಲ್ಲಿ ಇತರರಿಗೆ ಕೆಲಸವನ್ನು ಮುಂಚಿತವಾಗಿ ಬಳಸಲು ಅನುಮತಿ ನೀಡಲು ರಚನಕಾರರಿಗೆ ಸಹಾಯ ಮಾಡುತ್ತದೆ.

ಕ್ರಿಯೇಟಿವ್ ಕಾಮನ್ಸ್ ಪರವಾನಗಿಗಳು ಹಕ್ಕು ಸ್ವಾಮ್ಯಕ್ಕೆ ಪರ್ಯಾಯವಲ್ಲ, ಆದರೆ ಇದು ಪರವಾನಗಿ ಆಧಾರಿತ ಹಕ್ಕು ಸ್ವಾಮ್ಯವಾಗಿದೆ. ಪೂರ್ವ ನಿಯೋಜಿತವಾಗಿ, ಹಕ್ಕು ಸ್ವಾಮ್ಯವು ನಿಮ್ಮ ಅನುಮತಿಯಿಲ್ಲದೇ ಸೀಮಿತ ಮರು ಬಳಕೆಗಳನ್ನು ಮಾತ್ರ ಅನುಮತಿಸುತ್ತದೆ. ಆ ಪರವಾನಗಿಗಳು ಸಾರ್ವಜನಿಕರಿಗೆ ಹೆಚ್ಚುವರಿ ಅನುಮತಿಗಳನ್ನು ನೀಡಲು ನಿಮಗೆ ಅವಕಾಶ ಮಾಡಿಕೊಡುತ್ತದೆ. ನಿಮಗಾಗಿ ಕೆಲವು ಹಕ್ಕುಗಳನ್ನು ಕಾಯ್ದಿರಿಸುವಾಗ ನಿಮ್ಮ ಅಗತ್ಯಗಳಿಗೆ ಸೂಕ್ತವಾದ ನಿಯಮಗಳ ಮರುಬಳಕೆಯನ್ನು ಅನುಮತಿಸುತ್ತದೆ. ನಮ್ಮ ಪರವಾನಗಿಗಳು ಜಾಗತಿಕವಾಗಿ ಕಾರ್ಯನಿರ್ವಹಿಸಲು, ಪ್ರಪಂಚದಾದ್ಯಂತದ ಹಕ್ಕುಸ್ವಾಮ್ಯ ತಜ್ಞರೊಂದಿಗೆ ಸಹಯೋಗಹೊಂದಲು ಅನುಮತಿಸುತ್ತದೆ. ಎಲ್ಲಾ CC ಪರವಾನಗಿಗಳು ನಿಮ್ಮ ಕೆಲಸವನ್ನು ಯಾವುದೇ ರೀತಿಯಲ್ಲಿ ಬಳಸುವ ಇತರರು ನೀವು ವಿನಂತಿಸಿದ ರೀತಿಯಲ್ಲಿ ನಿಮಗೆ ಕ್ರೆಡಿಟ್ ನೀಡಬೇಕು. ಅವರು ನಿಮಗೆ ಕ್ರೆಡಿಟ್ ನೀಡದೆ ಅಥವಾ ಅನುಮೋದನೆ ಉದ್ದೇಶಗಳಿಗಾಗಿ ನಿಮ್ಮ ಕೆಲಸವನ್ನು ಬಳಸಲು ಬಯಸಿದರೆ, ಅವರು ಮೊದಲು ನಿಮ್ಮ ಅನುಮತಿಯನ್ನು ಪಡೆಯಬೇಕು. ಅವುಗಳೆಂದರೆ –

- By You (BY) ಲೇಖಕರಿಗೆ ಸಲ್ಲಬೇಕಾದ ಶ್ರೇಯಸ್ಸು ಕ್ರೆಡಿಟ್ ನೀಡಬೇಕು.
- Share Alike (SA) ನಿಮ್ಮ ಕೆಲಸವನ್ನು ನಕಲಿಸಲು, ವಿತರಿಸಲು, ಪ್ರದರ್ಶಿಸಲು, ನಿರ್ವಹಿಸಲು ಮತ್ತು ಮಾರ್ಪಡಿಸಲು ನೀವು ಇತರರಿಗೆ ಅವಕಾಶ ಮಾಡಿಕೊಡುತ್ತೀರಿ, ಅವರು ಅದೇ ನಿಯಮಗಳಲ್ಲಿ ಯಾವುದೇ ಮಾರ್ಪಡಿಸಿದ ಕೆಲಸವನ್ನು ವಿತರಿಸುವವರೆಗೆ. ಅವರು ಇತರ ನಿಯಮಗಳ ಅಡಿಯಲ್ಲಿ ಮಾರ್ಪಡಿಸಿದ ಕೃತಿಗಳನ್ನು ವಿತರಿಸಲುಬಯಸಿದರೆ, ಅವರು ಮೊದಲು ನಿಮ್ಮ ಅನುಮತಿಯನ್ನು ಪಡೆಯಬೇಕು.
- No Derives (ND) ಮ್ಮ ಕೆಲಸದ ಮೂಲ ಪ್ರತಿಗಳನ್ನು ಮಾತ್ರ ಕಲಿಸಲು, ವಿತರಿಸಲು, ಪ್ರದರ್ಶಿಸಲು ಮತ್ತು ನಿರ್ವಹಿಸಲು ನೀವು ಇತರರಿಗೆ ಅವಕಾಶ ಮಾಡಿಕೊಡುತ್ತೀರಿ. ಅವರು ನಿಮ್ಮ ಕೆಲಸವನ್ನು ಮಾರ್ಪಡಿಸಲು ಬಯಸಿದರೆ, ಅವರು ಮೊದಲು ನಿಮ್ಮ ಅನುಮತಿಯನ್ನು ಪಡೆಯಬೇಕು.
- Non-Commercial (NC) ಇತರರಿಗೆ ನಕಲಿಸಲು, ವಿತರಿಸಲು, ಪ್ರದರ್ಶಿಸಲು, ನಿರ್ವಹಿಸಲು ಮತ್ತು (ನೀವು ಯಾವುದೇ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಉತ್ಪನ್ನವನ್ನು ಆಯ್ಕೆ ಮಾಡದ ಹೊರತು) ನಿಮ್ಮ ಅನುಮತಿಯನ್ನು ಮೊದಲು ಪಡೆಯದ ಹೊರತು ವಾಣಿಜ್ಯಿಕವಾಗಿ ಹೊರತುಪಡಿಸಿ ಯಾವುದೇ ಉದ್ದೇಶಕ್ಕಾಗಿ ನಿಮ್ಮ ಕೆಲಸವನ್ನು ಮಾರ್ಪಡಿಸಲು ಮತ್ತು ಬಳಸಲು ನೀವು ಅನುಮತಿಸುತ್ತೀರಿ. ಅವರು ಈ ಕೆಳಗಿನ ಪ್ರಕಾರಗಳನ್ನು ಬಳಸುತ್ತಾರೆ :

1. CC-BY 2) CC-BY SA 3) CC-BY -NC 4) CC-BY-NC-SA - Least Restrictive (ಕನಿಷ್ಠ ನಿರ್ಬಂಧಿತ)
2. CC-BY-ND 6) CC-BY-NC-ND – Most Restrictive (ಅತ್ಯಂತ/ಹೆಚ್ಚು ನಿರ್ಬಂಧಿತ)ಮಾಸ್ಸಿವ್ ಓಪನ್ ಆನ್ಲೈನ್ ಕೋರ್ಸ್ (MOOC- Massive Open Online Course) ಎಂಬುದು ವೆಬ್‌ಆಧಾರಿತ ವೇದಿಕೆ ಆಗಿದ್ದು ಅದು ವಿಶ್ವದಾದ್ಯಂತ ಅನಿಯಮಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿಶ್ವದ ಅತ್ಯುತ್ತಮ ಸಂಸ್ಥೆಗಳೊಂದಿಗೆ ದೂರ ಶಿಕ್ಷಣದ ಅವಕಾಶವನ್ನು ಒದಗಿಸುತ್ತದೆ. ಇದನ್ನು 2008 ರಲ್ಲಿ ಸ್ಥಾಪಿಸಲಾಯಿತು ಮತ್ತು 2012 ರಲ್ಲಿ ಜನಪ್ರಿಯ ಕಲಿಕೆಯ ಸಾಧನವಾಗಿ ಆ ವೇಗವನ್ನು ಪಡೆಯಿತು. ಅನೇಕ MOOC ಗಳು ಅಧ್ಯಯನ/ಕೋರ್ಸ್ ವಸ್ತು ಮತ್ತು ವೀಡಿಯೊ ಉಪನ್ಯಾಸಗಳ ಜೊತೆಗೆ ವಿದ್ಯಾರ್ಥಿ, ಪ್ರಾಧ್ಯಾಪಕರು ಮತ್ತು ಬೋಧನಾ ಸಹಾಯಕರು (TAs) ನಡುವೆ ಸಂವಾದಾತ್ಮಕ ಅವಧಿಗಳು ಮತ್ತು ವೇದಿಕೆಗಳನ್ನು ಹೊಂದಿರುವ ಸಮುದಾಯಗಳನ್ನು ಹೊಂದಿವೆ.

MOOC ಗಾಗಿ ಹೊಸ ಪೋರ್ಟಲ್ 'ಸ್ಟಡಿ ವೆಬ್‌ಆಫ್‌ಆಕ್ಟಿವ್–ಲರ್ನಿಂಗ್ ಫಾರ್‌ಯಂಗ್ ಆಸ್ಪಿರಿಂಗ್ ಮೈಂಡ್ಸ್', ಸಂಕ್ಷಿಪ್ತವಾಗಿ ಹೇಳುವುದಾದರೆ, SWAYAM (Study Webs of Active-Learning for Young Aspiring Minds)200 ಕೋರ್ಸ್ಗಳ ಪಟ್ಟಿಯಿಂದ ಏನನ್ನಾದರೂ ಅಧ್ಯಯನ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡುತ್ತದೆ ಎಂದು ಹೇಳಲಾಗುತ್ತದೆ, ಅದರಲ್ಲಿ 200 ಪ್ರಸ್ತುತ ನೋಂದಣಿಗೆ ಲಭ್ಯವಿದೆ. . ಶ್ರವಣ–ದೃಶ್ಯ ಮಾಧ್ಯಮ, ವಿವರಣೆಗಳು, ಸಂಶೋಧನೆ ಮತ್ತು ಸ್ವಯಂ–ಮೌಲ್ಯಮಾಪನದೊಂದಿಗೆ ಕೇಸ್ ಸ್ಟಡೀಸ್ ಈ ಕೋರ್ಸ್ಗಳ ಅಧ್ಯಯನವನ್ನು ಸಮೀಪಿಸಲು ಆಯ್ಕೆ ಮಾಡಿದ ಕೆಲವು ಮಾಧ್ಯಮಗಳಾಗಿವೆ.

## ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಪ್ರಯೋಜನಗಳು

ತಮ್ಮ ಗ್ರಂಥ 'ಎ ಬೇಸಿಕ್ ಗೈಡ್ ಟು OER' (Butcher,2015) ನಲ್ಲಿ ವಿವರಿಸಿದಂತೆ, OER- ಸಂಯೋಜಿತ ಕಲಿಕೆಯು ಪ್ರಮುಖ ತತ್ವಗಳನ್ನು ಸಂಯೋಜಿಸುತ್ತದೆ ಮತ್ತು ಹೈಲೈಟ್ ಮಾಡುತ್ತದೆ ಇದರಿಂದ ಅನೇಕ ಪಾಲುದಾರರು ಪ್ರಯೋಜನ ಪಡೆಯುತ್ತಾರೆ :

- ಇದು ಆ ಜೀವ ಕಲಿಕೆಯ ಅವಕಾಶಗಳನ್ನು ಉತ್ತೇಜಿಸುತ್ತದೆ ಮತ್ತು ಶಿಕ್ಷಣ ಮತ್ತು ತರಬೇತಿಯನ್ನು ಒಳಗೊಳ್ಳುತ್ತದೆ.
- ಕಲಿಯುವವರ – ಕೇಂದ್ರಿತ ಕಲಿಕೆಯ ಪ್ರಕ್ರಿಯೆಯ ಮೂಲಕ ಸ್ವತಂತ್ರ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಪ್ರೋತ್ಸಾಹಿಸುತ್ತದೆ.
- ಹೊಂದಿಕೊಳ್ಳುವ ಕಲಿಕೆಯನ್ನು ಪ್ರೋತ್ಸಾಹಿಸಿ, ಕಲಿಯುವವರು ಎಲ್ಲಿ, ಯಾವಾಗ, ಏನು ಮತ್ತು ಹೇಗೆ ಕಲಿಯುತ್ತಾರೆ ಎಂಬುದರ ಕುರಿತು ತಮ್ಮದೇ ಆದ ನಿರ್ಧಾರವನ್ನು ತೆಗೆದುಕೊಳ್ಳಲು ಅನುಮತಿಸುತ್ತದೆ
- ಪೂರ್ವ ಕಲಿಕೆ, ಹಿಂದಿನ ಅನುಭವ ಮತ್ತು ಪ್ರದರ್ಶಿಸಿದ ಸಾಮರ್ಥ್ಯಗಳು.
- ಕಲಿಯುವವರು ವಿವಿಧ ಕಲಿಕೆಯ ಸಂದರ್ಭಗಳಿಂದ ಜ್ಞಾನವನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ.
- ಕಲಿಯುವವರ ಯಶಸ್ಸಿನ ನ್ಯಾಯಯುತ ಅವಕಾಶಕ್ಕಾಗಿ ಒದಗಿಸುವವರು ಪರಿಸ್ಥಿತಿಗಳನ್ನು ರಚಿಸಬೇಕು.
- ಕಲಿಯುವವರಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಲು ಅನುವು ಮಾಡಿಕೊಡುತ್ತದೆ.

## ಇತರೆ ಲಾಭಗಳು

- **ಸುರಕ್ಷತೆ :** ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಬಳಸುವದು ಶಿಕ್ಷಕರಿಗೆ ಹೆಚ್ಚು ಸುರಕ್ಷಿತವಾಗಿದೆ. ಏಕೆಂದರೆ ಅದು ಬಳಕೆದಾರರಿಗೆ ಮರುಬಳಕೆ, ಮರು ಸೇರ್ಪಡೆ ಮತ್ತು ಮರು ಹಂಚಿಕೆ ಮಾಡಲು ಅನುಕೂಲಕರವಾಗಿದೆ. ಈ ಮೂಲಕ ಹಕ್ಕು ಸ್ವಾಮ್ಯ ವಿನಾಯತಿ ಮತ್ತು ಹಕ್ಕು ಸ್ವಾಮ್ಯ ಪರವಾನಗಿ ನಿಯಮಗಳನ್ನು ಉಲ್ಲಂಘಿಸುವ ಅಪಾಯದಿಂದ ತಪ್ಪಿಸಿಕೊಳ್ಳಬಹುದು.
- **ಲಭ್ಯತೆ :** ನೂರಾರು ಮಿಲಿಯನ್ನಷ್ಟು ಬಹಿರಂಗವಾಗಿ ಪಡೆದ ಸಂಪನ್ಮೂಲಗಳ ಮಾಹಿತಿಯನ್ನು ಮುಕ್ತವಾಗಿ ಪಡೆಯಬಹುದಾಗಿದೆ.
- **ಹೊಂದಾಣಿಕೆ :** ಇದು ಬಳಕೆದಾರರಿಗೆ ಈಗಾಗಲೇ ತಜ್ಞರಿಂದ ಪರಿಶೀಲಿಸಲ್ಪಟ್ಟ ವಿಷಯ ವಸ್ತುವನ್ನು ಮುಕ್ತವಾಗಿ ಹೋಲಿಕೆ, ಬಳಕೆ ಮತ್ತು ಮರು ಸೇರ್ಪಡೆ ಮಾಡಲು ಹಾಗೂ ಸಂಪನ್ಮೂಲಗಳ ನಕಲು ಮತ್ತು ವಿತರಣೆ ಮಾಡಲು ಅವಕಾಶ ಒದಗಿಸುತ್ತದೆ.
- **ಸುಧಾರಣೆ :** ಇದು ಬಳಕೆದಾರರಾದ ಶಿಕ್ಷಕರ ಸಮಯ, ಶ್ರಮದ ಉಳಿತಾಯದೊಂದಿಗೆ ಉತ್ತಮ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂ ಲಗಳನ್ನು ಸಂಯೋಜನೆ ಮಾಡಲು ಹಾಗೂ ಅ ಮೂಲಕ ಅಂತರ್–ಶಿಸ್ತಿಯ ಬೋಧನೆಗೆ ಅವಕಾಶ ನೀಡುವದು.
- **ವಿಸ್ತತತೆ :** ಲಭ್ಯವಿರುವ ಪಠ್ಯಪುಸ್ತಕಗಳು ಮತ್ತು ಸ್ವಂತ ಸಾಮಗ್ರಿಗಳ ಸೀಮಿತ ಬಳಕೆಯನ್ನು ಮೀರಿ ಹೋಗಲು ಶಿಕ್ಷಕರಿಗೆ ಅವಕಾಶ ನೀಡುತ್ತದೆ.
- **ಸಹಯೋಗ :** ಶೈಕ್ಷಣಿಕ ಸಂಪನ್ಮೂಲಗಳ ಹಂಚಿಕೆಯ ಆಧಾರದ ಮೇಲೆ ಕಲಿಕಾ ಸಮುದಾಯಗಳನ್ನು ಸಹಯೋಗಿಸಲು ಮತ್ತು ರಚಿಸಲು ಪ್ರೋತ್ಸಾಹಿಸುತ್ತದೆ. ಇದು ವಸ್ತುಗಳ ಗುಣಮಟ್ಟ ಮತ್ತು ಕಲ್ಪನೆಯ ಅಭಿವೃದ್ಧಿಗಳನ್ನು ಹೆಚ್ಚಿಸುತ್ತದೆ.
- **ಸಮಾನತೆ :** ಪ್ರತಿಯೊಬ್ಬರೂ ಜ್ಞಾನಕ್ಕೆ ಸಮಾನ ಪ್ರವೇಶವನ್ನು ಹೊಂದಿದ್ದಾರೆ ಮತ್ತು ಸ್ವಂತ ಅಗತ್ಯಗಳಿಗೆ ಅಳವಡಿಸಿಕೊಳ್ಳ ಬಹುದಾದ ಶೈಕ್ಷಣಿಕ ಸಂಪನ್ಮೂಲ ಹೊಂದಿದ್ದಾರೆ ಎಂಬ ಸಾರ್ವತ್ರಿಕ ಏಕರೂಪತೆಯ ಭಾವನೆ ಆಧರಿಸಿದೆ.

## ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಮೂಲಕ ಶಿಕ್ಷಕರನ್ನು ಸಬಲೀಕರಣಗೊಳಿಸಲು 5 ಮಾರ್ಗಗಳು

1. ಇದು ಶಿಕ್ಷಕರಿಗೆ ಪೂರ್ಣ ಪಾಠ ಯೋಜನೆಗಳನ್ನು ಅಳವಡಿಸಿಕೊಳ್ಳಲು ಅಥವಾ ಉತ್ತಮವಾಗಿ ವಿನ್ಯಾಸಗೊಳಿಸಲಾದ ಮತ್ತು ವೈಯಕ್ತಿಕ ವಿದ್ಯಾರ್ಥಿ ಕಲಿಕೆಯ ಶೈಲಿಗಳೊಂದಿಗೆ ಆಯ್ಕೆ ಮಾಡಿಕೊಳ್ಳುವ ಕಾರ್ಯಯೋಜನೆಗಳನ್ನು ಕಸ್ಟಮೈಸ್ ಮಾಡಲು ಸಹಾಯ ಮಾಡುತ್ತದೆ. ಮತ್ತು ಪ್ರತಿ ವಿದ್ಯಾರ್ಥಿಯ ಅನನ್ಯ ಅಗತ್ಯಗಳನ್ನು ಪೂರೈಸಲು ಶಿಕ್ಷಕರಿಗೆ ಸಹಾಯ ಮಾಡುವ ಮೂಲಕ ಸಹಕಾರಿಯಾಗಿದೆ.

*– 74ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಕುವೆಂಪು ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿನ ಉದ್ಯೋಗ ಕೌಶಲ್ಯಗಳ ಅಧ್ಯಯನ

✍ **ಶಿಲ್ಪ ವಿ.,** ಸಂಶೋಧನಾರ್ಥಿ, ಸ್ನಾತಕೋತ್ತರ ಶಿಕ್ಷಣ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577451, ಶಿವಮೊಗ್ಗ, ಕರ್ನಾಟಕ.

✍ **ಡಾ. ಎಸ್. ಎಸ್. ಪಾಟೀಲ್,** ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577451, ಶಿವಮೊಗ್ಗ, ಕರ್ನಾಟಕ.

*ಸಾರಾಂಶ*

*"ಶಿಕ್ಷಣವೆಂದರೆ ಜೀವನ, ಜೀವನವೆಂದರೆ ಶಿಕ್ಷಣ" ದೇಶದ ಭವಿಷ್ಯವನ್ನು ಸೃಷ್ಠಿಸುವ ಮತ್ತು ಬದಲಾಯಿಸುವ ಶಕ್ತಿ ಶಿಕ್ಷಣದ್ದಾಗಿದೆ. ಸಶಕ್ತ ಭಾರತದ ಬೆನ್ನೆಲುಬು ಶಿಕ್ಷಿತ ಯುವಕರಾಗಿದ್ದಾರೆ. ಆಧುನಿಕ ಶಿಕ್ಷಣವು ಅನೇಕ ಸ್ಥಿತ್ಯಾಂತರಗಳನ್ನು ಹೊಂದಿ ಬಹು ಜಾಗ್ರತೆಯಾಗಿ ಬದಲಾವಣೆ ಹೊಂದಬೇಕಾಗಿದೆ. ಅದರಲ್ಲೂ ಉನ್ನತ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಜ್ಞಾನ, ಕೌಶಲ್ಯ, ವರ್ತನೆಗಳು, ಸಾಮರ್ಥ್ಯಗಳನ್ನು ಹೆಚ್ಚಿಸುವ ಮತ್ತು ವೃತ್ತಿ ಕೃಷಿ, ಉದ್ಯಮ, ಆಡಳಿತ, ವ್ಯಾಪಾರ ಸೇವೆಗಳು ಇತರ ಎಲ್ಲಾ ಕ್ಷೇತ್ರಗಳಿಗೆ ಅಗತ್ಯವಿರುವ ತರಬೇತಿ ಪಡೆದ ಮಾನವ ಶಕ್ತಿಯಾಗಿ ವಿದ್ಯಾರ್ಥಿಗಳನ್ನು ತಯಾರು ಮಾಡುವ ಸರ್ವತೋಮುಖ ಗುಣಮಟ್ಟದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಇಂದಿನ ದಿನಗಳಲ್ಲಿ ಶಿಕ್ಷಣ, ಯುವಜನತೆ ಮತ್ತು ಉದ್ಯೋಗ ಇವುಗಳ ನಡುವೆ ಅಗಾಧವಾದ ಅಸ್ಥಿರತೆಯನ್ನು ಕಾಣುತ್ತಿದ್ದೇವೆ. ಏಕೆಂದರೆ ಪ್ರತಿಯೊಬ್ಬ ವಿದ್ಯಾರ್ಥಿಯು ಪದವಿ ಪಡೆದ ನಂತರ ತನ್ನ ಜೀವನ ನಿರ್ವಹಣೆಗಾಗಿ ಉದ್ಯೋಗಕ್ಕಾಗಿ ಶ್ರಮಿಸುತ್ತಾನೆ. ಆದರೆ ಅನೇಕ ಪದವೀಧರರು ಉದ್ಯೋಗ ಪಡೆಯಲು ಸಾಧ್ಯವಾಗುತ್ತಿಲ್ಲ. ಕಲಾ, ವಾಣಿಜ್ಯ, ಮತ್ತು ವಿಜ್ಞಾನ ವಿಭಾಗದ ಪದವಿ, ಸ್ನಾತಕೋತ್ತರ ಪದವೀಧರರಲ್ಲಿ ಉದ್ಯೋಗವಕಾಶ, ಉದ್ಯೋಗ ಸಾಮರ್ಥ್ಯಗಳನ್ನು ಹೊಂದುವಲ್ಲಿ ಅಂತರವು ನಿರ್ಮಾಣವಾಗಿದೆ. ಉದ್ಯೋಗವಕಾಶದ ಹಿನ್ನಡೆಗೆ ಮುಖ್ಯ ಕಾರಣ ಉನ್ನತ ಶಿಕ್ಷಣ ಸಂಸ್ಥೆಗಳು ಪದವೀಧರರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಕೌಶಲ್ಯಗಳ ಸಂಯೋಜನೆಯ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಯ ವಿನ್ಯಾಸದ ರೂಪಣೆಯಲ್ಲಿ ಕೊರತೆಯನ್ನು ಹೊಂದಿದೆ. ಆದರಿಂದ ಪ್ರಸ್ತುತ ಲೇಖನವು ಉದ್ಯೋಗ ಸಾಮರ್ಥ್ಯ, ಉದ್ಯೋಗ ಕೌಶಲ್ಯಗಳ ಪ್ರಾಮುಖ್ಯತೆ, ಸ್ನಾತಕೋತ್ತರ ಪದವಿ ವಿಭಾಗಗಳ ನಡುವಿನ ಉದ್ಯೋಗ ಕೌಶಲ್ಯಗಳ ವಿಶ್ಲೇಷಣೆ ಮತ್ತು ಉದ್ಯೋಗ ಕೌಶಲ್ಯಗಳನ್ನು ಹೆಚ್ಚಿಸುವ ಕ್ರಮಗಳನ್ನು ವಿವರಿಸುವುದಾಗಿದೆ.*

*ಶಿಕ್ಷಣವು ಮಾನವನಲ್ಲಿ ಕ್ರಮಬದ್ಧವಾಗಿ ಬದಲಾವಣೆಯನ್ನು ತರುವ ಸಾಧನವಾಗಿದೆ. ಮಾನವನನ್ನು ಮಾನವ ಸಂಪನ್ಮೂಲಕ್ಕೆ ವರ್ಗಾಯಿಸುವ ಜವಾಬ್ದಾರಿಯನ್ನು ಹೊಂದಿದೆ. ಅದರಲ್ಲಿ ವಿಶೇಷವಾಗಿ ಉನ್ನತ ಶಿಕ್ಷಣವು ಅರಿವನ್ನು ಹೆಚ್ಚಿಸುವ, ಗ್ರಹಿಕೆಯನ್ನು, ಸೂಕ್ಷ್ಮತೆಯನ್ನು ತೀವ್ರಗೊಳಿಸುವ ಮೂಲಕ ವಿದ್ಯಾರ್ಥಿಗಳನ್ನು ಪ್ರಬುದ್ಧಗೊಳಿಸುತ್ತದೆ. ಉನ್ನತ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಜ್ಞಾನ, ಕೌಶಲ್ಯ, ವರ್ತನೆಗಳು, ಸಾಮರ್ಥ್ಯಗಳನ್ನು ಹೆಚ್ಚಿಸುವ ಮತ್ತು ವೃತ್ತಿ ಕೃಷಿ, ಉದ್ಯಮ, ಆಡಳಿತ, ವ್ಯಾಪಾರ ಸೇವೆಗಳು ಇತರ ಎಲ್ಲಾ ಕ್ಷೇತ್ರಗಳಿಗೆ ಅಗತ್ಯವಿರುವ ತರಬೇತಿ ಪಡೆದ ಮಾನವ ಶಕ್ತಿಯಾಗಿ ವಿದ್ಯಾರ್ಥಿಗಳನ್ನು ತಯಾರು ಮಾಡುವ ಸರ್ವತೋಮುಖ ಗುಣಮಟ್ಟದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆದು ಉದ್ಯೋಗವಕಾಶಗಳೊಂದಿಗೆ ಪದವಿ ಪಡೆದುಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಯನ್ನು ತನ್ನ ವೃತ್ತಿ ಜೀವನದ ರೂಪಣೆ ಮತ್ತು ನಿರಂತರ ಉದ್ಯೋಗ ಅಭಿವೃದ್ಧಿಗೆ ತಾನೇ ಜವಾಬ್ದಾರನಾಗಿರುವಂತೆ ಮಾಡುವುದು ಉನ್ನತ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ಪಾತ್ರ ಮಹತ್ವದ್ದಾಗಿದೆ.(ವಂಡರ್ ಹಿಡ್ಡನ್, ಬೂನ್,ವ್ಯಾಂಡರ್ ಕ್ಲಿಂಕ್ ಮತ್ತು ಮಿಜ್ 2009) ಉನ್ನತ ಶಿಕ್ಷಣ ಸಂಸ್ಥೆಗಳು ರಾಷ್ಟ್ರದ ಭವಿಷ್ಯದ ಪ್ರತಿಭೆಗಳು ರೂಪುಗೊಳ್ಳುತ್ತವೆ. ಮತ್ತು ಉದ್ಯೋಗ ಕೌಶಲ್ಯಗಳ ವುತ್ಪತ್ತಿಯ ನೆಲೆಯಾಗಿದೆ. ಎನ್ನುವುದು ಹಲವರ ಅಭಿಪ್ರಾಯವಾಗಿದೆ.ವಿಶ್ವದ ಅತ್ಯಂತ ಕಿರಿಯ ರಾಷ್ಟ್ರಗಳಲ್ಲೊಂದಾದ ಭಾರತವು ಒಟ್ಟು ಜನಸಂಖ್ಯೆಯ 55% ಕ್ಕಿಂತ ಹೆಚ್ಚು 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ದೇಶದ ಯುವಕರು ಉದ್ಯೋಗ ಹೊಂದಲು ಉದ್ಯೋಗ ಕೌಶಲ್ಯಗಳು ಮತ್ತು ಜ್ಞಾನದ ಶಿಕ್ಷಣ ಮತ್ತು ತರಬೇತಿಯು ಅವಶ್ಯಕವಾಗಿದೆ. ಆದರೆ ಶೈಕ್ಷಣಿಕ ವ್ಯವಸ್ಥೆಯು ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಕೌಶಲ್ಯಗಳ ಕೊರತೆಯನ್ನು ಹೊಂದಿದ್ದು ಇದು ಉನ್ನತ ಶಿಕ್ಷಣ ವ್ಯವಸ್ಥೆಯ ವಿಶ್ವಾಸನೀಯತೆಯನ್ನು ಗಣನೀಯವಾಗಿ ಕಡಿಮೆ ಮಾಡಿದೆ. ವಿದ್ಯಾರ್ಥಿಗಳಲ್ಲಿ ಉದ್ಯೋಗ ಸಾಮರ್ಥ್ಯವನ್ನು ಖಾತ್ರಿಪಡಿಸುವಲ್ಲಿ ಉನ್ನತಶಿಕ್ಷಣದ ಪಾತ್ರ ಪ್ರಶ್ನಾರ್ಹವಾಗಿದೆ. ಅನೇಕ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಆಯಾ ಕ್ಷೇತ್ರಗಳಲ್ಲಿ ಉದ್ಯೋಗವಕಾಶ ದೊರೆಯುತ್ತಿಲ್ಲ.*

*ಭಾರತದ ಇಂತಹ ಒಲವುಗಳು ಪ್ರಪಂಚದ ಬೇರೆ ಅನುಭವಗಳೊಂದಿಗೆ ಹೊಂದಿಕೆಯಾಗುತ್ತದೆ. (ಕಾರ್ನೊಯ್ 1987) ತನ್ನ ಅಧ್ಯಯನದಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಕ್ಕಿಂತ ಕಲಾ ವಿಭಾಗದ ಪದವೀಧರರು ಹೆಚ್ಚಿನ ನಿರುದ್ಯೋಗ ದರವನ್ನು ಹೊಂದಿದ್ದಾರೆಂದು ತೋರಿಸಿದ್ದಾರೆ. ವಿಜ್ಞಾನ ಮತು ವಾಣಿಜ್ಯ ವಿಭಾಗದ ಪದವಿಗೆ ಹೋಲಿಸಿದರೆ ಇಂಜಿನಿಯರ್ ಮತ್ತು ತಂತ್ರಜ್ಞಾನದ ಔಷಧ ಮತ್ತು ಪಶುವೈದ್ಯಕೀಯ ವಿಜ್ಞಾನ ವಿಭಾಗಗಳು ವೇಗವಾಗಿ ಪ್ರವೇಶ ದಾಖಲಾತಿಯನ್ನು ಮತ್ತು ಉದ್ಯೋಗವನ್ನು ಹೊಂದುತ್ತಿವೆ. ಆದರೆ ಕಲೆ ವಿಜ್ಞಾನ ಮತ್ತು ವಾಣಿಜ್ಯ ನಿರ್ವಹಣೆಯ ವಿಷಯದ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗವಕಾಶಗಳು ಇಂಜಿನಿಯರ್ ಮತ್ತು ತಂತ್ರಜ್ಞಾನದ ಅರ್ಧದಷ್ಟು ಉದ್ಯೋಗ ಸಾಮರ್ಥ್ಯ ಬೆಳೆಯಲು ಸಾಧ್ಯವಾಗುತ್ತಿಲ್ಲ. ಅವರ ಮತ್ತೊಂದು ಅಧ್ಯಯನವೆಂದರೆ ವೃತ್ತಿಪರ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳು ಹೆಚ್ಚಾಗಿ ಉನ್ನತ ಸಾಮಾಜಿಕ ಆರ್ಥಿಕ ಹಿನ್ನೆಲೆಯಿಂದ ಬಂದವರು. ಇಂದಿನ ಆದ್ದರಿಂದ ಇಂದಿನ ಸವಾಲಿನ ಶಿಕ್ಷಣ ಮತ್ತು ಆರ್ಥಿಕ ಪರಿಸ್ಥಿತಿ ಎಂದರೆ ಪದವೀಧರ ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಜ್ಞಾನವನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ ಎಲ್ಲ ವಿದ್ಯಾರ್ಥಿಗಳು ತಮ್ಮ ಉದ್ಯೋಗದ ನಿರೀಕ್ಷೆಗಳನ್ನು ಹೆಚ್ಚಿಸುವ ಕೌಶಲ್ಯಗಳನ್ನು ಪಡೆಯಬೇಕು*

**ಉದ್ಯೋಗ ಸಾಮರ್ಥ್ಯ** (Employability) **:** ಉದ್ಯೋಗ ಕೌಶಲ್ಯಗಳನ್ನು ಶಿಕ್ಷಣ, ತರಬೇತಿ, ಕೆಲಸದ ಅನುಭವ, ಆಸಕ್ತಿಗಳು ಮತ್ತು ಇತರೆ ಪಠ್ಯೇತರ ಚಟುವಟಿಕೆಗಳ ಸಮಯದಲ್ಲಿ ಅಭಿವೃದ್ದಿಪಡಿಸಬಹುದಾದ ಸಾಮರ್ಥ್ಯಗಳು ಅಥವಾ ಸಾಮರ್ಥ್ಯದ ಶ್ರೇಣಿ ಎಂದು ವ್ಯಾಖ್ಯಾನಿಸಬಹುದು."ಉದ್ಯೋಗ ಸಾಮರ್ಥ್ಯ" ಪರಿಕಲ್ಪನೆಯನ್ನು ಉದ್ಯೋಗದೊಳಗೆ ಉದ್ಯೋಗ ಪ್ರಗತಿಯನ್ನು ಮತ್ತು ಉಳಿಸಿಕೊಳ್ಳುವ ವ್ಯಕ್ತಿಯ ಸಾಮರ್ಥ್ಯ ಎಂದು ವ್ಯಾಖ್ಯಾನಿಸಲಾಗಿದೆ. ವಿವಿಧ ರೀತಿಯ ಉದ್ಯೋಗಗಳು ವಿಭಿನ್ನ ಉದ್ಯೋಗದ ಸಾಮರ್ಥ್ಯಗಳನ್ನು ಹೊಂದಿವೆ ಎಂದು ಗುರುತಿಸಲಾಗಿದೆ. (ಬೆಲ್ಟ್ ಮತ್ತು ಇತರರು, 2010 : 1–5, ಯು.ಕೆ.ಸಿ.ಇ.ಎಸ್ 2010 : 23) ಸಾಮರ್ಥ್ಯ ಅಥವಾ ಉದ್ಯೋಗಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಯಾಗಿರುವುದು ಎಂದರೆ ಮೊದಲ ಕೆಲಸವನ್ನು ಪಡೆಯಲು ಸಾಧ್ಯವಾಗುವುದಕ್ಕಿಂತ ಉದ್ಯೋಗದಲ್ಲಿ ಪ್ರಶಂಸೆ ಗಳಿಸುವುದು ಮತ್ತು ಜೀವಿತಾವಧಿಯವರೆಗೂ ಉದ್ಯೋಗವನ್ನು ನಿರ್ವಹಿಸುವುದು ಮತ್ತು ವಿಭಿನ್ನ ರೀತಿಯಲ್ಲಿ ಉದ್ಯೋಗ ಕೈಗೊಳ್ಳುವುದು.

**ಉದ್ಯೋಗ ಕೌಶಲ್ಯಗಳು** (Employabilit skills) : ಉದ್ಯೋಗ ಕೌಶಲ್ಯಗಳನ್ನು ಉದ್ಯೋಗವನ್ನು ಪಡೆಯಲು ಮಾತ್ರವಲ್ಲದೆ ಒಬ್ಬರ ಸಾಮರ್ಥ್ಯವನ್ನು ಸಾಧಿಸಲು ಮತ್ತು ಉದ್ಯಮದ ಕಾರ್ಯ ತಂತ್ರದ ನಿರ್ದೇಶನಗಳಿಗೆ ಯಶಸ್ವಿಯಾಗಿ ಕೊಡುಗೆ ನೀಡಲು, ಉದ್ಯಮದಲ್ಲಿ ಪ್ರಗತಿ ಸಾಧಿಸಲು ಅಗತ್ಯವಾಗಿರುವ ಕೌಶಲ್ಯಗಳೆಂದು ವ್ಯಾಖ್ಯಾನಿಸಲಾಗಿದೆ. (ಡಿ.ಇ.ಎಸ್.ಟಿ–2000)ಉನ್ನತ ಶಿಕ್ಷಣ ಅಕಾಡೆಮಿ ಮತ್ತು ಇ.ಎಸ್.ಇ.ಸಿ.ಟಿ.ಯ ಪ್ರಕಾರ – ಉದ್ಯೋಗ ಕೌಶಲ್ಯಗಳು ಜ್ಞಾನ ಮತ್ತು ಗುಣಲಕ್ಷಣಗಳ ಒಂದು ಸಮೂಹವಾಗಿದೆ. ಉದ್ಯೋಗವು ಸ್ವತಃ ಕಾರ್ಯಪಡೆ, ಸಮುದಾಯ ಮತ್ತು ಆರ್ಥಿಕತೆಯ ಪ್ರಯೋಜನಕ್ಕಾಗಿ ಇದೆ. ಉದ್ಯೋಗ ಕೌಶಲ್ಯಗಳನ್ನು ಸಾಮಾನ್ಯ ಕೌಶಲ್ಯಗಳು, ಜೀವನ ಕೌಶಲ್ಯಗಳು, ವರ್ಗಾಯಿಸಬಹುದಾದ ಕೌಶಲ್ಯಗಳು, ಪ್ರಮುಖ, ಅಗತ್ಯ ಕೌಶಲ್ಯಗಳು ಎಂದು ಕರೆಯುತ್ತಾರೆ. ಉದ್ಯೋಗ ಕೌಶಲ್ಯಗಳು ಉದ್ಯೋಗದಾತರಿಗೆ ವ್ಯಕ್ತಿಯನ್ನು ಆಕರ್ಷಕವನ್ನಾಗಿ ಮಾಡುವ ಪಾತ್ರಗಳನ್ನು ಸೂಚಿಸುತ್ತವೆ. (ಬ್ರಿಡ್ಸ್ಟಾಕ್–2009).

ಶೈಕ್ಷಣಿಕ ಸಂಸ್ಥೆಗಳು ಜ್ಞಾನ ಮತ್ತು ಕೌಶಲ್ಯಗಳ ಪ್ರಧಾನ ಮೂಲಗಳಾಗಿದ್ದು ಪ್ರತಿಯೊಬ್ಬ ವಿದ್ಯಾರ್ಥಿಯ ಉದ್ಯೋಗದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉದ್ಯೋಗ ಸಾಮರ್ಥ್ಯದ ಕೌಶಲ್ಯಗಳನ್ನು, ಉದ್ಯೋಗದ ಯೋಜನೆಗಳನ್ನು ಸರಿಯಾಗಿ ಯೋಜಿಸುವುದು, ಸಂಘಟಿಸಲು ತಂಡದ ಕೆಲಸವನ್ನು ಸರಿಯಾಗಿ ನಿರ್ವಹಿಸುಹುದು. ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಸಮಸ್ಯೆ ಬಗೆಹರಿಸುವಿಕೆ, ಸಮಯ ನಿರ್ವಹಣೆ ಈ ಕೌಶಲ್ಯಗಳು ಉದ್ಯೋಗದಾತರಿಗೆ ಲಾಭದಾಯಕವಾಗಿದ್ದು ಸಮಯ ಮತ್ತು ಹಣವನ್ನು ಉಳಿಸಬಹುದು. ಉದ್ಯೋಗ ಸಾಮರ್ಥ್ಯ ಕೌಶಲ್ಯದ ಕೊರತೆಯಿಂದ ಎಷ್ಟೋ ವಿದ್ಯಾರ್ಥಿಗಳು ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. ಭಾರತದಲ್ಲಿನ ಈ ಪ್ರಸ್ತುತ ಯುಗದಲ್ಲಿ ಉನ್ನತ ಶಿಕ್ಷಣದ ಕಾರ್ಯ ಸೂಚಿಯಲ್ಲಿ ಉದ್ಯೋಗ ಸಾಮರ್ಥ್ಯ ಕೌಶಲ್ಯಗಳು ಪ್ರಮುಖ ವಿಷಯವಾಗಿದೆ. ಇಂದಿನ ಉದ್ಯೋಗದಾತರು (Employer) ಹಿಂದಿನದಕ್ಕಿಂತ ವಿಶಾಲವಾದ ಉದ್ಯೋಗ ಸಾಮರ್ಥ್ಯ ಕೌಶಲ್ಯಗಳನ್ನು ಹೊಂದಿರುವ ಸ್ನಾತಕೋತ್ತರ ಪದವೀಧರರನ್ನು ನೇಮಿಸಿಕೊಳ್ಳುತ್ತಾರೆ. ಉದ್ಯೋಗ ಸಾಮರ್ಥ್ಯ ಕೌಶಲ್ಯವು ಉದ್ಯೋಗಿಗಳ ಬದಲಾವಣೆ ಮತ್ತು ಉದ್ಯೋಗಕ್ಕಾಗಿ ಪೈಪೋಟಿಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಇದರ ಸಂಪೂರ್ಣ ಜವಾಬ್ದಾರಿ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳ ಕಾರ್ಯವಾಗಿದೆ. ಪ್ರತಿಯೊಂದು ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಕೌಶಲ್ಯಗಳು ಮತ್ತು ಪ್ರಾಯೋಗಿಕ ಸನ್ನಿವೇಶಗಳಲ್ಲಿ ಉದ್ಯೋಗ ಸಾಮರ್ಥ್ಯವನ್ನು ಅನ್ವಯಿಸುವುದು ಮತ್ತು ವೃತ್ತಿಪರ ಕ್ಷೇತ್ರದಲ್ಲಿ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವ ಉದ್ಯೋಗಿಗಳನ್ನು ಪೂರೈಸುವ ಜವಬ್ದಾರಿಯನ್ನು ಹೊಂದಿರಬೇಕು.

**ಉದ್ಯೋಗ ಕೌಶಲ್ಯಗಳ ಪ್ರಾಮುಖ್ಯತೆ :** ಉತ್ತಮ ಗುಣಮಟ್ಟದ ಕೌಶಲ್ಯಗಳ ಸಾಕಷ್ಟು ಪೂರೈಕೆಯ ಕೊರತೆಯು ದೇಶದ ಆರ್ಥಿಕ ಬೆಳವಣಿಗೆಗೆ ಪ್ರಮುಖ ಅಡಚಣೆಯಾಗಿದೆ. ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಕಲಿಯುವ ಜ್ಞಾನ, ತಾಂತ್ರಿಕ, ಮತ್ತು ಶೈಕ್ಷಣಿಕ ಕೌಶಲ್ಯಗಳು ಉನ್ನತ ಶಿಕ್ಷಣದ ಪ್ರಾಮುಖ್ಯತೆಯನ್ನು ವಿಸ್ತರಿಸುತ್ತದೆ. ಪದವೀಧರರ ವಿದ್ಯಾರ್ಥಿಗಳು ತಮ್ಮ ಮುಂದಿನ ಉದ್ಯೋಗ ಭವಿಷ್ಯಕ್ಕಾಗಿ ಉದ್ಯೋಗ ಕೌಶಲ್ಯಗಳನ್ನು ಹೊಂದಿರಬೇಕೆಂದು ಉದ್ಯೋಗದಾತರು ಉದ್ಯೋಗಿಗಳ ಬಗ್ಗೆ ವಿಭಿನ್ನ ಗ್ರಹಿಕೆಗಳು ಮತ್ತು ನಿರೀಕ್ಷೆಗಳನ್ನು ಹೊಂದಿರುತ್ತಾರೆ. ಪ್ರಚಲಿತ ದಿನಗಳಲ್ಲಿ ಪದವೀಧರ ಕೌಶಲ್ಯಗಳು ಹೆಚ್ಚು ಮೌಲ್ಯಯುತವಾಗಿವೆ. ಆದ್ದರಿಂದ ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಜ್ಞಾನದ ಜೊತೆಗೆ ವಿಷಯ ನಿರ್ದಿಷ್ಟ ಉದ್ಯೋಗಗಳನ್ನು ಅಳವಡಿಸಲಾಗುತ್ತಿದೆ. ಉದ್ಯೋಗ ನೇಮಕಾತಿಯಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯ ಹೆಚ್ಚಿಸಬೇಕು. 'ಉದ್ಯೋಗ ಸಿದ್ಧ' ಪದವೀಧರರನ್ನು ಉತ್ಪಾದಿಸಲು, ಸಮರ್ಥ ಕ್ರಿಯಾತ್ಮಕ ಆರಂಭವನ್ನು ಮಾಡುವ ಪ್ರಕ್ರಿಯೆಗೆ ಮತ್ತು ಉದ್ಯೋಗ ಬದಲಾವಣೆಗೆ ತ್ವರಿತವಾಗಿ ಹೊಂದಿಕೊಳ್ಳಲು ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಪರಿವರ್ತನೆ ಆಗಬೇಕಾಗಿದೆ. (ಕ್ರೆಬರ್ಟ್, ಬೇಟ್ಸ್, ಬೆಲ್, ಕ್ಯಾರೊಲ್ ಜಾಯ್) ಎಂದು ಹೇಳಿದ್ದಾರೆ.

## ಅಧ್ಯಯನದ ಪ್ರಾಮುಖ್ಯತೆ

ಶಿಕ್ಷಣವು ಜ್ಞಾನ ಮತ್ತು ಕೌಶಲ್ಯಗಳ ರಚನೆಯ ಮತ್ತು ಭಾಗಶಃ ಬಂಡವಾಳ ರಚನೆಯ ಪ್ರಕ್ರಿಯೆಯಾಗಿದೆ. ಮಾನವ ಸಂಪನ್ಮೂಲಗಳು ಪ್ರತಿಯೊಂದು ದೇಶದ ಅತ್ಯಂತ ಮಹತ್ವದ ಆಸ್ತಿ, ಮಾನವ ಅಭಿವೃದ್ಧಿಯಲ್ಲಿ ಉದ್ಯೋಗ ಪ್ರಮುಖ ಪಾತ್ರ ವಹಿಸುತ್ತವೆ. ಪ್ರಸ್ತುತ ದಿನಗಳಲ್ಲಿ ಸಮಾಜ ವಿಜ್ಞಾನ, ಸಾಹಿತ್ಯ, ವಾಣಿಜ್ಯ ಮತ್ತು ನಿರ್ವಹಣೆ ಮತ್ತು ವಿಜ್ಞಾನ ವಿಷಯದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಪಡೆದರೂ ಉದ್ಯೋಗ ಕ್ಷೇತ್ರದಲ್ಲಿ ಸ್ಥಾನ ಲಭಿಸದೆ ನಿರುದ್ಯೋಗಿಗಳಾಗುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಲ್ಲಿ ಜ್ಞಾನ, ಕೌಶಲ್ಯಗಳು, ಅನುಭವಗಳು, ನಡವಳಿಕೆಗಳು, ಗುಣಲಕ್ಷಣಗಳು, ಸಾಧನೆಗಳು ಮತ್ತು ವರ್ತನೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಉದ್ಯೋಗ ಅವಕಾಶಗಳನ್ನು ಒದಗಿಸಬೇಕಾಗಿದೆ. ಶೈಕ್ಷಣಿಕ ಸಂಸ್ಥೆಗಳು ಕೌಶಲ್ಯ ಮತ್ತು ಜ್ಞಾನದ ಪ್ರಧಾನ ಮೂಲಗಳಾಗಿದ್ದು ವಿದ್ಯಾರ್ಥಿಗಳಲ್ಲಿ ಉದ್ಯೋಗ ಸಾಮರ್ಥ್ಯ ಬೆಳೆಸುವುದು ನಿರ್ಣಾಯಕ ವಿಷಯವಾಗಿದೆ. ಆದ್ದರಿಂದ ಪದವೀಧರ ವಿದ್ಯಾರ್ಥಿಗಳ ಉದ್ಯೋಗ ಸಾಮರ್ಥ್ಯ ಹೆಚ್ಚಿಸುವಲ್ಲಿ ಕಾರ್ಮಿಕ ಮಾರುಕಟ್ಟೆಗೆ ಅಗತ್ಯವಾದ ಸಾಮರ್ಥ್ಯಗಳು ಮತ್ತು ಕೌಶಲ್ಯಗಳ ಅಭಿವೃದ್ಧಿಗಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸರ್ಕಾರದ ಅನೇಕ ಆಯೋಗಗಳು ಶಿಫಾರಸ್ಸು ಮಾಡಿವೆ.

ನ್ಯಾಷನಲ್ ಎಂಪ್ಲಾಯ್‌ಬಿಲಿಟಿ ಎನ್‌ಹ್ಯಾಸ್‌ಮೆಂಟ್ ಮಿಷನ್ (NEEM) ಸರ್ಕಾರದ ನೀತಿಯಡಿಯಲ್ಲಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಾಜಿಸಚಿವೆ ಸ್ಮೃತಿ ಇರಾನಿ, ಈ ನಿಟ್ಟಿನಲ್ಲಿ ರಾಷ್ಟ್ರೀಯ ಉದ್ಯೋಗ ವರ್ಧನೆ ಮಿಷನ್ ಅಡಿಯಲ್ಲಿ ಉದ್ಯೋಗದ ಪ್ರಾಯೋಗಿಕ ತರಬೇತಿ ನೀಡಲು ಸೂಚಿಸಲಾಗಿದೆ. ಮತ್ತು ಯುವ ಪದವೀಧರರ ಉದ್ಯೋಗ ಸಾಮರ್ಥ್ಯ ಹೆಚ್ಚಿಸುವಂತೆ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು (NSQF) ಹೇಳಿದೆ.ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೆಡ್ ಎಕನಾಮಿಕ್ ರಿಸರ್ಚ್ (NCAER) ತನ್ನ ಮೊದಲ ಸಂಶೋಧನೆಯನ್ನು ನ್ಯೂ ಸ್ಕಿಲ್ ಆರ್ಟ್ ವರ್ಕ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ಪ್ರಾರಂಭಿಸಿತ್ತು. '3 E' ಚಾಲೆಂಜ್ ಇದರಲ್ಲಿ ಶಿಕ್ಷಣ, (Education) ಉದ್ಯೋಗ ಸಾಮರ್ಥ್ಯ (Employability), ಉದ್ಯೋಗ, (Employment) ಎಂಬ ಅಂಶಗಳಿಗೆ ಹೆಚ್ಚು ಒತ್ತನ್ನು ನೀಡಬೇಕೆಂದು ಶಿಫಾರಸ್ಸು ಮಾಡಿದೆ. J.P. ಮೊರ್ಗಾನ್ ತನ್ನ ಭಾರತದ ಉದ್ಯೋಗ ಮಾರುಕಟ್ಟೆಯು ಎಂಬ ವಿಷಯದ ಸಂಶೋಧನೆಯು ಸಹ ಇದೇ ಅಂಶಗಳ ಮೇಲೆ ಕೇಂದ್ರಿಕರಿಸಿದೆ. ಸಂಭಾವ್ಯ ಮತ್ತು ಪ್ರಸ್ತುತ ಉದ್ಯೋಗಿಗಳ ಉದ್ಯೋಗ ಸಾಮರ್ಥ್ಯ, ಉದ್ಯೋಗವಕಾಶ, ಯುವ ಅಕಾಂಕ್ಷೆಗಳು, ಉದ್ಯೋಗದಾತರ ಅವಶ್ಯಕತೆಗಳು, ಶೈಕ್ಷಣಿಕ ನೀತಿಗಳು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮತ್ತು ಭಾರತದ ಶಿಕ್ಷಣ ವ್ಯವಸ್ಥೆಯು ಹೇಗೆ ಕೆಲಸದ ಸ್ಥಳಕ್ಕೆ ಅಗತ್ಯವಾದ ಕೌಶಲ್ಯಗಳೊಂದಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತದೆ ಎಂಬುದಾಗಿದೆ.

21ನೇ ಶತಮಾನದ ಶಿಕ್ಷಣದ ಹೊಸ ಮೈಲಿಗಲ್ಲು ರಾಷ್ಟ್ರೀಯ ಶಿಕ್ಷಣ ನೀತಿ 2020 ಶಿಫಾರಸ್ಸಿನಂತೆ ಉನ್ನತ ಶಿಕ್ಷಣ ಪ್ರಸ್ತುತ 27% ರಿಂದ 2035 ರ ವೇಳೆಗೆ ವೃತ್ತಿಪರ ಶಿಕ್ಷಣ ಸೇರಿದಂತೆ ಉನ್ನತ ಶಿಕ್ಷಣ ದಾಖಲಾತಿ ಪ್ರಮಾಣ ಹೆಚ್ಚಿಸುವ ಗುರಿಯನ್ನು ಹೊಂದಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಪ್ರಕಾರ ಉನ್ನತ ಶಿಕ್ಷಣದಲ್ಲಿ ವಿಶಾಲ ಆಧಾರಿತ ಮತ್ತು ಸಮಗ್ರ ಬಹು ಶಿಸ್ತಿನ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡಬೇಕಾಗಿದೆ. ಸಮಗ್ರ ಬಹು ಶಿಸ್ತಿನ ಶಿಕ್ಷಣದಿಂದಾಗಿ ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ, ಹೊಸ ಅವಿಷ್ಕಾರ, ತೀಕ್ಷ್ಣವಾದ ಚಿಂತನೆ ಮತ್ತು ಉದಾತ್ತವಾದ ಯೋಚನಾ ಸಾಮರ್ಥ್ಯಗಳು, ತಂಡವಾಗಿ ಕೆಲಸ ಮಾಡುವುದು. ಸಂವಹನ ಕೌಶಲ, ಗಹನವಾದ ಕಲಿಕೆ ಮತ್ತು ಎಲ್ಲಾ ಕ್ಷೇತ್ರಗಳ ಪಠ್ಯಕ್ರಮದಲ್ಲಿ ಪಾಂಡಿತ್ಯ, ಸಾಮಾಜಿಕ ಮತ್ತು ನೈತಿಕ ಜಾಗೃತಿಗಳಲ್ಲಿ ಹೆಚ್ಚಿನ ಅರಿವು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಲ್ಲಿ ಜ್ಞಾನ ಮತ್ತು ಉದ್ಯೋಗ ಕೌಶಲ್ಯಗಳನ್ನು ಹೆಚ್ಚಿಸಲು ಸ್ಥಳೀಯ ಕೈಗಾರಿಕೆ, ಉದ್ಯಮಗಳು, ಕಲಾವಿದರು ಮತ್ತು ಕುಶಲ ಕರ್ಮಿಗಳ ಜೊತೆ ಇಂಟರ್ನ್‌ಶಿಪ್ ಮುಂತಾದ ಸೃಜನಶೀಲ ಸಂಯೋಜನೆಗಳನ್ನು ಒಳಗೊಳ್ಳಬೇಕೆಂದು ಶಿಫಾರಸ್ಸು ಮಾಡುತ್ತದೆ.

ಅಸೋಸಿಯೇಟೆಡ್ ಚೆಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಆಫ್ ಇಂಡಿಯಾ (ASSOCHAM) ಪ್ರಕಾರ ಪದವೀಧರ ವಿದ್ಯಾರ್ಥಿಗಳು ಉದ್ಯೋಗದ ಸಂದರ್ಶನಕ್ಕೆ ಹಾಜರಾಗಿ ಉದ್ಯೋಗದ ಅರ್ಹತೆ ಪಡೆಯಲು ವಿಷಯ ಜ್ಞಾನ ಮತ್ತು ಉದ್ಯೋಗದ ಮೃದು ಕೌಶಲ್ಯಗಳನ್ನು ಹೊಂದಿರಬೇಕು ಎಂದು ಹೇಳಿದೆ. ಆದರೆ ಇತ್ತೀಚಿನ ಸಮೀಕ್ಷೆಗಳು (2016) ಪ್ರಕಾರ 93% ಭಾರತೀಯ ಪದವೀಧರರು ವೃತ್ತಿ ಪದವಿಗಳು, ಸ್ನಾತಕೋತ್ತರ ಪದವಿಗಳನ್ನು ಹೊಂದಿದ್ದಾರೆ. ಆದರೆ ಉದ್ಯೋಗ ಕೌಶಲ್ಯಗಳ ಕೊರತೆಯಿದೆ ಎಂದು ಹೇಳಿದೆ. ಏಕೆಂದರೆ ಉದ್ಯೋಗದ ಸ್ಥಳದ ಕಾರ್ಯದಲ್ಲಿ ಅಗತ್ಯವಿರುವ ಶೈಕ್ಷಣಿಕ ಜ್ಞಾನ ಮತ್ತು ಅನುಭವದ ನಡುವೆ ದೊಡ್ಡ ಅಂತರವಿದೆ. ಹಾಗೂ ಕಳೆದ ಕೆಲವು ವರ್ಷಗಳಿಂದ ಭಾರತೀಯರಲ್ಲಿ ಉದ್ಯೋಗವಕಾಶವು ನಿಧಾನವಾಗಿ ಹೆಚ್ಚುತ್ತಿದೆ. 2014 ರಲ್ಲಿ 33.9% ರಿಂದ 40.4% ವಿದ್ಯಾರ್ಥಿಗಳು ಉದ್ಯೋಗಕ್ಕೆ ಅರ್ಹರಾಗಿದ್ದಾರೆ ಎಂದು ಇಂಡಿಯಾ ಸ್ಕಿಲ್ ವರದಿ 2017 ತೋರಿಸಿದೆ. 2014 ರ ಸಮೀಕ್ಷೆಯ ಪ್ರಕಾರ ಉದ್ಯೋಗವಕಾಶವು 2015 ರಲ್ಲಿ 37.2% ಮತ್ತು 2016 ರಲ್ಲಿ 38.1% ರಷ್ಟಿತ್ತು. 2014 ರಿಂದ 2022 ರವರೆಗೆ ಮಹಿಳೆಯರು ಪುರುಷರಿಗಿಂತ ಸ್ವಲ್ಪ ಹೆಚ್ಚು ಉದ್ಯೋಗಶೀಲರಾಗಿದ್ದಾರೆಂದು ಈ ಕೆಳಗಿನ ಚಿತ್ರವು ತೋರಿಸುತ್ತದೆ. (ಸನ್ಯುಕ್ ಕನ್ವಲ್ ರಿಸರ್ಚ್ ರಿಪೋರ್ಟ್ ಕವೆರಿಂಗ್ ಆಫ್ ಇಂಡಿಯಾ)2014 ರಿಂದ 2022 ರವರೆಗೆ ಭಾರತದಲ್ಲಿನ ಉದ್ಯೋಗ ದರದ ಮಾಹಿತಿ.




ಉದ್ಯೋಗದಾತರು ಉದ್ಯೋಗದಲ್ಲಿ ಶೀಘ್ರವಾದ ಯಶಸ್ಸನ್ನು ಹೊಂದಲು ಕೆಲವು ಹೆಚ್ಚುವರಿ ಉದ್ಯೋಗ ಸಾಮರ್ಥ್ಯ ಕೌಶಲ್ಯಗಳನ್ನು ವಿದ್ಯಾರ್ಥಿಗಳು ಹೊಂದಿರಬೇಕೆಂದು ನಿರೀಕ್ಷಿಸುತ್ತಾರೆ. ಸ್ನಾತಕೋತ್ತರ ಪದವೀಧರರಲ್ಲಿ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳಲ್ಲಿ ಉದ್ಯೋಗ ಸಾಮರ್ಥ್ಯ ಕೌಶಲ್ಯಗಳ ಅರಿವು, ಪ್ರಾಮುಖ್ಯತೆ ಅವಶ್ಯಕತೆಗಳನ್ನು ಅನ್ವೇಷಿಸುವ ಅಗತ್ಯವನ್ನು ನಾವು ಊಹಿಸಿದ್ದೇವೆ. ಆದ್ದರಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರರು ಹೊಂದಿರುವ ಉದ್ಯೋಗ ಸಾಮರ್ಥ್ಯಗಳನ್ನು ಅನ್ವೇಷಿಸುವುದು. ಸ್ನಾತಕೋತ್ತರ ಪದವಿ ಪಠ್ಯಕ್ರಮದಲ್ಲಿರುವ ಉದ್ಯೋಗ ಪ್ರೇರಿತ ಅಂಶಗಳನ್ನು ವಿಶ್ಲೇಷಿಸುವುದು. ಆದ್ದರಿಂದ ನಮ್ಮ ಸಂಶೋಧನೆಯ ಫಲಿತಾಂಶಗಳನ್ನು ವಿಶ್ಲೇಷಿಸುವ ಮೂಲಕ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯ ವೃತ್ತಿ ಭವಿಷ್ಯದ ನಡುವಿನ ಸಂಪರ್ಕವನ್ನು ಮೌಲ್ಯಮಾಪನ ಮಾಡುವುದು. ಈ ಸಂಶೋಧನೆಯ ಗುರಿಯಾಗಿದೆ.

## ಸಂಶೋಧನಾ ಸಂಬಂಧಿತ ಸಾಹಿತ್ಯವಲೋಕನ

ಉದ್ಯೋಗ ಸ್ಥಳ, ಉದ್ಯೋಗ ಸಾಮರ್ಥ್ಯ, ಉದ್ಯೋಗ ಕೌಶಲ್ಯಗಳು, ಮತ್ತು ಪದವೀಧರರು, ಸ್ನಾತಕೋತ್ತರ ಪದವೀಧರರು ಅಧ್ಯಯನದ ಕುರಿತು ಈಗಾಗಲೇ ನಡೆದಿರುವ ಸಂಶೋಧನೆಗಳು ಮತ್ತು ಅವುಗಳ ಫಲಿತಾಂಶವನ್ನು ಚರ್ಚಿಸಲಾಗಿದೆ.

ರುಬೀಟಾ ಚಂದಾ ಮತ್ತು ಇತರರು (2014) ಪ್ರಸುತ ಸನ್ನಿವೇಶದಲ್ಲಿ ನಿರ್ವಹಣಾ ವಿದ್ಯಾರ್ಥಿಯ ಉದ್ಯೋಗವಕಾಶಕ್ಕಾಗಿ ಉದ್ಯಮದ ಅವಶ್ಯಕತೆಗಳು, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಯನ್ನು ನೀಡುವುದು, ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು. ನಿರಂತರವಾಗಿ ಕೈಗಾರಿಕೆಗಳಿಗೆ ಭೇಟಿಗೆ ಅವಕಾಶ ಕಲ್ಪಿಸುವುದು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಮಟ್ಟವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವುದು ಮತ್ತು ಹೆಚ್ಚು ಕಾರ್ಯಗಾರಗಳನ್ನು ಆಯೋಜಿಸಬೇಕೆಂದು ಸೂಚಿಸುತ್ತದೆ.

ಲೂಲಿಯಾನ ಪಾರ್ ಮತ್ತು ಇತರರು (2014) ಪಠ್ಯಕ್ರಮ ವಿನ್ಯಾಸ ಪ್ರಕ್ರಿಯೆಯಲ್ಲಿ ಆರಂಭಿಕ ಹಂತದಲ್ಲಿ ಉದ್ಯೋಗ ಕೌಶಲ್ಯಗಳ ಗುರುತಿಸುವಿಕೆ" ಎಂಬ ಶೀರ್ಷಿಕೆಯ ಅಧ್ಯಯನದ ಫಲಿತಾಂಶವೆಂದರೆ ಉನ್ನತ ಶಿಕ್ಷಣ ಸಂಸ್ಥೆಗಳು ಶೈಕ್ಷಣಿಕ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವ ಮೂಲಕ ಭವಿಷ್ಯದ ಪದವೀಧರರ ಉದ್ಯೋಗಕ್ಕೆ ಅಗತ್ಯವಾದ ಉದ್ಯೋಗ ಸಾಮರ್ಥ್ಯ ಹೆಚ್ಚಿಸುವಲ್ಲಿ ಅಗತ್ಯವಾದ ಸಾಮರ್ಥ್ಯಗಳು ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಬೇಕು ಎಂಬುದಾಗಿದೆ.ಚಿತ್ರಾ.ಆರ್ (2013) ಎಂಜಿನಿಯರಿಂಗ್ ವಿದ್ಯಾರ್ಥಿಗಳು ಮತ್ತು ಅವರ ನಿರೀಕ್ಷಿತ ಉದ್ಯೋಗದಾತರ ಗ್ರಹಿಕೆಯ ಕುರಿತ ಅಧ್ಯಯನ" ಎಂಬ ಶೀರ್ಷಿಕೆಯ ಅಧ್ಯಯನದಲ್ಲಿ ಯಾವುದೇ ಕೆಲಸದ ಅನುಭವವಿಲ್ಲದ ವಿದ್ಯಾರ್ಥಿಗಳಿಗಿಂತ ಕೆಲಸದ ಅನುಭವ ಹೊಂದಿರುವ ವಿದ್ಯಾರ್ಥಿಗಳು ಉದ್ಯೋಗ ಕೌಶಲ್ಯಗಳ ಬಗ್ಗೆ ಉತ್ತಮ ಅರಿವನ್ನು ಹೊಂದಿದ್ದಾರೆ. ನಿರ್ದಿಷ್ಟ ತರಬೇತಿಯ ಮೂಲಕ ಕೌಶಲ್ಯ ಮತ್ತು ಜ್ಞಾನದ ಅನ್ವಯವನ್ನು ಹೆಚ್ಚಿಸುವುದರಿಂದ ಉದ್ಯೋಗಿಗಳು ಅತ್ಯುತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆಂದು ಸಂಶೋಧನೆಯ ಫಲಿತಾಂಶ ತಿಳಿಸುತ್ತದೆ.

ಕೀಪರ್. ಇ. ಮತ್ತು ಇತರರು (2019) ವ್ಯವಹಾರಿಕ ಉದ್ದೇಶಿತ ಸ್ಪೋರ್ಟ್ ಮ್ಯಾನೇಜ್ಮೆಂಟ್ ಪ್ರೋಗ್ರಾಂನಲ್ಲಿ ಉದ್ಯೋಗ ಕೌಶಲ್ಯಗಳ ಒಂದು ವ್ಯಕ್ತಿ ಅಧ್ಯಯನ. ಸಂಶೋಧನೆಯ ಫಲಿತಾಂಶವೆಂದರೆ ಕಾಲೇಜು ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳ ಗ್ರಹಿಕೆ ಮತ್ತು ಅವರ ಉದ್ಯೋಗ

ಕೌಶಲ್ಯಗಳ ಕುರಿತು ಉದ್ಯೋಗದಾತರರು ಮತ್ತು ಮಾನವ ಸಂಪನ್ಮೂಲ ವ್ಯವಸ್ಥಾಪಕರ ಅಭಿಪ್ರಾಯ ಸಂಗ್ರಹಣೆ ಪ್ರಾಯೋಗಿಕ ಮಾದರಿಯ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯ, ನೇಮಕಾತಿ ಮತ್ತು ತರಬೇತಿಯ ಪ್ರಕ್ರಿಯೆಯ ನಡುವೆ ಬಲವಾದ ಸಂಬಂಧವಿದೆ ಎಂದು ಕಾರ್ಪೋರೇಟರ್ ಸಂಸ್ಥೆ ಹಾಗೂ ಮಾನವ ಸಂಪನ್ಮೂಲ ಇಲಾಖೆ ತಿಳಿಸಿದೆಂದು ಸಂಶೋಧನೆ ತಿಳಿಸುತ್ತದೆ.ಕವಿತಾ ದೇಸಾಯಿ ಮತ್ತು ಇತರರು (2021) ಭಾರತ ಉನ್ನತ ಶಿಕ್ಷಣದಲ್ಲಿ ಉದ್ಯೋಗ ಕೌಶಲ್ಯ ತರಬೇತಿ ಮಧ್ಯಸ್ಥಿಕೆ: ಒಂದು ಮಾದರಿ ಆಧಾರಿತ" ಎಂಬ ಶೀರ್ಷಿಕೆಯ ಸಂಶೋಧನೆಯ ಫಲಿತಾಂಶವು ಇದು ಶೈಕ್ಷಣಿಕ ಕೌಶಲ್ಯಗಳು ತಾಂತ್ರಿಕ ಕೌಶಲ್ಯಗಳು ಮತ್ತು ಉದ್ಯೋಗ ಕೌಶಲ್ಯಗಳ ನಡುವಿನ ಸಮತೋಲನವನ್ನು ಸಾಧಿಸುವುದರ ಮೂಲಕ ಕೇಂದ್ರಿಕರಿಸುವ ಮೂಲಕ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲಿಸಲು ಮತ್ತು ಮರುವಿನ್ಯಾಸಗೊಳಿಸಲು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದೆ. ಈ ಎಲ್ಲಾ ಸಂಶೋಧನಾ ಫಲಿತಾಂಶಗಳು ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯ, ನೇಮಕಾತಿ ಮತ್ತು ತರಬೇತಿಯ ಪ್ರಕ್ರಿಯೆಯ ನಡುವೆ ಬಲವಾದ ಸಂಬಂಧವಿದೆ. ಆದ್ದರಿಂದ ಉನ್ನತ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಉದ್ಯೋಗ ನಿರ್ವಹಣೆಗೆ ಉದ್ಯೋಗ ಕೌಶಲ್ಯಗಳನ್ನು ಅಗತ್ಯವಾಗಿ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಮೂಲಕ ಬೆಳೆಸಬೇಕೆಂಬುದನ್ನು ಈ ಸಂಶೋಧನೆಗಳಿಂದ ತಿಳಿಯಬಹುದಾಗಿದೆ.

## ಅಧ್ಯಯನದ ಉದ್ದೇಶಗಳು

1. ಕಲಾ, ವಿಜ್ಞಾನ, ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿರುವ ಉದ್ಯೋಗ ಕೌಶಲ್ಯಗಳ ವಿಶ್ಲೇಷಣೆ ಮತ್ತು ಹೋಲಿಕೆಯ ಅಧ್ಯಯನ.
2. ಕಲಾ, ವಿಜ್ಞಾನ, ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿರುವ ಉದ್ಯೋಗ ಕೌಶಲ್ಯಗಳ ವಿಶ್ಲೇಷಣೆ ಮತ್ತು ಹೋಲಿಕೆಯ ಅಧ್ಯಯನ.

**ಅಧ್ಯಯನದ ಚರಾಂಶಗಳು :** ಪ್ರಸ್ತುತ ಅಧ್ಯಯನದಲ್ಲಿ ಕಲೆ, ವಿಜ್ಞಾನ, ಮತ್ತು ವಾಣಿಜ್ಯ ವಿಭಾಗಗಳು, ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು, ಮತ್ತು ಉದ್ಯೋಗ ಕೌಶಲ್ಯಗಳನ್ನು ಚರಾಂಶಗಳಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

**ಅಧ್ಯಯನದ ಪ್ರತಿಚಯನ :** ಈ ಅಧ್ಯಯನದ ಮಾದರಿ ಸಂಗ್ರಹಕ್ಕಾಗಿ ಸರಳ ಯಾದೃಚ್ಛಿಕ ಮತ್ತು ಉದ್ದೇಶಪೂರಿತ ಪ್ರತಿಚಯನದ ಮೂಲಕ ಕುವೆಂಪು ವಿಶ್ವವಿದ್ಯಾಲಯದ ಕಲಾ. ವಿಜ್ಞಾನ ಮತು ವಾಣಿಜ್ಯ ವಿಭಾಗಗಳ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಸಂಶೋಧನಾ ವಿಧಾನ :** ಈ ಅಧ್ಯಯನಕ್ಕಾಗಿ ವಿವರಣಾತ್ಮಕ ಸಂಶೋಧನೆಯಲ್ಲಿ ಸಮೀಕ್ಷಾ ವಿಧಾನವನ್ನು ಬಳಸಲಾಗಿದೆ.

**ದತ್ತಾಂಶ ಸಂಗ್ರಹ ಸಾಧನಗಳ ಬಳಕೆ :** ಈ ಅಧ್ಯಯನಕ್ಕಾಗಿ ಸಂಶೋಧಕರು ಸ್ವರಚಿತ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿರುವ ಉದ್ಯೋಗ ಕೌಶಲ್ಯಗಳ ವಿಶ್ಲೇಷಣಾ ಮಾಪನವನ್ನು ಬಳಸಿಕೊಂಡು ದತ್ತಾಂಶವನ್ನು ಸಂಗ್ರಹಿಸಲಾಗಿದೆ.

**ಸಂಖ್ಯಾಶಾಸ್ತ್ರೀಯ ತಂತ್ರಗಳ ಬಳಕೆ :** ಪ್ರಸ್ತುತ ಅಧ್ಯಯನದಲ್ಲಿ ದತ್ತಾಂಶಗಳ ವಿಶ್ಲೇಷಣೆಗಾಗಿ ಸಂಖ್ಯಾಶಾಸ್ತ್ರೀಯ ತಂತ್ರವಾದ ಸರಾಸರಿ, ಮಾನಕ ವಿಚಲನೆ, ಮತ್ತು ಶೇಕಡಾವಾರು ವಿಶ್ಲೇಷಣೆ, ANOVA, ಪರೀಕ್ಷಾ ತಂತ್ರಾಂಶಗಳನ್ನು ಬಳಸಿಕೊಳ್ಳಲಾಗಿದೆ.

## ದತ್ತಾಂಶ ವಿಶ್ಲೇಷಣೆ ಮತ್ತು ವ್ಯಾಖ್ಯಾನ

**ಉದ್ದೇಶ 1 :** ಕಲಾ, ವಿಜ್ಞಾನ, ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿರುವ ಉದ್ಯೋಗ ಕೌಶಲ್ಯಗಳ ವಿಶ್ಲೇಷಣೆ ಮತ್ತು ಹೋಲಿಕೆಯ ಅಧ್ಯಯನ.

**ಪ್ರಾಕಲ್ಪನೆ 1 :** ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ನಡುವೆ ಉದ್ಯೋಗ ಕೌಶಲ್ಯಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿಲ್ಲ.


**ಕೋಷ್ಟಕ–1.1 : ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ನಡುವೆ ಉದ್ಯೋಗದ ಕೌಶಲ್ಯಗಳಿಗೆ ಸಂಬಂಧಿಸಿದಂತೆ ಮೌಲ್ಯವನ್ನು ತೋರಿಸುವ ANOVA ಕೋಷ್ಟಕ.**

| ಗುಂಪು ಸಂಖ್ಯಾಶಾಸ್ತ್ರ | ವಿಭಾಗಗಳು | ವಿದ್ಯಾರ್ಥಿಗಳ ಸಂಖ್ಯೆ | ಸರಾಸರಿ | ಮಾನಕ ವಿಚಲನೆ | ANOVA | |
|---|---|---|---|---|---|---|
| | | | | | F | ಮಹತ್ವಪೂರ್ಣ ವ್ಯತ್ಯಾಸ |
| ಉದ್ಯೋಗ ಕೌಶಲ್ಯಗಳು | ಕಲಾ | 150 | 405.82 | 36.00 | 1.386 | NS |
| | ವಿಜ್ಞಾನ | 150 | 412.69 | 39.07 | | |
| | ವಾಣಿಜ್ಯ | 50 | 407.24 | 30.23 | | |

NS = ಮಹತ್ವಪೂರ್ಣ ವ್ಯತ್ಯಾಸವಿಲ್ಲ.

**ಕೋಷ್ಟಕ–1.2 : ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿರುವ ಉದ್ಯೋಗ ಕೌಶಲ್ಯಗಳ ಶೇಕಡಾವಾರು ಅಂಕಗಳನ್ನು ತೋರಿಸುವ ಕೋಷ್ಟಕ.**

| ಗುಂಪು ಸಂಖ್ಯಾಶಾಸ್ತ್ರ | ವಿಭಾಗಗಳು | ವಿದ್ಯಾರ್ಥಿಗಳ ಸಂಖ್ಯೆ | ಸರಾಸರಿ | ಶೇಕಡಾವಾರು |
|---|---|---|---|---|
| ಉದ್ಯೋಗ ಕೌಶಲ್ಯಗಳು | ಕಲಾ | 150 | 405.82 | 33.10 |
| | ವಿಜ್ಞಾನ | 150 | 412.69 | 33.66 |
| | ವಾಣಿಜ್ಯ | 50 | 407.24 | 33.22 |
| | ಒಟ್ಟು | 350 | 1215.75 | 100 |





ಮೇಲಿನ ಕೋಷ್ಟಕ – 1.1 ರಲ್ಲಿ ಕಂಡುಬಂದಿರುವಂತೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿರುವ ಉದ್ಯೋಗ ಕೌಶಲ್ಯಗಳಲ್ಲಿನ ಗಮನಾರ್ಹ ವ್ಯತ್ಯಾಸವನ್ನು ಕಂಡುಹಿಡಿಯುವ F ಮೌಲ್ಯಗಳು 1.386 ರ ಮೌಲ್ಯಗಳನ್ನು 0.05 ಹಂತದ ಪ್ರಾಮುಖ್ಯತೆಯಲ್ಲಿ ಟೇಬಲ್ ಮೌಲ್ಯಕ್ಕಿಂತ ಕಡಿಮೆ ಎಂದು ಲೆಕ್ಕಚಾರ ಮಾಡಲಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಆದ್ದರಿಂದ ಮೌಲ್ಯಗಳು ಮಹತ್ವವನ್ನು ಹೊಂದಿಲ್ಲ. ಹೀಗಾಗಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ನಡುವೆ ಉದ್ಯೋಗ ಕೌಶಲ್ಯಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿಲ್ಲ. ಎಂಬ ಶೂನ್ಯ ಪ್ರಾಕಲ್ಪನೆಯನ್ನು ಅಂಗೀಕರಿಸಲಾಗಿದೆ.

**ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳ ಶೇಕಡಾವಾರು ಅಂಕಗಳ ನಕ್ಷೆ**




ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಉದ್ಯೋಗಗಳಲ್ಲಿರುವ ಕೌಶಲ್ಯಗಳ ಶೇಕಡಾವಾರು ಅಂಕಗಳನ್ನು ಲೆಕ್ಕಹಾಕಲಾಗಿದೆ. ಒಟ್ಟಾರೆ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು 33.66% ಉದ್ಯೋಗ ಕೌಶಲ್ಯಗಳ್ನು ಹೊಂದಿದ್ದಾರೆಂದು ಕೋಷ್ಟಕ (1.2) ವಿಶ್ಲೇಷಿಸಿದೆ. ನಂತರ ವಾಣಿಜ್ಯ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು 33.22% ಮತ್ತು ಕಲಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು 33.10% ಮೇಲಿನ ಎಲ್ಲಾ ವಿಭಾಗಗಳ ಉದ್ಯೋಗಳಲ್ಲಿ ಹೆಚ್ಚು ಅಥವಾ ಕಡಿಮೆ ಪ್ರಮಾಣದ ಉದ್ಯೋಗ ಕೌಶಲ್ಯಗಳಿವೆ. ಆದರೆ ವಿಜ್ಞಾನದ ವಿಭಾಗದ ವಿದ್ಯಾರ್ಥಿಗಳು ಇತರ ವಿಭಾಗಗಳ ವಿದ್ಯಾರ್ಥಿಗಳಿಗಿಂತ 33.66% ಉದ್ಯೋಗ ಕೌಶಲ್ಯಗಳನ್ನು ಹೊಂದಿದ್ದಾರೆಂದು ಸಂಶೋಧಕರು ವಿವರಿಸಿದ್ದಾರೆ.

**ಉದ್ದೇಶ 2 :** ಕಲಾ, ವಿಜ್ಞಾನ, ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳ ವಿಶ್ಲೇಷಣೆ ಮತ್ತು ಹೋಲಿಕೆಯ ಅಧ್ಯಯನ.

**ಪ್ರಾಕಲ್ಪನೆ 2 :** ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿಲ್ಲ.

**ಕೋಷ್ಟಕ–1.2 : ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗದ ಕೌಶಲ್ಯಗಳಿಗೆ ಸಂಬಂಧಿಸಿದಂತೆ ಮೌಲ್ಯವನ್ನು ತೋರಿಸುವ ANOVA ಕೋಷ್ಟಕ.**

| ಗುಂಪು ಸಂಖ್ಯಾಶಾಸ್ತ್ರ | ವಿಭಾಗಗಳು | ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ | ಸರಾಸರಿ | ಮಾನಕ ವಿಚಲನೆ | ANOVA | |
|---|---|---|---|---|---|---|
| | | | | | F | ಮಹತ್ವಪೂರ್ಣ ವ್ಯತ್ಯಾಸ |
| ಉದ್ಯೋಗ ಕೌಶಲ್ಯಗಳು | ಕಲಾ | 86 | 402.02 | 39.49 | .740 | NS |
| | ವಿಜ್ಞಾನ | 102 | 410.87 | 39.91 | | |
| | ವಾಣಿಜ್ಯ | 30 | 408.76 | 31.33 | | |


NS = ಮಹತ್ವಪೂರ್ಣ ವ್ಯತ್ಯಾಸವಿಲ್ಲ.

ಮೇಲಿನ ಕೋಷ್ಟಕ–2.1 ರಲ್ಲಿ ಕಂಡುಬಂದಿರುವಂತೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ನಡುವಿನ ಉದ್ಯೋಗ ಕೌಶಲ್ಯಗಳಲ್ಲಿನ ಗಮನಾರ್ಹ ವ್ಯತ್ಯಾಸವನ್ನು ಕಂಡುಹಿಡಿಯುವ F ಮೌಲ್ಯಗಳು .740 ರ F ಮೌಲ್ಯಗಳನ್ನು 0.05 ಹಂತದ ಪ್ರಾಮುಖ್ಯತೆಯಲ್ಲಿ ಟೇಬಲ್ ಮೌಲ್ಯಕ್ಕಿಂತ ಕಡಿಮೆ ಎಂದು ಲೆಕ್ಕಚಾರ ಮಾಡಲಾಗಿದೆ. ಆದ್ದರಿಂದ ಮೌಲ್ಯಗಳು ಮಹತ್ವವನ್ನು ಹೊಂದಿಲ್ಲ. ಹೀಗಾಗಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿಲ್ಲ ಎಂಬ ಶೂನ್ಯ ಪ್ರಾಕಲ್ಪನೆಯನ್ನು ಅಂಗೀಕರಿಸಲಾಗಿದೆ.

**ಕೋಷ್ಟಕ–2.2 : ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳ ಶೇಕಡಾವಾರು ಅಂಕಗಳನ್ನು ತೋರಿಸುವ ಕೋಷ್ಟಕ.**

| ಗುಂಪು ಸಂಖ್ಯಾಶಾಸ್ತ್ರ | ವಿಭಾಗಗಳು | ವಿದ್ಯಾರ್ಥಿಗಳ ಸಂಖ್ಯೆ | ಸರಾಸರಿ | ಶೇಕಡಾವಾರು |
|---|---|---|---|---|
| ಉದ್ಯೋಗ ಕೌಶಲ್ಯಗಳು | ಕಲಾ | 86 | 404.02 | 32.85 |
| | ವಿಜ್ಞಾನ | 102 | 410.87 | 33.58 |
| | ವಾಣಿಜ್ಯ | 30 | 408.76 | 33.40 |
| | ಒಟ್ಟು | 218 | 1222.65 | 99.73 |

**ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳ ಶೇಕಡಾವಾರು ಅಂಕಗಳ ನಕ್ಷೆ**




ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗಳ ಕೌಶಲ್ಯಗಳ ಶೇಕಡಾವಾರು ಅಂಕಗಳನ್ನು ಲೆಕ್ಕಹಾಕಲಾಗಿದೆ. ಒಟ್ಟಾರೆ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು 33.58 % ಉದ್ಯೋಗ ಕೌಶಲ್ಯಗಳ್ನು ಹೊಂದಿದ್ದಾರೆಂದು ಕೋಷ್ಟಕ (2.2) ವಿಶ್ಲೇಷಿಸಿದೆ. ನಂತರ ವಾಣಿಜ್ಯ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು 33.40% ಮತ್ತು ಕಲಾ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು 32.85% ಮೇಲಿನ ಎಲ್ಲಾ ವಿಭಾಗಗಳ ಉದ್ಯೋಗಳಲ್ಲಿ ಹೆಚ್ಚು ಅಥವಾ ಕಡಿಮೆ ಪ್ರಮಾಣದ ಉದ್ಯೋಗ ಕೌಶಲ್ಯಗಳಿವೆ. ಆದರೆ ವಿಜ್ಞಾನದ ವಿಭಾಗದ ಮಹಿಳಾ ವಿದ್ಯಾರ್ಥಿಗಳು ಇತರ ವಿಭಾಗಗಳ ಮಹಿಳಾ ವಿದ್ಯಾರ್ಥಿಗಳಿಗಿಂತ 33.58% ಉದ್ಯೋಗ ಕೌಶಲ್ಯಗಳನ್ನು ಹೊಂದಿದ್ದಾರೆಂದು ಸಂಶೋಧಕರು ವಿವರಿಸಿದ್ದಾರೆ.

## ಅಧ್ಯಯನದ ಫಲಿತಾಂಶಗಳು

ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ನಡುವೆ ಉದ್ಯೋಗ ಕೌಶಲ್ಯಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿಲ್ಲ. ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳಲ್ಲಿ ಹೆಚ್ಚು ಅಥವಾ ಕಡಿಮೆ ಪ್ರಮಾಣದ ಉದ್ಯೋಗ ಕೌಶಲ್ಯಗಳಿವೆ. ಆದರೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ಸ್ನಾತಕೋತ್ತರ ಪದವಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ವಿದ್ಯಾರ್ಥಿಗಳ ಉದ್ಯೋಗಳ ಕೌಶಲ್ಯಗಳಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಇತರ ವಿಭಾಗಗಳ ಮಹಿಳಾ ವಿದ್ಯಾರ್ಥಿಗಳಿಗಿಂತ 33.66% ಉದ್ಯೋಗ ಕೌಶಲ್ಯಗಳನ್ನು ಹೊಂದಿದ್ದಾರೆ.

ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ನಡುವೆ ಉದ್ಯೋಗ ಕೌಶಲ್ಯಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿಲ್ಲ. ಎಲ್ಲಾ ವಿಭಾಗಗಳ ಮಹಿಳಾ ವಿದ್ಯಾರ್ಥಿಗಳ ಉದ್ಯೋಗ ಕೌಶಲ್ಯಗಳಲ್ಲಿ ಹೆಚ್ಚು ಅಥವಾ ಕಡಿಮೆ ಪ್ರಮಾಣದ ಉದ್ಯೋಗ ಕೌಶಲ್ಯಗಳಿವೆ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ಮಹಿಳಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗಗಳ ಕೌಶಲ್ಯಗಳಲ್ಲಿ ವಿಜ್ಞಾನದ ವಿಭಾಗದ ಮಹಿಳಾ ವಿದ್ಯಾರ್ಥಿಗಳು ಇತರ ವಿಭಾಗಗಳ ಮಹಿಳಾ ವಿದ್ಯಾರ್ಥಿಗಳಿಗಿಂತ 33.58% ಉದ್ಯೋಗ ಕೌಶಲ್ಯಗಳನ್ನು ಹೊಂದಿದ್ದಾರೆಂದು ಸಂಶೋಧನೆ ವಿಶ್ಲೇಷಿಸುತ್ತದೆ.

## ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿ ಉದ್ಯೋಗ ಕೌಶಲ್ಯ ಗಳನ್ನು ಹೆಚ್ಚಿಸುವ ಕ್ರಮಗಳು

1. ವಿಶ್ವವಿದ್ಯಾಲಯಗಳು ಉದ್ಯೋಗ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು, ಪಠ್ಯಕ್ರಮದಲ್ಲಿ ಉದ್ಯೋಗ ಕೌಶಲ್ಯಗಳನ್ನು ಸಂಯೋಜಿಸುವುದು.
2. ಉತ್ತಮ ಕೋರ್ಸ್ ವಿನ್ಯಾಸ, ವೃತ್ತಿಪರ ವ್ಯವಸ್ಥೆಗೆ ಹೊಂದಿ ಕೊಳ್ಳುವಂತೆ ಸಲಹೆ ಮತ್ತು ಮಾರ್ಗದರ್ಶನವನ್ನು ಒದಗಿಸುವುದು.
3. ಉನ್ನತ ಶಿಕ್ಷಣ ಮತ್ತು ಉದ್ಯಮದ ನಡುವೆ ಸಂಪರ್ಕ ಕಲ್ಪಿಸುವುದು. ವಿಶ್ವವಿದ್ಯಾಲಯ, ಕೈಗಾರಿಕೆಗಳು ಮತ್ತು ವೃತ್ತಿಪರ ಸಂಸ್ಥೆಗಳು ಗುರಿಯನ್ನು ಸಾಧಿಸಲು ಹೆಚ್ಚು ನಿಕಟವಾಗಿ ಒಟ್ಟಿಗೆ ಕೆಲಸ ಮಾಡಲು ಅವಕಾಶ ಕಲ್ಪಿಸುವುದು.
4. ವೃತ್ತಿಪರ ಸಂಸ್ಥೆಗಳು ಕೈಗಾರಿಕೆಗಳೊಂದಿಗೆ ಸಂಬಂಧ ಹೊಂದುವ ಮೂಲಕ ಪ್ರಚಲಿತ ಪಠ್ಯಕ್ರಮ ರೂಪಿಸಲು, ಕೋರ್ಸ್‌ವಿನ್ಯಾಸ ರಚಿಸಲು ಸಹಾಯ ಮಾಡಬಹುದು.
5. ಉನ್ನತ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಉದ್ಯೋಗ ಸೇವೆ ಮತ್ತು ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಸಹಾಯಕವಾಗು ವಂತೆ ಉದ್ಯೋಗದಾತರನ್ನು ಕರೆ ತರುವ ಜವಾಬ್ದಾರಿಯನ್ನು ನಿರ್ವಹಿಸಬೇಕು.

## ಉಪಸಂಹಾರ

ಈ ಅಧ್ಯಯನದ ಉದ್ದೇಶವು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಉದ್ಯೋಗ ಸಾಮರ್ಥ್ಯ ಹೊಂದಲು ಉದ್ಯೋಗ ಕೌಶಲ್ಯಗಳ ಮಹತ್ವ ಮತ್ತು ಅವಶ್ಯಕತೆ ಹಾಗೂ ಉದ್ಯೋಗ ಕೌಶಲ್ಯಗಳನ್ನು ಉಲ್ಲೇಖಿಸಲಾಗಿದೆ. ಸ್ನಾತಕೋತ್ತರ ಪದವಿಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳ ನಡುವಿನ ಉದ್ಯೋಗ ಕೌಶಲ್ಯಗಳನ್ನು ಮಾಪನ ಮಾಡಲಾಗಿದೆ. ವಿದ್ಯಾರ್ಥಿಗಳು ಭವಿಷ್ಯದ ವೃತ್ತಿ ಜೀವನಕ್ಕಾಗಿ ಉದ್ಯೋಗ ಕೌಶಲ್ಯಗಳು ಅವಶ್ಯಕ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಪಠ್ಯಕ್ರಮದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು, ಅರ್ಥಪೂರ್ಣ ಸಂಬಂಧ, ಜಾಗತಿಕ ಅರಿವು, ಅನುಭವ ಪೂರ್ಣ ಕಲಿಕೆ, ವೃತ್ತಿ ಜೀವನದ ಪಕ್ವತೆ, ವೃತ್ತಿಪರ ಕೌಶಲ್ಯಗಳು, ವೃತ್ತಿ ನಿರ್ವಹಣೆಯ ಜ್ಞಾನ, ಈ ಎಲ್ಲಾ ಉದ್ಯೋಗ ಕೌಶಲ್ಯ ಸಂಬಂಧಿತ ಅಂಶಗಳನ್ನು ಬೆಳೆಸಬೇಕಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ವಿವಿಧ ಹಂತದಲ್ಲಿ ಉದ್ಯೋಗ ಕೌಶಲ್ಯಗಳನ್ನು ಹೊಂದಿರುತ್ತಾನೆ. ಉನ್ನತ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಉದ್ಯೋಗ ಸಾಮರ್ಥ್ಯ ಮಟ್ಟ ಹೆಚ್ಚಿಸಲು ಸೂಕ್ತ ಅವಕಾಶಗಳಿಗಾಗಿ ಸರ್ಕಾರದ ನೀತಿಗಳು, ಎನ್.ಜಿ.ಒ.ಗಳೊಂದಿಗೆ ಸಹಭಾಗಿತ್ವ ಕಾರ್ಯ ನಿರ್ವಹಿಸಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


- **Belt V., Drake P., & Chapman K. (2010) :** Employability Skills: A Research and Policy Briefing. Briefing Paper Series, UK Commission for Employment and Skills. Retrieved from .
- **Bridgstock R. (2009) :** The graduate attributes we‘ve overlooked: Enhancing Graduate employability through career management skills, Higher Education Research & Development,Volume 28, Issue 1 from
- **Carnoy M. (1987) :** Higher Education and Graduate Employment in India, IIEP Research Report No.64, International Institute for Educational Planning, Established by UNESCO)
- **Chithra R. (2013) :** ‘Employability Skills -A Study on the Perception of the Engineering Students and their Prospective Employers’ Retrieved from Global Journal of Management and Business Studies. ISSN 2248-9878 Volume 3.
- **India Skills Report-2018 from .**
- **Iuliana Parvu (2014) :** Identification of employability skills-starting point for the curriculum design processes. Retrieved from Economics, Management, and Financial Markets Volume 9(1), 2014, pp. 237–246, ISSN 1842-3191
- **Kavitha Desai et.al (2021) :** “Employability Skill Training Intervention in Higher Education in India: A Model Based” Retrieved from Turkish Journal of Computer and Mathematics Education Vol.12 No.10 (2021), 4316-4322.
- **Keiper E. at.el (2019) :** Employability Skills a Case Study on a Business-Oriented Sport Management Program e-Journal of Business Education & Scholarship of Teaching Vol. 13, No. 1, June 2019, pp: 59-68.
- **Lowden et al., (2011) :** on Employers perception of employability skill of new graduates
- **NCAER :** Labour Economics Research Observatory (N-LERO): India’s 3E Challenge- Education, Employability and Employment.
- **National Education Policy 2020 :** Ministry of Human Resource Development Government of India. Retrieved from https://www.education.gov.in.
- **Rubvita Chadha et al (2014) :** ‘Industry’s Requirement for Employability of Management Student in Present Scenario’ Retrieved from International journal of business quantitative economics and applied management research. ISSN: 2349-5677 Volume 1, Issue 3.
- **Sakthivel Murugan. M.et.al, (2020) :** Research Study on Perception of Employers on Employability skills of college Students in Tamil Nadu Retrieved from European Journal of Molecular & Clinical Medicine, ISSN 2515-8260 Volume 7, Issue 11, 2020 pp 4597-4603.
- **Sanyukta Kanwal Published by Participation at work in India** 2014-2022, by gender Published by Mar 16, 2022 from https://www.statista.com/statistics/1043300/india-work-participation-by-gender/
- **Vander Heijden.at.el (2009) :** Employability enhancement through formal and informal learning: An empirical study among Dutch non-academic university staff members
- **Yorke M. & Knight P.T. (2006) :** Embedding Employability into the Curriculum. York, United Kingdom: The Higher Education Academy.
- **Yorke M. (2006) :** Employability in Higher Education: What it is – What it is not. York, United Kingdom: The Higher Education Academy.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಭವಿಷ್ಯದ ಶಿಕ್ಷಕರಿಗೆ ಅವಶ್ಯಕವಾಗಿರುವ ಸಾಮರ್ಥ್ಯಗಳ ಒಂದು ಒಳನೋಟ

✍ **ಸಿದ್ದರಾಜು,** ಸಂಶೋಧನಾರ್ಥಿ, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

✍ **ಡಾ. ಜಗನ್ನಾಥ ಕೆ. ಡಾಂಗೆ,** ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

*ಸಾರಾಂಶ*

*ಬದಲಾವಣೆ ಎನ್ನುವುದು ನಿರಂತರ ಪ್ರಕ್ರಿಯೆಯಾಗಿದೆ. ಪ್ರತಿಯೊಂದು ಕ್ಷೇತ್ರವು ಕಾಲಕ್ಕೆ ಅನುಗುಣವಾಗಿ ಬದಲಾವಣೆಗೆ ಒಳಪಡುತ್ತಿರುತ್ತದೆ, ಇದಕ್ಕೆ ಶಿಕ್ಷಣ ಕ್ಷೇತ್ರವು ಹೊರತಲ್ಲ. ಭವಿಷ್ಯದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಇಂದಿನ ಶಿಕ್ಷಕರನ್ನು ರೂಪಿಸಬೇಕಾಗಿದೆ. ಮುಂದಿನ ತಲೆಮಾರಿಗೆ ಅವಶ್ಯಕವಾಗಿರುವ, ಸಮರ್ಪಕವಾದ ಶಿಕ್ಷಕರ ಸಾಮರ್ಥ್ಯಗಳನ್ನು ಬೆಳೆಸುವಲ್ಲಿ ಶಿಕ್ಷಣ ಸಂಸ್ಥೆಗಳ ಹಾಗೂ ಸರ್ಕಾರಗಳ ಪಾತ್ರ ಅಗಾಧವಾದುದು. ಶಿಕ್ಷಣ ತಜ್ಞರು, ಶಿಕ್ಷಣ ಇಲಾಖೆ, ಶಿಕ್ಷಣ ಸಂಸ್ಥೆಗಳು, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯು ಈ ನಿಟ್ಟಿನಲ್ಲಿ ಆಲೋಚಿಸಬೇಕಾದುದು ಆದ್ಯ ಕರ್ತವ್ಯವಾಗಬೇಕು. ಈ ಲೇಖನದಲ್ಲಿ ಭವಿಷ್ಯದ ಶಿಕ್ಷಕರಿಗೆ ಅವಶ್ಯಕವಾಗಿರುವ ಸಾಮರ್ಥ್ಯಗಳನ್ನು ಕುರಿತು ಚರ್ಚಿಸಲಾಗಿದೆ.ಈ ಎಲ್ಲಾ ಅಂಶಗಳನ್ನು ಶಿಕ್ಷಕರ ತರಬೇತಿ ಸಂಸ್ಥೆಗಳು ಗಣನೀಯವಾಗಿ ಪಠ್ಯಕ್ರಮದಲ್ಲಿ ಹಾಗೂ ತಮ್ಮ ಕೋರ್ಸ್‌ಗಳಲ್ಲಿ ಅಳವಡಿಸಿಕೊಳ್ಳಬೇಕಿದೆ. ಹಾಗಾದಾಗ ಮಾತ್ರ ಅತ್ಯುತ್ತಮ, ಪರಿಣಾಮಕಾರಿ, ಕೌಶಲಭರಿತ, ಸಾಮರ್ಥ್ಯವುಳ್ಳ ಮತ್ತು ತಾಂತ್ರಿಕ ನೈಪುಣ್ಯತೆಯನ್ನು ಹೊಂದಿದ ಶಿಕ್ಷಕರನ್ನು ಹೊರತರಬಹುದಾಗಿದೆ. ಗುಣಾತ್ಮಕ ಶಿಕ್ಷಕರಿಂದ ಮಾತ್ರ ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯ, ಈ ನಿಟ್ಟಿನಲ್ಲಿ ಹೆಜ್ಜೆಯನ್ನಿಡಬೇಕಿದೆ.*

## ಪೀಠಿಕೆ

ಕೋವಿಡ್–19 ಎಂಬ ಮಹಾಮಾರಿಯಿಂದ ಪ್ರಪಂಚದ ಶಿಕ್ಷಣದ ವ್ಯವಸ್ಥೆಯೇ ಸಂಪೂರ್ಣವಾಗಿ ಬುಡಮೇಲಾಗಿದೆ. ಇದನ್ನು ಸರಿಪಡಿಸಲು ಸರಿ ಸುಮಾರು ಕೆಲವು ವರ್ಷಗಳು ಬೇಕಾಗಬಹುದು. ಇಂತಹ ಸಂಕಷ್ಟದ ಸಮಯದಲ್ಲೂ ಬಹುತೇಕ ಶಿಕ್ಷಕ ವೃಂದದವರು ಮನೆಯಲ್ಲಿದ್ದುಕೊಂಡೇ ಪಾಠ ಪ್ರವಚನಗಳನ್ನು ನಡೆಸಿಕೊಟ್ಟಿದ್ದಾರೆ. ಇದರ ಪರಿಣಾಮವಾಗಿ ಆನ್‌ಲೈನ್ ಮಾದರಿಯ ಬೋಧನೆ ಕಡೆಗೆ ಶಿಕ್ಷಣ ವ್ಯವಸ್ಥೆಯು ವರ್ಗಾಂತರವಾದುದರಿಂದ ಅದೆಷ್ಟೋ ಶಿಕ್ಷಕರು ತಂತ್ರಜ್ಞಾನದ ಅರಿವಿಲ್ಲದೇ ಬಹುತೇಕ ಬೋಧನಾ ಸಮಸ್ಯೆಗಳನ್ನು ಎದುರಿಸಿದ್ದರು. ಅದರಲ್ಲಿಯೂ ಗಣಕಯಂತ್ರದ ಜ್ಞಾನದ ಕೊರತೆ, ಆನ್‌ಲೈನ್ ಬೋಧನಾ ಆ್ಯಪ್‌ಗಳ ಬಗ್ಗೆ ಸಮರ್ಪಕ ಮಾಹಿತಿಯ ಕೊರತೆ ಮತ್ತು ಕೆಲವು ತಾಂತ್ರಿಕ ಕೊರತೆಗಳನ್ನೂ ಎದುರಿಸಿದರು. ಕೆಲವು ವಿದ್ಯಾರ್ಥಿಗಳು ಕೂಡ ಮೊಬೈಲ್, ಇಂಟರ್ನೆಟ್, ನೆಟ್‌ವರ್ಕ್ ಇಲ್ಲದೆ ಸಮಸ್ಯೆಗಳನ್ನು ಎದುರಿಸಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಪ್ರಪಂಚದಾದ್ಯಂತ ಪ್ರತಿಶತ 31% (463 ಮಿಲಿಯನ್) ಶಾಲಾ ಮಕ್ಕಳು ಪ್ರಸಾರ ಮತ್ತು ಇಂಟರ್ನೆಂಟ್ ಆಧಾರಿತ ದೂರಸ್ಥ ಕಲಿಕೆಯ ನೀತಿಗಳಿಂದ ಸಮಸ್ಯೆಗೆ ಒಳಗಾಗಿದ್ದಾರೆ (ಯುನಿಸೆಫ್, 2020). ಇವುಗಳೆಲ್ಲವನ್ನು ಸರಿದೂಗಿಸಲು, ಭವಿಷ್ಯದ ಶಿಕ್ಷಕರನ್ನು ತಯಾರು ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರವು ಎದುರಿಸುವ ಕ್ಲಿಷ್ಟ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾದುದು ಆದ್ಯ ಕರ್ತವ್ಯವಾಗಿದೆ. ಭವಿಷ್ಯದ ವಿದ್ಯಾರ್ಥಿಗಳನ್ನು, ಶಿಕ್ಷಕರನ್ನು ಗಮನದಲ್ಲಿಟ್ಟು ಕೊಂಡು ಅವರಿಗೆ ಜ್ಞಾನದ ಜೊತೆ ಜೊತೆಗೆ ನೀಡಬೇಕಾದ ಹಲವಾರು ರೀತಿಯ ಸಾಮರ್ಥ್ಯಗಳು, ಕೌಶಲಗಳನ್ನು ತಲುಪಿಸುವ ಕೆಲಸವಾಗಬೇಕಿದೆ.

ಇತ್ತೀಚೆಗೆ ಸಮರ್ಥ ಶಿಕ್ಷಕರ ಕೊರತೆ ಎನ್ನುವ ಕೂಗು ಕೇಳಿಬಂದಿದ್ದು, ಇದಕ್ಕೆ ಪ್ರಮುಖ ಕಾರಣ ಡಿ.ಇಡಿ, ಬಿ.ಇಡಿ., ಮತ್ತು ಎಂ.ಇಡಿ., ಶಿಕ್ಷಕರ ತರಬೇತಿ ಕೇಂದ್ರಗಳು ಪರಿಣಾಮಕಾರಿಯಾಗದಿರುವುದು. ಎನ್‌ಸಿಟಿಇ (ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ)ಯು (2006)ರಲ್ಲಿ ಶಿಕ್ಷಕರ ಶಿಕ್ಷಣವನ್ನು ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದ ಹಂತದವರೆಗೂ ಕಲಿಯುವವರಿಗೆ ಕಲಿಸಲು ವ್ಯಕ್ತಿಗಳ ಶಿಕ್ಷಣ, ಸಂಶೋಧನೆ ಮತ್ತು ತರಬೇತಿಯ ಕಾರ್ಯಕ್ರಮ ಎಂದು ವ್ಯಾಖ್ಯಾನಿಸಲಾಗಿದೆ. ಈ ತರಬೇತಿ ಕೇಂದ್ರಗಳಲ್ಲಿ ಮುಂದಿನ ತಲೆಮಾರಿಗೆ ಅವಶ್ಯಕವಾಗಿರುವ ಸಮರ್ಪಕವಾದ ಶಿಕ್ಷಕರ ಸಾಮರ್ಥ್ಯಗಳನ್ನು ಬೆಳೆಸುವಲ್ಲಿ, ಪರಿಣಾಮಕಾರಿ ಯೋಜನೆಯನ್ನು ರೂಪಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಹಾಗು ಸರ್ಕಾರಗಳು ಎಡವುತ್ತಿವೆ. ಇದನ್ನು ತೊಡೆದು ಹಾಕಲು ಡಿ.ಇಡಿ, ಬಿ.ಇಡಿ., ಮತ್ತು ಎಂ.ಇಡಿ., ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಅವಶ್ಯಕತೆ ಹೆಚ್ಚಿದೆ.ಕೊಠಾರಿ ಆಯೋಗದ (1964–66) ಪ್ರಕಾರ ಶಿಕ್ಷಕರ ವೃತ್ತಿಪರ ಸಿದ್ಧತೆ ಶಿಕ್ಷಣದ ಗುಣಾತ್ಮಕ ಸುಧಾರಣೆಗೆ ನಿರ್ಣಾಯಕ ಎಂದು ಗುರುತಿಸಿದೆ. ಆದುದರಿಂದ, ಈಗಿನ ಶಿಕ್ಷಕರ ಶಿಕ್ಷಣದ ತರಬೇತಿ ಸಂಸ್ಥೆಗಳಲ್ಲಿ ಜ್ಞಾನಕ್ಕೆ ಹೆಚ್ಚು ಒತ್ತು ನೀಡುವುದರ ಮೂಲಕ, ಬರೀ ಅಂಕಗಳಿಕೆಗೆ ಎಡೆಮಾಡಿಕೊಟ್ಟಂತಾಗಿದೆ. ಪ್ರಾಯೋಗಿಕ ತರಗತಿಗಳಲ್ಲಿಯೂ ಕೂಡ ಶಿಕ್ಷಣ ಸಿದ್ಧಾಂತಗಳಿಗೆ ಜಾಸ್ತಿ ಮಹತ್ವ ಕೊಟ್ಟು ತರಗತಿಯ ವಾಸ್ತವಗಳಿಗೆ ಮಹತ್ವ ಕೊಡದೇ ಇರುವುದು, ಶಿಕ್ಷಕ ವಿದ್ಯಾರ್ಥಿಗಳು ಒತ್ತಡದಲ್ಲಿ ಪಾಠ ಬೋಧನೆಯನ್ನು ಮಾಡಿ ಮುಗಿಸುವುದು ರೂಢಿಯಲ್ಲಿದೆ. ಅಧ್ಯಾಪಕರಲ್ಲಿಯೂ ಕೂಡ ಪರಿಣಾಮಕಾರಿಯಾದ ಬೋಧನಾ ಕೌಶಲಗಳನ್ನು ರೂಢಿಸುವ, ಉತ್ತಮವಾಗಿ ಸಲಹೆ ನೀಡುವ ಅಂಶಗಳನ್ನು ಬೆಳೆಸುವ ಅವಶ್ಯಕತೆಯಿದೆ ಹಾಗೂ ಪ್ರಶಿಕ್ಷಣಾರ್ಥಿಗಳಲ್ಲಿ ಜೀವನ ಕೌಶಲ, ಮೌಲ್ಯ ಪ್ರಜ್ಞೆ, ಸಮಾಜವನ್ನು ಅರ್ಥೈಸಿಕೊಳ್ಳುವ, ಸಮಾಜದೊಂದಿಗೆ ಬೆರೆಯುವ ಕೌಶಲಗಳನ್ನು ಕಲಿಸುವ ನಿಟ್ಟಿನಲ್ಲಿ ಹೆಜ್ಜೆಯನ್ನಿಡಬೇಕಿದೆ.

ಈ ಕೌಶಲಗಳನ್ನು ಕಲಿಯುವ ಮತ್ತು ಕಲಿಸುವ ಮಾರ್ಗವೆಂದರೆ ಶಿಕ್ಷಕ ತರಬೇತಿ ಕೋರ್ಸ್‌ಗಳು. ಈ ಕೋರ್ಸಿನಲ್ಲಿ ಪ್ರಮುಖವಾಗಿ ಶಿಕ್ಷಕರಿಗೆ ಅವಶ್ಯಕವಾದ ವಿವಿಧ ರೀತಿಯ ಜ್ಞಾನ ಮತ್ತು ಕೌಶಲಗಳನ್ನು, ಅಭ್ಯಾಸಿಸುವುದರ ಮತ್ತು ಕರಗತಗೊಳಿಸುವುದರ ಮೂಲಕ ಸಾಮರ್ಥ್ಯಗಳನ್ನು ಗಳಿಸಿಕೊಳ್ಳಲು ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಹಾಗಾಗಿ 21ನೇ ಶತಮಾನದ ಸಾಮರ್ಥ್ಯಗಳನ್ನು ಬೆಳೆಸುವುದು ತುಂಬಾ ಅತ್ಯವಶ್ಯಕ. ಒಬ್ಬ ಶಿಕ್ಷಕರ ಶಿಕ್ಷಕ ಎಂದರೆ ಇತರರು ಪರಿಣಾಮಕಾರಿ ಶಿಕ್ಷಕರಾಗಲು ಅಗತ್ಯವಿರುವ ಜ್ಞಾನ, ಸಾಮರ್ಥ್ಯಗಳು ಮತ್ತು ವರ್ತನೆಗಳನ್ನು ಪಡೆಯಲು ಸಹಾಯ ಮಾಡುವ ವ್ಯಕ್ತಿ (ಜಗನ್ನಾಥ ಕೆ. ಡಾಂಗೆ ಮತ್ತು ಸಿದ್ದರಾಜು 2020).

ಶಿಕ್ಷಕನು ಹೊಂದಿರುವ ಕೌಶಲ, ಅನುಭವ ಮತ್ತು ವರ್ತನೆಗಳ ಮೂಲಕ ಬೋಧನಾ ಕಲಿಕೆಯ ವಾತಾವರಣವನ್ನು ಪರಿಣಾಮ

ಕಾರಿಯಾಗಿಸುವ, ಉತ್ತಮ ಫಲಿತಾಂಶದ ಉತ್ಪಾದಕದೊಂದಿಗೆ ತನ್ನ ಮತ್ತು ವಿದ್ಯಾರ್ಥಿಗಳ ಸಂಪೂರ್ಣ ಸಾಮರ್ಥ್ಯವನ್ನು ಅರಿಯುವುದರ ಜೊತೆಗೆ ಶಿಕ್ಷಣದ ಗುರಿಗಳನ್ನು ಸಾಧಿಸಲು ಸಹಾಯಕವಾಗುವ ಅಂಶಗಳೇ ಶಿಕ್ಷಕನ ಸಾಮರ್ಥ್ಯಗಳು. (ಕ್ಲೂಟರ್‌ಬಕ್, 2001) ರವರು "ಸಾಮರ್ಥ್ಯದ ಮಹತ್ವವನ್ನು ಈ ರೀತಿಯಾಗಿ ವಿವರಿಸಿದ್ದಾರೆ, ಅಭಿವೃದ್ಧಿ ಹೊಂದಿದ ಸಂಭಾವ್ಯ ಕೌಶಲಗಳೊಂದಿಗೆ ಸಂರಕ್ಷಿತ ಸಂಬಂಧವಾಗಿದ್ದು ಇದು ಕಲಿಕೆಯ ಸಮಯದಲ್ಲಿ ಸಾಮರ್ಥ್ಯಗಳನ್ನು ಪಡೆಯುವ ಫಲಿತಾಂಶಕ್ಕೆ ಕಾರಣವಾಗುತ್ತದೆ".

ಶಿಕ್ಷಕರು ನಿರ್ದಿಷ್ಟ ಸಂದರ್ಭದಲ್ಲಿ ನಿರ್ದಿಷ್ಟ ಕಾರ್ಯವನ್ನು ಉನ್ನತಮಟ್ಟದ ಶ್ರೇಷ್ಠತೆಯೊಂದಿಗೆ ಪೂರ್ಣಗೊಳಿಸಲು ಬೇಕಾಗಿರುವ ಜ್ಞಾನ, ಕೌಶಲ, ವರ್ತನೆ ಮತ್ತು ಅನುಭವಗಳನ್ನೊಳಗೊಂಡ ಗುಚ್ಛವೇ ಶಿಕ್ಷಕರ ಸಾಮರ್ಥ್ಯ. (ಪ್ರತಿಭಾ, 2016)ರವರ ಪ್ರಕಾರ 'ಶಿಕ್ಷಕರ ಸಾಮರ್ಥ್ಯ' ಎಂಬ ಪದವು ಎಲ್ಲಾ ಗಮನಿಸಬಹುದಾದ ಶಿಕ್ಷಕರ ನಡವಳಿಕೆಯ ಪರಿಣಾಮಕಾರಿ ಪ್ರದರ್ಶನಗಳನ್ನು ಅರ್ಥೈಸುತ್ತದೆ ಹಾಗೂ ಕಲಿಯುವವರ ಮಹತ್ವಕಾಂಕ್ಷೆಯ ಫಲಿತಾಂಶಗಳನ್ನು ಹೊರತರುತ್ತದೆ.ಶಿಕ್ಷಕರ ಸಾಮರ್ಥ್ಯವೆಂದರೆ ಜ್ಞಾನ, ಕೌಶಲಗಳು, ವರ್ತನೆ ಮತ್ತು ಅನುಭವವನ್ನು ಒಳಗೊಂಡಿರುವ ಶ್ರೇಷ್ಠತೆಯ ಸಾಮರ್ಥ್ಯವನ್ನು ಸಹ ಸೂಚಿಸುತ್ತದೆ (ಸಾಲ್ವಿಕ್, 2008).

ಭವಿಷ್ಯದ ದೃಷ್ಟಿಯಿಂದ ಮತ್ತು ಮುಂದಿನ ತಲೆಮಾರಿನ ಸವಾಲನ್ನು ಎದುರಿಸಲು ವಿಶ್ವದಾದ್ಯಂತ ಅನೇಕ ಶಿಕ್ಷಕರಿಗೆ, ಶಿಕ್ಷಕರ-ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಆಯೋಗಗಳು, ಸಮಿತಿಗಳು ಪ್ರಮುಖವಾಗಿ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ (ಒಇಸಿಡಿ)-ಅಂತರರಾಷ್ಟ್ರೀಯ ಸಮಿತಿ, ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗೆ ಸಹಕರಿಸುವ-ಯುರೋಪಿಯನ್ ಆಯೋಗ, ಶಿಕ್ಷಕರ ಸಾಮರ್ಥ್ಯ ಚೌಕಟ್ಟು-ಆಗ್ನೇಯ ಏಷ್ಯಾ ಯುನೆಸ್ಕೋ ಬ್ಯಾಂಕಾಕ್ ಮತ್ತು ಸಿಮಿಯೋ-2018, ಒಂಟಾರಿಯೋ ದೇಶ ರೂಪಿಸಿದ 21ನೇ ಶತಮಾನದ ಶಿಕ್ಷಕರ ಸಾಮರ್ಥ್ಯಗಳು, ಭಾರತದ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು (ಎನ್‌ಸಿಟಿಇ) ಗುರುತಿಸಿದ ಶಿಕ್ಷಕರ ಸಾಮರ್ಥ್ಯಗಳು ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳು, ಶಿಕ್ಷಕರಿಗೆ ಅವಶ್ಯಕವಾದ ಸಾಮರ್ಥ್ಯಗಳನ್ನು ಗುರುತಿಸಿದ್ದಾರೆ. ಕಾಲ ಬದಲಾಗುತ್ತಾ ಹೋದಂತೆ ಶಿಕ್ಷಕರ ಜವಾಬ್ದಾರಿಗಳು, ಸಾಮರ್ಥ್ಯಗಳು ಸ್ವಲ್ಪಮಟ್ಟಿಗಾದರೂ ಬದಲಾಗುತ್ತಾ ಹೋಗುತ್ತದೆ. ಆ ನಿಟ್ಟಿನಲ್ಲಿ ಆಲೋಚಿಸುವಾಗ 21ನೇ ಶತಮಾನದ ಶಿಕ್ಷಕರುಗಳು ಪ್ರಮುಖವಾಗಿ ಹೊಂದಬೇಕಾದ ಅತ್ಯವಶ್ಯಕವಾದ ಸಾಮರ್ಥ್ಯಗಳನ್ನು ಪಟ್ಟಿಮಾಡಲಾಗಿದೆ. ಅವುಗಳೆಂದರೆ -

**1. ಪಠ್ಯ ವಿಷಯದ ಸಾಮರ್ಥ್ಯಗಳು** : ಪಠ್ಯ ವಿಷಯದ ಬಗ್ಗೆ ಆಳವಾದ ಜ್ಞಾನ, ವಿಷಯಕ್ಕೆ ಸಂಬಂಧಿಸಿದ ನವೀಕರಿಸಿದ ಜ್ಞಾನ ಮತ್ತು ವಿಷಯದ ಬಗ್ಗೆ ಸಂಪೂರ್ಣ ಪ್ರಾವೀಣ್ಯತೆಯನ್ನು ಹೊಂದಿರುವ ಸಾಮರ್ಥ್ಯವಾಗಿದೆ. ಪಠ್ಯ ವಿಷಯಗಳ ಅಂತರ್ ಜೋಡಣೆ, ಪರಿಕಲ್ಪನೆಗಳಿಗೆ ಹೊಸ ಅನುಭವಗಳನ್ನು ಸಂಬಂಧ ಕಲ್ಪಿಸುವ ಸಾಮರ್ಥ್ಯ, ಪ್ರಚಲಿತ ಘಟನೆಗಳಿಗೆ ಸಂಬಂಧ ಕಲ್ಪಿಸುವಿಕೆ, ಈಗ ಕಲಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಮುಂದುವರಿದ/ಸುಧಾರಿತ ಮಾಹಿತಿಯನ್ನು ಸಂಪರ್ಕಿಸುವ ಸಾಮರ್ಥ್ಯ, ಹೊಸ ಜ್ಞಾನವನ್ನು ವಿವಿಧ ಸನ್ನಿವೇಶಗಳಿಗೆ ಅನ್ವಯಿಸಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುವ ಸಾಮರ್ಥ್ಯ ಚಟುವಟಿಕೆ ಆಧಾರಿತ ಕಲಿಕೆಯನ್ನು ಸಂಘಟಿಸುವ ಸಾಮರ್ಥ್ಯ ಮತ್ತು ಪಾಠದ ಬಗ್ಗೆ ವಿದ್ಯಾರ್ಥಿಗಳಿಗಿರುವ ಸಂದೇಹವನ್ನು ಸ್ಥಳದಲ್ಲೇ ಸ್ಪಷ್ಟಪಡಿಸುವ ಸಾಮರ್ಥ್ಯವನ್ನು ಒಳಗೊಂಡಿದೆ.

**2. ಪಠ್ಯ ವಿಷಯವನ್ನು ವರ್ಗಾಂತರಿಸುವ ಸಾಮರ್ಥ್ಯಗಳು** : ತರಗತಿಯಲ್ಲಿ ಶಿಕ್ಷಕರು ಬೋಧನಾ ಪ್ರಕ್ರಿಯೆಯಲ್ಲಿ ವಿಭಿನ್ನ ವಿಧಾನಗಳು, ಚಟುವಟಿಕೆಗಳ ಮೂಲಕ ಕಲಿಸಬೇಕಾದ ವಿಷಯವನ್ನು ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಅರ್ಥ ಮಾಡಿಕೊಳ್ಳುವಂತೆ, ಸುಲಲಿತವಾಗಿ ಸಂವಾದದ ಮೂಲಕ ಮತ್ತು ಶೈಕ್ಷಣಿಕ ಗುರಿ-ಉದ್ದೇಶಗಳನ್ನು ಈಡೇರಿಸಲು ದಿನನಿತ್ಯದ ಬೋಧನಾ ಕೌಶಲಗಳನ್ನು ರೂಪಿಸುವ ಸಾಮರ್ಥ್ಯ.ತಾಂತ್ರಿಕವಾಗಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳುವ ಸಾಮರ್ಥ್ಯ, ಪರಿಚಯವಿಲ್ಲದ ಪದಗಳು, ಪರಿಕಲ್ಪನೆಗಳು, ಸಂಗತಿಗಳು, ತತ್ವಗಳನ್ನು ವ್ಯಾಖ್ಯಾನಿಸುವ ಸಾಮರ್ಥ್ಯ. ವಿಷಯವನ್ನು ಸ್ಪಷ್ಟವಾಗಿ, ನಿರಂತರತೆಯಿಂದ ಪ್ರಸ್ತುತಪಡಿಸುವ ಸಾಮರ್ಥ್ಯ, ವಿದ್ಯಾರ್ಥಿಗಳ ಉನ್ನತ ಮಟ್ಟದ ಆಲೋಚನಾ ಕೌಶಲವನ್ನು ಉತ್ತೇಜಿಸುವ ಸಾಮರ್ಥ್ಯ ಮತ್ತು ಪರಿಕಲ್ಪನೆಗಳ ತಾರ್ಕಿಕ ಅನುಕ್ರಮ ರೀತಿಯಲ್ಲಿ ನಿರ್ವಹಿಸುವ ಸಾಮರ್ಥ್ಯವನ್ನು ಒಳಗೊಂಡಿದೆ. ಪಠ್ಯವನ್ನು ವರ್ಗಾಯಿಸುವಿಕೆಯು ಕಲಿಯುವವರಿಗೆ ಕಲಿಕೆಯ ಅನುಭವಗಳನ್ನು ಒದಗಿಸಲು ಪರಿಣಾಮಕಾರಿ ಯೋಜನೆಯನ್ನು ರೂಪಿಸುತ್ತದೆ, ಯೋಜನಾ ಸಂಘಟನೆ, ಸಂಘಟಿತ ಯೋಜನೆಯ ಆಡಳಿತ ಅನುಷ್ಠಾನ ಮತ್ತು ಅನುಷ್ಠಾನಗಳ ಮೌಲ್ಯಮಾಪನ (ವಿದ್ಯಾನಂದ್ ಖಂಡಗಲೆ, 2016).

**3. ಸಾಮಾಜಿಕ ಮತ್ತು ಸಂಸ್ಕೃತಿಯ ಸಾಮರ್ಥ್ಯಗಳು** : ಪಠ್ಯದಲ್ಲಿರುವ ಸಾಮಾಜಿಕ ಮತ್ತು ಸಂಸ್ಕೃತಿಯ ಅಂಶಗಳನ್ನು ಗುರುತಿಸಿ, ಸೂಕ್ಷ್ಮತೆಯನ್ನು ಗುರುತಿಸುವ ಮತ್ತು ಅರಿಯುವ ಸಾಮರ್ಥ್ಯ. ಸಮಾಜದಲ್ಲಿ ಆಗುಹೋಗುವ ಚಟುವಟಿಕೆಗಳ ಅನುಸಾರವಾಗಿ ಸಮಾಜದಲ್ಲಿ ಭಾಗವಹಿಸುವ ಸಾಮರ್ಥ್ಯ. ಸಮಾಜದ ನಡೆಯನ್ನು ಅರಿತು, ಸರಿ ತಪ್ಪುಗಳನ್ನು ಗುರುತಿಸಿ, ತನ್ನ ಸಂಸ್ಕೃತಿಯ ಜೊತೆಗೆ ಇತರರ ಸಂಸ್ಕೃತಿಯನ್ನು ಗೌರವಿಸಿ ಪೋಷಿಸುವುದನ್ನು ಕಲಿಯುವ ಮತ್ತು ಕಲಿಸುವ ಸಾಮರ್ಥ್ಯವನ್ನು ಹೊಂದಿರುವುದಾಗಿದೆ.

**4. ಮಾಹಿತಿ ಮತ್ತು ಸಂವಹನ ಸಾಮರ್ಥ್ಯಗಳು** : ಶಾಲಾವಾತಾವರಣ ಮತ್ತು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಬಳಕೆಯ ಮೂಲಕ ಪರಿಣಾಮಕಾರಿಯಾಗಿ ಉತ್ತಮ ವಿಚಾರಗಳನ್ನು ಪ್ರಸ್ತುತಪಡಿಸುವ ಮತ್ತು ದಾಖಲೆಗಳನ್ನು ಉಳಿಸುವುದಕ್ಕೆ, ವರ್ಗಾಂತರಿಸಲು, ಸುಲಭವಾಗಿ ಪಡೆಯಲು, ಇನ್ನಿತರ ಅನ್ವಯಗಳನ್ನು ಪಡೆಯಲು (ಐಸಿಟಿ)ಯನ್ನು ಬಳಸುವ ಸಾಮರ್ಥ್ಯವನ್ನು ಮೈಗೂಡಿಸಿಕೊಳ್ಳುವುದಾಗಿದೆ. ನಾವೀಣ್ಯತೆಯನ್ನು ಅಳವಡಿಸಿಕೊಳ್ಳುವ ನಿರ್ಧಾರದ ಮೇಲೆ ಪ್ರಭಾವ ಬೀರುವ ಐದು ತಾಂತ್ರಿಕ ಗುಣಲಕ್ಷಣಗಳು (ಸಾಮರ್ಥ್ಯಗಳನ್ನು) ಗುರುತಿಸಿದ್ದಾರೆ (ರೋಜರ್ಸ್ 2003).ಯಂತ್ರಾಂಶ ಮತ್ತು ತಂತ್ರಾಂಶಗಳ ನಿರ್ವಹಣೆ, ಇ-ವಿಷಯಸೂಚಿ ವಿನ್ಯಾಸ, ಅಭಿವೃದ್ಧಿ, ವಹಿವಾಟಿನ ಸಾಮರ್ಥ್ಯ, ದತ್ತಾಂಶವನ್ನು ಒಂದು ನಮೂನೆಯಿಂದ ಇನ್ನೊಂದು ನಮೂನೆಗೆ ಪರಿವರ್ತಿಸುವ ಸಾಮರ್ಥ್ಯ, ಆನ್‌ಲೈನ್ ಬೋಧನಾ ಆ್ಯಪ್‌ಗಳ ಬಳಸುವ ಸಾಮರ್ಥ್ಯ ಮುಂತಾದವುಗಳನ್ನು ಒಳಗೊಂಡಿದೆ. ಬೋಧನೆಗೆ ಐಸಿಟಿಯ ಶಿಕ್ಷಕರ ಏಕೀಕರಣವು ಸಾಂಸ್ಥಿಕ ಅಂಶಗಳು, ತಂತ್ರಜ್ಞಾನದ ಬಗೆಗಿನ ವರ್ತನೆಗಳು ಮತ್ತು ಇತರ ಅಂಶಗಳಿಂದ ಪ್ರಭಾವಿತವಾಗಿರುತ್ತವೆ (ಚೆನ್ 2008; ಟೊಂಡ್ಯೂರ್, ವ್ಯಾನ್ ಬ್ರಾಕ್ ಮತ್ತು ವಾಲ್ಕೆ 2008; ಲಿಮ್ ಮತ್ತು ಚೈ 2008; ಕ್ಲಾಸೆನ್ 2008).

**5. ಕ್ಷೇತ್ರಾನುಭವದ/ಕ್ಷೇತ್ರಾಧಾರಿತ ಸಾಮರ್ಥ್ಯಗಳು** : ವಿಷಯವನ್ನು ರವಾನಿಸುವಲ್ಲಿ ಶಿಕ್ಷಕರು ಮಾತ್ರ ಜವಾಬ್ದಾರರು ಎಂಬ ಪರಿಕಲ್ಪನೆಯ ಆಧಾರದ ಮೇಲೆ ಕ್ಷೇತ್ರ ಸಾಮರ್ಥ್ಯವನ್ನು ಅತ್ಯಂತ ಪ್ರಮುಖ ಸಾಮರ್ಥ್ಯದ ಕ್ಷೇತ್ರವೆಂದು ಪರಿಗಣಿಸಲಾಗಿತ್ತು (ಕೀಮೆಟ್ ಸೆಲ್ವಿ, 2010). ನೆರೆಹೊರೆಯ ಶಾಲೆಗಳು, ಬ್ಯಾಂಕ್, ಅಂಚೆ ಕಛೇರಿ, ವಸ್ತು ಸಂಗ್ರಹಾಲಯ, ಕಾರ್ಖಾನೆಗಳು, ಸರ್ಕಾರಿ ಸಂಸ್ಥೆಗಳು, ಮತ್ತು ಪೋಲೀಸ್ ಠಾಣೆಗೆ ಭೇಟಿ ನೀಡುವ ಮೂಲಕ ಜ್ಞಾನದ ವಿಸ್ತರಣೆಗೆ ಕಾರಣವಾಗುವ ಸಾಮರ್ಥ್ಯವನ್ನು ಅಳವಡಿಸಿಕೊಳ್ಳುವುದಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**6. ಮೌಲ್ಯಮಾಪನ ಮಾಡುವ ಸಾಮರ್ಥ್ಯಗಳು :** ತರಗತಿಯಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯನ್ನು ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನ ಮಾಡುವ ಸಾಮರ್ಥ್ಯ, ಮೌಲ್ಯಮಾಪನದ ಜೊತೆಗೆ ಅನುಸರಣೆ ಮಾಡುವ ಮೂಲಕ ವಿದ್ಯಾರ್ಥಿಗಳ ಅಭಿವೃದ್ಧಿಗೆ ಕೊಂಡಿಯಾಗಿರುವುದು,ವಿದ್ಯಾರ್ಥಿಯ ಚಲನವಲನಗಳ ಮೇಲೆ ನಿಗಾ ಇಡುವ, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುವ ಅಂಶಗಳನ್ನು ಮತ್ತು ಪಾಠದ ಜೊತೆ ಸಹಪಠ್ಯಗಳಲ್ಲಿರುವ ಸಾಮರ್ಥ್ಯವನ್ನು ಮಾಪನ ಮಾಡುವ ಸಾಮರ್ಥ್ಯವನ್ನು ಹೊಂದಿರುವುದಾಗಿದೆ.

**7. ತರಗತಿಯ ನಿರ್ವಹಣಾ ಸಾಮರ್ಥ್ಯಗಳು :** ತರಗತಿಯ ನಿರ್ವಹಣಾ ಸಾಮರ್ಥ್ಯಗಳೆಂದರೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ವರ್ತನೆಗಳನ್ನು ನಿರ್ವಹಿಸಲು ಬಳಸುವ ನಡವಳಿಕೆಗಳು ಮತ್ತು ವಿಧಾನಗಳ ಗುಂಪನ್ನು ಒಳಗೊಂಡಂತೆ ವಿಶಾಲ ಪದವಾಗಿದೆ (ಎವರ್ಟನ್ಸ್ ಮತು ಇಮ್ಮರ್ 2003). ತರಗತಿಯಲ್ಲಿ ಕಲಿಕೆಗೆ ಅವಶ್ಯಕವಾದ ಉತ್ತಮ ವಾತಾವರಣವನ್ನು ಸೃಷ್ಠಿಸುವ ಸಾಮರ್ಥ್ಯ ಮತ್ತು ವಿದ್ಯಾರ್ಥಿಗಳ ಅನುಚಿತ ವರ್ತನೆಗಳನ್ನು ಮಾರ್ಪಡಿಸಲು ಬೇಕಾಗುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದಾಗಿದೆ. ವಿದ್ಯಾರ್ಥಿಗಳ ಸಂತೋಷದಾಯಕ ಮತ್ತು ಬೌದ್ಧಿಕ ಕುತೂಹಲವನ್ನು ಉತ್ತೇಜಿಸುವುದು. ಸಕಾರಾತ್ಮಕ ನಡವಳಿಕೆಗಳಿಗೆ ಮೆಚ್ಚುಗೆ, ಪ್ರಶಂಸಿಸುವುದು. ವಿದ್ಯಾರ್ಥಿಗಳ ಗಮನವನ್ನು ಪಾಠದ ಕಡೆಗೆ ಸೆಳೆಯುವ ಸಾಮರ್ಥ್ಯ, ಸ್ಪಷ್ಟ ನಿರ್ದೇಶನ/ಸೂಚನೆಗಳನ್ನು ನೀಡುವುದು. ತರಗತಿಯ ನಡವಳಿಕೆಯನ್ನು ರೂಪಿಸುವುದು. ಬೋಧನಾ–ಕಲಿಕಾ ಪ್ರಕ್ರಿಯೆಯ ಸಮಯವನ್ನು ಪರಿಣಾಮಕಾರಿಯಾಗಿ ಬಳಸುವುದು. ಸ್ನೇಹಪರತೆ ಮತ್ತು ಸ್ಥಾನವನ್ನು ಸಮತೋಲನಗೊಳಿಸುವ ಮೂಲಕ ವಿದ್ಯಾರ್ಥಿಗಳನ್ನು ಸಮಾನವಾಗಿ ಮತ್ತು ಗೌರವಯುತವಾಗಿ ನಡೆಸಿಕೊಳ್ಳುವುದು. ಕಡ್ಡಾಯವಾಗಿ ಪ್ರತಿದಿನ ಹಾಜರಾತಿ ಪುಸ್ತಕವನ್ನು ನಿರ್ವಹಿಸುವುದು ಮತ್ತು ವಿದ್ಯಾರ್ಥಿಗಳನ್ನು ಅವರ ಹೆಸರಿನಿಂದ ಗುರುತಿಸುವ ಸಾಮರ್ಥ್ಯವನ್ನು ಒಳಗೊಂಡಿದೆ.

**8. ವೈಯಕ್ತಿಕ ಸಾಮರ್ಥ್ಯಗಳು :** ಒಬ್ಬ ಶಿಕ್ಷಕ ತನ್ನ ಶಾಲೆ/ಸಂಸ್ಥೆಯಲ್ಲಿ ಇತರರಿಗೆ ಮಾದರಿಯಾಗಬಹುದಾದ ಶ್ರೇಷ್ಠಮಟ್ಟದ ಗುಣಲಕ್ಷಣಗಳು, ಮತ್ತು ವರ್ತನೆಗಳನ್ನು ಮೈಗೂಡಿಸಿಕೊಳ್ಳುವ ಸಾಮರ್ಥ್ಯವಾಗಿದೆ. ತಾರ್ಕಿಕವಾಗಿ, ವಿಮರ್ಶಾತ್ಮಕವಾಗಿ ಯೋಚಿಸುವುದು, ಊಹಿಸುವುದು. ಸಮಸ್ಯೆಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುವುದು, ಇತರರೊಂದಿಗೆ ಸಹಾನಭೂತಿಯಿಂದ ನಡೆದುಕೊಳ್ಳುವುದು. ತಾಳ್ಮೆ, ಸಹಿಷ್ಣುತಾ ಮನೋಭಾವ, ಹಂಚಿಕೊಳ್ಳುವ ಮನಸ್ಥಿತಿ, ಇತರರನ್ನು ಕ್ಷಮಿಸುವ, ಯಾವಾಗಲೂ ಸಮಯಕ್ಕೆ ಬದ್ಧನಾಗಿರುವುದು. ಸ್ವಯಂ–ಶಿಸ್ತು, ಸೃಜನಾತ್ಮಕವಾಗಿರುವ, ನಾಯಕತ್ವದ ಕೌಶಲಗಳನ್ನು ಪಡೆಯುವ ಸಾಮರ್ಥ್ಯ, ಇತರರಿಗೆ ಧನಾತ್ಮಕ ಆದರ್ಶವಾಗುವ ಹಾಗೂ ಬೆಂಬಲ ನೀಡುವ ಸಾಮರ್ಥ್ಯಗಳನ್ನು ಒಳಗೊಂಡಿದೆ. ವೈಯಕ್ತಿಕ ಸಾಮರ್ಥ್ಯಗಳು ಅಂದರೆ ಶಿಕ್ಷಕರ ಗುಣಲಕ್ಷಣಗಳು, ವರ್ತನೆಗಳು ಮತ್ತು ನಂಬಿಕೆಗಳು ಈ ವ್ಯಕ್ತಿತ್ವವನ್ನು ಒಳಗೊಂಡಿವೆ. (ಆಶಾ ಠಾಕೂರ್ ಮತ್ತು ಮೋನಿಕಾ ಶೇಖಾವತ್, 2014).

**9. ವೃತ್ತಿ ಬೆಳವಣಿಗೆಯ ಸಾಮರ್ಥ್ಯಗಳು :** ವೃತ್ತಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದರ ಮುಖಾಂತರ ಬೆಳವಣಿಗೆ ಹೊಂದುವ, ಜ್ಞಾನದ ದಾಹವನ್ನು ನೀಗಿಸಿಕೊಳ್ಳಲು ಓದುವ, ಬರವಣಿಗೆಯ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ, ಸೂಕ್ತ ರೀತಿಯಲ್ಲಿ ಇತರರಿಗೆ ಮಾರ್ಗದರ್ಶನ ಮತ್ತು ಸಲಹೆ ನೀಡುವುದರೊಂದಿಗೆ, ಇನ್ನಿತರ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವ ಮತ್ತು ಸಮಾಜಕ್ಕೆ ತನ್ನ ವೃತ್ತಿಯಿಂದ ಸಕರಾತ್ಮಕ ಕೊಡುಗೆ ನೀಡುವ ಸಾಮರ್ಥ್ಯವಾಗಿದೆ. ಪುಸ್ತಕಗಳು, ನಿಯತಕಾಲಿಕೆಗಳು, ಲೇಖನಗಳನ್ನು ಪ್ರಕಟಿಸುವುದು. ವಿಶೇಷ ಉಪನ್ಯಾಸಗಳು, ಚರ್ಚೆಗಳು, ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ವಿಚಾರಗೋಷ್ಠಿಗಳು ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸುವುದು. ಆನ್‌ಲೈನ್ ಕೋರ್ಸ್‌ಗಳು, ಸರ್ಟಿಫಿಕೇಟ್ ಕೋರ್ಸ್‌ಗಳು ಮತ್ತು ಅಲ್ಪಾವಧಿ ಕೋರ್ಸ್‌ಗಳಲ್ಲಿ ಭಾಗವಹಿಸುವುದು. ನಿಗದಿಪಡಿಸಿದ ಕಾರ್ಯಗಳ ಗುರಿಯನ್ನು ಸಾಧಿಸಲು ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ವೃತ್ತಿಪರ ಅಭ್ಯಾಸಗಳನ್ನು ಸುಧಾರಿಸಲು ಸಮವಯಸ್ಕರ ಗುಂಪುಗಳೊಂದಿಗೆ ಕೆಲಸ ಮಾಡುವುದು. ಹಾಗೆಯೇ ಸಂಶೋಧನಾ ಯೋಜನೆಗಳೊಂದಿಗೆ ಕೆಲಸ ಮಾಡುವ ಸಾಮರ್ಥ್ಯಗಳನ್ನು ಒಳಗೊಂಡಿದೆ.

**10. ಯೋಜನಾ ಮತ್ತು ಸಂಘಟನೆಯ ಸಾಮರ್ಥ್ಯಗಳು :** ತಮ್ಮ ಶಾಲಾ ಕಾಲೇಜುಗಳಲ್ಲಿ ವೇಳಾಪಟ್ಟಿಯ ಯೋಜನೆ, ವಾರ್ಷಿಕ ಕ್ಯಾಲೆಂಡರ್ ತಯಾರಿ, ಎನ್‌ಎನ್‌ಎಸ್ ಶಿಬಿರ, ಸಮುದಾಯತ್ವ ಶಿಬಿರ (ಪೌರತ್ವ ತರಬೇತಿ ಶಿಬಿರ), ಪ್ರವಾಸಗಳು, ಕ್ಷೇತ್ರ ಭೇಟಿ, ಕ್ಷೇತ್ರ ಪ್ರವಾಸವನ್ನು ಆಯೋಜಿಸುವ, ಸ್ಥಳೀಯ ಶಾಲೆಗಳ ಪರಿಚಯ, ಪೋಷಕ–ಶಿಕ್ಷಕರ ಸಂಘದ ಆಯೋಜನೆ, ರಕ್ತದಾನ ಶಿಬಿರ, ಹಳೆ ವಿದ್ಯಾರ್ಥಿಗಳ ಸಂಘದ ರಚನೆ, ಗಿಡನೆಡುವ ಮತ್ತು ಸಂರಕ್ಷಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದಾಗಿದೆ.

**11. ವಿದ್ಯಾರ್ಥಿಗಳ ವೈಯಕ್ತತೆಯನ್ನು ಗುರುತಿಸುವ ಸಾಮರ್ಥ್ಯಗಳು :** ವಿದ್ಯಾರ್ಥಿಗಳ ಜ್ಞಾನಾತ್ಮಕ, ಬೌದ್ಧಿಕ, ಸಾಮಾಜಿಕ, ಮಾನಸಿಕ, ಆರ್ಥಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಮತ್ತು ವಿದ್ಯಾರ್ಥಿಗಳ ಹಿಂದಿನ ವರ್ಷದ ಸಾಧನೆಯನ್ನು ತಿಳಿದುಕೊಳ್ಳುವುದು, ವಿದ್ಯಾರ್ಥಿಗಳ ಬೆಳವಣಿಗೆಗೆ, ನಿಧಾನಗತಿಯಲ್ಲಿ ಕಲಿಯುವವರ ಕಡೆ ಹೆಚ್ಚಿನ ಗಮನ ಕೊಡುವುದು ಮತ್ತು ಸಹಾನುಭೂತಿಯನ್ನು ತೋರಿಸುವುದು. ವಿದ್ಯಾರ್ಥಿಗಳನ್ನು ಶಾಲೆಯ ಒಳಗೆ ಮತ್ತು ಹೊರಗೆ ಗಮನಿಸುವುದು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗಳ ಸಹಜ ಸಾಮರ್ಥ್ಯವನ್ನು ಅರಿಯುವುದಾಗಿದೆ.

**12. ಮಾರ್ಗದರ್ಶನ ಮತ್ತು ಸಮಲೋಚನಾ ಸಾಮರ್ಥ್ಯಗಳು :** ಮಾರ್ಗದರ್ಶನ ಮತ್ತು ಸಮಾಲೋಚನೆಯ ಶಿಕ್ಷಕರ ಕಾರ್ಯವು ಸಲಹೆ ನೀಡಲು ಮತ್ತು ವಿದ್ಯಾರ್ಥಿಗಳನ್ನು ಶಿಕ್ಷಿಸಲು ಹೆಸರುವಾಸಿಯಾಗಿದೆ, ಆದ್ದರಿಂದ ಅವರು ಉತ್ತಮವಾಗಿ ಬದಲಾಗಬಹುದು ಮತ್ತು ಶಾಲೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಪ್ರಕ್ರಿಯೆಗೆ ಸಹಾಯ ಮಾಡಬಹುದು (ಆರ್ . ಎಸ್. ವಿಜಯ, 2016). ವಿದ್ಯಾರ್ಥಿಗಳ ಸ್ವ–ಅಭಿವೃದ್ದಿಯ ಕಾರ್ಯಕ್ಕೆ ಅನುಗುಣವಾಗಿ, ತರಗತಿಯ ಒಳಗೆ ಮತ್ತು ಹೊರಗೆ ಶಿಕ್ಷಕರು ನೀಡಬೇಕಾದ ಸಲಹೆ, ಸಹಾಯ ಮತ್ತು ಮಾರ್ಗದರ್ಶನದ ಸಾಮರ್ಥ್ಯವನ್ನು ಬೆಳೆಸುವುದಾಗಿದೆ. ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಮತ್ತು ಸಹೋದ್ಯೋಗಿಗಳಿಂದ ಸೂಕ್ತ ಮಾಹಿತಿಯನ್ನು ಪಡೆಯುವುದು. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಎಚ್ಚರದಿಂದ ಆಲಿಸುವುದು. ಸಮಸ್ಯೆ ಪರಿಹರಿಸುವುದನ್ನು ಪೋಷಿಸುವುದು. ವೀಕ್ಷಣೆ, ವರ್ತನೆ, ಭಾವನಾತ್ಮಕತೆ, ಬುದ್ಧಿವಂತಿಕೆ, ಆಸಕ್ತಿ, ಯೋಗ್ಯತೆ, ಹೊಂದಾಣಿಕೆ, ಸಾಧನಾ ಪರೀಕ್ಷೆಗಳು ಮತ್ತು ವ್ಯಕ್ತಿತ್ವದ ಆಧಾರದ ಮೇಲೆ ಮಾರ್ಗದರ್ಶನ ಮತ್ತು ಸಮಾಲೋಚನೆ ನಡೆಸುವುದು. ಹತ್ತಿರದ ಮಾರ್ಗದರ್ಶನ ಮತ್ತು ಸಮಾಲೋಚನಾ ಕೇಂದ್ರಗಳಿಗೆ ಭೇಟಿ ನೀಡುವುದು ಇವುಗಳೆಲ್ಲವನ್ನು ಒಳಗೊಂಡಿದೆ.

**13. ಘನತೆಯನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ವೃತ್ತಿಪರತೆಯ ಶಿಷ್ಟಾಚಾರದ ಸಾಮರ್ಥ್ಯಗಳು :** ವೃತ್ತಿಪರರೊಡನೆ ಪರಸ್ಪರ ಗೌರವದಿಂದ ವರ್ತಿಸುವುದು, ಇತರರ ದೃಷಿಕೋನವನ್ನು ಆಲಿಸುವುದು, ಭಿನ್ನಾಭಿಪ್ರಾಯವನ್ನು ಗುರುತಿಸುವ ಸಾಮರ್ಥ್ಯ, ಆಕ್ರಮಣಕಾರಿ ಭಾಷೆ, ವ್ಯಂಗ್ಯ, ಪ್ರಚೋದಿಸುವ ಮತ್ತು ಚುಚ್ಚು ಮಾತುಗಳನ್ನು ತಪ್ಪಿಸುವ ಸಾಮರ್ಥ್ಯ, ಅಂಗವಿಕಲ ಮತ್ತು ವಿಕಲಚೇತನ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಾಮರ್ಥ್ಯ ಮತ್ತು ಇತರರ ಹಕ್ಕುಗಳನ್ನು ಗೌರವಿಸುವ ಸಾಮರ್ಥ್ಯಗಳ ನ್ನೊಳಗೊಂಡಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**14. ಸರ್ಕಾರದ ಕಾರ್ಯಕ್ರಮ, ಯೋಜನೆ, ನೀತಿನಿಯಮಗಳ ಮತ್ತು ಪ್ರಪಂಚದ ಸವಾಲುಗಳ ಅರಿವಿನ ಸಾಮರ್ಥ್ಯಗಳು :** ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರುಗಳು, ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರದ ಕಾರ್ಯಕ್ರಮ, ಯೋಜನೆ, ನೀತಿಗಳು ಮತ್ತು ಭವಿಷ್ಯದ ಸವಾಲುಗಳನ್ನು ಎದುರಿಸುವ ಸೂಕ್ತ ಸಾಮರ್ಥ್ಯವನ್ನು ಅಳವಡಿಸಿಕೊಳ್ಳುವುದಾಗಿದೆ. ಶಿಕ್ಷಣದ ನೀತಿಗಳು ಮತ್ತು ಕಾಯಿದೆಗಳನ್ನು ತಿಳಿದುಕೊಳ್ಳುವ ನವೀಕರಿಸಿದುದನ್ನು ಅರಿಯುವುದು. ನಿರುದ್ಯೋಗ, ಆಹಾರ ಮತ್ತು ನೀರಿನ ಭದ್ರತೆ, ಭ್ರಷ್ಟಾಚಾರ, ಬಡತನ, ಆರೋಗ್ಯ, ಪರಿಸರ ಮತ್ತು ಜಾಗತೀಕ ಸಮಸ್ಯೆಗಳ ಅರಿಯುವುದು. ಸ್ಥಳೀಯ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಜೀವನದ ಎಲ್ಲಾ ಅಂಶಗಳನ್ನು ನೀತಿನಿಯುಮಗಳು ಮತ್ತು ಕಾರ್ಯಕ್ರಮಗಳನ್ನು ತಿಳಿದುಕೊಳ್ಳುವುದು. ಇತ್ತೀಚಿನ ಜಾಗತೀಕ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವುದು ಮುಂತಾದವುಗಳನ್ನು ಒಳಗೊಂಡಿದೆ.

**15.ಆಡಳಿತಾತ್ಮಕ ಹೊಣೆಗಾರಿಕೆಯ ಸಾಮರ್ಥ್ಯಗಳು :** ಸಕಾಲದಲ್ಲಿ ಉನ್ನತ ಅಧಿಕಾರಿಗಳಿಗೆ ಸರಿಯಾದ ಮಾಹಿತಿಯನ್ನು ಒದಗಿಸುವುದು. ವಿದ್ಯಾರ್ಥಿಗಳಿಗೆ ದೊರಕುವ ಎಲ್ಲಾ ಅಗತ್ಯ ಸೌಲಭ್ಯಗಳ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವ ಸಾಮರ್ಥ್ಯ. ಬೋಧನೆ, ಕಲಿಕೆ, ಮೇಲ್ವಿಚಾರಣೆ ಮತ್ತು ಉಸ್ತುವಾರಿಯಲ್ಲಿ ಆರೋಗ್ಯಕರ ವಾತಾವರಣವನ್ನು ರೂಢಿಸಿಕೊಳ್ಳುವುದು/ಖಚಿತಪಡಿಸಿಕೊಳ್ಳುವುದು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ಧಾರ್ಮಿಕ ಸ್ವಾತಂತ್ರ್ಯವನ್ನು ಗೌರವಿಸುವುದನ್ನು ಒಳಗೊಂಡಿದೆ.

ಪ್ರಶಿಕ್ಷಣಾರ್ಥಿಗಳಿಗೆ ತರಬೇತಿಯ ಭಾಗವಾಗಿ ಕಡ್ಡಾಯವಾಗಿ ಈ ಮೇಲಿನ ಸಾಮರ್ಥ್ಯಗಳನ್ನು ಬೆಳೆಸಿದಾಗ ಮಾತ್ರ ಅವರನ್ನು ಅತ್ಯುತ್ತಮ ಶಿಕ್ಷಕರನ್ನಾಗಿ ರೂಪಿಸಬಹುದು. ಒಬ್ಬ ಪರಿಪೂರ್ಣ ಶಿಕ್ಷಕನಾಗಬೇಕಾದರೆ ಈ ಮೇಲಿನ ಎಲ್ಲಾ ಅಂಶಗಳು ಅತ್ಯವಶ್ಯಕ. ಆದುದರಿಂದ ಸರ್ಕಾರ ಮತ್ತು ಪ್ರತಿಯೊಂದು ಶಾಲೆಗಳು ಶಿಕ್ಷಕರನ್ನು ನೇಮಕಮಾಡಿಕೊಳ್ಳುವಾಗ ಮೇಲೆ ಸೂಚಿಸಿದ ಸಾಮರ್ಥ್ಯಗಳನ್ನು ಕಡ್ಡಾಯವಾಗಿ ಪರೀಕ್ಷಿಸುವುದರ ಮೂಲಕ ಆಯ್ಕೆ ಮಾಡಿಕೊಂಡಾಗ ಮಾತ್ರ ಗುಣಮಟ್ಟದ ಶಿಕ್ಷಣಕ್ಕೆ ಬೆನ್ನೆಲುಬಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಶಾಲಾ ಒಳಗಿನ ಮತ್ತು ಹೊರಗಿನ ವಾತಾವರಣದಲ್ಲಿ ವಿದ್ಯಾರ್ಥಿಗಳ ಯಶಸ್ಸನ್ನು, ಸಾಧನೆಯನ್ನು ಶ್ರೇಷ್ಠಮಟ್ಟದಲ್ಲಿ ಉನ್ನತೀಕರಿಸುವ ಅವಶ್ಯಕತೆಯನ್ನು ಮನಗಂಡು, ಒಬ್ಬ ನೈಜ ಶಿಕ್ಷಕ ತನ್ನ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವುದರ ಮೂಲಕ ಇಚ್ಛಾಶಕ್ತಿಯೊಂದಿಗೆ, ವೃತ್ತಿಯಲ್ಲಿ ಅಗಾಧವಾಗಿ ಬೆಳೆಯುವ ನಿಟ್ಟಿನಲ್ಲಿ, ಧೃಡ ಸಂಕಲ್ಪದೊಂದಿಗೆ ಹೆಜ್ಜೆಯನ್ನಿಡಬೇಕಾದ ಸುಸಂದರ್ಭ ಒದಗಿಬಂದಿದೆ ಎಂಬ ಮನೋಭಾವನೆಯೊಂದಿಗೆ ಸಮಾಜದ ಏಳಿಗೆಗೆ ದುಡಿಯಬೇಕಿದೆ.ಈ ಮೇಲಿನ ಸಾಮರ್ಥ್ಯಗಳನ್ನು ಭವಿಷ್ಯದ ಶಿಕ್ಷಕರಲ್ಲಿ ಬೆಳೆಸುವ ಮೂಲಕ 21ನೇ ಶತಮಾನದ ನಾಗರೀಕರನ್ನು ಆದರ್ಶ ಮತ್ತು ಉತ್ತಮ ನಾಗರೀಕನನ್ನಾಗಿ ರೂಪಿಸಲು ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಶ್ರಮಿಸಬೇಕಿದೆ.

## ಪರಾಮರ್ಶನ ಗ್ರಂಥಗಳು


- **ಆರ್. ಎಸ್. ವಿಜಯ. (2016) :** ವೃತ್ತಿಪರ ಸಾಮರ್ಥ್ಯದ ಮಟ್ಟಗಳು: ಶಿಕ್ಷಕರ ಮಾರ್ಗದರ್ಶನ ಮತ್ತು ಸಲಹೆ/ಸಮಾಲೋಚಕ ಶಾಲೆ. ಐಎಪಿ ಕಾನ್ಫರೆನ್ಸ್ ಪಬ್ಲಿಷಿಂಗ್.
- **ಆಶಾ ಠಾಕೂರ್ ಮತ್ತು ಮೋನಿಕಾ ಶೇಖಾವತ್ (2014) :** ಶಿಕ್ಷಕರ ಸಾಮರ್ಥ್ಯಗಳ ವಿವಿಧ ಘಟಕಗಳ ಅಧ್ಯಯನ ಮತ್ತು ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಮೇಲೆ ಅವುಗಳ ಪರಿಣಾಮಕಾರಿತ್ವ (ವಿದ್ಯಾರ್ಥಿಗಳ ಪ್ರಕಾರ). ಇಂಟರ್ ನ್ಯಾಷನಲ್ ಜರ್ನಲ್ ಆಫ್ ಇಂಜಿನಿಯರಿಂಗ್ ರೀಸರ್ಚ್ ಅಂಡ್ ಟೆಕ್ನಾಲಜಿ, 3(7), ಪುಟ ಸಂಖ್ಯೆ 1426–1428.
- **ಎನ್‌ಸಿಟಿಇ. ಎರಡು ವರ್ಷದ ಬಿ,ಇಡಿ ಪಠ್ಯಕ್ರಮ.** ನವದೆಹಲಿ.
- **ಎವರ್ಟನ್ಸ್ ಮತು ಇಮ್ಮರ್. (2003) :** ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಗತಿಯ ನಿರ್ವಹಣೆ. ನೊಬೆಲ್ ಅಕಾಡೆಮಿಕ್ ಪಬ್ಲಿಷಿಂಗ್.
- **ಓಇಸಿಡಿ (2012) :** 21ನೇ ಶತಮಾನದ ಶಿಕ್ಷಕರ ರೂಪಿಸುವಿಕೆ ಮತ್ತು ಶಾಲಾ ನಾಯಕತ್ವ ಅಭಿವೃದ್ಧಿ. ವೆಬ್‌ಸೈಟ್ ಲಿಂಕ್
- **ಕೀಮೆಟ್ ಸೆಲ್ವಿ. (2010) :** ಶಿಕ್ಷಕರ ಸಾಮರ್ಥ್ಯಗಳು. ಕಲ್ಚರಾ ಇಂಟರ್ ನ್ಯಾಷನಲ್ ಜರ್ನಲ್ ಆಫ್ ಫಿಲಾಸಫಿ ಆಫ್ ಕಲ್ಚರ್ ಅಂಡ್ ಆಕ್ಸಿಯಾಲಜಿ 7(1), ಪುಟ ಸಂಖ್ಯೆ 167–175.
- **ಕ್ಲೂಟರ್‌ಬಕ್ ಡಿ. (2001) :** ಪ್ರತಿಯೊಬ್ಬರಿಗೂ ಮಾರ್ಗದರ್ಶನದ ಅಗತ್ಯವಿದೆ: ಕೆಲಸದಲ್ಲಿ ಪ್ರತಿಭೆಯನ್ನು ಬೆಳೆಸುವುದು, ಸಿಐಪಿಡಿ, ಲಂಡನ್.
- **ಕ್ಲಾಸೆನ್ ಜೆ. ಎಂ. (2007):** ಶಿಕ್ಷಕರ ತಂತ್ರಜ್ಞಾನದ ಬಳಕೆಯನ್ನು ಪ್ರಾರಂಭಿಸುವುದು : ಮೊದಲ ವರ್ಷದ ಶಿಕ್ಷಕರ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳೊಂದಿಗೆ ಹೊಸ ಶಿಕ್ಷಕರ ಸೂಚನಾ ತಂತ್ರಜ್ಞಾನದ ಬಳಕೆಯ ಮೇಲೆ ಸಾಂಸ್ಥಿಕ ಸಂದರ್ಭದ ಪರಿಣಾಮ.ಜರ್ನಲ್ ಆಫ್ ರೀಸರ್ಚ್ ಆನ್ ಟೆಕ್ನಾಲಜಿ ಇನ್ ಎಜುಕೇಷನ್. 39(3). ಪುಟ ಸಂಖ್ಯೆ 245–261.
- **ಕೊಠಾರಿ ಶಿಕ್ಷಣ ಆಯೋಗ(1964–66)ರ ಡಾಕ್ಯುಮೆಂಟ್.**
- **ನಾಲ್ಕು ವರ್ಷದ ಬಿ,ಇಡಿ ಇಂಟಿಗ್ರೇಟೆಡ್ ಪಠ್ಯಕ್ರಮ,** ಪ್ರಾದೇಶಿಕ ಶಿಕ್ಷಣ ಕೇಂದ್ರ, ಮೈಸೂರು ಮೈಸೂರು ವಿಶ್ವವಿದ್ಯಾಲಯ.
- **ನಾಯರ್ ಪ್ರೀತಿ (2017) :** ಬೋಧನಾ ಸಾಮರ್ಥ್ಯಗಳ ಗುರುತಿಸುವಿಕೆ ಮತ್ತು ಬೊಧನಾ ಸಾಮರ್ಥ್ಯಗಳಿಗೆ ಪರಿಣಾಮ ಬೀರುವ ಅಂಶಗಳ ಒಂದು ಅಧ್ಯಯನ.
- **ಪ್ರತಿಭಾ (2016) :** ಪ್ರಾಥಮಿಕ ಶಾಲಾ ಶಿಕ್ಷಕರ ಬೊಧನಾ ಸಾಮರ್ಥ್ಯದಲ್ಲಿ ತರಬೇತಿಯ ಪರಿಣಾಮಕಾರತ್ವ, ಅಂತರರಾಷ್ಟ್ರೀಯ ಜರ್ನಲ್ ಆಫ್ ಅಡ್ವಾನ್ಸ್ಡ ರಿಸರ್ಚ್(ಐಜೆಎಆರ್‌ಇಟಿ). 3(3), ಪುಟ ಸಂಖ್ಯೆ 1–2.
- **ಪರಮಾಣಿಕ್ ನೇಪಾಳ್ ಮತ್ತು ಪ್ರಣಬ್ ಬರ್ಮನ್ (2019) :** ಬಿ.ಇಡಿ ಪ್ರಶಿಕ್ಷಣಾರ್ಥಿಗಳಲ್ಲಿ ಶಿಕ್ಷಕರ ಸಾಮರ್ಥ್ಯಗಳ ಸ್ಥಿತಿಗತಿಯ ಕುರಿತು ಒಂದು ವಿಶ್ಲೇಷಣಾತ್ಮಕ ಅಧ್ಯಯನ, ಸಮಾಜವಿಜ್ಞಾನಗಳ ಸಂಶೋಧನೆಯ ಅಂತರರಾಷ್ಟ್ರೀಯ ಪತ್ರಿಕೆ. 9(2), ಪುಟ ಸಂಖ್ಯೆ 477–488.
- **ಡಾಂಗೆ ಜೆ.ಕೆ. ಮತ್ತು ಸಿದ್ದರಾಜು (2020) :** ಶಿಕ್ಷಕರನ್ನು ರೂಪಿಸುವಲ್ಲಿ 21ನೇ ಶತಮಾನದ ಶಿಕ್ಷಕರಿಗೆ ಅವಶ್ಯಕವಾಗಿರುವ ಸಾಮರ್ಥ್ಯಗಳು.ಜುನಿ ಕ್ಯಾಟ್. 10(7). ಸಂಖ್ಯೆ 15, ಪುಟ ಸಂಖ್ಯೆ 137–140.
- **ಡಾಂಗೆ ಜೆ.ಕೆ. ಮತ್ತು ಸಿದ್ದರಾಜು. (2020) :** ಗುಣಾತ್ಮಕ ಶಿಕ್ಷಣದ ವರ್ಧನೆಗೆ ಶಿಕ್ಷಕರ ತರಬೇತಿ ಸಂಸ್ಥೆಗಳ ಪಾತ್ರ. ಇಂಟರ್ ನ್ಯಾಷನಲ್ ಜರ್ನಲ್ ಆಫ್‌ಎಜುಕೇಷನ್ ಕಲ್ಚರ್ ಅಂಡ್ ಸೊಸೈಟಿ. 5(6). ಪುಟ ಸಂಖ್ಯೆ 137–140.
- **ಲಿಮ್ ಸಿ. ಪಿ. ಮತ್ತು ಚೈ ಸಿ. ಎಸ್. (2008) :** ಶಿಕ್ಷಕರ ಶಿಕ್ಷಣದ ನಂಬಿಕೆಗಳು ಮತ್ತು ಕಂಪ್ಯೂಟರ್ ಮಧ್ಯಸ್ಥ ತರಗತಿಯ ಪಾಠಗಳ ಅವರ ಯೋಜನೆ ಮತ್ತು ನಡವಳಿಕೆ. ಬ್ರಿಟಿಷ್ ಜರ್ನಲ್ ಆಫ್ ಎಜುಕೇಷನಲ್ ಟೆಕ್ನಾಲಜಿ. 39(5). ಪುಟ ಸಂಖ್ಯೆ 807–828.
- **ರೋಜರ್ಸ್ ಇ. ಎಂ. (2003) :** ನಾವೀಣ್ಯತೆಗಳ ಪ್ರಸರಣ, ನ್ಯೂಯಾರ್ಕ್ ಫ್ರೀ ಪ್ರೆಸ್.
- **ಸಾಲ್ವಿಕ್ ಎಮ್. (2008) :** ಶಿಕ್ಷಕರ ಸಾಮರ್ಥ್ಯ, ಶಿಕ್ಷಣ ಮತ್ತು ಸಂವಹನ ಸಂಸ್ಥೆ, ಜೀವ ವಿಜ್ಞಾನ ವಿಶ್ವವಿದ್ಯಾಲಯ.
- **ಸಿದ್ದರಾಜು ಮತ್ತು ಡಾಂಗೆ ಜೆ. ಕೆ. (2022) :** 21ನೇ ಶತಮಾನದ ಶಿಕ್ಷಕರ ಮಾರ್ಗದರ್ಶಕರಾಗಲು ಅವಶ್ಯಕವಾಗಿರುವ ಸಾಮರ್ಥ್ಯಗಳು,

ISSN : 2249-2429 ಸಂಶೋಧನೆ RNI REG.NO.KARKAN/2011/38712


ರಾಷ್ಟ್ರೀಯ ಶಿಕ್ಷಣ ನೀತಿ – 2020 ನ್ನು ಪ್ರೋತ್ಸಾಹಿಸಲು ನವೀನ ಬೋಧನಾಶಾಸ್ತ್ರ ಮತ್ತು ಪರಿಣಾಮಕಾರಿ ಬೋಧನಾ–ಕಲಿಕೆ. ಶಿಕಾರಿಪುರ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ, ಪುಟ ಸಂಖ್ಯೆ 303–308.

- **ತೊಂಡ್ಯೂರ್ ಜೆ., ವಾಲ್ಕೆ ಎಂ. ಮತ್ತು ವ್ಯಾನ್ ಬ್ರಾಕ್ ಜೆ. (2008) :** ಪ್ರಾಥಮಿಕ ಶಿಕ್ಷಣದಲ್ಲಿ ಕಂಪ್ಯೂಟರ್ ಬಳಕೆಯ ನಿರ್ಧಾರಕಗಳಿಗೆ ಬಹು ಆಯಾಮದ ವಿಧಾನ : ಶಿಕ್ಷಕರು ಮತ್ತು ಶಾಲೆಯ ಗುಣಲಕ್ಷಣಗಳು. ಜರ್ನಲ್ ಆಫ್ ಕಂಪ್ಯೂಟರ್ ಅಸಿಸ್ಟೆಡ್ ಲರ್ನಿಂಗ್, 24, ಪುಟ ಸಂಖ್ಯೆ 494–506.
- **ಯುನಿಸೆಫ್ ಸೆಪ್ಟಂಬರ್ ವರದಿ. 2020.**
- **ವಿದ್ಯಾನಂದ್ ಖಂಡಗಲೆ. (2016) :** ಶಿಕ್ಷಕರ ಶಿಕ್ಷಣದಲ್ಲಿ ಪಠ್ಯಕ್ರಮದ ವರ್ಗಾವಣೆ, ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಆನ್ ಪ್ಯೂಚರ್ ಆಫ್ ಟೀಚರ್ ಎಜುಕೇಷನ್. ಪುಣೆ.
- **21ನೇ ಶತಮಾನದ ಶಿಕ್ಷಕರ ಸಾಮರ್ಥ್ಯಗಳು. (2016) :** 21ನೇ ಶತಮಾನದ ಒಂಟಾರಿಯೋ ಶಿಕ್ಷಕರ ಕಡೆಗೆ.


■■

*– 63ನೇ ಪುಟದಿಂದ ಮುಂದುವರೆದುದು*

2. ಶಿಕ್ಷಣ ತಜ್ಞರು ತಮ್ಮ ಸಂಪನ್ಮೂಲಗಳನ್ನು ರಚಿಸಬಹುದು ಮತ್ತು ಅವುಗಳನ್ನು ಚರ್ಚಾ ವೇದಿಕೆಯೊಂದಿಗೆ ಚಿತ್ರಗಳು, ಪಠ್ಯಗಳು ಮತ್ತು ವೀಡಿಯೊ ಉಪನ್ಯಾಸಗಳ (ಅಸಮಕಾಲಿಕ/ ಅಸಿಂಕ್ರೊನೊಸ್) ರೂಪದಲ್ಲಿ ಸೃಜನಶೀಲ ಸಾಮಾನ್ಯ ಅಡಿಯಲ್ಲಿ ಸೈಟ್ನಲ್ಲಿ ಹಂಚಿಕೊಳ್ಳಬಹುದು.
3. OER ಗಳ ಬಳಕೆಯಿಂದ, ಶಿಕ್ಷಣತಜ್ಞರು ವಿಷಯವನ್ನು ರಚಿಸಬಹುದು ಮತ್ತು ಸಂಗ್ರಹಿಸಬಹುದು ಮತ್ತು ಸಾಂಪ್ರದಾಯಿಕ ಪುಸ್ತಕಗಳು ಎಂದಿಗೂ ಒಳಗೊಂಡಿರದ ಅವರ ಸಾಂಸ್ಕೃತಿಕ ಆಸಕ್ತಿಗಳು ಮತ್ತು ಹಿನ್ನೆಲೆಗಳ ಬಗ್ಗೆ ತಮ್ಮ ವಿದ್ಯಾರ್ಥಿಗಳೊಂದಿಗೆ ಮಾತನಾಡಬಹುದು.
4. ಹಕ್ಕುಸ್ವಾಮ್ಯ ನಿರ್ಬಂಧಗಳ ಕಾರಣದಿಂದಾಗಿ OERಅನ್ನು ಮುದ್ರಿಸಲು, ಪುನರುತ್ಪಾದಿಸಲು ಮತ್ತು ಮಾರ್ಪಡಿಸಲು OER ಗಳ ಪರವಾನಗಿಯನ್ನು ವಿದ್ಯಾರ್ಥಿಗಳು ಪಡೆಯಬೇಕಾಗುತ್ತದೆ.
5. ಶಿಕ್ಷಕರು ಎಂದಾದರೂ OER ಅನ್ನು ನವೀಕರಿಸಬಹುದು, ಅವರು ಪ್ರಸ್ತುತ ಜ್ಞಾನವನ್ನು ನಿಖರತೆಯೊಂದಿಗೆ ಒದಗಿಸುತ್ತಾರೆ. OER ನೊಂದಿಗೆ, ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳು ತಮ್ಮ ವಸ್ತುಗಳನ್ನು ಶಾಶ್ವತವಾಗಿ ಇಟ್ಟುಕೊಳ್ಳಬಹುದು ಮತ್ತು ಭವಿಷ್ಯದಲ್ಲಿ ಅವರಿಗೆ ಹಿಂತಿರುಗಿಸಬಹುದು, ಕೇವಲ ಗುಣಲಕ್ಷಣದ ಅವಧಿಗೆ ಮಾತ್ರವಲ್ಲ, ಜ್ಞಾನ ಪ್ರವೇಶಕ್ಕಿಂತ ಡಿಜಿಟಲ್ ಚಂದಾದಾರಿಕೆ ಆಧರಿಸಿದೆ.

## ಉಪಸಂಹಾರ

ಸಾಂಕ್ರಾಮಿಕ ರೋಗದ ಸಮಯದಲ್ಲಿ ಆನ್ಲೈನ್ ಶಿಕ್ಷಣ, ಶಿಕ್ಷಣದ ಎಲ್ಲಾ ಸ್ಕೀಮ್ಗಳಲ್ಲಿ. ಬೋಧನೆ ಮತ್ತು ಕಲಿಕೆಯ ಜೊತೆಗೆ, ಮೌಲ್ಯಮಾಪನ ಮೂಲಕ ಉನ್ನತ ಶಿಕ್ಷಣದಲ್ಲಿ ಸವಾಲಾಗಿದೆ. ಆದ್ದರಿಂದ ಇದು ಎಲ್ಲಾ ಕ್ಷೇತ್ರಕ್ಕೆ ಅನಿವಾರ್ಯವಾಗಿದೆ, ವಿಶೇಷವಾಗಿ ಉನ್ನತ ಶಿಕ್ಷಣದ ಮೇಲೆ ಕೇಂದ್ರೀಕರಿಸುತ್ತದೆ. ಆದ್ದರಿಂದ ಪ್ರತಿಯೊಬ್ಬ ಶಿಕ್ಷಕರು ಪರಿವರ್ತನೆಯನ್ನು ಸ್ವೀಕರಿಸಲು ಈ ಸವಾಲನ್ನು ಎದುರಿಸಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


- **Santosh Sujata (2017) :** A Study into Policy Status and Use of Open Education Resources in Distance Education and Training Institutes in India.
- **Mythili G. (2020) :** Developing E-Content based on Self Learning Modules(Quadrant 2 of MOOC) about OERs.
- **Pattanashetty Mahantesh K. :** Employing open Corpus Resources for personalized e-learning.
- **Prince G. (2016) :** User perceptions & Usage of open access by the academic community in the higher education system.
- **Valaramathi C. (2017) :** Open Access Journals and their Implication on Science Technologyand Medical library users an analysis of Quality factor.
- The Importance of open Educational Resource in the Teaching and Learning of Languages: case study Dr. Karen Ferreeria- Meyers, Institute of Distributed Education, University of Swazrland.
- http://en.unesco.org /themes/building. knowledge. societies/org
- https://creativecommons.org/2019/06/04/unesco-oer-recommendation-one-step-closer-to-adoption/?platform=hootsuite
- https://educationaltechnologyjournal. springeropen. com/articles/10.1186/s41239-019-0133-6
- https://educationaltechnologyjournal. springeropen. com/articles/10.1186/s41239-019-0133-6
- https://en.wikipedia.org/wiki/Moodle
- https://opensource.com/education/13/4/guide- open-source-education hell.
- https://www.google.com/search?q=digitalization+of+education&oq=dizitalization+of+ edu&aqs=chrome.1.69 i57j0i22i30l7j0i390l2.14139j0j15&sourceid=chrome&ie=UTF-8
- https://www.google.com/search?q=learnability+meaning &oq= Learnability &aqs=chrome.1.0i512l10.3136j0j15&sourceid=chrome&ie=UTF-8
- https://www.opencolleges.edu.au/informed/features/10-open-educational-resources-know/


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಗದಗ ತಾಲೂಕಿನ ಕೈಮಗ್ಗ ನೇಕಾರರ ಸಾಮಾಜಿಕ ಸ್ಥಿತಿಗತಿ ಕುರಿತು ಅಧ್ಯಯನ

✍ **ಸುಮಿತ್ರಾ ಮೆಣಸಿಕಾಯಿ,** ಸ್ನಾತಕೋತ್ತರ ಸಮಾಜಕಾರ್ಯ ವಿದ್ಯಾರ್ಥಿ, ಸ್ನಾತಕೋತ್ತರ ಸಮಾಜಕಾರ್ಯ ವಿಭಾಗ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ.

✍ **ಲಿಂಗರಾಜ್ ನಿಡುವಣಿ,** ಮಾರ್ಗದರ್ಶಕರು ಹಾಗೂ ಉಪನ್ಯಾಸಕರು, ಸ್ನಾತಕೋತ್ತರ ಸಮಾಜಕಾರ್ಯ ವಿಭಾಗ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ.

✍ **ಸುನಂದಾ ಕಳಕಣ್ಣವರ,** ಸಹಮಾರ್ಗದರ್ಶಕರು ಹಾಗೂ ಸಂಶೋಧನಾ ಫೆಲೋ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ.

*ಸಾರಾಂಶ*

*ಭಾರತವು ಸರ್ವಧರ್ಮ, ಸಹಿಷ್ಣುತೆಯ ದೇಶವಾಗಿದೆ. ಇದು ಅನೇಕ ಜಾತಿ, ಜನಾಂಗ, ಧರ್ಮ, ಪರಂಪರೆ, ಸಂಸ್ಕೃತಿಗಳನ್ನು ಹೊಂದಿ, ಭವ್ಯವಾದ ಚರಿತ್ರೆಯನ್ನು ಹೊಂದಿದೆ. ಇಲ್ಲಿಯಜನರು ಏಕಮನೋಭಾವದಿಂದ ಜೀವಿಸುತ್ತಿದ್ದಾರೆ. ಇವರು ಜೀವನೋಪಾಯಕ್ಕೆಂದು ವಿವಿಧ ಕಲೆ, ಕೌಶಲ್ಯ ಮತ್ತು ಕರಕುಶಲತೆಗಳನ್ನು ಬೆಳೆಸಿಕೊಂಡಿದ್ದಾರೆ. ವಿಶೇಷ ನೈಪುಣ್ಯತೆಯಿಂದ ಭಾರತವನ್ನು ಪ್ರಪಂಚದಲ್ಲಿ ಗುರುತಿಸುವಂತೆ ಮಾಡಿದ್ದಾರೆ. ಹತ್ತಿ ಸೀರೆಗಳ ನೇಯ್ಗೆಯ ವೈವಿಧ್ಯತೆ ಭಾರತದ ಶ್ರೀಮಂತ ಕಲೆಗೆ ಸಾಕ್ಷಿಯಾಗಿದೆ. ಈ ನೇಯ್ಗೆಯ ಪ್ರಮುಖ ಪಾತ್ರಧಾರಿ ನೇಕಾರರು ಮತ್ತು ನೇಕಾರಿಕೆಯ ಉದ್ಯಮ. ಆದರೆ ಇವರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ, ಸಮಾಜದಲ್ಲಿ ಗೌರವವಿಲ್ಲ, ಸಂತೋಷವಿಲ್ಲ. ಬಡತನ, ಶಿಕ್ಷಣ, ಆರೋಗ್ಯ, ಆರ್ಥಿಕ-ಸಂಕಷ್ಟ,ಉದ್ಯಮಗಳಲ್ಲಿ ಹಿನ್ನಡೆಯನ್ನು ಕಾಣುತ್ತಿದ್ದಾರೆ. ಅದಕ್ಕೆ ಹಲವಾರು ಕಾರಣಗಳಿವೆ.*

*ಪ್ರಸ್ತುತ ಅಧ್ಯಯನದಲ್ಲಿ ಗದಗ ತಾಲೂಕಿನ ಗದಗ, ಬೆಟಗೇರಿ, ನರಸಾಪುರದ ಕೈಮಗ್ಗ ವೃತ್ತಿಯಲ್ಲಿರುವ ನೇಕಾರರ ಸಾಮಾಜಿಕ ಸ್ಥಿತಿಗತಿಗಳನ್ನು, ನೇಕಾರರ ವೃತ್ತಿಯಲ್ಲಿರುವ ವಿವಿಧ ಜಾತಿಗಳನ್ನು, ಶೈಕ್ಷಣಿಕ ಸ್ಥಿತಿಯನ್ನು ತಿಳಿಯುವ ಉದ್ದೇಶವಾಗಿದೆ. ಈ ಅಧ್ಯಯನಕ್ಕೆ ಮಾದರಿಗಳ ಆಯ್ಕೆಗಾಗಿ ಉದ್ದೇಶಪೂರ್ವಕ ಯಾದೃಚ್ಛಿಕ ತಂತ್ರವನ್ನು ಬಳಸಲಾಗಿದೆ. ಗದಗ ತಾಲೂಕಿನ ಆಯ್ದ ಸ್ಥಳದಲ್ಲಿ ಮಾದರಿ/ನಮೂನೆ ಗಾತ್ರವು 100ನ್ನು ಆಯ್ಕೆ ಮಾಡಲು ಸರಳ ಯಾದೃಚ್ಛಿಕಮಾದರಿ ಬಳಸಲಾಗಿದೆ. ಸಂದರ್ಶನ-ಅನುಸೂಚಿ ಬಳಸಿ ದತ್ತಾಂಶ ಸಂಗ್ರಹಿಸಲಾಗಿದೆ. ಪ್ರತಿಕ್ರಿಯಿಸಿದವರಲ್ಲಿ ಮಹಿಳೆಯರು ಹೆಚ್ಚಾಗಿದ್ದು, ಅನಕ್ಷರಸ್ಥರಾಗಿದ್ದಾರೆ. ಅನೇಕರು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ, ಈ ವೃತ್ತಿಗೆ ಯಾವುದೇ ಶೈಕ್ಷಣಿಕ ಅರ್ಹತೆ ಇರುವುದಿಲ್ಲ, ಎಲ್ಲರೂ ಹಿಂದೂ ಧರ್ಮದವರೆ ಇದ್ದು, ಅನೇಕ ವಿಧದ ಜಾತಿಯಯವರು ಈ ವೃತ್ತಿಯನ್ನು ತಮ್ಮ ಜೀವನೋಪಾಯಕ್ಕೆಂದು ಹೊಂದಿದ್ದಾರೆ. ವಿವಿಧ ಜಾತಿಯವರು ಅವರದೇ ಆದ ಕುಲಕಸುಬನ್ನು ಹೊಂದಿದ್ದು, ಅವರದೇ ಆದ ಆರಾಧ್ಯ ದೇವರು/ಕುಲಗುರುವನ್ನು ಹೊಂದಿದ್ದಾರೆ. ವಿಶೇಷವಾಗಿ ಅವರ ಹಬ್ಬಗಳನ್ನು ಆಚರಿಸುತ್ತಾರೆ. ಇವರಿಗೆ ಮನೆಗಳು ಇದ್ದು,ಕೃಷಿಭೂಮಿಯನ್ನು ಯಾರು ಹೊಂದಿಲ್ಲವೆಂದು ಈ ಅಧ್ಯಯನದಿಂದ ತಿಳಿದುಬಂದಿದೆ.*

*ಪ್ರಮುಖ ಪದಗಳು : ಕೈಮಗ್ಗ ನೇಕಾರರು, ನೇಯ್ಗೆ, ಸಮಾಜ, ಜನಾಂಗ, ಕುಲಕಸುಬು, ಆರಾಧ್ಯದೈವ*

## ಪರಿಚಯ

ಭಾರತವು 5000 ವರ್ಷಗಳ ಹಿಂದಿನಷ್ಟರ ನೇಯ್ಗೆಯ ಶ್ರೀಮಂತ ಇತಿಹಾಸವನ್ನು ಹೊಂದಿರುವ ದೇಶವಾಗಿದೆ. ನೇಯ್ಗೆ ಎಂದರೆ ನಾರಿನ ಎಳೆಗಳನ್ನು ಜೋಡಿಸಿ ಜವಳಿ ತಯಾರಿಸುವ ಪ್ರಕ್ರಿಯೆ. 8ನೇ ಶತಮಾನ ದಿಂದಲೂ ಕೈಯಿಂದ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಅಂದಿನಿಂದ ಬೆಳೆದು ಇಂದು ದೊಡ್ಡ ಉದ್ಯಮವಾಗಿ ಬೆಳೆದು ನಿಂತಿದೆ.

**ಕೈಮಗ್ಗ :** ಕೈಮಗ್ಗವು ನೇಯ್ಗೆಗೆ ಬಳಸುವ ಸರಳಯಂತ್ರವಾಗಿದೆ. ಮರದ ಲಂಬಶಾಫ್ಟ್‌ಲೂಮ್‌ನಲ್ಲಿ ಹೆಡಲ್‌ಗಳನ್ನು ಶಾಫ್ಟ್‌ನಲ್ಲಿ ಸರಿಪಡಿಸಲಾಗುತ್ತದೆ. ವಾರ್ಪ್‌ಥ್ರೆಡ್‌ಗಳು ಹೆಡಲ್‌ಮೂಲಕ ಪರ್ಯಾಯವಾಗಿ ಹಾದುಹೋಗುತ್ತವೆ ಮತ್ತು ಹೆಡಲ್‌ಗಳ(ಶೆಡ್) ನಡುವಿನ ಜಾಗದ ಮೂಲಕ ಹಾದುಹೋಗುತ್ತವೆ, ಇದರಿಂದ ಶಾಫ್ಟ್‌ನ್ನು ಏರಿಸುವುದರಿಂದ ಅರ್ಧದಷ್ಟು ಎಳೆಗಳು(ಹೆಡಲ್‌ಗಳ ಮೂಲಕ ಹಾದುಹೋಗುವವುಗಳ) ಏರುತ್ತವೆ ಮತ್ತು ಶಾಫ್ಟ್‌ನ್ನು ಕಡಿಮೆ ಮಾಡುವುದರಿಂದ ಅದೇ ಎಳೆಗಳನ್ನು ಕಡಿಮೆಮಾಡುತ್ತ-ಥ್ರೆಡ್‌ಗಳು ಹಾದುಹೋಗುತ್ತವೆ. ಹೆಡ್ಡಲ್ಸ್ ನಡುವಿನ ಸ್ಥಳಗಳ ಮೂಲಕ ಸ್ಥಳದಲ್ಲಿ ಉಳಿಯುತ್ತದೆ. ಕೈಮಗ್ಗ ನೇಕಾರರು ಸಾಮಾನ್ಯವಾಗಿ ಬಳಸುವ ವಿಧದ ಮಗ್ಗಗಳನ್ನು ಬಳಸುತ್ತಾರೆ.

## ಸಾಂಪ್ರದಾಯಿಕ ಕೈಮಗ್ಗದ ವಿಧಗಳು

1. ಫಿಟ್‌ಲೂಮ್ಸ್
2. ಸಾ ್ಯಂಡ್‌ಲೂಮ್ಸ್
3. ಫ್ರೇಮ್‌ಲೂಮ್ಸ

**ಕೈಮಗ್ಗ ನೇಕಾರರ ವಿವಿಧ ಹೆಸರುಗಳು :** ನೇಕಾರರು, ಜಾಡರು, ಜೇಡರು, ನೇಯುವವರು, ಮಗ್ಗದವರು

## ನೇಕಾರ ವೃತ್ತಿಯಲ್ಲಿ ಇರುವ ವಿವಿಧ ಜಾತಿಗಳು

**"ಕಾಸಿ ಕಮ್ಮಾರನಾದ ಬಿಸಿ ಮಡಿವಾಳನಾದ,**
**ಹಾಸನಿಕ್ಕಿ ಸಾಲಿಗನಾದ, ವೇದವನ್ನೋದಿ ಹಾರುವನಾದ"**

**ಲಿಂಗ ಪೂಜೆಯನ್ನಾದರೂ ಮರೆಯಬೇಕು,**
**ಜಂಗಮುಂದಿದ್ದರೂ ಹಂಗು ಹರಿಯಬೇಕು,**
**ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾದರೂ,**
**ಕಾಯಕದಾ ಒಳಗೂ.**

ಕಾಯಕದಲ್ಲಿ ಮೇಲು-ಕೀಳು ಎಂಬ ಬೇಧ-ಭಾವವಿಲ್ಲದ ಸಮಾಜವನ್ನು ನಿರ್ಮಿಸಿ, ಕೇವಲ ಪೂಜೆ,ಪ್ರಾರ್ಥನೆ ದೇವರನ್ನೊಲಿಸುವ ಸಾಧನ ಎಂದು ತಿಳಿದ ಸಮಾಜಕ್ಕೆ ಕಾಯಕವೂ ಕೂಡ ದೇವರನ್ನೊಲಿಸುವ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಾಧನ ಎಂದು ತೋರಿಸಿಕೊಟ್ಟು, ಕಾಯಕಕ್ಕೆ ದೈವತ್ವದ ಸ್ಥಾನ ತಂದುಕೊಟ್ಟವರು ಗುರುಬಸವಣ್ಣವರು. ಕಾಯಕದಲ್ಲಿ ನಿರತನಾದೊಡೆ ಗುರುದರ್ಶನವನ್ನಾದರೂ ಮರೆತರು ಕಾಯಕವನ್ನು ಮರೆಯಬಾರದು ಎಂದು ಆಯ್ದಕ್ಕಿ ಲಕ್ಕಮ್ಮ ತಮ್ಮ ವಚನದಲ್ಲಿ ಹೇಳಿದ್ದಾರೆ. ಶರಣರ ಸೂಕ್ಷ್ಮ ವಿಚಾರಗಳನ್ನು ಗಮನಿಸಿದರೆ, ಅವರ ಕಾಯಕ ಸಿದ್ಧಾಂತದ ಮೇಲೆ ಆರ್ಥಿಕ ಜಗತ್ತನ್ನೇ ಕಟ್ಟುವ ಶಕ್ತಿ, ಹುಮ್ಮಸು ದೊರೆಯುತ್ತದೆ.

ಹಿಂದಿನಿಂದಲೂ ನೇಕಾರರು ಎಂದರೆ ದೇವಾಂಗ ಜನಾಂಗದವರು ಎನ್ನುತ್ತಿದ್ದರು. ಅಲ್ಲದೇ ಹಟ್‌ಗಾರ, ಕುರುವಿನಶೆಟ್ಟಿ, ಪಟ್ಟಸಾಲಿ, ತೊಗಟವೀರ, ಪದಮಸಾಲಿ, ಸ್ವಕುಳಸಾಲಿ, ಸಮಾಜದ ಕುಲಕಸುಬು ನೇಕಾರಿಕೆ ಆಗಿದೆ. ಆದರೆ ಈಗ ಅನೇಕ ಜಾತಿಗಳು ಈ ವೃತ್ತಿಯನ್ನು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿವೆ. ಅವರದೇ ಆದ ಕುಲ ಗುರುವನ್ನು ಹಾಗೂ ಕುಲಕಸುಬನ್ನು ಹೊಂದಿದ್ದಾರೆ. ಕೆಲವುಗಳನ್ನು ಕೆಳಗೆ ನೀಡಲಾಗಿದೆ.

| ಜಾತಿ ಹೆಸರು | ಜಾತಿ/ವರ್ಗ | ಕುಲಗುರು | ಕುಲಕಸುಬು |
|---|---|---|---|
| ದೇವಾಂಗ | ಪ್ರವರ್ಗ 2ಎ | ದೇವರದಾಸಿಮಯ್ಯ, ಶ್ರೀರಾಮಲಿಂಗ ಚೌಡೇಶ್ವರಿತಾಯಿ | ರೇಷ್ಮೆನೇಕಾರಿಕೆ |
| ಕುರುವಿನಶೆಟ್ಟಿ | ಪ್ರವರ್ಗ 2ಎ | ಶ್ರೀನೀಲಕಂಠೇಶ್ವರ | ನೇಕಾರಿಕೆ |
| ಸ್ವಕುಳಸಾಲಿ | ಪ್ರವರ್ಗ 2ಎ | ಶ್ರೀಜಿಹ್ವೇಶ್ವರ ಸ್ವಾಮಿ | ನೇಯ್ಗೆ,ಬಣ್ಣಹಾಕುವುದು |
| ನಾಮದೇವಸಿಂಪಿ | ಪ್ರವರ್ಗ 2ಎ | ಶ್ರೀಸಂತ ನಾಮದೇವ | ಬಟ್ಟೆ ಹೊಲಿಯುವುದು |
| ನಾಯಕ | ಪ.ಪಂಗಡ | ಮಹರ್ಷಿ ವಾಲ್ಮೀಕಿ | ಬೇಟೆ, ನೃತ್ಯ |
| ಲಿಂಗಾಯತ/ ಪಂಚಮಸಾಲಿ | ಪ್ರವರ್ಗ 3ಬಿ | ವಿಶ್ವಗುರು ಬಸವಣ್ಣ | ವ್ಯವಸಾಯ |
| ಪದಮಸಾಲಿ | ಪ್ರವರ್ಗ 2ಎ | ಶ್ರೀಆದಿಶಂಕರಾಚಾರ್ಯ | ಜವಳಿವ್ಯಾಪಾರ,ನೇಕಾರಿಕೆ |
| ಸಾವಜಿ/ಕ್ಷತ್ರೀಯ | ಪ್ರವರ್ಗ 2ಎ | ಸಹಸ್ರಾರ್ಜುನ ಮಹಾರಾಜ ಮಹಾಯೋಗಿ ವೇಮ, | ಬೇಟೆ/ತಳವಾರ |
| ರೆಡ್ಡಿ | ಪ್ರವರ್ಗ 2ಎ | ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ | ವ್ಯವಸಾಯ |
| ತೋಗಟವೀರ ಕ್ಷತ್ರೀಯಸಮಾಜ | ಪ್ರವರ್ಗ 2ಎ | ದಿವ್ಯ ಜ್ಞಾನಾನಂದಗಿರಿಶ್ರೀ | ಹತ್ತಿನೇಕಾರರು |

**ದೇವಾಂಗ** : ಸಂಸ್ಕೃತದಲ್ಲಿ **"ದೇವರ ಅಂಗ"** ವೆಂದು ಮತ್ತು ಲಿಂಗಾಯತ–ದೇವಾಂಗ ಎಂದು ಕರೆಯುವರು. ಸಾಂಪ್ರಾದಾಯಿಕವಾಗಿ ದಕ್ಷಿಣ ಭಾರತದ ಹಿಂದೂ ಜಾತಿಯಾಗಿದ್ದು, **ದೇವಾಂಗ ಶೆಟ್ಟಿ, ದೇವಾಂಗ ಶೆಟ್ಟಿಯಾರ್** ಎಂದು ಕರೆಯುತ್ತಾರೆ. ಇವರ ಪ್ರಮುಖ ಕಸುಬು **ಜವಳಿ ವ್ಯಾಪಾರ, ನೇಯ್ಗೆ ಮತ್ತು ಕೃಷಿಯಾಗಿದೆ**. ಇವರು ಹೆಚ್ಚಾಗಿ **ಕರ್ನಾಟಕ, ಆಂಧ್ರ ಪ್ರದೇಶ,ತಮಿಳನಾಡು, ಕೇರಳ, ಒಡಿಶಾದಲ್ಲಿ** ಕಂಡುಬರುತ್ತಾರೆ. ಇವರು **ಕನ್ನಡ, ತಮಿಳು, ತೆಲಗು, ಮಲಯಾಳಂ, ತುಳು, ಕೊಂಕಣಿ ಭಾಷೆ** ಮಾತನಾಡುತ್ತಾರೆ. ಇದರ ಇನ್ನೊಂದು ಗುಂಪು **"ಪದಮಸಾಲಿ"ಯಾಗಿದೆ.**

**ಕುರುವಿನಶೆಟ್ಟಿ** : ಇವರು **ಕರ್ನಾಟಕ, ಮಹಾರಾಷ್ಟ್ರ, ತೆಲಗು** ಪ್ರಾಂತಗಳ ಕೆಲವು ಭಾಗಗಳಲ್ಲಿ ವಾಸಿಸುವುದು ಕಂಡುಬರುತ್ತದೆ. ಇವರು **ನೇಯ್ಗೆಯನ್ನು** ತಮ್ಮ ವೃತ್ತಿಯಾಗಿಸಿಕೊಂಡಿದ್ದಾರೆ. ಇವರ ಜನಸಂಖ್ಯೆಯು 2 ರಿಂದ 3 ಲಕ್ಷ ಇರಬಹುದು ಎಂದು ತಿಳಿದಿದೆ. ಇವರಿಗೆ **ವೀರಶೈವ ಧರ್ಮವೇ** ಪ್ರಾಧಾನ್ಯವಾಗಿದೆ. ಶಿವಶರಣ **ಹೋಳಿ ಹಂಪಯ್ಯನವರು** ಇದೇ ಜಾತಿಯವರೆಂದು ತಿಳಿಯಲಾಗಿದೆ. ಇವರು ಇವರದೇ ಆದ ಸಮಾಜದ ಸಂಘ ರಚಿಸಿಕೊಂಡು ಅದರಿಂದ ಅಭಿವೃದ್ಧಿ ಹೊಂದಲು ಅನೇಕ ಯೋಜನೆಗಳನ್ನು ಹಾಕಿಕೊಂಡು ಕಾರ್ಯಗತಗೊಳಿಸುತ್ತಿದ್ದಾರೆ.

**ಹಟ್‌ಗಾರ** : ಕೆಲಸದ ಆಧಾರದ ಮೇಲೆ ಜಾತಿ, ಉಪಜಾತಿಗಳು ಸೃಷ್ಟಿಯದವು. ಇದು **"ಶಂಬ ಜೋಶಿ"** ಎನ್ನುವುದು ಮೂಲಪದವಾಗಿದ್ದು **ಹಟ್‌ಗರ ಎಂದರೆ ಕ್ಯಾಟಲ್ ಹರ್ಡ್ದರ**. ಹಟ್‌ಗಾರ ಜಾತಿಯು ಕಾರ್ಮಿಕತೆಯ ಮೇಲೆ ಭಾಗಗಳಾದವು. ಇದನ್ನು **ಹಟ್‌ಗಾರ ಗೋತ್ರ, ಬಾರ್ಗಿ ದಂಗಾರ** ಎಂದು ಕರೆಯುವರು.

**ಸ್ವಕುಳಸಾಲಿ** : ಇತರೆ ಹೆಸರುಗಳು **ಸ್ವಕುಳಸಾಲಿ/ಸ್ವಕುಳಸಾಲೆ/ಸಾಲಿ. ಮರಾಠಿ** ಇವರ ಪ್ರಥಮಭಾಷೆಯಾಗಿದ್ದು,ಹೆಚ್ಚಾಗಿ ಮಾತನಾಡುತ್ತಾರೆ. ಇವರ **ಪ್ರಾಥಮಿಕ ವೃತ್ತಿ ಎಂದರೆ ನೇಯ್ಗೆ, ವಿನ್ಯಾಸ ಮತ್ತು ಬಟ್ಟೆಗಳಿಗೆ ಬಣ್ಣಹಾಕುವುದು**. ಇವರ **ಕುಲಗುರುವಾದ ಜೀವೇಶ್ವರನು** ಪಾರ್ವತಿ ಮತ್ತು ಶಿವನ ಆಶೀರ್ವಾದದಿಂದ ಸೂರ್ಯೋದಯದ ಸಮಯದಲ್ಲಿ ಹುಟ್ಟಿದರಿಂದ ಈ ಕುಲವನ್ನು **"ಸೂರ್ಯವಂಶಿ"**ಎಂದು ಕರೆದರು.ಇವರು ಪ್ರಸಿದ್ಧ ಸೀರೆ **"ಪೈಠಾನಿ"ಯನ್ನು ಮೊದಲು ಪೈಠಾನ್**‌ನಲ್ಲಿ ಪರಿಚಯಿಸಿದರು. ಇವರ ಹೆಚ್ಚಿನ ಸಮುದಾಯ **ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ, ದಕ್ಷಿಣಭಾರತದ ವಿವಿಧ ರಾಜ್ಯಗಳಲ್ಲಿ** ಹರಡಿಕೊಂಡಿವೆ. ಇವರು ಶ್ರೀಮಧ್ವಾಚಾರ್ಯ ಹಾಗೂ ರಾಮಾನುಜಚಾರ್ಯರ ಅನುಯಾಯಿಗಳಾಗಿದ್ದು, ತಿರುಪತಿ ವೆಂಕಟರಮಣ ದೇವರನ್ನು ಪೂಜಿಸುತ್ತಾರೆ.

**ನಾಮದೇವ ಸಿಂಪಿ** : ಇವರು **ಶೂದ್ರ** ವರ್ಗದವರು. ಇವರನ್ನು **ಸಿಂಪಿ, ಚಿಂಪಿ, ಸಿಂಪಾ, ಚಿಂಬಾ, ಚಿಂಪಾ** ಎಂದು ಕರೆಯುವರು. ಇವರು ಮಹರಾಷ್ಟ್ರದಿಂದ ತಮಿಳನಾಡು, ವಿವಿಧ ಭಾಗಗಳಿಗೆ ವಲಸೆ ಬಂದಿರುವರು. ಇವರ ಮೂಲಭಾಷೆ **ಮರಾಠಿ ಮತ್ತು ತಮಿಳು**. ಇವರು ನೇಯ್ಗೆ ಮತ್ತು ಬಣ್ಣ ಹಾಕುವ ಕೆಲಸ ಮಾಡುತ್ತಾರೆ.

**ನಾಯಕ** : ಇವರು **ಹಿಂದೂ ಕ್ಷತ್ರೀಯ ಸಮುದಾಯದವರು**. ಇವರು ಪಾಶ್ಚಿಮಾತ್ಯ ಭಾರತೀಯರಾಗಿದ್ದು, ಮೂಲತಃ **ದಕ್ಷಿಣ ಕರಾವಳಿ** ಭಾಗದವರು. ಪ್ರಾಥಮಿಕವಾಗಿ **ಗೋವಾ, ಮಹರಾಷ್ಟ್ರದವರಾಗಿದ್ದಾರೆ**. ಅಲ್ಲದೇ **ಆಂಧ್ರ ಪ್ರದೇಶ, ತೆಲಂಗಣ, ಕರ್ನಾಟಕದಲ್ಲಿ** ಕಾಣಬಹುದು. ಇವರನ್ನು ಕರ್ನಾಟಕದಲ್ಲಿ **ಉತ್ತರ ಕನ್ನಡ, ಉಡುಪಿ, ಹೆಚ್ಚಾಗಿ ದಕ್ಷಿಣ ಕನ್ನಡದಲ್ಲಿ** ಕಾಣಬಹುದು.

**ಲಿಂಗಾಯತ/ಪಂಚಮಸಾಲಿ** : ಲಿಂಗಾಯತ ಎನ್ನುವುದು 12ನೇ ಶತಮಾನದಲ್ಲಿ ಆರಂಭವಾಯಿತು. ಇದನ್ನು **ಲಿಂಗ–ಯತ್ಸ ಎಂದರೆ ಲಿಂಗವನ್ನು ಧರಿಸಿರುವರು** ಎಂದರ್ಥ. ಲಿಂಗ ಎಂದರೆ ಶಿವ ಎಂದರ್ಥ. ಇತರೆ ಹೆಸರು **ವೀರಶೈವ**. ಇದನ್ನು ಬಸವಣ್ಣ ಅವರು ಉತ್ತರ ಕರ್ನಾಟಕದಲ್ಲಿ ಪ್ರಾರಂಭಿಸಿದರು. 800ವರ್ಷಗಳ ಹಿಂದಿನಿಂದ ಲಿಂಗಾಯತ ಸಂಸ್ಕೃತಿ ಹುಟ್ಟಿತು. ಲಿಂಗಾಯತರು 15 ಮಿಲಿಯನ್ ಜನರಿದ್ದಾರೆ. ಇವರು **ಕರ್ನಾಟಕ, ಮಹರಾಷ್ಟ್ರ, ತಮಿಳನಾಡು, ಆಂಧ್ರಪ್ರದೇಶ, ಗೋವಾ, ಕೇರಳ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ**ದಲ್ಲಿ ಕಾಣಸಿಗುತ್ತಾರೆ. ಒಟ್ಟು 67% ಜನರು ಲಿಂಗಾಯತ ಸಮುದಾಯವನ್ನು ಹಿಂಬಾಲಿಸುತ್ತಾರೆ. ಕೆಲವರು ವಿದೇಶಕ್ಕೆ ವಲಸೆ ಹೋಗಿದ್ದು ಯುನೈಟೆಡ್ ಸ್ಟೆಟ್ಸ ಮತ್ತು ಕೆನಡ ಅಲ್ಲಿ ಇದ್ದಾರೆ. ಇವರು **ಕನ್ನಡವನ್ನು** ಪ್ರಮುಖವಾಗಿ ಬಳಸುತ್ತಾರೆ. ಅಲ್ಲದೆ ದ್ರಾವಿಡ ಭಾಷಾ ಕುಟುಂಬಗಳಿವೆ. ಇವರು 4 ಭಾಷೆಗಳಾದ **ತಮಿಳು, ತೆಲಗು, ಮಲಯಾಳಂ** ಬಳಸುತ್ತಾರೆ. ಕರ್ನಾಟಕದಲ್ಲಿ ಹಿಂದೂಗಳಿದ್ದಾರೆ. ತಮಿಳಿನಲ್ಲಿ ಶೈವರು ಎನ್ನುವರು. ವಿಶೇಷ ಲಕ್ಷಣಗಳನ್ನು ಹೊಂದಿದ್ದು, ಪಂಚಮಸಾಲಿ ಉಪಸಮಾಜವಾಗಿದೆ.

**ಸಾವಜಿ/ಕ್ಷತ್ರೀಯ** : ಸಾವಜಿ ಎನ್ನುವದನ್ನು **ಸೌಜಿ, ಸಾವೋಜಿ, ಸವೋಜಿ** ಎನ್ನುತಾರೆ. ಇವರು ಮಹಾರಾಷ್ಟ್ರದ ಹಿಂದೂ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಮುದಾಯದವರು. ಇವರು ಹಿಂದೂ **ಆರ್ಯನ ಭಾಷೆ, ಸಂಸ್ಕೃತಿ, ಹಿಂದಿ, ಮರಾಠಿ, ಸಿಂಧಿ, ಗುಜರಾತ್, ಮರ್‌ವಾರಿ** ಭಾಷೆ ಬಳಸುತ್ತಾರೆ.

**ರೆಡ್ಡಿ : ಇದನ್ನು ರಡ್ಡಿ, ರೆಡ್ಡಿ, ರೆಡ್ಡಿಯಾರ, ರೆಡ್ಡಪ್ಪ, ರೆಡ್ಡಯ** ಎಂಬ ಜಾತಿಯು ಭಾರತದ ಮೂಲವಾಗಿದೆ. ಇವರು ಹೆಚ್ಚಾಗಿ **ಆಂಧ್ರ ಪ್ರದೇಶ, ತೆಲಂಗಣದಲ್ಲಿ** ವಾಸವಾಗಿದ್ದಾರೆ. ಇವರು ರಾಷ್ಟ್ರಕೂಟರಿಗೆ ಸಂಬಂಧಿಸಿದವರಾಗಿದ್ದಾರೆ.

**ತೋಗಟವೀರಕ್ಷತ್ರೀಯ ಸಮಾಜ** : ಇವರು ಚಂದ್ರವಂಶಸ್ಥರು. **ತೋಗಟ ಅನ್ನು ತೋಗಟ, ತೋಗಟಾರು, ತೋಗಟೀಗ, ತೋಗಟವೀರ, ತೋಗಟವೀರ ಕ್ಷತ್ರೀಯ, ತೋಗಟಗೇರ, ತೋಗಜ ಪುಷ್ಪಂಜಲಿ ಎಂದು ಕರೆಯುವರು**. ಇವರು ಹಿಂದೂಧರ್ಮಕ್ಕೆ ಸೇರಿದ್ದು, ನೇಯ್ಗೆಯನ್ನು ಮೂಲವೃತ್ತಿಯಾಗಿಸಿಕೊಂಡಿದ್ದಾರೆ. ಇವರು **ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹರಾಷ್ಟ್ರ ಮತ್ತು ದಕ್ಷಿಣಒಡಿಶಾದಲ್ಲಿ** ಹೆಚ್ಚಾಗಿದ್ದರೆ. ಇವರು ತೆಲಗು ನೇಕಾರರಾಗಿದ್ದು, **ಕೋರಸೆಸ್ವ ಎಂಬ ಹತ್ತಿಬಟ್ಟೆಯನ್ನು** ನೇಯುತ್ತಾರೆ.

## ಸಾಹಿತ್ಯ ವಿಮರ್ಶೆ/ಅವಲೋಕನ

***ಹೊಸಮನಿ, ನೀಲಪ್ಪ, ಬಿ. (2002) :*** **"ಉತ್ತರ–ಕರ್ನಾಟಕದ ಕೈಮಗ್ಗ ನೇಕಾರರು–ಒಂದು ಸಮಾಜಶಾಸ್ತ್ರೀಯ ಅಧ್ಯಯನ''** ಎಂಬ ಶೀರ್ಷಿಕೆಯಡಿಯಲ್ಲಿ ವಿಮರ್ಶಾತ್ಮಕ ಅಧ್ಯಯನವನ್ನು ನೇಕಾರರ ಆರ್ಥಿಕ–ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವ ಹಾಗೂ ಅವುಗಳ ಸಮಗ್ರ ಅಧ್ಯಯನ ಮಾಡುವುದು, ಕೈಮಗ್ಗ ಉದ್ಯಮದ ಅವಶ್ಯಕತೆ, ನೇಕಾರರ ಹಿನ್ನಡೆಗೆ ಕಾರಣಗಳನ್ನು ತಿಳಿಯುವ ಉದ್ದೇಶವನ್ನಿಟ್ಟುಕೊಂಡು ಆರಂಭಿಸಿದ್ದರು. ಪ್ರಾಥಮಿಕ ದತ್ತಾಂಶಗಳನ್ನು ರಚನಾತ್ಮಕ ಮತ್ತು ಅರಚನಾತ್ಮಕ ಪ್ರಶ್ನಾವಳಿಗಳನ್ನು ಬಳಸಿ, ಉತ್ತರಕರ್ನಾಟಕದ ಆಯ್ದ ಗ್ರಾಮಗಳಲ್ಲಿ ಯಾದೃಚ್ಛಿಕ ಮಾದರಿಯನ್ನು ಅನುಸರಿಸಿ 180 ನೇಕಾರರ ಕುಟುಂಬಗಳಲ್ಲಿ 280 ನೇಕಾರರನ್ನು ಸಂದರ್ಶನ ಮಾಡಿ ಪ್ರಾಥಮಿಕ ದತ್ತಾಂಶಗಳನ್ನು ಸಂಗ್ರಹಿಸಿದ್ದಾರೆ. ಈ ಅಧ್ಯಯನದಲ್ಲಿ ನೇಕಾರರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳ ಬಗ್ಗೆ ತಿಳಿದಿದ್ದು, ಹೆಚ್ಚು ಮಹಿಳೆಯರು ಅನಕ್ಷರಸ್ಥರಾಗಿದ್ದಾರೆಂದು, ಇವರ ಕುಟುಂಬದಲ್ಲಿ ಬಡತನವು ಹೇಚ್ಚಾಗಿದೆಂದು, ಸಾಮಾಜಿಕವಾಗಿ ಹೆಚ್ಚು ಸಬಲರಿಲ್ಲವೆಂದು, ಹೆಚ್ಚು ನೇಕಾರರು ಮನೆಯ ಸಣ್ಣ–ಪುಟ್ಟ ಕಾರ್ಯಕ್ರಮಗಳಿಗೂ ಸಾಲವನ್ನು ಪಡೆಯುತ್ತಿದ್ದಾರೆಂದು ತಿಳಿದು ಬಂದಿದೆ.

***ಕೆ. ರಾಮಮೋಹನ್‌ರಾವ್ ಮತ್ತು ಕಾಕುಮನ್ ಕಿರಣಕುಮಾರ್ (2018) :*** **"ನೇಕಾರರ ಸಾಮಾಜಿಕ ಸ್ಥಿತಿಗಳ ಮೇಲೆ ಸಮಗ್ರ ಕೈ ಮಗ್ಗ ಕ್ಲಸ್ಟರ್ ಅಭಿವೃದ್ಧಿ ಯೋಜನೆಯ ಪರಿಣಾಮ : ಆಂಧ್ರಪ್ರದೇಶ"** ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧಕರು ಸಮೀಕ್ಷಾ ಅಧ್ಯಯನವನ್ನು ಆರಂಭಿಸಿದ್ದು, ಭಾರತದ ಸಮಗ್ರ ಕೈಮಗ್ಗ ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿಯಲ್ಲಿ ಒಳಗೊಂಡಿರುವ ನೇಕಾರರ ಸಾಮಾಜಿಕ ಪರಿಸ್ಥಿತಿಗಳನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಆಂಧ್ರಪ್ರದೇಶದ ಎಲ್ಲಾ ಭಾಗಗಳಲ್ಲಿಯೂ ನೇಕಾರರಿದ್ದು ಸಂಶೋಧಕರು 3 ಜಿಲ್ಲೆಗಳಾದ ಅನಂತಪುರ, ಪೂರ್ವ ಗೋದಾವರಿ, ಶ್ರೀ ಕಕುಲಮ್‌ನಲ್ಲಿ ಹೆಚ್ಚು ನೇಕಾರಿರುವ ಕಾರಣದಿಂದ ಕೋಟಾ ಮಾದರಿಯನ್ನು ಬಳಸಿ, ಆಂಧ್ರಪ್ರದೇಶದ 14 ಕ್ಲಸ್ಟರ್‌ನಲ್ಲಿನ ಮಾದರಿಯನ್ನು ಆಯ್ಕೆ ಮಾಡಿದ್ದಾರೆ. ಪ್ರತಿ ಜಿಲ್ಲೆಯಲ್ಲೂ 150 ಮಾದರಿಗಳಂತೆ 3 ಜಿಲ್ಲೆಗಳಿಂದ ಯಾದೃಚ್ಛಿಕ ಮಾದರಿ ತಂತ್ರ ಬಳಸಿ ಒಟ್ಟು 450 ಮಾದರಿಗಳನ್ನು ಆಯ್ಕೆ ಮಾಡಿದ್ದಾರೆ. ಈ ಅಧ್ಯಯನದಲ್ಲಿ ಸಮೀಕ್ಷಾ ವಿಧಾನವನ್ನು ಬಳಸಿದ್ದು, ರಚಿಸಿದ ಪ್ರಶ್ನಾವಳಿಗಳನ್ನು ಉಪಕರಣವಾಗಿ ಬಳಸಿ, ಪ್ರಾಥಮಿಕ ದತ್ತಾಂಶಗಳನ್ನು ಸಂಗ್ರಹಿಸಿದ್ದಾರೆ. ಈ ಅಧ್ಯಯನದಿಂದ ನೇಕಾರರ ಕ್ಲಸ್ಟರ್ ವರ್ಧಿತ ಸಾಮಾಜಿಕ ಸ್ಥಾನಮಾನದ ಸದಸ್ಯತ್ವದಿಂದ ಎಲ್ಲಾ ಕುಟುಂಬ ಸದಸ್ಯರು ಯೋಜನೆಯಡಿಯಲ್ಲಿ ಪೂರ್ಣಸಮಯದ ಕೆಲಸವನ್ನು ಕಂಡುಕೊಂಡಿದ್ದಾರೆ, ಮಕ್ಕಳ ಶಿಕ್ಷಣವನ್ನು, ಕುಟುಂಬದ ಜೀವನ ಗುಣಮಟ್ಟವನ್ನು ಹೆಚ್ಚಿಸುತ್ತಿದ್ದಾರೆಂದು, ಯೋಜನೆಯಡಿಯಲ್ಲಿ ಭವಿಷ್ಯದ ಭದ್ರತೆ ಮತ್ತು ಸಾಮಾಜಿಕ ಸಂಬಂಧಗಳ ಸಾಮರಸ್ಯವನ್ನು ಹೆಚ್ಚಿಸುತ್ತಿದ್ದಾರೆಂದು, ಆದರೆ ನೇಕಾರರ ಸಾಮಾಜಿಕ ಪರಿಸ್ಥಿತಿಗಳ ಮೇಲೆ ಸಮಗ್ರ ಕೈಮಗ್ಗ ಕ್ಲಸ್ಟರ್ ಅಭಿವೃದ್ಧಿ ಯೋಜನೆಯು ಯಾವುದೇ ಮಹತ್ವದ ಪರಿಣಾಮವನ್ನು ಬೀರಿಲ್ಲವೆಂದು ಈ ಅಧ್ಯಯನದಿಂದ ಊಹಿಸಲಾಗಿದೆ.

***ಹಿರೇಮಠ ಅಕ್ಕಮಹಾದೇವಿ (2015) :*** **"ನೇಕಾರರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು ಮತ್ತು ಅವರ ಸಮಸ್ಯೆಗಳು : ನರಸಾಪುರ ಗದಗ ಜಿಲ್ಲೆ, ಕರ್ನಾಟಕ ರಾಜ್ಯ–ಒಂದು ಪ್ರಕರಣ ಅಧ್ಯಯನ ''**ಎಂಬ ಶಿರೋನಾಮದಡಿಯಲ್ಲಿ ಪ್ರಕರಣ ಅಧ್ಯಯನ ಮಾಡಿದ್ದಾರೆ. ಗದಗ ಜಿಲ್ಲೆಯ ನರಸಾಪುರದ ವಿಶೇಷ ಉಲ್ಲೇಖದೊಂದಿಗೆ ಕೈಮಗ್ಗ ಉದ್ಯಮದ ಪ್ರಸ್ತುತ ಪರಿಸ್ಥಿತಿಯನ್ನು ವಿಶ್ಲೇಷಿಸುವ, ನೇಕಾರರಲ್ಲಿರುವ ಸಾಮಾಜಿಕ ಪರಿಸ್ಥಿತಿಗಳು ಮತ್ತು ಸಮಾಜದಲ್ಲಿ ಅವರ ಸ್ಥಾನಮಾನಗಳನ್ನು, ಎದುರಿಸುತ್ತಿರುವ ಸಮಸ್ಯೆಗಳನ್ನು, ಕೈಮಗ್ಗ ಉದ್ಯಮಕ್ಕೆ ಸರ್ಕಾರದ ನೀತಿಗಳು, ನೇಕಾರರು ಸಮಾಜದ ಅಭಿವೃದ್ಧಿಗೆ ಕೊಡುವ ಕೊಡುಗೆಗಳನ್ನು ತಿಳಿಯುವ ಉದ್ದೇಶವನ್ನು ಹೊಂದಿದೆ. ಈ ಅಧ್ಯಯನಕ್ಕಾಗಿ ಗದಗ ಜಿಲ್ಲೆಯ ನರಸಾಪುರ ಗ್ರಾಮ ಹಾಗೂ ಅದರ ಸುತ್ತಲೂ ಸ್ಥಳವನ್ನು ಆರಿಸಿದ್ದಾರೆ. ಪ್ರಾಥಮಿಕ ದತ್ತಾಂಶಗಳನ್ನು ಪ್ರಾಯೋಗಿಕ ಸಮೀಕ್ಷೆ ವಿಧಾನದಿಂದ ಪ್ರಶ್ನಾವಳಿಗಳನ್ನು ಮತ್ತು ವೈಯಕ್ತಿಕ ಸಂದರ್ಶನದ ಮೂಲಕ ಹಾಗೂ ಸಿಬ್ಬಂದಿ ಸಂದರ್ಶನ, ಹಿರಿಯ, ವಿದ್ವಾಂಸ ವ್ಯಕ್ತಿಗಳೊಂದಿಗೆ ಚರ್ಚಿಸಿ, ಅದರ ಆಧಾರದ ಮೇಲೆ, ಹಳೆಯ ವ್ಯಾಪಾರ ಸಂಸ್ಥೆಗಳೊಂದಿಗೆ ಲಭ್ಯವಾದ ದಾಖಲೆಗಳ ಆಧಾರದ ಮೇಲೆ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಈ ಅಧ್ಯಯನದಿಂದ ಉದ್ಯಮಕ್ಕೆ ಸಂಬಂಧಿಸಿದ ಹಾಗೆ ಯಾರು ದಾಖಲಾತಿಗಳನ್ನು ನಿರ್ವಹಿಸಿಲ್ಲವೆಂದು, ಈ ಉದ್ಯಮದ ಅಭಿವೃದ್ಧಿಯ ಬಗ್ಗೆ ಯಾವುದೇ ವೈಜ್ಞಾನಿಕ ಅಧ್ಯಯನವು ಅಸ್ತಿತ್ವದಲ್ಲಿಲ್ಲವೆಂದು ತಿಳಿದಿದೆ. ವಿವಿಧ ಭಾಗಗಳಿಂದ ಜನರು ಬಂದು ನೆಲೆಸಿದ್ದಾರೆಂದು, ಅವರು ಜೀವನೋಪಾಯಕ್ಕೆಂದು ನೇಯ್ಗೆಯನ್ನು ಆರಂಭಿಸಿದ್ದಾರೆಂದು, ಇವರಿಗೆ ಸಾಮಾಜಿಕವಾಗಿ ಬೆಳೆಯಲು ಆರ್ಥಿಕ ಸಹಾಯಬೇಕೆಂದು ತಿಳಿಯಲಾಗಿದೆ.

***ಪಾಟೀಲ ಎಸ್. ಶೃತಿ (2020) :*** **"ಗದಗ ಜಿಲ್ಲೆ–ಬೆಟಗೇರಿ ನೇಕಾರ ಸಮುದಾಯ ಕಥೆ",** ಎಂಬ ಶಿರೋನಾಮದ ಸಂಶೋಧನ ಪತ್ರಿಕಾ ಅಧ್ಯಯನವು ಕ್ಲಸ್ಟರ್ ಉತ್ಪಾದಿಸುವ ವಿವಿಧ ರೀತಿಯ ರೇಷ್ಮೆ ಮತ್ತು ಹತ್ತಿಮಿಶ್ರಿತ ಸೀರೆಗಳ ಬಗ್ಗೆ ವರದಿಮಾಡುವುದು, ಮಾರುಕಟ್ಟೆ ಮೌಲ್ಯವನ್ನು, ನೇಕಾರರ ಜೀವನ ಶೈಲಿ, ಅವರ ವಾಸಸ್ಥಾನ, ಅವರ ಸೌಲಭ್ಯಗಳ ಬಗ್ಗೆ ತಿಳಿಯುವ ಉದ್ದೇಶವನ್ನು ಇಟ್ಟುಕೊಂಡಿದೆ. ಈ ಅಧ್ಯಯನದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಮೂಲ ದತ್ತಾಂಶಗಳಿಂದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಕೆಲವು ವ್ಯಕ್ತಿಗತ ಅಧ್ಯಯನವನ್ನು ಮಾಡಿದ್ದಾರೆ. ಈ ಅಧ್ಯಯನದಿಂದ ತಿಳಿಯುವುದೇನೆಂದರೆ ಬೆಟಗೇರಿಯ ಕೈಮಗ್ಗ ಉದ್ಯಮವು ಎರಡು ಶತಮಾನಗಳ ಯಶಸ್ವಿ ಇತಿಹಾಸವನ್ನು ಹೊಂದಿದೆ. 20,000ಕ್ಕೂ ಹೆಚ್ಚು ಜನರು ಈ ವೃತ್ತಿಯಲ್ಲಿ ತೊಡಗಿದ್ದಾರೆ. ಇದು ಉತ್ತಮ ಮಾರುಕಟ್ಟೆ ಹೊಂದಿದೆ. ನೇಯ್ಗೆ ಮನೆಗಳು ಶಬ್ದಗಳನ್ನು ತಡೆಯುವ ವಿಧಾನಗಳನ್ನು ಬಳಸಿ, ಸಾಂಪ್ರದಾಯಿಕ ಕಟ್ಟಡ ತಂತ್ರಗಳ ಮೂಲಕ ಮನೆ ನಿರ್ಮಾಣ ಮಾಡಿರುವುದು ಅತ್ಯುತ್ತಮವಾಗಿದೆ. ಕ್ಲಸ್ಟರ್‌ನಲ್ಲಿ ಪವರ್‌ಲೂಮ್‌ನಿಂದ ಒಟ್ಟು ಕಾರ್ಮಿಕರಲ್ಲಿ 15% ರಷ್ಟು ಕಾರ್ಮಿಕರು ಕಡಿಮೆಯಾಗಿದ್ದಾರೆ. ಇಲ್ಲಿ ಇಂದಿನ ಸನ್ನಿವೇಶವನ್ನು ವಿವರಿಸಿದ್ದಾರೆ. ಅಲ್ಲದೆ ಇದು ಆಗಾಗ ವಲಸೆಗೂ ಕಾರಣವಾಗಿದೆಂದು ಈ ಅಧ್ಯಯನದಿಂದ ಕಂಡುಬಂದಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಸಂಶೋಧನಾ ವಿಧಾನ

**ಸಂಶೋಧನಾ ಅಧ್ಯಯನದ ವ್ಯಾಪ್ತಿ :** ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ, ಗದಗ ತಾಲೂಕಿಗೆ ಈ ಅಧ್ಯಯನ ಸೀಮಿತವಾಗಿದೆ.

## ಸಂಶೋಧನಾ ಅಧ್ಯಯನದ ಉದ್ದೇಶಗಳು

- ಸಾಮಾಜಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.
- ಕೈಮಗ್ಗ ನೇಕಾರರ ವೃತ್ತಿಯಲ್ಲಿರುವ ವಿವಿಧ ಜಾತಿಗಳನ್ನು ತಿಳಿಯುವುದು
- ಕೈಮಗ್ಗ ನೇಕಾರರ ಶೈಕಣಿಕ ಸ್ಥಿತಿ ತಿಳಿಯುವುದು.

## ಸಂಶೋಧನಾ ಅಧ್ಯಯನದ ಸಮಸ್ಯೆ ಕುರಿತಾದ ಹೇಳಿಕೆ

ಆಹಾರ ಮತ್ತು ವಸತಿಯಂತೆಯೇ ಬಟ್ಟೆಯೂ ಮಾನವನ ಮೂಲಭೂತ ಅವಶ್ಯಕತೆಯಾಗಿದೆ. 19ನೇ ಶತಮಾನದವರೆಗೆ ಬಟ್ಟೆ ಉತ್ಪಾದನೆಗೆ ಯಾವುದೇ ಯಂತ್ರಗಳಿಲ್ಲದಿದ್ದಾಗ, ಕೈಮಗ್ಗ ಉದ್ಯಮವು ಪ್ರಪಂಚದ ಸಂಪೂರ್ಣ ಅಗತ್ಯಕ್ಕೆ ಬಟ್ಟೆಯ ಏಕೈಕ ಪೂರೈಕೆದಾರವಾಗಿತ್ತು. ಕೈಮಗ್ಗ ನೇಯ್ಗೆಯು ಭಾರತದ ಅತಿದೊಡ್ಡ ಗುಡಿಕೈಗಾರಿಕೆ ಮತ್ತು ಕಾರ್ಮಿಕರನ್ನು ಹೆಚ್ಚು ಹೊಂದಿರುವ ಕ್ಷೇತ್ರವಾಗಿದೆ. ಆದರೆ ಅವರು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಕಾಣಸಿಗುತ್ತಿಲ್ಲ. ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಅತಿ ಅವಶ್ಯವಾಗಿದೆ. ಆದ ಕಾರಣ ಗದಗ ತಾಲೂಕಿನ ಕೈಮಗ್ಗ ನೇಕಾರರು ಪಾರಂಪರಿಕವಾಗಿ ಕೈಮಗ್ಗವನ್ನು ತಮ್ಮ ಜೀವನೋಪಾಯ ವೃತ್ತಿಯಾಗಿ ಅಳವಡಿಸಿಕೊಂಡಿದ್ದು, ಪ್ರಸ್ತುತ ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಹಾಗೂ ನೇಕಾರರ ವೃತ್ತಿಯಲ್ಲಿರುವ ವಿವಿಧ ಜಾತಿಗಳನ್ನು ತಿಳಿಯುವುದು, ಶೈಕ್ಷಣಿಕ ಸ್ಥಿತಿ ತಿಳಿಯುವುದಕ್ಕೆ ಈ ಅಧ್ಯಯನ ಮಹತ್ವದ್ದಾಗಿದೆ.



## ಸಂಶೋಧನಾ ಕ್ಷೇತ್ರ

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ, ಗದಗ ತಾಲೂಕಿನ ಅಡಿಯಲ್ಲಿ ಬರುವ ಬೆಟಗೇರಿ, ನರಸಾಪುರದ ಸುತ್ತಲಿನ ಸ್ಥಳಗಳನ್ನು ಈ ಸಂಶೋಧನ ಅಧ್ಯಯನಕ್ಕಾಗಿ ಆಯ್ಕೆ ಮಾಡಲಾಗಿದೆ.

**ಸಂಶೋಧನಾ ವಿಧಾನ : ಗುಣಾತ್ಮಕ** ಸಂಶೋಧನ ವಿಧಾನವನ್ನು ಬಳಸಲಾಗಿದೆ.

**ಸಂಶೋಧನಾ ವಿನ್ಯಾಸ : ವಿವರಣಾತ್ಮಕವಾದ** ಸಂಶೋಧನ ವಿನ್ಯಾಸವನ್ನು ಬಳಸಲಾಗಿದೆ.

**ಸಂಶೋಧನಾ ಮಾದರಿ ವಿಧಾನ : ಉದ್ದೇಶಿತವಾದ ಮಾದರಿ ವಿಧಾನವನ್ನು** ಆಯ್ಕೆ ಮಾಡಿಕೊಂಡಿದೆ.

**ನಮೂನೆ ಮತ್ತು ಮಾದರಿ ನಮೂನೆಗಾತ್ರ :** 100 ನಮೂನೆಗಳನ್ನು ಸರಳ ಯಾದೃಚ್ಛಿಕನಮೂನೆಯ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ.

## ದತ್ತಾಂಶ ಸಂಗ್ರಹಣೆಯ ಪರಿಕರಗಳು/ಉಪಕರಣಗಳು

- **ಪೂರ್ವ ಪರೀಕ್ಷೆ :** ಸಂಶೋಧಕರು ವಿವಿಧ ಕಡೆಗಳಿಂದ ಮಾಹಿತಿಸಂಗ್ರಹಿಸಿ, ತಮ್ಮ ಉದ್ದೇಶಗಳನ್ನು ತಲುಪುವಂತೆ ತೆರೆದ ಸಂದರ್ಶನ–ಅನುಸೂಚಿಯನ್ನು ರಚಿಸಿ, ಕ್ಷೇತ್ರ ಭೇಟಿ ಮಾಡಿ, ನಮೂನೆಯ 10% ರಷ್ಟು ಮಾಹಿತಿದಾರರೊಂದಿಗೆ ಸಂದರ್ಶನ – ಅನುಸೂಚಿಯನ್ನು ಪ್ರಾಯೋಗಿಕವಾಗಿ ಪರೀಕ್ಷಿಸಿ, ನಂತರದಲ್ಲಿ ಸೂಕ್ತ ಬದಲಾವಣೆ ಮಾಡಿ ಮುಚ್ಚಿದ ಸಂದರ್ಶನ–ಅನುಸೂಚಿಯನ್ನು ರಚಿಸಲಾಗಿದೆ.
- **ಸಂದರ್ಶನ–ಅನುಸೂಚಿ :** ಸಂಶೋಧಕರು ಪೂರ್ವ ಪರೀಕ್ಷೆಯ ನಂತರದಲ್ಲಿ ತಯಾರಿಸಿದ ಮುಚ್ಚಿದ ಸಂದರ್ಶನ–ಅನುಸೂಚಿಯನ್ನು ಬಳಸಿ, ಪೂರ್ವಪರೀಕ್ಷೆ ಮಾಡಿದವರನ್ನು ಬಿಟ್ಟು ಇತರೆ 100 ಮಾಹಿತಿದಾರರಿಗೆ ಸಂದರ್ಶನ ಮಾಡಲಾಗಿದೆ. ಪ್ರತಿಯೊಬ್ಬರೊಂದಿಗೆ 30 ನಿಮಿಷಗಳ ಕಾಲ ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.
- **ಸಂಖ್ಯಾಶಾಸ್ತ್ರೀಯ ಪರಿಕರಗಳು :** ಟೇಬಲ್‌ಗಳನ್ನು/ಪಟ್ಟಿಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಪ್ರಾಥಮಿಕ ದತ್ತಾಂಶದ ಸಹಾಯದಿಂದ ತಯಾರಿಸಲಾಗುತ್ತದೆ. ದತ್ತಾಂಶವನ್ನು ವಿಶ್ಲೇಷಿಸಲು ಶೇಕಡಾವಾರು, ಸರಾಸರಿಯನ್ನು ಅನ್ವಯಿಸಲಾಗಿದೆ.

**ದತ್ತಾಂಶ ಸಂಗ್ರಹಣೆಯ ಮೂಲಗಳು :** ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳ ಮೂಲಕ ಮಾಹಿತಿಸಂಗ್ರಹಿಸಲಾಗಿದೆ.

**ಕೋಷ್ಟಕ 1 : ಮಾಹಿತಿದಾರರ ಸಂಖ್ಯೆ/ಲಿಂಗದ ಮಾಹಿತಿ**

| ಲಿಂಗ | ಆವೃತ್ತಿ=100 | ಪ್ರತಿಶತ(%) |
|---|---|---|
| ಗಂಡು | 42 | 42 |
| ಹೆಣ್ಣು | 58 | 58 |

ಈ ಕೋಷ್ಟಕವು ಮಾಹಿತಿದಾರರ ಲಿಂಗದ ಮಾಹಿತಿಯನ್ನು ಒಳಗೊಂಡಿದ್ದು, 42%ರಷ್ಟು ಗಂಡು, 58%ರಷ್ಟು ಹೆಣ್ಣು, ತೃತೀಯಲಿಂಗಿಗಳು ಯಾರೂ ಕಂಡುಬಂದಿಲ್ಲವೆಂದು ತಿಳಿಯಬಹುದು. ಈ ವೃತ್ತಿಯಲ್ಲಿ ಹೆಣ್ಣು ಮಕ್ಕಳೇ ಹೆಚ್ಚಾಗಿದ್ದಾರೆಂದು ತಿಳಿಯುತ್ತದೆ.

**ಕೋಷ್ಟಕ 2 : ಮಾಹಿತಿದಾರರ ಶಿಕ್ಷಣದ ಮಾಹಿತಿ**

| ಶಿಕ್ಷಣ | ಆವೃತ್ತಿ=100 | ಪ್ರತಿಶತ(%) |
|---|---|---|
| ಅನಕ್ಷರಸ್ಥರು | 29 | 29 |
| ಪ್ರಾಥಮಿಕ (1–7ನೇತರಗತಿ) | 36 | 36 |
| ಪ್ರೌಢಶಿಕ್ಷಣ (8–10ನೇತರಗತಿ) | 24 | 24 |
| ಪದವಿಪೂರ್ವ (10+2) | 08 | 08 |
| ಪದವಿ | 02 | 02 |
| ಸ್ನಾತಕೋತ್ತರಪದವಿ | 01 | 01 |

ಈ ಕೋಷ್ಟಕವು ಮಾಹಿತಿದಾರರ ಶಿಕ್ಷಣದ ಮಾಹಿತಿಯನ್ನು ಒಳಗೊಂಡಿದ್ದು, 29%ರಷ್ಟು ಅನಕ್ಷರರಸ್ಥರು, 36%ರಷ್ಟು ಪ್ರಾಥಮಿಕ (1–7ನೇತರಗತಿ), 24%ರಷ್ಟು ಪ್ರೌಢ ಶಿಕ್ಷಣ(8–10ನೇತರಗತಿ), 08%ರಷ್ಟು ಪದವಿಪೂರ್ವ(10+2). 2%ರಷ್ಟು ಪದವಿ, 1%ರಷ್ಟು ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಮಾಹಿತಿದಾರರು ಪಡೆದಿದ್ದಾರೆಂದು ತಿಳಿಯಬಹುದು.

ಈ ವೃತ್ತಿಯಲ್ಲಿ ಅತಿ ಹೆಚ್ಚು 36%ರಷ್ಟು ಪ್ರಾಥಮಿಕ (1ರಿಂದ7ನೇ ತರಗತಿ) ಶಿಕ್ಷಣವನ್ನು ಪಡೆದಿದ್ದಾರೆ. ಅತಿ ಕಡಿಮೆ 1%ರಷ್ಟು ಸ್ನಾತಕೋತ್ತರ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪದವಿ ಶಿಕ್ಷಣವನ್ನು ಪಡೆದಿದ್ದಾರೆ. ಈ ಮೂಲಕ ಉನ್ನತ ಶಿಕಣವನ್ನು ಅತಿ ಕಡಿಮೆ ಜನರು ಪಡೆದಿದ್ದಾರೆಂದು, ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನೀಡಿಲ್ಲವೆಂದು ತಿಳಿಯಬಹುದು.

**ಕೋಷ್ಟಕ 3 : ಮಾಹಿತಿದಾರರ ಜಾತಿ ಮಾಹಿತಿ**

| ಜಾತಿ | ಆವೃತ್ತಿ=100 | ಪ್ರತಿಶತ(%) |
|---|---|---|
| ಅನಕ್ಷರಸ್ಥರು | 29 | 29 |
| ದೇವಾಂಗ | 18 | 18 |
| ಕುರುವಿನಶೆಟ್ಟಿ | 47 | 47 |
| ಸಕುಳಸಾಲಿ | 06 | 06 |
| ನಾಮದೇವ–ಸಿಂಪಿ | 11 | 11 |
| ನಾಯಕ | 02 | 02 |
| ಲಿಂಗಾಯತ/ಪಂಚಮಸಾಲಿ | 02 | 02 |
| ಪದಮಸಾಲಿ | 06 | 06 |
| ಸಾವಜಿ/ಕ್ಷತ್ರೀಯ | 02 | 02 |
| ರೆಡ್ಡಿ | 01 | 01 |
| ತೋಗಟವೀರ ಕ್ಷತ್ರೀಯ ಸಮಾಜ | 05 | 05 |

ಈ ಕೋಷ್ಟಕವು ಮಾಹಿತಿದಾರರ ಜಾತಿ ಮಾಹಿತಿಯನ್ನು ಒಳಗೊಂಡಿದ್ದು, ದೇವಾಂಗ 18%ರಷ್ಟು, ಕುರುವಿನಶೆಟ್ಟಿ 47%ರಷ್ಟು, ಸ್ವಕುಳಸಾಲಿ 6%ರಷ್ಟು, ನಾಮದೇವ–ಸಿಂಪಿ 11%ರಷ್ಟು, ನಾಯಕ 2%ರಷ್ಟು, ಲಿಂಗಾಯತ/ಪಂಚಮಸಾಲಿ 2%ರಷ್ಟು, ಪದಮಸಾಲಿ 6%ರಷ್ಟು, ಸಾವಜಿ/ಕ್ಷತ್ರೀಯ 2%ರಷ್ಟು, ರೆಡ್ಡಿ 1%ರಷ್ಟು, ತೋಗಟವೀರ ಕ್ಷತ್ರೀಯ ಸಮಾಜ 5%ರಷ್ಟು ಇದ್ದಾರೆಂದು ತಿಳಿಯಬಹುದು.

ಮಾಹಿತಿದಾರರಲ್ಲಿ ಅತಿಹೆಚ್ಚು ಕುರುವಿನಶಟ್ಟಿ 47%ರಷ್ಟು ಇದ್ದು, ಅತಿ ಕಡಿಮೆ ರೆಡ್ಡಿ 1%ರಷ್ಟು ಇದ್ದಾರೆಂದು, ಈ ವೃತ್ತಿಯಲ್ಲಿ ಎಲ್ಲ ಜಾತಿಯವರು ಇರುವರೆಂದು ತಿಳಿಯಬಹುದು. ಎಲ್ಲ ಜಾತಿಯವರು ಅವರದೇ ಆರಾಧ್ಯ ದೇವರನ್ನು ಹೊಂದಿದ್ದು, ಬೇರೆ ಬೇರೆ ದೇವರುಗಳನ್ನು ಪೂಜಿಸುತ್ತಾರೆ. ಅತಿಹೆಚ್ಚು ಕುರುವಿನಶಟ್ಟಿ 47%ರಷ್ಟು ಇದ್ದು, ಇವರು ನೀಲಕಂಠೇಶ್ವರನನ್ನು ಪೂಜಿಸುತ್ತಾರೆ.

**ಕೋಷ್ಟಕ 4 : ಮಾಹಿತಿದಾರರ ಕುಟುಂಬದ ವಿಧದ ಮಾಹಿತಿ**

| ಕುಟುಂಬದ ವಿಧ | ಆವೃತ್ತಿ=100 | ಪ್ರತಿಶತ(%) |
|---|---|---|
| ವಿಭಕ್ತ | 85 | 85 |
| ಅವಿಭಕ್ತ | 15 | 15 |

ಈ ಕೋಷ್ಟಕವು ಮಾಹಿತಿದಾರರ ಕುಟುಂಬದ ವಿಧದ ಮಾಹಿತಿಯನ್ನು ಒಳಗೊಂಡಿದ್ದು, ವಿಭಕ್ತಕುಟುಂಬ 85%ರಷ್ಟು, ಅವಿಭಕ್ತ ಕುಟುಂಬ15%ರಷ್ಟು ಇದ್ದಾರೆಂದು ತಿಳಿಯಬಹುದು.

**ಕೋಷ್ಟಕ 5. : ಮಾಹಿತಿದಾರರ ಸಂಘ–ಸಂಸ್ಥೆಗಳ ಸದಸ್ಯತ್ವದ ಮಾಹಿತಿ**

| ಸಂಘ–ಸಂಸ್ಥೆಗಳು | ಆವೃತ್ತಿ=100 | ಪ್ರತಿಶತ(%) |
|---|---|---|
| ಸಮುದಾಯ ಸಂಘ | 50 | 38.46 |
| ಸ್ವ–ಸಹಾಯ ಸಂಘ | 37 | 28.46 |
| ಸಹಕಾರಿ ಸಂಘ | 05 | 3.85 |
| ಇತರೆ | 30 | 23.08 |
| ಯಾವುದು ಇಲ್ಲಾ | 08 | 6.15 |

* ಕೆಲವರು ಒಂದಕ್ಕಿಂತ ಹೆಚ್ಚು ಪ್ರತಿಕ್ರಿಯೆಗಳನ್ನು ನೀಡಿರುತ್ತಾರೆ.

ಈ ಕೋಷ್ಟಕವು ಮಾಹಿತಿದಾರರ ಸಂಘ–ಸಂಸ್ಥೆಗಳ ಸದಸ್ಯತ್ವದ ಮಾಹಿತಿಯನ್ನು ಒಳಗೊಂಡಿದ್ದು, ಮಾಹಿತಿದಾರರು ಒಂದಕ್ಕಿಂತ ಹೆಚ್ಚು ಸಂಘ–ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದಿದ್ದಾರೆ. ಸಮುದಾಯ–ಸಂಘಗಳಲ್ಲಿ ಅರ್ಧದಷ್ಟು ಮಾಹಿತಿದಾರರು ಇದ್ದಾರೆಂದು ತಿಳಿಯಬಹುದು.

## ಫಲಿತಾಂಶಗಳು

- ಈ ವೃತ್ತಿಯಲ್ಲಿ ಹೆಚ್ಚಿನವರು ಮಹಿಳೆಯರು ಇದ್ದಾರೆ ಹಾಗೂ ಅನಕ್ಷರಸ್ಥರಾಗಿದ್ದಾರೆಂದು, ಹೆಚ್ಚು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ, ಹಾಗೂ ಉನ್ನತ ಶಿಕ್ಷಣವನ್ನು ಯಾರು ಪಡೆದಿಲ್ಲವೆಂದು, ಇವರಲ್ಲಿ ಶಿಕ್ಷಣದಲ್ಲಿ ತಿಳುವಳಿಕೆ ಕಡಿಮೆ ಇದೆ ಹಾಗೂ ಈ ವೃತ್ತಿಗೆ ಯಾವುದೇ ಶೈಕ್ಷಣಿಕ ಅರ್ಹತೆ ಇರುವುದಿಲ್ಲವೆಂದು ಈ ಅಧ್ಯಯನದಿಂದ ತಿಳಿದಿದೆ.
- ಈ ವೃತ್ತಿಯಲ್ಲಿ ಎಲ್ಲರೂ ಹಿಂದೂ ಧರ್ಮದವರೆ ಇದ್ದು, ಅನೇಕ ವಿಧದ ಜಾತಿಯುಯವರು ಈ ವೃತ್ತಿಯನ್ನು ತಮ್ಮ ಜೀವನೋಪಾಯಕ್ಕೆಂದು ಹೊಂದಿದ್ದು, ಎಲ್ಲ ಜಾತಿಯವರು ಅವರದೇ ಕುಲಕಸುಬನ್ನು, ಆರಾಧ್ಯ ದೇವರು/ಕುಲಗುರುವನ್ನು ಹೊಂದಿದ್ದು, ವಿಶೇಷವಾಗಿ ಅವರ ಹಬ್ಬಗಳನ್ನು ಆಚರಿಸುತ್ತಾರೆ. ಹೆಚ್ಚು ಕುರುವಿನಶೆಟ್ಟಿಯವರು ಇದ್ದು, ಇವರು ನೀಲಕಂಠೇಶ್ವರನನ್ನು ಆರಾಧಿಸುತ್ತಾರೆ.
- ಈ ವೃತ್ತಿಯಲ್ಲಿ ವಿಭಕ್ತ ಕುಟುಂಬಗಳು ಹೆಚ್ಚಾಗಿದ್ದು, ಕುಟುಂಬದ ಸದಸ್ಯರು ವೃತ್ತಿಗೆ ಸಹಾಯ ಮಾಡುತ್ತಾರೆ. ಇವರಿಗೆ ಮನೆಗಳು ಇದ್ದು, ಕೃಷಿ ಭೂಮಿಯನ್ನು ಯಾರು ಹೊಂದಿಲ್ಲವೆಂದು ಕಂಡುಬಂದಿದೆ.
- ಮಾಹಿತಿ ನೀಡಿದ ಅರ್ಧಕ್ಕಿಂತ ಹೆಚ್ಚಿನವರು ಅವರ ಸಮುದಾಯ–ಸಂಘಟನೆಗಳಲ್ಲಿ ವಿವಿಧ ಕಾರಣಗಳಿಗಾಗಿ ಸೇರಿದ್ದಾರೆಂದು ತಿಳಿದಿದೆ.

## ಮುಂದಿನ ಅಧ್ಯಯನಕ್ಕಾಗಿ ಸಲಹೆಗಳು

- ಗದಗ ಜಿಲ್ಲೆಯನ್ನು ಆಯ್ಕೆಮಾಡಿಕೊಳ್ಳುವುದು.
- ಗದಗ ತಾಲೂಕಿನಲ್ಲಿ ಹಿಂದೆ ಹಾಗೂ ಪ್ರಸ್ತುತವಾಗಿ ಕೈಮಗ್ಗ ವೃತ್ತಿ ಮಾಡುವವರನ್ನು ಮಾಹಿತಿದಾರರಾಗಿ ಆಯ್ಕೆಮಾಡಿ ಕೊಳ್ಳುವುದು.
- ಕುಟುಂಬದಲ್ಲಿ ಇದೇ ವೃತ್ತಿ ಮಾಡುತ್ತಿರುವ ಎಲ್ಲರಿಂದ ಮಾಹಿತಿ ಪಡೆಯಬಹುದು.
- ಕೈಮಗ್ಗನೇಕಾರರ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರಗಳ ಆಳ ಅಧ್ಯಯನ ಮಾಡಬಹುದು.
- ನೇಕಾರರೊಂದಿಗೆ ಮಾಸ್ಟರ್ ನೇಕಾರರು, ಸೊಸೈಟಿಗಳಲ್ಲಿ ಕೆಲಸ ಮಾಡುವವರ ಸಾಮಾಜಿಕ ಸ್ಥಿತಿಗತಿ ಅಧ್ಯಯನ ಮಾಡಬಹುದು.

## ಉಪಸಂಹಾರ

ಭಾರತೀಯರು ಸಮಾಜ, ಸಂಪ್ರದಾಯಕ್ಕೆ ಬದ್ಧವಾಗಿ ನಡೆಯುವವರು. ಅದರ ಚೌಕಟ್ಟಿನಲ್ಲಿ ಜೀವಿಸುವರು. ಸಮಾಜದ ಕಟ್ಟುಪಾಡುಗಳಿಗೆ ಗೌರವ ನೀಡಲು ಸಮಾಜದಲ್ಲಿ ಎದುರಾಗುವ ಸಮಸ್ಯೆಗಳನ್ನು ಲೆಕ್ಕಿಸದೆ ತಲೆಬಾಗುತ್ತಿದ್ದಾರೆ. ಪ್ರಸ್ತುತ ನೇಕಾರರಿಗೆ ಉತ್ತಮ ಜೀವನಕ್ಕಾಗಿ ಉಚಿತವಾದ ಮನೆ, ನೇಯ್ಗೆಯ ಉಪಕರಣವನ್ನು ಸರ್ಕಾರ

*– 94ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಸುಸ್ಥಿರ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರ : ಕೊಡಗು ಜಿಲ್ಲೆಯ ವಿಶೇಷ ಅಧ್ಯಯನ

✍ **ರಶ್ಮಿ,** ಸಂಶೋಧನಾ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ, ಫೀಲ್ಡ ಮಾರ್ಷಲ್ ಕೆ.ಎಮ್. ಕಾರಿಯಪ್ಪ ಕಾಲೇಜು, ಮಡಿಕೇರಿ

✍ **ಡಾ. ಟಿ.ಡಿ. ತಿಮ್ಮಯ್ಯ,** ಸಂಶೋಧನಾ ಮಾರ್ಗದರ್ಶಕರು, ನಿವೃತ್ತ ಪ್ರಾಂಶುಪಾಲರು ಮತ್ತು ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಫೀಲ್ಡ ಮಾರ್ಷಲ್ ಕೆ.ಎಮ್. ಕಾರಿಯಪ್ಪ ಕಾಲೇಜು, ಮಡಿಕೇರಿ

*ಸಾರಾಂಶ*

*ಭಾರತದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆರ್ಥಿಕ ಸೇವೆಗಳು ಪ್ರಮುಖ ಪಾತ್ರ ವಹಿಸುತ್ತಿವೆ ಹಾಗೂ ಬಡತನ ಮತ್ತು ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಅನೇಕ ರೀತಿಯ ಹಣಕಾಸು ಸೌಲಭ್ಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಆದರೆ, ಭಾರತವು ಗ್ರಾಮಗಳ ದೇಶವಾಗಿದ್ದು ಗ್ರಾಮೀಣ ಪ್ರದೇಶದ ಹೆಚ್ಚಿನ ಜನರು ಬ್ಯಾಂಕಿಂಗ್ ಸೇವೆಗಳಿಂದ ಹೊರ ಉಳಿದಿದ್ದಾರೆ. ಅಲ್ಲದೆ ತಮ್ಮ ಹಣಕಾಸು ಅವಶ್ಯಕತೆಗಳನ್ನು ಪೂರೈಸಲು ಅನೌಪಚಾರಿಕ ಮೂಲಗಳಿಂದ ಅಧಿಕ ಬಡ್ಡಿ ದರದಲ್ಲಿ ಸಾಲ ಪಡೆಯುತ್ತಿದ್ದಾರೆ. ಇದರಿಂದ ಔಪಚಾರಿಕ ಮತ್ತು ಅನೌಪಚಾರಿಕ ಹಣಕಾಸು ವ್ಯವಸ್ಥೆಯ ಅಂತರ ಹೆಚ್ಚಾಗುತ್ತಿದೆ. ಈ ಸಮಸ್ಯೆಯನ್ನು ಅಧ್ಯಯನ ಮಾಡಲು ಪ್ರಸ್ತುತ ಲೇಖನವು ಮೂರು ಉದ್ದೇಶಗಳನ್ನು ಹೊಂದಿದೆ. ಅವುಗಳೆಂದರೆ, ಸುಸ್ಥಿರ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರ ಮತ್ತು ಕೊಡಗು ಜಿಲ್ಲೆಯಲ್ಲಿ ಆರ್ಥಿಕ ಸೇರ್ಪಡೆಯ ಪ್ರಗತಿ ಮತ್ತು ಪ್ರವೃತ್ತಿ ಹಾಗೂ ಆರ್ಥಿಕ ಸೇರ್ಪಡೆಗೆ ಅಡ್ಡಿಯಾಗಿರುವ ಪ್ರಮುಖ ಸವಾಲುಗಳನ್ನು ಗುರುತಿಸುವುದಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವು ಸುಸ್ಥಿರ ಅಭಿವೃದ್ಧಿ ಮತ್ತು ಆರ್ಥಿಕ ಸೇರ್ಪಡೆಯ ನಡುವೆ ಇರುವ ಸಂಬಂಧವನ್ನು ವಿಶ್ಲೇಷಿಸಲು ಗುಣಾತ್ಮಕ ಮತ್ತು ಪರಿಮಾಣಾತ್ಮಕ ಆಧಾರಗಳಿಂದ ವಿಶ್ಲೇಷಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಒಟ್ಟು 150 ಮಾಹಿತಿದಾರರಿಂದ ಪ್ರಾಥಮಿಕ ಮಾಹಿತಿಯನ್ನು ಹಾಗೂ ಇತರೆ ಬ್ಯಾಂಕಿಂಗ್ ಕ್ಷೇತ್ರದಿಂದ ಅನುಷಾಂಗಿಕ ಮಾಹಿತಿಯನ್ನು ಕೊಡುಗು ಜಿಲ್ಲೆಯ ಮೂರು ತಾಲೂಕುಗಳಿಂದ ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಸಂಗ್ರಹಿಸಲಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವು "ಸುಸ್ಥಿರ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರ: ಕೊಡಗು ಜಿಲ್ಲೆಯ ವಿಶೇಷ ಅಧ್ಯಯನವನ್ನು ಒಳಗೊಂಡಿದೆ.*

*ಕೀಲಿ ಪದಗಳು : ಆರ್ಥಿಕ ಸೇರ್ಪಡೆ, ಪ್ರಗತಿ, ಪ್ರವೃತ್ತಿ, ಸವಾಲು.*

## ಪೀಠಿಕೆ

ಆರ್ಥಿಕ ಸೇರ್ಪಡೆಯ ಪರಿಕಲ್ಪನೆಯನ್ನು ಭಾರತದಲ್ಲಿ ಮೊದಲ ಭಾರಿಗೆ 2005ರಲ್ಲಿ ಭಾರತದ ರಿಸರ್ವ ಬ್ಯಾಂಕ್ ಪರಿಚಯಿಸಿತು. ಭಾರತದಲ್ಲಿ ಹಣಕಾಸಿನ ಸುಧಾರಣೆಗಳಿಗಾಗಿ ಇಷ್ಟು ವರ್ಷಗಳಾದರೂ ಕೂಡ ಗ್ರಾಮೀಣ ಪ್ರದೇಶದ ಜನರು ಬ್ಯಾಂಕಿಂಗ್ ಸೇವೆಗಳಿಂದ ದೂರ ಉಳಿದಿದ್ದಾರೆ. ಆದ್ದರಿಂದ ಗ್ರಾಮೀಣ ಜನರು ಬ್ಯಾಂಕ್‌ಗಳಲ್ಲಿ ಖಾತೆ ತೆರೆಯುವುದರ ಮೂಲಕ ಸಾಲ, ಉಳಿತಾಯ, ವಿಮೆ, ಹೂಡಿಕೆ, ಪಿಂಚಣಿ, ಪಾವತಿ ಮತ್ತು ಸ್ವೀಕೃತಿಯಂತಹ ಇತರೆ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಗ್ರಾಮೀಣ ಪ್ರದೇಶದ ಮತ್ತು ಆರ್ಥಿಕವಾಗಿ ಹಿಂದುಳಿದ ಜನರ ಜೀವನ ಮಟ್ಟ ಹೆಚ್ಚಿಸಲು ಅನೇಕ ರೀತಿಯ ಕಾರ್ಯಕ್ರಮಗಳನ್ನು ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ ಬ್ಯಾಂಕ್ ಜಾರಿಗೆ ತಂದಿದೆ. ಅವುಗಳೆಂದರೆ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ, ಅಟಲ್ ಪಿಂಚಣಿ ಯೋಜನೆ, ಪ್ರಧಾನ ಮಂತ್ರಿ ಭೀಮಾ ಸುರಕ್ಷ ಯೋಜನೆ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ, ಪ್ರಧಾನ ಮಂತ್ರಿ ಮುದ್ರಾ ಯೋಜನೆ, ಸುಕನ್ಯಾ ಸಂವೃದ್ಧಿ ಯೋಜನೆ ಮತ್ತು ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಇತ್ಯಾದಿ.

ಪ್ರಸ್ತುತ ಭಾರತದಲ್ಲಿ ಆರ್ಥಿಕ ಸೇರ್ಪಡೆ ಯೋಜನೆಗಳಿಂದ ಅನೇಕ ಸುಧಾರಣೆಗಳುಂಟಾಗುತ್ತಿವೆ. ಈ ದೃಷ್ಟಿಯಲ್ಲಿ ಭಾರತದ ರಿಸರ್ವ ಬ್ಯಾಂಕಿನ ಮಾಜಿ ಗವರ್ನರ್ ಸಿ. ರಂಗರಾಜನ್ ರವರು (2008) ಆರ್ಥಿಕ ಸೇರ್ಪಡೆಯನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ. "ಕಡಿಮೆ ಆದಾಯದ ಮತ್ತು ದುರ್ಬಲ ವರ್ಗದ ಜನರಿಗೆ ಕೈಗೆಟುಕುವ ವೆಚ್ಚದಲ್ಲಿ ಸೂಕ್ತವಾದ ಬ್ಯಾಂಕಿಂಗ್ ಸೌಲಭ್ಯಗಳನ್ನು ಮತ್ತು ಹಣಕಾಸು ಸೇವೆಗಳನ್ನು ಒದಗಿಸುವ ಪ್ರಕ್ರಿಯೆಯಾಗಿದೆ". ಅಲ್ಲದೆ "ಹಣಕಾಸಿನ ಸೇವೆಗಳನ್ನು ಉಪಯೋಗಿಸಿ ಕೊಳ್ಳಲು ಎಲ್ಲಾ ಜನರಿಗೂ ಸಮಾನವಾದ ಅವಕಾಶ ಒದಗಿಸುವುದು". ಎಂದು ವ್ಯಾಖ್ಯಾನಿಸಲಾಗಿದೆ. ಆರ್ಥಿಕ ಸೇರ್ಪಡೆ ಯೋಜನೆಯ ಮುಖ್ಯ ಉದ್ದೇಶವೆಂದರೆ, ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ ಪ್ರದೇಶಗಳಲ್ಲಿ ಬ್ಯಾಂಕುಗಳನ್ನು ಸ್ಥಾಪಿಸುವುದರ ಮೂಲಕ ಹಣಕಾಸು ಸೌಲಭ್ಯಗಳನ್ನು ದುರ್ಬಲ ವರ್ಗದ ಜನರಿಗೆ ಒದಗಿಸುವುದಾಗಿದೆ. ಅಂದರೆ ಕೇವಲ ಬ್ಯಾಂಕ್ ಖಾತೆಯನ್ನು ತೆರೆಯುವುದು ಮಾತ್ರವಲ್ಲದೆ, ಸಾಲ ಸೌಲಭ್ಯ, ಉಳಿತಾಯ, ಹೂಡಿಕೆ, ಪಿಂಚಣಿ, ವಿಮೆ, ಠೇವಣಿ ಇತ್ಯಾದಿ ಸೇವೆಗಳನ್ನು ಜನರಿಗೆ ಕಡಿಮೆ ವೆಚ್ಚದಲ್ಲಿ ತಲುಪಿಸುವುದಾಗಿದೆ. ಈ ಸೇವೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ಸಮರ್ಪಕವಾಗಿ ಒದಗಿಸುವುದರ ಮೂಲಕ ಹಣಕಾಸು ವ್ಯವಸ್ಥೆಗೆ ಒಳಗೊಳ್ಳುವಂತೆ ಮಾಡುವುದು ಮತ್ತು ಸುಸ್ಥಿರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಆರ್ಥಿಕ ಸೇರ್ಪಡೆಯ ಮುಖ್ಯ ಉದ್ದೇಶವಾಗಿದೆ.

## ಭಾರತದಲ್ಲಿ ಆರ್ಥಿಕ ಸೇರ್ಪಡೆ

ಭಾರತದ ಹಣಕಾಸು ಸಚಿವಾಲಯವು 2004ರಲ್ಲಿ "ಖಾನ್ ಕಮಿಷನ್" ಶಿಫಾರಸ್ಸಿನ ಆಧಾರದ ಮೇಲೆ ಭಾರತದ ರಿಸರ್ವ ಬ್ಯಾಂಕಿನ ಮಾಜಿ ಗವರ್ನರ್ ಆದ ವೈ. ವೇಣುಗೋಪಾಲರೆಡ್ಡಿ ಅವರು ಏಪ್ರಿಲ್–2005ರಲ್ಲಿ 'ಆರ್ಥಿಕ ಸೇರ್ಪಡೆ' ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದರು ಹಾಗೂ 11ನೇ ಪಂಚವಾರ್ಷಿಕ ಯೋಜನೆಯಲ್ಲಿ "ಶೀಘ್ರ ಮತ್ತು ಅಂತರ್ಗತ ಬೆಳವಣಿಗೆಯ ಕಡೆಗೆ" ಎಂಬ ಧ್ಯೇಯದ ಮೂಲಕ ಭಾರತದಲ್ಲಿ ಆರ್ಥಿಕ ಸೇರ್ಪಡೆಯ ಯೋಜನೆಯನ್ನು ಪ್ರಬಲಗೊಳಿಸಲಾಯಿತು. ಈ ಸಂದರ್ಭದಲ್ಲಿ ಸುಮಾರು 1.7 ಬಿಲಿಯನ್ ವಯಸ್ಕರು ಅದರಲ್ಲೂ ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದಲ್ಲಿನ ಬಡವರು ಬ್ಯಾಂಕಿಂಗ್ ಸೇವೆಗಳಿಂದ ಹೊರಗುಳಿದಿದ್ದಾರೆ. ನಂತರ, 2014ರಲ್ಲಿ ಜಾರಿಗೆ ಬಂದ ಪ್ರಧಾನಮಂತ್ರಿ ಜನ್‌ಧನ್ ಯೋಜನೆಯ ಮೂಲಕ ಶೂನ್ಯ ವೆಚ್ಚದಲ್ಲಿ (zero account) ಬ್ಯಾಂಕ್ ಖಾತೆ ತೆರೆಯಲು ಅವಕಾಶ ನೀಡಿತು. ಹಾಗಾಗಿ, ಈ ಯೋಜನೆಯ ಮೂಲಕ ಪ್ರಸ್ತುತ ಭಾರತದಲ್ಲಿ 44.23 ಕೋಟಿ ಜನರು ಬ್ಯಾಂಕ್ ಖಾತೆಯನ್ನು ತೆರೆಯುವುದರ ಮೂಲಕ

ಬ್ಯಾಂಕುಗಳಿಂದ ಅಧಿಕ ಸೌಲಭ್ಯಗಳನ್ನು ಪಡೆಯಲು ಅನುವು ಮಾಡಿಕೊಟ್ಟಿದೆ. ರಾಜ್ಯವಾರು ಆರ್ಥಿಕ ಸೇರ್ಪಡೆಯ ಸೂಚ್ಯಾಂಕದ ಪ್ರಕಾರ ಗೋವಾ, ದೆಹಲಿ, ತಮಿಳುನಾಡು, ಪಂಜಾಬ್ ಮತ್ತು ತೆಲಂಗಾನ ರಾಜ್ಯಗಳು ಅತೀ ಹೆಚ್ಚಿನ ಸ್ಥಾನದಲ್ಲಿವೆ. ಹಾಗೂ ಬಿಹಾರ, ಮಣಿಪುರ, ಮೇಘಾಲಯ, ಅರುಣಾಚಲ ಪ್ರದೇಶ್ ಮತ್ತು ಅಸ್ಸಾಂ ರಾಜ್ಯಗಳು ಅತೀ ಕಡಿಮೆ ಸ್ಥಾನಗಳನ್ನು ಹೊಂದಿವೆ. ಹಾಗೇಯೆ ಕೇರಳ, ಕರ್ನಾಟಕ, ಮಹಾರಾಷ್ಟ್ರ, ಹರಿಯಾಣ, ಗುಜರಾತ್ ಮತ್ತು ಆಂದ್ರಪ್ರದೇಶ್ ರಾಜ್ಯಗಳು ಆರ್ಥಿಕ ಸೇರ್ಪಡೆಯಲ್ಲಿ ಶೀಘ್ರವಾಗಿ ಬೆಳವಣಿಗೆ ಹೊಂದುತ್ತಿರುವ ರಾಜ್ಯಗಳಾಗಿವೆ.

## ಅಧ್ಯಯನ ಕ್ಷೇತ್ರದ ಹಿನ್ನಲೆ ಮತ್ತು ಆರ್ಥಿಕ ಸೇರ್ಪಡೆ

ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆಯನ್ನು ದಕ್ಷಿಣದ ಕಾಶ್ಮೀರ ಎಂದು ಕರೆಯಲಾಗುತ್ತದೆ. ಇದು ಪಶ್ಚಿಮ ಘಟ್ಟಗಳಿಂದ ಕೂಡಿದ್ದು ಹಸಿರು ಕಾಡು, ಎತ್ತರದ ಭೂಮಿ, ಕೃಷಿ ಕಣಿವೆ ಮತ್ತು ಕಿತ್ತಲೆ ತೋಪುಗಳಿಂದ ಕೂಡಿದೆ. ಇದು ತನ್ನ ರಮಣೀಯ ಸೌಂದರ್ಯಕ್ಕೆ ಹೆಸರುವಾಸಿಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಹಾಗೂ ಕಾವೇರಿ ನದಿಯು ಕೊಡಗಿನ ತಲಕಾವೇರಿಯಲ್ಲಿ ಹುಟ್ಟುತ್ತದೆ. ಈ ಜಿಲ್ಲೆಯು ಒಟ್ಟು 4102 ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, 5 ತಾಲೂಕುಗಳಿಂದ ಕೂಡಿದ್ದು, ಅವುಗಳೆಂದರೆ ಮಡಿಕೇರಿ, ಕುಶಾಲನಗರ, ಪೊನ್ನಂಪೇಟೆ, ಸೋಮವಾರಪೇಟೆ ಮತ್ತು ವೀರಾಜಪೇಟೆ. ಇಲ್ಲಿ ಒಟ್ಟು 5,54,519 ಜನಸಂಖ್ಯೆಯನ್ನು ಹೊಂದಿದ್ದು, ಶೇಕಡ 69.27ರಷ್ಟು ಜನರು ಮಾತ್ರ ಬ್ಯಾಂಕಿಂಗ್ ಸೇವೆಗಳನ್ನು ಪಡೆಯುತ್ತಿದ್ದರೆ, ಶೇಕಡ 30.73ರಷ್ಟು ಜನರು ಬ್ಯಾಂಕಿಂಗ್ ಸೌಲಭ್ಯಗಳಿಂದ ದೂರ ಉಳಿದಿದ್ದಾರೆ. ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ 163 ಬ್ಯಾಂಕ್ ಶಾಖೆಗಳು, 113 ಎ.ಟಿ.ಎಂ ಗಳು, 126 ಸಾರ್ವಜನಿಕ ಬ್ಯಾಂಕುಗಳು, 154 ವಾಣಿಜ್ಯ ಬ್ಯಾಂಕುಗಳು, 24 ಖಾಸಗಿ ಬ್ಯಾಂಕುಗಳು ಮತ್ತು 25 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಅಲ್ಲದೆ 4 ನಗರ ಸಹಕಾರಿ ಬ್ಯಾಂಕುಗಳು, 3 ಪ್ರಾಥಮಿಕ ಸಹಕಾರಿ ಬ್ಯಾಂಕುಗಳನ್ನು ಹೊಂದಿದೆ. ಈ ಹಿನ್ನಲೆಯಲ್ಲಿ ಕೊಡಗು ಜಿಲ್ಲೆಯ 3 ತಾಲೂಕುಗಳನ್ನು ಮಾತ್ರ ಆರ್ಥಿಕ ಸೇರ್ಪಡೆಯ ಪ್ರಗತಿ ಮತ್ತು ಪ್ರವೃತ್ತಿಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

## ಸಾಹಿತ್ಯಾವಲೋಕನ

**ನಬಾರ್ಡ (2008)ರ** ಪ್ರಕಾರ ಆರ್ಥಿಕ ಸೇರ್ಪಡೆಯಲ್ಲಿ ನಬಾರ್ಡನ ಪಾತ್ರ ಎಂಬ ಅಧ್ಯಯನದಲ್ಲಿ ಶೂನ್ಯ ಖಾತೆ, ಸ್ವಸಹಾಯ ಗುಂಪುಗಳು, ಪೋಸ್ಟ ಆಫೀಸ್, ಬ್ಯಾಂಕುಗಳು ಜಾರಿಗೆ ತಂದ ಮೊಬೈಲ್ ಬ್ಯಾಂಕಿಂಗ್, ಕಿಸಾನ್ ಕ್ರೆಡಿಟ್ ಕಾರ್ಡ್ಸ ಸೇವೆಗಳು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಧನಾತ್ಮಕ ಬದಲಾವಣೆಯನ್ನು ಉಂಟುಮಾಡಿವೆ ಎಂದು ತಿಳಿಸಿದ್ದಾರೆ. ಆರ್ಥಿಕವಾಗಿ ಹಿಂದುಳಿದಿರುವ ಜನರನ್ನು ಹಣಕಾಸು ಸೇರ್ಪಡೆಗೆ ಒಳಗೊಳ್ಳುವಂತೆ ಮಾಡಲು ರಿಸರ್ವ ಬ್ಯಾಂಕ್ ಆಫ್ ಇಂಡಿಯಾ ಮತ್ತು ಭಾರತ ಸರ್ಕಾರ ಜಾರಿಗೆ ತಂದ ಯೋಜನೆಗಳ ಬಗ್ಗೆ ವಿವರಿಸಿದ್ದಾರೆ. ಹಾಗೆಯೇ, 2012ರಿಂದ 2015ರ ವೇಳೆಗೆ ಶೇಕಡ 50ರಷ್ಟು ಜನರಿಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಬೇಕೆಂಬ ಉದ್ದೇಶ ಹೊಂದಿದೆ ಎಂಬುದು ಇವರ ಅಧ್ಯಯನದಿಂದ ತಿಳಿಸಿದ್ದಾರೆ.

**ಖಾನ್ ಕಮಿಷನ್ (2009)** ಈ ಆಯೋಗದಲ್ಲಿ ತಿಳಿಸಿರುವುದೇನೆಂದರೆ ಆರ್ಥಿಕ ಸೇರ್ಪಡೆಯು ಜನರ ಆರ್ಥಿಕ ಪರಿಸ್ಥಿತಿ ಮತ್ತು ಜೀವನ ಮಟ್ಟವನ್ನು ಉತ್ತಮಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹಾಗೆಯೇ, ಈ ಆರ್ಥಿಕ ಸೇರ್ಪಡೆಯ ಯೋಜನೆಗಳಿಂದ ಜನರಲ್ಲಿ ಔಪಚಾರಿಕ ಬ್ಯಾಂಕಿಂಗ್ ಸೌಲಭ್ಯಗಳ ಬಳಕೆ, ಉಳಿತಾಯ ಠೇವಣಿಗಳ ಬಗ್ಗೆ ಅರಿವು ಉಂಟಾಗುತ್ತದೆ. ಇದರಿಂದ ದೇಶದಲ್ಲಿ ಪರಿಣಾಮಕಾರಿಯಾದ ವಿತ್ತೀಯ ನೀತಿಯನ್ನು ಜಾರಿಮಾಡಬಹುದು ಎಂಬುದಾಗಿ ತಿಳಿಸಿದ್ದಾರೆ. ಅಲ್ಲದೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಂತ್ರಜ್ಞಾನದ ಅಭಿವೃದ್ಧಿಯಿಂದ ಕಡಿಮೆ ವೆಚ್ಚದ ಜೊತೆಗೆ ಹಣಕಾಸು ವ್ಯವಹಾರಗಳು ವ್ಯವಸ್ಥಿತವಾಗಿ ಸಾಗಲು ನೆರವಾಗುತ್ತಿರುವುದಾಗಿ ತಿಳಿಸಿದ್ದಾರೆ.

**ವೈಶಾಲಿ ಮತ್ತು ಶರ್ಮಾ (2016)** ಭಾರತದಲ್ಲಿ ಬಹುವಲಯದ ಅಂತರ್ಗತ ಬೆಳವಣಿಗೆಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರದ ಬಗ್ಗೆ ಚರ್ಚಿಸಿದ್ದಾರೆ. ಇವರು ತಿಳಿಸಿರುವಂತೆ ಕೇವಲ ಬ್ಯಾಂಕಿಂಗ್ ಸೇವೆಗಳಿಂದ ಮತ್ತು ಆದಾಯದ ಸಮಾನ ವಿತರಣೆಯಿಂದ ಆರ್ಥಿಕ ಸೇರ್ಪಡೆ ಸಾಧ್ಯವಿಲ್ಲ. ಆದರೆ ವಿವಿಧ ಕ್ಷೇತ್ರಗಳಲ್ಲಿನ ಸಮಾನ ಹೂಡಿಕೆ ಹಾಗೂ ಹಣಕಾಸು ಸೇವೆಗಳ ಉತ್ತೇಜನದಲ್ಲಿ ರಿಸರ್ವ ಬ್ಯಾಂಕಿನ ಪಾತ್ರ, ನೀತಿ–ನಿಯಮಗಳ ಸರಲೀಕರಣ ಹಾಗೂ ರಚನಾತ್ಮಕ ಬದಲಾವಣೆಗಳಿಂದ ಮಾತ್ರ ಆರ್ಥಿಕ ಸೇರ್ಪಡೆ ಸಾಧ್ಯ ಎಂದು ವಿವರಿಸಿದ್ದಾರೆ.

## ಸಂಶೋಧನಾ ಅಂತರ

ಭಾರತದಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರದ ಬಗ್ಗೆ ಅನೇಕ ಅಧ್ಯಯನಗಳು ಈಗಾಗಲೇ ಮಾಡಲಾಗಿದ್ದು, ಆದರೆ ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಈ ವಿಷಯದ ಬಗ್ಗೆ ಯಾವುದೇ ಅಧ್ಯಯನಗಳು ನಡೆದಿರುವುದಿಲ್ಲ. ಹಾಗಾಗಿ ಪ್ರಸ್ತುತ ಅಧ್ಯಯನವು ಕೊಡಗು ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಹಾಗೂ ಆರ್ಥಿಕ ಸೇರ್ಪಡೆಯ ಪ್ರಗತಿ ಮತ್ತು ಪ್ರವೃತ್ತಿಯನ್ನು, ಜೊತೆಗೆ ಆರ್ಥಿಕ ಸೇರ್ಪಡೆಗೆ ಅಡ್ಡಿಯಾಗಿರುವ ಸವಾಲುಗಳ ಕುರಿತು ಅಧ್ಯಯನ ಮಾಡುವ ಹಿನ್ನಲೆಯಲ್ಲಿ ಪ್ರಸ್ತುತ ಲೇಖನವು ಸುಸ್ಥಿರ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರ: ಕೊಡಗು ಜಿಲ್ಲೆಯ ವಿಶೇಷ ಅಧ್ಯಯನವನ್ನು ಕೈಗೊಳ್ಳಲಾಗಿದೆ.

## ಉದ್ದೇಶಗಳು

- ಸುಸ್ಥಿರ ಅಭಿವೃದ್ಧಿಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರವನ್ನು ಕುರಿತು ಅಧ್ಯಯನ ಮಾಡುವುದು.
- ಕೊಡಗು ಜಿಲ್ಲೆಯಲ್ಲಿ ಆರ್ಥಿಕ ಸೇರ್ಪಡೆಯ ಪ್ರಗತಿ ಮತ್ತು ಪ್ರವೃತ್ತಿಯನ್ನು ಕುರಿತು ವಿಶ್ಲೇಷಿಸುವುದು.
- ಆರ್ಥಿಕ ಸೇರ್ಪಡೆಗೆ ಅಡ್ಡಿಯಾಗಿರುವ ಪ್ರಮುಖ ಸವಾಲುಗಳನ್ನು ಗುರುತಿಸುವಿಕೆ.

## ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನವು ಆರ್ಥಿಕ ಸೇರ್ಪಡೆ ಮತ್ತು ಸುಸ್ಥಿರ ಅಭಿವೃದ್ಧಿಯ ನಡುವಿನ ಸಕಾರಾತ್ಮಕ ಸಂಬಂಧವನ್ನು ತೋರಿಸಲು ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸ್ವರೂಪವನ್ನು ಆಧರಿಸಿದೆ. ಈ ಪ್ರಕ್ರಿಯೆಯಲ್ಲಿ ಪ್ರಾಥಮಿಕ ಮಾಹಿತಿಯನ್ನು ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಕೊಡಗು ಜಿಲ್ಲೆಯ ಮೂರು ತಾಲೂಕುಗಳಿಂದ 150 ಮಾಹಿತಿದಾರರನ್ನು ಆಯ್ಕೆ ಮಾಡಲಾಗಿದ್ದು, ಪ್ರತಿ ತಾಲೂಕಿನಿಂದ 50 ಜನರನ್ನು ಸಂದರ್ಶಿಸಲಾಗಿದೆ. ಸಂದರ್ಶಿಸಿದ ಒಟ್ಟು ಮಾಹಿತಿದಾರರಲ್ಲಿ ಹೆಚ್ಚು ಸಣ್ಣ ಮತ್ತು ಭೂರಹಿತ ಕಾರ್ಮಿಕರು, ದಿನಗೂಲಿ ಕಾರ್ಮಿಕರು, ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದರಿಂದ ಪ್ರಾಥಮಿಕ ಮಾಹಿತಿಯನ್ನು ಪಡೆಯಲಾಗಿದೆ. ಜೊತೆಗೆ ಅನುಷಾಂಗಿಕ ಮಾಹಿತಿಯನ್ನು ಆರ್.ಬಿ.ಐ.,ನ ವಾರ್ಷಿಕ ವರದಿ, ಕೊಡಗು ಜಿಲ್ಲೆಯ ಅಂಕಿ ಅಂಶಗಳ ಮಾಹಿತಿ, ವಾಣಿಜ್ಯ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಬ್ಯಾಂಕುಗಳ ವಾರ್ಷಿಕ ವರದಿಯಲ್ಲಿ ಬ್ಯಾಂಕ್ ಶಾಖೆಗಳ, ಖಾತೆಗಳು, ಠೇವಣಿಗಳು, ಉಳಿತಾಯ ಮತ್ತು ಸಾಲಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## ಮಾಹಿತಿ ವಿಶ್ಲೇಷಣೆ

**ಕೋಷ್ಟಕ 01 :**

**ಕೊಡಗು ಜಿಲ್ಲೆಯ ಗ್ರಾಮೀಣ ಜನರ ಸಾಮಾಜಿಕ–ಆರ್ಥಿಕ ಸ್ಥಿತಿಯ ವಿವರ**

| ಮಾಹಿತಿದಾರರು | ವರ್ಗೀಕರಣ | ಆವೃತ್ತಿ | ಶೇಕಡವಾರು |
|---|---|---|---|
| ವಯಸ್ಸು | < 20 ವರ್ಷ | 18 | 12% |
| | 20–40 ವರ್ಷ | 52 | 34.66% |
| | 40–60 ವರ್ಷ | 44 | 29.33% |
| | 60 > | 36 | 24% |
| | ಒಟ್ಟು | 150 | 100% |
| ಲಿಂಗ | ಪುರುಷ | 85 | 56.66% |
| | ಮಹಿಳೆ | 65 | 43.33% |
| | ಒಟ್ಟು | 150 | 100% |
| ಶಿಕ್ಷಣ | ಅನಕ್ಷರಸ್ಥರು | 68 | 45.33% |
| | ಪ್ರಾಥಮಿಕ | 41 | 27.33% |
| | ಪದವಿ | 29 | 19.33% |
| | ಸ್ನಾತ್ತಕೊತ್ತರ | 12 | 8% |
| | ಒಟ್ಟು | 150 | 100% |
| ವರ್ಗ | ಎಸ್.ಸಿ | 61 | 40.66% |
| | ಎಸ್.ಟಿ | 23 | 15.33% |
| | ಓ.ಬಿ.ಸಿ | 50 | 33.33% |
| | ಸಾಮಾನ್ಯ | 16 | 10.66% |
| | ಒಟ್ಟು | 150 | 100% |
| ಆದಾಯ (ಮಾಸಿಕ) | 5000–10,000 | 17 | 11.33% |
| | 10,000–15,000 | 35 | 23.33% |
| | 15,000–25,000 | 62 | 41.33% |
| | 25,000> | 36 | 24% |
| | ಒಟ್ಟು | 150 | 100% |
| ಉಳಿತಾಯ(ಮಾಸಿಕ) | <1000 | 78 | 52% |
| | 1,000–3,000 | 41 | 27.33% |
| | 3,000–5,000 | 19 | 12.66% |
| | 5,000> | 12 | 8% |
| | ಒಟ್ಟು | 150 | 100% |

**ಮಾಹಿತಿ : ಪ್ರಾಥಮಿಕ ಮಾಹಿತಿ ಮಾಹಿತಿದಾರರಿಂದ**

ಈ ಮೇಲಿನ ಕೋಷ್ಟಕದಲ್ಲಿ ಕೊಡಗು ಜಿಲ್ಲೆಯ ಗ್ರಾಮೀಣ ಜನರ ಸಾಮಾಜಿಕ–ಆರ್ಥಿಕ ಸ್ಥಿತಿಯ ವಿವರದ ಬಗ್ಗೆ ತಿಳಿಸಲಾಗಿದೆ. ಒಟ್ಟು ಸಂದರ್ಶಿತ ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದಂತೆ ಶೇಕಡ 12ರಷ್ಟು 20 ವಯಸ್ಸಿನವರು, ಶೇಕಡ 34ರಷ್ಟು ಜನರು 20ರಿಂದ 40 ವಯಸ್ಸಿನವರು ಹಾಗೂ ಶೇಕಡ 24ರಷ್ಟು 40 ರಿಂದ 60ರ ವಯಸ್ಸಿನವರು ಕಂಡುಬಂದಿದ್ದಾರೆ. ಲಿಂಗವಾರು ಮಾಹಿತಿಗೆ ಸಂಬಂಧಿಸಿದಂತೆ ಶೇಕಡ 56ರಷ್ಟು ಪುರುಷರು ಹಾಗೂ ಶೇಕಡ 43.32ರಷ್ಟು ಮಹಿಳೆಯರಿಂದ ಮಾಹಿತಿಯನ್ನು ಪಡೆಯಲಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಶೇಕಡ 55ರಷ್ಟು ಅನಕ್ಷರಸ್ಥರಾಗಿದ್ದು, ಶೇಕಡ 27.33ರಷ್ಟು ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣವನ್ನು ಪಡೆದರೆ, ಶೇಕಡ 19ರಷ್ಟು ಪದವಿ, ಶೇಕಡ 8ರಷ್ಟು ಸ್ನಾತ್ತಕೊತ್ತರ ಪದವಿಯನ್ನು ಪಡೆದಿರುವುದು ಕಂಡುಬಂದಿದೆ. ಸಂದರ್ಶಿತ ಜಾತಿವಾರು ಮಾಹಿತಿಗೆ ಸಂಬಂಧಿಸಿದಂತೆ, ಶೇಕಡ 40ರಷ್ಟು ಪರಿಶಿಷ್ಟ ಜಾತಿ, ಶೇಕಡ 15ರಷ್ಟು ಪರಿಶಿಷ್ಠ ಪಂಗಡ, 33ರಷ್ಟು ಇತರೆ ಹಿಂದುಳಿದ ಹಾಗೂ ಶೇಕಡ 10.65ರಷ್ಟು ಸಾಮಾನ್ಯ ವರ್ಗಕ್ಕೆ ಸೇರಿದವರನ್ನು ಸಂದರ್ಶಿಸಲಾಗಿದೆ. ಆದಾಯಕ್ಕೆ ಸಂಬಂಧಿಸಿದಂತೆ ಶೇಕಡ 41.33ರಷ್ಟು ಮಾಹಿತಿದಾರರ ಮಾಸಿಕ ಆದಾಯವು 15000 ದಿಂದ 25000 ಸಾವಿರವಾದರೆ, ಶೇಕಡ 24ರಷ್ಟು ಜನರು 25000ಕ್ಕಿಂತ ಅಧಿಕ ಆದಾಯವನ್ನು ಗಳಿಸುತ್ತಿರುವುದು ಕಂಡುಬಂದಿದೆ. ಮಾಸಿಕ ವೆಚ್ಚಕ್ಕೆ ಸಂಬಂಧಿಸಿದಂತೆ ಶೇಕಡ 12.66ರಷ್ಟು ಜನರ ಮಾಸಿಕ ಉಳಿತಾಯವು 3000 ದಿಂದ 5000 ಆದರೆ, ಶೇಕಡ 8ರಷ್ಟು ಜನರು 5000ಕ್ಕಿಂತ ಹೆಚ್ಚು ವ್ಯಯಿಸುತ್ತಿರುವುದು ಕಂಡುಬಂದಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅಧಿಕವಾಗಿ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅವರು ಅನಕ್ಷರಸ್ಥರಾಗಿರುವುದು ಪ್ರಸ್ತುತ ಅಧ್ಯಯನದಿಂದ ತಿಳಿದುಬಂದಿದೆ.

**ಕೋಷ್ಟಕ–02**

**ಕೊಡಗು ಜಿಲ್ಲೆಯ ಆರ್ಥಿಕ ಸೇರ್ಪಡೆಯ ಪ್ರಗತಿ ಮತ್ತು ಪ್ರವೃತ್ತಿಯ ವಿವರ**

| ಬ್ಯಾಂಕ್ | ವರ್ಗೀಕರಣ | 2018 | 2019 | 2020 | 2021 |
|---|---|---|---|---|---|
| ಸಾರ್ವಜನಿಕ ಬ್ಯಾಂಕ್‌ಗಳು | ಒಟ್ಟು ಶಾಖೆಗಳು | 103 | 107 | 112 | 126 |
| | ಒಟ್ಟು ಸಾಲಗಳು | 1,72,992 | 1,85,654 | 1,95,269 | 2,76,548 |
| | ಒಟ್ಟು ಠೇವಣಿಗಳು | 25,5109 | 26,378 | 27,998 | 3,81,237 |
| ಸಾರ್ವಜನಿಕ ಬ್ಯಾಂಕ್‌ಗಳು | ಒಟ್ಟು ಶಾಖೆಗಳು | 01 | 05 | 12 | 17 |
| | ಒಟ್ಟು ಖಾತೆದಾರರು | 36,983 | 19,796 | 19,096 | 24099 |
| | ಒಟ್ಟು ಕೃಷಿ ಸಾಲಗಳು | 38,717 | 40,515 | 42,103 | 49,286 |
| | ಒಟ್ಟು ಸಾಲಗಳು | 55,131 | 60,390 | 68,036 | 79,015 |
| | ಒಟ್ಟು ಠೇವಣಿಗಳು | 54,618 | 71,142 | 74,103 | 76,169 |
| ಪ್ರಾದೇಶಿಕ ಬ್ಯಾಂಕ್‌ಗಳು | ಒಟ್ಟು ಶಾಖೆಗಳು | 23 | 26 | 26 | 25 |
| | ಒಟ್ಟು ಕೃಷಿ ಸಾಲಗಳು | 2977 | 68,794 | 69,320 | 8562 |
| | ಒಟ್ಟು ಸಾಲಗಳು | 9076 | 15,763 | 18,217 | 17,510 |
| | ಒಟ್ಟು ಠೇವಣಿಗಳು | 21,633 | 30,965 | 32.811 | 32,358 |
| | ಒಟ್ಟು | 265 | 319 | 368 | 465 |

**ಮಾಹಿತಿ : ಪ್ರಾಥಮಿಕ ಮಾಹಿತಿ ಮಾಹಿತಿದಾರರಿಂದ**

**ಕೋಷ್ಟಕ–03 : ಕೊಡಗು ಜಿಲ್ಲೆಯ ಔಪಚಾರಿಕ ಮತ್ತು ಅನೌಪಚಾರಿಕ ಹಣಕಾಸಿನ ಮೂಲಗಳ ವಿವರ**

| ತಾಲೂಕು | ಅನೌಚಾರಿಕ ಹಣಕಾಸಿನ ಮೂಲಗಳು | ಅನೌಚಾರಿಕ ಹಣಕಾಸಿನ ಮೂಲಗಳು | ಆವೃತ್ತಿ | ಶೇಕಡವಾರು |
|---|---|---|---|---|
| ಮಡಿಕೇರಿ | 14 | 28 | 42 | 28% |
| ವೀರಾಜಪೇಟೆ | 25 | 31 | 56 | 37.33% |
| ಸೋಮವಾರಪೇಟೆ | 22 | 29 | 51 | 34% |
| ಒಟ್ಟು | 64 | 86 | 150 | 100% |

**ಮಾಹಿತಿ : ಪ್ರಾಥಮಿಕ ಮಾಹಿತಿ ಮಾಹಿತಿದಾರರಿಂದ**

ISSN : 2249-2429 ಸಂಶೋಧನೆ RNI REG.NO.KARKAN/2011/38712

ಈ ಮೇಲಿನ ಕೋಷ್ಟಕದಲ್ಲಿ ಕೊಡಗು ಜಿಲ್ಲೆಯ ಔಪಚಾರಿಕ ಮತ್ತು ಅನೌಪಚಾರಿಕ ಹಣಕಾಸಿನ ಮೂಲಗಳ ವಿವರದ ಬಗ್ಗೆ ತಿಳಿಸಲಾಗಿದೆ. ಮಡಿಕೇರಿ ತಾಲೂಕಿನಲ್ಲಿ ಶೇಕಡ 28ರಷ್ಟು ಮಾಹಿತಿದಾರರಲ್ಲಿ 14 ಜನ ಔಪಚಾರಿಕ ಮೂಲಗಳಿಂದ ಹಾಗೂ 28 ಜನರ ಅನೌಪಚಾರಿಕ ಹಣಕಾಸು ಮೂಲಗಳಿಂದ ಸಾಲ ಸೌಲಭ್ಯವನ್ನು ಪಡೆಯುತ್ತಿದ್ದು, ಸೋಮವಾರ ಪೇಟೆಯಲ್ಲಿ ಶೇಕಡ 34ರಷ್ಟು ಜನರಲ್ಲಿ 22 ಜನ ಔಪಚಾರಿಕ ಮೂಲಗಳಿಂದ ಹಾಗೂ 29 ಜನ ಅನೌಪಚಾರಿಕ ಹಣಕಾಸು ಮೂಲಗಳಿಂದ ಸಾಲ ಸೌಲಭ್ಯವನ್ನು ಪಡೆಯುತ್ತಿದ್ದಾರೆ, ಅದರಂತೆಯೆ ವಿರಾಜಪೇಟೆಯಿಂದ ಶೇಕಡ 37ರಷ್ಟು ಮಾಹಿತಿದಾರರಲ್ಲಿ 25 ಜನ ಔಪಚಾರಿಕ ಮೂಲಗಳಿಂದ ಹಾಗೂ 31 ಜನ ಅನೌಪಚಾರಿಕ ಹಣಕಾಸು ಮೂಲಗಳಿಂದ ಸಾಲ ಸೌಲಭ್ಯವನ್ನು ಪಡೆಯುತ್ತಿವುದಾಗಿ ತಿಳಿಸಿದ್ದಾರೆ. ಇಲ್ಲಿ ವ್ಯಕ್ತವಾದ ಅಂಶವೆಂದರೆ ಒಟ್ಟು ಸಂದರ್ಶಿತ ಮಾಹಿತಿದಾರರಲ್ಲಿ ಅಧಿಕವಾಗಿ ಅನೌಪಚಾರಿಕ ಹಣಕಾಸಿನ ಮೂಲಗಳನ್ನು ಅವಲಂಬಿಸಿರುವುದು ಅಧ್ಯಯನದಿಂದ ಕಂಡುಬಂದಿದೆ.

**ಕೋಷ್ಟಕ–4**

**ಕೊಡಗು ಜಿಲ್ಲೆಯ ಆರ್ಥಿಕ ಸೇರ್ಪಡೆಗೆ ನೆರವಾಗುವ ಅಂಶಗಳ ವಿವರ**

| ಕ್ರ.ಸಂ. | ಒಟ್ಟು ಆರ್ಥಿಕ ಸೇರ್ಪಡೆ | ಆವೃತ್ತಿ | ಶೇಕಡವಾರು |
|---|---|---|---|
| 1. | ಬಿಸಿ/ಬಿಎಫ್ಎಸ್ | 36 | 24% |
| 2. | ಜಿ.ಸಿ.ಸಿ | 85 | 56.66% |
| 3. | ಕೆ.ಸಿ.ಸಿ | 20 | 13.33% |
| 4. | ಅಲಂಕಾರಗಳ ಖಾತೆಯ ಸಂಖ್ಯೆ | 46 | 30.66% |
| 5. | ಕೆ.ವೈ.ಸಿ | 17 | 11.33% |
| 6. | ಪಿಂಚಣಿ | 29 | 19.33% |
| | ಒಟ್ಟು | 150 | 100% |

ಮಾಹಿತಿ : ಪ್ರಾಥಮಿಕ ಮಾಹಿತಿ ಮಾಹಿತಿದಾರರಿಂದ

ಮೇಲಿನ ಕೋಷ್ಟಕದಲ್ಲಿ ಕೊಡಗು ಜಿಲ್ಲೆಯ ಆರ್ಥಿಕ ಸೇರ್ಪಡೆಗೆ ನೆರವಾಗುವ ಅಂಶಗಳ ವಿವರವನ್ನು ತಿಳಿಸಲಾಗಿದೆ. ಒಟ್ಟು ಸಂದರ್ಶಿತ ಮಾಹಿತಿದಾರರಲ್ಲಿ ಶೇಕಡ 24ರಷ್ಟು ಜನರು ಬ್ಯಾಂಕಿಂಗ್ ಸೇವೆಗಳನ್ನು ಮನೆ ಮನೆಗೆ ಬೇಟಿ ಮಾಡುವುದರ ಮೂಲಕ ಆರ್ಥಿಕ ಸೇರ್ಪಡೆಗೆ ಒಳಪಡಿಸುತ್ತಿದ್ದರೆ, ಶೇಕಡ 56.66ರಷ್ಟು ಜನರು ಸಾಮಾನ್ಯ ಕ್ರೆಡಿಟ್ ಕಾರ್ಡುಗಳನ್ನು ಬಳಸುತ್ತಿದ್ದಾರೆ. ಶೇಕಡ 13.33ರಷ್ಟು ಕಿಸಾನ್ ಕ್ರೆಡಿಟ್ ಕಾರ್ಡ ಮೂಲಕ ಸಾಲ ಸೌಲಭ್ಯ ಪಡೆಯುತ್ತಿದ್ದರೆ. ಶೇಕಡ 30.66ರಷ್ಟು ಶೂನ್ಯ ಖಾತೆಯನ್ನು ಹೊಂದಿರುವುದಾಗಿ, ಶೇಕಡ 11.33ರಷ್ಟು ಕೆ.ವೈ.ಸಿ. (KYC) ಮಾರ್ಗಸೂಚಿಗಳ ಬಗ್ಗೆ ಅರಿವಿರುವುದಾಗಿ, 19.33ರಷ್ಟು ಪಿಂಚಣಿ ಸೌಲಭ್ಯಗಳನ್ನು ಬ್ಯಾಂಕುಗಳ ಮೂಲಕ ಪಡೆಯುತ್ತಿರುವುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗಿದೆ.

## ಆರ್ಥಿಕ ಸೇರ್ಪಡೆಗೊಳಿಸುವಲ್ಲಿ ಎದುರಾಗುವ ಸವಾಲುಗಳು

- ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ಬ್ಯಾಂಕ್ ವ್ಯವಸ್ಥೆ ಇರುವುದರಿಂದ ಗ್ರಾಮೀಣ ಜನರು ಬ್ಯಾಂಕಿಂಗ್ ಸೌಲಭ್ಯಗಳಿಂದ ಹೊರಗುಳಿದಿದ್ದಾರೆ.
- ಗ್ರಾಮೀಣ ಜನರಲ್ಲಿ ಬ್ಯಾಂಕಿಂಗ್ ಹಾಗೂ ಹಣಕಾಸು ವಿಷಯಗಳ ಬಗ್ಗೆ ಹೆಚ್ಚು ಅರಿವು ಇಲ್ಲದಿರುವುದು.
- ಔಪಚಾರಿಕ ಬ್ಯಾಂಕಿಂಗ್ ಸೇವೆಗಳನ್ನು ಬಳಸಲು ಹೆಚ್ಚು ವೈಯಕ್ತಿಕ ಮಾಹಿತಿ ಮತ್ತು ಆದಾಯ ದಾಖಲೆಗಳ ಅಗತ್ಯವಿರುತ್ತದೆ. ಆದರೆ ಬಡಜನರು ಇಂತಹ ದಾಖಲೆಗಳನ್ನು ಹೊಂದಿಲ್ಲದಿರುವುದು ಇದಕ್ಕೆ ಕಾರಣವಾಗಿದೆ.
- ಗ್ರಾಮೀಣ ಜನರು ಬ್ಯಾಂಕಿಂಗ್ ವಹಿವಾಟುಗಳನ್ನು ನಡೆಸಲು ಹೆಚ್ಚು ಆಸಕ್ತಿ ಇರುವುದಿಲ್ಲ. ಏಕೆಂದರೆ ಬ್ಯಾಂಕಿಂಗ್ ಸೇವೆಗಳನ್ನು ಅರ್ಥೈಸಿಕೊಂಡು ಬಳಸಿಕೊಳ್ಳುವಲ್ಲಿ ಅಡೆತಡೆಗಳಿವೆ.
- ಬ್ಯಾಂಕುಗಳನ್ನು ಗ್ರಾಮೀಣ ಪ್ರದೇಶದಿಂದ ದೂರದಲ್ಲಿ ಸ್ಥಾಪಿಸಿರುವುದರಿಂದ ಹೆಚ್ಚಿನ ಜನರು ಅನೌಪಚಾರಿಕ ಮೂಲಗಳಿಂದ ಸಾಲ ಸೌಲಭ್ಯ ಪಡೆಯುತ್ತಿದ್ದಾರೆ..
- ವಾಣಿಜ್ಯ ಬ್ಯಾಂಕುಗಳಲ್ಲಿನ ಹಣಕಾಸಿನ ಅಭಾವ ಮತ್ತು ಮೂಲಸೌಕರ್ಯದ ಸಮಸ್ಯೆಗಳು ಪ್ರಮುಖವಾದ ಸವಾಲಾಗಿದೆ.

## ಸಲಹೆಗಳು

- ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಬ್ಯಾಂಕ್ ಶಾಖೆಗಳನ್ನು ತೆರೆಯಬೇಕು.
- ಗ್ರಾಮೀಣ ಜನರಲ್ಲಿ ಬ್ಯಾಂಕಿಂಗ್ ಸೇವೆಗಳ ಬಗ್ಗೆ ಅರಿವು ಮೂಡಿಸುವುದು.
- ಆರ್ಥಿಕ ಸೇರ್ಪಡೆಯ ಸೌಲಭ್ಯ ಪಡೆಯಲು ಗ್ರಾಮೀಣ ಜನರಿಗೆ ಬ್ಯಾಂಕಿಂಗ್ ಮತ್ತು ಹಣಕಾಸಿನ ಸಾಕ್ಷರತೆಯನ್ನು ಒದಗಿಸುವುದು.
- ಸಾರ್ವಜನಿಕ ಬ್ಯಾಂಕುಗಳೊಂದಿಗೆ ಖಾಸಗಿ ಬ್ಯಾಂಕುಗಳು ಸಹ ಹೆಚ್ಚಾಗಿ ಗ್ರಾಮೀಣ ಜನರಿಗೆ ಸಾಲ ಸೌಲಭ್ಯಗಳನ್ನು ಒದಗಿಸಬೇಕು.
- ಉಳಿತಾಯ ಮತ್ತು ಸಾಲ ಸೌಲಭ್ಯಗಳನ್ನು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿನ ದುರ್ಬಲ ವರ್ಗದವರಿಗೆ ಒದಗಿಸಬೇಕು.
- ಕುಟುಂಬದ ಪ್ರತಿಯೊಬ್ಬ ಸದಸ್ಯರು ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಅರಿವು ಮೂಡಿಸಿ, ಪ್ರೇರಣೆ ನೀಡುವುದು.
- ಬ್ಯಾಂಕಿಂಗ್ ಕಾರ್ಯವಿಧಾನಗಳನ್ನು ಸಾಮಾನ್ಯ ಜನರಿಗೂ ನೆರವಾಗುವಂತೆ ಸರಲೀಕರಣಗೊಳಿಸಬೇಕು.
- ಗ್ರಾಮೀಣ ಪ್ರದೇಶದ ಲೇವಾದೇವಿ ಹಣಕಾಸು ವ್ಯವಹಾರಗಳ ಬಗ್ಗೆ ಜನರಿಗೆ ಆಸಕ್ತಿಯನ್ನು ಕಡಿಮೆಗೊಳಿಸಬೇಕು.

## ಉಪಸಂಹಾರ

ಭಾರತದ ಆರ್ಥಿಕ ಕ್ಷೇತ್ರದಲ್ಲಿ ಬ್ಯಾಂಕುಗಳು ಪ್ರಮುಖ ಪಾತ್ರವಹಿಸುತ್ತವೆ. ಆದರೆ ಗ್ರಾಮೀಣ ಪ್ರದೇಶದಲ್ಲಿನ ಜನರು ಈ ಸೇವೆಗಳಿಂದ ಹೊರ ಉಳಿದಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲು ಭಾರತ ಸರ್ಕಾರ ಮತ್ತು ರಿಸರ್ವ ಬ್ಯಾಂಕ್ ನೇತೃತ್ವದಲ್ಲಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಈ ಮೂಲಕ ಗ್ರಾಮೀಣ ಜನರು ಹೆಚ್ಚಾಗಿ ಔಪಚಾರಿಕ ಹಣಕಾಸು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ವಾಣಿಜ್ಯ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ಸಹಕಾರಿ ಸಂಸ್ಥೆಗಳು ಮತ್ತು ನಬಾರ್ಡ ಕಡಿಮೆ ಬಡ್ಡಿ ದರದಲ್ಲಿ ಉಳಿತಾಯ ಮತ್ತು ಸಾಲ ಸೌಲಭ್ಯಗಳನ್ನು ಒದಗಿಸುತ್ತಿವೆ. ಹಾಗೆಯೇ, ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಗುಂಪುಗಳಿಂದ ಹೆಚ್ಚಿನ ಜನರು ಹಣಕಾಸು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಅಲ್ಲದೆ, ಆರ್ಥಿಕ ಸೇರ್ಪಡೆಯ ಯೋಜನೆಗಳು ದುರ್ಬಲ ವರ್ಗದ ಜನರು ಮತ್ತು ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಹಣಕಾಸು ಸೇವೆಗಳು ಜನರಲ್ಲಿ ಶಿಕ್ಷಣ,ಆರೋಗ್ಯ, ಉಳಿತಾಯ ಮತ್ತು ಹೂಡಿಕೆ ಮಾಡಲು ಸಹಾಯ ಮಾಡುತ್ತವೆ. ಜೊತೆಗೆ ಗ್ರಾಮೀಣ ಭಾರತದಲ್ಲಿ ಸ್ವ–ಉದ್ಯೋಗ ಸೃಷ್ಟಿಸಲು ಮತ್ತು ಆದಾಯ ಅಸಮಾನತೆ ಕಡಿಮೆ ಮಾಡಲು ಆರ್ಥಿಕ ಸೇರ್ಪಡೆಯು ಪ್ರಮುಖ ಪಾತ್ರವಹಿಸುತ್ತಿರುವುದನ್ನು ಪ್ರಸ್ತುತ ಅಧ್ಯಯನದ ಮೂಲಕ ತಿಳಿಯಲಾಗಿದೆ.

## ಪರಾಮರ್ಶನ ಗ್ರಂಥಗಳು

- **Khan (2009) :** "Financial inclusion and financial stabil-

ISSN : 2249-2429 ಸಂಶೋಧನೆ RNI REG.NO.KARKAN/2011/38712

ity: are they two sides of the same coin?" Financial Stability: Issues and Challenges", September, Pp: 1 -12.

- **Karnataka District : Fact bookTH Kodagu district.**
- **Kodagu at a glance, 2018.**
- **Kodagu District, Census Report, 2011.**
- **Kodagu district statistics at a glance,(2017-2018).**
- **Richa Aggarwal (2014) :** "Financial Inclusion in India: Challenges and Opportunities", International Journal of Research, Vol-1, ISS- 4, May, ISSN: 2348-6848. 11.
- **Siddiqui, A. U. (2018) :** "Financial Inclusion in India- "A Catalyst for Sustainable Economic Growth". International Journal of Management and Applied Science, 04 (02), 61-68. 12.
- **Shivangi Bhatia, D. S. (2015) :** "Financial Inclusion – A Path To Sustainable Growth". International Journal of Science Technology & Management, 04 (01).
- **NABARD (2008) :** Annual reports of NABARD, 2008.
- **Vaishali and Sharma (2016) :** "Role of Financial Inclusion in the Multi-Sectoral Inclusive Growth of the Nation" *Amity Journal of Management,* Vol- I, No-1, January – June, Pp- 12-19.

■■

*– 44ನೇ ಪುಟದಿಂದ ಮುಂದುವರೆದುದು*

ನಗೆ ಚಾಟಿಕೆಯ ಮಧ್ಯೆ ರಾಜತ್ತೆಯ ವಿಶಾಲ ಹೃದಯದ ಆತಿಥ್ಯದ ಅರಿವಾಗುತ್ತದೆ. ಆಕೆಯ ಜೀವನದ ಪುಟಗಳನ್ನು ಎಲ್ಲರೂ ಬಿಡಿಸಿ ನೋಡಲು ಪ್ರಯತ್ನಿಸಿದರೂ ಅದು ತೆರೆದುಕೊಳ್ಳದೇ ಹಾಗೆಯೇ ನಿಲ್ಲುತ್ತದೆ. ರಾಜತ್ತೆಯ ವಿವಾಹದ ಹಿಂದೆ ಮುಂದೆ ಸಾಕಷ್ಟು ದುರಂತಗಳು ನಡೆದಿರುವ ಸೂಚನೆ ಸಿಕ್ಕರೂ ರಾಜತ್ತೆ ಯಾವುದನ್ನೂ ತೆರೆಯದೇ ಮುಗಿದ ಕಥೆಯನ್ನು ಮುಗಿಸಿಯೇ ಬಿಡುತ್ತಾಳೆ. ಧಿಮಾಕಿನ ರಾಜತ್ತೆ ಮದುವೆಯಾಗಿ ಹೋದವಳು ಗಂಡನನ್ನು ಕಳೆದುಕೊಂಡು ಬಹಳ ವರ್ಷಗಳ ನಂತರ ಊರಿಗೆ ಬರುತ್ತಾಳೆ.ತಂದೆತಾಯಿಯ ಒಬ್ಬಳೇ ಮಗಳಾದ ಕಾರಣ ಅವಳೇ ಎಲ್ಲ ಯಜಮಾನಿಕೆಯನ್ನು ತೆಗೆದುಕೊಳ್ಳುತ್ತಾಳೆ. ಗಂಡನನ್ನು ಕಳೆದುಕೊಂಡು ಊರಿಗೆ ಮರಳಿದ ರಾಜತ್ತೆ ಬಹಳ ಬದಲಾಗಿರುತ್ತಾಳೆ.ಆ ಬದಲಾವಣೆಗೆ ಕಾರಣವಾಗಲೀ, ಅವಳ ಮತ್ತು ಅವಳ ಗಂಡನ ಕಥೆಯನ್ನಾಗಲಿ ಯಾರ ಮುಂದೆಯೂ ಬಿಚ್ಚಿಡುವುದಿಲ್ಲ. ಕೆಟ್ಟು ನಿಂತ ಹಾರ್ಮೋನಿಯಂ ರಾಜತ್ತೆಯ ಕಥೆಯ ಅವಶೇಷವಾಗಿ ಕಾಣಿಸುತ್ತದೆ. ಆದರೆ ಕಥೆಯ ಪುಟಗಳು ಮಾತ್ರ ಮುಗಿಯುವುದೇ ಹೊರೆತು ಅವಳ ಜೀವನದ ಪುಟಗಳು ಕಥೆಯಲ್ಲಿ ತೆರೆದುಕೊಳ್ಳುವುದೇ ಇಲ್ಲ.

**'ಕ್ರೌಂಚ ಪಕ್ಷಿಗಳು'** ಕಥೆಯಲ್ಲಿ ಲೇಖಕಿ ಸ್ವತಂತ್ರ ಹೋರಾಟದ ಸಂದರ್ಭದಲ್ಲಿ ನಡೆಯುತ್ತಿದ್ದ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯವನ್ನು ಚಿತ್ರಿಸಿದ್ದಾರೆ. ಗಾಂಧೀಜಿಗೆ ಹತ್ತಿರದವರಾದ ವಿಶಾಖಾ ಬೆನ್‌ಅವರು ಸ್ವತಂತ್ರ್ಯಾ ನಂತರವೂ ವಲಸೆ ಜನರ ಪುನರ್ವಸತಿಗಾಗಿ ದುಡಿಯುತ್ತಾರೆ. ಯಾವುದೇ ಅಧಿಕಾರದ ಆಸೆಗೆ ಒಳಪಡದೇ ಮಹಿಳೆಯರ ಸಮಸ್ಯೆಗಳಿಗೆ ಹೋರಾಟ ನಡೆಸುತ್ತಾ ಬದುಕಿದ್ದ ವಿಶಾಖಾ ಬೆನ್‌ಅವರ ಸಂದರ್ಶನ ತೆಗೆದುಕೊಳ್ಳಲು ಹೋದ ಇಬ್ಬರು ಸಂಶೋಧನಾ ವಿದ್ಯಾರ್ಥಿಗಳಿಗೆ ದೊರೆತ ಮಾಹಿತಿಗಳು ಸ್ವಾತಂತ್ರ್ಯ ಪೂರ್ವದ ಹೆಣ್ಣುಮಕ್ಕಳ ಪರಿಸ್ಥಿತಿಯ ಚಿತ್ರಣವನ್ನು ನೀಡುತ್ತದೆ. ವಿಶಾಖಾ ಬೆನ್ ಅವರು ಅಂದಿನ ರಾಜಕೀಯ, ಸಾಮಾಜಿಕ ಸ್ಥಿತಿಗತಿ, ಜೈಲುವಾಸ, ತಾನು ಕಂಡ ಕೆಲವು ಸ್ವಾತಂತ್ರ್ಯ ಹೋರಾಟಗಾರರ ಕುರಿತು ಹಾಗೂ ಗಾಂಧಿಯವರೊಡನೆ ತನ್ನ ಮುಖಾಮುಖಿಚರ್ಚೆಕುರಿತು ಸಾಕಷ್ಟು ಇತಿಹಾಸದ ವಿವರಗಳನ್ನು ನಿರರ್ಗಳವಾಗಿ ಮಾತನಾಡುತ್ತಾರೆ. ದೇಶ ವಿಭಜನೆಯ ವಿಚಾರಗಳು ಬಂದಾಗ ಬೆನ್ ಅವರು ಕ್ಷಣಕಾಲ ವೇದನೆಯಿಂದ ಮೌನವಹಿಸುತ್ತಾರೆ. ಅವರ ಸಹಾಯಕಿಯಾಗಿ ಅವರೊಂದಿಗಿದ್ದ ಲಕ್ಷ್ಮಿಯಿಂದಕಥೆ ಹೇಳಿಸುತ್ತಾರೆ. ಹಿಂದೂ– ಮುಸ್ಲಿಂ ಎರಡೂ ಕೋಮಿನ ಹೆಣ್ಣು ಮಕ್ಕಳನ್ನು ದ್ವೇಷದಿಂದ ಕದ್ದೊಯ್ದು ಅತ್ಯಾಚಾರ ನಡೆಸಿ ನಿರಾಶ್ರಿತಗೊಳಿಸಿದ್ದ ಬಗ್ಗೆ ವಿವರಿಸುತ್ತಾರೆ. ಈ ರೀತಿಯ ಹೆಣ್ಣುಮಕ್ಕಳ ಪರವಾಗಿ ಬೆನ್ ಹೋರಾಡಿ ಅಂಥವರಿಗೆ ಪುನರ್ವಸತಿ ಕಲ್ಪಿಸುತ್ತಾರೆ. ಲಕ್ಷ್ಮಿಯ ಗಂಡ ಆಕೆಯನ್ನು ಗುರುತಿಸಲು ಬಂದವನು ಆಕೆ ಯಾರೆಂದುಗೊತ್ತಿಲ್ಲವೆಂದು ತಿರಸ್ಕರಿಸಿ ದೆಹಲಿಯಿಂದ ಪುನಃ ಊರಿಗೆ ಹಿಂತಿರುಗಿ ಕ್ರೌಂಚಪಕ್ಷಿ ಎನಿಸಿಕೊಂಡವನು ಅನ್ನಪೂರ್ಣಮ್ಮ ಎಂಬ ಹೆಣ್ಣನ್ನು ಮದುವೆಯಾಗಿ ಅಡಿಗೆ ಕೆಲಸ ಹಿಡಿದು ಜೀವನ ಸಾಗಿಸುತ್ತಾನೆ. ಜೀವನದಲ್ಲಿ ನೊಂದ ಆತ ಖಾಯಿಲೆಯಿಂದ ನರಳಿ ಆತ್ಮಹತ್ಯೆಗೂ ಶರಣಾಗುತ್ತಾನೆ. ಲಕ್ಷ್ಮಿಸಿಗಲಿಲ್ಲವೆಂದು ಅನ್ನಪೂರ್ಣ ಹೇಳಿದರೂ ಆಗಾಗ ಮೋಸ ಮೋಸವೆಂಬ ಪದವನ್ನುಉಚ್ಚರಿಸಿ ವಿಷಾದ ವ್ಯಕ್ತಪಡಿಸುತ್ತಾನೆ. ಲಕ್ಷ್ಮಿಯು ವಿಭಿನ್ನ ಕೋಮಿನ ಜನರಿಂದ ಕದ್ದೊಯ್ಯಲ್ಪಟ್ಟು ಬಲಾತ್ಕರಿಸಲ್ಪಟ್ಟಳೆಂದೇ ಆಕೆಯನ್ನು ತಿರಸ್ಕರಿಸಿ ಬಿಡುತ್ತಾನೆ. ದೇಶ ವಿಭಜನೆಯ ಸಂದರ್ಭದಲ್ಲಿ ಹಿಂದೂ ಮತ್ತು ಮುಸ್ಲಿಂ ಹೆಂಗಸರು ಈ ರೀತಿ ದೌರ್ಜನ್ಯಕ್ಕೆ ತುತ್ತಾಗಿ ಪುನರ್ವಸತಿ ಪಡೆದಿದ್ದ ಹೆಂಗಸರನ್ನು ವಿಶಾಖಾ ಬೆನ್‌ಅವರು ಸರಕಾರದ ಪ್ರತಿನಿಧಿಯಾಗಿ ವಿನಿಮಯ ಮಾಡಿಕೊಂಡು ಭಾರತೀಯ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸುತ್ತಾರೆ. ಶಾಪಗ್ರಸ್ತ ಸ್ತ್ರೀಕುಲ ಎನ್ನುವ ಬೆನ್‌ಸೀತೆ, ಶಕುಂತಲೆಯರು ಗಂಡನಿಂದ ಸಮಾಜದಲ್ಲಿ ತಿರಸ್ಕರಿಸಲ್ಪಟ್ಟರು ಎಂದು ತನ್ನ ಸಹಾಯಕಿ ಲಕ್ಷ್ಮಿಯ ಕಥೆಯನ್ನು ಹೇಳುತ್ತಾರೆ. ಲಕ್ಷ್ಮಮ್ಮ ತನ್ನ ಊರಿನವಳು ಎಂದು ತಿಳಿದು ಅಚ್ಚರಿಗೊಂಡ ಸಂಶೋಧಕಿ ಅರುಂಧತಿ ಭಟ್ಟರ ವಿವರಣೆಯನ್ನು ಮತ್ತು ಲಕ್ಷ್ಮಮ್ಮನ ವಿವರಣೆಯನ್ನು ತೂಗಿ ನೋಡಿ ಸತ್ಯವನ್ನು ಅರ್ಥೈಸಿಕೊಂಡು ಲಕ್ಷ್ಮಮ್ಮ ಕ್ರೌಂಚಪಕ್ಷಿಯಂತೆ ಬಲಿಯಾದವಳು ಎಂದುಕೊಳ್ಳುತ್ತಾಳೆ.ಅರುಂಧತಿಗೆ ವಿಶಾಖಾ ಬೆನ್‌ಕೂಡಾ ಒಂದು ಕ್ರೌಂಚಪಕ್ಷಿ ಎಂದೆನಿಸುತ್ತದೆ. ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಹೆಂಗಸರಮೇಲಿನ ಬಲಾತ್ಕಾರ, ದೌರ್ಜನ್ಯ ಮತ್ತು ಅವರ ಧಾರುಣ ಜೀವನವನ್ನು ಈ ಕಥೆ ಕ್ರೌಂಚಪಕ್ಷಿಯ ಪ್ರಸಂಗದ ಆದಿ ಪ್ರತಿಮಾ ಮಾದರಿಯನ್ನು ಇಟ್ಟುಕೊಂಡು ಸುಂದರವಾಗಿ ವಿವರಿಸಿದೆ.

ವೈದೇಹಿ ಅವರಕಥೆಗಳು ಹೆಣ್ಣುಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡಿವೆ. **'ಕ್ರೌಂಚ ಪಕ್ಷಿಗಳು'** ಕಥಾ ಸಂಕಲನದ ಮೊದಲ ಐದು ಕಥೆಗಳು ಕುಂದಾಪುರ ಕನ್ನಡ ಭಾಷೆಯ ಸೊಗಡಿನಲ್ಲಿ ಚಿತ್ರಣಗೊಂಡಿವೆ. ನಂತರದ ಐದು ಕಥೆಗಳು ಆಧುನಿಕ ಸಂದರ್ಭದಲ್ಲಿ ಸ್ತ್ರೀಕುಲದ ಮೇಲೆ ನಡೆವ ವಿಭಿನ್ನ ರೀತಿಯ ಮಾನಸಿಕ ಮತ್ತು ದೈಹಿಕವಾದ ಬಲತ್ಕಾರವನ್ನು ವಿವರಿಸುತ್ತವೆ. ಮದುವೆ, ಕುಟುಂಬ, ದಾಂಪತ್ಯ, ಲೈಂಗಿಕ ಸಂತೃಪ್ತಿಯ ಸಮಸ್ಯೆಗಳು ಮತ್ತೆ ಮತ್ತೆ ವೈದೇಹಿಯವರ ಕಥೆಗಳ ವಸ್ತುವಾಗಿವೆ. ಅವರು ಸ್ತ್ರೀ ಕುರಿತು ಇರುವ ಸಿದ್ಧ ಮಾದರಿಕಲ್ಪನೆ, ಗ್ರಹಿಕೆಗಳನ್ನು ನಿರಾಯಾಸವಾಗಿ ಬುಡಮೇಲು ಮಾಡಿಸ್ತ್ರೀಯನ್ನು ನಡೆಸಿಕೊಂಡಿರುವಅಸಭ್ಯ, ವಿಕೃತ ಲೋಕವನ್ನು ಅನಾವರಣಗೊಳಿಸುತ್ತಾರೆ. ಒಟ್ಟಿನಲ್ಲಿ ಹೆಣ್ಣುಗಂಡಿನ ಸಂಬಂಧಗಳನ್ನು ಸೂಕ್ಷ್ಮಅವಲೋಕನಕ್ಕೆ ಒಳಪಡಿಸಿ ಒಂದು ತಾತ್ವಿಕ ಆಯಾಮವನ್ನು ವಿಶಾಲಗೊಳಿಸುತ್ತಾ ಎಲ್ಲ ತರಹದ ಪರಿಸ್ಥಿತಿಗಳನ್ನು ಸಾಹಿತ್ಯದ ಮೂಲಕ ದಾಖಲಿಸುವಲ್ಲಿ ವೈದೇಹಿ ಅವರು ಯಶಸ್ವಿಯಾಗಿದ್ದಾರೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

## ಪರಾಮರ್ಶನ ಗ್ರಂಥಗಳು

- **ವೈದೇಹಿ (2016) :** 'ಕ್ರೌಂಚ ಪಕ್ಷಿಗಳು' ಕಥಾ ಸಂಕಲನ ನಾಲ್ಕನೇ ಮುದ್ರಣ, ಹೆಗ್ಗೊಡು, ಸಾಗರ ಅಕ್ಷರ ಪ್ರಕಾಶನ. (ಕರ್ನಾಟಕ).

■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆಯ ಕುರಿತು ಒಂದು ಅಧ್ಯಯನ

✍ **ಡಾ. ಶೋಭಾ ಎಂ.,** ಸಹಾಯಕ ಪ್ರಾಧ್ಯಾಪಕರು, ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ, ನಂ.140, ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ, ಮೈಸೂರು.

*ಸಾರಾಂಶ*

*ಪ್ರಸ್ತುತ ಅಧ್ಯಯನವು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿರುವ ವಿಜ್ಞಾನದಡೆಗಿನ ಮನೋಧೋರಣೆ ಹಾಗೂ ವಿಜ್ಞಾನ ಸಾಧನೆಯನ್ನು ತಿಳಿಯುವ ಉದ್ದೇಶದಿಂದ ಸಂಶೋಧಕರು "ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆಯ ಕುರಿತು ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆಯ ಮಟ್ಟವನ್ನು ಅಧ್ಯಯನ ಮಾಡುವುದು, ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನದ ಸಾಧನೆಯ ಮಟ್ಟವನ್ನು ಅಧ್ಯಯನ ಮಾಡುವುದು, ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವಿನ ವಿಜ್ಞಾನದ ಮನೋಧೋರಣೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು, ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವಿನ ವಿಜ್ಞಾನದಲ್ಲಿನ ಸಾಧನೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು,ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವಿನ ವಿಜ್ಞಾನ ಮನೋಧೋರಣೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು, ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವಿನ ವಿಜ್ಞಾನದಲ್ಲಿನ ಸಾಧನೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು. ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನದಲ್ಲಿನ ಮನೋಧೋರಣೆ ಮತ್ತು ವಿಜ್ಞಾನದಲ್ಲಿನ ಸಾಧನೆಯಲ್ಲಿನ ಸಹ ಸಂಬಂಧವನ್ನು ಅಧ್ಯಯನ ಮಾಡುವುದು.ಈ ಉದ್ದೇಶಗಳನ್ನು ಅಧಾರವಾಗಿಟ್ಟುಕೊಂಡು ಶೂನ್ಯ ಪ್ರಕಲ್ಪನೆಯನ್ನು ರಚಿಸಿಕೊಳ್ಳಲಾಗಿದೆ. ಈ ಉದ್ದೇಶ ಮತ್ತು ಪ್ರಕಲ್ಪನೆಗಳನ್ನು ಪರೀಕ್ಷಿಸಲು ಅಗತ್ಯವಾದ ದತ್ತಾಂಶಗಳನ್ನು ಸಂಗ್ರಹಿಸಲು ಅವಿನಾಶ್ ಗ್ರೆವಾಲರವರು ರಚಿಸಿರುವ ವಿಜ್ಞಾನ ಮನೋಧೋರಣೆ ಎಂಬ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ ಮತ್ತು ವಿಜ್ಞಾನ ಸಾಧನೆಗೆ ವಿದ್ಯಾರ್ಥಿಗಳು ಹಿಂದಿನ ವರ್ಷದಲ್ಲಿ ವಿಜ್ಞಾನ ವಿಷಯದಲ್ಲಿ ಪಡೆದ ಅಂಕಗಳನ್ನು ಬಳಸಿಕೊಳ್ಳಲಾಗಿದೆ. ಇದರ ಮೂಲಕ ಸಂಗ್ರಹಿಸಿದ ದತ್ತಾಂಶಗಳನ್ನು ವಿಶ್ಲೇಷಿಸಲು ಟಿ ಪರೀಕ್ಷೆ ಪಿಯರ್‌ಸನ್ ರವರ ಸಹ ಸಂಬಂದ ಗುಣಾಂಕ ಎಂಬ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸಿಕೊಳ್ಳಲಾಗಿದೆ. ದತ್ತಾಂಶಗಳನ್ನು ವಿಶ್ಲೇಷಿಸಿದಾಗ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವೆ ವಿಜ್ಞಾನ ಮನೋಧೋರಣೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡು ಬಂದಿರುವುದಿಲ್ಲ. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವೆ ವಿಜ್ಞಾನ ಸಾಧನೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬಂದಿದೆ. ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವೆ ವಿಜ್ಞಾನ ಮನೋಧೋರಣೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡು ಬಂದಿರುವುದಿಲ್ಲ. ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವೆ ವಿಜ್ಞಾನ ಸಾಧನೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬರುತ್ತದೆ. ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆಯ ನಡುವೆ ಅತಿ ಕಡಿಮೆ ಮತ್ತು ಉಪೇಕ್ಷಿತ ಋಣಾತ್ಮಕ ಸಹಸಂಬಂಧ ಹೊಂದಿರುವುದು ಕಂಡುಬಂದಿದೆ.*

ಪ್ರಮುಖಾಂಶಗಳು : ವಿಜ್ಞಾನ ಮನೋಧೋರಣೆ, ವಿಜ್ಞಾನ ಸಾಧನೆ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು.

ಮಾನವನ ಜೀವನ ಮತ್ತು ಅವನ ಆಲೋಚನೆಯ ಮೇಲೆ ವಿಜ್ಞಾನ ಪ್ರಭಾವ ಅತ್ಯಧಿಕವಾಗಿದೆ. ವಿಜ್ಞಾನದ ಪರಿಣಾಮಗಳನ್ನು ಹಾಗೂ ವಿಜ್ಞಾನದ ಬಗ್ಗೆ ಅರಿವು ಮೂಡಿಸಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ವಿಜ್ಞಾನವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ನಾವು ವಿಜ್ಞಾನ ವಿಲ್ಲದೆ ಪ್ರಪಂಚವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ಅದು ವಿಜ್ಞಾನವು ಅಷ್ಟೊಂದು ಮುಂದುವರೆದಿದೆ.

ಮಾನವನು ತನ್ನ ಆಸೆ ಆದ್ಯತೆಗಳನ್ನು ತೃಪ್ತಿ ಪಡಿಸುವ ಸಲುವಾಗಿ ರೂಪಿಸಿಕೊಂಡಿರುವ ಹಲವಾರು ಚಟುವಟಿಕೆಗಳಲ್ಲಿ ವಿಜ್ಞಾನವು ಒಂದಾಗಿದೆ. ಶತಮಾನಗಳಿಗೆ ವಿಜ್ಞಾನವು ಮುನ್ನಡೆಯುತ್ತಾ ಎಲ್ಲೆಡೆ ವ್ಯಾಪಿಸಿದೆ. ವಿಜ್ಞಾನ ಎಂಬ ಪದವು ಆಂಗ್ಲ ಭಾಷೆಯ ಸೈನ್ಸ್ ಎಂಬ ಪದದಿಂದ ಬಂದಿದೆ ಇದು ಲ್ಯಾಟಿನ್ ಪದ 'ಸೈನ್ಷಿಯಾ' (Scientia) ಎಂಬ ಮೂಲ ಪದದಿಂದ ಬಂದಿದೆ. ಅಂದರೆ "ಜ್ಞಾನವನ್ನು ಗಳಿಸುವ ಮತ್ತು ತಿಳಿದುಕೊಳ್ಳುವುದು ಎಂದಾಗುತ್ತದೆ. ಭಾಷಾ ಶಾಸ್ತ್ರದಲ್ಲಿ 'ವಿಜ್ಞಾನ' ಮತ್ತು 'ಜ್ಞಾನ' ಪರ್ಯಾಯ ಪದಗಳಾಗಿ ಬಳಸಿದರೂ ಸಹ ಕೇವಲ ಜ್ಞಾನ ಅಥವಾ ಎಲ್ಲಾ ಜ್ಞಾನಗಳು ವಿಜ್ಞಾನ ವಾಗಿರುವುದಿಲ್ಲ. ವ್ಯವಸ್ಥಿತವಾದ ಜ್ಞಾನ ಭಂಡಾರವನ್ನು ನಿರ್ಧಿಷ್ಟ ರೀತಿಯಲ್ಲಿ ಶೇಖರಿಸುವುದೇ ವಿಜ್ಞಾನ. ವಿಜ್ಞಾನ ಜ್ಞಾನವೂ ಆಗಿದೆ ಮತ್ತು ಜ್ಞಾನದ ಪಡೆಯುವ ವಿಧಾನವೂ ಆಗಿದೆ. ವಿಜ್ಞಾನ ಎಂದರೆ ಕಲ್ಪನೆ ಮತ್ತು ವಾದಗಳನ್ನು ರೂಢಿಸುವ ಅನಂತವಾದ ಪಾಯೋಗಿಕ ಪರೀಕ್ಷೆಗಳ ಸರಣಿ.

ಸಾಮಾನ್ಯವಾಗಿ ವಿಜ್ಞಾನ ಅಂದರೆ "ಕ್ರಮಬದ್ಧವಾದ ಜ್ಞಾನ" ಅಥವಾ ವ್ಯವಸ್ಥಿತವಾದ ಜ್ಞಾನ ಎಂದಾಗುತ್ತದೆ.

ಅನೇಕ ಕಲ್ಪನೆಗಳು ವಾದಗಳನ್ನು ರೂಢಿಸುವ ಪ್ರಯೋಗಗಳಿಂದ ಸಿದ್ದಪಡಿಸಬಹುದಾದ ಜ್ಞಾನವೇ ವಿಜ್ಞಾನ ಮತ್ತು ಒಂದು ವಸ್ತುವಿನ ಬದಲಾವಣೆಗೆ ಸಂಬಂಧಿಸಿದಂತೆ ನೈಜ ಕಾರಣಗಳ ವೈಜ್ಞಾನಿಕ ಅಧ್ಯಾಯನವೇ ವಿಜ್ಞಾನ. ನಮ್ಮ ಸುತ್ತ ಮುತ್ತಲಿನ ವಸ್ತುಗಳ ಪ್ರಕ್ರಿಯೆಗಳ ಹಾಗೂ ಅವುಗಳ ನಡುವೆ ಇರುವ ಅವಿನಾವಭಾವ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡುವ ವಾಸ್ತು ವಿಷಯವೇ ವಿಜ್ಞಾನ.

ವಿಜ್ಞಾನವು ತನ್ನದೇ ಆದ ಮೌಲ್ಯವನ್ನು ಹೊಂದಿದೆ. ಆಧುನಿಕ ಸಮಾಜವು ಪೂರ್ತಿಯಾಗಿ ವೈಜ್ಞಾನಿಕ ಪರಿಸರವನ್ನು ಅಳವಡಿಸಿಕೊಂಡಿದ್ದು ವಿಜ್ಞಾನವು ಮನುಷ್ಯನ ನಿತ್ಯ ಜೀವನದ ಆಂತರಿಕ ಭಾಗವಾಗಿದೆ.ಸದ್ಯದ ಪರಿಸ್ಥಿತಿಯಲ್ಲಿ ವಿಜ್ಞಾನವಿಲ್ಲದೆ ಮನುಷ್ಯನಿಲ್ಲ ಎನ್ನುವಂತಾಗಿದೆ ವಿಜ್ಞಾನವು ಉದ್ಯಮಗಳು, ಸಾರಿಗೆ ಸಂಪರ್ಕ, ಇಂಜಿನಿಯರಿಂಗ್, ವೈದ್ಯಕೀಯ ಕೃಷಿ ಬಾಹ್ಯಕಾಶ ಮುಂತಾದ ಕ್ಷೇತ್ರಗಳಲ್ಲಿ ಮಹತ್ವವನ್ನು ಪಡೆದಿದೆ.

ಯಾವುದೇ ದೇಶದ ಭವಿಷ್ಯವು ಅದರ ವೈಜ್ಞಾನಿಕ ಪ್ರಗತಿಯನ್ನು ಅವಲಂಬಿಸಿದೆ. ವಿಜ್ಞಾನವು ಮಾನವನ ಜೀವನಶೈಲಿಯನ್ನು ಸರಳವಾಗಿ ಬದಲಾಯಿಸಿದೆ ಈ ಬದಲಾವಣೆಯಲ್ಲಿ ಅವನ ಯೋಜನೆ ಧೋರಣೆ ಆಸಕ್ತಿ ಅಗತ್ಯತೆ ಇವುಗಳನ್ನು ತೃಪ್ತಿಪಡಿಸುವಿಕೆ ಮುಂತಾದವುಗಳೆಲ್ಲಾ ಸೇರಿವೆ. ಇದೇ ಅಲ್ಲದೇ ಉದಯೋನ್ಮುಖ ಜಗತ್ತಿನೊಂದಿಗೆ ನಮ್ಮನ್ನು ನಾವು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಂಭಾಳಿಸಿಕೊಂಡು ಹೋಗಲು ಅನುಕೂಲತೆಗಳನ್ನು ಒದಗಿಸಿದ ವಿಜ್ಞಾನ ಯಾವುದನ್ನು ಬಲವಂತ ಪಡಿಸದೆ ಕೇವಲ ಸಲಹೆಗಳನ್ನು ಕೊಡುವುದರಿಂದ ನಮ್ಮನು ಮುಕ್ತ ಮನಸ್ಕರನ್ನಾಗಿಸುತ್ತದೆ.

ಆಧುನಿಕ ನಾಗರೀಕತೆಯು ವೈಜ್ಞಾನಿಕ ನಾಗರೀಕತೆ, ಆಧುನಿಕ ಸಮಾಜ ಪೂರ್ತಿಯಾಗಿ ವೈಜ್ಞಾನಿಕ ಪರಿಸರವನ್ನು ಅಳವಡಿಸಿಕೊಂಡು ವಿಜ್ಞಾನವೂ ನಮ್ಮ ನಿತ್ಯ ಜೀವನದ ಆಂತರಿಕ ಭಾಗವಾಗಿದೆ.ಇತ್ತೀಚಿಗೆ ವಿಜ್ಞಾನ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಆದ ಅಗಾಧ ಜ್ಞಾನ ಸಂಪಾದನೆ ಹಾಗೂ ಸಾಧನೆಗಳು ಮಾನವ ಕಲ್ಯಾಣ ಕಾರ್ಯದಲ್ಲಿ ಅಪಾರ ಕೊಡುಗೆಯನ್ನು ನೀಡಿದೆ.

ಆಧುನಿಕ ವಿಜ್ಞಾನವು ಮಾನವರಿಗೆ ಹಲವಾರು ವಸ್ತುಗಳನ್ನು ನೀಡಿದೆ ವಿಜ್ಞಾನವು ಮಾನವನ ಬುದ್ಧಿಯನ್ನು ಹೆಚ್ಚಿಸುವುದರ ಜೊತೆಗೆ ಸ್ಪೂರ್ತಿಯನ್ನು ಹೆಚ್ಚಿಸಿದೆ. ಪ್ರತಿಯೊಂದು ಹೊಸ ಹೊಸ ಅವಿಸ್ಕಾರವು ಮಾನವನ ಪ್ರಪಂಚದ ಅರಿವನ್ನು ವೃದ್ಧಿಗೊಳಿಸುತ್ತದೆ. ವಿಜ್ಞಾನವು ಪರಿಸರದಲ್ಲಿ ಮಾನವ ಕಲ್ಯಾಣ ಕಾರ್ಯದಲ್ಲಿ ಅಪಾರ ಕೊಡುಗೆ ನೀಡಿದೆ.ಮಾನವ ಒಬ್ಬ ಪ್ರಬಲ ಜೀವಿಯಾಗಲು ಸಹಾಯ ಮಾಡಿದೆ. ಅಷ್ಟೆ ಅಲ್ಲದೆ ವಿದ್ಯಾರ್ಥಿಗಳನ್ನು ವಿಜ್ಞಾನವು ಸದಾಕಾಲ ಚಟುವಟಿಕೆಯಿಂದ ಕುತೂಹಲ ಭರಿತವಾಗಿ, ಹುಮ್ಮಸ್ಸಿನಿಂದ ಮೂಲಭೂತ ವಿಷಯ ಮತ್ತು ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ ಸಾಮಾರ್ಥ್ಯವನ್ನು ಒದಗಿಸುತ್ತದೆ.

## ವಿಜ್ಞಾನ ಮನೋಧೋರಣೆ

ವಿಜ್ಞಾನ ಒಂದು ವಿಶಾಲವಾದ ಕ್ಷೇತ್ರವಾಗಿದ್ದು ಇದಕ್ಕೆ ಸಂಬಂಧಿಸಿದ ಮನೋಧೋರಣೆಯನ್ನು ವಿಜ್ಞಾನಮನೋಧೋರಣೆ ಎಂಬ ಪದದಿಂದ ಕರೆಯಲಾಗುತ್ತದೆ ಅಥವಾ ವೈಜ್ಞಾನಿಕ ಮನೋವೃತ್ತಿ, ಮನೋಭಾವನೆ, ವೈಜ್ಞಾನಿಕ ಮನೋಧೋರಣೆ ಎಂದು ಪದವನ್ನು ಪರ್ಯಾಯ ಪದವಾಗಿ ಬಳಸುತ್ತಾರೆ.

"ವೈಜ್ಞಾನಿಕ ಮನೋಧೋರಣೆ" ಎಂಬ ಪದವು ವ್ಯಕ್ತಿಯ ವಿಜ್ಞಾನ ಬಗೆಗಿನ ಅಭಿಪ್ರಾಯಗಳು ನಂಬಿಕೆಗಳು ಮೆಚ್ಚಿಗೆಗಳು ಮತ್ತು ಮನಸ್ಸಿನ ವಿಶೇಷ ಗುಣಗಳಾದ ಕುತೂಹಲ ಮತ್ತು ವಿವೇಚನೆಯುಕ್ತಿ ಆಲೋಚನೆ ಎರಡನ್ನು ಸೂಚಿಸುತ್ತದೆ. ಇವುಗಳು ಒಬ್ಬ ವ್ಯಕ್ತಿ ಸಂಗತಿಗಳು, ಸಾಕ್ಷಿಗಳು ಮತ್ತು ವಿಜ್ಞಾನ ವಸ್ತುಗಳ ಕಡೆಗೆ ಯಾವ ರೀತಿ ವ್ಯವಹರಿಸುತ್ತಾನೆ ಎಂಬುದನ್ನು ವ್ಯಕ್ತಪಡಿಸುತ್ತದೆ.

"ವಿಜ್ಞಾನ ಮನೋಧೋರಣೆ" ಎಂಬ ಪದದ ಸಾಮಾನ್ಯ ಉಪಯೋಗವು ಹೆಚ್ಚು ಕಡಿಮೆ ಶಾಲೆಗಳಲ್ಲಿ ವಿಜ್ಞಾನ ಕಲಿಕೆಯ ತೃಪ್ತಿಯಿಂದ ಮುಕ್ತ ಮನಸ್ಸಿನಿಂದ ಉತ್ತಮ ಗುಣಲಕ್ಷಣಗಳನ್ನು ಆಯ್ದುಕೊಳ್ಳುವ ಕಡೆ ಇದೆ."ವೈಜ್ಞಾನಿಕ ಮನೋಧೋರಣೆ" ಎಂಬ ಪದವುವ್ಯಕ್ತಿಯ ವಿಜ್ಞಾನ ಬಗೆಗಿನ ಅಭಿಪ್ರಾಯಗಳು ವಿಮರ್ಶಾತ್ಮಕ ದೃಷ್ಟಿ, ವಾಸ್ತವತೆ ಮುಂತಾದ ಲಕ್ಷಣಗಳನ್ನು ಸೂಚಿಸುತ್ತದೆ.

ಜೆ.ಎಚ್.ಫಿಷರ್‌ರವರು "Re thinking of Science Education" ಎಂಬ ಪುಸ್ತಕದಲ್ಲಿ "ಮುಕ್ತ ಮೋನೋಭಾವದ, ನಿಖರ ಜ್ಞಾನದ ಆಪೇಕ್ಷ ಜ್ಞಾನಗೊಳಿಸುವ ಮಾರ್ಗಗಳ ಬಗ್ಗೆ ದೃಢ ವಿಶ್ವಾಸ ಹಾಗೂ ಸಮಸ್ಯೆಗೆ ಚೊಕ್ಕದಾದ ಜ್ಞಾನದ ಸಹಾಯದಿಂದಲೇ ಪರಿಹಾರ ದೊರೆಯುವುದು ಎಂಬ ದೃಢನಂಬಿಕೆ ಎಂದು ಹೇಳಿದ್ದಾರೆ.

## ವಿಜ್ಞಾನ ಸಾಧನೆ

ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಗತಿ, ಆಸಕ್ತಿಗಳು, ಆಕಾಂಕ್ಷೆಗಳು, ಬುದ್ದಿಶಕ್ತಿ ಸಾಮಾಜಿಕ ಕೌಶಲ್ಯಗಳು ಮತ್ತು ಮನೋ ವೈಜ್ಞಾನಿಕ ಅಂಶಗಳು ವಿಜ್ಞಾನ ಸಾಧನೆಯ ಮೇಲೆ ಪ್ರಭಾವ ಬೀರುತ್ತವೆ.

ವಿಜ್ಞಾನ ಸಾಧನೆಯನ್ನು ವಿದ್ಯಾರ್ಥಿಯ ಅಧ್ಯಯನ ಮಟ್ಟವನ್ನು ಮತ್ತು ಶಿಕ್ಷಣದ ಅಧ್ಯಯನದ ಮಟ್ಟವನ್ನು ತಿಳಿಸುತ್ತದೆ. ಇದಕ್ಕಾಗಿ ವಿದ್ಯಾರ್ಥಿಗಳಿಗೆ ಘಟಕ ಪರೀಕ್ಷೆ, ಕಿರುಪರೀಕ್ಷೆ ವಾರ್ಷಿಕ ಪರೀಕ್ಷೆಯನ್ನು ನೀಡಿ ಅವರ ಸಾಧನೆಯನ್ನು ತಿಳಿಸಲಾಗುತ್ತದೆ. ವಿಜ್ಞಾನ ಸಾಧನೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿ ಏನನ್ನು ಕಲಿತಿದ್ದಾನೆ ಎಂಬುದನ್ನು ಅಳತೆ ಮಾಡಲು ಸಹಾಯ ಮಾಡುತ್ತದೆ. ವಿಜ್ಞಾನ ಸಾಧನೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿ ಗಳಿಸಿದ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಗಳು ವಿಜ್ಞಾನ ವಿಷಯದಲ್ಲಿ ಎಷ್ಟು ಸಾಮಾರ್ಥ್ಯ ಗಳಿಸಿದ್ದಾನೆ ಎಂಬುದನ್ನು ತಿಳಿಯುಬಹುದಾಗಿದೆ. ಪರೀಕ್ಷೆಗಳ ಫಲಿತಾಂಶಗಳಿಂದ ಯಾವ ವಿದ್ಯಾರ್ಥಿಗಳಿಗೆ ಪರಿಹಾರತ್ಮಕ ಬೋಧನೆಯ ಅಗತ್ಯ ಇದೆ ಎಂಬುದನ್ನು ತಿಳಿದುಕೊಳ್ಳಬಹುದು.ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ವಿಜ್ಞಾನ ಸಾಧನಾ ಮಟ್ಟವನ್ನು ತಿಳಿಯಲು ಪ್ರಯತ್ನಿಸಲಾಗುತ್ತದೆ.

## ಪ್ರಸ್ತುತ ಅಧ್ಯಯನದ ಮಹತ್ವ

ವಿಜ್ಞಾನವು ಮಾನವ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಸದ್ಯಕ್ಕೆ ನಾವು ವಿಜ್ಞಾನವಿಲ್ಲದೆ ಪ್ರಪಂಚವನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ವಿಜ್ಞಾನದಿಂದ ಪ್ರಭಾವಿತವಾಗದ ಯಾವ ಅಂಶವು ಮಾನವ ಜೀವನದಲ್ಲಿ ಇಂದು ಕಂಡು ಬರುವುದಿಲ್ಲ ಅಲ್ಲದೆ ಪ್ರಸ್ತುತದಲ್ಲಿ ವಿಜ್ಞಾನ ವಿಷಯದ ಪಠ್ಯಕ್ರಮದಲ್ಲಿ ತನ್ನದೇ ಆದಂತಹ ಒಂದು ಮಹತ್ವದ ಸ್ಥಾನವನ್ನು ಅಲಂಕರಿಸಿದೆ. ಇಂದು ವಿಜ್ಞಾನ ವಿಷಯವು ನಮ್ಮ ರಾಜ್ಯದ ಎಲ್ಲಾ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಡ್ಡಾಯ ವಿಷಯವಾಗಿ ಬೋಧಿಸಲ್ಪಡುತ್ತದೆ. ಇದರ ಉದ್ದೇಶ ಕಲಿಯುತ್ತಿರುವ ಭಾವಿ ವಿದ್ಯಾರ್ಥಿಗಳಿಗೆ "ವೈಜ್ಞಾನಿಕ ಮನೋಧೋರಣೆ" ಬೆಳೆಸುವುದಾಗಿದೆ.

ಈ ವೈಜ್ಞಾನಿಕ ಮನೋಭಾವನೆಯು ಮಕ್ಕಳಲ್ಲಿ ಬೆಳೆಯಬೇಕಾದರೆ ಅವರು ಧನಾತ್ಮಕ ವಿಜ್ಞಾನ ಮನೋಧೋರಣೆಯನ್ನು ಹೊಂದಿರ ಬೇಕಾದುದ್ದು. ಅವಶ್ಯಕ ವಿದ್ಯಾರ್ಥಿಗಳಲ್ಲಿ ಧನಾತ್ಮಕ ಮನೋಧೋರಣೆಯನ್ನು ಬೆಳೆಸಿದರೆ ಕುತೂಹಲ, ವಿವೇಚನಾಶಕ್ತಿ, ತೆರೆದ ಮನಸ್ಸು, ವಿಮರ್ಶಾತ್ಮಕ ದೃಷ್ಟಿ, ವಾಸ್ತವತೆ, ಪ್ರಮಾಣಿಕತೆ, ವಿನಯಾ ಶೀಲತೆ, ಸಹನೆ ಸಮಯ ಪ್ರಜ್ಞೆಗಳನ್ನು ಬೆಳೆಸಬಹುದು ಮೂಢ ನಂಬಿಕೆ, ಅಂಧ ಶ್ರದ್ದೆಗಳಿಂದ ದೂರವಿರುತ್ತೇನೆ. ಇಷ್ಟೆ ಅಲ್ಲದೆ ಶಿಕ್ಷಕರು ಕೂಡ ಮಕ್ಕಳಿಗೆ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸಬಹುದು. ಮಕ್ಕಳಿಗೆ ವೈಜ್ಞಾನಿಕ ಮನೋಧೋರಣೆಯನ್ನು ಮೂಡಿಸಲು ಶಿಕ್ಷಕರು ವಿದ್ಯಾರ್ಥಿಗಳಿಗೆ ಯಾವ ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡು ಬೋಧನೆಯನ್ನು ಮಾಡುತ್ತಾರೆ ಎಂಬುದನ್ನು ತಿಳಿಯುವುದು ಅವಶ್ಯಕ. ಆದ್ದರಿಂದ ವೈಜ್ಞಾನಿಕ ಮನೋಭಾವನೆಯ ಬೆಳವಣಿಗೆಯ ಪ್ರಾಥಮಿಕ, ಮಾಧ್ಯಮಿಕ ಹಂತಕ್ಕಿಂತ ಪ್ರೌಢಶಾಲಾ ಹಂತಗಳಲ್ಲಿ ಹೆಚ್ಚು ಅವಶ್ಯಕವಾಗುತ್ತದೆ.ಆದ್ದರಿಂದ ಈ ಹಂತದಲ್ಲಿ ವಿಜ್ಞಾನ ಮನೋಧೋರಣೆಯು ಅವರ ಸಾಧನೆಯ ಮೇಲೆ ಹೆಚ್ಚಿನ ಪ್ರಭಾವ ಬೀರುವುದರಿಂದ ಇದರ ಅಧ್ಯಯನ ಅವಶ್ಯಕ.

ಈ ಅಧ್ಯಯನದ ಮುಖ್ಯ ಉದ್ದೇಶ ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆಯನ್ನು ಅರಿಯುವುದು ಅಗತ್ಯವೆಂದು ಪರಿಗಣಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಬಹುದು.

## ಸಮಸ್ಯಾ ನಿರೂಪಣೆ

ಪ್ರಸ್ತುತ ದಿನಗಳಲ್ಲಿ ವಿಜ್ಞಾನವು ಒಂದು ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ವಿಜ್ಞಾನದ ಬಗ್ಗೆ ತಿಳಿಸುವುದು ಹಾಗೂ ವಿಜ್ಞಾನದ ಚಮತ್ಕಾರಗಳ ಬಗ್ಗೆ ಅರಿವು ಮೂಡಿಸುವುದು ಶಿಕ್ಷಣದ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಪ್ರಸಕ್ತ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಅಧ್ಯಯನದಲ್ಲಿ ವಿದ್ಯಾರ್ಥಿಗಳು ವಿಜ್ಞಾನದ ಬಗ್ಗೆ ಹೊಂದಿರುವ ಮನೋಧೋರಣೆ ಮತ್ತು ವಿಜ್ಞಾನ ವಿಷಯದಲ್ಲಿ ಅದರ ಸಾಧನೆಯನ್ನು ಅಧ್ಯಯನ ಮಾಡುವ ಉದ್ದೇಶದಿಂದ "ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನದೆಡೆಗಿನ ಮನೋಧೋರಣೆ ಮತ್ತು ವಿಜ್ಞಾನದಲ್ಲಿನ ಸಾಧನೆಯ ಕುರಿತು ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

## ಅಧ್ಯಯನದ ಉದ್ದೇಶಗಳು

ಪ್ರಸ್ತುತ ಅಧ್ಯಯನದಲ್ಲಿ ಈ ಕೆಳಗಿನ ಉದ್ದೇಶಗಳನ್ನು ಪರೀಕ್ಷಿಸಲಾಗುವುದು.

- ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆಯ ಮಟ್ಟವನ್ನು ಅಧ್ಯಯನ ಮಾಡುವುದು.
- ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನದ ಸಾಧನೆಯ ಮಟ್ಟವನ್ನು ಅಧ್ಯಯನ ಮಾಡುವುದು.
- ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವಿನ ವಿಜ್ಞಾನದ ಮನೋಧೋರಣೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು.
- ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವಿನ ವಿಜ್ಞಾನದಲ್ಲಿನ ಸಾಧನೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು.
- ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವಿನ ವಿಜ್ಞಾನ ಮನೋಧೋರಣೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು.
- ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವಿನ ವಿಜ್ಞಾನದಲ್ಲಿನ ಸಾಧನೆಯಲ್ಲಿನ ವ್ಯತ್ಯಾಸವನ್ನು ಅಧ್ಯಯನ ಮಾಡುವುದು.
- ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನದಲ್ಲಿನ ಮನೋಧೋರಣೆ ಮತ್ತು ವಿಜ್ಞಾನದಲ್ಲಿನ ಸಾಧನೆಯಲ್ಲಿನ ಸಹ ಸಂಬಂಧವನ್ನು ಅಧ್ಯಯನ ಮಾಡುವುದು.

## ಅಧ್ಯಯನದ ಪ್ರಕಲ್ಪನೆಗಳು

ಪ್ರಸ್ತುತ ಅಧ್ಯಯನದಲ್ಲಿನ ಉದ್ದೇಶಗಳನ್ನು ಆಧಾರವಾಗಿ ಈ ಕೆಳಗಿನ ಶೂನ್ಯ ಪ್ರಕಲ್ಪನೆಯನ್ನು ರೂಪಿಸಿಕೊಳ್ಳಲಾಗಿದೆ.

- ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ನಡುವೆ ವಿಜ್ಞಾನದ ಮನೋಧೋರಣೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ನಡುವೆ ವಿಜ್ಞಾನದ ಸಾಧನೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವೆ ವಿಜ್ಞಾನ ಮನೋಧೋರಣೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವೆ ವಿಜ್ಞಾನದ ಸಾಧನೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವಿಜ್ಞಾನಮನೋಧೋರಣೆ ಮತ್ತು ವಿಜ್ಞಾನದ ಸಾಧನೆಯ ನಡುವೆ ಮಹತ್ವ ಪೂರ್ಣವಾದ ಸಹಸಂಬಂಧ ಕಂಡುಬರುವುದಿಲ್ಲ.

## ಅಧ್ಯಯನದ ಚಲಕಗಳು

ಪ್ರಸ್ತುತ ಅಧ್ಯಯನದಲ್ಲಿ ಈ ಕೆಳಗಿನ ಚಲಕಗಳು ಕಂಡುಬರುತ್ತವೆ.

- **ಪ್ರಮುಖ ಚಲಕಗಳು**
  - ವಿಜ್ಞಾನ ಮನೋಧೋರಣೆ
  - ವಿಜ್ಞಾನಸಾಧನೆ
- **ಮದ್ಯವರ್ತಿ ಚಲಕಗಳು**
  - ಲಿಂಗ (ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು)
  - ಶಾಲೆಯ ವಿಧ (ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳು)

## ಚಲಕಗಳ ಸಂಕ್ರಿಯಾತ್ಮಕ ವ್ಯಾಖ್ಯಾನಗಳು

ಪ್ರಸ್ತುತ ಅಧ್ಯಯನದಲ್ಲಿ ಬಳಸಲಾಗಿರುವ ಚಲಕಗಳನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

- **ವಿಜ್ಞಾನ ಮನೋಧೋರಣೆ** : ಪ್ರಸ್ತುತ ಅಧ್ಯಯನಕ್ಕೆ ಅವಿನಾಶ್ ಗ್ರೆವಾಲ್ ರವರು ರಚಿಸಿರುವ ವಿಜ್ಞಾನ ಮನೋಧೋರಣೆ ಮಾಪನ ಎಂಬ ಸಾಧನವನ್ನು ಬಳಸಿಕೊಳ್ಳಲಾಗಿದೆ. ಈ ಮಾಪನದಲ್ಲಿ ಒಟ್ಟು 20 ಪ್ರಶ್ನೆಗಳಿವೆ ಆ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ನೀಡಿರುವ ಅಭಿಪ್ರಾಯದ ಒಟ್ಟು ಮೊತ್ತವನ್ನು ವಿಜ್ಞಾನ ಮನೋಧೋರಣೆ ಎಂದು ಪರಿಗಣಿಸಲಾಗಿದೆ.
- **ವಿಜ್ಞಾನ ಸಾಧನೆ** : ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ವಿಜ್ಞಾನ ವಿಷಯದಲ್ಲಿ ಗಳಿಸಿರುವ ಅಂಕಗಳನ್ನು ವಿಜ್ಞಾನ ಸಾಧನೆ ಎಂದು ಪರಿಗಣಿಸಲಾಗಿದೆ.
- **ಲಿಂಗ** : ಮೈಸೂರು ನಗರದಲ್ಲಿರುವ ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಲಿಂಗವಾಗಿ ಪರಿಗಣಿಸಲಾಗಿದೆ.
- **ಶಾಲೆಯ ವಿಧ** : ಮೈಸೂರು ನಗರದಲ್ಲಿರುವ ಎಲ್ಲಾ ಅನುದಾನ ಸಹಿತ ಹಾಗೂ ಸರ್ಕಾರಿ ಶಾಲೆಗಳನ್ನು ಸರ್ಕಾರಿ ಶಾಲೆಗಳೆಂದು ಮತ್ತು ಮೈಸೂರು ನಗರದ ಎಲ್ಲಾ ಅನುದಾನ ರಹಿತ ಶಾಲೆಗಳನ್ನು ಖಾಸಗಿ ಶಾಲೆಗಳೆಂದು ಪರಿಗಣಿಸಲಾಗಿದೆ.

## ಸಂಶೋಧನ ವಿಧಾನ ಮತ್ತು ರಚನೆ

ಪ್ರಸ್ತುತ ಅಧ್ಯಯನವು ವಿವರಣಾತ್ಮಕ ಸಮೀಕ್ಷೆ ವಿಧಾನವನ್ನು ಅಳವಡಿಸಿಕೊಂಡಿದ್ದು ಇದರಲ್ಲಿ ಮೈಸೂರು ನಗರದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳಿಂದ ಒಟ್ಟು 200 ವಿದ್ಯಾರ್ಥಿಗಳನ್ನು ಸ್ತರೀಕೃತ ಯಾದಚ್ಛಿಕ ಪ್ರತಿಚಯನವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಪ್ರತಿಚಯನದಿಂದ ದತ್ತಾಂಶವನ್ನು ಸಂಗ್ರಹಿಸಲು ಅವಿನಾಶ್ ಗ್ರೆವಾಲ್ ರಚಿಸಿದ ವಿಜ್ಞಾನ ಮನೋಧೋರಣೆಯ ಮಾಪನಿಯನ್ನು ಬಳಸಿಕೊಳ್ಳಲಾಗಿದೆ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ವಿಜ್ಞಾನ ವಿಷಯದಲ್ಲಿ ಗಳಿಸಿದ ಅಂಕಗಳನ್ನು ವಿಜ್ಞಾನದ ಸಾಧನೆಯಾಗಿ ತೆಗೆದುಕೊಳ್ಳಲಾಗಿದೆ.ಸಂಗ್ರಹಿಸಿದ ದತ್ತಾಂಶಗಳನ್ನು ವಿಶ್ಲೇಷಿಸಲು ಟಿ–ಪರೀಕ್ಷೆ, ಸ್ಪಿಯರ್‌ಸನ್‌ರವರ ಸಹಸಂಬಂಧ ಗುಣಾಂಕ ಎಂಬ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸಿಕೊಳ್ಳಲಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ–1 : ಪ್ರೌಢಶಾಲಾ ವಿದ್ಯಾರ್ಥಿಗಳ ಚಲಕಗಳ ಪ್ರಕಾರ ಸರಾಸರಿ ಮಾನಕ ವಿಚಲನೆ df ಹಾಗೂ 't' ಮೌಲ್ಯವನ್ನು ತೋರಿಸುವ ಪಟ್ಟಿ**

| ಚಲಕಗಳು | ಗುಂಪು | N | M | sd | df | 't' ಮೌಲ್ಯ | ಷರಾ |
|---|---|---|---|---|---|---|---|
| ವಿಜ್ಞಾನ ಮನೋಧೋರಣೆ | ವಿದ್ಯಾರ್ಥಿಗಳು | 134 | 47.73 | 8.95 | 198 | 0.93 | ಶೂನ್ಯ ಪ್ರಕಲ್ಪನೆಯನ್ನು ಸ್ವೀಕರಿಸಲಾಗಿದೆ |
| | ವಿದ್ಯಾರ್ಥಿನಿಯರು | 66 | 46.56 | 6.90 | | | |
| | ಸರ್ಕಾರಿ | 100 | 47.60 | 8.66 | 198 | 0.43 | ಶೂನ್ಯ ಪ್ರಕಲ್ಪನೆಯನ್ನು ಸ್ವೀಕರಿಸಲಾಗಿದೆ. |
| | ಖಾಸಗಿ | 100 | 47.09 | 8.03 | | | |
| ವಿಜ್ಞಾನ ಸಾಧನೆ | ವಿದ್ಯಾರ್ಥಿಗಳು | 134 | 23.98 | 7.47 | 198 | 2.06 | ಶೂನ್ಯ ಪ್ರಕಲ್ಪನೆಯನ್ನು ಸ್ವೀಕರಿಸಲಾಗಿದೆ. |
| | ವಿದ್ಯಾರ್ಥಿನಿಯರು | 66 | 26.24 | 6.87 | | | |
| | ಸರ್ಕಾರಿ | 100 | 26.09 | 7.14 | 198 | 2.66 | ಶೂನ್ಯ ಪ್ರಕಲ್ಪನೆಯನ್ನು ನಿರಾಕರಿಸಲಾಗಿದೆ. |
| | ಖಾಸಗಿ | 100 | 23.36 | 7.31 | | | |

**ಕೋಷ್ಟಕ – 2 : ಪ್ರೌಢಶಾಲಾ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆಯ ನಡುವಿನ ಸಹ ಸಂಬಂಧ ಗುಣಾಂಕವನ್ನು ತೋರಿಸುವ ಪಟ್ಟಿ**

| ಚಲಕಗಳು | N | ಸಹಸಂಬಂಧ ಗುಣಾಂಕ | ಷರಾ |
|---|---|---|---|
| ವಿಜ್ಞಾನ ಮನೋಧೋರಣೆ | 200 | –0.03 | ಅತಿ ಕಡಿಮೆ ಮತ್ತು ಉಪೇಕ್ಷಿತ ಋಣಾತ್ಮಕ ಸಹಸಂಬಂಧ ಹೊಂದಿದೆ. |
| ವಿಜ್ಞಾನ ಮನೋಧೋರಣೆ | 200 | | |

## ಫಲಿತಾಂಶಗಳು

- ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವೆ ವಿಜ್ಞಾನದ ಮನೋಧೋರಣೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವೆ ವಿಜ್ಞಾನದ ಸಾಧನೆಯಲ್ಲಿ ಮನೋಧೋರಣೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಡುವೆ ವಿಜ್ಞಾನದ ಸಾಧನೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವೆ ವಿಜ್ಞಾನದ ಸಾಧನೆಯಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.
- ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನದ ಸಾಧನೆಯ ನಡುವೆ ಮಹತ್ವ ಪೂರ್ಣವಾದ ಸಹ ಸಂಬಂಧ ಕಂಡುಬರುವುದಿಲ್ಲ.

## ಫಲಿತಾಂಶಗಳ ಚರ್ಚೆ

ಕೋಷ್ಟಕ 1ರಲ್ಲಿರುವ ಸರಾಸರಿ ಮತ್ತು ಟಿ–ಮೌಲ್ಯವನ್ನು ತುಲನೆ ಮಾಡಿದಾಗ ಟಿ–ಮೌಲ್ಯವು 0.93 ಇರುವುದು ಕಂಡುಬಂದಿದ್ದು ಇದು ಟಿ– ಮೌಲ್ಯಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಕಲ್ಪನೆಯನ್ನು ಸ್ವೀಕರಿಸಲಾಗಿದೆ.ಆದರೆ ಇಲ್ಲಿ ಸರಾಸರಿಯನ್ನು ಗಮನಿಸಿದಾಗ ವಿದ್ಯಾರ್ಥಿನಿಯರಿಗಿಂತ ವಿದ್ಯಾರ್ಥಿಗಳು ಹೆಚ್ಚು ವಿಜ್ಞಾನ ಮನೋಧೋರಣೆಯನ್ನು ಹೊಂದಿರುವುದು ಕಂಡುಬರುತ್ತದೆ.

ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆಯ ಟಿ– ಮೌಲ್ಯ ಮತ್ತು ಸರಾಸರಿಯನ್ನು ಗಮನಿಸಿದಾಗ ಟಿ–ಮೌಲ್ಯವು 0.43 ಇದ್ದು ಇದು ಟಿ ಪಟ್ಟಿಯ ಮೌಲ್ಯಕ್ಕಿಂತ ಕಡಿಮೆ ಇರುವುದರಿಂದ ಎರಡನೇ ಶೂನ್ಯ ಪ್ರಕಲ್ಪನೆಯನ್ನು ಸ್ವೀಕರಿಸಲಾಗಿದೆ ಹಾಗೂ ಸರಾಸರಿಯನ್ನು ಗಮನಿಸಿದಾಗ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಹೆಚ್ಚು ವಿಜ್ಞಾನ ಮನೋಧೋರಣೆಯನ್ನು ಹೊಂದಿರುವುದು ಕಂಡುಬರುತ್ತದೆ.

ಪ್ರೌಢಶಾಲೆಗಳ ವಿದ್ಯಾರ್ಥಿಗಳ ವಿಜ್ಞಾನ ಸಾಧನೆಯನ್ನು ಗಮನಿಸಿದಾಗ ಟಿ– ಮೌಲ್ಯವು 2.06 ಇದ್ದು. ಇದು ಟಿ–ಮೌಲ್ಯಕ್ಕಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಆದ್ದರಿಂದ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆ ವಿದ್ಯಾರ್ಥಿಗಳ ನಡುವೆ ವಿಜ್ಞಾನ ಮನೋಧೋರಣೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ ಎಂಬ ಶೂನ್ಯ ಪ್ರಕಲ್ಪನೆಯನ್ನು ತಿರಸ್ಕರಿಸಿದ್ದು, ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆ ವಿದ್ಯಾರ್ಥಿಗಳ ನಡುವೆ ವಿಜ್ಞಾನ ಮನೋಧೋರಣೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬರುತ್ತದೆ ಎಂದು ಪುರ್ನರಚಿಸಿಕೊಡಲಾಗುತ್ತದೆ.

ವಿಜ್ಞಾನ ಸಾಧನೆಗೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳನ್ನು ತುಲನೆ ಮಾಡಿದಾಗ ಟಿ–ಮೌಲ್ಯವು 2.66 ಇದ್ದು. ಇದು ಟಿ–ಪಟ್ಟಿಯ ಮೌಲ್ಯಕ್ಕಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಆದ್ದರಿಂದ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆ ವಿದ್ಯಾರ್ಥಿಗಳ ನಡುವೆ ವಿಜ್ಞಾನ ಸಾಧನೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ ಎಂಬ ಶೂನ್ಯ ಪ್ರಕಲ್ಪನೆಯನ್ನು ತಿರಸ್ಕರಿಸಿದ್ದು, ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆ ವಿದ್ಯಾರ್ಥಿಗಳ ನಡುವೆ ವಿಜ್ಞಾನ ಸಾಧನೆಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬರುತ್ತದೆ ಎಂದು ಪುರ್ನರಚಿಸಿ ಕೊಡಲಾಗುತ್ತದೆ.

ಕೋಷ್ಟಕ 2ನ್ನು ಗಮನಿಸಿದಾಗ ಸಹಸಂಬಂಧ ಗುಣಾಂಕದ ಮೌಲ್ಯವು –0.03 ಇದ್ದು ಇದು ಪ್ರೌಢಶಾಲೆ ವಿದ್ಯಾರ್ಥಿಗಳ ವಿಜ್ಞಾನ ಮನೋಧೋರಣೆ ಮತ್ತು ವಿಜ್ಞಾನ ಸಾಧನೆಯ ನಡುವೆ ಅತಿ ಕಡಿಮೆ ಮತ್ತು ಉಪೇಕ್ಷಿತ ಋಣಾತ್ಮಕ ಸಹ ಸಂಬಂಧ ಇರುವುದು ಕಂಡುಬರುತ್ತದೆ.

## ಶೈಕ್ಷಣಿಕ ನಿಹಿತಾರ್ಥಗಳು

1. ವಿದ್ಯಾರ್ಥಿಗಳ ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸಲು ಉತ್ತಮ ಶಾಲಾ ಪರಿಸರವನ್ನು ನಿರ್ಮಾಣ ಮಾಡಬೇಕು.
2. ಇಡೀ ತರಗತಿಯನ್ನು ಒಂದು ಸಂಶೋಧನಾ ತಂಡದಂತೆ ಸಂಘಟಿತಗೊಳಿಸುವುದರ ಮೂಲಕ ಇಡೀ ತರಗತಿಗೆ ಅನ್ವಯಿಸುವಂತ ಒಂದು ಸಮಸ್ಯೆಯನ್ನು ಸೃಷ್ಟಿಸಿ ವಿದ್ಯಾರ್ಥಿಗಳನ್ನು ಚಿಂತನೆ ಪರ್ಯಾಲೋಚನೆಗೆ ಅವಕಾಶ ಮಾಡಿಕೊಟ್ಟು ಎಲ್ಲಾ ವಿದ್ಯಾರ್ಥಿಗಳನ್ನು ಪ್ರಯೋಗದಲ್ಲಿ ತೊಡಗಿಸಬೇಕು.

ISSN : 2249-2429 ಸಂಶೋಧನೆ RNI REG.NO.KARKAN/2011/38712

3. ಶಿಕ್ಷಕರುಶಾಲೆಗಳಲ್ಲಿ ಮಕ್ಕಳಿಗೆ ಚರ್ಚೆ ಪ್ರಾಯೋಗಿಕ ಚಟುವಟಿಕೆಗಳು, ಹೆಚ್ಚಿನ ಓದುವಿಕೆಗೆ ಪ್ರೋತ್ಸಾಹ ಹವ್ಯಾಸವಾಗಿ ವಿಜ್ಞಾನ ಪಠ್ಯೇತರ ಚಟುವಟಿಕೆಗಳ ಮೂಲಕ ವೈಜ್ಞಾನಿಕ ಮನೋಧೋರಣೆಯನ್ನು ಮೂಡಿಸಬಹುದು.
4. ಯೋಚಿತ ಅಭ್ಯಾಸಗಳನ್ನು ಒದಗಿಸುವುದು ವಿದ್ಯಾರ್ಥಿಗಳಿಗೆ ವಿಜ್ಞಾನ ಪಠ್ಯ ಪುಸ್ತಕದ ಜೊತೆಗೆ ಇತರೆ ವಿಜ್ಞಾನ ಪುಸ್ತಕಗಳು ಸಂಚಿಕೆಗಳು, ವೃತ್ತಿ ಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ವಿಜ್ಞಾನ ಕುರಿತಾದ ಲೇಖನಗಳನ್ನು ಓದಲು ವಿದ್ಯಾರ್ಥಿಗಳನ್ನು ಪ್ರಚೋದಿಸಬೇಕು.

## ಮುಂದಿನ ಸಂಶೋಧನೆಗೆ ಸಲಹೆಗಳು

1. ವಿಜ್ಞಾನ ಮನೋಧೋರಣೆ ಮತ್ತು ಸಾಧನೆಯ ನಡುವೆ ಅವರ ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ಅಂಶಗಳ ನಡುವೆ ಇರುವ ಸಂಬಂಧವನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಬಹುದು.
2. ವಿಜ್ಞಾನ ಮನೋಧೋರಣೆ ಮತ್ತು ಸಾಧನೆಯ ಮೇಲೆ ಪ್ರಭಾವ ಬೀರುವ ಅಂಶಗಳ ಮೇಲೆ ಅಧ್ಯಯನ ಕೈಗೊಳ್ಳಬಹುದು.
3. ಈ ಅಧ್ಯಯನವನ್ನು ಪದವಿಪೂರ್ವ ಹಂತದ ವಿದ್ಯಾರ್ಥಿಗಳಿಗೂ ಸಹ ವಿಸ್ತರಿಸಬಹುದು.

## ಪರಾಮರ್ಶನ ಗ್ರಂಥಗಳು


- **ಯಶೋಧರ ಕೆ. (2011) :** ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ, ಸಿ. ಜಗನ್ನಾಥ್ ಮೈಸೂರು ಶಿಬಾ ಪ್ರಕಾಶನ.
- **ಡಾ. ಹೆಚ್.ವಿ. ವಾಮದೇವಪ್ಪ (2021) :** ಶೈಕ್ಷಣಿಕ ಮನೋವಿಜ್ಞಾನ ಮತ್ತು ಮೌಲ್ಯ ಮಾಪನ ದಾವಣಗೆರೆ ಶ್ರೇಯಸ್ ಪಬ್ಲಿಕೇಶನ್.
- **Lokesh Koul (1997) :** Methodology of Education and Research, New Delhi Vikas Publishing House, Pvt Ltd.,
- **R. P. Pathak :** Statistics in Educational Research, New Delhi Kanishka Publishers.
- **Robert L. Ebel (1938) :** https://doi.org/10.1002/sce.3730220102
- http://shodh.inflibnet.ac.in:8080/jspui/bitstream/123456789/3537/3/03_review%20of% 20 literature.pdf.


■■


**ಫಾರ್ಮ ನಂ. 4**

**"ಶಿಕ್ಷಣ ಸೌಧ"**

**ತ್ರೈಮಾಸಿಕ ಪತ್ರಿಕೆಯ ಮಾಲೀಕತ್ವ ಹಾಗೂ ಇತರೆ ವಿವರಗಳ ಬಗೆಗಿನ ಹೇಳಿಕೆ**

| | | |
|---|---|---|
| 1. ಪ್ರಕಟನೆಯ ಸ್ಥಳ | : | ಗದಗ |
| 2. ಪ್ರಕಟನೆಯ ನಿಯಮಿತ | : | ತ್ರೈಮಾಸಿಕ |
| 3. ಮುದ್ರಕರು | : | ಮೈಮ ಅಕ್ಷರ ಮುದ್ರಣ, ಜೆ. ಟಿ. ಮಠ ರೋಡ, ಗದಗ |
| 4. ಪ್ರಕಾಶಕರ ಹೆಸರು | : | ಜಯದೇವ ಮೈಲಾರಪ್ಪ ಮೆಣಸಗಿ |
| 5. ಸಂಪಾದಕರ ಹೆಸರು | : | ಡಾ. ಎಸ್. ಬಿ. ಯಾದವಾಡ |
| 6. ಪತ್ರಿಕೆಯ ಮಾಲೀಕತ್ವ ಹೊಂದಿರುವ ಹೆಸರು ಮತ್ತು ವಿಳಾಸ | : | ಜಯದೇವ ಮೈಲಾರಪ್ಪ ಮೆಣಸಗಿ. ಒಕ್ಕಲಗೇರಿ ಓಣಿ, ಗದಗ |
| ಅ) ರಾಷ್ಟ್ರೀಯತೆ | : | ಭಾರತೀಯ |
| ಬ) ವಿಳಾಸ | : | ಒಕ್ಕಲಗೇರಿ ಓಣಿ, ಗದಗ |

ನಾನು ಜಯದೇವ ಮೈಲಾರಪ್ಪ ಮೆಣಸಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಮಾಹಿತಿ ನನ್ನ ಅರಿವಿಗೆ ಹಾಗೂ ನಂಬಿಕೆಗೆ ಸಂಪೂರ್ಣ ಸತ್ಯವಾಗಿದೆ.

ಸಹಿ /–
ಜಯದೇವ ಮೈಲಾರಪ್ಪ ಮೆಣಸಗಿ
ಪ್ರಕಾಶಕರು

ಗದಗ
ದಿನಾಂಕ 7–3–2023

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಗ್ರಾಮೀಣ ಸಮುದಾಯದ ಆರೋಗ್ಯ ಸಂರಕ್ಷಣೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪಾತ್ರ : ಸಮಾಜಶಾಸ್ತ್ರೀಯ ವಿಶ್ಲೇಷಣೆ

✍ **ಪ್ರಕಾಶ. ಡಿ.ಎನ್.**, ಸಂಶೋಧನಾ ವಿಧ್ಯಾರ್ಥಿ, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. ಶಿವಮೊಗ್ಗ.

## ಪೀಠಿಕೆ

ವಿಶ್ವ ಆರೋಗ್ಯ ಸಂಸ್ಥೆಯು ತಿಳಿಸಿದಂತೆ ಆರೋಗ್ಯ ಎಂಬುದು ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿಯಾಗಿದ್ದು, ಅದು ಕೇವಲ ರೋಗ ಅಥವಾ ದುರ್ಬಲತೆಯ ಅನುಪಸ್ಥಿತಿಯಲ್ಲ. ಜಗತ್ತಿನ ಯಾವುದೇ ಒಂದು ದೇಶವು ಅಭಿವೃದ್ಧಿಯನ್ನು ಹೊಂದಬೇಕಾದರೆ, ಆ ರಾಷ್ಟ್ರದ ಸಾರ್ವಜನಿಕ ಆರೋಗ್ಯವು ಸುಧಾರಿಸಿಕೊಂಡಲ್ಲಿ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಆರೋಗ್ಯ ಪೋಷಣೆ ಮತ್ತು ಜನಸಂಖ್ಯೆಯ ಜಾಗತಿಕ ಕಾರ್ಯತಂತ್ರಕ್ಕೆ ಅನುಗುಣವಾಗಿ ವಿಶ್ವಬ್ಯಾಂಕ್ ಸಮೂಹವು ಬಲವಾದ ಪ್ರಾಥಮಿಕ ಆರೋಗ್ಯ ವ್ಯವಸ್ಥೆಗಳ ಮೂಲಕ ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು ಸಾಧಿಸುವ ದೇಶಗಳ ಪ್ರಯತ್ನಗಳನ್ನು ಬೆಂಬಲಿಸುತ್ತದೆ ಮತ್ತು ಎಲ್ಲರಿಗೂ ಗುಣಮಟ್ಟದ, ಕೈಗೆಟುಕುವ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಭಾರತದಲ್ಲಿ ಎಲ್ಲರಿಗೂ ಆರೋಗ್ಯ ಸೇವೆಗಳನ್ನು ಕಲ್ಪಿಸುವ ವೇಗವನ್ನು ಹೆಚ್ಚಿಸಲು, ಸಮುದಾಯದಲ್ಲಿ ಆಸ್ಪತ್ರೆಗಳು ಮತ್ತು ಇತರೆ ಸೇವೆಗಳ ಪೂರೈಕೆದಾರರ ನಡುವಿನ ಪ್ರಕ್ರಿಯೆಯನ್ನು ಉತ್ತಮಪಡಿಸಲು ಪ್ರಾಥಮಿಕ ಆರೋಗ್ಯ ಸೇವೆ ಮತ್ತು ಸೌಲಭ್ಯಗಳನ್ನು ಆಧರಿಸಿದ ಪ್ರಾದೇಶಿಕ ಆರೋಗ್ಯ ವ್ಯವಸ್ಥೆಯನ್ನು ರೂಪಿಸುವಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬಹುಮುಖ್ಯವಾಗಿವೆ. ಆರೋಗ್ಯ ಕೇಂದ್ರಗಳು ಸಣ್ಣ ಪ್ರಮಾಣದ ಗ್ರಾಮೀಣ ಸಂಸ್ಥೆಗಳಾಗಿದ್ದರೂ ಕೂಡ ಆರೋಗ್ಯದ ವಿವಿಧ ಉದ್ದೇಶಗಳನ್ನು ಪೂರೈಸುವಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪಾತ್ರ ಮಹತ್ವಕಾರಿಯಾಗಿದೆ. ಒಂದು ದೇಶದ ಮಾನವ ಸಂಪನ್ಮೂಲವನ್ನು ವ್ಯವಸ್ಥಿತವಾಗಿ ಬಳಸಬೇಕಾದರೆ ಹಾಗೂ ಅಭಿವೃದ್ಧಿಯನ್ನು ಹೊಂದಬೇಕಾದರೆ ಆರೋಗ್ಯ ಸೇವೆಗಳು ಮಹತ್ವದ ಪಾತ್ರ ವಹಿಸುತ್ತವೆ.

1978ರಲ್ಲಿ ಆರೋಗ್ಯ ಕುರಿತು ಅಂತರಾಷ್ಟ್ರೀಯ ಮಟ್ಟದಲ್ಲಿ ಯುಎನ್‌ಡಿಪಿ (UNDP) ಮತ್ತು ಯುನಿಸೆಫ್ (UNICEF)ನ ಸಹಯೋಗದಲ್ಲಿ ಸಮಾವೇಶವನ್ನು ಏರ್ಪಡಿಸಿದರು. ಈ ಸಮಾವೇಶದಲ್ಲಿ ಎಲ್ಲರಿಗೂ ಆರೋಗ್ಯ ಧ್ಯೇಯೋದ್ದೇಶದಿಂದ ರೂಪಿಸಲಾದ ಘೋಷಣೆಯೇ 'ಅಲ್ಮಾ ಅಟಾ ಘೋಷಣೆ'. ಇಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯವೆಂದರೆ ಪ್ರತಿಯೊಂದು ರಾಷ್ಟ್ರವು ಎಲ್ಲಾ ಕಾಲದಲ್ಲೂ ಆರೋಗ್ಯವನ್ನು ಕಾಪಾಡುವುದೇ ಆಗಿದೆ. ಅಲ್ಮಾ ಅಟಾ ಘೋಷಣೆಯು ವ್ಯಕ್ತಿ ಮತ್ತು ಸಮುದಾಯಗಳು ಭಾಗವಹಿಸುವುದರ ಕುರಿತು ಒತ್ತಿ ಹೇಳುತ್ತದೆ. ಈ ಘೋಷಣೆಯ ದೃಷ್ಟಿಕೋನವು ಆರೋಗ್ಯ ಮತ್ತು ಶಿಕ್ಷಣಕ್ಕೆ ಹೊಸ ಅರ್ಥ ಹಾಗೂ ದಿಶೆಯನ್ನು ಒದಗಿಸಿಕೊಟ್ಟಿದೆ. ಜನರು ಆರೋಗ್ಯವಾಗಿರುವುದನ್ನು ಅಪೇಕ್ಷಿಸುವ ಆರೋಗ್ಯ ಪೂರ್ಣವಾಗಿ ಉಳಿದು ಕೊಳ್ಳುವುದಕ್ಕಾಗಿ, ವೈಯಕ್ತಿಕವಾಗಿ ಮತ್ತು ಸಾಮುದಾಯಿಕವಾಗಿ ಏನನ್ನು ಮಾಡಬೇಕು ಮತ್ತು ಅಗತ್ಯವಿರುವಾಗಲೆಲ್ಲಾ ನೆರವಾಗಲು ಆರೋಗ್ಯ ಶಿಕ್ಷಣವು ಪೂರಕವಾಗಿದ್ದು, ಆರೋಗ್ಯಕ್ಕೆ ಸಂಬಂಧಿಸಿದಂತೆ 1978ರಲ್ಲಿ ಅಲ್ಮಾ ಅಟಾ ಘೋಷಣೆಯನ್ನು ಅಳವಡಿಸಿಕೊಳ್ಳಲಾಯಿತು.

ಪ್ರತಿ ಮೂರು ಸಾವಿರ ಜನಸಂಖ್ಯೆಗೆ ಒಂದು ಉಪ ಕೇಂದ್ರ, ಇಪ್ಪತ್ತು ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರತಿ ಎಂಭತ್ತು ಸಾವಿರ ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಗುಡ್ಡಗಾಡು ಪ್ರದೇಶಗಳಲ್ಲಿ ಸ್ಥಾಪಿಸಲು ಅವಕಾಶ ನೀಡಿದೆ" (www.health.mp.gov.in). ಆರೋಗ್ಯ ಸೇವೆಗಳ ಉಪಕೇಂದ್ರಗಳು ಸಮುದಾಯ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಡುವೆ ಕೊಂಡಿಯಂತೆ ಕಾರ್ಯನಿರ್ವಹಿಸುತ್ತವೆ. ಅದರಂತೆಯೆ ಪ್ರಾಥಮಿಕ ಆರೋಗ್ಯ ಕೇಂದ್ರವು ಗ್ರಾಮ ಸಮುದಾಯ ಹಾಗೂ ವೈದ್ಯಾಧಿಕಾರಿಗಳ ನಡುವೆ ಸಂಬಂಧವನ್ನು ಕಲ್ಪಿಸುವ ಪ್ರಥಮ ಹಂತವಾಗಿದೆ. ಅದರ ಹೆಸರೇ ಸೂಚಿಸುವಂತೆ ಪ್ರಾಥಮಿಕ ಆರೋಗ್ಯ ಕೇಂದ್ರವೊಂದು ಹೊರರೋಗಿಗಳ ಚಿಕಿತ್ಸಾ ಘಟಕವಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಳರೋಗಿಗಳಿಗಾಗಿ ಅತ್ಯಂತ ಕನಿಷ್ಟ ಸೌಲಭ್ಯಗಳು ಲಭ್ಯವಿರುತ್ತವೆ.

## ಆರೋಗ್ಯ ಪರಿಕಲ್ಪನೆ ಮತ್ತು ಅರ್ಥ

ಆರೋಗ್ಯ ಎನ್ನುವುದು ಕೇವಲ ರೋಗರಹಿತ ಸ್ಥಿತಿ ಮಾತ್ರವಲ್ಲದೆ ಜನರ ಮಾನಸಿಕ ಹಾಗೂ ದೈಹಿಕ ಶಕ್ತಿಗಳ ನಡುವೆ ಅಪೂರ್ವವಾದ ಹೊಂದಾಣಿಕೆ ಇರುವಂತಹ ಒಂದು ಸ್ಥಿತಿಯಾಗಿದೆ. ಇದು ವಿಶಾಲವಾದ ಅರ್ಥವನ್ನು ಹೊಂದಿದ್ದು ದೈಹಿಕ ಸುಸ್ಥಿತಿಯ ಜೊತೆಗೆ ಮಾನಸಿಕ ಹಾಗೂ ಸಾಮಾಜಿಕ ನೆಮ್ಮದಿಯನ್ನು ಹೊಂದಿರುತ್ತದೆ. ಆರೋಗ್ಯ ಪರಿಕಲ್ಪನೆಯನ್ನು 'ಚರಕ ಸಂಹಿತೆಯಲ್ಲಿ ತಿಳಿಸಿರುವಂತೆ ಆರೋಗ್ಯವು ಅಂತಃಸತ್ವ ಸಂಪತ್ತು, ಸಂತೋಷ, ಸಂರಕ್ಷಣೆಯನ್ನು ಪಡೆಯಲು ಇರುವ ಉತ್ಕೃಷ್ಟ ಸಾಧನವೂ ಆಗಿದೆ ಮತ್ತು ಸಕಾರಾತ್ಮಕ ಅಂಶವೂ ಹೌದು' ಎಂದು ಉಲ್ಲೇಖಿಸಲಾಗಿದೆ. ಸದೃಢವಾದ ದೇಹದಲ್ಲಿ ದೃಢವಾದ ಮನಸ್ಸಿರುತ್ತದೆ (Thales, 624-546 BC) ಎನ್ನುವ ಸೂಕ್ತಿಯೂ ಸಹ ಸತ್ಯಾಂಶವನ್ನು ತಿಳಿಸುವುದಲ್ಲದೆ ಸಮತೋಲನ ಜೀವನಕ್ಕೆ ಮಾರ್ಗದರ್ಶಕತ್ವವಾಗಿ ನೆರವಾಗುತ್ತದೆ.

ಆರೋಗ್ಯ ಎಂಬ ಕನ್ನಡ ಪದದ ಆಂಗ್ಲಾನುವಾದವೇ Health. Health ಎಂಬ ಪದವು ಹಳೆಯ ಆಂಗ್ಲ ಭಾಷೆಯ Hoealth ಎಂಬ ಶಬ್ದದಿಂದ ಬಂದಿದೆ. ಇದರ ಅರ್ಥ ಸುರಕ್ಷಿತ ಮತ್ತು ಭದ್ರವಾಗಿರುವ ಶರೀರದ ಸ್ಥಿತಿ (Condition of being safe and sound). Health ಇದರ ಮತ್ತೊಂದು ಅರ್ಥವೆಂದರೆ Whole, Wholeness ಎಂದು, ಅಂದರೆ 'ಆರೋಗ್ಯವು ಕೇವಲ ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕ, ಸಾಮಾಜಿಕ, ಆರ್ಥಿಕ ಮತ್ತು ಆಧ್ಯಾತ್ಮಿಕವಾಗಿ ಸದೃಢವಾಗಿರುವ ಪರಿಸ್ಥಿತಿಯೇ ಆರೋಗ್ಯ'.

ವಿಶ್ವ ಆರೋಗ್ಯ ಸಂಸ್ಥೆಯು ವ್ಯಾಖ್ಯಾನಿಸಿದಂತೆ ಆರೋಗ್ಯ ಎಂದರೆ "ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಒಂದು ಪರಿಸ್ಥಿತಿಯೇ ಆರೋಗ್ಯ". ಮಹಾತ್ಮ ಗಾಂಧೀಜಿ ಅವರ ಪ್ರಕಾರ ಆರೋಗ್ಯ ಎಂದರೆ "ಯಾರ ಪಂಚೇಂದ್ರಿಯಗಳು ಯಾವುದೇ ದೋಷವಿಲ್ಲದೆ ಕಾರ್ಯ ನಿರ್ವಹಿಸುತ್ತವೋ ಹಾಗೂ ಯಾರ ಜ್ಞಾನೇಂದ್ರಿಯಗಳು ಮತ್ತು ಮನಸ್ಸು ಸದಾ ನಿಯಂತ್ರಣದಲ್ಲಿರುವುದೋ ಅವರು ಆರೋಗ್ಯವಂತರು" ಎಂದು ತಿಳಿಸಿದ್ದಾರೆ. ಒಟ್ಟಾರೆ ಆರೋಗ್ಯ ಎಂಬುದು ವ್ಯಕ್ತಿಯು ಕಾಯಿಲೆಯಿಂದ ಅಥವಾ ನೋವಿನಿಂದ ಮುಕ್ತವಾಗಿದ್ದು, ಸ್ಥಿರ ಆರೋಗ್ಯವನ್ನು ಕಾಯ್ದುಕೊಳ್ಳುವುದೇ ಅಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಸಾಹಿತ್ಯಾವಲೋಕನ

**Shivaprasad H. (2013) "Performance and Analysis of Primary Health Centres",** ಪ್ರಸ್ತುತ ಸಂಗತಿ ಅಧ್ಯಯನ ಪ್ರಬಂಧದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ ಹಾಗೂ ಅವುಗಳ ಕಾರ್ಯನಿರ್ವಹಣೆ, ಕರ್ನಾಟಕದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎದುರಿಸುತ್ತಿರುವ ಸಮಸ್ಯೆಗಳು, ಅದರ ಸ್ಥಿತಿಗತಿಗಳ ಬಗ್ಗೆ ವಿವರಿಸಿದ್ದಾರೆ. ಅಂದರೆ ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಅದರ ಜೊತೆಗೆ ಪ್ರಾಥಮಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವಾರು ಅವಶ್ಯಕವಾದ ವೈದ್ಯಕೀಯ ಸೌಲಭ್ಯಗಳ ಕೊರತೆ ಇದ್ದು, ಅದನ್ನು ನಿವಾರಣೆ ಮಾಡಬೇಕು ಹಾಗೂ ಸಾಮಾನ್ಯ ಜನರಿಗೆ ಎಲ್ಲಾ ರೀತಿಯ ಮೂಲಭೂತ ಆರೋಗ್ಯ ಸೇವಾ ಸೌಲಭ್ಯಗಳು ದೊರೆಯುವಂತಾಗಬೇಕು. ಅಷ್ಟೇ ಅಲ್ಲದೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಉನ್ನತೀಕರಿಸುವುದು ಪ್ರಸ್ತುತ ಅತ್ಯಗತ್ಯವಾಗಿದೆ ಎಂಬುದನ್ನು ಸವಿವರವಾಗಿ ತಿಳಿಸಿದ್ದಾರೆ.

**ಸರೋಜಾ ಕೆ. (2018) "ಮಹಿಳಾ ಆರೋಗ್ಯ ಒಂದು ಮರುಚಿಂತನೆ",** ಈ ಅಧ್ಯಯನದಿಂದ ಕಂಡುಬರುವ ವಾಸ್ತವತೆ ಎಂದರೆ ಮಹಿಳೆಯರ ಆರೋಗ್ಯದ ಬಗ್ಗೆ ಅಂದರೆ ಮಗು ಜನನದ ಆರಂಭದಿಂದ ವೃದ್ಧಾಪ್ಯದವರೆಗೂ ವಿವಿಧ ಹಂತಗಳ ಮೂಲಕ ಸಾಗುವುದರೊಂದಿಗೆ ಅವರು ಎದುರಿಸುವ ಆರೋಗ್ಯ ಸಂಬಂಧಿತ ಸಮಸ್ಯೆಗಳ ಬಗ್ಗೆ ಹಾಗೂ ಸಮಸ್ಯೆಗಳ ನಿವಾರಣೆಗೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು, ಅದು ಬಾಲ್ಯಾವಸ್ಥೆ, ಪ್ರೌಢಾವಸ್ಥೆ, ಯೌವನಾವಸ್ಥೆ, ಮದುವೆಯ ನಂತರ ಪ್ರಸವ ಪೂರ್ವ ಹಾಗೂ ಪ್ರಸವ ನಂತರ ಎದುರಾಗುವ ಸವಾಲುಗಳು, ಬೇಡದ ಬಸುರಿಯ ನಿಯಂತ್ರಣ ಕ್ರಮ, ಜನಸಂಖ್ಯೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪುರುಷ ಮಹಿಳೆಯರು ಕೈಗೊಳ್ಳಬೇಕಾದ ಕ್ರಮಗಳು, ಆರೋಗ್ಯಕ್ಕೆ ಸಂಬಂಧಿಸಿದಂತೆ ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗೊಂಡಿರುವ ಕ್ರಮಗಳು, ಆರೋಗ್ಯ ಸಂರಕ್ಷಣೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಾರ್ವಜನಿಕ ವಲಯದ ಆರೋಗ್ಯ ವ್ಯವಸ್ಥೆಯ ಒಂದು ಸಮಗ್ರವಾದ ವಿವರಣೆ ಹಾಗೂ ನೂತನ ಆರ್ಥಿಕ ನೀತಿಯ ಜಾರಿಯಿಂದಾಗಿ ಆರೋಗ್ಯ ಕ್ಷೇತ್ರದಲ್ಲಿ ಆದ ಬದಲಾವಣೆಯ ಬಗ್ಗೆ ಹೀಗೆ ಇನ್ನು ಹಲವು ಅಂಶಗಳ ಬಗ್ಗೆ ಈ ಮೂಲಕ ತಿಳಿಸಿಕೊಟ್ಟಿದ್ದಾರೆ.

## ಅಧ್ಯಯನ ಉದ್ದೇಶಗಳು

- ಗ್ರಾಮೀಣ ಪ್ರದೇಶದ ಜನರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆಯುತ್ತಿರುವ ಸೇವಾ ಸೌಲಭ್ಯಗಳ ಬಗ್ಗೆ ವಿಶ್ಲೇಷಿಸುವುದು.
- ತಾಯಿ ಮತ್ತು ಮಗುವಿನ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಅವಲಂಬಿಸಿರುವ ಆರೋಗ್ಯ ವಲಯವನ್ನು ಕುರಿತು ಅಧ್ಯಯನ ಮಾಡುವುದು.

## ಸಂಶೋಧನಾ ತಂತ್ರಗಳು

ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯಕ್ಕೆ ಪೂರಕವಾದ ಮಾಹಿತಿ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರಗಳಾದ ಸಂದರ್ಶನ ಅನುಸೂಚಿ ಮತ್ತು ಅವಲೋಕನ ತಂತ್ರಗಳನ್ನು ಬಳಸಿ ಕ್ಷೇತ್ರಾಧ್ಯಯನ ಕೈಗೊಂಡು, ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿ ಗುಣಾತ್ಮಕ ಮತ್ತು ಪರಿಮಾಣಾತ್ಮಕವಾದ ಹಿನ್ನಲೆಯಲ್ಲಿ ವಿಶ್ಲೇಷಿಸಲಾಗಿದೆ.

## ಮಾದರಿಯ ಆಯ್ಕೆ

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ ಅಧ್ಯಯನ ಕ್ಷೇತ್ರವಾದ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ಸೇವಾ ಸೌಲಭ್ಯಗಳನ್ನು ಪಡೆಯುತ್ತಿರುವ 312 ಮಾಹಿತಿದಾರರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ.

## ಮಾಹಿತಿ ಸಂಗ್ರಹಣೆಯ ಮೂಲಗಳು

ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಕ್ಕೆ ವಿವಿಧ ಮೂಲಗಳಿದ್ದು, ಮಾಹಿತಿ ಸಂಗ್ರಹಣೆಯಲ್ಲಿ ಮುಖ್ಯವಾಗಿ ಪ್ರಾಥಮಿಕ ಮೂಲಗಳಾದ ಸಂದರ್ಶನ ಅನುಸೂಚಿ ಮತ್ತು ಅವಲೋಕನ ತಂತ್ರಗಳನ್ನು ಹಾಗೂ ಅನುಷಾಂಗಿಕ ಮಾಹಿತಿ ಮೂಲಗಳಾದ ವರದಿಗಳು, ಲೇಖನಗಳು, ಗ್ರಂಥಗಳು ಮತ್ತು ಮಹಾಪ್ರಬಂದಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

## ಮಾಹಿತಿ ವಿಶ್ಲೇಷಣೆ

ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪೂರಕವಾದ ಸಂಶೋಧನಾ ವಿಧಾನಗಳ ಮೂಲಕ ಹಾಗೂ ಹಲವಾರು ಮೂಲಗಳಿಂದ ಸಂಗ್ರಹಿಸಲಾದ ಮಾಹಿತಿಯನ್ನು ಕ್ರೋಢೀಕರಿಸಿ ಅವುಗಳ ಶೇಕಡವಾರುಗಳನ್ನು ತಿಳಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಹಿನ್ನಲೆಯಲ್ಲಿ ಸೂಕ್ತವಾದ ಸಂಖ್ಯಾಶಾಸ್ತ್ರೀಯ ವಿಧಾನಗಳ ಮೂಲಕ ಸಮಾಜಶಾಸ್ತ್ರೀಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸಲಾಗಿದೆ.

## ಪ್ರಾಥಮಿಕ ಆರೋಗ್ಯ ಕೇಂದ್ರ

ನಿಜವಾದ ಭಾರತವು ಗ್ರಾಮೀಣ ಪ್ರದೇಶದಲ್ಲಿ ಹುದುಗಿಕೊಂಡಿದೆ ಎಂಬ ಗಾಂಧೀಜಿ ಅವರ ಹೇಳಿಕೆಯು ಇಂದು ವಾಸ್ತವವಾಗುತ್ತಿದೆ. ಅದರಂತೆಯೇ ಪ್ರಾದೇಶಿಕ ಮಟ್ಟದಲ್ಲಿ ಸ್ಥಾಪನೆ ಮಾಡಲಾದ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಆರೋಗ್ಯ ಸೌಲಭ್ಯಗಳ ಬಗ್ಗೆ ಸಾರ್ವಜನಿಕರು ಹೊಂದಿರುವ ಅರಿವು, ಔಷಧಿಗಳ ಪರಿಣಾಮದ ಕುರಿತು, ಕುಟುಂಬ ಕಲ್ಯಾಣ, ಮೊಬೈಲ್ ಆರೋಗ್ಯದ ಬಗ್ಗೆ ಹೀಗೆ ಇನ್ನು ಹಲವು ವಿಚಾರಗಳ ಕುರಿತು ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

**ಕೋಷ್ಟಕ –01**
**ಮಾಹಿತಿದಾರರು ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ ನೀಡಿದ ವಿವರ**

| ಪ್ರಾಥಮಿಕ ಆರೋಗ್ಯ ಕೇಂದ್ರ | ಆವೃತ್ತಿ (N=312) | | | |
|---|---|---|---|---|
| | ಹೌದು | ಶೇಕಡವಾರು | ಇಲ್ಲ | ಶೇಕಡವಾರು |
| ಸೌಲಭ್ಯಗಳ ಅರಿವು | 247 | 79.16 | 65 | 20.84 |
| ಔಷಧಿಗಳ ಪರಿಣಾಮಕಾರತ್ವ | 304 | 97.43 | 08 | 02.57 |
| ಕುಟುಂಬ ಕಲ್ಯಾಣದ ಅರಿವು | 220 | 70.51 | 92 | 29.49 |
| ಮೊಬೈಲ್ ಆರೋಗ್ಯ ಸೇವೆಯ ಅರಿವು | 80 | 25.64 | 232 | 74.36 |
| ಭಾಷೆಯ ಅರ್ಥವಾಗುವಿಕೆ | 291 | 93.26 | 21 | 06.74 |
| ಔಷಧಿಗಳ ಉಚಿತವಾಗಿ ನೀಡಿಕೆ | 231 | 74.04 | 81 | 25.96 |
| ಕೆಲಸದ ಸಮಯ ಅನುಕೂಲಕರ | 296 | 94.87 | 16 | 05.13 |
| ವೈದ್ಯರ ಲಭ್ಯತೆ | 274 | 87.82 | 38 | 12.18 |

ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರು ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ ನೀಡಿದ ವಿವರವನ್ನು ತಿಳಿಸಲಾಗಿದೆ. ಒಟ್ಟು ಮಾಹಿತಿದಾರರಲ್ಲಿ ಶೇಕಡ 79.16ರಷ್ಟು ಸೌಲಭ್ಯಗಳ ಅರಿವಿನ ಕುರಿತು ತಿಳಿಸಿದರೆ, ಶೇಕಡ

ISSN : 2249-2429 ಸಂಶೋಧನೆ RNI REG.NO.KARKAN/2011/38712

97.43ರಷ್ಟು ಔಷಧಿಗಳು ಪರಿಣಾಮಕಾರಿಯಾಗಿವೆ ಎಂದು, ಶೇಕಡ 70.51ರಷ್ಟು ಕುಟುಂಬ ಕಲ್ಯಾಣದ ಬಗ್ಗೆ ಅರಿವನ್ನು ಪಡೆದಿರುವುದಾಗಿ, ಶೇಕಡ 25.64ರಷ್ಟು ಮೊಬೈಲ್ ಆರೋಗ್ಯ ಸೇವೆ ಅರಿವನ್ನು ಪಡೆದುಕೊಳ್ಳುತ್ತಿರುವುದಾಗಿ, ಶೇಕಡ 93.26ರಷ್ಟು ಭಾಷೆಯು ಅರ್ಥವಾಗುತ್ತದೆ ಎಂದು ತಿಳಿಸಿದರೆ, ಶೇಕಡ 74.04ರಷ್ಟು ಔಷಧಿಗಳನ್ನು ಉಚಿತವಾಗಿ ನೀಡುತ್ತಿರುವುದಾಗಿ ತಿಳಿಸಿದ್ದು, ಶೇಕಡ 94.87ರಷ್ಟು ಕೆಲಸದ ಸಮಯ ಅನುಕೂಲಕರವಾಗಿ ಇರುವುದಾಗಿ ಮತ್ತು ಶೇಕಡ 87.82ರಷ್ಟು ವೈದ್ಯರ ಲಭ್ಯತೆ ಇರುವುದಾಗಿ ತಿಳಿಸಿದ್ದಾರೆ. ಈ ಕೋಷ್ಟಕದಿಂದ ವ್ಯಕ್ತವಾಗುದೇನೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಿ ಮತ್ತು ಸೇವೆಗಳು ದೊರಕುತ್ತಿದ್ದು, ಅವು ಪರಿಣಾಮಕಾರಿಯಾಗಿ ಇಲ್ಲದಿರುವುದು ಕಂಡುಬಂದಿದೆ. ಜೊತೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಯಾದರೂ ಮೊಬೈಲ್ ಆರೋಗ್ಯ ಸೇವೆಯ ಬಗ್ಗೆ ಜ್ಞಾನವಿಲ್ಲದಿರುವುದು ವ್ಯಕ್ತವಾಗಿದೆ. ಕಾರಣ ಗ್ರಾಮೀಣ ಭಾಗದ ಬಹುತೇಕ ಜನರಲ್ಲಿ ಸ್ಮಾರ್ಟ್ ಮೊಬೈಲ್ ಹೊಂದಿಲ್ಲದಿರುವುದು, ಒಂದು ವೇಳೆ ಹೊಂದಿದ್ದರೂ ಅದರ ಬಳಕೆಯ ಬಗ್ಗೆ ಅರವಿಲ್ಲದಿರುವುದು ಪ್ರಸ್ತುತ ಅಧ್ಯಯನದಿಂದ ಕಂಡುಬಂದಿದೆ.

## ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಶಿಬಿರಗಳನ್ನು ಏರ್ಪಡಿಸಿರುವುದು

ಭಾರತದಂತಹ ಜನಸಂಖ್ಯಾಭರಿತ ದೇಶದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಆರೋಗ್ಯವನ್ನು ಕಾಪಾಡುವ ಉದ್ದೇಶದಿಂದ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಗ್ರಾಮೀಣ ಭಾಗದ ಸಾರ್ವಜನಿಕರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪಂಚಾಯಿತಿಯ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರೂಪಿಸಿದ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳ ಬಗ್ಗೆ ತಿಳಿಸಲು, ಅರಿವು ಮೂಡಿಸಲು ಏರ್ಪಡಿಸಿದ ಶಿಬಿರಗಳ ಬಗ್ಗೆ ಕೆಳಕಂಡ ಕೋಷ್ಟಕದ ಮೂಲಕ ತಿಳಿಸಲಾಗಿದೆ.

**ಕೋಷ್ಟಕ –02**

**ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಶಿಬಿರಗಳನ್ನು ಏರ್ಪಡಿಸಿರುವ ವಿವರ**

| ಶಿಬಿರಗಳನ್ನು ಏರ್ಪಡಿಸಿರುವುದು | ಆವೃತ್ತಿ | ಶೇಕಡವಾರು |
|---|---|---|
| ಹೌದು | 133 | 42.62 |
| ಇಲ್ಲ | 179 | 57.38 |
| ಒಟ್ಟು | 312 | 100.00 |
| ಹೌದಾದಲ್ಲಿ, ಏರ್ಪಡಿಸಿದ ಶಿಬಿರಗಳು | ಆವೃತ್ತಿ (N=133) | ಶೇಕಡವಾರು |
| ಪೌಷ್ಟಿಕ ಶಿಬಿರ | 128 | 96.24 |
| ಚುಚ್ಚುಮದ್ದು ಶಿಬಿರ | 133 | 100.00 |
| ತಾಯಂದಿರ ಶಿಬಿರ | 125 | 93.98 |
| ಪೋಲಿಯೋ ಲಿಸಿಕೆ ಶಿಬಿರ | 133 | 100.00 |
| ಸಾಮಾನ್ಯ ಶಿಬಿರ | ಆವೃತ್ತಿ (N=312) | ಶೇಕಡವಾರು |
| ರಕ್ತದಾನ ಶಿಬಿರ | 197 | 63.14 |
| ಕಣ್ಣಿನ ತಪಾಸಣೆ ಶಿಬಿರ | 211 | 67.62 |
| ಸಂಪೂರ್ಣ ದೇಹ ತಪಾಸಣಾ ಶಿಬಿರ | 139 | 44.55 |

ಮೇಲಿನ ಕೋಷ್ಟಕದಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಶಿಬಿರಗಳನ್ನು ಏರ್ಪಡಿಸಿರುವ ವಿವರವನ್ನು ತಿಳಿಸಲಾಗಿದೆ. ಒಟ್ಟು ಮಾಹಿತಿದಾರರಲ್ಲಿ ಶೇಕಡ 42.62ರಷ್ಟು ಶಿಬಿರಗಳನ್ನು ಏರ್ಪಡಿಸಿರುವುದಾಗಿ ಹಾಗೂ ಶೇಕಡ 57.38ರಷ್ಟು ಯಾವುದೇ ಶಿಬಿರಗಳನ್ನು ಏರ್ಪಡಿಸಿರುವುದಿಲ್ಲವಾಗಿ ತಿಳಿಸಿದ್ದಾರೆ. ಈ ಕೋಷ್ಟಕದಿಂದ ಗಮನಿಸುವುದೇನೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯದ ಬಗ್ಗೆ ಶಿಬಿರಗಳು ಇತ್ತೀಚಿನದಾಗಿ ಧನಾತ್ಮಕವಾಗಿ ಬೆಳೆಯುತ್ತಿರುವುದು ವ್ಯಕ್ತವಾಗಿದೆ. ಮುಂದುವರೆದು ಶಿಬಿರಗಳನ್ನು ಏರ್ಪಡಿಸಿರುವ ವಿವರವನ್ನು ತಾಯಿ ಮತ್ತು ಮಗುವಿಗೆ ಸಂಬಂಧಿಸಿದಂತೆ ನೋಡುವುದಾದರೆ ಶೇಕಡ 96.24ರಷ್ಟು ಪೌಷ್ಠಿಕ ಆಹಾರದ ಶಿಬಿರ ಏರ್ಪಡಿಸಿರುವುದಾಗಿ, ಶೇಕಡ 100ರಷ್ಟು ಚುಚ್ಚುಮದ್ದು ಶಿಬಿರ ಏರ್ಪಡಿಸಿದ್ದು, ಶೇಕಡ 93.98ರಷ್ಟು ತಾಯಂದಿರ ಶಿಬಿರ ಮತ್ತು ಶೇಕಡ 100ರಷ್ಟು ಪೋಲಿಯೋ ಲಸಿಕೆಗೆ ಸಂಬಂಧಿಸಿದ ಶಿಬಿರವನ್ನು ಏರ್ಪಡಿಸಿರುವುದಾಗಿ ತಿಳಿಸಿದ್ದಾರೆ. ಹಾಗೆಯೇ ಸಾಮಾನ್ಯವಾಗಿ ಎಲ್ಲರಿಗೂ ಅನ್ವಯಿಸುವ ಶಿಬಿರಗಳಿಗೆ ಸಂಬಂಧಿಸಿದಂತೆ ಶೇಕಡ 63.14ರಷ್ಟು ರಕ್ತದಾನ ಶಿಬಿರ ಏರ್ಪಡಿಸಿದ್ದು, ಶೇಕಡ 67.62ರಷ್ಟು ಕಣ್ಣಿನ ತಪಾಸಣೆ ಶಿಬಿರ ಹಾಗೂ ಶೇಕಡ 44.55ರಷ್ಟು ಸಂಪೂರ್ಣ ದೇಹ ತಪಾಸಣಾ ಶಿಬಿರಗಳನ್ನು ಏರ್ಪಡಿಸಿರುವುದಾಗಿ ತಿಳಿಸಿದ್ದಾರೆ. ಈ ಕೋಷ್ಟಕದಿಂದ ಗಮನಿಸುವುದೇನೆಂದರೆ, ತಾಯಿ ಮತ್ತು ಮಗುವಿಗೆ ಪೌಷ್ಠಿಕ ಆಹಾರಕ್ಕೆ ಸಂಬಂಧಿಸಿದ ಶಿಬಿರಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಣ್ಣಿನ ತಪಾಸಣಾ ಶಿಬಿರಗಳು ಹೆಚ್ಚಾಗುತ್ತಿರುವುದು ವ್ಯಕ್ತವಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಶೇಕಡ 57.38ರಷ್ಟು ಮಾಹಿತಿದಾರರು ಯಾವುದೇ ಶಿಬಿರಗಳನ್ನು ಏರ್ಪಡಿಸಿಲ್ಲ ಎಂದು ತಿಳಿಸಿದ್ದಾರೆ. ಕಾರಣ ಮಾಹಿತಿದಾರರ ವಾಸಸ್ಥಾನದಲ್ಲಿ ಶಿಬಿರಗಳನ್ನು ಏರ್ಪಡಿಸಲು ಕಷ್ಟಸಾಧ್ಯವಾಗಿದ್ದು, ಶಿಬಿರಗಳನ್ನು ಪಂಚಾಯಿತಿ, ಹೋಬಳಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಏರ್ಪಡಿಸಿರುವುದಾಗಿ ಪ್ರಸ್ತುತ ಅಧ್ಯಯನದಿಂದ ತಿಳಿದುಬಂದಿದೆ.

## ತಾಯಿ–ಮಗು ಆರೈಕೆ ಪಡೆದುಕೊಂಡಿರುವುದು

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ ಇವರು ದೇಶದ ಸರ್ವಾಂಗೀಣ ಅಭಿವೃದ್ಧಿಯ ಭಾಗವಾಗಿರುವುದರಿಂದ ಪ್ರಸ್ತುತ ದಿನಗಳಲ್ಲಿ ಇವರ ಆರೋಗ್ಯ ರಕ್ಷಣೆ ಮಾಡುವುದು ಸರ್ಕಾರದ ಪ್ರಮುಖ ಪಾತ್ರವಾಗಿದೆ. ಇದಕ್ಕೆ ಪೂರಕವಾಗಿ ಗ್ರಾಮೀಣ ಜನಸಮುದಾಯದ ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಾಗಿ ಯಾವ ಆರೋಗ್ಯ ಕೇಂದ್ರಗಳಿಗೆ ಆದ್ಯತೆಯನ್ನು ನೀಡುತ್ತಾರೆ ಎಂಬುದರ ಕುರಿತಾಗಿ ಈ ಕೆಳಕಂಡಂತೆ ತಿಳಿಸಲಾಗಿದೆ.

**ಕೋಷ್ಟಕ – 03**

**ತಾಯಿ–ಮಗು ಆರೈಕೆ ಪಡೆದುಕೊಂಡಿರುವುದರ ವಿವರ**

| ಆರೈಕೆ ಪಡೆದುಕೊಂಡಿರುವುದು | ಆವೃತ್ತಿ (N=201) | ಶೇಕಡವಾರು |
|---|---|---|
| ಪ್ರಾಥಮಿಕ ಆರೋಗ್ಯ ಕೇಂದ್ರ | 160 | 79.61 |
| ತಾಲ್ಲೂಕು ಆರೋಗ್ಯ ಕೇಂದ್ರ | 03 | 01.49 |
| ಸಮುದಾಯ ಆರೋಗ್ಯ ಕೇಂದ್ರ | 02 | 00.99 |
| ಸಂಪ್ರದಾಯ ಪದ್ಧತಿ | 13 | 06.46 |
| ಇತರೆ | 23 | 11.46 |

ಮೇಲಿನ ಕೋಷ್ಟಕದಲ್ಲಿ ಸಂದರ್ಶಿತರ ಕುಟುಂಬದ ತಾಯಿ–ಮಗು ಆರೈಕೆಯನ್ನು ಹೆಚ್ಚಾಗಿ ಎಲ್ಲಿ ಪಡೆದುಕೊಂಡಿದ್ದಾರೆ ಎಂಬುದರ ಕುರಿತು ತಿಳಿಸುತ್ತದೆ. ಒಟ್ಟು ಮಾಹಿತಿದಾರಲ್ಲಿ ಶೇಕಡ 79.61ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಆರೈಕೆ ಪಡೆದಿರುವುದಾಗಿ, ಶೇಕಡ 1.49ರಷ್ಟು ತಾಲೂಕು ಆರೋಗ್ಯ ಕೇಂದ್ರದ ಮುಖಾಂತರ, ಶೇಕಡ 0.99ರಷ್ಟು ಸಮುದಾಯ ಆರೋಗ್ಯ ಕೇಂದ್ರದ ಮೂಲಕ, ಶೇಕಡ 6.46ರಷ್ಟು

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಂಪ್ರದಾಯ ಪದ್ಧತಿಯ ಮುಖಾಂತರ ಮತ್ತು ಶೇಕಡ 11.46ರಷ್ಟು ಇತರೆ ಅಂದರೆ ಸಮೂಹ ಮಾಧ್ಯಮಗಳು, ಸ್ನೇಹಿತರ ಮುಖಾಂತರ ಆರೈಕೆ ಪಡೆದಿರುವುದಾಗಿ ತಿಳಿಸಿದ್ದಾರೆ. ಈ ಕೋಷ್ಟಕದಿಂದ ವ್ಯಕ್ತವಾಗುವುದೇನೆಂದರೆ ಮಾಹಿತಿದಾರರ ಕುಟುಂಬದ ತಾಯಿ–ಮಗು ಹೆಚ್ಚಿನದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಮೂಲಕ ಆರೈಕೆ ಪಡೆದುಕೊಂಡಿರುವುದಾಗಿ ತಿಳಿಸಿದ್ದಾರೆ. ಕಾರಣ ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿವಿಧ ಮೂಲಭೂತ ಸೌಲಭ್ಯಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವುದರಿಂದ ಹಾಗೂ ಗ್ರಾಮೀಣ ಭಾಗದಲ್ಲಿ ಆಶಾಕಾರ್ಯಕರ್ತೆಯರು ನಿರಂತರವಾಗಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿ ಇಲ್ಲಿನ ಸೇವೆ ಮತ್ತು ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಿರುವುದರಿಂದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶೇಕಡ 79.61ರಷ್ಟು ಆರೈಕೆಗೆ ಒಳಗಾಗಿರುವುದು ಕಂಡುಬಂದಿದೆ.

## ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆದಿರುವ ಸೇವಾ ಸೌಲಭ್ಯಗಳು

ಗ್ರಾಮೀಣ ಭಾಗದ ಮಾಹಿತಿದಾರರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಆರೋಗ್ಯವನ್ನು ಕಾಪಾಡುವ ಬಗ್ಗೆ ಯಾವ ಸಲಹೆ ಮತ್ತು ಸೂಚನೆಗಳನ್ನು ಪಡೆದುಕೊಂಡಿದ್ದಾರೆ, ಪ್ರಸವಪೂರ್ವ ಮತ್ತು ಪ್ರಸವ ನಂತರ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆದಿರುವ ವಿವಿಧ ಆರೋಗ್ಯ ಸೇವಾ ಸೌಲಭ್ಯಗಳ ಬಗ್ಗೆ, ಇತರ ಅಂಶಗಳ ಕುರಿತು ಸರ್ಕಾರ ರೂಪಿಸಿದ ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳ ಬಗ್ಗೆ ಹೇಗೆ ಸಾರ್ವಜನಿಕರಿಗೆ ಅರಿವು ಮೂಡಿಸಿದ್ದಾರೆ ಎಂಬುದರ ಬಗ್ಗೆ ತಿಳಿಸಲಾಗಿದೆ.

**ಕೋಷ್ಟಕ–04 : ಮಾಹಿತಿದಾರರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆದಿರುವ ಸೇವಾ ಸೌಲಭ್ಯಗಳು**

| ಸೇವಾ ಸೌಲಭ್ಯಗಳು | ಆವೃತ್ತಿ (N=193) | | | |
|---|---|---|---|---|
| | ಹೌದು | ಶೇಕಡವಾರು | ಇಲ್ಲ | ಶೇಕಡವಾರು |
| **ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮಾಹಿತಿ** | | | | |
| ಪಥ್ಯಾನ್ನ | 39 | 20.21 | 154 | 79.79 |
| ಪ್ರಸವ ಆರೈಕೆ | 158 | 81.86 | 35 | 18.14 |
| ನವಜಾತ ಶಿಶು ಆರೈಕೆ | 157 | 81.34 | 36 | 18.66 |
| ಕುಟುಂಬ ಯೋಜನೆ ಬಗ್ಗೆ | 136 | 70.46 | 57 | 29.54 |
| ಪ್ರಸವದ ಅಪಾಯದ ಸೂಚನೆ | 29 | 15.03 | 164 | 84.97 |
| **ಗರ್ಭಿಣಿಯರಿಗೆ ಸೌಲಭ್ಯಗಳು** | | | | |
| ಐರನ್ ಫಲಿಕ್ ಮಾತ್ರೆ | 177 | 91.71 | 16 | 08.29 |
| ಓ.ಟಿ. ಇಂಜೆಕ್ಷನ್ | 172 | 89.12 | 21 | 10.88 |
| ಪ್ರೋಟೀನ್ ಪೌಡರ್ | 164 | 84.97 | 29 | 15.03 |
| ಸಿರಫ್‌ಗಳು | 146 | 75.65 | 47 | 24.03 |
| ಕ್ಯಾಲ್ಸಿಯಂ ಮಾತ್ರೆಗಳು | 170 | 88.08 | 23 | 11.92 |
| **ಪಿ.ಎಚ್.ಸಿ.ಯಿಂದ ಲಸಿಕೆಗಳು** | | | | |
| ಬಿ.ಸಿ.ಜಿ. ಚುಚ್ಚುಮದ್ದು | 185 | 98.93 | 02 | 01.07 |
| ಡಿ.ಪಿ.ಟಿ. ಲಸಿಕೆ | 177 | 94.65 | 10 | 05.35 |
| ದಡಾರ ಚುಚ್ಚುಮದ್ದು | 172 | 91.97 | 15 | 08.03 |
| ವಿಟಮಿನ್–ಎ | 169 | 90.37 | 18 | 09.63 |
| ಓ.ಆರ್.ಎಸ್. ಲಸಿಕೆ | 163 | 87.16 | 24 | 12.84 |
| ಪೋಲಿಯೋ ಲಸಿಕೆ | 187 | 100.00 | 00 | 00.00 |
| ಮೆದುಳು ಜ್ವರ ನಿಯಂತ್ರಣ ಲಸಿಕೆ | 132 | 70.59 | 55 | 29.49 |

ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆದಿರುವ ಸೇವಾ ಸೌಲಭ್ಯಗಳ ವಿವರವನ್ನು ತಿಳಿಸಲಾಗಿದೆ. ಸಂದರ್ಶಿತ ಒಟ್ಟು ಮಾಹಿತಿದಾರರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮಾಹಿತಿ ಪಡೆದಿರುವುದಕ್ಕೆ ಸಂಬಂಧಿಸಿದಂತೆ ಶೇಕಡ 20.21ರಷ್ಟು ಪಥ್ಯಾನ್ನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಿರುವುದಾಗಿ, ಶೇಕಡ 81.86ರಷ್ಟು ಪ್ರಸವ ಆರೈಕೆಗೆ ಸಂಬಂಧಿಸಿದಂತೆ, ಶೇಕಡ 81.34ರಷ್ಟು ನವಜಾತ ಶಿಶು ಆರೈಕೆಗೆ ಸಂಬಂಧಿಸಿದಂತೆ, ಶೇಕಡ 70.46ರಷ್ಟು ಕುಟುಂಬ ಯೋಜನೆಯ ಬಗ್ಗೆ ಮತ್ತು ಶೇಕಡ 15.03ರಷ್ಟು ಪ್ರಸವದ ಅಪಾಯ ಸೂಚನೆಯ ಬಗ್ಗೆ ತಿಳಿಸಿದ್ದಾರೆ. ಈ ಕೋಷ್ಟಕದಿಂದ ಕಂಡುಬರುವುದೇನೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಸವ ಆರೈಕೆ, ನವಜಾತ ಶಿಶು ಆರೈಕೆಗೆ ಸಂಬಂಧಿಸಿದಂತೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿರುವುದು ವ್ಯಕ್ತವಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮಾಹಿತಿ ಪಡೆದಿರುವುದರಲ್ಲಿ ಶೇಕಡ 15.03ರಷ್ಟು ಪ್ರಸವದ ಅಪಾಯದ ಸೂಚನೆಯ ಬಗ್ಗೆ ತಿಳಿಸಿದ್ದಾರೆ. ಕಾರಣ ಸಂಶೋಧನೆ ಕೈಗೊಂಡ ಕ್ಷೇತ್ರದಲ್ಲಿ ಅನೇಮಿಯಾ, ರಕ್ತಹೀನತೆ, ಪೌಷ್ಟಿಕತೆಯ ಕೊರತೆ ಹಾಗೂ ಬಾಲ್ಯವಿವಾಹದ ಪ್ರಕರಣಗಳಿಂದಾಗಿ ಪ್ರಸವದ ಅಪಾಯದ ಸೂಚನೆ ಕೊಟ್ಟಿರುವುದಾಗಿ ತಿಳಿದುಬಂದಿದೆ.

ಗರ್ಭಿಣಿಯರ ಸೌಲಭ್ಯಗಳಿಗೆ ಸಂಬಂಧಿಸಿದ ವಿವರವನ್ನು ನೋಡುವುದಾದರೆ ಶೇಕಡ 91.71ರಷ್ಟು ಕಬ್ಬಿಣಾಂಶವನ್ನು ಹೆಚ್ಚಿಸುವ ಮಾತ್ರೆಗಳು ನೀಡುತ್ತಿರುವುದಾಗಿ, ಶೇಕಡ 89.12ರಷ್ಟು ಓ.ಟಿ. ಇಂಜೆಕ್ಷನ್ ನೀಡುವುದಾಗಿ, ಶೇಕಡ 84.97ರಷ್ಟು ಪ್ರೋಟೀನ್ ಪೌಡರ್ ನೀಡುತ್ತಿರುವುದಾಗಿ, ಶೇಕಡ 75.65ರಷ್ಟು ಸಿರಫ್‌ಗಳನ್ನು ವಿತರಿಸುತ್ತಿರುವುದಾಗಿ ಮತ್ತು ಶೇಕಡ 88.08ರಷ್ಟು ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡುತ್ತಿರುವುದಾಗಿ ತಿಳಿಸಿದ್ದಾರೆ. ಒಟ್ಟಾರೆ ಗರ್ಭಿಣಿಯರ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ತೀವ್ರತರವಾದ ಆರೋಗ್ಯ ಸಮಸ್ಯೆಗಳನ್ನು ಹೊರೆತುಪಡಿಸಿ ಉಳಿದಂತೆ ಎಲ್ಲಾ ಸೌಲಭ್ಯಗಳನ್ನು ಇಲ್ಲಿಯೇ ವಿತರಣೆ ಮಾಡುತ್ತಿರುವುದು ಕಂಡುಬಂದಿದೆ. ಗರ್ಭಿಣಿಯಾದ ಸಂದರ್ಭದಲ್ಲಿ ಐರನ್ ಫಾಲಿಕ್, ಓ.ಟಿ. ಲಸಿಕೆ, ಪ್ರೋಟೀನ್ ಪೌಡರ್, ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡಲು ಕಾರಣವೇನೆಂದರೆ, ಸಂಶೋಧನಾ ಕ್ಷೇತ್ರದಲ್ಲಿನ ಮಹಿಳೆಯರಲ್ಲಿ ಫ್ಲೋರೈಡ್ ಕಾರಣದಿಂದಾಗಿ ಪ್ರೋಟೀನ್ ಕೊರತೆ, ರಕ್ತಹೀನತೆ ಮತ್ತು ಕ್ಯಾಲ್ಸಿಯಂ ಪ್ರಮಾಣ ಕಡಿಮೆ ಇರುವುದರಿಂದಾಗಿ ಈ ಎಲ್ಲಾ ಸೌಲಭ್ಯಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸರ್ಕಾರೇತರ ಸಂಸ್ಥೆಗಳ ನೆರವಿನೊಂದಿಗೆ ಒದಗಿಸುತ್ತಿರುವುದು ಕಂಡುಬಂದಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ನೀಡುತ್ತಿರುವ ಲಸಿಕೆಗಳಿಗೆ ಸಂಬಂಧಿಸಿದಂತೆ ನೋಡುವುದಾದರೆ ಶೇಕಡ 98.93ರಷ್ಟು ಬಿಸಿಜಿ ಚುಚ್ಚುಮದ್ದು ನೀಡುತ್ತಿರುವುದಾಗಿ, ಶೇಕಡ 94.65ರಷ್ಟು ಡಿ.ಪಿ.ಟಿ. ಲಸಿಕೆಯನ್ನು, ಶೇಕಡ 91.97ರಷ್ಟು ದಡಾರ ಚುಚ್ಚುಮದ್ದನ್ನು, ಶೇಕಡ 90.37ರಷ್ಟು ವಿಟಮಿನ್–ಎ ಲಸಿಕೆಯನ್ನು, ಶೇಕಡ 87.16ರಷ್ಟು ಓ.ಆರ್.ಎಸ್. ಲಸಿಕೆಯನ್ನು, ಶೇಕಡ 100ರಷ್ಟು ಪೋಲಿಯೋ ಲಸಿಕೆಯನ್ನು ಹಾಗೂ ಶೇಕಡ 70.59ರಷ್ಟು ಮೆದುಳು ಜ್ವರ ನಿಯಂತ್ರಣ ಲಸಿಕೆಯನ್ನು ಪಡೆದುಕೊಂಡಿರುವುದಾಗಿ ತಿಳಿಸಿದ್ದಾರೆ. ಇಲ್ಲಿ ಗಮನಿಸುವುದೇನೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮಕ್ಕಳಲ್ಲಿ ಕಂಡುಬರುವ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಸದಾ ಪರಿಹಾರ ನೀಡುತ್ತಿರುವುದು ಪ್ರಸ್ತುತ

ಅಧ್ಯಯನದಿಂದ ವ್ಯಕ್ತವಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪಡೆದ ಲಸಿಕೆಗಳ ಬಗ್ಗೆ ನೋಡುವುದಾದರೆ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರದಲ್ಲಿ ಪೋಲಿಯೋ ಲಸಿಕೆಯಲ್ಲಿ ಶೇಕಡ 100ಕ್ಕೆ ನೂರರಷ್ಟು ಸಾಧಿಸಿರುವುದು ಕಂಡುಬಂದಿದೆ. ಇತರೆ ಲಸಿಕೆಗಳಾದ ಬಿ.ಸಿ.ಜಿ. ಡಿ.ಪಿ.ಟಿ. ದಡಾರ, ವಿಟಮಿನ್–ಎ, ಒ.ಆರ್.ಎಸ್. ಮತ್ತು ಮೆದುಳು ಜ್ವರ ನಿಯಂತ್ರಣ ಲಸಿಕೆಗಳು ಶೇಕಡ 100ರಷ್ಟು ಸಾಧಿಸಿಲ್ಲದಿರುವುದು ಕಂಡುಬಂದಿದೆ. ಕಾರಣವೆಂದರೆ ಮಗು ಜನಿಸಿದ ನಂತರ ಪ್ರತಿಯೊಂದು ಲಸಿಕೆಗೂ ನಿರ್ದಿಷ್ಟ ಕಾಲಾವಧಿ ಆಗಬೇಕಾಗಿರುವುದರಿಂದ ಅದರಲ್ಲಿ ಏರುಪೇರಾಗಿರುವುದು ವ್ಯಕ್ತವಾಗಿದೆ.

ಒಟ್ಟಾರೆಯಾಗಿ, ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯವನ್ನು ಉತ್ತಮಪಡಿಸುವಲ್ಲಿ ಸರ್ಕಾರಗಳು ನಿರ್ದಿಷ್ಟ ಜನಸಂಖ್ಯಾ ಆಧಾರದ ಮೇಲೆ ಸಾರ್ವಜನಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿರುವುದು ಶ್ಲಾಘನೀಯ. ಆದರೆ ಪ್ರಸ್ತುತ ಗ್ರಾಮೀಣ ಆರೋಗ್ಯ ಕೇಂದ್ರಗಳು ಪ್ರತಿಯೊಂದು ಹಂತದಲ್ಲಿ ಹಲವು ಅಡೆ–ತಡೆಗಳು, ಸಮಸ್ಯೆಗಳನ್ನು ನೋಡುತ್ತೇವೆ. ಅದರಲ್ಲಿಯೂ ಮುಖ್ಯವಾಗಿ ಗ್ರಾಮೀಣ ಪ್ರದೇಶದ ಆರೋಗ್ಯ ಸಂರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಈ ಆರೋಗ್ಯ ಕೇಂದ್ರಗಳು ಈಗಿರುವ ಪರಿಸ್ಥಿತಿಯನ್ನು ಉತ್ತಮಪಡಿಸಲು, ಸುಧಾರಿಸಲು ಸರ್ಕಾರಗಳು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗೆಗೆ ಸಾರ್ವಜನಿಕರು ಅಲ್ಪಪ್ರಮಾಣದಲ್ಲಿ ಆಸಕ್ತಿ ತೋರಿಸುತ್ತಿರುವುದು ವಿಷಾದನೀಯ. ಇದನ್ನು ಹೋಗಲಾಡಿಸಿ ಸಾರ್ವಜನಿಕರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಲವು ತೋರಿಸಲು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಒದಗಿಸುವ ಸೇವಾ ಸೌಲಭ್ಯಗಳ ಗುಣಮಟ್ಟವನ್ನು ಸುಧಾರಿಸಲು ಹಾಗೂ ಸಾರ್ವಜನಿಕರಿಗೆ ಆಸಕ್ತಿಯನ್ನು ಹೆಚ್ಚಿಸಲು ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಿಂದ ಹಾಗೂ ಉತ್ತಮ ತಜ್ಞರಿಂದ ಇದಕ್ಕೆ ಸಲಹೆ ಸೂಚನೆಗಳನ್ನು ಪಡೆದು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ್ದೆ ಆದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ ಸಾರ್ವಜನಿಕರ ಮನೋಧೋರಣೆಗಳು ಬದಲಾಗುವಲ್ಲಿ ಯಾವುದೇ ಸಂದೇಹವಿಲ್ಲ ಎಂಬುದನ್ನು ಈ ಮೂಲಕ ತಿಳಿಯಬಹುದು.

## ಪರಾಮರ್ಶನ ಗ್ರಂಥಗಳು


- **Akhtar R. (2004) :** India Health Care Pattern and Planning, Delhi Efficient Offset Printers.
- **Cueto M. (2004) :** The origins of primary health care and selective primary health care, American Journal of Public Health, Vol. 94, No. 11.
- **Dilip T. R. (2002) :** Utilization of reproductive and child health care services: some observations from Kerala, Journal of Health Management, Vol. 4, Issue 1.
- **Gokhale, M.K. (2002) :** Infant mortality in India: use of maternal and child health services in relation to literacy, Journal of Health, Population and Nutrition, Vol. 20, Issue 2.
- **Goyal R. C. and Patil A. V. (2002) :** Current Health Scenario in Rural India, Australian Journal of Rural Health, Vol. 10.
- **Harshal Tukaram Pandve and Tukaram K. Pandve (2013) :** Primary Healthcare System in India: Evolution and Challenges, Vol. 1, Issue 3.
- **Hasin M. A. and Shareef M. A. (2001) :** Statistical measures of customer satisfaction for health care quality assurance: a case study, International Journal of Healthcare Quality Assurance, Vol. 14, Issue 1.
- **Jackson T., Acharya A. and Mills A. (2013) :** An Assessment of the Quality of Primary Health Care in India, Economic and Political Weekly, Vol. 48, No. 19.
- **Jaysawal N. (2015) :** Rural Health System in India, A Review International Journal of Social Work and Human Services Practice, Vol. 3, No. 1.
- **Jeejeebhoy S. J. and Varkey L. C. (2004) :** Maternal Health and Pragnacy Related Care, Prem Rawat for Rawat Publication.
- **Johannes Kriegel and Alois Polzl (2019) :** Levers for Integrating Social work into Primary Healthcare Networks in Austria, Health Policy, Vol. 124.
- **Kane R. L. (1969) :** Determination of health care priorities and expectations among rural consumers, Journal of Health Services Research.
- **Khursheed Hussain Dar (2015) :** Utilisation of the Services of the Primary Health Centres in India - An Empirical Study.
- **Murthy N. (2004) :** Non-medical determinants of maternal death in India, Journal of Health Management, Vol. 6, No. 1.
- **National Family Health Survey-03 (2005-06) :** Ministry of Health and Family Welfare, GoI, New Delhi.


■■

– *79ನೇ ಪುಟದಿಂದ ಮುಂದುವರೆದುದು*

ನೀಡಿದೆ. ಉದ್ಯೋಗ ನಿರಂತರವಾಗಿದ್ದು, ಸರಳ ಜೀವನ ನಡೆಸುವಷ್ಟು ಕೂಲಿ ನೀಡುತ್ತಿದ್ದಾರೆ. ನೇಕಾರರನ್ನು ಸಮಾಜಮುಖಿಯಾಗಿಸಲು, ಸಮಾಜದ ಉನ್ನತ ಸ್ಥಾನಗಳಿಗೆ ಕರೆದೊಯ್ಯಲು, ಸರ್ಕಾರ, ಸಂಸ್ಥೆಗಳು ಹಲವಾರು ಯೋಜನೆಗಳ ಮೂಲಕ ಆರ್ಥಿಕವಾಗಿ ಸಬಲರಾಗಿಸುವ ಮೂಲಕ ಸಮಾಜದಲ್ಲಿ ಉತ್ತಮವಾಗಿ ಗುರುತಿಸಿಕೊಳ್ಳಲು ಸಹಾಯ ಮಾಡುತ್ತಿವೆ.

## ಪರಾಮರ್ಶನ ಗ್ರಂಥಗಳು


- **ಹೊಸಮನಿ ನೀಲಪ್ಪ ಬಿ. (30 ಡಿಸೆಂಬರ್ 2002) : "ಉತ್ತರಕರ್ನಾಟಕದ ಕೈ ಮಗ್ಗ ನೇಕಾರರು–ಒಂದು ಸಮಾಜ ಶಾಸ್ತ್ರೀಯ ಅಧ್ಯಯನ"**, ಸಂಶೋಧನ ಪ್ರಬಂಧ.
- **ಕೆ .ರಾಮಮೋಹನ್‌ರಾವ್ ಮತ್ತು ಕಾಕುಮನ್ ಕಿರಣಕುಮಾರ್ (ಮಾರ್ಚ–ಎಪ್ರೀಲ್ 2018) : "ನೇಕಾರರ ಸಾಮಾಜಿಕ ಸ್ಥಿತಿಗಳ ಮೇಲೆ ಸಮಗ್ರ ಕೈ ಮಗ್ಗ ಕ್ಲಸ್ಟರ್ ಅಭಿವೃದ್ಧಿ ಯೋಜನೆಯ ಪರಿಣಾಮ: ಆಂಧ್ರಪ್ರದೇಶ"**, ಸಂಶೋಧನ ಪತ್ರಿಕೆ
- **ಪಾಟೀಲ ಎಸ್. ಶೃತಿ (2002) :"ಗದಗ ಜಿಲ್ಲೆ– ಬೆಟಗೇರಿ ನೇಕಾರ ಸಮುದಾಯದ ಕಥೆ"**. ಇ–ಮೂಲ ಸಂಶೋಧನ ಪ್ರಬಂಧ.
- **ಹೀರೆಮಠ ಅಕ್ಕಮಹಾದೇವಿ (ನವ್ಹೆಂಬರ್ 2015) : "ನೇಕಾರರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು ಮತ್ತು ಅವರ ಸಮಸ್ಯೆಗಳು: ನರಸಾಪುರ ಗದಗ ಜಿಲ್ಲೆ, ಕರ್ನಾಟಕ ರಾಜ್ಯ–ಒಂದು ಪ್ರಕರಣ ಅಧ್ಯಯನ"**, ಸಂಶೋಧನ ಯೋಜನೆ, Mini Proect Report Under Ugc 11Plan Swro,


■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ಡಾ. ರಾಧಾಕೃಷ್ಣನರವರ ಜೀವನ ಹಾಗೂ ಸಾಧನೆಗಳು

✍ **ಡಾ. ಆರ್.ಹೆಚ್.ಜಂಗಣವಾರಿ,** ಸಹಾಯಕ ಪ್ರಾಧ್ಯಾಪಕರು, ಕೆ ಆರ್.ಬೆಲ್ಲದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಸ್ನಾತ್ತಕೋತ್ತರ ಅಧ್ಯಯನ ವಿಭಾಗ ಮುಂಡರಗಿ

***"ಹೆಚ್ಚಿನ ಜನರು ಮನಸ್ಸು ಕನ್ನಡಿ ಎಂದು ನಂಬುತ್ತಾರೆ, ಹೆಚ್ಚು ಕಡಿಮೆ ನಿಖರವಾಗಿ ತಮ್ಮ ಹೊರಗಿನ ಪ್ರಪಂಚವನ್ನು ಪ್ರತಿಬಿಂಬಿಸುತ್ತದೆ, ಆದರೆ ಮನಸ್ಸು ಸ್ವತಃ ಸೃಷ್ಟಿಯ ಪ್ರಮುಖ ಅಂಶವಾಗಿದೆ ಎಂದು ತಿಳಿದುಕೊಳ್ಳುವುದಿಲ್ಲ."ಅತ್ಯುನ್ನತ ಶಿಕ್ಷಣವೆಂದರೆ ಅದು ನಮಗೆ ಕೇವಲ ಮಾಹಿತಿಯನ್ನು ನೀಡುವುದಿಲ್ಲ ಆದರೆ ನಮ್ಮ ಜೀವನವನ್ನು ಎಲ್ಲಾ ಅಸ್ತಿತ್ವದೊಂದಿಗೆ ಸಾಮರಸ್ಯದಿಂದ ಮಾಡುತ್ತದೆ.***

***– ರವೀಂದ್ರನಾಥ ಟ್ಯಾಗೋರ್***

ಸರ್ವಪಲ್ಲಿ ರಾಧಾಕೃಷ್ಣನ್ ಭಾರತದ ಒಬ್ಬ ಶೈಕ್ಷಣಿಕ, ತತ್ವಜ್ಞಾನಿ ಮತ್ತು ರಾಜನೀತಿಜ್ಞರು ವಿದ್ವಾಂಸ, ರಾಜಕಾರಣಿ, ತತ್ವಜ್ಞಾನಿ ಮತ್ತು ರಾಜಕಾರಣಿ. ಅವರು ಭಾರತದ ಮೊದಲ ಉಪರಾಷ್ಟ್ರಪತಿ ಮತ್ತು ಎರಡನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು. ರಾಧಾಕೃಷ್ಣನ್ ಅವರು ತಮ್ಮ ಜೀವನ ಮತ್ತು ವೃತ್ತಿಜೀವನವನ್ನು ಬರಹಗಾರರಾಗಿ ತಮ್ಮ ನಂಬಿಕೆಯನ್ನು ವಿವರಿಸಲು, ರಕ್ಷಿಸಲು ಮತ್ತು ಪ್ರಚಾರ ಮಾಡಲು ಪ್ರಯತ್ನಿಸಿದರು, ಇದನ್ನು ಅವರು ಹಿಂದೂ ಧರ್ಮ, ವೇದಾಂತ ಮತ್ತು ಆತ್ಮದ ಧರ್ಮ ಎಂದು ಉಲ್ಲೇಖಿಸಿದ್ದಾರೆ. ಅವರು ತಮ್ಮ ಹಿಂದೂ ಧರ್ಮವು ತಾತ್ವಿಕವಾಗಿ ಮತ್ತು ನೈತಿಕವಾಗಿ ಕಾರ್ಯಸಾಧ್ಯವಾಗಿದೆ ಎಂದು ತೋರಿಸಲು ಬಯಸಿದ್ದರು. ಅವರು ಭಾರತೀಯ ಮತ್ತು ಪಾಶ್ಚಿಮಾತ್ಯ ತಾತ್ವಿಕ ಸಂದರ್ಭಗಳಲ್ಲಿ ಆಗಾಗ್ಗೆ ನಿರಾಳವಾಗಿರುವಂತೆ ತೋರುತ್ತದೆ, ಮತ್ತು ಅವರು ತಮ್ಮ ಗದ್ಯದಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಮೂಲಗಳೆರಡನ್ನೂ ಸೆಳೆಯುತ್ತಾರೆ. ಪರಿಣಾಮವಾಗಿ, ರಾಧಾಕೃಷ್ಣನ್ ಅವರನ್ನು ಶೈಕ್ಷಣಿಕ ವಲಯಗಳಲ್ಲಿ ಪಶ್ಚಿಮಕ್ಕೆ ಹಿಂದೂ ಧರ್ಮದ ಸಂಕೇತವೆಂದು ಪ್ರಶಂಸಿಸಲಾಗಿದೆ. "ಶಿಕ್ಷಣವು ಸಂಪೂರ್ಣವಾಗಲು ಮಾನವೀಯವಾಗಿರಬೇಕು, ಅದು ಬುದ್ಧಿಯ ತರಬೇತಿಯನ್ನು ಮಾತ್ರವಲ್ಲದೆ ಹೃದಯದ ಪರಿಷ್ಕರಣೆ ಮತ್ತು ಚೈತನ್ಯದ ಶಿಸ್ತನ್ನು ಒಳಗೊಂಡಿರಬೇಕು. ಹೃದಯ ಮತ್ತು ಚೈತನ್ಯವನ್ನು ನಿರ್ಲಕ್ಷಿಸಿದರೆ ಯಾವುದೇ ಶಿಕ್ಷಣವನ್ನು ಪರಿಪೂರ್ಣವೆಂದು ಪರಿಗಣಿಸಲಾಗುವುದಿಲ್ಲ."

ಡಾ. ಸರ್ವಪಲ್ಲಿ ರಾಧಾಕೃಷ್ಣನ್, ಸೆಪ್ಟೆಂಬರ್ 5, 1888 ರಂದು ಮದ್ರಾಸ್ನ ಪಟ್ಟಣವಾದ ತಿರುಟ್ಟಣಿಯಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಸರ್ವಪಲ್ಲಿ ವೀರಸ್ವಾಮಿ ಅವರು ಸ್ಥಳೀಯ ಜಮೀನ್ದಾರರ ಸೇವೆಯಲ್ಲಿ ಅಧೀನ ಕಂದಾಯ ಅಧಿಕಾರಿ ಯಾಗಿದ್ದರು ಮತ್ತು ಅವರ ತಾಯಿ ಸೀತಮ್ಮ.ಅವರು ತಮ್ಮ ಆರಂಭಿಕ ಶಿಕ್ಷಣವನ್ನು ತಿರುಟ್ಟಣಿಯಲ್ಲಿ ಪಡೆದರು. ಸರ್ವಪಲ್ಲಿ ರಾಧಾಕೃಷ್ಣನ್ ಅವರು 16 ನೇ ವಯಸ್ಸಿನಲ್ಲಿ ಶಿವಕಾಮು ಅವರನ್ನು ವಿವಾಹವಾದರು. ಶಿವಕಾಮು ರಾಧಾ ಕೃಷ್ಣನ್ ಅವರ ದೂರದ ಸಂಬಂಧಿ. ರಾಧಾಕೃಷ್ಣನ್ ಮತ್ತು ಶಿವಕಾಮು 51 ವರ್ಷಗಳಿಗೂ ಹೆಚ್ಚು ಕಾಲ ಸಂತೋಷದಿಂದ ದಾಂಪತ್ಯ ಜೀವನ ನಡೆಸುತ್ತಿದ್ದರು. ರಾಧಾಕೃಷ್ಣನ್ ಅವರಿಗೆ ಆರು ಮಕ್ಕಳು, ಐದು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ. ಅವರ ಮಗ ಸರ್ವಪಲ್ಲಿ ಗೋಪಾಲ್ ಭಾರತದ ಪ್ರಸಿದ್ಧ ಇತಿಹಾಸಕಾರರಾಗಿದ್ದರು.

ಡಾ.ರಾಧಾಕೃಷ್ಣನ್ ಅವರು ಶಿಕ್ಷಣಕ್ಕೆ ನೀಡಿದ ಕೊಡುಗೆ ಅನನ್ಯವಾದದ್ದು. ಅವರು ಶಿಕ್ಷಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸುತ್ತಾರೆ ಮತ್ತು ಶ್ರೇಷ್ಠ ಶಿಕ್ಷಣ ತಜ್ಞರಾಗಲು ಉದ್ದೇಶಿಸಿದ್ದರು. ಮೊದಲ ಅನುಭವವನ್ನು ಹೊಂದಿದ್ದರು ಸಂಸ್ಥೆಗಳು ಮತ್ತು ಅವುಗಳ ಬಹುಮುಖಿ ಸಮಸ್ಯೆಗಳ ಅವರು ಮಹಾನ್ ತತ್ವಜ್ಞಾನಿಯಾಗಿದ್ದರೂ ಸಹ ಅವರು ಜೀವನವನ್ನು ಬಹಳ ಹತ್ತಿರದಿಂದ ನೋಡಿದರು ಮತ್ತು ಅದನ್ನು ಪೂರ್ಣವಾಗಿ ನೋಡಿದರು. ಜೀವನಕ್ಕೆ ಒಂದು ಅರ್ಥವಿದೆ ಎಂದು ನೋಡಲು ನಾವು ವಿಫಲವಾದರೆ ಮಾನವ ಸುಧಾರಣೆಗಾಗಿ ನಮ್ಮ ಸಂಪೂರ್ಣ ಶ್ರಮದಾಯಕ ಪ್ರಯತ್ನವು ಯಾವುದೇ ಪ್ರಯೋಜನವಿಲ್ಲ ಎಂದು ಅವರು ನಂಬುತ್ತಾರೆ. ಅವರು ನಮ್ಮ ಮೌಲ್ಯಗಳು ಮಸುಕಾಗಿರುವ ನಮ್ಮ ಯುಗದ ಭ್ರಮನಿರಸನ ಮತ್ತು ಗೊಂದಲವನ್ನು ಎತ್ತಿ ತೋರಿಸುತ್ತಾರೆ. ನಮ್ಮ ಆಲೋಚನೆ ಗೊಂದಲಮಯವಾಗಿದೆ ಮತ್ತು ನಮ್ಮ ಗುರಿಗಳು ಅಲೆಯುತ್ತಿವೆ. ಮನುಷ್ಯ ಕೇವಲ ರೊಟ್ಟಿಗಾಗಿ ಬದುಕುವುದಿಲ್ಲ. ಅವನಿಗೊಂದು ನಂಬಿಕೆ ಇರಬೇಕು. ಮನುಷ್ಯನು ತನ್ನಲ್ಲಿ ನಂಬಿಕೆಯನ್ನು ಹೊಂದಿರಬೇಕು ಮತ್ತು ಅವನೊಳಗೆ ದೈವಿಕ ಅಂಶವಿದೆ ಎಂದು ಅರಿತುಕೊಳ್ಳಬೇಕು ಎಂದು ಅವರು ನಂಬುತ್ತಾರೆ.ಇದು ಈ ದೈವಿಕ ಅಂಶವಾಗಿದೆ, ಇದು ಸಂಪೂರ್ಣ ಸೃಜನಶೀಲತೆಗೆ ಮತ್ತು ಪ್ರಪಂಚದಲ್ಲಿ ಪುರುಷರು ಚಲಾಯಿಸುವ ಎಲ್ಲಾ ಸ್ವಾತಂತ್ರ್ಯಕ್ಕೆ ಕಾರಣವಾಗಿದೆ. ಶಿಕ್ಷಣವು ಸಾಮಾಜಿಕ ವಿಮೋಚನೆಯ ಒಂದು ದೊಡ್ಡ ಸಾಧನವಾಗಿದೆ. ಜನಾಂಗ, ಧರ್ಮ, ಲಿಂಗ, ಉದ್ಯೋಗ ಅಥವಾ ಅರ್ಥಶಾಸ್ತ್ರದ ಸ್ಥಿತಿಯನ್ನು ಲೆಕ್ಕಿಸದೆ ಪುರುಷರಲ್ಲಿ ಸಮಾನ ಸ್ವಾತಂತ್ರ್ಯ ಮತ್ತು ಸಮಾನ ಹಕ್ಕುಗಳ ಮನೋಭಾವವನ್ನು ಸ್ಥಾಪಿಸಲು, ಸಂರಕ್ಷಿಸಲು ಮತ್ತು ರಕ್ಷಿಸಲು ಇದು ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ. ಆದಾಗ್ಯೂ ಸಮಾನ ಅವಕಾಶ ಎಂದರೆ ಒಂದೇ ಅವಕಾಶ ಎಂದಲ್ಲ. ಇದರರ್ಥ ಪ್ರತಿಯೊಬ್ಬ ವ್ಯಕ್ತಿಗೆ ಶಿಕ್ಷಣದ ಸಮಾನ ಲಭ್ಯತೆ ಅವರು ಅದರಿಂದ ಲಾಭ ಪಡೆಯುವ ಮಟ್ಟಿಗೆ ಮತ್ತು ಅವರ ಗರಿಷ್ಠ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ವಿನ್ಯಾಸ ಗೊಳಿಸಲಾಗಿದೆ, ಸಾಮರ್ಥ್ಯದ ಯೋಗ್ಯತೆ ಮತ್ತು ಆಸಕ್ತಿಗಳ ವ್ಯತ್ಯಾಸಗಳನ್ನು ಗುರುತಿಸುತ್ತದೆ.ಶಿಕ್ಷಣ ಮತ್ತು ತತ್ವಶಾಸ್ತ್ರವು ಬೇರ್ಪಡಿಸಲಾಗದಂತೆ ಸಂಬಂಧಪ್ರತಿ ಸಮಾಜಕ್ಕೆ, ಮತ್ತು ಶಿಕ್ಷಣವು ಮೂಲಭೂತವಾಗಿ ಒಂದು ಸಾಮಾಜಿಕ–ತಾತ್ವಿಕ ಉದ್ಯಮವಾಗಿದೆ. ಜ್ಞಾನ ಮತ್ತು ತತ್ವಶಾಸ್ತ್ರದ ಶಕ್ತಿಯಿಲ್ಲದೆ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸುವ ಯಾವುದೇ ಪ್ರಯತ್ನವು ಅನಿವಾರ್ಯವಾಗಿ ವಿಫಲವಾಗಿದೆ ಎಂದು ಪರಿಗಣಿಸಲಾಗುತ್ತದೆ. ಡಾ.ರಾಧಾಕೃಷ್ಣನ್ ಅವರಿಂದ ಪಾಠ ಕಲಿತ ಅನೇಕ ವಿದ್ಯಾರ್ಥಿಗಳು ಜನಪ್ರಿಯ ಶಿಕ್ಷಕರಾಗಿದ್ದರು. ರಾಧಾಕೃಷ್ಣನ್ ಅವರು ತಮ್ಮ ಜೀವನದ ಅವಧಿಯಲ್ಲಿ ಆಂಧ್ರ ವಿಶ್ವವಿದ್ಯಾಲಯ ಮತ್ತು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದರು. ಅವರು ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿನಲ್ಲಿ ತತ್ವಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ತಮ್ಮ ಗುರು ಉಪರಾಷ್ಟ್ರಪತಿಯಾಗಿ ದೆಹಲಿಗೆ ಹೊರಡುವ ಸಂದರ್ಭದಲ್ಲಿ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು, ಅವರನ್ನು ಕಳುಹಿಸಿ ಕೊಡಲು ಸಾರೋಟನ್ನು ತಂದು ಅಲಂಕರಿಸಿ, ಕುದುರೆಯ ಬದಲು ತಾವೇ ಕುದುರೆಗಳಂತೆ, ರಾಧಾಕೃಷ್ಣನ್ ಅವರು ಕುಳಿತ ಸಾರೋಟನ್ನು ಪ್ರೀತಿಪೂರ್ವಕವಾಗಿ ರೈಲ್ವೆ ನಿಲ್ದಾಣದವರೆಗೂ ಎಳೆದು ಕೊಂಡು ಹೋಗಿ, ಭಾವಪೂರ್ಣ ವಿದಾಯ ಹೇಳಿದ್ದರು. ಈ ಸನ್ನಿವೇಶವನ್ನು ಕಂಡು ರಾಧಾಕೃಷ್ಣನ್ ಅವರು ಭಾವುಕರಾಗಿದ್ದರಂತೆ. ಅವರು ಆಗಾಗ ಈ ಸಂದರ್ಭವನ್ನು ನೆನೆಸಿಕೊಳ್ಳುತ್ತಿದ್ದರು.

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಒಬ್ಬ ದಾರ್ಶನಿಕ, ಶ್ರೇಷ್ಠ ಶಿಕ್ಷಕ, ವಿದ್ವಾಂಸ ಸರ್ವಶ್ರೇಷ್ಠ, ಸೃಜನಶೀಲ ಪ್ರತಿಭೆ, ಮಹಾನ್ ಮಾನವತಾವಾದಿ, ಆಧ್ಯಾತ್ಮಿಕವಾದಿ, ದೂರದೃಷ್ಟಿಯುಳ್ಳ ವ್ಯಕ್ತಿ, ಧ್ಯೇಯೋದ್ದೇಶದ ವ್ಯಕ್ತಿ, ತತ್ವಗಳ ವ್ಯಕ್ತಿ, ಆದರ್ಶವಾದಿ, ಗ್ಯಾಬ್ ಉಡುಗೊರೆಯನ್ನು ಹೊಂದಿರುವ ವಾಗ್ಮಿ, ಒಬ್ಬ ಮೂಲ ಚಿಂತಕ, ಒಬ್ಬ ಪ್ರಖ್ಯಾತ ಲೇಖಕ ಅವರು ಭಾರತದ ಶ್ರೇಷ್ಠ ಶಿಕ್ಷಣತಜ್ಞರಲ್ಲಿ ಒಬ್ಬರು. ಅವರು ತಮ್ಮ ಅತ್ಯುತ್ತಮ ವ್ಯಕ್ತಿತ್ವ ಮತ್ತು ಬುದ್ಧಿಶಕ್ತಿಯಿಂದ ಭಾರತವನ್ನು ಮಾತ್ರವಲ್ಲದೆ ಇಡೀ ಜಗತ್ತನ್ನು ಬೆಳಗಿಸಿದರು. ಅವರು ಬುದ್ಧಿಜೀವಿಗಳ ನಕ್ಷತ್ರಪುಂಜದಲ್ಲಿ ಪ್ರಕಾಶಮಾನ ನಕ್ಷತ್ರದಂತೆ ಹೊಳೆಯುತ್ತಾರೆ. ಅವರು ಭಾರತದ ಶ್ರೇಷ್ಠ ಪುತ್ರರಾಗಿದ್ದರು.ಅವರ ಜನ್ಮದಿನವನ್ನು ಭಾರತದಲ್ಲಿ ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತದೆ. ಶಿಕ್ಷಕರಾಗಿ ಅವರ ಯಶಸ್ಸಿಗೆ ಅವರ ಉತ್ತಮ ಕಲಿಕೆ ಮತ್ತು ಸ್ಪಷ್ಟವಾದ ನಿರೂಪಣೆಯ ಕೊಡುಗೆ ಕಾರಣ. ಅವರು ಭಾರತದ ಶ್ರೇಷ್ಠ ಶಿಕ್ಷಣತಜ್ಞರಲ್ಲಿ ಒಬ್ಬರು.ಅವರು ತಮ್ಮ ಅತ್ಯುತ್ತಮ ವ್ಯಕ್ತಿತ್ವ ಮತ್ತು ಬುದ್ಧಿಶಕ್ತಿಯಿಂದ ಭಾರತವನ್ನು ಮಾತ್ರವಲ್ಲದೆ ಇಡೀ ಜಗತ್ತನ್ನು ಬೆಳಗಿಸಿದರು. ನಕ್ಷತ್ರ ಪುಂಜದಲ್ಲಿ ಪ್ರಕಾಶಮಾನ ನಕ್ಷತ್ರದಂತೆ ಹೊಳೆಯುತ್ತಾರೆ ಬುದ್ಧಿಜೀವಿಗಳಅವರು ಭಾರತದ ಶ್ರೇಷ್ಠ ಪುತ್ರರಾಗಿದ್ದರು.ಅವರ ಜನ್ಮದಿನವನ್ನು ಭಾರತದಲ್ಲಿ ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತದೆ.ಅವರು ಭಾರತೀಯ ಶಿಕ್ಷಣದ ಜ್ಯೋತಿಯನ್ನು ಹೊತ್ತವರು.ಅವರ ಕೊಡುಗೆ ಶಿಕ್ಷಣ, ತತ್ವಶಾಸ್ತ್ರ, ಧರ್ಮ, ಸಂಸ್ಕೃತಿ, ವಿಜ್ಞಾನ ಇತ್ಯಾದಿ ಕ್ಷೇತ್ರಕ್ಕೆ ಡಾ.ರಾಧಾಕೃಷ್ಣನ್ ಅವರು ಶಿಕ್ಷಣವನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಸಾಧನವೆಂದು ವ್ಯಾಖ್ಯಾನಿಸುತ್ತಾರೆ. ಸಾಮಾಜಿಕ ಮತ್ತು ರಾಷ್ಟ್ರೀಯ ಏಕೀಕರಣಕ್ಕಾಗಿ, ಉತ್ಪಾದಕತೆಯನ್ನು ಹೆಚ್ಚಿಸಲು, ಶಿಕ್ಷಣವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಶಿಕ್ಷಣದ ಮಹತ್ವವು ಜ್ಞಾನ ಮತ್ತು ಕೌಶಲ್ಯದಲ್ಲಿ ಮಾತ್ರವಲ್ಲ, ಅದು ಇತರರೊಂದಿಗೆ ಬದುಕಲು ನಮಗೆ ಸಹಾಯ ಮಾಡುವುದು.ಅವರ ಪ್ರಕಾರ ಶಿಕ್ಷಣವು ನಮಗೆ ಕೆಲವು ತಂತ್ರಗಳನ್ನು ನೀಡಬಾರದು, ಇದರಿಂದಾಗಿ ನಾವು ಯಶಸ್ವಿ ಜೀವನವನ್ನು ನಡೆಸುತ್ತೇವೆ, ಆದರೆ "ಶಾಶ್ವತ ಮೌಲ್ಯಗಳನ್ನು" ಕಂಡುಹಿಡಿಯಲು ನಮಗೆ ಸಹಾಯ ಮಾಡಬೇಕು. ಶಿಕ್ಷಕ ವೃತ್ತಿಯು ಅವರ ಮೊದಲ ಪ್ರೀತಿಯಾಗಿದ್ದು, ಅವರ ಅಡಿಯಲ್ಲಿ ಓದಿದವರು ಶಿಕ್ಷಕರಾಗಿ ಅವರ ಶ್ರೇಷ್ಠ ಗುಣಗಳನ್ನು ಇಂದಿಗೂ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಈ ಪರಿಸರದಲ್ಲಿ, ಪ್ರಸ್ತುತ ಪತ್ರಿಕೆಯು ಸರ್ವಪಲ್ಲಿ ರಾಧಾಕೃಷ್ಣನ್ ಅವರ ಶೈಕ್ಷಣಿಕ ಚಿಂತನೆಗಳ ಮೇಲೆ ಕೇಂದ್ರೀಕರಿಸಲು ಪ್ರಯತ್ನಿಸಿದೆ- ಶಿಕ್ಷಣದ ಪರಿಕಲ್ಪನೆಗಳು ಮತ್ತು ಕಾರ್ಯಗಳು, ಶಿಕ್ಷಣದ ಗುರಿಗಳು, ಪಠ್ಯಕ್ರಮ, ಬೋಧನಾ ವಿಧಾನಗಳು, ಶಿಸ್ತು, ಶಿಕ್ಷಕರ ಪಾತ್ರ ಮತ್ತು ಇಂದಿನ ದಿನಗಳಲ್ಲಿ ಅವರ ಶೈಕ್ಷಣಿಕ ಚಿಂತನೆಗಳ ಭಾರತ. ಸರ್ವಪಲ್ಲಿ ರಾಧಾಕೃಷ್ಣನ್, ಹೇಳುವಂತೆ "ಶಿಕ್ಷಕರು ದೇಶದ ಉತ್ತಮ ಮನಸ್ಸುಗಳಾಗಬೇಕು" ಸರಿಯಾದ ಶಿಕ್ಷಣದಿಂದ ಮಾತ್ರ ಸಮಾಜ ಮತ್ತು ದೇಶದ ಹಲವು ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು. ರಾಧಾಕೃಷ್ಣನ್ ಅವರು ಧಾರ್ಮಿಕ ಅನುಭವದ ವ್ಯಾಖ್ಯಾನದ ಪ್ರಕಾರ ವಿವಿಧ ಧರ್ಮಗಳನ್ನು ಶ್ರೇಣೀಕರಿಸಿದರು, ಅದ್ವೈತ ವೇದಾಂತವು ಅತ್ಯುನ್ನತ ಸ್ಥಾನವನ್ನು ಹೊಂದಿದೆ. ಇತರ ಧರ್ಮಗಳ ಬೌದ್ಧಿಕ ಮಧ್ಯಸ್ಥಿಕೆಯ ಪರಿಕಲ್ಪನೆಗಳಿಗೆ ಹೋಲಿಸಿದರೆ, ರಾಧಾಕೃಷ್ಣನ್ ಅದ್ವೈತ ವೇದಾಂತವನ್ನು ಹಿಂದೂ ಧರ್ಮದ ಅತ್ಯುತ್ತಮ ಪ್ರತಿನಿಧಿಯಾಗಿ ಕಂಡರು, ಏಕೆಂದರೆ ಅದು ಅಂತಃಪ್ರಜ್ಞೆಯ ಮೇಲೆ ಆಧಾರಿತವಾಗಿದೆ. ವೇದಾಂತವು ರಾಧಾಕೃಷ್ಣನ್ ಅವರ ಪ್ರಕಾರ ಧರ್ಮದ ಅತ್ಯುನ್ನತ ಪ್ರಕಾರವಾಗಿದೆ ಏಕೆಂದರೆ ಇದು ಅತ್ಯಂತ ನೇರವಾದ ಅರ್ಥಗರ್ಭಿತ ಅನುಭವ ಮತ್ತು ಆಂತರಿಕ ಸಾಕ್ಷಾತ್ಕಾರವನ್ನು ಒದಗಿಸುತ್ತದೆ. ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ತತ್ವಶಾಸ್ತ್ರದ ಪರಿಚಯವಿದ್ದರೂ, ರಾಧಾಕೃಷ್ಣನ್ ಅದನ್ನು ಟೀಕಿಸುತ್ತಿದ್ದರು. ವಸ್ತುನಿಷ್ಠತೆಗೆ ತಮ್ಮ ಹಕ್ಕುಗಳ ಹೊರತಾಗಿಯೂ, ಪಾಶ್ಚಿಮಾತ್ಯ ತತ್ವಜ್ಞಾನಿಗಳು ತಮ್ಮದೇ ಸಮಾಜದಿಂದ ಧಾರ್ಮಿಕ ಪ್ರಭಾವಗಳಿಂದ ಪ್ರಭಾವಿತರಾಗಿದ್ದಾರೆ ಎಂದು ಅವರು ಹೇಳಿದರು ಅವರು ತಮ್ಮ ಜೀವಿತಾವಧಿಯಲ್ಲಿ ಗೌರವಿಸಲ್ಪಟ್ಟ ಆರಂಭಿಕ ಜೀವನ, ಶಿಕ್ಷಣ ಮತ್ತು ಪ್ರಶಸ್ತಿಗಳ ಬಗ್ಗೆ ಕಲಿಯುತ್ತಾರೆ. ಅವರು ಭಾರತವನ್ನು ಹೆಮ್ಮೆಪಡುವಂತೆ ಮಾಡಿದ್ದಾರೆ ಮತ್ತು ಅವರ ಸ್ಮರಣೆಯಲ್ಲಿ ಶಿಕ್ಷಕರ ದಿನವನ್ನು ಸಮರ್ಪಿಸಲಾಯಿತು.ನಮ್ಮ ಸಮಾಜಕ್ಕೆ ಶಿಕ್ಷಕರು ನೀಡಿದ ಮಹಾನ್ ಕೊಡುಗೆಯ ಗುರುತಾಗಿ, ಡಾ. ರಾಧಾಕೃಷ್ಣನ್ ಅವರ ಜನ್ಮದಿನದಂದು ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತೇವೆ ಮತ್ತು ಅವರ ಕನಸುಗಳ ಸಮಾಜವನ್ನು ನಿರ್ಮಿಸಲು ಅವರ ಆದರ್ಶಗಳನ್ನು ಅನುಕರಿಸುವ ಮೂಲಕ ನಾವು ಅವರಿಗೆ ಗೌರವ ಸಲ್ಲಿಸಬೇಕು. ಶಿಕ್ಷಕರು ಸ್ತಂಭಗಳಾಗಿದ್ದು, ಅದರ ಮೇಲೆ ಇಡೀ ಸಮಾಜವು ನೆಲೆಗೊಂಡಿದೆ ಮತ್ತು ಆದ್ದರಿಂದ ಸಮಾಜದ ಗುಣಮಟ್ಟವು ಹೆಚ್ಚಿನ ಮಟ್ಟಿಗೆ ನಮ್ಮ ಶಿಕ್ಷಕರ ಮೇಲೆ ಅವಲಂಬಿತವಾಗಿದೆ.

ಡಾ. ರಾಧಾಕೃಷ್ಣನ್ ಅವರ ಶೈಕ್ಷಣಿಕ ಚಿಂತನೆಗಳು ಕೇವಲ ಆದರ್ಶವಾದಿಯಾಗಿರದೆ ಹೆಚ್ಚು ಪ್ರಾಯೋಗಿಕವಾಗಿವೆ. ಅವರ ಶೈಕ್ಷಣಿಕ ಚಿಂತನೆಗಳು ಪ್ರಾಯೋಗಿಕ ತತ್ವಶಾಸ್ತ್ರದಿಂದ ಪ್ರಭಾವಿತವಾಗಿವೆ. ಅವರು ಶಿಕ್ಷಣವನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಸಾಧನವೆಂದು ವ್ಯಾಖ್ಯಾನಿಸುತ್ತಾರೆ. ಸಾಮಾಜಿಕ ಮತ್ತು ರಾಷ್ಟ್ರೀಯ ಏಕೀಕರಣಕ್ಕಾಗಿ, ಉತ್ಪಾದಕವಾಗಿ ಹೆಚ್ಚಿಸಲು, ಶಿಕ್ಷಣವನ್ನು ಸರಿಯಾಗಿ ಬಳಸಿಕೊಳ್ಳಬೇಕು. "ಶಿಕ್ಷಣದ ಪ್ರಾಮುಖ್ಯತೆ ಜ್ಞಾನ ಮತ್ತು ಕೌಶಲ್ಯದಲ್ಲಿ ಮಾತ್ರವಲ್ಲ, ಇತರರೊಂದಿಗೆ ಬದುಕಲು ನಮಗೆ ಸಹಾಯ ಮಾಡುವುದು" ಎಂದು ಅವರು ನಂಬಿದ್ದರು. (ಭಾಟಿಯಾ ಮತ್ತು ಸರಿನ್, 2004, ). ಸರಿಯಾದ ಶಿಕ್ಷಣದಿಂದ ಮಾತ್ರ ಸಮಾಜ ಮತ್ತು ದೇಶದ ಹಲವು ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂದು ಡಾ.ರಾಧಾಕೃಷ್ಣನ್ ಅಭಿಪ್ರಾಯಪಟ್ಟರು. ಬಾಹ್ಯಾಕಾಶ ಮತ್ತು ಸಮಯವನ್ನು ಮೀರಿದ ಅದೃಶ್ಯ ಮತ್ತು ಅಮೂರ್ತ ಜಗತ್ತನ್ನು ಇತರ ಜಗತ್ತನ್ನು ನೋಡಲು ನಮಗೆ ಸಹಾಯ ಮಾಡುವ ಶಿಕ್ಷಣವನ್ನು ಅವರು ಬಯಸುತ್ತಾರೆ. ನಮ್ಮಲ್ಲಿ ಈಗಾಗಲೇ ಏನಿದೆ ಎಂಬುದನ್ನು ಅರಿತುಕೊಳ್ಳಲು ಶಿಕ್ಷಣವು ನಮಗೆ ಎರಡನೇ ಜನ್ಮವನ್ನು ನೀಡಬೇಕಾಗಿದೆ. ಶಿಕ್ಷಣದ ಅರ್ಥವು ವ್ಯಕ್ತಿಯನ್ನು ವಿಮೋಚನೆಗೊಳಿಸುವುದಾಗಿದೆ ಮತ್ತು ನಮಗೆ ಸಂಪೂರ್ಣತೆಯ ಶಿಕ್ಷಣದ ಅಗತ್ಯವಿದೆ – ಮಾನಸಿಕ, ದೈಹಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ.ಶಿಕ್ಷಣವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಿರಂತರ ಚಿಂತನೆ, ಸತ್ಯದ ಅನುಸರಣೆ ಮತ್ತು ಜನಪ್ರಿಯ ಭಾವನೆಗಳಿಗೆ ಪ್ರತಿರೋಧದ ಶಕ್ತಿ ಮತ್ತು ಜನಸಮೂಹದ ಉತ್ಸಾಹವನ್ನು ಬೆಳೆಸಬೇಕು. ಅವರು ಜ್ಞಾನಕ್ಕಾಗಿ ಜ್ಞಾನವನ್ನು ಪ್ರೀತಿಸಲಿಲ್ಲ ಆದರೆ ಅದರ ಪ್ರಾಯೋಗಿಕ ಉಪಯುಕ್ತತೆಗಾಗಿ ಜ್ಞಾನವನ್ನು ಬಯಸಿದರು.ಅವರು ತಮ್ಮ ಸ್ವಹಿತಾಸಕ್ತಿ ಮತ್ತು ಸ್ವಾಭಿಮಾನಕ್ಕಾಗಿ ದೇಶದ ಮಕ್ಕಳು ಮತ್ತು ಯುವಕರಿಗೆ ಶಿಕ್ಷಣ ನೀಡಲು ಬಯಸಲಿಲ್ಲ, ಆದರೆ ನೈಸರ್ಗಿಕ ಅಭಿವೃದ್ಧಿ ಮತ್ತು ಸಮೃದ್ಧಿಗಾಗಿ. ಅವರ ಶೈಕ್ಷಣಿಕ ತತ್ವಶಾಸ್ತ್ರವು ಸಾರ್ವತ್ರಿಕ ಪ್ರೀತಿ ಮತ್ತು ಮಾನವೀಯತೆ, ಪರಸ್ಪರ ಸಹಾಯ ಮತ್ತು ಸಹಕಾರ, ಸ್ವಯಂ-ತ್ಯಾಗ ಮತ್ತು ಸ್ವಯಂ-ತ್ಯಾಗದ ತತ್ವಗಳನ್ನು ಆಧರಿಸಿದೆ (ಚೌಧರಿ, ಎಸ್., 2006, ಪುಟ.77). ಶಿಕ್ಷಣದ ಪ್ರಕ್ರಿಯೆಯು ಮಾನಸಿಕ ಬೇರ್ಪಡುವಿಕೆ ಮತ್ತು ವಸ್ತುನಿಷ್ಠತೆಯನ್ನು ಸೃಷ್ಟಿಸಲು ಸಮರ್ಥವಾಗಿರಬೇಕು, ಇದು ಉತ್ತಮ ಸಮತೋಲನ ವ್ಯಕ್ತಿತ್ವದ ಅಗತ್ಯ ಪೂರ್ವಾಪೇಕ್ಷಿತವಾಗಿದೆ. ಶಿಕ್ಷಣದ ಮಹತ್ವವು ಜ್ಞಾನ ಮತ್ತು ಕೌಶಲ್ಯದಲ್ಲಿ ಮಾತ್ರವಲ್ಲ, ಅದು ಇತರರೊಂದಿಗೆ ಬದುಕಲು ನಮಗೆ ಸಹಾಯ ಮಾಡುವುದು. ಸಹಕಾರ ಮತ್ತು ಪರಸ್ಪರ ಸಹಕಾರಿ ಜೀವನಕ್ಕಾಗಿ ನಾವು ತರಬೇತಿ ಪಡೆಯಬೇಕು. ನೈತಿಕ ಗುಣಗಳು ಬೌದ್ಧಿಕ ಸಾಧನೆಗಳಿಗಿಂತ ಹೆಚ್ಚಿನ ಮೌಲ್ಯಗಳನ್ನು ಹೊಂದಿವೆ. ಶಿಕ್ಷಣದ ನಿಜವಾದ ಅಂತ್ಯವು ಮಾಹಿತಿಯ ಸ್ವಾಧೀನವಲ್ಲ,

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಪ್ರಮುಖ ಚಿಂತನೆ, ಅಥವಾ ತಾಂತ್ರಿಕ ಕೌಶಲ್ಯಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು, ಆದರೆ ಆಧುನಿಕ ಸಮಾಜವು ಬಹಳ ಅವಶ್ಯಕವಾಗಿದೆ. ಮಾಹಿತಿ ಮತ್ತು ತಾಂತ್ರಿಕ ಕೌಶಲ್ಯವನ್ನು ಮೀರಿದ ಮೇಲ್ನೋಟದ ಮೇಲ್ನೋಟವನ್ನು ಒಬ್ಬರು ಹೊಂದಿರಬೇಕು. ಮಾಹಿತಿಯು ಜ್ಞಾನವಲ್ಲ, ಅಥವಾ ಜ್ಞಾನವೂ ಅಲ್ಲ, ಅಥವಾ ಜ್ಞಾನ ಬುದ್ಧಿವಂತಿಕೆಯೂ ಅಲ್ಲ. ಒಬ್ಬ ವ್ಯಕ್ತಿಯು ಯುದ್ಧದಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು ಮತ್ತು ಯಾವುದೇ ರೀತಿಯ ಆಂತರಿಕ ಅಡಚಣೆ ಅಥವಾ ಒಬ್ಬರ ಅಸ್ತಿತ್ವದ ಪ್ರಕ್ಷುಬ್ಧತೆಯಿಲ್ಲದೆ ನಡೆಯುವ ವಿಷಯಗಳನ್ನು ನೋಡುವ ಸಾಮರ್ಥ್ಯವನ್ನು ಹೊಂದಿರಬೇಕು. (ನಂದಾ, ಆರ್., 2009). ಜಾನ್ ಡೀವಿ, ಪೆಸ್ಟಲೋಜಿ, ಅರಬಿಂದೋ ಮತ್ತು ಟ್ಯಾಗೋರ್‌ರಂತಹ ಅನೇಕ ತತ್ವಜ್ಞಾನಿಗಳಂತೆ, ರಾಧಾಕೃಷ್ಣನ್ ಎಲ್ಲರಿಗೂ ಶಿಕ್ಷಣ ಮತ್ತು ಮಗುವಿನ ಅಗತ್ಯತೆ ಮತ್ತು ಆಸಕ್ತಿಗೆ ಅನುಗುಣವಾಗಿ ಶಿಕ್ಷಣಕ್ಕೆ ಒತ್ತು ನೀಡಿದರು. ಪ್ರತಿಯೊಬ್ಬ ವ್ಯಕ್ತಿಯು ಕೆಲವು ಸಹಜ ಪ್ರವೃತ್ತಿಗಳು ಮತ್ತು ಸಾಮರ್ಥ್ಯಗಳೊಂದಿಗೆ ಜನಿಸುತ್ತಾನೆ ಎಂದು ಅವರು ನಂಬುತ್ತಾರೆ. ಇದು ಶಿಕ್ಷಣದ ಮೂಲಕ ಮಾತ್ರ, ಈ ಜನ್ಮಜಾತ ಸಾಮರ್ಥ್ಯಗಳು ಪ್ರಕಟವಾಗುತ್ತವೆ. ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗದ ಅಧ್ಯಕ್ಷರಾಗಿ (1948), ಅವರು ಶಿಕ್ಷಣ ಕ್ಷೇತ್ರದಲ್ಲಿ ಪ್ರವರ್ತಕ ಕೆಲಸವನ್ನು ಮಾಡಿದ್ದಾರೆ, ಇದು ಹೆಚ್ಚಿನ ಒತ್ತು ಮತ್ತು ಶಿಕ್ಷಣದ ಮೂಲಕ ಅವರ ಅಭಿವ್ಯಕ್ತಿಯನ್ನು ನೀಡಿದೆ (ಚೌಧರಿ, ಎಸ್., 2006, ಪು.78). ಎಲ್ಲಾ ಜ್ಞಾನ ಮತ್ತು ಶಕ್ತಿಗಳು ಮನುಷ್ಯನೊಳಗೆ ಇವೆ ಎಂದು ಅವರು ಹೇಳುತ್ತಾರೆ.ಸರಿಯಾದ ಶಿಕ್ಷಣ ಮತ್ತು ಆತ್ಮದ ಮೂಲಕ ಹೃದಯವನ್ನು ಪರಿಷ್ಕರಿಸಬಹುದು ಮತ್ತು ಶುದ್ಧೀಕರಿಸಬಹುದು. ಅವನಿಗೆ, ಶಿಕ್ಷಣವು ಆತ್ಮದ ಜ್ಞಾನೋದಯವಾಗಿದೆ. ಶಿಕ್ಷಣವು ಅಜ್ಞಾನವನ್ನು ಹೋಗಲಾಡಿಸಿ ವ್ಯಕ್ತಿಯನ್ನು ಬೆಳಗಿಸುತ್ತದೆ. ಶಿಕ್ಷಣವು ಪುಸ್ತಕ ಕಲಿಕೆಯೂ ಅಲ್ಲ, ಸತ್ಯಗಳು ಮತ್ತು ಅಂಕಿಅಂಶಗಳನ್ನು ನೆನಪಿಟ್ಟುಕೊಳ್ಳುವುದಲ್ಲ ಎಂದು ಅವರು ಒತ್ತಿಹೇಳುತ್ತಾರೆ. ಇದು ಪದಗಳ ಸಂಗ್ರಹವಲ್ಲ ಅಥವಾ ಜೀವನ ಮತ್ತು ಪ್ರಪಂಚಕ್ಕೆ ಸಂಬಂಧಿಸದ ಲೆಕ್ಕವಿಲ್ಲದಷ್ಟು ಮಾಹಿತಿಯೊಂದಿಗೆ ಮನಸ್ಸನ್ನು ತುಂಬಿಸುವುದಿಲ್ಲ. ಇದು ಆಲೋಚನೆಗಳ ಕಂಠಪಾಠವೂ ಅಲ್ಲ ಶಿಕ್ಷಣದ ನಿಜವಾದ ಅಂತ್ಯವು ಮಾಹಿತಿಯ ಸ್ವಾಧೀನವಲ್ಲ, ಪ್ರಮುಖ ಚಿಂತನೆ, ಅಥವಾ ತಾಂತ್ರಿಕ ಕೌಶಲ್ಯಗಳನ್ನು ಸ್ವಾಧೀನಪಡಿಸಿಕೊಳ್ಳುವುದು, ಆದರೆ ಆಧುನಿಕ ಸಮಾಜವು ಬಹಳ ಅವಶ್ಯಕವಾಗಿದೆ. ಮಾಹಿತಿ ಮತ್ತು ತಾಂತ್ರಿಕ ಕೌಶಲ್ಯವನ್ನು ಮೀರಿದ ಮೇಲ್ನೋಟದ ಮೇಲ್ನೋಟವನ್ನು ಒಬ್ಬರು ಹೊಂದಿರಬೇಕು. ಮಾಹಿತಿಯು ಜ್ಞಾನವಲ್ಲ, ಅಥವಾ ಜ್ಞಾನವೂ ಅಲ್ಲ, ಅಥವಾ ಜ್ಞಾನ ಬುದ್ಧಿವಂತಿಕೆಯೂ ಅಲ್ಲ. (ನಂದಾ, ಆರ್., 2009). ಜಾನ್ ಡೀವಿ, ಪೆಸ್ಟಲೋಜಿ, ಅರಬಿಂದೋ ಮತ್ತು ಟ್ಯಾಗೋರ್‌ರಂತಹ ಅನೇಕ ತತ್ವಜ್ಞಾನಿಗಳಂತೆ, ರಾಧಾಕೃಷ್ಣನ್ ಎಲ್ಲರಿಗೂ ಶಿಕ್ಷಣ ಮತ್ತು ಮಗುವಿನ ಅಗತ್ಯತೆ ಮತ್ತು ಆಸಕ್ತಿಗೆ ಅನುಗುಣವಾಗಿ ಶಿಕ್ಷಣಕ್ಕೆ ಒತ್ತು ನೀಡಿದರು. ಪ್ರತಿಯೊಬ್ಬ ವ್ಯಕ್ತಿಯು ಕೆಲವು ಸಹಜ ಪ್ರವೃತ್ತಿಗಳು ಮತ್ತು ಸಾಮರ್ಥ್ಯಗಳೊಂದಿಗೆ ಜನಿಸುತ್ತಾನೆ ಎಂದು ಅವರು ನಂಬುತ್ತಾರೆ. ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗದ ಅಧ್ಯಕ್ಷರಾಗಿ (1948), ಅವರು ಶಿಕ್ಷಣ ಕ್ಷೇತ್ರದಲ್ಲಿ ಪ್ರವರ್ತಕ ಕೆಲಸವನ್ನು ಮಾಡಿದ್ದಾರೆ, ಇದು ಹೆಚ್ಚಿನ ಒತ್ತು ಮತ್ತು ಶಿಕ್ಷಣದ ಮೂಲಕ ಅವರ ಅಭಿವ್ಯಕ್ತಿಯನ್ನು ನೀಡಿದೆ (ಚೌಧರಿ, ಎಸ್., 2006, ಪು.78). ಎಲ್ಲಾ ಜ್ಞಾನ ಮತ್ತು ಶಕ್ತಿಗಳು ಮನುಷ್ಯನೊಳಗೆ ಇವೆ ಎಂದು ಅವರು ಹೇಳುತ್ತಾರೆ. ಸರಿಯಾದ ಶಿಕ್ಷಣ ಮತ್ತು ಆತ್ಮದ ಮೂಲಕ ಹೃದಯವನ್ನು ಪರಿಷ್ಕರಿಸಬಹುದು ಮತ್ತು ಶುದ್ಧೀಕರಿಸಬಹುದು.

ಶಿಕ್ಷಣವು ಆತ್ಮದ ಜ್ಞಾನೋದಯವಾಗಿದೆ.ಶಿಕ್ಷಣವು ಅಜ್ಞಾನವನ್ನು ಹೋಗಲಾಡಿಸಿ ವ್ಯಕ್ತಿಯನ್ನು ಬೆಳಗಿಸುತ್ತದೆ. ಶಿಕ್ಷಣವು ಪುಸ್ತಕ ಕಲಿಕೆಯೂ ಅಲ್ಲ, ಸತ್ಯಗಳು ಮತ್ತು ಅಂಕಿಅಂಶಗಳನ್ನು ನೆನಪಿಟ್ಟುಕೊಳ್ಳುವುದಲ್ಲ ಎಂದು ಅವರು ಒತ್ತಿಹೇಳುತ್ತಾರೆ.ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಸಂತೋಷ್ ಕುಮಾರ್ ಬೆಹೆರಾ ಸಂಪುಟ–1, ಸಂಚಿಕೆ–1 ಫೆಬ್ರವರಿ 2015 ರ ಶೈಕ್ಷಣಿಕ ಚಿಂತನೆಗಳ ಚಿಂತನೆಗಳನ್ನು ಕಂಠಪಾಠ ಮಾಡಿಲ್ಲ 198 ಇತರರು ವಿದೇಶಿ ಭಾಷೆಯಲ್ಲಿ ಮತ್ತು ವೈಟ್ ಕಾಲರ್ ಉದ್ಯೋಗಗಳಿಗೆ ಡಿಪ್ಲೊಮಾ ಮತ್ತು ಪದವಿಗಳನ್ನು ಪಡೆಯಲು ಪರೀಕ್ಷೆಯಲ್ಲಿರುವವರನ್ನು ಪುನರುತ್ಪಾದಿಸುವುದು. ಬದಲಿಗೆ, ಇದು ಮಾನವ–ತಯಾರಿಕೆ, ಪಾತ್ರ–ರೂಪಿಸುವುದು ಮತ್ತು ಜೀವನ–ನಿರ್ಮಾಣಕ್ಕಾಗಿ ಮೌಲ್ಯಗಳು ಮತ್ತು ಆಲೋಚನೆಗಳ ಸಮೀಕರಣವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರ ಶಿಕ್ಷಣದ ಪರಿಕಲ್ಪನೆಯು ಪೂರ್ವ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ಸಕಾರಾತ್ಮಕ ಅಂಶಗಳ ಸಾಮರಸ್ಯದ ಮಿಶ್ರಣವಾಗಿದೆ ಎಂದು ಹೇಳಬಹುದು. “ಶಿಕ್ಷಣ” ಕುರಿತು ಪ್ರತಿಕ್ರಿಯಿಸುತ್ತಾ, “ಮನಃಶಾಸ್ತ್ರದ ಅಗತ್ಯತೆಗಳು” ತನ್ನ ಪರಿಚಯದ ಕೊನೆಯಲ್ಲಿ ರಾಧಾಕೃಷ್ಣನ್ ಹೇಳುತ್ತಾರೆ: “ಶೈಕ್ಷಣಿಕ ಸಿದ್ಧಾಂತದ ಆಧಾರವು ಮನೋವಿಜ್ಞಾನವಾಗಿದೆ. ಶಿಕ್ಷಣವು ಮಾನವನ ವಿವಿಧ ಕಾರ್ಯಗಳ ಸಂಪೂರ್ಣ ಮತ್ತು ಸಾಮರಸ್ಯದ ಬೆಳವಣಿಗೆಯನ್ನು ತನ್ನ ಗುರಿಗಾಗಿ ಹೊಂದಿದೆ.ಅವು ಯಾವುವು ಮತ್ತು ಅವು ಹೇಗೆ ಬೆಳೆಯುತ್ತವೆ ಎಂಬುದು ಮನೋವಿಜ್ಞಾನದ ಸಮಸ್ಯೆಗಳು. ಪ್ರತಿಯೊಬ್ಬ ಶಿಕ್ಷಣತಜ್ಞನು ಮನಸ್ಸಿನ ಸ್ವಭಾವದ ಸಂಪೂರ್ಣ ಜ್ಞಾನವನ್ನು ಹೊಂದಿರಬೇಕು, ಅದು ಪೂರ್ಣತೆ ಮತ್ತು ಪ್ರಬುದ್ಧತೆಗೆ ತರುವುದು ಅವನ ವ್ಯವಹಾರವಾಗಿದೆ.ಆದ್ದರಿಂದ, ಮಗುವಿನ ಮನಸ್ಸಿನ ಜ್ಞಾನವು ಶಿಕ್ಷಕರಿಗೆ ಅವಶ್ಯಕವಾಗಿದೆ. ಮತ್ತೊಮ್ಮೆ, ಮಾನಸಿಕ ತತ್ವಗಳಿಗೆ ವಿರುದ್ಧವಾದ ಬೋಧನೆಯ ಯಾವುದೇ ವಿಧಾನವು ಸುಳ್ಳು. ಮನೋವಿಜ್ಞಾನವು ಬೋಧನೆಯ ನಿಜವಾದ ವಿಧಾನದ ನಕಾರಾತ್ಮಕ ಸ್ಪರ್ಶವನ್ನು ನೀಡುತ್ತದೆ. (ಡಿ. ಆಂಜನೇಯುಲು, 1996).ರಾಧಾಕೃಷ್ಣನ್ ಅವರು ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ದುಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಅವರು ಅಭಿಪ್ರಾಯಪಟ್ಟರು, “ಶಿಕ್ಷಣವು ಮಾನವರ ಹೃದಯ ಮತ್ತು ಮನಸ್ಸಿನಲ್ಲಿ ಬುದ್ಧಿವಂತಿಕೆ ಮತ್ತು ಮಾನವೀಯತೆಯನ್ನು ನಿರ್ಮಿಸದಿದ್ದರೆ ಅದರ ಎಲ್ಲಾ ವೃತ್ತಿಪರ, ವೈಜ್ಞಾನಿಕ ಮತ್ತು ತಾಂತ್ರಿಕ ವಿಜಯಗಳು ಅರ್ಥಹೀನವಾಗುತ್ತವೆ. ಶಿಕ್ಷಣದ ಕೆಳಗಿನ ಪರಿಕಲ್ಪನೆಗಳು ಮತ್ತು ಕಾರ್ಯಗಳನ್ನು ಕೆಳಗೆ ನೀಡಲಾಗಿದೆ (ಅಗರ್ವಾಲ್, ಎಅ 2002, .256– 258): ಶಿಕ್ಷಣ– ಬೌದ್ಧಿಕ, ಹೃದಯ ಮತ್ತು ಆತ್ಮದ ತರಬೇತಿ: ರಾಧಾಕೃಷ್ಣನ ಬಯಕೆಗಳು, ಶಿಕ್ಷಣವು ಪೂರ್ಣಗೊಳ್ಳಲು, ಮಾನವೀಯವಾಗಿರಬೇಕು, ಅದು ಒಳಗೊಂಡಿರಬಾರದು. ಕೇವಲ ಬುದ್ಧಿಯ ತರಬೇತಿ ಆದರೆ ಹೃದಯದ ಪರಿಷ್ಕರಣೆ ಮತ್ತು ಶಿಸ್ತಿನ ಮನೋಭಾವ. ಹೃದಯ ಮತ್ತು ಚೈತನ್ಯವನ್ನು ನಿರ್ಲಕ್ಷಿಸಿದರೆ ಯಾವುದೇ ಶಿಕ್ಷಣವನ್ನು ಸಂಪೂರ್ಣವೆಂದು ಪರಿಗಣಿಸಲಾಗುವುದಿಲ್ಲ” (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, 1956, ಪು.142). ಶಿಕ್ಷಣದಲ್ಲಿ ಮಾನವತಾವಾದ : ಈ ಜಗತ್ತಿನಲ್ಲಿ ಯಾವುದೇ ರಾಷ್ಟ್ರವು ಶಾಶ್ವತವಾಗಿ ತನ್ನ ಪ್ರಮುಖ ಸ್ಥಾನವನ್ನು ಹೊಂದಲು ಸಾಧ್ಯವಿಲ್ಲ. ಮಾನವ ಕಲ್ಯಾಣಕ್ಕೆ ನಾವು ನೀಡುವ ನೈತಿಕ ಕೊಡುಗೆಯು ಎಣಿಕೆಯಾಗಿದೆ. ಆದ್ದರಿಂದ, ನಾವು ಪ್ರಯತ್ನಿಸೋಣ ಮತ್ತು ಬಳಲುತ್ತಿರುವ ಜನರ ಬಗ್ಗೆ ತೀರ್ಪು ಮತ್ತು ಸಹಾನುಭೂತಿಯಲ್ಲಿ ದಾನದ ಗುಣಗಳನ್ನು ಅಭಿವೃದ್ಧಿಪಡಿಸೋಣ. ನಾವು ಅಂತಹ ವಿಧಾನವನ್ನು ಅಳವಡಿಸಿಕೊಂಡರೆ, ಪ್ರಪಂಚದ ಉದ್ವಿಗ್ನತೆಗಳು ಶೀಘ್ರವಾಗಿ ಕಡಿಮೆಯಾಗುತ್ತವೆ (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, 1956, ಪು.142). ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣ : ಶಿಕ್ಷಣವು ಪ್ರಜಾಸತ್ತಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳು ಜನರನ್ನು ಸ್ವಾತಂತ್ರ್ಯ, ಏಕತೆಗಾಗಿ ತರಬೇತುಗೊಳಿಸಬೇಕೇ ಹೊರತು ಸ್ಥಳೀಯತೆಯಲ್ಲ, ಪ್ರಜಾಪ್ರಭುತ್ವಕ್ಕಾಗಿಯೇ ಹೊರತು ಸರ್ವಾಧಿಕಾರಕ್ಕಾಗಿ ಅಲ್ಲ. ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಶಿಕ್ಷಣ: ವಿಜ್ಞಾನವನ್ನು ಉತ್ಪಾದಕ ಕೆಲಸಕ್ಕೆ ಬಳಸಬೇಕು. ವಿಜ್ಞಾನ ಮತ್ತು ಪಾಂಡಿತ್ಯದ ಅನ್ವೇಷಣೆಯಲ್ಲಿ ನಾವು ವಿಚಾರಣೆ ಮತ್ತು ಸಮರ್ಪಣಾ

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣ ಮತ್ತು ಮಾನವೀಯ ಮೌಲ್ಯಗಳು: ಸಾಕಷ್ಟು ಬೌದ್ಧಿಕ ಮತ್ತು ತಾಂತ್ರಿಕ ಕೌಶಲ್ಯವಿದೆ ಆದರೆ ನೈತಿಕ ಮತ್ತು ಆಧ್ಯಾತ್ಮಿಕ ಚೈತನ್ಯವು ಕಡಿಮೆ ಮಟ್ಟದಲ್ಲಿದೆ. ಮನುಷ್ಯನ ಸಂಪೂರ್ಣತೆಯು ಸತ್ಯದ ಅನ್ವೇಷಣೆ ಮತ್ತು ಮಾನವ ಜೀವನವನ್ನು ಸುಧಾರಿಸಲು ಅದರ ಅನ್ವಯದಿಂದ ಉಂಟಾಗುತ್ತದೆ, ಪ್ರಕೃತಿಯಲ್ಲಿ ಸುಂದರವಾದದ್ದು, ಮನುಷ್ಯ ಮತ್ತು ಕಲೆ, ಮತ್ತು ಆಧ್ಯಾತ್ಮಿಕ ಅಭಿವೃದ್ಧಿ ಮತ್ತು ನೈತಿಕ ತತ್ವಗಳಲ್ಲಿ ಅದರ ಸಾಕಾರ. ಶಿಕ್ಷಣ ಮತ್ತು ಆಧ್ಯಾತ್ಮಿಕ ಮೌಲ್ಯಗಳು: ಶಿಕ್ಷಣವು ನಾವು ನಮ್ಮ ಮನಸ್ಸನ್ನು ಉಬ್ಬರವಿಳಿಸುವಂತೆ ಮಾಡುವ, ಮಾಹಿತಿಯನ್ನು ಪಡೆದುಕೊಳ್ಳುವ ಮತ್ತು ಮೌಲ್ಯಗಳ ಪ್ರಜ್ಞೆಯನ್ನು ಪಡೆಯುವ ಸಾಧನವಾಗಿದೆ. ನಿಜವಾದ ಪ್ರಜಾಪ್ರಭುತ್ವವು ನಾಗರಿಕರ ಸಮುದಾಯವು ಪರಸ್ಪರ ಭಿನ್ನವಾಗಿರುತ್ತದೆ ಆದರೆ ಎಲ್ಲರೂ ಸಾಮಾನ್ಯ ಗುರಿಗೆ ಬದ್ಧರಾಗಿರುತ್ತಾರೆ (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಎರಡನೇ ಸರಣಿ, 1957, P 88). ಶಿಕ್ಷಣ – ಏಕೀಕರಣದ ಹುಡುಕಾಟ: ಶಿಕ್ಷಣವು ನಮ್ಮನ್ನು ಸುಸಂಸ್ಕೃತ ಮನುಷ್ಯರನ್ನಾಗಿ ಮಾಡುವ ಗುರಿಯನ್ನು ಹೊಂದಿದೆ, ನಮ್ಮ ನೈತಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳ ಪ್ರಜ್ಞೆ, ನಾವು ವಾಸಿಸುವ ಜಗತ್ತನ್ನು ನಾವು ತಿಳಿದಿರಬೇಕು, ಭೌತಿಕ, ಸಾವಯವ ಮತ್ತು ಸಾಮಾಜಿಕ.ನಾವು ಬ್ರಹ್ಮಾಂಡದ ಸಾಮಾನ್ಯ ಯೋಜನೆ ಮತ್ತು ಸತ್ಯದ ಹುಡುಕಾಟದ ಕಲ್ಪನೆಯನ್ನು ಹೊಂದಿರಬೇಕು. ನಾವು ಸತ್ಯವನ್ನು ಸಾಧಿಸಿದಾಗ ನಮ್ಮ ಹೊರೆಗಳು ಹಗುರವಾಗುತ್ತವೆ ಮತ್ತು ನಮ್ಮ ಕಷ್ಟಗಳು ಕಡಿಮೆಯಾಗುತ್ತವೆ. ಇದು ನಮ್ಮ ಹಾದಿಯನ್ನು ಸಂತೋಷದ ಪ್ರಕಾಶದಿಂದ ಬೆಳಗಿಸುತ್ತದೆ (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಮೂರನೇ ಸರಣಿ, 1963, ಪುಟ 87). ನಮ್ಮ ದೇಶದಲ್ಲಿ ಇಂದು ನಾವು ಬುದ್ಧಿವಂತರಾದ ಅನೇಕ ಪುರುಷರನ್ನು ಹೊಂದಿದ್ದೇವೆ ಆದರೆ ನೆಟ್ಟಗೆ ಇರುವುದಿಲ್ಲ. ನಾವು ಏಕೀಕರಣದ ಗೌರವವನ್ನು ಬೆಳೆಸಿಕೊಳ್ಳಬೇಕು. ದೈನಂದಿನ ಜೀವನ ಮತ್ತು ಆಡಳಿತದಲ್ಲಿ ಶುದ್ಧತೆ ಅತ್ಯಗತ್ಯ. ವಿಚಾರಣೆಯ ಮನೋಭಾವವನ್ನು ಅಭಿವೃದ್ಧಿಪಡಿಸಲು ಶಿಕ್ಷಣ : ನಾವು ವಿಚಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಮತ್ತು ವಿಜ್ಞಾನ ಮತ್ತು ವಿದ್ಯಾರ್ಥಿವೇತನದ ಅನ್ವೇಷಣೆಗೆ ಸಮರ್ಪಣೆ ಮಾಡಬೇಕು. ನಾವು ನಮ್ಮ ವರ್ಷಗಳನ್ನು ಕಾಲೇಜಿನಲ್ಲಿ ಕ್ಷುಲ್ಲಕತೆಗಳು ಮತ್ತು ಜಡತೆಗಳಲ್ಲಿ ವ್ಯರ್ಥ ಮಾಡುತ್ತೇವೆ. ನಮಗೆ ಅಕ್ಷರ ಶಿಕ್ಷಣ ಬೇಕು. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಜನರನ್ನು ತರಬೇತುಗೊಳಿಸಲು ಶಿಕ್ಷಣ : ನಾವು ಯುವಕರ ಮನಸ್ಸನ್ನು ಆಕಾರವಿಲ್ಲದೆ ತಿರುಗಿಸಿದರೆ, ಅವರು ಸಮಾಜಕ್ಕೆ ಅಪಾಯವನ್ನುಂಟುಮಾಡುತ್ತಾರೆ. ನಮ್ಮ ಯುವಕರಿಗೆ ಗುರಿಯ ಪ್ರಜ್ಞೆ ಇರಬೇಕು.ನಾವು ಅವರನ್ನು ಬುದ್ಧಿವಂತರು ಮತ್ತು ಒಳ್ಳೆಯವರನ್ನಾಗಿ ಮಾಡಬೇಕು ಅವರು ಭಾರತವನ್ನು ಹೆಮ್ಮೆಪಡುವಂತೆ ಮಾಡಿದ್ದಾರೆ ಮತ್ತು ಅವರ ಸ್ಮರಣೆಯಲ್ಲಿ ಶಿಕ್ಷಕರ ದಿನವನ್ನು ಸಮರ್ಪಿಸಲಾಯಿತು. ನಮ್ಮ ಸಮಾಜಕ್ಕೆ ಶಿಕ್ಷಕರು ನೀಡಿದ ಮಹಾನ್ ಕೊಡುಗೆಯ ಗುರುತಾಗಿ, ಡಾ.ರಾಧಾಕೃಷ್ಣನ್ ಅವರ ಜನ್ಮದಿನದಂದು ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತೇವೆ ಮತ್ತು ಅವರ ಕನಸುಗಳ ಸಮಾಜವನ್ನು ನಿರ್ಮಿಸಲು ಅವರ ಆದರ್ಶಗಳನ್ನು ಅನುಕರಿಸುವ ಮೂಲಕ ನಾವು ಅವರಿಗೆ ಗೌರವ ಸಲ್ಲಿಸಬೇಕು. ಶಿಕ್ಷಕರು ಸ್ತಂಭಗಳಾಗಿದ್ದು, ಅದರ ಮೇಲೆ ಇಡೀ ಸಮಾಜವು ನೆಲೆಗೊಂಡಿದೆ ಮತ್ತು ಆದ್ದರಿಂದ ಸಮಾಜದ ಗುಣಮಟ್ಟವು ಹೆಚ್ಚಿನ ಮಟ್ಟಿಗೆ ನಮ್ಮ ಶಿಕ್ಷಕರ ಮೇಲೆ ಅವಲಂಬಿತವಾಗಿದೆ.

## ಪರಾಮರ್ಶನ ಗ್ರಂಥಗಳು


- **ಅಗರವಾಲಾ ಜೆ.ಸಿ. (2002)** : ಥಿಯರಿ ಅಂಡ್ ಪ್ರಿನ್ಸಿಪಲ್ಸ್ ಆಫ್ ಎಜುಕೇಶನ್, 12ನೇ ಪರಿಷ್ಕೃತ ಆವೃತ್ತಿ, ನವದೆಹಲಿ ವಿಕಾಸ್ ಪಬ್ಲಿಷಿಂಗ್ ಹೌಸ್ ಪ್ರೈ. ಲಿಮಿಟೆಡ್.
- **ಆನಂದ್, ವಿ. (2011)** : ಡಾ ರಾಧಾಕೃಷ್ಣನ್ ಅವರ ಸಮಕಾಲೀನ ಚಿಂತನೆಗೆ ಕೊಡುಗೆ, ಮುಖ್ಯವಾಹಿನಿ, VOL L, ನಂ. 1, ಡಿಸೆಂಬರ್ 24, 06 ಫೆಬ್ರವರಿ 2015 ರಂದು ಮರುಸಂಪಾದಿಸಲಾಗಿದೆ.
- **ಭಾಟಿಯಾ ಎಸ್. ಮತ್ತು ಸರಿನ್ ಎ. (2004)** : ಫಿಲಾಸಫಿಕಲ್ಫೌಂಡೇಶನ್ ಆಫ್ ಎಜುಕೇಶನ್ ಇನ್ ಇಂಡಿಯಾ, ಜೈಪುರ ಎಬಿಡಿ ಪಬ್ಲಿಷರ್ಸ್.
- **ಬೆಹುರಾ, ಡಿಕೆ (2010)** : ದಿ ಗ್ರೇಟ್ ಇಂಡಿಯನ್ ಫಿಲಾಸಫರ್: ಡಾ.ರಾಧಾಕೃಷ್ಣನ್, ಒರಿಸ್ಸಾ ರಿವ್ಯೂ, ಸೆಪ್ಟೆಂಬರ್ ಚೌಧರಿ, ಎಸ್. (2006). ಶೈಕ್ಷಣಿಕ ತತ್ವಶಾಸ್ತ್ರ ಡಾ. ಸರ್ವಪಲ್ಲಿ ರಾಧಾಕೃಷ್ಣನ್, ನವದೆಹಲಿ: ಡೀಪ್ ಅಂಡ್ ಡೀಪ್ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್.
- **ಚಿಂಟು, ಕೆಆರ್ (2013)** : ಎಸ್. ರಾಧಾಕೃಷ್ಣನ್ ಅವರ ಶೈಕ್ಷಣಿಕ ವಿಚಾರಗಳು, ಹೃದಯ ಬಡಿತಗಳು, 05 ಫೆಬ್ರವರಿ 2015
- **ಆಂಜನೇಯ (1996)** : ರಾಧಾಕೃಷ್ಣನ್ –ದಿ ಎಜುಕೇಶನಿಸ್ಟ್, ತ್ರಿವೇಣಿ, 06 ಫೆಬ್ರವರಿ 2015 ಮೊದಲ ವಿಶ್ವವಿದ್ಯಾಲಯ ಶಿಕ್ಷಣ ಆಯೋಗದ ವರದಿ, ಭಾರತ, ನಂದಾ, ರೇಣು
- **ಸರ್ವಪಲ್ಲಿ, ರಾಧಾಕೃಷ್ಣನ್ (1956)** : ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಸಂಪುಟ. ನವದೆಹಲಿ : ಸಚಿವಾಲಯ ಪ್ರಸಾರ ಭಾರತದ. ಪ. 142.
- **ಸರ್ವಪಲ್ಲಿ ರಾಧಾಕೃಷ್ಣನ್ (1957)** : ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಎರಡನೇ ಸರಣಿ,
- **ಸಚಿವಾಲಯ ಮಾಹಿತಿ ಮತ್ತು ಪ್ರಸಾರ ಭಾರತದ 89.**
- **ಸರ್ವೆಪಲ್ಲಿ, ರಾಧಾಕೃಷ್ಣನ್ (1963)** : ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಮೂರನೇ ಸರಣಿ, ನವದೆಹಲಿ : ಪ್ರಕಾಶನ ವಿಭಾಗ, ಮಾಹಿತಿ ಸಚಿವಾಲಯ
- **ಸರ್ವೆಪಲ್ಲಿ, ರಾಧಾಕೃಷ್ಣನ್ (2009)** : ದಿ ಪರ್ಸ್ಯೂಟ್ ಆಫ್ಟ್ರುತ್, ನವದೆಹಲಿ : ಹಿಂದ್ ಪಾಕೆಟ್ ಬುಕ್ಸ್.
- **ಸ್ಕಿಲ್ಪ್, ಪಾಲ್ ಆರ್ಥರ್ (1992)** : ದಿ ಫಿಲಾಸಫಿ ಆಫ್ ಸರ್ವಪಲ್ಲಿ ರಾಧಾಕೃಷ್ಣನ್, ಮೋತಿಲಾಲ್ ಬನಾರ್ಸಿದಾಸ್, ಪು. 98
- **ಬ್ರೇಬ್ರೂಕ್, ಮಾರ್ಕಸ್. ಎ ವೈಡರ್ ವಿಷನ್** : ಎ ಹಿಸ್ಟರಿ ಆಫ್ ದಿ ವರ್ಲ್ಡ್ ಕಾಂಗ್ರೆಸ್ ಆಫ್ ಫೇಯ್ತ್, 1936 – 1996. ಒನ್ವರ್ಲ್ಡ್, 1997.
- **ಬ್ರೌನ್, ಟೆಕ್ನಿಕ್ಸ್ ಆಫ್ ಪರ್ಸುವೇಶನ್** : ಫ್ರಮ್ ಪ್ರಾಪಗಾಂಡಾ ಟು ಬ್ರೈನ್ವಾಶಿಂಗ್. ಪೆಂಗ್ವಿನ್ ಬುಕ್ಸ್, 1963.
- **ವೇದಾಂತದ ನೀತಿಶಾಸ್ತ್ರ ಮತ್ತು ಅದರ ಮೆಟಾಫಿಸಿಕಲ್ ಪೂರ್ವಭಾವಿಗಳು. ಮದ್ರಾಸ್** : ದಿ ಗಾರ್ಡಿಯನ್ ಪ್ರೆಸ್, 1908. **"ಕರ್ಮ ಮತ್ತು ಫ್ರೀವಿಲ್"** ಇನ್ ಮಾಡರ್ನ್ ರಿವ್ಯೂ. (ಕಲ್ಕತ್ತಾ) ಸಂಪುಟ.
- **ಅಹಂಭಾವ ಮತ್ತು ಪರಹಿತ ಚಿಂತನೆ** : ವೇದಾಂತ ಪರಿಹಾರ" ಪೂರ್ವ ಮತ್ತು ಪಶ್ಚಿಮದಲ್ಲಿ (ಬಾಂಬೆ) 9 (ಜುಲೈ 1910), ಪುಟಗಳು 620–628.
- **"ದಿ ರಿಲೇಶನ್ ಆಫ್ ಮೋರಾಲಿಟಿ ಟು ರಿಲಿಜನ್"** ಹಿಂದೂಸ್ತಾನ್ ರಿವ್ಯೂ (ಸೆಪ್ಟೆಂಬರ್ 1910), ಪುಟಗಳು 292–297 **"ಶಿಕ್ಷಣದಲ್ಲಿ ನೈತಿಕತೆ ಮತ್ತು ಧರ್ಮ"** ಮದ್ರಾಸ್ ಕ್ರಿಶ್ಚಿಯನ್ ಕಾಲೇಜ್ ಮ್ಯಾಗಜೀನ್ನಲ್ಲಿ. 10 (1910–1911), ಪುಟಗಳು 233–239.
- **"ದಿ ಎಥಿಕ್ಸ್ ಆಫ್ ದಿ ವೇದಾಂತ"** ದಿ ಇಂಟರ್ನ್ಯಾಶನಲ್ ಜರ್ನಲ್ ಆಫ್ ಎಥಿಕ್ಸ್. 225 ಸಂಖ್ಯೆ 2 (ಜನವರಿ 1914), ಪುಟಗಳು 168–183.


■■

**SHIKSHAN SOUDAH** *Kannada Quarterly* Printer, Publisher, Editor and Owned by : **Jayadev Mailarappa Menasagi** Resi. : Okkalageri Oni, GADAG-582101, Tq. Gadag, Dist.: Gadag. Karnataka State Printed at **Maima Akshara Mudrana,** S.P. Gadag Compound, J.T.Math Road, GADAG 582101, Tq. Gadag, Dist.:Gadag. Karnataka State Phone: 08372-200527, email : shikshansoudha@gmail.com.